	ಆದೇಶ ಸಂಖ್ಯೆ ಸನೀಇ 40 ಮಸಾವಿ 2009(1) ದಿನಾಂಕ 28.2.2009ರಲ್ಲಿ ಅನುಮೋದಿಸಿರುವ ಮರು ಹೊಂದಾಣಿಕೆ ಅನುದಾನ			30.00					
	ಲೆಕ್ಕಶೀರ್ಷಿಕೆ 4711-01-103-1-00-140 ಒಟ್ಟು	**150.00**	**50.00**	**45.00**					
	ಒಟ್ಟು	**420.00**	**280.00**	**130.50**					

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 900

ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಸಚಿವಾಲಯ

ವಿಷಯ : ಶ್ರೀ ಬಿ.ಎಫ್. ತಳವಾರ್, ನಿವೃತ್ತ ಕೆಎಎಸ್ ಅಧಿಕಾರಿ ಇವರ ವಿರುದ್ಧ ಇಲಾಖಾ ವಿಚಾರಣೆ ಅಂತಿಮ ಆದೇಶ.

ಓದಲಾಗಿದೆ :
1. ದಿನಾಂಕ 25.6.07ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 087, ಎಸ್‌ಇಎಸ್ 02.
2. ದಿನಾಂಕ 24.4.08ರ ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 023 ಕೆಇವಿ 07.
3. ಪ್ರಾದೇಶಿಕ ಆಯುಕ್ತರ, ಬೆಳಗಾವಿ ವಿಭಾಗ, ಬೆಳಗಾವಿ ಹಾಗೂ ವಿಚಾರಣಾಧಿಕಾರಿಗಳು, ಇವರ ವಿಚಾರಣಾ ವರದಿ ಸಂಖ್ಯೆ: ಪ್ರಾಅಬೆ/ಸಿಬ್ಬಂದಿ1/ಇವಿ/ವಿವ 01/07-08, ದಿನಾಂಕ 30.12.08.

ಪ್ರಸ್ತಾವನೆ :

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಶ್ರೀ ಬಿ.ಎಫ್. ತಳವಾರ, ಕೆಎಎಸ್ (ಕಿರಿಯ ಶ್ರೇಣಿ) ನಿವೃತ್ತ ಅಧಿಕಾರಿ ಇವರು ಚನ್ನಗಿರಿ ತಾಲ್ಲೂಕು ತಹಶೀಲ್ದಾರರಾಗಿ ಕಾರ್ಯನಿರ್ವಹಿಸುತ್ತಿದ್ದಾಗ ಚನ್ನಗಿರಿ ತಾಲ್ಲೂಕು, ಜಯಂತಿ ಗ್ರಾಮದ ಶ್ರೀ ರಾಜಪ್ಪ ಬಿನ್ ಹಾಲಪ್ಪ ಹಾಗೂ ಹಾಲಪ್ಪ ಬಿನ್ ರಾಮಪ್ಪ ಎಂಬುವವರಿಗೆ ಜಾತಿ ಪ್ರಮಾಣ ಪತ್ರ ನೀಡುವಾಗ ಅನುಸರಿಸಬೇಕಾದ ಕಾರ್ಯವಿಧಾನವನ್ನು ಪಾಲಿಸದೇ ಸದರಿಯವರು ಹಿಂದುಳಿದ ಉಪ್ಪಾರ ಜಾತಿಗೆ ಸೇರಿದವರಾಗಿದ್ದರೂ ಗ್ರಾಮ ಲೆಕ್ಕಿಗರು ನೀಡಿದ ವರದಿಯ ಆಧಾರದ ಮೇಲೆ ಪರಿಶಿಷ್ಟ ಪಂಗಡದ ನಾಯಕ ಜಾತಿ ಎಂದು ಪ್ರಮಾಣ ಪತ್ರ ನೀಡಿದ ಆರೋಪವನ್ನು ವಿಚಾರಣೆ ನಡೆಸಿ ವರದಿ ಸಲ್ಲಿಸಲು, ಪ್ರಾದೇಶಿಕ ಆಯುಕ್ತರು, ಪ್ರಾದೇಶಿಕ ಆಯುಕ್ತರ ಕಛೇರಿ, ಬೆಳಗಾಂ ರವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ತಹಶೀಲ್ದಾರ್, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರನ್ನು ಶಿಸ್ತು ಪ್ರಾಧಿಕಾರಿಯ ಪರವಾಗಿ ಮಂಡನಾಧಿಕಾರಿಯನ್ನಾಗಿ ಸರ್ಕಾರವು ನೇಮಿಸಿತ್ತು.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ವಿಚಾರಣಾಧಿಕಾರಿಗಳು ಸಲ್ಲಿಸಿದ ದಿನಾಂಕ 1.2.08ರ ವಿಚಾರಣಾ ವರದಿಯನ್ನು ತಿರಸ್ಕರಿಸುತ್ತಾ ಮಂಡನಾಧಿಕಾರಿಯಾಗಿ ನೇಮಕ ಮಾಡಲಾಗಿದ್ದ ತಹಶೀಲ್ದಾರ್, ಚನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆ ಇವರು ಪ್ರಕರಣದ ಸಾಕ್ಷಿದಾರರಾಗಿದ್ದ ಕಾರಣ, ಇವರ ಬದಲಿಗೆ ಉಪ ವಿಭಾಗಾಧಿಕಾರಿಗಳು, ದಾವಣಗೆರೆ ಉಪ ವಿಭಾಗ, ದಾವಣಗೆರೆ ಜಿಲ್ಲೆ ಇವರನ್ನು ಶಿಸ್ತು ಪ್ರಾಧಿಕಾರಿಯ ಪರವಾಗಿ ಮಂಡನಾಧಿಕಾರಿಯನ್ನಾಗಿ ಸರ್ಕಾರವು ನೇಮಿಸಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಂತೆ ವಿಚಾರಣಾಧಿಕಾರಿಯವರು ಸಲ್ಲಿಸಿದ ವಿಚಾರಣಾ ವರದಿಯಲ್ಲಿ, ಶ್ರೀ ಬಿ.ಎಫ್. ತಳವಾರ, ಕೆಎಎಸ್ (ಕಿರಿಯ ಶ್ರೇಣಿ) ನಿವೃತ್ತ ಅಧಿಕಾರಿ ಇವರ ವಿರುದ್ಧದ ಆರೋಪವು ಸಾಬೀತಾಗಿರುವುದಿಲ್ಲವೆಂದು ವರದಿ ನೀಡಿರುತ್ತಾರೆ. ವಿಚಾರಣಾ ವರದಿಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿದ ನಂತರ ವಿಚಾರಣಾ ವರದಿಯನ್ನು ಅಂಗೀಕರಿಸಲು ನಿರ್ಣಯಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 023 ಕೆಇವಿ 07, ಬೆಂಗಳೂರು, ದಿನಾಂಕ: 6ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಲ್ಪಟ್ಟ ಕಾರಣಗಳಿಂದಾಗಿ, ಸರ್ಕಾರವು ಶ್ರೀ ಬಿ.ಎಫ್. ತಳವಾರ, ಕೆಎಎಸ್ (ಕಿರಿಯ ಶ್ರೇಣಿ) ನಿವೃತ್ತ ಅಧಿಕಾರಿ, ಹಿಂದಿನ ತಹಶೀಲ್ದಾರ್, ಚನ್ನಗಿರಿ ತಾಲ್ಲೂಕು, ಚನ್ನಗಿರಿ ಇವರನ್ನು ಪ್ರಸ್ತಾವನೆಯಲ್ಲಿ ವಿವರಿಸಿದ ಆರೋಪಗಳಿಂದ ದೋಷಮುಕ್ತಗೊಳಿಸಿ ಆದೇಶಿಸಿದೆ.

ಈ ಇಲಾಖಾ ವಿಚಾರಣೆ ನಡೆಯದಿದ್ದಲ್ಲಿ ಶ್ರೀಯುತರು ಯಾವ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಿದ್ದರೋ ಅವುಗಳನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1144

ಹೆಚ್.ಆರ್. ನಾಗೇಂದ್ರ

ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ಸೇವೆಗಳು-2)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : 2008-09ನೇ ಸಾಲಿನ ಸವಿವರ ಅಂದಾಜನಲ್ಲಿ ಲೆಕ್ಕಶೀರ್ಷಿಕೆ 4702 ಅಡಿ ಅನುಮೋದನೆಯಾಗಿರುವ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1. ದಿನಾಂಕ 22.1.2009ರ ಬೆಂಗಳೂರು, ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರ ಸಂಖ್ಯೆ: ಮುಸದ/ತಾಂ-5/ಸ.ಇಂ.-11/2008-09, ಆಯವ್ಯಯ/ಆಆ/ 2009/300.
2. ದಿನಾಂಕ 7.2.2009ರ ಬೆಂಗಳೂರು, ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್‌ರವರ ಪತ್ರ ಸಂಖ್ಯೆ: ಮುಸದ/ತಾಂ-5/ಸ.ಇಂ.-11/2009/ಆ.ಆ/541.
3. ಸರ್ಕಾರದ ಆದೇಶ ಸಂಖ್ಯೆ: ಸನೀಇ 09 ಆವಿಸಂ 2009, ದಿನಾಂಕ 26.2.2009.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರಗಳಲ್ಲಿ ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್‌ರವರು 2008-09ನೇ ಸಾಲಿನ ಆಯವ್ಯಯದ "ಅಪೆಂಡಿಕ್ಸ್-ಇ"ನ ಲೆಕ್ಕಶೀರ್ಷಿಕೆ 4702-00-101-5-01-139-ಅಣೆಕಟ್ಟು ಮತ್ತು ಪಿಕಪ್‌ಗಳ

ನಿರ್ಮಾಣ ಮತ್ತು ಲೆಕ್ಕಶೀರ್ಷಿಕೆ 4702-00-101-1-07-139-ಕೆರೆಗಳ ಆಧುನೀಕರಣ (ಪ್ರಧಾನ ಕಾಮಗಾರಿಗಳು) ಅಡಿ 6 ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಕಾಮಗಾರಿ ಕೈಗೊಳ್ಳಲು ಅಂದಾಜಿನ ಶೇ. 30ರಷ್ಟು ಅನುದಾನದೊಂದಿಗೆ ಸೇರಿರುವ 1 ಹಾಗೂ ಅನುದಾನ ಕೊರತೆ ಇರುವ 5 ಕಾಮಗಾರಿಗಳಿದ್ದು, ಉಲ್ಲೇಖ (3)ರ ಆದೇಶದಲ್ಲಿ ಅನುದಾನದ ಮರುಹೊಂದಾಣಿಕೆ ಮಾಡಲಾಗಿದೆ. (ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ತಿಳಿಸಲಾಗಿದೆ). ಈ 6 ಕಾಮಗಾರಿಗಳ ಅಂದಾಜು ಮೊತ್ತ 482.00 ಲಕ್ಷ ರೂ.ಗಳು ಆಗುತ್ತದೆ.

ಆಡಳಿತಾತ್ಮಕ ಅನುಮೋದನೆಗೆ ಕೋರಿರುವ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು 2008-09ನೇ ಸಾಲಿಗೆ ಮುಂದುವರೆಸಿರುವ 2007-08ನೇ ಸಾಲಿನ ಸಣ್ಣ ನೀರಾವರಿ ಮೈಸೂರು ವೃತ್ತದ ದರಪಟ್ಟಿಯ ದರಗಳನ್ನು ಅಳವಡಿಸಿ ತಯಾರಿಸಲಾಗಿದೆ.

ಪ್ರಸ್ತಾಪಿಸಿರುವ ಕಾಮಗಾರಿಗಳ ಅಂದಾಜು ಮೊತ್ತ, ಆಯವ್ಯಯದ ಲೆಕ್ಕಶೀರ್ಷಿಕೆ, ಅನುದಾನ, ಕಾಮಗಾರಿಯ ಸ್ವರೂಪ ಹಾಗೂ ಅಂದಾಜಿನಲ್ಲಿ ಅಳವಡಿಸಿರುವ ಕೆಲಸಗಳ ವಿವರ, ಸೃಷ್ಟಿಯಾಗಲಿರುವ ಹೊಸ ಅಚ್ಚುಕಟ್ಟು/ಸ್ಥಿರೀಕರಿಸಲಾಗುತ್ತಿರುವ/ಪುನರ್ ಸ್ಥಾಪಿಸಲಾಗುತ್ತಿರುವ ಅಚ್ಚುಕಟ್ಟು ಹಾಗೂ ಲಾಭ ವೆಚ್ಚದ ಅನುಪಾತ ವಿವರಗಳನ್ನು ಅನುಬಂಧದಲ್ಲಿ ಕಾಮಗಾರಿವಾರು ನೀಡಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 14 ಮಸಾವಿ 2009 (2), ಬೆಂಗಳೂರು, ದಿನಾಂಕ: 28ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ವ್ಯಾಪ್ತಿಗೆ ಬರುವ ಅನುಬಂಧದಲ್ಲಿ ತಿಳಿಸಿರುವ ಒಟ್ಟು 482.00 ಲಕ್ಷ ರೂ.ಗಳ (ನಾಲ್ಕು ನೂರ ಎಂಬತ್ತೆರಡು ಲಕ್ಷ ರೂ.ಗಳು ಮಾತ್ರ) ಅಂದಾಜು ಮೊತ್ತದ 6 ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
2. ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
3. ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
4. ಕಾಮಗಾರಿಯ ಅಂದಾಜು ಪಟ್ಟಿಗಳನ್ನು ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ/ತಾಂತ್ರಿಕ ಸಮಿತಿಯು ಸಭೆಯಲ್ಲಿ ಮಂಡಿಸಿ ತೀರುವಳಿಯನ್ನು ಪಡೆಯುವುದು.
5. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
6. ಕಾಮಗಾರಿ ಪೂರ್ಣಗೊಂಡ ಕೂಡಲೇ ಪಿ.ಸಿ.ಆರ್. ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
7. ಕಾಮಗಾರಿಗೆ ಅಗತ್ಯವಿರುವ ಜಮೀನಿನ ಸ್ವಾಧೀನಕ್ಕಾಗಿ ನಿಯಮಾನುಸಾರ ತಕ್ಷಣ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು.
8. ಇ.ಐ.ಆರ್.ಎಲ್./ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
9. ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
10. ನೇರ ಅಚ್ಚುಕಟ್ಟು ಹೊಂದಿರುವ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16.5.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ ಸನೀಇ 14 ಮಸಾವಿ 2009, ದಿನಾಂಕ 28.2.2009 (2)

(ಮೊತ್ತ ಲಕ್ಷ ರೂ.ಗಳಲ್ಲಿ) ಹಾಗೂ (ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ)

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಸ್ವೀಕೃತವಾಗಿರುವ ಅಂದಾಜು ಮೊತ್ತ	ಅನುಬಂಧ-ಇ ವಿವರಗಳು		ನದಿ ಕೊಳ್ಳ	ಕಾಮಗಾರಿ ಸ್ವರೂಪ	ಹೊಸ ಅಚ್ಚುಕಟ್ಟು	ಪುನರ್ ಸ್ಥಾಪಿಸಲಾಗುವ/ ನವೀಕರಿಸುವ ಅಚ್ಚುಕಟ್ಟು	ಕಾಮಗಾರಿಯ ಸಂಕ್ಷಿಪ್ತ ವಿವರಗಳು
			ಅಂದಾಜು ಮೊತ್ತ	ಅನುದಾನ					
ಲೆಕ್ಕ ಶೀರ್ಷಿಕೆ 4702-00-101-5-01-139 ಅಣೆಕಟ್ಟು ಮತ್ತು ಪಿಕಪ್ ನಿರ್ಮಾಣ									
1	ದಕ್ಷಿಣ ಕನ್ನಡ ಜಿಲ್ಲೆ ಬಂಟ್ವಾಳ ತಾಲ್ಲೂಕು ವಿಟ್ಲಾ ಗ್ರಾಮದ ವನಭೋಜನಾ ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ	43.00	40.00	12.00	ಪಶ್ಚಿಮ ವಾಹಿನಿ	ಹೊಸ ಕಾಮಗಾರಿ	42.05		36.30 ಮೀ. ಉದ್ದದ 2.50 ಮೀ. ಎತ್ತರದ 16 ಕಿಂಡಿಗಳುಳ್ಳ ಕಿಂಡಿ ಅಣೆಕಟ್ಟು ನಿರ್ಮಾಣ. ಅಣೆಕಟ್ಟೆಯ ಸಂಗ್ರಹಣಾ ಸಾಮರ್ಥ್ಯ 3.848 ದ.ಲ.ಘ. ಅಡಿ
	ಆದೇಶ ಸಂಖ್ಯೆ ಸನೀಇ 09 ಅವಿಸಂ 2009 ದಿನಾಂಕ 26.2.2009ರಲ್ಲಿ ಅನುಮೋದಿಸಿರುವ ಮರು ಹೊಂದಾಣಿಕೆ ಅನುದಾನ			0.90					
2	ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕು ಕಿಡಿಯೂರು ಅಂಬಲಪಾಡಿ ಗ್ರಾಮದ ಹತ್ತಿರ ಉಪ್ಪು ನೀರು ತಡೇ ಕಿಂಡಿ ಅಣೆಕಟ್ಟು ನಿರ್ಮಾಣ	120.00	115.00	34.50	ಪಶ್ಚಿಮ ವಾಹಿನಿ	ಹೊಸ ಕಾಮಗಾರಿ	85.00		79.50 ಮೀ. ಉದ್ದದ 2.20 ಮೀ. ಎತ್ತರದ 31 ಕಿಂಡಿಗಳುಳ್ಳ ಉಪ್ಪು ನೀರು ತಡೇ ಕಿಂಡಿ ಅಣೆಕಟ್ಟು ನಿರ್ಮಾಣ. ಅಣೆಕಟ್ಟೆಯ ಸಂಗ್ರಹಣಾ ಸಾಮರ್ಥ್ಯ 3.848 ದ.ಲ.ಘ. ಅಡಿ
	ಆದೇಶ ಸಂಖ್ಯೆ ಸನೀಇ 09 ಅವಿಸಂ 2009 ದಿನಾಂಕ 26.2.2009ರಲ್ಲಿ			1.50					

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಸ್ವೀಕೃತವಾದ ಅಂದಾಜು ಮೊತ್ತ	ಅನುಬಂಧ-ಇ ವಿವರಗಳು		ನದಿ ಕೊಳ್ಳ	ಕಾಮಗಾರಿ ಸ್ವರೂಪ	ಹೊಸ ಅಣೆಕಟ್ಟು	ಪುನರ್ ಸ್ಥಾಪಿಸಲಾಗುವ/ ಸ್ಥಿರೀಕರಿಸುವ ಅಣೆಕಟ್ಟು	ಕಾಮಗಾರಿಯ ಸಂಕ್ಷಿಪ್ತ ವಿವರಗಳು
			ಅಂದಾಜು ಮೊತ್ತ	ಅನುದಾನ					
	ಅನುಮೋದಿಸಿರುವ ಮರು ಹೊಂದಾಣಿಕೆ ಅನುದಾನ								
3	ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕು ಬೆಳ್ಳೆ ಗ್ರಾಮದ ಅಂಕುದ್ರು ಕಿಂಡಿ ಅಣೆಕಟ್ಟು ನಿರ್ಮಾಣ	81.00	60.00	18.00	ಪಶ್ಚಿಮ ವಾಹಿನಿ	ಹೊಸ ಕಾಮಗಾರಿ	85.00		42.00 ಮೀ. ಉದ್ದದ 3.50 ಮೀ. ಎತ್ತರದ 17 ಕಿಂಡಿಗಳುಳ್ಳ ಕಿಂಡಿ ಅಣೆಕಟ್ಟು ನಿರ್ಮಾಣ. ಅಣೆಕಟ್ಟೆಯ ಸಂಗ್ರಹಣಾ ಸಾಮರ್ಥ್ಯ 36.72 ದ.ಲ.ಘ. ಅಡಿ
	ಆದೇಶ ಸಂಖ್ಯೆ ಸನೀಇ 09 ಅವಿಸಂ 2009 ದಿನಾಂಕ 26.2.2009ರಲ್ಲಿ ಅನುಮೋದಿಸಿರುವ ಮರು ಹೊಂದಾಣಿಕೆ ಅನುದಾನ			6.30					
4	ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕು ಹಳ್ಳಿಹೊಳೆ ಗ್ರಾಮದ ಬಾರೆಗುಂಡಿ ಎಂಬಲ್ಲಿ ಶಂಕರನಾರಾಯಣ ಎಡಿಯಾಳ ಮನೆ ಬಳಿ ಕಿಂಡಿ ಅಣೆಕಟ್ಟು ನಿರ್ಮಾಣ	85.00	60.00	18.00	ಪಶ್ಚಿಮ ವಾಹಿನಿ	ಹೊಸ ಕಾಮಗಾರಿ	41.00		52.00 ಮೀ. ಉದ್ದದ 3.00 ಮೀ. ಎತ್ತರದ 21 ಕಿಂಡಿಗಳುಳ್ಳ ಕಿಂಡಿ ಅಣೆಕಟ್ಟು ನಿರ್ಮಾಣ. ಅಣೆಕಟ್ಟೆಯ ಸಂಗ್ರಹಣಾ ಸಾಮರ್ಥ್ಯ 19.07 ದ.ಲ.ಘ. ಅಡಿ
	ಆದೇಶ ಸಂಖ್ಯೆ ಸನೀಇ 09 ಅವಿಸಂ 2009 ದಿನಾಂಕ 26.2.2009ರಲ್ಲಿ ಅನುಮೋದಿಸಿರುವ ಮರು ಹೊಂದಾಣಿಕೆ ಅನುದಾನ			7.50					

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಸ್ವೀಕೃತವಾಗಿರುವ ಅಂದಾಜು ಮೊತ್ತ	ಅನುಬಂಧ-ಇ ವಿವರಗಳು		ನದಿ ಜೋನ್	ಕಾಮಗಾರಿ ಸ್ವರೂಪ	ಹೊಸ ಅಣೆಕಟ್ಟು	ಪುನರ್ ಸ್ಥಾಪಿಸಲಾಗುವ/ ಸ್ಥಿರೀಕರಿಸುವ ಅಣೆಕಟ್ಟು	ಕಾಮಗಾರಿಯ ಸಂಕ್ಷಿಪ್ತ ವಿವರಗಳು
			ಅಂದಾಜು ಮೊತ್ತ	ಅನುದಾನ					
5	ಉಡುಪಿ ಜಿಲ್ಲೆ ಉಡುಪಿ ತಾಲ್ಲೂಕು ಮದ್ದೂರು ಗ್ರಾಮದ ಹಂದಿಕಲ್ಲು ಎಂಬಲ್ಲಿ ಸೀತಾನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ನಿರ್ಮಾಣ	108.00	75.00	22.50	ಪಶ್ಚಿಮ ವಾಹಿನಿ	ಹೊಸ ಕಾಮಗಾರಿ	90.00		72.00 ಮೀ. ಉದ್ದದ 3.70 ಮೀ. ಎತ್ತರದ 29 ಕಿಂಡಿಗಳುಳ್ಳ ಕಿಂಡಿ ಅಣೆಕಟ್ಟು ನಿರ್ಮಾಣ
	ಆದೇಶ ಸಂಖ್ಯೆ ಸನೀಇ 09 ಅವಿಸಂ 2009 ದಿನಾಂಕ 26.2.2009ರಲ್ಲಿ ಅನುಮೋದಿಸಿರುವ ಮರು ಹೊಂದಾಣಿಕೆ ಅನುದಾನ			9.90					
ಲೆಕ್ಕ ಶೀರ್ಷಿಕೆ 4702-00-101-1-07-139 ಕೆರೆಗಳ ಆಧುನೀಕರಣ									
6	ದಕ್ಷಿಣ ಕನ್ನಡ ಜಿಲ್ಲೆ ಮಂಗಳೂರು ತಾಲ್ಲೂಕು ಕಡೇಕಾರು ಮಲ್ಲಿಕಾರ್ಜುನ ದೇವಸ್ಥಾನದ ಕೆರೆ ಅಭಿವೃದ್ಧಿ	45.00	100.00	30.00	ಪಶ್ಚಿಮ ವಾಹಿನಿ	ಪುನರುಜ್ಜೀವನ ಕಾಮಗಾರಿ	0.00	95.00	ಕೆರೆಯ ಏರಿ, ಕೋಡಿ, ಹಾಗೂ ಕೋಡಿ ಕಾಲುವೆ ಅಭಿವೃದ್ಧಿ ಇತ್ಯಾದಿ
	ಆದೇಶ ಸಂಖ್ಯೆ ಸನೀಇ 09 ಅವಿಸಂ 2009 ದಿನಾಂಕ 26.2.2009ರಲ್ಲಿ ಅನುಮೋದಿಸಿರುವ ಮರು ಹೊಂದಾಣಿಕೆ ಅನುದಾನ (ಉಳಿತಾಯವಾಗುವ ಅನುದಾನ)			16.50					
	ಒಟ್ಟು	**482.00**	**450.00**	**144.60**					

ಪಿ.ಆರ್. 902

ಕೆ. ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ನಗರಾಭಿವೃದ್ಧಿ ಸಚಿವಾಲಯ

ವಿಷಯ : ಮೈಸೂರು ತಾಲ್ಲೂಕು ಕಸಬಾ ಹೋಬಳಿ, ಮೇಟಗಳ್ಳಿ ಗ್ರಾಮದ ಮೋಜಣಿ ಸಂಖ್ಯೆ: 84ರ ವಿಸ್ತೀರ್ಣ 01 ಎಕರೆ 06 ಗುಂಟೆ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಹೋಟೆಲ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಕೋರಿರುವ ಬಗ್ಗೆ.

ಓದಲಾಗಿದೆ :
1. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರ ಪತ್ರ ಸಂಖ್ಯೆ: ಮೈನಪ್ರಾ: ನಯೋ: ಸಭೆ: 66: 08-09, ದಿನಾಂಕ 1.12.2008.
2. ದಿ: 17.1.09ರಂದು ಕಡತ ಸಂಖ್ಯೆ ನಯೋ:ಉನಿ:ಭೂಉಬ:ಮೇಟಗಳ್ಳಿ:342:2008-09ರಲ್ಲಿ ನಗರ ಯೋಜನಾ ನಿರ್ದೇಶಕರು ನೀಡಿರುವ ಅಭಿಪ್ರಾಯ.

ಪ್ರಸ್ತಾವನೆ :

ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಮೈಸೂರು ಇವರು ಮೈಸೂರು ತಾಲ್ಲೂಕು ಕಸಬಾ ಹೋಬಳಿ, ಮೇಟಗಳ್ಳಿ ಗ್ರಾಮದ ಮೋಜಣಿ ಸಂಖ್ಯೆ 84ರ ವಿಸ್ತೀರ್ಣ 01 ಎಕರೆ 06 ಗುಂಟೆ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಹೋಟೆಲ್) ಉದ್ದೇಶಕ್ಕೆ ಭೂ ಉಪಯೋಗ ಬದಲಾಯಿಸುವ ಕುರಿತು ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 14(ಎ)ರನ್ವಯ ಸ್ಥಳೀಯ ಪತ್ರಿಕೆಗಳಲ್ಲಿ ಪ್ರಕಟಣೆಯನ್ನು ಹೊರಡಿಸಿದ್ದು, ಈ ಬಗ್ಗೆ ಯಾವುದೇ ಆಕ್ಷೇಪಣೆ ಬಂದಿರುವುದಿಲ್ಲವೆಂದು ತಿಳಿಸುತ್ತಾ, ಪ್ರಸ್ತಾವನೆಯನ್ನು ಶಿಫಾರಸ್ಸು ಮಾಡಿ ನಿರ್ದೇಶಕರು, ನಗರ ಯೋಜನಾ ಇಲಾಖೆ ಇವರ ಮುಖಾಂತರ ಸರ್ಕಾರಕ್ಕೆ ಸಲ್ಲಿಸಿರುತ್ತಾರೆ.

ಮೇಲೆ (2)ರಲ್ಲಿ ಓದಲಾದ ಕಡತದಲ್ಲಿ ನಗರ ಯೋಜನಾ ನಿರ್ದೇಶಕರು ಪ್ರಸ್ತಾವನೆಯನ್ನು ಪರಿಗಣಿಸಬಹುದೆಂದು ಶಿಫಾರಸ್ಸು ಮಾಡಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ನಅಇ 112 ಮೈಅಪ್ರಾ 2009, ಬೆಂಗಳೂರು, ದಿನಾಂಕ: 13ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ, 1961ರ ಕಲಂ 14(1)(ಎ)ರ ಪ್ರಕಾರ ಮೈಸೂರು ತಾಲ್ಲೂಕು ಕಸಬಾ ಹೋಬಳಿ, ಮೇಟಗಳ್ಳಿ ಗ್ರಾಮದ ಮೋಜಣಿ ಸಂಖ್ಯೆ 84ರ ವಿಸ್ತೀರ್ಣ 01 ಎಕರೆ 06 ಗುಂಟೆ ಜಮೀನನ್ನು ವ್ಯವಸಾಯ ವಲಯದಿಂದ ವಾಣಿಜ್ಯ (ಹೋಟೆಲ್) ಉದ್ದೇಶಕ್ಕೆ ಭೂ ಉಪಯೋಗ ಬದಲಾವಣೆ ಮಾಡಲು ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಸರ್ಕಾರದ ಅನುಮೋದನೆ ನೀಡಲಾಗಿದೆ.

1. ಪ್ರಸ್ಥಾಪಿತ ಜಮೀನಿನ ಭೂ ಉಪಯೋಗ ಬದಲಾವಣೆ ಸಂಬಂಧ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆಯ ಕಲಂ 18ರನ್ವಯ ಶಾಸನಬದ್ಧ ಶುಲ್ಕವನ್ನು ಅರ್ಜಿದಾರರು ಪ್ರಾಧಿಕಾರಕ್ಕೆ ಪಾವತಿಸತಕ್ಕದ್ದು.
2. ಈ ಭೂ ಉಪಯೋಗ ಬದಲಾವಣೆಯನ್ನು ಮಹಾ ಯೋಜನೆಯಲ್ಲಿ ಪ್ರಾಧಿಕಾರವು ಅಳವಡಿಸಿಕೊಳ್ಳತಕ್ಕದ್ದು.
3. ಪ್ರಸ್ತಾಪಿತ ಜಮೀನಿನಲ್ಲಿ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳುವ ಮುನ್ನ ಅನುಮೋದಿತ ವಲಯ ನಿಯಮಾವಳಿಗಳನ್ವಯ ವಾಣಿಜ್ಯ ವಿನ್ಯಾಸಕ್ಕೆ ನಗರಾಭಿವೃದ್ಧಿ ಪ್ರಾಧಿಕಾರದಿಂದ ಅನುಮೋದನೆ ಪಡೆಯತಕ್ಕದ್ದು.
4. ಮಾಸ್ಟರ್‌ಪ್ಲಾನ್ ಪರಿಷ್ಕರಣೆ ಸಂದರ್ಭದಲ್ಲಿ ಯೋಜನೆಯಲ್ಲಿ ಅಳವಡಿಸಬಹುದಾದ ಉದ್ದೇಶಿತ ರಸ್ತೆ ಪರಿಚಲನೆಗೆ ಬೇಕಾಗುವ ಅಗತ್ಯ ಜಮೀನನ್ನು ಬಿಟ್ಟುಕೊಡತಕ್ಕದ್ದು.
5. ಪ್ರಸ್ತಾವಿತ ವಾಣಿಜ್ಯ ಕಟ್ಟಡದಲ್ಲಿ ವಾಹನ ನಿಲುಗಡೆಗೆ ಅಗತ್ಯ ಸೌಲಭ್ಯವನ್ನು ಕಲ್ಪಿಸಿಕೊಳ್ಳತಕ್ಕದ್ದು.
6. ಅರ್ಜಿದಾರರೇ ಸದರಿ ಜಮೀನಿನಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 647

ಸಿ.ಟಿ. ನಾರಾಯಣಸ್ವಾಮಿ

ಸರ್ಕಾರದ ಅಧೀನ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ

ಜಲ ಸಂಪನ್ಮೂಲ ಸಚಿವಾಲಯ

ವಿಷಯ : 2008-09ನೇ ಸಾಲಿನ ಸವಿವರ ಅಂದಾಜಿನಲ್ಲಿ ಲೆಕ್ಕ ಶೀರ್ಷಿಕೆ 4702 ಅಡಿ ಅನುಮೋದನೆಯಾಗಿರುವ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1. ದಿನಾಂಕ 4.2.2009ರ ಬೆಂಗಳೂರು, ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರ ಸಂಖ್ಯೆ ಮುಸದ/ತಾಂ-4/ಸ.ಇಂ.9/4702/ಸ.ಆ.ಅ./2008-09/498.
2. ದಿನಾಂಕ 27.1.2009ರ ಬೆಂಗಳೂರು ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್ ರವರ ಪತ್ರ ಸಂಖ್ಯೆ ಮುಸದ/ತಾಂ-3/ಸ.ಇಂ.-7/ಚಿಂತಾಮಣಿ/ಕೊನಕುಂಟ್ಲು ಚೆಕ್ ಡ್ಯಾಂ/4702/ ಸ.ಆ.ಅ./2008-09/350.

ಪ್ರಸ್ತಾವನೆ :

ಮೇಲೆ ಓದಲಾದ ಪತ್ರಗಳಲ್ಲಿ ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜನಿಯರ್‌ರವರು 2008-09ನೇ ಸಾಲಿನ ಆಯವ್ಯಯದ "ಅಪೆಂಡಿಕ್ಸ್-ಇ" ನ ಲೆಕ್ಕ ಶೀರ್ಷಿಕೆ 4702-00-101-5-01-139-ಅಣೆಕಟ್ಟು ಮತ್ತು ಪಿಕಪ್‌ಗಳ ನಿರ್ಮಾಣ ಮತ್ತು ಲೆಕ್ಕ ಶೀರ್ಷಿಕೆ 4702-00-101-1-07-139-ಕೆರೆಗಳ ಆಧುನೀಕರಣ (ಪ್ರಧಾನ ಕಾಮಗಾರಿಗಳು) ಅಡಿ 5 ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಈ ಕಾಮಗಾರಿ ಕೈಗೊಳ್ಳಲು ಅಂದಾಜಿನ ಶೇ. 30ರಷ್ಟು ಅನುದಾನದೊಂದಿಗೆ ಅವಕಾಶ ಮಾಡಲಾಗಿದೆ. (ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ತಿಳಿಸಲಾಗಿದೆ). ಈ 5 ಕಾಮಗಾರಿಗಳ ಅಂದಾಜು ಮೊತ್ತ 323.00 ಲಕ್ಷ ರೂ.ಗಳು ಆಗುತ್ತದೆ.

ಆಡಳಿತಾತ್ಮಕ ಅನುಮೋದನೆಗೆ ಕೋರಿರುವ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು 2008-09ನೇ ಸಾಲಿಗೆ ಮುಂದುವರೆಸಿರುವ 2007-08ನೇ ಸಾಲಿನ ಸಣ್ಣ ನೀರಾವರಿ ಬೆಂಗಳೂರು/ಮೈಸೂರು ವೃತ್ತದ ದರಪಟ್ಟಿಯ ದರಗಳನ್ನು ಅಳವಡಿಸಿ ತಯಾರಿಸಲಾಗಿದೆ.

ಪ್ರಸ್ತಾಪಿಸಿರುವ ಕಾಮಗಾರಿಗಳ ಅಂದಾಜು ಮೊತ್ತ, ಆಯವ್ಯಯದ ಲೆಕ್ಕಶೀರ್ಷಿಕೆ, ಅನುದಾನ, ಕಾಮಗಾರಿಯ ಸ್ವರೂಪ ಹಾಗೂ ಅಂದಾಜಿನಲ್ಲಿ ಅಳವಡಿಸಿರುವ ಕೆಲಸಗಳ ವಿವರ, ಸೃಷ್ಟಿಯಾಗಲಿರುವ ಹೊಸ ಅಚ್ಚುಕಟ್ಟು/ಸ್ಥಿರೀಕರಿಸಲಾಗುತ್ತಿರುವ/ ಪುನರ್ ಸ್ಥಾಪಿಸಲಾಗುತ್ತಿರುವ ಅಚ್ಚುಕಟ್ಟು ಹಾಗೂ ಲಾಭ ವೆಚ್ಚದ ಅನುಪಾತ ವಿವರಗಳನ್ನು ಅನುಬಂಧದಲ್ಲಿ ಕಾಮಗಾರಿವಾರು ನೀಡಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 14 ಮಸಾವಿ 2009(1), ಬೆಂಗಳೂರು, ದಿನಾಂಕ: 28ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ವ್ಯಾಪ್ತಿಗೆ ಬರುವ ಈ ಆದೇಶದ ಅನುಬಂಧದಲ್ಲಿ ತಿಳಿಸಿರುವ ಒಟ್ಟು 323.00 ಲಕ್ಷ ರೂ.ಗಳ (ಮುನ್ನೂರ ಇಪ್ಪತ್ತಮೂರು ಲಕ್ಷ ರೂ.ಗಳು ಮಾತ್ರ) ಅಂದಾಜು ಮೊತ್ತದ 5 ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
2. ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
3. ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
4. ಕಾಮಗಾರಿಯ ಅಂದಾಜು ಪಟ್ಟಿಗಳನ್ನು ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ/ತಾಂತ್ರಿಕ ಸಮಿತಿಯು ಸಭೆಯಲ್ಲಿ ಮಂಡಿಸಿ ತೀರುವಳಿಯನ್ನು ಪಡೆಯುವುದು.
5. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
6. ಕಾಮಗಾರಿ ಪೂರ್ಣಗೊಂಡ ಕೂಡಲೇ ಪಿ.ಸಿ.ಆರ್. ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
7. ಕಾಮಗಾರಿಗೆ ಅಗತ್ಯವಿರುವ ಜಮೀನಿನ ಸ್ವಾಧೀನಕ್ಕಾಗಿ ನಿಯಮಾನುಸಾರ ತಕ್ಷಣ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು.
8. ಇ.ಐ.ಆರ್.ಎಲ್/ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
9. ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
10. ನೇರ ಅಚ್ಚುಕಟ್ಟು ಹೊಂದಿರುವ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16.5.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ ಸನೀಇ 14 ಮಸಾವಿ 2009, ದಿನಾಂಕ 28.2.2009 (1)

(ಮೊತ್ತ ಲಕ್ಷ ರೂ.ಗಳಲ್ಲಿ) ಹಾಗೂ (ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ)

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಸ್ವೀಕೃತವಾಗಿರುವ ಅಂದಾಜು ಮೊತ್ತ	ಅನುಬಂಧ-ಇ ವಿವರಗಳು		ನದಿ ಕೊಳ್ಳ	ಕಾಮಗಾರಿ ಸ್ವರೂಪ	ಹೊಸ ಅಚ್ಚುಕಟ್ಟು	ಪುನರ್ ಸ್ಥಾಪಿಸಲಾಗುವ/ ಸ್ಥಿರೀಕರಿಸುವ ಅಚ್ಚುಕಟ್ಟು	ಕಾಮಗಾರಿಯ ಸಂಕ್ಷಿಪ್ತ ವಿವರಗಳು
			ಅಂದಾಜು ಮೊತ್ತ	ಅನುದಾನ					
	ಲೆಕ್ಕ ಶೀರ್ಷಿಕೆ 4702-00-101-5-01-139 ಅಣೆಕಟ್ಟು ಮತ್ತು ಪಿಕಪ್ ನಿರ್ಮಾಣ								
1	ಚಿಕ್ಕಬಳ್ಳಾಪುರ ಜಿಲ್ಲೆ ಚಿಕ್ಕಬಳ್ಳಾಪುರ ತಾಲ್ಲೂಕು ಕೊಣಕುಂಟು ಬಳಿ ಚೆಕ್ ಡ್ಯಾಂ ನಿರ್ಮಾಣ	35.00	35.00	10.50	ಪಾಲಾರ್	ಹೊಸ ಕಾಮಗಾರಿ	0.00	0.00	30 ಮೀ. ಉದ್ದದ ಹಾಗೂ ಭೂ ಮಟ್ಟದಿಂದ 3.00 ಮೀ. ಎತ್ತರದ ಕಾಂಕ್ರಿಟ್ ಚೆಕ್ ಡ್ಯಾಂ ನಿರ್ಮಾಣ. ಹಾಗೂ ಚೆಕ್ ಡ್ಯಾಂ ಎರಡು ಬದಿ ಒಟ್ಟು 180 ಮೀ. ಉದ್ದದ ಮಣ್ಣಿನ ಏರಿ ನಿರ್ಮಾಣ
2	ದಕ್ಷಿಣ ಕನ್ನಡ ಜಿಲ್ಲೆ ಸೂಳ್ಯ ತಾಲ್ಲೂಕು ಸುಬ್ರಮಣ್ಯದಲ್ಲಿ ಕುಮಾರಧಾರ ನದಿಗೆ ಅಡ್ಡಲಾಗಿ ಕಿಂಡಿ ಅಣೆಕಟ್ಟು ನಿರ್ಮಾಣ	150.00	150.00	45.00	ಪಶ್ಚಿಮ ವಾಹಿನಿ	ಹೊಸ ಕಾಮಗಾರಿ	120.00	0.00	65.00 ಮೀ. ಉದ್ದದ 3.00 ಮೀ ಎತ್ತರದ 24 ಕಿಂಡಿಗಳುಳ್ಳ ಕಿಂಡಿ ಅಣೆಕಟ್ಟು ನಿರ್ಮಾಣ. ಅಣೆಕಟ್ಟೆಯ ಸಂಗ್ರಹಣಾ ಸಾಮರ್ಥ್ಯ 4.19 ದ.ಲ.ಘ. ಅಡಿ.
	ಲೆಕ್ಕ ಶೀರ್ಷಿಕೆ 4702-00-101-1-07-139 ಕೆರೆಗಳ ಆಧುನೀಕರಣ								
3	ಕೊಡಗು ಜಿಲ್ಲೆ ಮಡಿಕೇರಿ ತಾಲ್ಲೂಕು ಚೆರಂಗಳ ಗ್ರಾಮದ ನಾಗತೀರ್ಥ ಪಿಕಪ್ ಅಭಿವೃದ್ಧಿ	38.00	38.00	11.40	ಕಾವೇರಿ	ಪುನರುಜ್ಜೀವನ ಕಾಮಗಾರಿ	0.00	48.60	ಪಿಕಪ್‌ನ ಮುಖ್ಯ ಗೋಡೆಯ ಪುನರ್ ನಿರ್ಮಾಣ
4	ಚಿತ್ರದುರ್ಗ ಜಿಲ್ಲೆ ಹಿರಿಯೂರು ತಾಲ್ಲೂಕು ಗುಡಿಹಳ್ಳಿ ಕೆರೆ ಆಧುನೀಕರಣ	50.00	50.00	15.00	ಕೃಷ್ಣಾ	ಪುನರುಜ್ಜೀವನ ಕಾಮಗಾರಿ	0.00	85.00	ಕೆರೆಯ ಏರಿ ಅಭಿವೃದ್ಧಿ ಹಾಗೂ ಕೆರೆಯ ಕಾಲುವೆ ಅಭಿವೃದ್ಧಿ ಇತ್ಯಾದಿ
5	ಚಿತ್ರದುರ್ಗ ಜಿಲ್ಲೆ ಹೊಳಲ್ಕೆರೆ ತಾಲ್ಲೂಕು ಚಿಕ್ಕ ಕೆರೆ ಅಭಿವೃದ್ಧಿ	50.00	50.00	15.00	ಕೃಷ್ಣಾ	ಪುನರುಜ್ಜೀವನ ಕಾಮಗಾರಿ	0.00	0.00	ಕೆರೆಯ ಏರಿ ಅಭಿವೃದ್ಧಿ
	ಒಟ್ಟು	**323.00**	**323.00**	**96.90**					

ಕೆ. ಸುಧಾಕರ ಶೆಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 901

ಶಿಕ್ಷಣ ಸಚಿವಾಲಯ

ವಿಷಯ : 2008-09ನೇ ಸಾಲಿಗೆ ರಾಜ್ಯವಲಯದಿಂದ ಜಿಲ್ಲಾ ವಲಯಕ್ಕೆ ವರ್ಗಾವಣೆಯಾದ ಕಾರ್ಯಕ್ರಮಗಳಡಿ ಉಪಕಾರ್ಯಕ್ರಮಗಳವಾರು ಅನುದಾನವನ್ನು ಜಿಲ್ಲಾವಾರು ಹಂಚಿಕೆ ಮಾಡುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರ ಸಂಖ್ಯೆ: ಯೋ(2) ಶುಲ್ಕ ಮರುಪಾವತಿ 3/2008-09, ದಿನಾಂಕ 28.7.2008.

ಪ್ರಸ್ತಾವನೆ :

(1) ಮೇಲೆ ಓದಲಾದ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರದಲ್ಲಿ 2008-09ನೇ ಸಾಲಿನಲ್ಲಿ, ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಿಗೆ ವರ್ಗಾಯಿಸಲಾದ

ಎ) ಸಾರ್ವಜನಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು ಲೆಕ್ಕ ಶೀರ್ಷಿಕೆ 2202-01-800-1-35ರಡಿ ಈ ಕೆಳಕಂಡಂತೆ ಉಪಕಾರ್ಯಕ್ರಮಗಳಿಗೆ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆ.

ಅ) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ (6 ಮತ್ತು 7ನೇ ತರಗತಿ ಎಸ್.ಸಿ./ಎಸ್.ಟಿ. ಗಂಡು ಮಕ್ಕಳು ಮತ್ತು ಎಲ್ಲಾ ಹೆಣ್ಣುಮಕ್ಕಳು) ಸರ್ಕಾರೇತರ ಶುಲ್ಕ ಮರುಪಾವತಿ.

ಆ) ಹೊಸ ಉಪನಿರ್ದೇಶಕರ ಕಛೇರಿಗಳಿಗೆ ಬಾಡಿಗೆ ವಾಹನ ಸೌಲಭ್ಯ

ಇ) ಹೊಸ ಬಿ.ಇ.ಓ. ಕಛೇರಿಗಳಿಗೆ ಬಾಡಿಗೆ ವಾಹನ ಸೌಲಭ್ಯ.

ಈ) ಅಕ್ಷರ ದಾಸೋಹ ಕಾರ್ಯಕ್ರಮ.

ಬಿ) ಧನಸಹಾಯ ಮತ್ತು ಫೀಜಿನ ಮರುಪಾವತಿ ಲೆಕ್ಕಶೀರ್ಷಿಕೆ 2202-02-800-1-05ರಡಿ ಈ ಕೆಳಕಂಡಂತೆ ಉಪಕಾರ್ಯಕ್ರಮಗಳಿಗೆ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆ.

ಅ) ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷಾ ಶುಲ್ಕ ಮರುಪಾವತಿ ಎಲ್ಲಾ ಹೆಣ್ಣು ಮಕ್ಕಳಿಗೆ

ಆ) ಸರ್ಕಾರೇತರ ಶುಲ್ಕ ಎಲ್ಲಾ ಸಾಮಾನ್ಯ ಹೆಣ್ಣು ಮಕ್ಕಳಿಗೆ ಹಾಗೂ ಎಸ್.ಸಿ./ಎಸ್.ಟಿ. ಗಂಡು ಮಕ್ಕಳಿಗೆ (8,9 ಮತ್ತು 10ನೇ ತರಗತಿ)

ಮೇಲ್ಕಂಡ ಎರಡು ಯೋಜನಾ ಕಾರ್ಯಕ್ರಮಗಳಿಗೆ ವಿವಿಧ ಜಿಲ್ಲೆಗಳಿಗೆ ಹಂಚಿಕೆ ಮಾಡಿ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಸರ್ಕಾರವನ್ನು ಕೋರಿರುತ್ತಾರೆ.

(2) ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸುತ್ತದೆ.

ಸರ್ಕಾರಿ ಆದೇಶ ಸಂಖ್ಯೆ: ಇಡಿ 192 ಯೋಯೋಕ 2008, ಬೆಂಗಳೂರು, ದಿನಾಂಕ: 4ನೇ ಸೆಪ್ಟೆಂಬರ್ 2008

(ಇಡಿ 146 ಸ್ಕೀಮರ (ಯುನಿಕ್) 2008, ದಿನಾಂಕ 4.9.2008)

(3) 2008-09ನೇ ಸಾಲಿಗೆ ಜಿಲ್ಲಾ ಪಂಚಾಯತ್ ಕಾರ್ಯಕ್ರಮಗಳಿಗೆ ಲಿಂಕ್ ಡಾಕ್ಯುಮೆಂಟ್‌ನಲ್ಲಿ ಒದಗಿಸಲಾದ

ಎ) ಸಾರ್ವಜನಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು ಲೆಕ್ಕ ಶೀರ್ಷಿಕೆ 2202-01-800-1-35 ರಡಿಯಲ್ಲಿನ ಅನುದಾನವನ್ನು ಈ ಕೆಳಕಂಡಂತೆ ಉಪ ಕಾರ್ಯಕ್ರಮಗಳಿಗೆ ಅನುಬಂಧ-1ರಲ್ಲಿ ತೋರಿಸಿರುವಂತೆ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆ.

ಅ) ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ [6 ಮತ್ತು 7ನೇ ತರಗತಿ ಎಸ್.ಸಿ./ಎಸ್.ಟಿ. ಗಂಡು ಮಕ್ಕಳು ಮತ್ತು ಎಲ್ಲಾ ಹೆಣ್ಣು ಮಕ್ಕಳು] ಸರ್ಕಾರೇತರ ಶುಲ್ಕ ಮರುಪಾವತಿ.

ಆ) ಹೊಸ ಉಪನಿರ್ದೇಶಕರ ಕಛೇರಿಗಳಿಗೆ ಬಾಡಿಗೆ ವಾಹನ ಸೌಲಭ್ಯ.

ಇ) ಹೊಸ ಬಿ.ಇ.ಓ. ಕಛೇರಿಗಳಿಗೆ ಬಾಡಿಗೆ ವಾಹನ ಸೌಲಭ್ಯ.

ಈ) ಅಕ್ಷರ ದಾಸೋಹ ಕಾರ್ಯಕ್ರಮ

ಬಿ) ಧನಸಹಾಯ ಮತ್ತು ಫೀಜಿನ ಮರುಪಾವತಿ ಲೆಕ್ಕಶೀರ್ಷಿಕೆ 2202-02-800-1-05 ರಡಿಯಲ್ಲಿನ ಅನುದಾನವನ್ನು ಈ ಕೆಳಕಂಡಂತೆ ಉಪ ಕಾರ್ಯಕ್ರಮಗಳಿಗೆ ಅನುಬಂಧ-2ರಲ್ಲಿ ತೋರಿಸಿರುವಂತೆ ಜಿಲ್ಲಾವಾರು ಹಂಚಿಕೆ ಮಾಡಲಾಗಿದೆ.

ಅ) ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷಾ ಶುಲ್ಕ ಮರುಪಾವತಿ ಎಲ್ಲಾ ಹೆಣ್ಣು ಮಕ್ಕಳಿಗೆ

ಆ) ಸರ್ಕಾರೇತರ ಶುಲ್ಕ ಎಲ್ಲಾ ಸಾಮಾನ್ಯ ಹೆಣ್ಣು ಮಕ್ಕಳಿಗೆ ಹಾಗೂ ಎಸ್.ಸಿ./ಎಸ್.ಟಿ. ಗಂಡು ಮಕ್ಕಳಿಗೆ (8,9 ಮತ್ತು 10ನೇ ತರಗತಿ)

4) ಪ್ರತಿ ಮಾಹೆಯೂ ಎಂ.ಎಂ.ಆರ್. ವರದಿಯಲ್ಲಿ ಭೌತಿಕ ಮತ್ತು ಆರ್ಥಿಕ ಪ್ರಗತಿ ವರದಿಯನ್ನು ತಪ್ಪದೇ ಸಲ್ಲಿಸತಕ್ಕದ್ದು.

5) ಈ ಆದೇಶವನ್ನು ಶಿಕ್ಷಣ ಇಲಾಖೆಯ ಆಂತರಿಕ ಆರ್ಥಿಕ ಸಲಹೆಗಾರರ ಅನಧಿಕೃತ ಟಿಪ್ಪಣಿ ಸಂಖ್ಯೆ ಶಿಇ 945 ಐಎಫ್ (ಜಿಎ) 2008, ದಿನಾಂಕ 19.8.2008ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ.ಎಫ್. ಮಾಗಿ
ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, ಶಿಕ್ಷಣ ಇಲಾಖೆ (ಯೋಜನೆ)

ಸರ್ಕಾರಿ ಆದೇಶ ಸಂಖ್ಯೆ: ಇಡಿ 192 ಯೋಯೋಕ 2008, ಬೆಂಗಳೂರು, ದಿನಾಂಕ 4.9.2008

(ಇಡಿ 146 ಸ್ಕೀಮರ (ಯುನಿಕ್) 2008, ದಿನಾಂಕ 4.9.2008)ಕ್ಕೆ ಅನುಬಂಧ-1

ಸಾರ್ವಜನಿಕ ಪ್ರಾಥಮಿಕ ಶಿಕ್ಷಣದ ಉತ್ತೇಜನಕ್ಕಾಗಿ ಚಟುವಟಿಕೆಗಳು - ಲೆಕ್ಕಶೀರ್ಷಿಕೆ 2202-01-800-1-35

ಕ್ರ. ಸಂ.	ಜಿಲ್ಲೆಯ ಹೆಸರು	ಲಿಂಕ್ ಡ್ಯಾಕುಮೆಂಟ್‌ನಲ್ಲಿ ಒದಗಿಸಲಾದ ಆಯವ್ಯಯ	ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಸರ್ಕಾರೇತರ ಶುಲ್ಕ ಮರುಪಾವತಿ (6 ಮತ್ತು 7ನೇ ತರಗತಿ) ಎಸ್.ಸಿ./ ಎಸ್.ಟಿ. ಗಂಡು ಮಕ್ಕಳು ಮತ್ತು ಎಲ್ಲಾ ಹೆಣ್ಣು ಮಕ್ಕಳು	ಬಾಡಿಗೆ ವಾಹನ ಸೌಲಭ್ಯ (ಉಪ ನಿರ್ದೇಶಕರು ಗಳಿಗೆ)	ಬಾಡಿಗೆ ವಾಹನ ಸೌಲಭ್ಯ (ಬಿ.ಇ.ಓ.) ಗಳಿಗೆ	ಅಕ್ಷರ ದಾಸೋಹ
1	2	3	4	5	6	7
1	ಬಾಗಲಕೋಟೆ	1164.71	14.00	0.00	0.00	1150.71
2	ಬೆಂಗಳೂರು ಉತ್ತರ	1076.14	18.50	0.00	2.88	1054.76
3	ಬೆಂಗಳೂರು ದಕ್ಷಿಣ	0.00	0.00	0.00	0.00	0.00
4	ಬೆಂಗಳೂರು ಗ್ರಾಮಾಂತರ	583.82	4.97	0.00	0.00	578.85
5	ರಾಮನಗರ	704.10	4.77	0.00	0.00	699.33
6	ಬೆಳಗಾಂ	2152.09	26.00	1.80	2.88	2121.41
7	ಬೆಳಗಾಂ ಉತ್ತರ-ಚಿಕ್ಕೋಡಿ	0.00	0.00	0.00	0.00	0.00
8	ಬಳ್ಳಾರಿ	1571.40	11.89	0.00	1.44	1558.07
9	ಬೀದರ್	1449.05	10.00	0.00	0.00	1439.05
10	ಬಿಜಾಪುರ	1604.21	15.00	0.00	1.44	1587.77
11	ಚಾಮರಾಜನಗರ	633.74	6.75	0.00	1.44	625.55
12	ಚಿಕ್ಕಬಳ್ಳಾಪುರ	562.44	7.00	0.00	0.00	555.44
13	ಚಿಕ್ಕಮಗಳೂರು	789.79	7.00	0.00	1.44	781.35
14	ಚಿತ್ರದುರ್ಗ	1205.84	11.00	0.00	0.00	1194.84
15	ದಕ್ಷಿಣ ಕನ್ನಡ	945.65	8.00	0.00	0.00	937.65
16	ದಾವಣಗೆರೆ	1117.24	14.00	0.00	0.00	1103.24
17	ಧಾರವಾಡ	1038.64	7.00	0.00	0.00	1031.64
18	ಗದಗ	728.57	5.00	0.00	0.00	723.57
19	ಗುಲ್ಬರ್ಗಾ	2623.49	34.65	1.80	1.44	2585.60
20	ಯಾದಗಿರಿ	0.00	0.00	0.00	0.00	0.00

1	2	3	4	5	6	7
21	ಹಾಸನ	1185.57	8.50	0.00	0.00	1177.07
22	ಹಾವೇರಿ	1114.64	11.73	0.00	0.00	1102.91
23	ಕೊಡಗು	304.37	3.25	0.00	0.00	301.12
24	ಕೋಲಾರ	1301.63	9.50	1.80	0.00	1290.33
25	ಕೊಪ್ಪಳ	1078.64	7.50	0.00	0.00	1071.14
26	ತುಮಕೂರು	1791.56	23.00	0.00	0.00	1768.56
27	ಮಧುಗಿರಿ	0.00	0.00	0.00	0.00	0.00
28	ಮಂಡ್ಯ	1013.31	9.00	0.00	1.44	1002.87
29	ಮೈಸೂರು	1466.72	15.90	0.00	1.44	1449.38
30	ರಾಯಚೂರು	1378.74	10.00	0.00	0.00	1368.74
31.	ಶಿವಮೊಗ್ಗ	1114.64	8.00	0.00	0.00	1106.64
32.	ಉಡುಪಿ	519.83	4.09	0.00	1.44	514.30
33.	ಉತ್ತರ ಕನ್ನಡ	1205.84	8.50	0.00	0.00	1197.34
	ಒಟ್ಟು	**33426.41**	**324.50**	**5.40**	**17.28**	**33079.23**

ಸರ್ಕಾರಿ ಆದೇಶ ಸಂಖ್ಯೆ: ಇಡಿ 192 ಯೋಯೋಕ 2008, ಬೆಂಗಳೂರು, ದಿನಾಂಕ 4.9.2008

(ಇಡಿ 146 ಸ್ಕೀಮರ (ಯುನಿಕ್) 2008, ದಿನಾಂಕ 4.9.2008)ಕ್ಕೆ ಅನುಬಂಧ-2

ಧನ ಸಹಾಯ ಮತ್ತು ಶುಲ್ಕ ಮರುಪಾವತಿ ಲೆಕ್ಕಶೀರ್ಷಿಕೆ 2202-02-800-1-05

ಕ್ರ. ಸಂ.	ಜಿಲ್ಲೆಯ ಹೆಸರು	ಲಿಂಕ್ ಡ್ಯಾಕುಮೆಂಟ್‌ನಲ್ಲಿ ಒದಗಿಸಲಾದ ಆಯವ್ಯಯ	ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷಾ ಶುಲ್ಕ ಮರುಪಾವತಿ ಎಲ್ಲಾ ಹೆಣ್ಣು ಮಕ್ಕಳಿಗೆ	ಸರ್ಕಾರೇತರ ಶುಲ್ಕ ಎಲ್ಲಾ ಹೆಣ್ಣು ಮಕ್ಕಳು ಹಾಗೂ ಎಸ್.ಸಿ./ ಎಸ್.ಟಿ. ಗಂಡು ಮಕ್ಕಳು (8,9 ಮತ್ತು 10ನೇ ತರಗತಿ)
1	2	3	4	5
1	ಬಾಗಲಕೋಟೆ	14.75	1.75	13.00
2	ಬೆಂಗಳೂರು ಉತ್ತರ	53.71	17.43	36.28
3	ಬೆಂಗಳೂರು ದಕ್ಷಿಣ	0.00	0.00	0.00
4	ಬೆಂಗಳೂರು ಗ್ರಾಮಾಂತರ	31.92	15.39	16.53
5	ರಾಮನಗರ	16.09	0.00	16.09
6	ಬೆಳಗಾಂ	47.37	23.37	24.00
7	ಬೆಳಗಾಂ ಉತ್ತರ-ಚಿಕ್ಕೋಡಿ	0.00	0.00	0.00
8	ಬಳ್ಳಾರಿ	41.24	16.50	24.74
9	ಬೀದರ್	45.60	24.60	21.00
10	ಬಿಜಾಪುರ	34.35	10.80	23.55
11	ಚಾಮರಾಜನಗರ	16.72	4.22	12.50
12	ಚಿಕ್ಕಬಳ್ಳಾಪುರ	30.40	16.29	14.11
13	ಚಿಕ್ಕಮಗಳೂರು	40.53	28.53	12.00
14	ಚಿತ್ರದುರ್ಗ	33.14	15.50	17.64

ಕ್ರ. ಸಂ.	ಜಿಲ್ಲೆಯ ಹೆಸರು	ಲಿಂಕ್ ಡ್ಯಾಕುಮೆಂಟ್‌ನಲ್ಲಿ ಒದಗಿಸಲಾದ ಆಯವ್ಯಯ	ಎಸ್.ಎಸ್.ಎಲ್.ಸಿ. ಪಬ್ಲಿಕ್ ಪರೀಕ್ಷಾ ಶುಲ್ಕ ಮರುಪಾವತಿ ಎಲ್ಲಾ ಹೆಣ್ಣು ಮಕ್ಕಳಿಗೆ	ಸರ್ಕಾರೇತರ ಶುಲ್ಕ ಎಲ್ಲಾ ಹೆಣ್ಣು ಮಕ್ಕಳು ಹಾಗೂ ಎಸ್.ಸಿ./ ಎಸ್.ಟಿ. ಗಂಡು ಮಕ್ಕಳು (8,9 ಮತ್ತು 10ನೇ ತರಗತಿ)
15	ದಕ್ಷಿಣ ಕನ್ನಡ	62.83	22.83	40.00
16	ದಾವಣಗೆರೆ	27.71	2.21	25.50
17	ಧಾರವಾಡ	13.59	0.59	13.00
18	ಗದಗ	26.06	16.06	10.00
19	ಗುಲ್ಬರ್ಗಾ	81.74	33.00	48.74
20	ಯಾದಗಿರಿ	0.00	0.00	0.00
21	ಹಾಸನ	40.53	5.53	35.00
22	ಹಾವೇರಿ	30.91	17.20	13.71
23	ಕೊಡಗು	9.12	3.62	5.50
24	ಕೋಲಾರ	32.24	12.24	20.00
25	ಕೊಪ್ಪಳ	30.40	12.65	17.75
26	ತುಮಕೂರು	35.97	5.97	30.00
27	ಮಧುಗಿರಿ	0.00	0.00	0.00
28	ಮಂಡ್ಯ	76.00	42.00	34.00
29	ಮೈಸೂರು	81.06	43.00	38.06
30	ರಾಯಚೂರು	30.40	3.40	27.00
31	ಶಿವಮೊಗ್ಗ	43.73	16.73	27.00
32	ಉಡುಪಿ	39.52	14.52	25.00
33	ಉತ್ತರ ಕನ್ನಡ	20.69	3.16	17.53
	ಒಟ್ಟು	**1088.32**	**384.10**	**704.22**

ಐ.ಎಫ್. ಮಾಗಿ

ಪಿ.ಆರ್. 1298

ವಿಶೇಷಾಧಿಕಾರಿಗಳು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಯೋಜನೆ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : 2008-09ನೇ ಸಾಲಿನ ಸವಿವರ ಅಂದಾಜಿನಲ್ಲಿ ಲೆಕ್ಕ ಶೀರ್ಷಿಕೆ 4702 ಅಡಿ ಅನುಮೋದನೆಯಾಗಿರುವ ಸಣ್ಣ ನೀರಾವರಿ ಉತ್ತರ ವಲಯ ಬಿಜಾಪುರ ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1. ದಿನಾಂಕ 10.2.2009ರ ಬಿಜಾಪುರ, ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜನಿಯರ್ ರವರ ಪತ್ರ ಸಂಖ್ಯೆ ಮುಇಂ/ಸನೀ(ಉ)ವ/ಬಿಜೆಪಿ/ಪಿಬಿ-2/2008-09/820.
2. ದಿನಾಂಕ 25.2.2009ರ ಬಿಜಾಪುರ, ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜನಿಯರ್ ರವರ ಪತ್ರ ಸಂಖ್ಯೆ: ಮುಇಂ/ಸನೀ(ಉ)ವ/ಬಿಜೆಪಿ/ಎಇ-12/2008-09/1270.

ಪ್ರಸ್ತಾವನೆ :

2008-09ನೇ ಸಾಲಿನ ಆಯವ್ಯಯದ ವಿವಿಧ ಲೆಕ್ಕಶೀರ್ಷಿಕೆಗಳಡಿ ಅಂದಾಜಿನ ಶೇ. 30ರಷ್ಟು ಅನುದಾನದೊಂದಿಗೆ ಸೇರಿರುವ 4 ಕಾಮಗಾರಿಗಳ (ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ತಿಳಿಸಲಾಗಿದೆ) ಅಂದಾಜು ಪಟ್ಟಿಗಳಿಗೆ

(ಅಂದಾಜು ಮೊತ್ತ 485.00 ಲಕ್ಷ ರೂ.ಗಳು) ಆಡಳಿತಾತ್ಮಕ ಅನುಮೋದನೆ ನೀಡುವಂತೆ ಮೇಲೆ ಓದಲಾದ ಪತ್ರಗಳಲ್ಲಿ ಸಣ್ಣ ನೀರಾವರಿ ಉತ್ತರ ವಲಯದ ಮುಖ್ಯ ಇಂಜಿನಿಯರ್‌ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆಡಳಿತಾತ್ಮಕ ಅನುಮೋದನೆಗೆ ಕೋರಿರುವ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು 2008-09ನೇ ಸಾಲಿಗೆ ಮುಂದುವರೆಸಿರುವ 2007-08ನೇ ಸಾಲಿನ ಸಣ್ಣ ನೀರಾವರಿ ಬೆಳಗಾವಿ ವೃತ್ತದ ದರಪಟ್ಟಿಯ ದರಗಳನ್ನು ಅಳವಡಿಸಿ ತಯಾರಿಸಲಾಗಿದೆ. ಈ ಕಾಮಗಾರಿಗಳು ಆರ್ಥಿಕವಾಗಿ ಹಾಗೂ ತಾಂತ್ರಿಕವಾಗಿ ಶಕ್ಯವಾಗಿದೆ.

ಪ್ರಸ್ತಾಪಿಸಿರುವ ಕಾಮಗಾರಿಗಳ ಅಂದಾಜು ಮೊತ್ತ, ಆಯವ್ಯಯದ ಲೆಕ್ಕ ಶೀರ್ಷಿಕೆ, ಅನುದಾನ, ಕಾಮಗಾರಿಯ ಸ್ವರೂಪ ಹಾಗೂ ಅಂದಾಜಿನಲ್ಲಿ ಅಳವಡಿಸಿರುವ ಕೆಲಸಗಳ ವಿವರ, ಸೃಷ್ಟಿಯಾಗಲಿರುವ ಹೊಸ ಅಚ್ಚುಕಟ್ಟು ಹಾಗೂ ಲಾಭ ವೆಚ್ಚದ ಅನುಪಾತ ವಿವರಗಳನ್ನು ಅನುಬಂಧದಲ್ಲಿ ಕಾಮಗಾರಿವಾರು ನೀಡಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 15 ಮಸಾವಿ 2009 ಭಾಗ-1(2) ಬೆಂಗಳೂರು, ದಿನಾಂಕ: 28ನೇ ಫೆಬ್ರವರಿ 2009

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ಉತ್ತರ ವಲಯ, ಬಿಜಾಪುರ ವ್ಯಾಪ್ತಿಗೆ ಬರುವ ಅಡಕಗಳಿಸಿರುವ ಅನುಬಂಧದಲ್ಲಿ ತಿಳಿಸಿರುವ ಒಟ್ಟು ರೂ. 485.00 ಲಕ್ಷ (ನಾಲ್ಕು ನೂರ ಎಂಬತ್ತೈದು ಲಕ್ಷ ರೂ.) ಮೊತ್ತದ 4 ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1. ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
2. ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
3. ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
4. ಕಾಮಗಾರಿಯ ಅಂದಾಜು ಪಟ್ಟಿಗೆ ಸಂಬಂಧಿಸಿದಂತೆ ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ/ತಾಂತ್ರಿಕ ಸಮಿತಿಯು ಸಭೆಯಲ್ಲಿ ನೀಡಿರುವ ಸೂಚನೆಗಳನ್ನು ಚಾಚೂ ತಪ್ಪದೇ ಪಾಲಿಸತಕ್ಕದ್ದು.
5. ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
6. ಕಾಮಗಾರಿ ಪೂರ್ಣಗೊಂಡ ಕೂಡಲೇ ಪಿ.ಸಿ.ಆರ್. ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
7. ಕಾಮಗಾರಿಗೆ ಅಗತ್ಯವಿರುವ ಜಮೀನಿನ ಸ್ವಾಧೀನಕ್ಕಾಗಿ ನಿಯಮಾನುಸಾರ ತಕ್ಷಣ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು.
8. ಇ.ಐ.ಆರ್.ಎಲ್./ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
9. ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
10. ನೇರ ಅಚ್ಚುಕಟ್ಟು ಹೊಂದಿರುವ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16.5.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ ಸನೀಇ 15 ಮಸಾವಿ 2009 ಭಾಗ-1(2), ದಿನಾಂಕ 28.2.2009

(ಮೊತ್ತ ಲಕ್ಷ ರೂ.ಗಳಲ್ಲಿ) ಹಾಗೂ (ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ)

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಪರಿಷ್ಕೃತ ಅಂದಾಜು ಮೊತ್ತ	ಅನುಬಂಧ-ಇ ವಿವರಗಳು		ನದಿ ಕೊಳ್ಳ	ಕಾಮಗಾರಿ ಸ್ವರೂಪ	ಹೊಸ ಅಚ್ಚುಕಟ್ಟು	ಪುನರ್ ಸ್ಥಾಪಿಸಲಾಗುವ/ ಸ್ಥಿರೀಕರಿಸುವ ಅಚ್ಚುಕಟ್ಟು	ಕಾಮಗಾರಿಯ ಸಂಕ್ಷಿಪ್ತ ವಿವರಗಳು
			ಅಂದಾಜು ಮೊತ್ತ	ಅನುದಾನ					
	ಲೆಕ್ಕ ಶೀರ್ಷಿಕೆ 4702-00-101-1-02-139 ಹೊಸ ಕೆರೆಗಳ ನಿರ್ಮಾಣ (ಪ್ರಧಾನ ಕಾಮಗಾರಿಗಳು)								
1	ಗುಲ್ಬರ್ಗಾ ಜಿಲ್ಲೆ ಚಿಂಚೋಳಿ ತಾಲ್ಲೂಕಿನ ಕೂಡ್ಲಿ ಅಲ್ಲಾಪುರ ಕೆರೆ ಗ್ರಾಮಸ್ಥರ ಪುನರ್ವಸತಿ ನಿರ್ಮಾಣ	300.00	300.00	90.00	ಕೃಷ್ಣಾ	ಪುನರುಜ್ಜೀವನ ಕಾಮಗಾರಿ	0	0	ಕೂಡ್ಲಿ ಅಲ್ಲಾಪುರ ಕೆರೆ ಕಾಮಗಾರಿಯಿಂದ ನಿರ್ವಸತಿಗೊಳಗಾಗುವ ಅಲ್ಲಾಪುರ ಗ್ರಾಮಸ್ಥರ ಪುನರ್ವಸತಿ ಕಾಮಗಾರಿ
	ಲೆಕ್ಕ ಶೀರ್ಷಿಕೆ 4702-00-101-1-07-139 ಕೆರೆಗಳ ಆಧುನೀಕರಣ (ಪ್ರಧಾನ ಕಾಮಗಾರಿಗಳು)								
2	ಉತ್ತರ ಕನ್ನಡ ಜಿಲ್ಲೆ ಮುಂಡಗೋಡ ತಾಲ್ಲೂಕಿನ ನ್ಯಾಸರ್ಗಿ ಕೆರೆ ಹಾಗೂ ಕಾಲುವೆ ಆಧುನೀಕರಣ	50.00	50.00	15.00	ಪಶ್ಚಿಮ ವಾಹಿನಿ	ಪುನರುಜ್ಜೀವನ ಕಾಮಗಾರಿ	0	393	ಕೆರೆಯ ಏರಿ, ಕಾಲುವೆಗಳ ಅಭಿವೃದ್ಧಿ
	ಲೆಕ್ಕ ಶೀರ್ಷಿಕೆ 4702-00-101-5-01-139 ಅಣೆಕಟ್ಟು ಮತ್ತು ಪಿಕಪ್ - ಪ್ರಧಾನ. ಕಾಮಗಾರಿಗಳು								
3	ಉತ್ತರ ಕನ್ನಡ ಜಿಲ್ಲೆ ಹಳಿಯಾಳ ತಾಲ್ಲೂಕಿನ ಖಾಮಡೊಳ್ಳಿ ಗ್ರಾಮದ ಹತ್ತಿರ ಬಾಂಧಾರ ನಿರ್ಮಾಣ	45.00	45.00	13.50	ಪಶ್ಚಿಮ ವಾಹಿನಿ	ಹೊಸ ಕಾಮಗಾರಿ	50		ಹೊಸ ಬ್ಯಾರೇಜ್ ನಿರ್ಮಾಣ ಬ್ಯಾರೇಜಿನ ಉದ್ದ 34.00 ಮೀ. ಎತ್ತರ 3.00 ಮೀ. ಮುಖ್ಯ ಪಿಯರ್‌ಗಳ ಸಂಖ್ಯೆ-6 ಹಾಗೂ ನೆಪಮಾತ್ರ ಪಿಯರ್‌ಗಳ ಸಂಖ್ಯೆ 7 ಮತ್ತು ಶೇ. 10ರ ಬಡ್ಡಿ ದರದಲ್ಲಿ ಲಾಭ ವೆಚ್ಚದ ಅನುಪಾತ 1.02 ಆಗಿರುತ್ತದೆ.
4	ಉತ್ತರ ಕನ್ನಡ ಜಿಲ್ಲೆ ಕಾರವಾರ ತಾಲ್ಲೂಕಿನ ಕಿನ್ನರ್ ಖಾರ್ ಲ್ಯಾಂಡ್ ಯೋಜನೆಯ ಮರು ನಿರ್ಮಾಣ	90.00	90.00	27.00	ಪಶ್ಚಿಮ ವಾಹಿನಿ	ಪುನರುಜ್ಜೀವನ ಕಾಮಗಾರಿ		299	ಖಾರ್ ಲ್ಯಾಂಡ್ ಪುನರ್ ನಿರ್ಮಾಣ ತೂಬು ಹಾಗೂ ಏರಿಯಾ ದುರಸ್ತಿ
	ಲೆಕ್ಕಶೀರ್ಷಿಕೆ 4702-00-101-5-01-139 ಅಣೆಕಟ್ಟು ಒಟ್ಟು	**135.00**	**135.00**	**40.50**					
	ಒಟ್ಟು	**485.00**	**485.00**	**145.50**					

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 858

ಶಿಕ್ಷಣ ಸಚಿವಾಲಯ

ವಿಷಯ : 2007-08ನೇ ಸಾಲಿಗೆ ಮಂಜೂರಾದ ಸರ್ಕಾರಿ ಪಾಲಿಟೆಕ್ನಿಕ್‌ಗಳ ಕಟ್ಟಡ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ: ಇಡಿ 174 ಯೋಯೋಕ 2007, ದಿನಾಂಕ 23.7.2007.
2. ಸರ್ಕಾರದ ಆದೇಶ ಸಂಖ್ಯೆ: ಇಡಿ 83 ಯೋಯೋಕ 2008, ದಿನಾಂಕ 26.4.2008.
3. ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರು ಅವರ ಪತ್ರ ಸಂಖ್ಯೆ: ಡಿ.ಟಿ.ಇ. 60 ಬಿ.ಎಲ್.ಡಿ. 2007, ದಿನಾಂಕ 30.7.2008.

ಪ್ರಸ್ತಾವನೆ :

1) 2007-08ನೇ ಸಾಲಿಗೆ ಸರ್ಕಾರದ ಆದೇಶ ಸಂಖ್ಯೆ: ಇಡಿ 174 ಯೋಯೋಕ 2007, ದಿನಾಂಕ 23.7.2007ರಂದು ರಾಜ್ಯದಲ್ಲಿ 21 ಸರ್ಕಾರಿ ಪಾಲಿಟೆಕ್ನಿಕ್‌ಗಳನ್ನು ಪ್ರಾರಂಭಿಸಲು ಅನುಮೋದನೆ ನೀಡಲಾಗಿದೆ.

2) ಮೇಲೆ (2)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಮುಂದುವರಿಕೆ ಕಾರ್ಯಕ್ರಮಗಳ ಅನುಷ್ಠಾನ ಆದೇಶದಲ್ಲಿ 2008-09ನೇ ಸಾಲಿಗೆ ಮಂಜೂರಾದ 21 ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಕಟ್ಟಡವನ್ನು ನಿರ್ಮಿಸಲು ಲೆಕ್ಕ ಶೀರ್ಷಿಕೆ 4202-02-104-1-01-139 ರಡಿಯಲ್ಲಿ 2000.00 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ. ಪರಿಷ್ಕೃತ ಆಯವ್ಯಯದಲ್ಲಿ ಸದರಿ ಕಾರ್ಯಕ್ರಮಕ್ಕೆ 3000.00 ಲಕ್ಷ ರೂಪಾಯಿಗಳನ್ನು ಒದಗಿಸಲಾಗಿದೆ.

3) ಮೇಲೆ (3)ರಲ್ಲಿ ಓದಲಾದ ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ರವರ ಪತ್ರದಲ್ಲಿ ರಾಜ್ಯದಲ್ಲಿ 2007-08ನೇ ಸಾಲಿಗೆ ಮಂಜೂರಾದ 21 ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ಈ ಕೆಳಕಂಡ 18 ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಕಟ್ಟಡವನ್ನು ಒದಗಿಸುವ ಸಂಬಂಧ ನಕ್ಷೆ ಮತ್ತು ಅಂದಾಜು ಪಟ್ಟಿಗಳು ಬಂದಿದ್ದು, 2008-09ನೇ ಸಾಲಿನಲ್ಲಿ ಒದಗಿಸಿರುವ ಅನುದಾನದಿಂದ ಅದಕ್ಕೆ ಅನುದಾನ ಬಿಡುಗಡೆ ಮಾಡಿ ಆಡಳಿತಾತ್ಮಕ ಅನುಮೋದನೆ ನೀಡುವಂತೆ ಸರ್ಕಾರವನ್ನು ಕೋರಿರುತ್ತಾರೆ. ಅದರ ವಿವರ ಈ ಕೆಳಕಂಡಂತಿದೆ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	2008-09ನೇ ಸಾಲಿಗೆ ಒದಗಿಸಿರುವ ಅನುದಾನ
1	ಸರ್ಕಾರಿ ಪಾಲಿಟೆಕ್ನಿಕ್, ಬೇಲೂರು	800.00	240.00
2	ಸರ್ಕಾರಿ ಪಾಲಿಟೆಕ್ನಿಕ್, ಹೊಳೇನರಸೀಪುರ	800.00	240.00
3	ಸರ್ಕಾರಿ ಪಾಲಿಟೆಕ್ನಿಕ್, ರಾಮನಗರ	800.00	240.00
4	ಸರ್ಕಾರಿ ಪಾಲಿಟೆಕ್ನಿಕ್, ಮಿರ್ಲೆ	800.00	240.00
5	ಬೀಳಗಿ ಸರ್ಕಾರಿ ಪಾಲಿಟೆಕ್ನಿಕ್	800.00	240.00
6	ಬಾಗಲಕೋಟೆ ಸರ್ಕಾರಿ ಪಾಲಿಟೆಕ್ನಿಕ್	800.00	240.00
7	ಹಾನಗಲ್ ಸರ್ಕಾರಿ ಪಾಲಿಟೆಕ್ನಿಕ್	800.00	240.00
8	ಮುಳಬಾಗಿಲು ಸರ್ಕಾರಿ ಪಾಲಿಟೆಕ್ನಿಕ್	800.00	240.00
9	ಸರ್ಕಾರಿ ಪಾಲಿಟೆಕ್ನಿಕ್, ಶ್ರೀರಂಗಪಟ್ಟಣ	800.00	240.00
10	ಸರ್ಕಾರಿ ಪಾಲಿಟೆಕ್ನಿಕ್, ನಾಗಮಂಗಲ	800.00	240.00
11	ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಶಿರಾಳ ಕೊಪ್ಪ	800.00	240.00
12	ಸರ್ಕಾರಿ ಪಾಲಿಟೆಕ್ನಿಕ್, ಗದಗ	800.00	240.00
13	ಸರ್ಕಾರಿ ಪಾಲಿಟೆಕ್ನಿಕ್, ತುರುವೇಕೆರೆ	800.00	240.00
14	ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಘಡ	800.00	240.00
15	ಸರ್ಕಾರಿ ಪಾಲಿಟೆಕ್ನಿಕ್, ಅಫ್‌ಜಲ್‌ಪುರ	800.00	240.00
16	ಸರ್ಕಾರಿ ಪಾಲಿಟೆಕ್ನಿಕ್, ಜೋಯಿಡಾ	800.00	240.00

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	2008-09ನೇ ಸಾಲಿಗೆ ಒದಗಿಸಿರುವ ಅನುದಾನ
17	ಸರ್ಕಾರಿ ಪಾಲಿಟೆಕ್ನಿಕ್, ಲಿಂಗಸುಗೂರು	800.00	240.00
18	ಸರ್ಕಾರಿ ಪಾಲಿಟೆಕ್ನಿಕ್, ಚಿತ್ರದುರ್ಗ	800.00	240.00
	ಒಟ್ಟು	**14400.00**	**4320.00**

4) ಮೇಲ್ಕಂಡ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಶಿಇ 174 ಯೋಯೋಕ 2007, ಬೆಂಗಳೂರು, ದಿನಾಂಕ: 22ನೇ ಅಕ್ಟೋಬರ್ 2008

(ಇಡಿ 169 ಸ್ವೀಮರ (ಯುನಿಕ್) 2008, ದಿನಾಂಕ 22.10.2008)

5) 2007-08ನೇ ಸಾಲಿನಲ್ಲಿ ಮಂಜೂರಾಗಿರುವ 21 ಸರ್ಕಾರಿ ಪಾಲಿಟೆಕ್ನಿಕ್‌ಗಳ ಪೈಕಿ ಈ ಕೆಳಕಂಡ 18 ಸರ್ಕಾರಿ ಪಾಲಿಟೆಕ್ನಿಕ್‌ಗಳಿಗೆ ಕಟ್ಟಡವನ್ನು ಒದಗಿಸಲು ಅವುಗಳ ಮುಂದೆ ತೋರಿಸಿರುವ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ನೀಡಲು ನಿರ್ದೇಶಕರು, ತಾಂತ್ರಿಕ ಶಿಕ್ಷಣ ಇಲಾಖೆ, ಬೆಂಗಳೂರು ಇವರಿಗೆ ಈ ಕೆಳಕಂಡ ಷರತ್ತನ್ನು ವಿಧಿಸಿ ಅನುಮೋದನೆ ನೀಡಲಾಗಿದೆ.

(ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಕಾಮಗಾರಿಯ ಹೆಸರು	ಅಂದಾಜು ಮೊತ್ತ	2008-09ನೇ ಸಾಲಿಗೆ ಒದಗಿಸಿರುವ ಅನುದಾನ
1	ಸರ್ಕಾರಿ ಪಾಲಿಟೆಕ್ನಿಕ್, ಬೇಲೂರು	800.00	240.00
2	ಸರ್ಕಾರಿ ಪಾಲಿಟೆಕ್ನಿಕ್, ಹೊಳೇನರಸೀಪುರ	800.00	240.00
3	ಸರ್ಕಾರಿ ಪಾಲಿಟೆಕ್ನಿಕ್, ರಾಮನಗರ	800.00	240.00
4	ಸರ್ಕಾರಿ ಪಾಲಿಟೆಕ್ನಿಕ್, ಮಿರ್ಲೆ	800.00	240.00
5	ಬೀಳಗಿ ಸರ್ಕಾರಿ ಪಾಲಿಟೆಕ್ನಿಕ್	800.00	240.00
6	ಬಾಗಲಕೋಟೆ ಸರ್ಕಾರಿ ಪಾಲಿಟೆಕ್ನಿಕ್	800.00	240.00
7	ಹಾನಗಲ್ ಸರ್ಕಾರಿ ಪಾಲಿಟೆಕ್ನಿಕ್	800.00	240.00
8	ಮುಳಬಾಗಿಲು ಸರ್ಕಾರಿ ಪಾಲಿಟೆಕ್ನಿಕ್	800.00	240.00
9	ಸರ್ಕಾರಿ ಪಾಲಿಟೆಕ್ನಿಕ್, ಶ್ರೀರಂಗಪಟ್ಟಣ	800.00	240.00
10	ಸರ್ಕಾರಿ ಪಾಲಿಟೆಕ್ನಿಕ್, ನಾಗಮಂಗಲ	800.00	240.00
11	ಸರ್ಕಾರಿ ಮಹಿಳಾ ಪಾಲಿಟೆಕ್ನಿಕ್, ಶಿರಾಳ ಕೊಪ್ಪ	800.00	240.00
12	ಸರ್ಕಾರಿ ಪಾಲಿಟೆಕ್ನಿಕ್, ಗದಗ	800.00	240.00
13	ಸರ್ಕಾರಿ ಪಾಲಿಟೆಕ್ನಿಕ್, ತುರುವೇಕೆರೆ	800.00	240.00
14	ಸರ್ಕಾರಿ ಪಾಲಿಟೆಕ್ನಿಕ್, ಗಜೇಂದ್ರಘಡ	800.00	240.00
15	ಸರ್ಕಾರಿ ಪಾಲಿಟೆಕ್ನಿಕ್, ಅಫ್‌ಜಲ್‌ಪುರ	800.00	240.00
16	ಸರ್ಕಾರಿ ಪಾಲಿಟೆಕ್ನಿಕ್, ಜೋಯಿಡಾ	800.00	240.00
17	ಸರ್ಕಾರಿ ಪಾಲಿಟೆಕ್ನಿಕ್, ಲಿಂಗಸುಗೂರು	800.00	240.00
18	ಸರ್ಕಾರಿ ಪಾಲಿಟೆಕ್ನಿಕ್, ಚಿತ್ರದುರ್ಗ	800.00	240.00
	ಒಟ್ಟು	**14400.00**	**4320.00**

ಷರತ್ತುಗಳು:

* ಸದರಿ ಕಾಮಗಾರಿಗಳನ್ನು ಅವುಗಳ ಮುಂದೆ ತೋರಿಸಿರುವ ಅನುದಾನದಲ್ಲಿ ಕೂಡಲೇ ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಿದೆ.

* ಸದರಿ ಕಟ್ಟಡಗಳ ನಿರ್ಮಾಣ ಕಾರ್ಯವನ್ನು ಲೋಕೋಪಯೋಗಿ ಇಲಾಖೆ ಮೂಲಕ ಕೈಗೆತ್ತಿಕೊಳ್ಳುವಂತೆ ಸೂಚಿಸಲಾಗಿದೆ.
* ಕಟ್ಟಡ ನಿರ್ಮಾಣದ ಗುಣಮಟ್ಟದ ಬಗ್ಗೆ ನಿಗಾ ವಹಿಸಲು ಸಂಬಂಧಿಸಿದ ಕಾಲೇಜುಗಳ ಪ್ರಾಂಶುಪಾಲರಿಗೆ ಸೂಕ್ತ ನಿರ್ದೇಶನ ನೀಡತಕ್ಕದ್ದು.
* ಕೇಂದ್ರ ಕಛೇರಿಯಿಂದ ತಿಂಗಳಿಗೊಮ್ಮೆ ಕಟ್ಟಡ ನಿರ್ಮಾಣದ ಕಾಮಗಾರಿ ಅಭಿವೃದ್ಧಿಯನ್ನು ಪರಿಶೀಲಿಸಿ ಸರ್ಕಾರಕ್ಕೆ ವರದಿಯನ್ನು ಸಲ್ಲಿಸತಕ್ಕದ್ದು.
* ಕಟ್ಟಡ ನಿರ್ಮಾಣ ಕಾರ್ಯವನ್ನು ವಹಿಸುವಾಗ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸತಕ್ಕದ್ದು.
* ಕಟ್ಟಡವನ್ನು ಪೂರ್ಣಗೊಳಿಸಿ ಕಾಲೇಜಿಗೆ ಹಸ್ತಾಂತರಿಸಿದ ನಂತರ ಸಂಬಂಧಿಸಿದ ಕಾಲೇಜಿನ ಪ್ರಾಂಶುಪಾಲರು ಪ್ರಮಾಣ ಪತ್ರವನ್ನು ಕೇಂದ್ರ ಕಛೇರಿಗೆ ಸಲ್ಲಿಸಲು ಅವರಿಗೆ ಸೂಚನೆ ನೀಡುವುದು.
* ಪ್ರತಿ ಮಾಹೆಯ ಕಾಮಗಾರಿಯ ಪ್ರಗತಿ ವರದಿಯನ್ನು ಆಯಾ ಮಾಹೆಯ ಎಂ.ಎಂ.ಆರ್. ವರದಿಯಲ್ಲಿ ನಮೂದಿಸತಕ್ಕದ್ದು. ಕಾಮಗಾರಿಯ ಪ್ರಗತಿಯನ್ನು ಆಧರಿಸಿ ಹಂತ ಹಂತವಾಗಿ ಅನುದಾನ ಬಿಡುಗಡೆ ಮಾಡಲು ಸೂಚಿಸಿದೆ.

6) 2008-09ನೇ ಸಾಲಿಗೆ ಲೆಕ್ಕಶೀರ್ಷಿಕೆ: 4202-02-104-1-01-139 (ಯೋಜನೆ) ಅಡಿಯಲ್ಲಿ ಒದಗಿಸಲಾಗಿರುವ 3000.00 ಲಕ್ಷ ರೂಪಾಯಿಗಳ (ಮೂರು ಸಾವಿರ ಲಕ್ಷ ರೂಪಾಯಿಗಳು ಮಾತ್ರ) ಅನುದಾನದಲ್ಲಿ ಮುಂದುವರೆದ ಕಾಮಗಾರಿಗಳಿಗೆ ಈಗಾಗಲೇ ಬಿಡುಗಡೆ ಮಾಡಿರುವ ಅನುದಾನ 1080.00 ಲಕ್ಷ ರೂಪಾಯಿಗಳನ್ನು (ಒಂದು ಸಾವಿರದ ಎಂಬತ್ತು ಲಕ್ಷ ರೂಪಾಯಿಗಳು ಮಾತ್ರ) ಹೊರತುಪಡಿಸಿ ಉಳಿಕೆ 1920.00 (ಒಂದು ಸಾವಿರದ ಒಂಭೈನೂರಾ ಇಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ) ಲಕ್ಷ ರೂಪಾಯಿಗಳಲ್ಲಿ ಕೂಡಲೇ ಕಾಮಗಾರಿಯನ್ನು ಪ್ರಾರಂಭಿಸಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ. ಮುಂದೆ ಹೆಚ್ಚುವರಿ ಆಯವ್ಯಯವನ್ನು ಬಿಡುಗಡೆ ಮಾಡಲು ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು.

7) ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆ.ಇ. 982/ವೆಚ್ಚ-8/08, ದಿನಾಂಕ 6.10.08ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1496

ಐ.ಎಫ್. ಮಾಗಿ
ವಿಶೇಷಾದಿಕಾರಿ, ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಶಿಕ್ಷಣ ಇಲಾಖೆ (ಯೋಜನೆ)

ಜಲ ಸಂಪನ್ಮೂಲ ಸಚಿವಾಲಯ

ವಿಷಯ : 2008-09ನೇ ಸಾಲಿನ ಸವಿವರ ಅಂದಾಜಿನಲ್ಲಿ ಲೆಕ್ಕ ಶೀರ್ಷಿಕೆ 4702 ಅಡಿ ಅನುಮೋದನೆಯಾಗಿರುವ ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರು ವ್ಯಾಪ್ತಿಯಲ್ಲಿ ಬರುವ ಕಾಮಗಾರಿಗಳ ಅಂದಾಜುಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ :
1. ದಿನಾಂಕ 31.12.2008ರ ಬೆಂಗಳೂರು, ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್‌ರವರ ಪತ್ರ ಸಂಖ್ಯೆ: ಮುಸದ/ತಾಂ.1/ಸ.ಇಂ.-1/4702 ಸ.ಆ.ಅ./2008-09/4579.
2. ದಿನಾಂಕ 31.12.2008ರ ಬೆಂಗಳೂರು, ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್‌ರವರ ಪತ್ರ ಸಂಖ್ಯೆ: ಮುಸದ/ತಾತ2/ಸ.ಇಂ.-5/4702ಸ.ಆ.ಅ./2008-09/4589.

ಪ್ರಸ್ತಾವನೆ :

2008-09ನೇ ಸಾಲಿನ ಆಯವ್ಯಯದ "ಅಪೆಂಡಿಕ್ಸ್-ಇ"ನ ಲೆಕ್ಕ ಶೀರ್ಷಿಕೆ 4702-00-101-1-07-139-ಕೆರೆಗಳ ಆಧುನೀಕರಣ (ಪ್ರಧಾನ ಕಾಮಗಾರಿಗಳು) ಅಡಿ ಅಂದಾಜಿನ ಶೇ. 30ರಷ್ಟು ಅನುದಾನದೊಂದಿಗೆ ಸೇರಿರುವ ಒಟ್ಟು 5 ಕಾಮಗಾರಿಗಳ (ಕಾಮಗಾರಿಗಳ ವಿವರಗಳನ್ನು ಅನುಬಂಧದಲ್ಲಿ ತಿಳಿಸಲಾಗಿದೆ) ಅಂದಾಜು ಪಟ್ಟಿಗಳಿಗೆ (ಒಟ್ಟು ಅಂದಾಜು ಮೊತ್ತ 475.00 ಲಕ್ಷ ರೂ.ಗಳು) ಆಡಳಿತಾತ್ಮಕ ಅನುಮೋದನೆ ನೀಡುವಂತೆ ಮೇಲೆ ಓದಲಾದ ಪತ್ರಗಳಲ್ಲಿ ಸಣ್ಣ ನೀರಾವರಿ ದಕ್ಷಿಣ ವಲಯದ ಮುಖ್ಯ ಇಂಜಿನಿಯರ್‌ರವರು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಆಡಳಿತಾತ್ಮಕ ಅನುಮೋದನೆಗೆ ಕೋರಿರುವ ಕಾಮಗಾರಿಗಳ ಅಂದಾಜು ಪಟ್ಟಿಗಳನ್ನು 2008-09ನೇ ಸಾಲಿಗೆ ಮುಂದುವರೆಸಿರುವ 2007-08ನೇ ಸಾಲಿನ ಸಣ್ಣ ನೀರಾವರಿ ಬೆಂಗಳೂರು/ಮೈಸೂರು ವೃತ್ತದ ದರಪಟ್ಟಿಯ ದರಗಳನ್ನು ಅಳವಡಿಸಿ ತಯಾರಿಸಲಾಗಿದೆ. ಈ ಎಲ್ಲಾ 5 ಕಾಮಗಾರಿಗಳು ಆರ್ಥಿಕವಾಗಿ ಹಾಗೂ ತಾಂತ್ರಿಕವಾಗಿ ಶಕ್ಯವಾಗಿದೆ.

ಪ್ರಸ್ತಾಪಿಸಿರುವ ಕಾಮಗಾರಿಗಳ ಅಂದಾಜು ಮೊತ್ತ, ಆಯವ್ಯಯದ ಲೆಕ್ಕ ಶೀರ್ಷಿಕೆ, ಅನುದಾನ, ಕಾಮಗಾರಿಯ ಸ್ವರೂಪ ಹಾಗೂ ಅಂದಾಜಿನಲ್ಲಿ ಅಳವಡಿಸಿರುವ ಕೆಲಸಗಳ ವಿವರ, ಸೃಷ್ಟಿಯಾಗಲಿರುವ ಹೊಸ ಅಚ್ಚುಕಟ್ಟು/ ಸ್ಥಿರೀಕರಿಸಲಾಗುತ್ತಿರುವ/ಪುನರ್ ಸ್ಥಾಪಿಸಲಾಗುತ್ತಿರುವ ಅಚ್ಚುಕಟ್ಟು ಹಾಗೂ ಲಾಭ ವೆಚ್ಚದ ಅನುಪಾತ ವಿವರಗಳನ್ನು ಅನುಬಂಧದಲ್ಲಿ ಕಾಮಗಾರಿವಾರು ನೀಡಲಾಗಿದೆ.

ಪ್ರಸ್ತಾವನೆಯನ್ನು ಕೂಲಂಕುಷವಾಗಿ ಪರಿಶೀಲಿಸಿ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 14 ಮಸಾವಿ 2009(3), ಬೆಂಗಳೂರು, ದಿನಾಂಕ: 4ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಸಣ್ಣ ನೀರಾವರಿ ದಕ್ಷಿಣ ವಲಯ, ಬೆಂಗಳೂರು ವ್ಯಾಪ್ತಿಗೆ ಬರುವ ಈ ಆದೇಶದ ಅನುಬಂಧದಲ್ಲಿ ತಿಳಿಸಿರುವ ಒಟ್ಟು 475.00 ಲಕ್ಷ ರೂ.ಗಳ (ನಾಲ್ಕು ನೂರ ಎಪ್ಪತ್ತೈದು ಲಕ್ಷ ರೂ.ಗಳು ಮಾತ್ರ) ಅಂದಾಜು ಮೊತ್ತದ 5 ಕಾಮಗಾರಿಗಳ ಅಂದಾಜು ಪಟ್ಟಿಗಳಿಗೆ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರವು ಆಡಳಿತಾತ್ಮಕ ಅನುಮೋದನೆ ನೀಡಿದೆ.

1) ಕಾಮಗಾರಿಯ ವೆಚ್ಚವು ಯಾವುದೇ ಕಾರಣಕ್ಕೂ ಅನುಮೋದಿಸಿದ ಟೆಂಡರ್ ಮೊತ್ತಕ್ಕಿಂತ ಹೆಚ್ಚಾಗಬಾರದು ಹಾಗೂ ಕಾಮಗಾರಿಯನ್ನು ಕಾಲಮಿತಿಯೊಳಗೆ ಪೂರ್ಣಗೊಳಿಸತಕ್ಕದ್ದು.
2) ಒಂದು ವೇಳೆ ಸ್ಥಳ ಪರಿಸ್ಥಿತಿಗೆ ಅನುಗುಣವಾಗಿ ಹೆಚ್ಚಳ ನಿರೀಕ್ಷಿಸಿದಲ್ಲಿ ತಕ್ಷಣವೇ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ಕಾಮಗಾರಿಯನ್ನು ಪೂರ್ಣಗೊಳಿಸತಕ್ಕದ್ದು.
3) ಕಾಮಗಾರಿ ಪ್ರಾರಂಭಿಸುವ ಮುನ್ನ ವಿನ್ಯಾಸ ಬದಲಾವಣೆಯಿಂದಾಗಿ ಅಥವಾ ಬೇರೆ ಕಾರಣದಿಂದ ಅನುಮೋದಿಸಿದ ಅಂದಾಜು ಮೊತ್ತ ಹೆಚ್ಚಾಗುವ ಸಂಭವ ಇದ್ದಲ್ಲಿ, ತಕ್ಷಣ ಪರಿಷ್ಕೃತ ಅಂದಾಜಿಗೆ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ಪಡೆದು ನಂತರ ಕಾಮಗಾರಿಯನ್ನು ಪ್ರಾರಂಭಿಸುವುದು.
4) ಕಾಮಗಾರಿಯ ಅಂದಾಜು ಪಟ್ಟಿಗಳನ್ನು ತಾಂತ್ರಿಕ ಮೌಲ್ಯ ನಿರ್ಣಯ ಸಮಿತಿ/ತಾಂತ್ರಿಕ ಸಮಿತಿಯು ಸಭೆಯಲ್ಲಿ ಮಂಡಿಸಿ ತೀರುವಳಿಯನ್ನು ಪಡೆಯುವುದು.
5) ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999ರ ಅನುಸಾರ ಟೆಂಡರ್ ಕರೆದು ತೆಗೆದುಕೊಳ್ಳತಕ್ಕದ್ದು.
6) ಕಾಮಗಾರಿ ಪೂರ್ಣಗೊಂಡ ಕೂಡಲೇ ಪಿ.ಸಿ.ಆರ್. ವರದಿಯನ್ನು ಸಲ್ಲಿಸತಕ್ಕದ್ದು ಹಾಗೂ ಅವಶ್ಯಕತೆ ಇದ್ದಲ್ಲಿ ಪರಿಷ್ಕೃತ ಅಂದಾಜು ತಯಾರಿಸಿ ಟಿ.ಎ.ಸಿ. ಅನುಮೋದನೆ ಪಡೆದು ಸಂಬಂಧಿಸಿದ ಸಕ್ಷಮ ಅಧಿಕಾರಿಗಳಿಗೆ ಅನುಮೋದನೆಗಾಗಿ ಸಲ್ಲಿಸುವುದು.
7) ಕಾಮಗಾರಿಗೆ ಅಗತ್ಯವಿರುವ ಜಮೀನಿನ ಸ್ವಾಧೀನಕ್ಕಾಗಿ ನಿಯಮಾನುಸಾರ ತಕ್ಷಣ ಭೂಸ್ವಾಧೀನ ಪ್ರಕ್ರಿಯೆ ಪ್ರಾರಂಭಿಸಲು ಕ್ರಮ ಕೈಗೊಳ್ಳತಕ್ಕದ್ದು.
8) ಇ.ಐ.ಆರ್.ಎಲ್/ವರ್ಕ್‌ಸ್ಲಿಪ್‌ಗಳನ್ನು ಸಲ್ಲಿಸಬೇಕಾದಲ್ಲಿ ತಕ್ಷಣವೇ ಸಲ್ಲಿಸತಕ್ಕದ್ದು.
9) ತಾಂತ್ರಿಕ ಮಂಜೂರಾತಿಯನ್ನು ನೀಡುವ ಮೊದಲು ಅಂದಾಜನ್ನು ಮತ್ತೊಮ್ಮೆ ವಿವರವಾಗಿ ಪರಿಶೀಲಿಸುವುದು.
10) ನೇರ ಅಚ್ಚುಕಟ್ಟು ಹೊಂದಿರುವ ಯೋಜನೆಗಳಿಗೆ ನೀರು ಬಳಕೆದಾರರ ಸಂಘವನ್ನು ಸೃಜಿಸಬೇಕು ಹಾಗೂ ನಿರ್ವಹಣೆಯನ್ನು ಸದರಿ ಸಂಘಕ್ಕೆ ವಹಿಸತಕ್ಕದ್ದು.

ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2008, ದಿನಾಂಕ 16.5.2008ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಲಾದ ಆರ್ಥಿಕ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ ಸನೀಇ 14 ಮಸಾವಿ 2009, (3) ದಿನಾಂಕ 4.2.2009

(ಮೊತ್ತ ಲಕ್ಷ ರೂ.ಗಳಲ್ಲಿ) ಹಾಗೂ (ವಿಸ್ತೀರ್ಣ ಹೆಕ್ಟೇರ್‌ಗಳಲ್ಲಿ)

ಕ್ರಮ ಸಂಖ್ಯೆ	ಕಾಮಗಾರಿ ಹೆಸರು	ಪ್ರಸ್ತಾವನೆಯ ಅಂದಾಜು ಮೊತ್ತ	ಅನುಬಂಧ-ಇ ವಿವರಗಳು		ನದಿ ಕೊಳ್ಳ	ಕಾಮಗಾರಿ ಸ್ವರೂಪ	ಹೊಸ ಅಚ್ಚುಕಟ್ಟು	ಕಾಮಗಾರಿಯ ಸಂಕ್ಷಿಪ್ತ ವಿವರಗಳು
			ಅಂದಾಜು ಮೊತ್ತ	ಅನುದಾನ				
	ಲೆಕ್ಕ ಶೀರ್ಷಿಕೆ 4702-00-101-1-07-139							
1	ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಅಯ್ಯನ ಕೆರೆ ಬಸವನ ಕಾಲುವೆ ಅಭಿವೃದ್ಧಿ ಕಾಮಗಾರಿ (ಸಕರಾಯಪಟ್ಟಣ ಗ್ರಾಮ ಪರಿವಿಧಿ)	40.00	40.00	12.00	ಕೃಷ್ಣಾ	ಸುಧಾರಣೆ ಕಾಮಗಾರಿ	0.00	ಗೈಡ ವಾಲ್ ನಿರ್ಮಾಣ ಮತ್ತು ಅಡ್ಡಮೋರಿ ನಿರ್ಮಾಣ
2	ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ಹಿರೇಕೊಳಲೆ ಕೆರೆ ಅಭಿವೃದ್ಧಿ ಕಾಮಗಾರಿ	285.00	285.00	85.50	ಕಾವೇರಿ	ಪುನರುಜ್ಜೀವನ ಕಾಮಗಾರಿ	0.00	ಕೆರೆಯ ಅಂಗಳದಲ್ಲಿ ಹೂಳೆತ್ತುವುದು ಇತ್ಯಾದಿ
3	ಚಿಕ್ಕಮಗಳೂರು ಜಿಲ್ಲೆ ಚಿಕ್ಕಮಗಳೂರು ತಾಲ್ಲೂಕು ತಂಗಲಿ ಊರ ಮುಂದಿನ ಕೆರೆ ಅಭಿವೃದ್ಧಿ ಕಾಮಗಾರಿ	75.00	75.00	22.50	ಕೃಷ್ಣಾ	ಪುನರುಜ್ಜೀವನ ಕಾಮಗಾರಿ	0.00	ಏರಿ ಅಭಿವೃದ್ಧಿ, ಕೆರೆ ಅಂಗಳದಲ್ಲಿ ಹೂಳು ತೆಗೆಯುವುದು ಹಾಗೂ ಫೀಡರ್ ನಾಲೆ ಅಭಿವೃದ್ಧಿ
4	ಚಿಕ್ಕಮಗಳೂರು ಜಿಲ್ಲೆ ಕಡೂರು ತಾಲ್ಲೂಕು ಅಯ್ಯನ ಕೆರೆ ಊರು ಕಾಲುವೆ ಸೇವಾ ರಸ್ತೆ ಹಾಗೂ ಕಾಲುವೆ ಅಭಿವೃದ್ಧಿ ಕಾಮಗಾರಿ	35.00	35.00	10.50	ಕೃಷ್ಣಾ	ಸುಧಾರಣೆ ಕಾಮಗಾರಿ	0.00	ಸೇವಾ ರಸ್ತೆ ಅಭಿವೃದ್ಧಿ
5	ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಕೂಳಗೆರೆ ಕೆರೆ ಅಭಿವೃದ್ಧಿ ಕಾಮಗಾರಿ	40.00	40.00	12.00	ಕಾವೇರಿ	ಪುನರುಜ್ಜೀವನ ಕಾಮಗಾರಿ		ಜಂಗಲ್ ಕ್ಲಿಯರೆನ್ಸ್, ಗೈಡ್ ವಾಲ್ ನಿರ್ಮಾಣ, ಕೆರೆ ಅಂಗಳದಲ್ಲಿ ಹೂಳು ತೆಗೆಯುವುದು ಇತ್ಯಾದಿ.
	ಒಟ್ಟು	**475.00**	**475.00**	**142.50**				

ಕೆ. ಸುಧಾಕರ ಶೆಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ, ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಪಿ.ಆರ್. 502

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರ ವಿರುದ್ಧದ ಇಲಾಖಾ ವಿಚಾರಣೆ ಕುರಿತು ಅಂತಿಮ ಆದೇಶ.

ಓದಲಾಗಿದೆ :

1. ಜಿಲ್ಲಾಧಿಕಾರಿಗಳು, ಬೀದರ್, ಕಚೇರಿಯ ಆದೇಶ ಸಂಖ್ಯೆ: ಕಂ/ಸಿಬ್ಬಂದಿ/ಸಿಆರ್/ಜಿಎ/2008-09/4770, ದಿ: 16.8.2008.
2. ಕೆ.ಎ.ಟಿ. ಅರ್ಜಿ ಸಂಖ್ಯೆ: 4069/2008ರಲ್ಲಿ ಮಾನ್ಯ ನ್ಯಾಯಮಂಡಳಿಯು ದಿ: 13.10.2008ರಂದು ನೀಡಿರುವ ತೀರ್ಪು.
3. ಸರ್ಕಾರದ ಆದೇಶ ಸಂಖ್ಯೆ: ಮಮಇ 460 ಎಸ್‌ಜೆಡಿ 2008, ದಿ: 23.12.2008.
4. ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ್ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಗುಲ್ಬರ್ಗಾ ರವರ ಮನವಿ ದಿ: 13.1.2009.

ಪ್ರಸ್ತಾವನೆ :

ಬೀದರ್ ನಗರದಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆ ಬಗ್ಗೆ ಸಾರ್ವಜನಿಕರಿಂದ ಹಾಗೂ ಚುನಾಯಿತ ಪ್ರತಿನಿಧಿಗಳಿಂದ ಅನೇಕ ಬಾರಿ ದೂರುಗಳು ಬಂದ ಹಿನ್ನೆಲೆಯಲ್ಲಿ ಅಂಗನವಾಡಿ ಕೇಂದ್ರಗಳ ತಪಾಸಣೆಯನ್ನು ಹಿರಿಯ ಅಧಿಕಾರಿಗಳಿಂದ ನಡೆಸಿ ಕೇಂದ್ರಗಳ ತಪಾಸಣೆ ಬಳಿಕ ನ್ಯೂನತೆಗಳು ಇರುವುದು ವರದಿಯಾಗಿರುವ ಕುರಿತು ದಿ: 16.8.2008ರ ಜನಸ್ಪಂದನ ಸಮಿತಿ ಸಭೆಯಲ್ಲಿ ವಿವರವಾಗಿ ಚರ್ಚಿಸಿ ತಪಾಸಣೆ ತಂಡದವರ ಅಭಿಪ್ರಾಯದ ಪ್ರಕಾರ ಅಂಗನವಾಡಿ ಕೇಂದ್ರಗಳ ಕಾರ್ಯನಿರ್ವಹಣೆ ತೃಪ್ತಿಕರವಾಗಿಲ್ಲದಿರುವುದನ್ನು ಮನಗಂಡು, ಅನೇಕ ಅಂಗನವಾಡಿ ಕೇಂದ್ರಗಳಿಗೆ ವರ್ಷ ಕಳೆದರು ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಉಪ ನಿರ್ದೇಶಕರು ಹಾಗೂ ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರು ನಿಯಮಿತವಾಗಿ ಭೇಟಿ ನೀಡಿ ಮೇಲ್ವಿಚಾರಣೆ ಮಾಡದೆ ಇರುವುದರಿಂದ ಈ ಕಾರ್ಯಕ್ರಮವು ಒಂದು ಖೋಟಾ ಕಾರ್ಯಕ್ರಮವಾಗಿ ಪರಿಗಣಿಸಿದ್ದು, ಮಕ್ಕಳು ಹಾಗೂ ಸ್ತ್ರೀಯರಿಗಾಗಿ ರೂಪಿಸಿದ ಕಾರ್ಯಕ್ರಮವನ್ನು ಬುಡಮೇಲೂ ಮಾಡಿದಂತಾಗಿರುವುದು ಮೇಲ್ನೋಟಕ್ಕೆ ಕಂಡು ಬಂದ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ, ಬೀದರ್ ರವರು ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿ: 16.8.2008ರ ಆದೇಶದಲ್ಲಿ ಶ್ರೀ ರಾಮಕೃಷ್ಣ ಟಿ. ಪಡಗಣ್ಣವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರನ್ನು ಅಮಾನತ್ತುಗೊಳಿಸಿ ಆದೇಶ ಹೊರಡಿಸಿರುತ್ತಾರೆ.

ಜಿಲ್ಲಾಧಿಕಾರಿಗಳು ಬೀದರ್ ರವರು ಅಮಾನತ್ತುಗೊಳಿಸಿ ಹೊರಡಿಸಿರುವ ದಿ: 16.8.2008ರ ಆದೇಶವನ್ನು ಪ್ರಶ್ನಿಸಿ ಶ್ರೀ ರಾಮಕೃಷ್ಣ ಟಿ. ಪಡಗಣ್ಣವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ರವರು ಕರ್ನಾಟಕ ಆಡಳಿತ ನ್ಯಾಯಮಂಡಳಿಯಲ್ಲಿ ಅರ್ಜಿ ಸಂಖ್ಯೆ: 4069/2008ರಲ್ಲಿ ಮೊಕದ್ದಮೆ ಹೂಡಿ, ಜಿಲ್ಲಾಧಿಕಾರಿ, ಬೀದರ್ ರವರು ಅಮಾನತ್ತುಗೊಳಿಸಿ ಹೊರಡಿಸಿರುವ ದಿ: 16.8.2008ರ ಆದೇಶವನ್ನು ರದ್ದುಗೊಳಿಸುವಂತೆ ಕೋರಲಾಗಿತ್ತು. ಸದರಿ ಪ್ರಕರಣವನ್ನು ಮಾನ್ಯ ನ್ಯಾಯಮಂಡಳಿಯು ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿ: 13.10.2008ರಂದು ವಿಚಾರಣೆ ನಡೆಸಿ ಶಿಸ್ತು ಪ್ರಾಧಿಕರವಲ್ಲದ ಹಾಗೂ ಜಿಲ್ಲಾಧಿಕಾರಿಗಳಿಗೆ ಗ್ರೂಪ್ 'ಎ' ಅಧಿಕಾರಿಯನ್ನು ಅಮಾನತ್ತುಗೊಳಿಸಲು ಅಧಿಕಾರವಿಲ್ಲದಿದ್ದರೂ ಸಹ ಜಿಲ್ಲಾಧಿಕಾರಿಗಳು, ಬೀದರ್‌ರವರು ದಿ: 16.8.2008ರಂದು ಅಮಾನತ್ತುಗೊಳಿಸಿ ಹೊರಡಿಸಿರುವ ಆದೇಶವನ್ನು ಗಂಭೀರವಾಗಿ ಪರಿಗಣಿಸಿ ಜಿಲ್ಲಾಧಿಕಾರಿಗಳಿಗೆ ರೂ. 5,000/-ಗಳನ್ನು ದಂಡವನ್ನಾಗಿ ಪಾವತಿಸುವಂತೆ ಹಾಗೂ ಜಿಲ್ಲಾಧಿಕಾರಿಗಳು ಹೊರಡಿಸಿರುವ ಅಮಾನತ್ತಿನ ಆದೇಶವನ್ನು ರದ್ದುಪಡಿಸಿ ತೀರ್ಪು ನೀಡಿರುತ್ತದೆ. ಮಾನ್ಯ ನ್ಯಾಯಮಂಡಳಿಯು ದಿ: 13.10.2008ರಂದು ನೀಡಿರುವ ತೀರ್ಪನ್ನು ಕಾನೂನು ಕೋಶದ ಮುಖ್ಯಸ್ಥರು ಪರಿಶೀಲಿಸಿ ಸದರಿ ತೀರ್ಪು ಮೇಲ್ಮನವಿಗೆ ಅರ್ಹ ಪ್ರಕರಣವಲ್ಲವೆಂದು ತಿಳಿಸಿರುತ್ತಾರೆ. ಸರ್ಕಾರವು ಕರ್ನಾಟಕ ಆಡಳಿತ ನ್ಯಾಯಮಂಡಳಿಯ ದಿ: 13.10.2008ರ ತೀರ್ಪು ಹಾಗೂ ಕಾನೂನು ಕೋಶದ ಮುಖ್ಯಸ್ಥರು ನೀಡಿರುವ ಅಭಿಪ್ರಾಯ ಹಾಗೂ ಪ್ರಕರಣದ ವಾಸ್ತವಾಂಶಗಳನ್ನು ಕೂಲಂಕಷವಾಗಿ ಪರಿಶೀಲಿಸಿ ಮೇಲೆ ಕ್ರಮ ಸಂಖ್ಯೆ (3)ರಲ್ಲಿ ಓದಲಾದ ದಿ: 23.12.2008ರ ಆದೇಶದಲ್ಲಿ ಜಿಲ್ಲಾಧಿಕಾರಿಗಳು ಬೀದರ್ ರವರು ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಸಹಾಯಕ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೀದರ್ ಇವರನ್ನು ಕಚೇರಿ ಆದೇಶ ಸಂಖ್ಯೆ: ಸಿಬ್ಬಂದಿ/ಸಿಆರ್/ಜಿಎ/ 2008-09/4770, ದಿ: 16.8.2008ರಂದು ಅಮಾನತ್ತುಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಪಡಿಸಿ ಇವರ ವಿರುದ್ಧ ಇರುವ ಆರೋಪಗಳನ್ನು ಓಂಪಡೆದು ಅವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಗೆ ಪುನರ್ ಸ್ಥಾಪಿಸಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಗುಲ್ಬರ್ಗಾ ಇಲ್ಲಿನ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ ಖಾಲಿ ಹುದ್ದೆಗೆ ಸ್ಥಳ ನಿಯುಕ್ತಿಗೊಳಿಸಿ ಅವರು

ಇನ್ನು ಮುಂದೆ ಅವರ ಕಾರ್ಯನಿರ್ವಹಣೆಯಲ್ಲಿ ಎಚ್ಚರಿಕೆ ವಹಿಸುವಂತೆ ಅವರಿಗೆ ಒಂದು ಆಡಳಿತಾತ್ಮಕ ಎಚ್ಚರಿಕೆಯನ್ನು ನೀಡಿದೆ.

ಮೇಲೆ ಕ್ರಮ ಸಂಖ್ಯೆ (4)ರಲ್ಲಿ ಓದಲಾದ ದಿ: 13.1.2009ರ ಮನವಿಯಲ್ಲಿ ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಗುಲ್ಬರ್ಗಾ ರವರು ಬೀದರ್ ಜಿಲ್ಲಾಧಿಕಾರಿಗಳು ಹೊರಡಿಸಿರುವ ಆದೇಶವನ್ನು ಕರ್ನಾಟಕ ಆಡಳಿತ ನ್ಯಾಯಮಂಡಳಿಯು ದಿ: 13.10.2008ರ ಆದೇಶದಲ್ಲಿ ಅನೂರ್ಜಿತಗೊಳಿಸಿರುವ ಹಿನ್ನೆಲೆಯಲ್ಲಿ ಸರ್ಕಾರವು ದಿ: 23.12.2008ರಂದು ಆದೇಶ ಹೊರಡಿಸಿ ತಮ್ಮ ವಿರುದ್ಧ ಇವರು ಆರೋಪಗಳನ್ನು ಹಿಂಪಡೆದು ಇನ್ನು ಮುಂದೆ ಕಾರ್ಯನಿರ್ವಹಣೆಯಲ್ಲಿ ಎಚ್ಚರ ವಹಿಸುವಂತೆ ಆಡಳಿತಾತ್ಮಕ ಎಚ್ಚರಿಕೆಯನ್ನು ನೀಡಿರುವ ಹಿನ್ನೆಲೆಯಲ್ಲಿ ದಿ: 22.8.2008 ರಿಂದ 26.12.2008ರ ವರೆಗೆ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕರ್ತವ್ಯದಲ್ಲಿ ಕಳೆದ ಅವಧಿಯೆಂದು ಆದೇಶಿಸುವಂತೆ ಕೋರಿರುತ್ತಾರೆ.

ಸರ್ಕಾರವು ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಗುಲ್ಬರ್ಗಾ ಇವರ ಮನವಿಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಮಮಇ 460 ಎಸ್‌ಜಿಡಿ 2008, ಬೆಂಗಳೂರು, ದಿನಾಂಕ: 17ನೇ ಏಪ್ರಿಲ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಶ್ರೀ ರಾಮಕೃಷ್ಣ ಟಿ. ಪಡಗಣ್ಣನವರ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಅಧಿಕಾರಿ, ಗುಲ್ಬರ್ಗಾ ಇವರು ದಿನಾಂಕ 22.8.2008 ರಿಂದ 26.12.2008ರ ವರೆಗೆ ಅಮಾನತ್ತಿನಲ್ಲಿ ಕಳೆದ ಅವಧಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 100(1)ರ ಅನ್ವಯ ಕರ್ತವ್ಯದಲ್ಲಿ ಕಳೆದ ಅವಧಿಯೆಂದು ಪರಿಗಣಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1151

ಆರ್. ನರಸಿಂಹಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ-2 (ಪ್ರಭಾರ),

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ಪ್ರಾಧ್ಯಾಪಕರು (ನಿವೃತ್ತ), ಅನಾಟಮಿ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ, ಬೆಂಗಳೂರು ಇವರ ವಿರುದ್ಧ ಶಿಸ್ತುಕ್ರಮ ದಂಡನೆ ವಿಧಿಸುವ ಬಗ್ಗೆ.

ಓದಲಾಗಿದೆ :

1. ಪತ್ರ ಸಂಖ್ಯೆ: ಎಸ್‌ಆರ್‌ಓ (3)/22/2001-02, ದಿನಾಂಕ 27.6.2002 ಮತ್ತು 25.11.2002.
2. ಸರ್ಕಾರದ ಪತ್ರ ಸಂಖ್ಯೆ: ಆಕುಕ 202/ಎಂಎಂಸಿ 2002, ದಿನಾಂಕ 29.1.2003.
3. ಪತ್ರ ಸಂಖ್ಯೆ ಎಸ್‌ಆರ್‌ಓ (3)22/2001-02, ದಿನಾಂಕ 28.4.2003.
4. ಸರ್ಕಾರಿ ಆದೇಶ ಸಂಖ್ಯೆ: ಆಕುಕ 202 ಎಂಎಂಸಿ 2002, ದಿನಾಂಕ 2.1.2004.
5. ಸರ್ಕಾರದ ನೋಟೀಸ್ ಸಂಖ್ಯೆ: ಆಕುಕ 202 ಎಂಎಂಸಿ 2002, ದಿನಾಂಕ 2.1.2004.
6. ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ಪ್ರಾಧ್ಯಾಪಕರು (ನಿವೃತ್ತ) ಅಂಗರಚನಾಶಾಸ್ತ್ರ ವಿಭಾಗ, ಮೈಸೂರು ವೈದ್ಯಕೀಯ ಕಾಲೇಜು, ಇವರ ಹೇಳಿಕೆ ದಿನಾಂಕ 17.1.2004.
7. ಸರ್ಕಾರಿ ಆದೇಶ ಸಂಖ್ಯೆ: ಆಕುಕ 202 ಎಂಎಂಸಿ 2002, ದಿನಾಂಕ 21.2.2004.
8. ವಿಚಾರಣಾಧಿಕಾರಿಯವರು ಸಲ್ಲಿಸಿದ ವಿಚಾರಣಾ ವರದಿ ದಿನಾಂಕ 12.8.2004.
9. ಎರಡನೇ ಕಾರಣ ಕೇಳುವ ನೋಟೀಸ್ ಸಂಖ್ಯೆ: ಆಕುಕ 194 ಎಂಎಂಸಿ 2004, ದಿನಾಂಕ 20.10.2004.
10. ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು ಇವರ ಹೇಳಿಕೆ ದಿನಾಂಕ 2.12.2004.
11. ಪತ್ರ ಸಂಖ್ಯೆ: ಆಕುಕ 194 ಎಂಎಂಸಿ 2004, ದಿನಾಂಕ 3.2.2006.
12. ಸಂಖ್ಯೆ: ಪಿಎಸ್‌ಸಿ 195 ಸಿಎಸ್‌ಎಸ್ 05, ದಿನಾಂಕ 16.11.2007.
13. ಸರ್ಕಾರದ ಪತ್ರ ಸಂಖ್ಯೆ: ಆಕುಕ 194 ಎಂಎಂಸಿ 2004, ದಿನಾಂಕ 15.9.2008.
14. ಡಾ: ಕೆ.ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು ಇವರ ಹೇಳಿಕೆ ದಿನಾಂಕ 26.9.2008.

ಪ್ರಸ್ತಾವನೆ :

ನಿರ್ದೇಶಕರು, ವೈದ್ಯಕೀಯ ಶಿಕ್ಷಣ ಇವರು ಮೇಲೆ (1)ರಲ್ಲಿ ಓದಲಾದ ಪತ್ರದಲ್ಲಿ ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ಪ್ರಾಧ್ಯಾಪಕರು, ಅನಾಟಮಿ ವಿಭಾಗ ಇವರು ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯದಿಂದ ಮೈಸೂರು ವೈದ್ಯಕೀಯ ಮಹಾವಿದ್ಯಾಲಯಕ್ಕೆ ವರ್ಗಾವಣೆಗೊಂಡು ದಿನಾಂಕ 19.8.2000ರ ಅಪರಾಹ್ನ ಬೆಂಗಳೂರು ವೈದ್ಯಕೀಯ ಮಹಾವಿದ್ಯಾಲಯ, ಬೆಂಗಳೂರು ಇಲ್ಲಿನ ಕರ್ತವ್ಯದಿಂದ ಬಿಡುಗಡೆ ಹೊಂದಿ ದಿನಾಂಕ 12.3.2001ರ ಪೂರ್ವಾಹ್ನ ಸರ್ಕಾರಿ ವೈದ್ಯಕೀಯ ಮಹಾವಿದ್ಯಾಲಯ, ಮೈಸೂರು ಇಲ್ಲಿ ಕರ್ತವ್ಯಕ್ಕೆ ಹಾಜರಾಗಿದ್ದು, ಅವರು ದಿನಾಂಕ 1.10.2001ರಲ್ಲಿ ಕೋರಿಕೆ ಸಲ್ಲಿಸಿ, ವಯೋವೃದ್ಧ ತಾಯಿಯವರ ತೀವ್ರ ಅನಾರೋಗ್ಯದಿಂದಾಗಿ ಸಕಾಲದಲ್ಲಿ ಮೈಸೂರು ವೈದ್ಯಕೀಯ ಮಹಾವಿದ್ಯಾಲಯದಲ್ಲಿ ಕರ್ತವ್ಯಕ್ಕೆ ಹಾಜರಾಗಲು ಸಾಧ್ಯವಾಗದ ಕಾರಣ ಈ ಅವಧಿಯನ್ನು ರಜೆಯೆಂದು ಸಕ್ರಮಗೊಳಿಸಲು ಕೋರಿರುವುದಾಗಿ ತಿಳಿಸಿದ್ದರು.

ಮೇಲೆ (2)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ಪ್ರಾಧ್ಯಾಪಕರು, ಅನಾಟಮಿ ವಿಭಾಗ ಇವರ ವಿರುದ್ಧ ಅನಧಿಕೃತ ಗೈರುಹಾಜರಿಗಾಗಿ ಇಲಾಖಾ ವಿಚಾರಣೆ ನಡೆಸಲು ಕರಡು ದೋಷಾರೋಪಣೆ ಪಟ್ಟಿ ಸಲ್ಲಿಸುವಂತೆ ವೈದ್ಯಕೀಯ ಶಿಕ್ಷಣ ನಿರ್ದೇಶಕರನ್ನು ಕೋರಲಾಗಿತ್ತು.

ವೈದ್ಯಕೀಯ ಶಿಕ್ಷಣ ನಿರ್ದೇಶಕರು ಮೇಲೆ (3)ರಲ್ಲಿ ಓದಲಾದ ತಮ್ಮ ಪತ್ರದೊಂದಿಗೆ ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ಪ್ರಾಧ್ಯಾಪಕರು ಇವರ ವಿರುದ್ಧ ಅನಧಿಕೃತ ಗೈರುಹಾಜರಿ ಕುರಿತು ವಿಚಾರಣೆ ನಡೆಸಲು ಕರಡು ದೋಷಾರೋಪಣೆ ಪಟ್ಟಿಯನ್ನು ಸಿದ್ಧಪಡಿಸಿ ಸರ್ಕಾರಕ್ಕೆ ಸಲ್ಲಿಸಿದ್ದರು.

ಮೇಲೆ (4)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ 214ನೇ ನಿಯಮದಡಿ ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು, ಇವರ ವಿರುದ್ಧ ಅನಧಿಕೃತ ಗೈರುಹಾಜರಿ ಬಗ್ಗೆ ಇಲಾಖಾ ನಡವಳಿಯನ್ನು ಹೂಡಲು ಮಂಜೂರಾತಿಯನ್ನು ನೀಡಲಾಗಿತ್ತು.

ಮೇಲೆ (5)ರಲ್ಲಿ ಓದಲಾದ ಕಾರಣ ಕೇಳುವ ನೋಟೀಸಿನೊಂದಿಗೆ ಅನುಬಂಧ-1-4ರ ವರೆಗಿನ ದೋಷಾರೋಪಣ ಪಟ್ಟಿಯನ್ನು ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರವರಿಗೆ ಹೊರಡಿಸಿ ಆ ಬಗ್ಗೆ ಅವರ ಲಿಖಿತ ಪ್ರತಿಪಾದನಾ ಹೇಳಿಕೆಯನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು

ಆಪಾದಿತ ಸರ್ಕಾರಿ ಅಧಿಕಾರಿಯಾದ ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು ಮೇಲೆ (6)ರಲ್ಲಿ ಓದಲಾದ ತಮ್ಮ ಲಿಖಿತ ಪ್ರತಿಪಾದನಾ ಹೇಳಿಕೆಯಲ್ಲಿ ಅವರ ವಿರುದ್ಧದ ಆರೋಪಗಳನ್ನು ಅಲ್ಲಗಳೆಯುತ್ತಾ, ತಮ್ಮನ್ನು ದೋಷಮುಕ್ತರನ್ನಾಗಿ ಮಾಡುವಂತೆ ಕೋರಿದ್ದರು.

ಮೇಲೆ (7)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಆಪಾದಿತ ಸರ್ಕಾರಿ ಅಧಿಕಾರಿಯಾದ ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು, ಇವರ ವಿರುದ್ಧದ ಆರೋಪಗಳ ಸತ್ಯಾಸತ್ಯತೆಯನ್ನು ಕಂಡುಕೊಳ್ಳಲು ಶ್ರೀ ಟಿ.ಎಸ್. ಪಾಲನೇತ್ರ, ಜಿಲ್ಲಾ ನ್ಯಾಯಾಧೀಶರು (ನಿವೃತ್ತ) ಬೆಂಗಳೂರು ಇವರನ್ನು ವಿಚಾರಣಾಧಿಕಾರಿಯಾಗಿ ಹಾಗೂ ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯದ ಮುಖ್ಯ ಆಡಳಿತಾಧಿಕಾರಿಯನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲಾಗಿತ್ತು.

ವಿಚಾರಣಾಧಿಕಾರಿಯಾದ ಶ್ರೀ ಟಿ.ಎಸ್. ಪಾಲನೇತ್ರ, ಜಿಲ್ಲಾ ನ್ಯಾಯಾಧೀಶರು (ನಿವೃತ್ತ) ರವರು ಮೇಲೆ (8)ರಲ್ಲಿ ಓದಲಾದ ತಮ್ಮ ಪತ್ರದೊಂದಿಗೆ ಆಪಾದಿತ ಸರ್ಕಾರಿ ಅಧಿಕಾರಿಯಾದ ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು ಇವರ ವಿರುದ್ಧ ಅನಧಿಕೃತ ಗೈರುಹಾಜರಿ ಆರೋಪಗಳ ಬಗೆಗಿನ ವಿಚಾರಣಾ ವರದಿಯನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಸರ್ಕಾರಕ್ಕೆ ಸಲ್ಲಿಸಿದ್ದರು.

ಮೇಲೆ (9)ರಲ್ಲಿ ಓದಲಾದ ಎರಡನೇ ಕಾರಣ ಕೇಳುವ ನೋಟೀಸಿನೊಂದಿಗೆ ವಿಚಾರಣಾಧಿಕಾರಿಗಳ ವರದಿಯ ಪ್ರತಿಯನ್ನು ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು ಇವರಿಗೆ ಹೊರಡಿಸಿ ಆ ಬಗ್ಗೆ ಅವರ ಅಹವಾಲುಗಳೇನಾದರೂ ಇದ್ದಲ್ಲಿ ಲಿಖಿತ ರೂಪದಲ್ಲಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

ಆಪಾದಿತ ಸರ್ಕಾರಿ ಅಧಿಕಾರಿಯಾದ ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು ಇವರು ಮೇಲೆ (10)ರಲ್ಲಿ ಓದಲಾದ ತಮ್ಮ ಲಿಖಿತ ಹೇಳಿಕೆಯಲ್ಲಿ, ಸರ್ಕಾರದ ದಿನಾಂಕ 19.8.2000ದ ಆದೇಶದಂತೆ ವರ್ಗಾವಣೆ ಮಾಡಲಾದ ಸ್ಥಳಕ್ಕೆ ಸಮಯಕ್ಕೆ ಸರಿಯಾಗಿ ಹಾಜರಾಗಲು ಅವರ ತಾಯಿ ಅನಾರೋಗ್ಯ ಕಾರಣವಾಗಿತ್ತೆಂದು 204 ದಿನಗಳ ಗೈರುಹಾಜರಿ ಬಗ್ಗೆ ರಜಾ ಮಂಜೂರು ಮಾಡಲು ಸಲ್ಲಿಸಿದ್ದ ಅರ್ಜಿಯನ್ನು, ಇವರ ನಿವೃತ್ತಿಯ ನಂತರ ಅನಧಿಕೃತ ಗೈರುಹಾಜರಿಯೆಂದು ಪರಿಗಣಿಸುತ್ತಿರುವುದು, ನಾಲ್ಕು ತಿಂಗಳ ಅವಧಿಗೆ ಮೀರಿ ಕರ್ತವ್ಯದಿಂದ ಗೈರುಹಾಜರಾದಲ್ಲಿ ಸೇವೆಯಿಂದ ತೆಗೆದು ಹಾಕುವ ಅಥವಾ ವಜಾ ಮಾಡುವ ದಂಡನೆ ವಿಧಿಸಬಹುದಾಗಿದೆ ಎಂಬುದು ಸರ್ವೋಚ್ಛ ನ್ಯಾಯಾಲಯದ ತೀರ್ಪಿನಂತೆ ಅಸಿಂಧುವೆಂದೂ, ನಿವೃತ್ತಿಯ ನಂತರ ನಿಯಮ 214ರಂತೆ ಇಲಾಖಾ ವಿಚಾರಣೆಗೆ ಸಂಬಂಧಿಸಿದ ಆರೋಪವೇ 'Infoutous'

ಆಗುವುದೆಂದೂ ಕರ್ನಾಟಕ ಆಡಳಿತ ನ್ಯಾಯಮಂಡಳಿಯು ಇವರ ಅರ್ಜಿ ಸಂಖ್ಯೆ: 1237/2000 ದಿನಾಂಕ 13.2.2001ರ ಆದೇಶದಲ್ಲಿ ಇವರು ಮನವಿ ಸಲ್ಲಿಸಿರುವುದನ್ನು ಪರಿಶೀಲಿಸಿ, ತೀರ್ಮಾನ ತೆಗೆದುಕೊಳ್ಳಲು ಆದೇಶಿಸಿದ್ದಾಗ್ಯೂ ನಿವೃತ್ತನಾದ ನಂತರ ಅನಧಿಕೃತ ಗೈರುಹಾಜರಿ ಆರೋಪ ಹೊರಡಿಸಿ, ನಿಯಮ 214ರಡಿ ಇಲಾಖಾ ವಿಚಾರಣೆ ನಡೆಸಿರುವುದನ್ನು ಪ್ರಸ್ತಾಪಿಸಿ ಇವರನ್ನು ಆರೋಪಣೆಗಳಿಂದ ಮುಕ್ತರನ್ನಾಗಿಸಬೇಕೆಂದು ಕೋರಿದ್ದರು.

ಮೇಲೆ (11)ರಲ್ಲಿ ಓದಲಾದ ಸರ್ಕಾರದ ಪತ್ರದಲ್ಲಿ ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳು 1958ರ ನಿಯಮ 214ರಡಿ ಸದರಿ ದುರ್ನಡತೆಗಾಗಿ ಅವರ ಪಿಂಚಣಿಯಲ್ಲಿ ಶೇಕಡಾ 10ರಷ್ಟನ್ನು ಒಂದು ವರ್ಷದ ಅವಧಿಗೆ ಕಡಿತಗೊಳಿಸುವ ಬಗ್ಗೆ ಕರ್ನಾಟಕ ಲೋಕಸೇವಾ ಆಯೋಗದ ಸಹಮತಿಯನ್ನು ಕೋರಲಾಗಿತ್ತು.

ಕರ್ನಾಟಕ ಲೋಕಸೇವಾ ಆಯೋಗವು ಮೇಲೆ (12)ರಲ್ಲಿ ಓದಲಾದ ತಮ್ಮ ಪತ್ರದಲ್ಲಿ ಆಪಾದಿತ ಅಧಿಕಾರಿಯಾದ ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು ಇವರ ಪೂರ್ಣ ಪಿಂಚಣಿಯನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆ ವಿಧಿಸಲು ಸಹಮತಿ ನೀಡಿತ್ತು.

ಮೇಲೆ (13)ರಲ್ಲಿ ಓದಲಾದ ಸರ್ಕಾರದ ತಮ್ಮ ಪತ್ರದಲ್ಲಿ ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು ಇವರ ನಿವೃತ್ತಿ ವೇತನವನ್ನು ಶಾಶ್ವತವಾಗಿ ತಡೆಹಿಡಿಯುವ ದಂಡನೆ ವಿಧಿಸುವ ಬಗ್ಗೆ ಅವರ ಅಹವಾಲನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಡಾ: ಹೆಚ್.ಬಿ. ಪ್ರಕಾಶ್ ಕುಮಾರ್‌ರವರು ಮೇಲೆ (14)ರಲ್ಲಿ ಓದಲಾದ ಲಿಖಿತ ಹೇಳಿಕೆಯನ್ನು ಸಲ್ಲಿಸಿ, ಈ ರೀತಿ ತೀವ್ರತರವಾದ ದಂಡನೆ ವಿಧಿಸಿದರೆ ನ್ಯಾಯಾಲಯದಲ್ಲಿ ಪ್ರಶ್ನಿಸುವುದಾಗಿ ತಿಳಿಸಿ, ಇಳಿವಯಸ್ಸಿನಲ್ಲಿ ಮಾನಸಿಕ ನೆಮ್ಮದಿಯಿಂದ ಬದುಕಲು ತನ್ನ ಮೇಲಿನ ಶಿಸ್ತು ಕ್ರಮವನ್ನು ಕೈಬಿಟ್ಟು ಆರೋಪಮುಕ್ತರನ್ನಾಗಿ ಘೋಷಿಸಲು ಕೋರಿರುತ್ತಾರೆ.

ವಿಷಯವನ್ನು ಸಂಬಂಧಿಸಿದ ದಾಖಲೆಗಳೊಂದಿಗೆ ಕೂಲಂಕಷವಾಗಿ ಪರಿಶೀಲಿಸಿದ ನಂತರ ಆಪಾದಿತ ಸರ್ಕಾರಿ ಅಧಿಕಾರಿಯಾದ ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು ಇವರ ವಿರುದ್ಧದ ಆರೋಪದ ಬಗ್ಗೆ ವಿಚಾರಣಾಧಿಕಾರಿಯ ಕಂಡುಕೊಳ್ಳುವಿಕೆಯನ್ನು ಒಪ್ಪಿಕೊಂಡು, ಇವರ ನಿವೃತ್ತಿ ವೇತನದಲ್ಲಿ ಶೇ. 10ರಷ್ಟನ್ನು ಒಂದು ವರ್ಷದ ಅವಧಿಗೆ ಕಡಿತಗೊಳಿಸುವ ದಂಡನೆಯನ್ನು ವಿಧಿಸಲು ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 194 ಎಂಎಂಸಿ 2004, ಬೆಂಗಳೂರು, ದಿನಾಂಕ: 31ನೇ ಮಾರ್ಚ್ 2009

ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ 214ರ ಪ್ರಕಾರ ಆಪಾದಿತ ಸರ್ಕಾರಿ ಅಧಿಕಾರಿಯಾದ ಡಾ: ಹೆಚ್.ಬಿ. ಪ್ರಕಾಶ್ ಕುಮಾರ್, ನಿವೃತ್ತ ಪ್ರಾಧ್ಯಾಪಕರು, ಅಂಗರಚನಾ ಶಾಸ್ತ್ರ ವಿಭಾಗ, ಬೆಂಗಳೂರು ವೈದ್ಯಕೀಯ ಕಾಲೇಜು, ಬೆಂಗಳೂರು ಇವರ ನಿವೃತ್ತಿ ವೇತನದಲ್ಲಿ ಶೇಕಡ 10ರಷ್ಟನ್ನು ಒಂದು ವರ್ಷದ ಅವಧಿಗೆ ಮಾತ್ರ ಕಡಿತಗೊಳಿಸುವ ದಂಡನೆಯನ್ನು ವಿಧಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 1146

ವಿ. ಶ್ರೀರಾಮರೆಡ್ಡಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈದ್ಯಕೀಯ ಶಿಕ್ಷಣ)

FOREST, ECOLOGY AND ENVIRONMENT SECRETARIAT

Sub : Transfer of lease of diversion of 27.193 ha. of forest land in Alagilwada RP of Harapanahalli Range, Davangere Division for establishment of 23.10 MW Wind Power Project sanctioned in favour of M/s Bellary Wind Power Private Ltd., to M/s B.P. Energy India Pvt. Ltd., Mumbai.

Read :

1. Letter No.4-KRC 497/2008/BAN/3144, dated 24th October 2008 of Government of India, Ministry of Environment and Forests, Regional Office, Bangalore.
2. Government Order No. FEE 96 FLL 2008, Bangalore, dated 10.11.2008.
3. Guidelines of G.O.I. F. No. 8-84/2002-FC, dated 14.5.2004 and 20.2.2006.
4. Letter No. A5(5)GFL.CR.3/07-08, dated 4.2.2009 of Principal Chief Conservator of Forests, Bangalore.
5. State Government letter No. FEE 16 FLL 2009, dated 13.2.2009.
6. Letter No. 4-KRC 497/2008-BAN/3946, dated 11.3.2009 of Government of India, Ministry of Environment and Forests, Regional Office, Bangalore.

Preamble:

Government of India in its letter read at (1) above has accorded approval under Forest (Conservation) Act, 1980 for diversion of 27.193 ha. Forest land in Alagilwada RF in Davangere Division for establishment of 23.10 MW Wind Power Project in favour of M/s Bellary Wind Power Private Ltd., Bangalore Accordingly Government of Karnataka has issued Government Order read at (2) above.

The Principal Chief Conservator of Forests, Bangalore vide his letter dated 4.2.2009 read at (4) above had submitted a proposal to obtain the approval of Government of India as per the Government of India's guidelines dated 14.5.2004 and 20.2.2006 (read at 3 above) issued under Forest (Conservation) Act, 1980 for transfer of lease for diversion of 27.193 ha. of forest land in Alagilwada Reserve Forest of Harapanahalli Range, Davangere Division for establishment of 23.10 MW of Wind Power Project sanctioned in favour of M/s Bellary Wind Power Private Limited to M/s BP Energy India Pvt. Ltd., Mumbai.

The original user agency, M/s Bellary Wind Power Private Ltd., Bangalore has proposed to transfer 27.193 ha. of forest land to the new user agency M/s B.P. Energy India Private Limited, Mumbai. The original user agency has submitted no objection certificate for such transfer and the new user agencies have submitted an under taking that they will abide by the conditions stipulated by Government of India and Government of Karnataka.

Accordingly the proposel was recommended to Government of India vide State Government letter dated 13.2.2009 read at (5) above.

Government of India, Ministry of Environment and Forests, Regional Office, Bangalore vide their letter dated 11th March 2009 read at (6) above has conveyed its approval guidelines issued under Forest (Conservation) Act, 1980 for transfer of lease of diverted forest land of 27.193 ha. in Alagilwada RF of Harapanahalli Range, Davangere Division for establishment of 23.10 MW Power Project from M/s Bellary Wind Power Private Limited, Bangalore (the original user agency) to M/s B.P. Energy India Private Limited, Mumbai (the Investor/Power Producer) subject to the condition that M/s B.P. Energy India Private Limited, Mumbai shall abide by all the conditions imposed by Central Government vide their letter dated 24.10.2008 and any other conditions that may be stipulated by Government of India in future read at (1) above.

The proposal has been examined in detail and hence the order.

Government Order No. FEE 16 FLL 2009, Bangalore, Dated 4th April 2009

In the circumstances explained above, Government are pleased to accord approval guidelines issued under Section 2 of Forest (Conservation) Act, 1980 for transfer of lease of diverted forest land of 27.193 ha. in Alagilwada RF of Harapanahalli Range, Davangere Division for establishment of 23.10 MW Wind Power Project from M/s Bellary Wind Power Private Limited Bangalore, (the original User agency), to M/s B.P. Energy India Private Limited, Mumbai (the Investor/Power Producer).

The transfer of lease is subject to the condition that the new User agencies, i.e., the investors/ power producer, shall abide all the conditions imposed by the Central Government/ State Government/ Principal Chief Conservator of Forests, for diversion of 27.193 ha. of forest land in favour of M/s B.P. Energy India Private Limited, Mumbai for establishment of 23.10 MW Wind Power Project in Alagilwada RF of Harapanahally Range, Davangere Division of Karnataka.

By order and in the name of the Governor of Karnataka,

PR. 1143

H.M. MALLIKARJUNA SWAMY
Under Secretary to Government,
Forest, Ecology and Environment Department.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಡಾ: ಎಂ.ಸಿ. ಕೋರನಮಠ, ತಜ್ಞ ವೈದ್ಯರು ಸಾರ್ವಜನಿಕ ಆಸ್ಪತ್ರೆ, ಸೊಂಡೂರು, ಬಳ್ಳಾರಿ ಜಿಲ್ಲೆ ಇವರ ಅನಧಿಕೃತ ಗೈರುಹಾಜರಿ ವಿರುದ್ಧ ಶಿಸ್ತುಕ್ರಮ – ಸೇವೆಯಿಂದ ವಜಾ ಮಾಡುವ ದಂಡನೆ ವಿಧಿಸುವ ಬಗ್ಗೆ.

ಓದಲಾಗಿದೆ :

1. ಆಯುಕ್ತರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ರವರ ಕಾರಣ ಕೇಳುವ ನೋಟೀಸ್ ಸಂಖ್ಯೆ: ಡಿಪಿಜಿ (2)/26/2003–04, ದಿನಾಂಕ 18.7.2003.
2. ಡಾ:. ಎಂ.ಸಿ. ಕೋರನಮಠ, ತಜ್ಞ ವೈದ್ಯರು ರವರ ರಕ್ಷಣಾ ಹೇಳಿಕೆ ದಿನಾಂಕ 11.8.2003.
3. ಆಯುಕ್ತರು, ಆಕುಕ, ಸೇವೆಗಳು, ಬೆಂಗಳೂರು ಇವರ ಆದೇಶ ಸಂಖ್ಯೆ: ಡಿಪಿಜಿ (2)/26/2003–04, ದಿನಾಂಕ 19.2.2004.
4. ವಿಚಾರಣಾಧಿಕಾರಿಗಳು ಹಾಗೂ ಉಪ ನಿರ್ದೇಶಕರು, ಸಾರ್ವಜನಿಕ ಆರೋಗ್ಯ ಸಂಸ್ಥೆ, ಬೆಂಗಳೂರು ಇವರ ವಿಚಾರಣಾ ವರದಿ ಸಂಖ್ಯೆ: ಸಾಆಸಂ/ಉನಿ/ಸಿ/70/ವಿಚಾರಣೆ/1/2004–05, ದಿನಾಂಕ 24.8.2004.
5. ಪತ್ರ ಸಂಖ್ಯೆ: ಡಿಪಿಜಿ (2)/26/2003–04, ದಿನಾಂಕ 8.9.2004.
6. ಡಾ: ಎಂ.ಸಿ. ಕೋರನಮಠ, ತಜ್ಞ ವೈದ್ಯರು ರವರ ರಕ್ಷಣಾ ಹೇಳಿಕೆ ದಿನಾಂಕ 17.9.2004.
7. ಪತ್ರ ಸಂಖ್ಯೆ: ಡಿಪಿಜಿ (2)/26/ 2003–04, ದಿನಾಂಕ 15.1.2005.
8. ಸರ್ಕಾರದ ಪತ್ರ ಸಂಖ್ಯೆ: ಆಕುಕ 32 ಎಂಎಸ್ಎ 2005, ದಿನಾಂಕ 23.3.2005.
9. ಆಯುಕ್ತರು, ಆಕುಕ, ಸೇವೆಗಳು, ಬೆಂಗಳೂರು ಇವರ ಆದೇಶ ಸಂಖ್ಯೆ: ಡಿಪಿಜಿ (2)/26/2003–04, ದಿನಾಂಕ 30.7.2007.
10. ವಿಚಾರಣಾ ವರದಿ ಸಂಖ್ಯೆ: ಮುಜಾಅ/ಜಾಕೋ/16/2007–08, ದಿನಾಂಕ 7.3.2008.
11. ಆಯುಕ್ತರು, ಆಕುಕ, ಸೇವೆಗಳು, ಬೆಂಗಳೂರು ಇವರ ತಿಳುವಳಿಕೆ ಪತ್ರ ಸಂಖ್ಯೆ: ಡಿಪಿಜಿ (2) ಬೆಂವಿ/ವಿ/17/2006–07, ದಿನಾಂಕ 12.5.2008.
12. ಪತ್ರ ಸಂಖ್ಯೆ: ಡಿಪಿಜಿ (2) ಬೆಂವಿ/ವಿ/17/2003–04, ದಿನಾಂಕ 16.10.2008.

ಪ್ರಸ್ತಾವನೆ :

ಡಾ: ಎಂ.ಸಿ. ಕೋರನಮಠ, ತಜ್ಞ ವೈದ್ಯರು, ಸಾರ್ವಜನಿಕ ಆಸ್ಪತ್ರೆ, ಅಥಣಿ, ಬೆಳಗಾವಿ ಜಿಲ್ಲೆ, ಇಲ್ಲಿ ಕಾರ್ಯನಿರ್ವಹಿಸುತ್ತಿದ್ದ ಅವಧಿಯಲ್ಲಿ ದಿನಾಂಕ 01.8.2001ರಿಂದ ದಿನಾಂಕ 30.8.2001ರ ವರೆಗೆ ರಜೆಯ ಮೇಲೆ ತೆರಳಿ, ರಜೆ ಮುಗಿದ ನಂತರ ಸೇವೆಗೆ ಹಾಜರಾಗದೆ ರಜೆಯನ್ನು ಪದೇ ಪದೇ ವಿಸ್ತರಿಸಿ, ರಜೆ ಮಂಜೂರಾಗದಿದ್ದರೂ ಸಹ ಸರ್ಕಾರಿ ಸೇವೆಗೆ ಅನಧಿಕೃತ ಗೈರುಹಾಜರಿ ಆದ ಆರೋಪದ ಬಗ್ಗೆ ಮೇಲೆ (1)ರಲ್ಲಿ ಓದಲಾದ ಕಾರಣ ಕೇಳುವ ನೋಟೀಸನ್ನು ದೋಷಾರೋಪಣಾ ಪಟ್ಟಿಯೊಂದಿಗೆ ಆಯುಕ್ತರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ರವರು ಜಾರಿ ಮಾಡಿದ್ದರು.

ಡಾ: ಎಂ.ಸಿ. ಕೋರನಮಠ ರವರು ದಿನಾಂಕ 18.7.2003ರ ಆಯುಕ್ತರ ಷೋಕಾಸ್ ನೋಟೀಸಿಗೆ ಮೇಲೆ (2)ರಲ್ಲಿ ಓದಲಾದ ಪತ್ರದ ಮೂಲಕ ತಮ್ಮ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿದ್ದು, ಅವರ ಮೇಲೆ ಮಾಡಲಾದ ಆರೋಪಗಳನ್ನು ನಿರಾಕರಿಸಿದ್ದಾರೆ. ಈ ರಕ್ಷಣಾ ಹೇಳಿಕೆಯಲ್ಲಿ ಅವರು ನೀಡಿದ ಕಾರಣಗಳು ತೃಪ್ತಿಕರವಾಗಿಲ್ಲದ ಕಾರಣ, ಆಯುಕ್ತರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ಇವರು ಈ ಪ್ರಕರಣವನ್ನು ಇಲಾಖಾ ವಿಚಾರಣೆಗೆ ವಹಿಸಲು ನಿರ್ಧರಿಸಿ ಮೇಲೆ (3)ರಲ್ಲಿ ಓದಲಾದ ಆದೇಶದಲ್ಲಿ ಉಪ ನಿರ್ದೇಶಕರು (ಪಿ.ಹೆಚ್.ಐ.) ಸಾರ್ವಜನಿಕ ಆರೋಗ್ಯ ಸಂಸ್ಥೆ, ಬೆಂಗಳೂರು ಅವರನ್ನು ವಿಚಾರಣಾಧಿಕಾರಿಯನ್ನಾಗಿ, ಪತ್ರಾಂಕಿತ ಸಹಾಯಕರು, ಜಿಲ್ಲಾ ಆರೋಗ್ಯ ಮತ್ತು ಕು.ಕ. ಅಧಿಕಾರಿಗಳ ಕಛೇರಿ, ಬೆಳಗಾವಿ ರವರನ್ನು ಮಂಡನಾಧಿಕಾರಿಗಳನ್ನಾಗಿ ನೇಮಿಸಿದ್ದರು.

ವಿಚಾರಣಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದಂತೆ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಮೇಲೆ (4)ರಲ್ಲಿ ಓದಲಾದ ಪತ್ರದಲ್ಲಿ ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ರವರಿಗೆ ಸಲ್ಲಿಸಿದ್ದರು. ವಿಚಾರಣಾ ವರದಿಯಲ್ಲಿ ಆಪಾದಿತರ ವಿರುದ್ಧ ಮಾಡಲಾದ ಆರೋಪಗಳಲ್ಲಿ ಅನಧಿಕೃತ ಗೈರುಹಾಜರಿಯ ಆರೋಪವು ನಿಸ್ಸಂಶಯವಾಗಿ ಸಾಬೀತಾಗಿದೆ ಎಂದು ವರದಿಯನ್ನು ನೀಡಿದ್ದರು.

ಸದರಿ ಅಧಿಕಾರಿಯ ವಿರುದ್ಧ ಆರೋಪ ಸಾಬೀತಾಗಿದ್ದ ಕಾರಣ, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ರವರು ಮೇಲೆ (5)ರಲ್ಲಿ ಓದಲಾದ ಪತ್ರದಲ್ಲಿ ವಿಚಾರಣಾ ವರದಿಯೊಂದಿಗೆ ತಿಳುವಳಿಕೆ ಪತ್ರದ ಮೂಲಕ ಆರೋಪಿತ

ವೈದ್ಯಾಧಿಕಾರಿಗಳಿಗೆ ಜಾರಿ ಮಾಡಿ, ಈ ವಿಚಾರಣಾ ವರದಿಯನ್ನು ಏಕೆ ಅಂಗೀಕರಿಸಬಾರದೆಂಬ ಬಗ್ಗೆ ವಿವರಣೆಯನ್ನು ಕೋರಿದ್ದರು. ಡಾ: ಎಂ.ಸಿ. ಕೋರನಮಠ ರವರು ಮೇಲೆ (6)ರಲ್ಲಿ ಓದಲಾದ ಪತ್ರದಲ್ಲಿ ರಕ್ಷಣಾ ಹೇಳಿಕೆ ಸಲ್ಲಿಸಿದ್ದು, ಅವರು ನೀಡಿದ ಕಾರಣಗಳು ತೃಪ್ತಿಕರವಾಗಿಲ್ಲದ ಕಾರಣ, ವಿಚಾರಣಾ ವರದಿಯಲ್ಲಿ ದಿನಾಂಕ 1.8.2001 ರಿಂದ 4.3.2004ರ ವರೆಗಿನ ಗೈರುಹಾಜರಿಯು ವಿಚಾರಣಾ ವರದಿಯಿಂದ ಸಾಬೀತಾಗಿದ್ದರಿಂದ, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ಮೇಲೆ (7)ರಲ್ಲಿ ಓದಲಾದ ಪತ್ರದಲ್ಲಿ ಸದರಿ ಅಧಿಕಾರಿಯು ದೀರ್ಘಕಾಲ ಅನಧಿಕೃತ ಗೈರುಹಾಜರಾದ ಕಾರಣ ಕಠಿಣ ದಂಡನೆ ವಿಧಿಸುವ ಬಗ್ಗೆ ನಿರ್ಣಯ ಕೈಗೊಳ್ಳುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದರು.

ಸರ್ಕಾರವು ಆಯುಕ್ತರ ದಿನಾಂಕ 15.1.2005ರ ಪ್ರಸ್ತಾವನೆ, ವಿಚಾರಣಾಧಿಕಾರಿಗಳ ವಿಚಾರಣಾ ವರದಿ, ದಾಖಲೆಗಳು ಮತ್ತು ಆರೋಪಿತರ ರಕ್ಷಣಾ ಹೇಳಿಕೆಯನ್ನು ಪರಿಶೀಲಿಸಿ, ಡಾ: ಎಂ.ಸಿ. ಕೋರನಮಠ ಅವರು ತಮ್ಮ ರಕ್ಷಣಾ ಹೇಳಿಕೆಯಲ್ಲಿ ಅನಧಿಕೃತ ಗೈರುಹಾಜರಿಗೆ ಸಂಬಂಧಿಸಿದಂತೆ ತಾವು ಅನಧಿಕೃತ ಗೈರುಹಾಜರಾಗಿಲ್ಲವೆಂದು, ಅದನ್ನು ಸಮರ್ಥಿಸಲು ವೈದ್ಯಕೀಯ ಆಧಾರದ ಮೇಲೆ ರಜೆ ಸಲ್ಲಿಸಿರುವುದಾಗಿ ವೈದ್ಯಕೀಯ ಪ್ರಮಾಣ ಪತ್ರಗಳನ್ನು ನೀಡಿದ್ದು, ರಜೆ ಹಾಕಲು ತಮ್ಮ ಕೆಲವೊಂದು ವೈಯಕ್ತಿಕ ಸಮಸ್ಯೆಗಳಿಂದ ಅಂದರೆ ಸ್ವಾಭಿಮಾನ ನಿಷ್ಠೆಗೆ ಧಕ್ಕೆಯಾಗಿರುವುದರಿಂದ ಮಾನಸಿಕ ಒತ್ತಡದಿಂದಾಗಿ ಕೆಲಸದಲ್ಲಿ ತುಂಬಾ ತೊಂದರೆಯಾಗುತ್ತಿದ್ದು ಪದೇ ಪದೇ ರಜೆ ವಿಸ್ತರಿಸಲಾಗುತ್ತಿತ್ತೆಂದು, ಹೇಳಿಕೆ ಸಲ್ಲಿಸಿದ್ದು, ಈ ಅಂಶವನ್ನು ಸರ್ಕಾರವು ಪರಿಶೀಲಿಸಿ, ಈ ಬಗ್ಗೆ ವಿಚಾರಣಾ ವರದಿಯಲ್ಲಿ ಯಾವುದೇ ವಿವರಣೆ ಇಲ್ಲದೆ ಇದ್ದ ಕಾರಣ ಹಾಗೂ ಸಾಕ್ಷಿಯನ್ನು ಕೂಡಾ ವಿಚಾರಣಾ ಸಮಯದಲ್ಲಿ ಪರಿಶೀಲಿಸದೆ ಇರುವುದು ಕಂಡು ಬಂದಿದ್ದು, ವಿಚಾರಣಾ ವರದಿಯಲ್ಲಿ ಅನಧಿಕೃತ ಗೈರುಹಾಜರಿ ಸಾಬೀತಾಗಿದೆ ಎಂಬ ಬಗ್ಗೆ ತರ್ಕಬದ್ಧವಾದ ವಿವರಣೆ ಇಲ್ಲದೆ ಇದ್ದ ಕಾರಣ, ಈ ಬಗ್ಗೆ ನಿಯಮಾನುಸಾರ ವಿಚಾರಣೆ ನಡೆಸಿ, ಯಾವ ಸಂಶಯಕ್ಕೆ ಆಸ್ಪದ ನೀಡದೆ ಮರು ವಿಚಾರಣೆ ನಡೆಸುವಂತೆ ಮೇಲೆ (8)ರಲ್ಲಿ ಓದಲಾದ ಪತ್ರದಲ್ಲಿ ಸರ್ಕಾರವು ನಿರ್ದೇಶನ ನೀಡಿದೆ.

ದಿನಾಂಕ 23.3.2005ರ ಸರ್ಕಾರದ ಪತ್ರದ ನಿರ್ದೇಶನದನ್ವಯ ಆಯುಕ್ತರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ರವರು ಈ ಪ್ರಕರಣದ ಬಗ್ಗೆ ಮರು ವಿಚಾರಣೆ ನಡೆಸಲು ಮೇಲೆ (9)ರಲ್ಲಿ ಓದಲಾದ ಆದೇಶದಲ್ಲಿ ಮುಖ್ಯ ಜಾಗೃತಾಧಿಕಾರಿ, (ಜಾಗೃತ ಕೋಶ) ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ, ವಿಚಾರಣಾ ವರದಿಯನ್ನು ಸಲ್ಲಿಸುವಂತೆ ನಿರ್ದೇಶನ ನೀಡಿದ್ದರು.

ವಿಚಾರಣಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದಂತೆ, ನಿಯಮಾನುಸಾರ ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ಮೇಲೆ (10)ರಲ್ಲಿ ಓದಲಾದ ಪತ್ರದಲ್ಲಿ ಸಲ್ಲಿಸಿದ್ದಾರೆ. ವಿಚಾರಣಾ ವರದಿಯಲ್ಲಿ ಸದರಿ ವೈದ್ಯಾಧಿಕಾರಿಗಳ ವಿರುದ್ಧ ಮಾಡಲಾದ ಅನಧಿಕೃತ ಗೈರುಹಾಜರಿಗೆ ಸಂಬಂಧಿಸಿದಂತೆ ಸದರಿ ವೈದ್ಯಾಧಿಕಾರಿಯವರು ದಿನಾಂಕ 01.8.2001 ರಿಂದ ಇಲ್ಲಿಯವರೆವಿಗೂ ಅನಧಿಕೃತ ಗೈರುಹಾಜರಾಗಿರುವುದು ಸಾಬೀತಾಗಿದೆ ಎಂದು ವರದಿ ನೀಡಿದ್ದಾರೆ.

ಸದರಿ ಅಧಿಕಾರಿಯ ವಿರುದ್ಧದ ಆರೋಪವು ಸಾಬೀತಾಗಿದ್ದ ಕಾರಣ ಆಯುಕ್ತರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ರವರು ಮೇಲೆ (11)ರಲ್ಲಿ ಓದಲಾದ ಪತ್ರದಲ್ಲಿ ವಿಚಾರಣಾ ವರದಿಯೊಂದಿಗೆ ತಿಳುವಳಿಕೆ ಪತ್ರದ ಮೂಲಕ ಆರೋಪಿತ ವೈದ್ಯಾಧಿಕಾರಿಗೆ ಜಾರಿ ಮಾಡಿ ಈ ವಿಚಾರಣಾ ವರದಿಯನ್ನು ಏಕೆ ಅಂಗೀಕರಿಸಬಾರದು ಎಂಬುದರ ಬಗ್ಗೆ ಪತ್ರ ತಲುಪಿದ 15 ದಿನಗಳ ಒಳಗೆ ಲಿಖಿತ ಮೂಲಕ ಹೇಳಿಕೆಯನ್ನು ಸಲ್ಲಿಸುವಂತೆ ನಿರ್ದೇಶಿಸಿದ್ದರು.

ಸದರಿ ವೈದ್ಯಾಧಿಕಾರಿಯವರು ದಿನಾಂಕ 12.5.2008ರ ತಿಳುವಳಿಕೆ ಪತ್ರಕ್ಕೆ ನಿಗದಿತ ಅವಧಿಯಲ್ಲಿ ರಕ್ಷಣಾ ಹೇಳಿಕೆಯನ್ನು ಸಲ್ಲಿಸಿಲ್ಲದ ಕಾರಣ, ಮೇಲೆ (12)ರಲ್ಲಿ ಓದಲಾದ ಪತ್ರದಲ್ಲಿ ಆಯುಕ್ತರು, ಆರೋಗ್ಯ ಮತ್ತು ಕು.ಕ. ಸೇವೆಗಳು, ಬೆಂಗಳೂರು ರವರು ಈ ಪ್ರಕರಣದಲ್ಲಿ ವಿಚಾರಣಾಧಿಕಾರಿಗಳು ನಿಯಮಾನುಸಾರ ವಿಚಾರಣೆ ನಡೆಸಿ, ವರದಿ ಸಲ್ಲಿಸಿದ್ದು, ಸದರಿ ವಿಚಾರಣಾ ವರದಿಯಲ್ಲಿ ಆಪಾದಿತ ವೈದ್ಯರ ಮೇಲಿನ ಅನಧಿಕೃತ ಗೈರುಹಾಜರಿ ಆರೋಪವು ನಿಸ್ಸಂಶಯವಾಗಿ ರುಜುವಾತು ಆಗಿರುವುದರಿಂದ, ಸದರಿ ವೈದ್ಯಾಧಿಕಾರಿಗೆ ಕಠಿಣ ದಂಡನೆಯನ್ನು ವಿಧಿಸಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಸರ್ಕಾರವು ವಿಚಾರಣಾ ವರದಿ, ಸಂಬಂಧಿಸಿರುವ ದಾಖಲಾತಿಗಳನ್ನು, ಆಯುಕ್ತರ ಪ್ರಸ್ತಾವನೆಯನ್ನು ಕೂಲಕಂಷವಾಗಿ ಪರಿಶೀಲಿಸಿದೆ. ಡಾ: ಎಂ.ಸಿ. ಕೋರನಮಠ ಅವರು ದಿನಾಂಕ 1.8.2001 ರಿಂದ ಅನಧಿಕೃತ ಗೈರುಹಾಜರಾಗಿರುವುದು ಇಲಾಖಾ ವಿಚಾರಣೆಯಿಂದ ದೃಢಪಟ್ಟಿರುವುದನ್ನು, ಗಂಭೀರವಾಗಿ ಪರಿಗಣಿಸಿ, ಸದರಿ ವೈದ್ಯರನ್ನು ಸರ್ಕಾರಿ ಸೇವೆಯಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ, ನಿಯಮ-8(VIII) ರಡಿಯಲ್ಲಿ ವಜಾಗೊಳಿಸುವ ದಂಡನೆ ವಿಧಿಸಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ ಈ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 425 ಎಂಎಸ್ಎ 2008, ಬೆಂಗಳೂರು, ದಿನಾಂಕ: 7ನೇ ಫೆಬ್ರವರಿ 2009

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದಾಗಿ ಸರ್ಕಾರವು, ಡಾ: ಎಂ.ಸಿ. ಕೋರನಮಠ, ತಜ್ಞರು, ಸಾರ್ವಜನಿಕ ಆಸ್ಪತ್ರೆ, ಸೊಂಡೂರು, ಬಳ್ಳಾರಿ ಜಿಲ್ಲೆ ಇವರು ದಿನಾಂಕ 1.8.2001 ರಿಂದ ಇದುವರೆವಿಗೂ ಸೇವೆಗೆ ಅನಧಿಕೃತ

ಗೈರುಹಾಜರಾಗಿರುವುದು ಆರೋಪವು ಇಲಾಖಾ ವಿಚಾರಣೆಯಿಂದ ಸಾಬೀತಾಗಿರುವುದರಿಂದ ಇವರನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ), ನಿಯಮಾವಳಿಗಳು 1957ರ, ನಿಯಮ–8(VIII) ರಲ್ಲಿ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರಿ ಸೇವೆಯಿಂದ ವಜಾ ಮಾಡುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 609

ಪದ್ಮಾವತಿ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

FOREST, ECOLOGY AND ENVIRONMENT SECRETARIAT

Sub : Grant of permission for usage of old existing approach road in respect of mining lease 2236 of M/s Sesa Goa Ltd., over an extent of 3.25 ha. of forest land in Nirthadi Reserve Forest, Holalkere Range of Chitradurga Division.

Read : 1. Letter No. A5(1) MNG.CR.27/08-09, dated 31.7.2008 of the Principal Chief Conservator of Forests, Bangalore.

2. State Government Order No. FEE 77 FFM 2006, dated 9.10.2006.
3. Government of India guidelines No. 11-8/2001-FC, dated 15.11.2001.

Preamble:

The State Government vide Order read at (2) above, have accorded approval for extension period of diversion of forest land w.e.f. 11.7.06 up to 27.10.2012 for mining over an area of 163.5 ha. in Neerthadi Reserved Forest, Holalkere Range, Chitradurga Forest Division and approval was also accorded for transfer of mining lease to M/s Sesa Goa Limited, subject to certain conditions.

The Principal Chief Conservator of Forests had sent proposal vide his letter dated 31.7.2008 read at (1) above for permission to use the old existing approach road in respect of mining lease No. 2236 of M/s Sesa Goa Limited over an extent of 3.25 ha. of forest land in Nirthadi Reserve Forest, Holalkere Range, Chitradurga Division in the light of the guidelines issued by the Government of India in their letter No. 11-8/FC, dated 15.11.2007 subject to certain conditions.

After careful consideration of the proposal, State Government vide Government of India guidelines read at (3) above has considered according permission to use the old existing approach road in respect of mining lease No. 2236 of M/s Sesa Goa Limited, over an extent of 3.25 ha. of forest land in Nirthadi Reserve Forest, Holalkere Range, Chitradurga Division.

The proposal has been examined in detail and hence the order.

Government Order No. FEE 123 FFM 2008, Bangalore, Dated 6th April 2009

In the Circumstances explained in the preamble above, Government are pleased to accord permission to use the old existing approach road as per the Government of India guidelines Letter No. 11-8/2001-FC, dated 15.11.2001 in respect of mining lease No. 2236 over an extent of 3.25 ha. of forest land in Nirthadi Reserve Forest, Holalkere Range, Chitradurga Division in favour of M/s Sesa Goa Limited subject to the following conditions.

1. Legal status of forest land shall remain unchanged.
2. No tree felling should be allowed.
3. No widening of road should be undertaken, without permission of the Central Government under the Forest (Conservation) Act, 1980
4. No breaking of fresh forest land is carried out.

5. The above usage of existing road (3.25 ha.) subject to the payment of Net Present Value and Compensatory afforestation as per existing practices/provisions.
6. This permission is valid till the expiry of mining lease.
7. Any other condition that the State Government/Government of India/Principal Chief Conservator of Forests may impose from time to time in the interest of conservation, protection and development of forests.

By order and in the name of the Governor of Karnataka.

PR. 1142

H.M. MALLIKARJUNA SWAMY
Under Secretary to Government,
Forest, Ecology and Environment Department.

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಇಲಾಖೆ, ಅವರ ಕಚೇರಿಗೆ ಎರಡು ಹೈ ಬ್ಯಾಕ್ ಲೆದರ್ ಚೇರ್‌ಗಳನ್ನು ಖರೀದಿಸುವ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 830 ಸಅಸೇ 2008, ದಿನಾಂಕ 7.11.2008.
2. ಸರ್ಕಾರದ ಆದೇಶ ಸಂಖ್ಯೆ ಸಿಆಸುಇ 6 ಡಿಎಸ್ವೈ 2008, ದಿ: 10.10.2008.

ಪ್ರಸ್ತಾವನೆ :

ಮೇಲೆ ಓದಲಾದ (1)ರ ಆದೇಶದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಗೆ ದಿನಾಂಕ 13.10.2008ರಿಂದ ಜಾರಿಗೆ ಬರುವಂತೆ ವೇತನ ಶ್ರೇಣಿ 18400-22400ರಲ್ಲಿ ಕಾರ್ಯದರ್ಶಿಗಳ ಹುದ್ದೆಯನ್ನು ಸೃಜಿಸಲಾಗಿದೆ.

ಮೇಲೆ ಓದಲಾದ (2)ರ ಆದೇಶದಲ್ಲಿ ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆಗೆ ಲೇಖನ ಸಾಮಗ್ರಿಗೆ ರೂ. 40,000ಗಳನ್ನು ಹಾಗೂ ಪೀಠೋಪಕರಣಗಳಿಗೆ ರೂ. 80,000ಗಳನ್ನು ಒದಗಿಸಲಾಗಿದೆ.

ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರು ತಮ್ಮ ಕಚೇರಿಗೆ ಎರಡು ಹೈ ಬ್ಯಾಕ್ ಲೆದರ್ ಕುರ್ಚಿಗಳನ್ನು ಕಚೇರಿ ಟೇಬಲ್‌ಗೆ ಹಾಗೂ ಆಂತರಿಕ ಸಭೆ ಟೇಬಲ್‌ಗೆ ಒಂದರಂತೆ ಖರೀದಿಸಿ ಅಳವಡಿಸಲು ತಿಳಿಸಿರುತ್ತಾರೆ. ಅದರಂತೆ ಮೂರು ಫರ್ನಿಚರ್ ಕಂಪನಿಗಳಿಂದ ಕೊಟೇಷನ್ (Quotation) ಪಡೆಯಲಾಗಿದೆ. ಸದರಿ ಕೊಟೇಷನ್‌ನಲ್ಲಿ ಹೈ ಬ್ಯಾಕ್ ಲೇದರ್ (3259) ಕುರ್ಚಿಗಳಿಗೆ ಈ ಕೆಳಕಂಡ ಬೆಲೆಯನ್ನು ನೀಡಿರುತ್ತದೆ.

ಕ್ರಮ ಸಂಖ್ಯೆ	ಕಂಪನಿಯ ಹೆಸರು	ವಿವರ	ಪ್ರಮಾಣ	ಬೆಲೆ	ಒಟ್ಟು ರೂ.ಗಳಲ್ಲಿ
1	ವುಡ್ ಡೆಕರ್	ಹೈ ಬ್ಯಾಕ್ ಲೇದರ್ ಚೇರ್ (3259)	2	14500/- VAT@12.5% (3500)	31,500
2	ಸೌರವ್ ಸುಮನ್ ಫೈನ್‌ವೆಸ್ಟ್ ಪ್ರೈವೆಟ್ ಲಿಮಿಟೆಡ್	ಹೈ ಬ್ಯಾಕ್ ಲೇದರ್ ಚೇರ್ (3259)	2	13500/- VAT@12.5% (3375)	30,375
3	ಡ್ಯೂರೇನ್	ಹೈ ಬ್ಯಾಕ್ ಲೇದರ್ ಚೇರ್ (3259)	2	12950/- VAT@12.5% (3238)	29,138

ಈ ಮೇಲ್ಕಂಡ ಪೀಠೋಪಕರಣಗಳ ಕಂಪನಿಗಳಿಂದ ಪಡೆದ ದರಗಳನ್ನು ಅವಲೋಕಿಸಿ, ಅತೀ ಕಡಿಮೆ ದರವನ್ನು ಸೂಚಿಸಿರುವ ಡ್ಯೂರೇನ್ ಕಂಪನಿಯಿಂದ ಎರಡು ಕುರ್ಚಿಗಳನ್ನು ರೂ. 25900 ಮತ್ತು ಶೇಕಡಾ 12.5% ತೆರಿಗೆ ರೂ. 3238ನ್ನು ಸೇರಿಸಿ ಒಟ್ಟು ರೂ. 29138ನ್ನು ನೀಡಿ ಖರೀದಿಸಲು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಕಸಂವಾಪ್ರ 159 ಸ್ವೀಮರ 2008, ಬೆಂಗಳೂರು, ದಿನಾಂಕ: 26ನೇ ಡಿಸೆಂಬರ್ 2008

ಸರ್ಕಾರದ ಕಾರ್ಯದರ್ಶಿಗಳು, ಕನ್ನಡ ಮತ್ತು ಸಂಸ್ಕೃತಿ ಇವರ ಕಚೇರಿಗೆ ಡ್ಯೂರೇನ್ ಕಂಪನಿ ಇವರಿಂದ ಎರಡು ಹೈ ಬ್ಯಾಕ್ ಲೇದರ್ ಚೇರ್ (3259)ಗಳನ್ನು ಒಟ್ಟು ಮೊತ್ತ ರೂ. 29138ಗಳಲ್ಲಿ ಖರೀದಿಸಲು ಸರ್ಕಾರದ ಮಂಜೂರಾತಿ ನೀಡಲಾಗಿದೆ. ಈ ವೆಚ್ಚವನ್ನು ಸರ್ಕಾರಿ ಆದೇಶ ಸಂಖ್ಯೆ: ಸಿಆಸುಇ 6 ಡಿಎಸ್ವೈ 2008, ದಿ: 10.10.2008ರಲ್ಲಿ ತಿಳಿಸಿರುವ ಲೆಕ್ಕಶೀರ್ಷಿಕೆ ಅಡಿಯಲ್ಲಿ ಭರಿಸುವುದು. ಡ್ಯೂರೇನ್ ಕಂಪನಿಗೆ ಮೇಲ್ಕಂಡ ಮೊತ್ತವನ್ನು ಸಿ.ಆ.ಸು.ಇ. ಲೆಕ್ಕಪತ್ರ ಶಾಖೆಯು DC ಬಿಲ್ ಮೂಲಕ ಬಿಡುಗಡೆ ಮಾಡುವುದು.

ಮೇಲ್ಕಂಡ ಡ್ಯೂರೇನ್ ಪೀಠೋಪಕರಣಗಳ ಕಂಪನಿಯು ಸದರಿ ಎರಡು ಕುರ್ಚಿಗಳನ್ನು ಕೂಡಲೇ ಕಾರ್ಯದರ್ಶಿಗಳು ಕನ್ನಡ, ಸಂಸ್ಕೃತಿ ಮತ್ತು ವಾರ್ತಾ ಇಲಾಖೆಗೆ ಸರಬರಾಜು ಮಾಡುವುದು ಹಾಗೂ ಸಿ.ಆ.ಸು.ಇಲಾಖೆಯಿಂದ ನೀಡುವ ಮೊತ್ತಕ್ಕೆ ಸ್ವೀಕೃತಿ ನೀಡುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 149

ಎಂ.ಕೆ. ಧರ್ಮರಾಜಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ
(ಆಡಳಿತ ಕನ್ನಡ)

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಬೆಂಗಳೂರಿನ ಅರಮನೆ ರಸ್ತೆಯಲ್ಲಿರುವ ಔಷಧ ನಿಯಂತ್ರಣ ಇಲಾಖೆಯ ಕಛೇರಿ ಹಿಂಭಾಗದಲ್ಲಿ ಖಾಲಿಯಿರುವ ನಿವೇಶನ ಸಂಖ್ಯೆ: 3ರಲ್ಲಿ ಸುಮಾರು 81,300 ಚದುರ ಅಡಿ ಜಾಗದಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಸಹಭಾಗಿತ್ವದೊಂದಿಗೆ ಕಟ್ಟಡ ನಿರ್ಮಾಣ ಮಾಡುವ ಕುರಿತು.

ಪ್ರಸ್ತಾವನೆ :

ಬೆಂಗಳೂರಿನ ಅರಮನೆ ರಸ್ತೆಯ ಅಗಲೀಕರಣಕ್ಕಾಗಿ ಔಷಧ ನಿಯಂತ್ರಣ ಇಲಾಖೆಯ ಮುಖ್ಯ ಕಟ್ಟಡದ ಮುಂದೆ ಇದ್ದ ಸುಮಾರು 2,500 ಚದುರ ಅಡಿ ಜಾಗವನ್ನು ಮಹಾನಗರಪಾಲಿಕೆಯು ಸ್ವಾಧೀನಪಡಿಸಿಕೊಂಡಿದೆ. ಹಾಗೂ ಔಷಧ ನಿಯಂತ್ರಣ ಇಲಾಖೆಯಲ್ಲಿ ಅಮಲುಜಾರಿ ವಿಭಾಗವು ಅತ್ಯಂತ ಪ್ರಮುಖವಾಗಿದ್ದು, ಕರ್ನಾಟಕ ರಾಜ್ಯದ ಸುಮಾರು 40ರಷ್ಟು ಔಷಧ ವಿತರಕರು ಬೆಂಗಳೂರಿನ ನಗರ ಮತ್ತು ಗ್ರಾಮಾಂತರ ಪ್ರದೇಶದಲ್ಲಿದ್ದು, ಅದಕ್ಕೆ ಸಂಬಂಧಪಟ್ಟಂತೆ ಸದ್ಯಕ್ಕೆ 07 ವೃತ್ತ ಕಛೇರಿಗಳು, ರಾಜ್ಯ ಗುಪ್ತವಾರ್ತೆ ವಿಭಾಗ ಹಾಗೂ ಬೆಂಗಳೂರು ಪ್ರಾದೇಶಿಕ ಕಛೇರಿ ಮತ್ತು ಕೇಂದ್ರ ಕಛೇರಿಯು ಇದೇ ಕಟ್ಟಡದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇಲಾಖೆಯು ತೀವ್ರ ಸ್ಥಳದ ಅಭಾವವನ್ನು ಎದುರಿಸುತ್ತಿದೆ.

ಬೆಂಗಳೂರಿನಲ್ಲಿ ಸುಮಾರು 50-60 ಜನ ಅಮಲುಜಾರಿ ಅಧಿಕಾರಿಗಳಿದ್ದು, ತನಿಖೆಯ ಸಂದರ್ಭದಲ್ಲಿ ವಶಪಡಿಸಿಕೊಂಡ ಮುದ್ದೇ ಮಾಲನ್ನು (Seized Property) ಅಂದರೆ, ಔಷಧ ಮತ್ತು ಕಾಂತಿವರ್ಧಕ ಹಾಗೂ ಇತರೆ ಸಾಮಗ್ರಿಗಳನ್ನು ಪ್ರಕರಣ ಮುಗಿಯುವವರೆಗೆ ಇಲಾಖೆಯ ಸುಪರ್ದಿಯಲ್ಲಿ ಇಟ್ಟುಕೊಳ್ಳಬೇಕಾಗುತ್ತದೆ. ಮತ್ತು ನ್ಯಾಯಾಲಯದಲ್ಲಿ ಪ್ರಕರಣ ನಡೆಯುವಾಗ ಸಂದರ್ಭಾನುಸಾರ ಇವುಗಳನ್ನು ಅಲ್ಲಿಗೆ ಕೊಂಡೊಯ್ಯಬೇಕಾಗುತ್ತದೆ. ಈ ಕಾರಣದಿಂದ, ಇಲಾಖೆಗೆ ಸ್ಥಳಾವಕಾಶದ ಅಗತ್ಯವಿರುತ್ತದೆ.

ರಾಜ್ಯ ಔಷಧ ನಿಯಂತ್ರಣ ಇಲಾಖಾ ಕಛೇರಿಯ ಹಿಂಭಾಗದ ಆವರಣದಲ್ಲಿ ಔಷಧ ನಿಯಂತ್ರಣ ಇಲಾಖೆಯ ಒಡೆತನಕ್ಕೆ ಸೇರಿದ ನಿವೇಶನ ಸಂಖ್ಯೆ 3ರಲ್ಲಿ ಸುಮಾರು 81,300 ಚದುರ ಅಡಿ ಜಾಗ ಖಾಲಿಯಿರುತ್ತದೆ. ಈ ಖಾಲಿ ಜಾಗದಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (KPCL), ಬೆಂಗಳೂರು ಇವರು ಔಷಧ ನಿಯಂತ್ರಣ ಇಲಾಖೆಯ ಒಡೆತನದಲ್ಲಿರುವ ಸದರಿ ಖಾಲಿ ಜಾಗದಲ್ಲಿ ವಿಸ್ತೀರ್ಣ 81,300 ಚದುರ ಅಡಿಯಲ್ಲಿ ತನ್ನ ಸ್ವಂತ ಖರ್ಚಿನಲ್ಲಿ ಕಟ್ಟಡ ನಿರ್ಮಿಸಲು ಪ್ರಸ್ತಾಪಿಸಿದ್ದು, ಅದರಂತೆ ನಿಗಮವು ಖಾಲಿ ಜಾಗದಲ್ಲಿ L ಆಕಾರದಲ್ಲಿ ಎರಡು ಪ್ರತ್ಯೇಕ ಪ್ರವೇಶ ದ್ವಾರವಿರುವ 06 ಮಹಡಿಗಳ ಕಟ್ಟಡವನ್ನು (ವಾಹನ ನಿಲುಗಡೆಗಾಗಿ ನೆಲ ಅಂತಸ್ತು ಹೊರತುಪಡಿಸಿ) ನಿರ್ಮಿಸುವುದಾಗಿ, ಈ ಕಟ್ಟಡ ಪ್ರದೇಶವನ್ನು ಎರಡೂ ಇಲಾಖೆಗಳ ಉಪಯೋಗಕ್ಕಾಗಿ ಮಧ್ಯೆ ಗೋಡೆ ನಿರ್ಮಿಸಿ ಶೇಕಡಾ 50:50ರ ಅನುಪಾತದಲ್ಲಿ ಹಂಚಿಕೊಳ್ಳಲು ಒಮ್ಮತವನ್ನು ವ್ಯಕ್ತಪಡಿಸಿದ್ದು, ಅದರಂತೆ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಬೆಂಗಳೂರು ಇವರು ಹಂಚಿಕೆಯಾಗಿರುವ ಶೇಕಡಾ 50ರಷ್ಟು ಕಟ್ಟಡವನ್ನು ಅದರ ವ್ಯಾಪ್ತಿಯ ಜಮೀನು ಸೇರಿದಂತೆ 30 ವರ್ಷಗಳ ಗುತ್ತಿಗೆಗೆ ಔಷಧ ನಿಯಂತ್ರಕರು ನೀಡುವ ಷರತ್ತನ್ನು ಒಪ್ಪಿ, ಇಂಧನ ಸಚಿವಾಲಯದ ಮುಖಾಂತರ ಪ್ರಸ್ತಾವನೆಯನ್ನು ಸ್ವೀಕರಿಸಲಾಗಿದೆ. ಅಲ್ಲದೇ, ಸದರಿ ಪ್ರಸ್ತಾವನೆಗೆ ಆರ್ಥಿಕ ಇಲಾಖೆಯೂ ಸಹ ಈ ಕೆಳಕಂಡಂತೆ ತನ್ನ ಒಪ್ಪಿಗೆಯನ್ನು ಸೂಚಿಸಿರುತ್ತದೆ.

a) The building should be used by Health Department and KPC for their own office or laboratory use.
b) KPC should not have any right to sub-lease its share.
c) The lease to KPC should be for a fixed 30 year period without any provision for extension".

ಮೇಲಿನ ಹಿನ್ನೆಲೆಯಲ್ಲಿ, ಔಷಧ ನಿಯಂತ್ರಣ ಇಲಾಖೆ ಮತ್ತು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಔಷಧ ನಿಯಂತ್ರಣ ಇಲಾಖೆಯ ಆವರಣದ ಹಿಂಭಾಗದಲ್ಲಿರುವ ನಿವೇಶನ ಸಂಖ್ಯೆ: 3ರಲ್ಲಿರುವ ಸುಮಾರು 81,300 ಚದುರ ಅಡಿ ಖಾಲಿ ಜಾಗದಲ್ಲಿ ಕಛೇರಿಯನ್ನು ನಿರ್ಮಾಣ ಮಾಡಲು ಸೂಕ್ತ ಷರತ್ತುಗಳೊಂದಿಗೆ ಒಡಂಬಡಿಕೆ ಪತ್ರವನ್ನು ಮಾಡಿಕೊಳ್ಳುವುದರೊಂದಿಗೆ ಸರ್ಕಾರವು ಅನುಮತಿಯನ್ನು ನೀಡಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಆಕುಕ 26 ಐಎಂಎಂ 2008, ಬೆಂಗಳೂರು, ದಿನಾಂಕ: 7ನೇ ಫೆಬ್ರವರಿ 2009

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಲಾದ ಕಾರಣಗಳ ಹಿನ್ನೆಲೆಯಲ್ಲಿ, ಔಷಧ ನಿಯಂತ್ರಣ ಇಲಾಖೆಯ ಕಛೇರಿಯ ಹಿಂಭಾಗದಲ್ಲಿ ಖಾಲಿಯಿರುವ ನಿವೇಶನ ಸಂಖ್ಯೆ: 3ರಲ್ಲಿರುವ ಸುಮಾರು 81,300 ಚದುರ ಅಡಿ ಖಾಲಿ ಜಾಗದಲ್ಲಿ ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ಮತ್ತು ಔಷಧ ನಿಯಂತ್ರಣ ಇಲಾಖೆ ಇವರ ಸಹಭಾಗಿತ್ವದಲ್ಲಿ ಶೇಕಡಾ 50:50ರ ಅನುಪಾತದಲ್ಲಿ ಹಂಚಿಕೆ ಮಾಡಿಕೊಳ್ಳುವ ಈ ಕೆಳಕಂಡ ಷರತ್ತಿಗಳಿಗೊಳಪಟ್ಟು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಸದರಿ ಸ್ಥಳದಲ್ಲಿ ಕಟ್ಟಡ ನಿರ್ಮಾಣ ಮಾಡಲು ಸರ್ಕಾರದ ಅನುಮತಿಯನ್ನು ನೀಡಿದೆ.

1. ಔಷಧ ನಿಯಂತ್ರಣ ಇಲಾಖೆಯ ಒಡೆತನದಲ್ಲಿರುವ ಇಲಾಖಾ ಕಛೇರಿ ಆವರಣದ ಹಿಂಭಾಗದಲ್ಲಿನ ನಿವೇಶನ ಸಂಖ್ಯೆ 3ರಲ್ಲಿರುವ ಸುಮಾರು 81,300 ಚದುರ ಅಡಿ ಖಾಲಿ ಜಾಗದಲ್ಲಿ ಔಷಧ ನಿಯಂತ್ರಣ ಇಲಾಖೆ ಮತ್ತು ಕರ್ನಾಟಕ ವಿದ್ಯುತ್ ನಿಗಮಗಳ ಉಪಯೋಗಕ್ಕಾಗಿ ಕೆಲವೊಂದು ಸೂಕ್ತ ಮತ್ತು ನಿಯಮಬದ್ಧ ಷರತ್ತು-ನಿಬಂಧನೆಗಳೊಂದಿಗೆ ಔಷಧ ನಿಯಂತ್ರಣ ಇಲಾಖೆ/ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಮತ್ತು ನಿಗಮವು/ ಇಂಧನ ಸಚಿವಾಲಯವು ಪರಸ್ಪರ ಒಮ್ಮತದಿಂದ ತಿಳುವಳಿಕೆ ಪತ್ರಕ್ಕೆ ಸಹಿ ಹಾಕಿ, ಕರ್ನಾಟಕ ವಿದ್ಯುತ್ ನಿಗಮವು ಈ ಜಾಗದಲ್ಲಿ ಕಟ್ಟಡ ನಿರ್ಮಿಸಲು ಮತ್ತು ಹೀಗೆ ನಿರ್ಮಿಸಿದ ಕಟ್ಟಡದಲ್ಲಿ ಲಭ್ಯವಾಗುವ ಕಛೇರಿ ಜಾಗದಲ್ಲಿ ಔಷಧ ನಿಯಂತ್ರಣ ಇಲಾಖೆ ಮತ್ತು ಕರ್ನಾಟಕ ವಿದ್ಯುತ್ ನಿಗಮವು ಶೇಕಡಾ 50:50ರ ಅನುಪಾತದಲ್ಲಿ ಹಂಚಿಕೊಳ್ಳುವುದು.
2. ಕರ್ನಾಟಕ ವಿದ್ಯುತ್ ನಿಗಮದ ಪಾಲಿಗೆ ಬರುವ ಶೇಕಡಾ 50ರಷ್ಟು ಖಾಲಿ ನಿವೇಶನ ಹಾಗೂ ಅದರಲ್ಲಿ ನಿರ್ಮಿಸುವ ಕಛೇರಿ ಕಟ್ಟಡವನ್ನು ಔಷಧ ನಿಯಂತ್ರಣ ಇಲಾಖೆಯು ಸದರಿ ನಿಗಮಕ್ಕೆ 30 ವರ್ಷಗಳ ಗುತ್ತಿಗೆಗೆ ನೀಡತಕ್ಕದ್ದು. ಯಾವುದೇ ಕಾರಣಕ್ಕೂ ಈ ಗುತ್ತಿಗೆ ಅವಧಿಯನ್ನು ವಿಸ್ತರಿಸಲು ಅವಕಾಶ ನೀಡದಂತೆ ಷರತ್ತು ಮತ್ತು ನಿಬಂಧನೆಗಳನ್ನು ರೂಪಿಸಬೇಕು.
3. ಕಟ್ಟಡದ ಕಾಮಗಾರಿಯು ಪೂರ್ಣಗೊಳ್ಳುವವರೆಗೆ ಇದರ ಮೇಲುಸ್ತುವಾರಿಗಾಗಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ, ಇಂಧನ, ಔಷಧ ನಿಯಂತ್ರಣ, ಕೆ.ಪಿ.ಸಿ.ಎಲ್. ಅಧಿಕಾರಿಗಳ ಹಾಗೂ ಅಗತ್ಯ ತಜ್ಞರನ್ನು ಒಳಗೊಂಡ ಸಮಿತಿಯನ್ನು ರಚಿಸುವುದು.
4. ಕಟ್ಟಡವನ್ನು ಔಷಧ ನಿಯಂತ್ರಣ ಇಲಾಖೆ ಮತ್ತು ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ತನ್ನ ಕಛೇರಿ ಅಥವಾ ಪ್ರಯೋಗಾಲಯಕ್ಕೆ ಮಾತ್ರ ಉಪಯೋಗಿಸತಕ್ಕದ್ದು.
5. ಕರ್ನಾಟಕ ವಿದ್ಯುತ್ ನಿಗಮ ನಿಯಮಿತವು ಬೇರೆಯವರಿಗೆ ತನ್ನ ಭಾಗದ ಕಟ್ಟಡವನ್ನು ಉಪಗುತ್ತಿಗೆ ನೀಡುವ ಹಕ್ಕನ್ನು ಹೊಂದಿರುವುದಿಲ್ಲ.

ಈ ಆದೇಶವನ್ನು ಇಂಧನ ಇಲಾಖೆಯ ಟಿಪ್ಪಣಿ ಸಂಖ್ಯೆ: ಇಎನ್ 109 ಪಿಪಿಸಿ 2008, ದಿನಾಂಕ 17.12.2008, ಕಂದಾಯ ಇಲಾಖೆಯ ಟಿಪ್ಪಣಿ ಸಂಖ್ಯೆ: ಆರ್‌ಡಿ 936 ಎಲ್‌ಜಿಬಿ 2008, ದಿನಾಂಕ 27.11.2008 ಹಾಗೂ ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಎಫ್‌ಡಿ 2472 ವೆಚ್ಚ-5/2008, ದಿನಾಂಕ 10.12.2008ರ ಸಹಮತಿಯನುಸಾರ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 610

ಎನ್. ಮಹಾಲಕ್ಷ್ಮಮ್ಮ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ಭಾರತೀಯ ವೈದ್ಯ ಪದ್ಧತಿ)

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಶ್ರೀ ಎಸ್.ಪಿ. ರಾಜು, ಉಪ ನಿರ್ದೇಶಕರು (P&M), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇವರ ವಿರುದ್ಧ ದಾಖಲಾಗಿರುವ ಅಕ್ರಮ ಆಸ್ತಿ ಹೊಂದಿರುವ ಪ್ರಕರಣ - ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ : ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಪತ್ರ ಸಂಖ್ಯೆ: ಲೋಕ್/INV(G)/CBL/A2/CR-1/2009, ಚಿತ್ರದುರ್ಗ ದಿನಾಂಕ 27.1.2009.

ಪ್ರಸ್ತಾವನೆ :

ಶ್ರೀ ಎಸ್.ಪಿ. ರಾಜು, ಉಪ ನಿರ್ದೇಶಕರು (ಪ್ಲಾನಿಂಗ್ ಮತ್ತು ಮಾನಿಟರಿಂಗ್), ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇವರು ತಮ್ಮ ಎಲ್ಲಾ ಬಲ್ಲ ಮೂಲಗಳ ಆದಾಯಕ್ಕಿಂತ ಹೆಚ್ಚಿನ ಸಂಪತ್ತು ಹೊಂದಿರುತ್ತಾರೆ ಎಂಬ ನಂಬಲರ್ಹ ಮಾಹಿತಿಯ ಆಧಾರದ ಮೇರೆಗೆ ಇವರ ವಿರುದ್ಧ ಚಿತ್ರದುರ್ಗ ಕರ್ನಾಟಕ ಲೋಕಾಯುಕ್ತ ಪೊಲೀಸ್ ಠಾಣೆಯಲ್ಲಿ ಭ್ರಷ್ಟಾಚಾರ ನಿರೋಧ ಕಾಯ್ದೆ 1988ರ ಕಲಂ-13 (1)(ಇ) ಸಹವಾಚನ 13(2)ರ ಪ್ರಕಾರ ಮೊಕದ್ದಮೆ ಸಂಖ್ಯೆ: 1/2009 ರಂತೆ ಪ್ರಕರಣವನ್ನು ದಾಖಲಿಸಿಕೊಳ್ಳಲಾಗಿದ್ದು, ಈ ಸಂಬಂಧ ಅಗತ್ಯವಾದ ಶೋಧನಾ ವಾರೆಂಟ್‌ಗಳನ್ನು ಪ್ರಧಾನ ಜಿಲ್ಲಾ ಮತ್ತು ಸತ್ರ ವಿಶೇಷ ನ್ಯಾಯಾಧೀಶರು, ಚಿತ್ರದುರ್ಗ ಇವರಿಂದ ಪಡೆದು, ಅಧಿಕಾರಿಯ ಚಿತ್ರದುರ್ಗ ಮತ್ತು ಬೆಂಗಳೂರಿನಲ್ಲಿನ ನಿವಾಸಗಳನ್ನು, ಅಧಿಕಾರಿಯ ತಂದೆಯವರ ಚಿತ್ರದುರ್ಗ ವಾಸದ ಮನೆಯನ್ನು ಮತ್ತು ಅಧಿಕಾರಿಯ ಕಛೇರಿಯನ್ನು ದಿನಾಂಕ 23.1.2009ರಂದು ಪಂಚ ಸಾಕ್ಷಿಗಳ ಸಮಕ್ಷಮ ಶೋಧಿಸಲಾಗಿ, ಪ್ರಾಥಮಿಕ ತನಿಖೆಯಿಂದ ಅಧಿಕಾರಿಯು ತಮ್ಮ ಗೊತ್ತಾದ ಆದಾಯಕ್ಕಿಂತ ರೂ. 1,12,38,673-00 ಗಳನ್ನು ಹೆಚ್ಚಾಗಿ ಅಕ್ರಮ ಆಸ್ತಿಪಾಸ್ತಿಗಳನ್ನು ಹೊಂದಿರುವುದು ತಿಳಿದುಬಂದಿರುವುದಾಗಿ ಮತ್ತು ಸದರಿ ಚರಾ ಮತ್ತು ಚಿರಾಸ್ತಿಗಳ ಮೌಲ್ಯವು ಸದರಿ ಅಧಿಕಾರಿಯ ನಿಗಧಿತ ಮೂಲಗಳಿಂದ ಗಳಿಸಿರುವ ವರಮಾನಕ್ಕಿಂತ ಶೇಕಡಾ 351.20ರಷ್ಟು ಹೆಚ್ಚಿನ ಮೊತ್ತವಾಗಿರುತ್ತದೆಯೆಂದು ತಿಳಿಸುತ್ತಾ, ಅಧಿಕಾರಿಯು ತಮ್ಮ ಗೊತ್ತಾದ ಆದಾಯಕ್ಕಿಂತ ಹೆಚ್ಚಿನ ಅಕ್ರಮ ಆಸ್ತಿಗಳನ್ನು ಹೊಂದಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ಇವರ ವಿರುದ್ಧದ ಪ್ರಕರಣದ ಸುಗಮ ತನಿಖೆಗೆ ಅಡ್ಡಿಯುಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿಪುರಾವೆಗಳನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ ಶ್ರೀ ಎಸ್.ಪಿ. ರಾಜು, ಉಪ ನಿರ್ದೇಶಕರು, ಇವರನ್ನು ಕೂಡಲೇ ಅಮಾನತ್ತಿನಲ್ಲಿಡಲು ಹಾಗೂ ಇವರ ಲೀನ್‌ನ್ನು ಬೇರೆ ಕಡೆಗೆ ವರ್ಗಾಯಿಸುವಂತೆ ಮೇಲೆ ಓದಲಾದ ಪತ್ರದಲ್ಲಿ ಅಪರ ಪೊಲೀಸ್ ಮಹಾ ನಿರ್ದೇಶಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 10 ಎಂಜಿಎಸ್ 2009, ಬೆಂಗಳೂರು, ದಿನಾಂಕ: 6ನೇ ಮಾರ್ಚ್ 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಮೇರೆಗೆ ಶ್ರೀ ಎಸ್.ಪಿ. ರಾಜು, ಉಪ ನಿರ್ದೇಶಕರು, (P&M) ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇವರು ತಮ್ಮ ಗೊತ್ತಾದ ಆದಾಯಕ್ಕಿಂತ ಹೆಚ್ಚಿನ ಅಕ್ರಮ ಆಸ್ತಿಗಳನ್ನು ಹೊಂದಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ಇವರ ವಿರುದ್ಧದ ಪ್ರಕರಣದ ಸುಗಮ ತನಿಖೆಗೆ ಅಡ್ಡಿಯುಂಟು ಮಾಡುವ ಅಥವಾ ತನಿಖೆಯಲ್ಲಿ ಹಸ್ತಕ್ಷೇಪ ಮಾಡುವ ಹಾಗೂ ಸಾಕ್ಷಿಪುರಾವೆಗಳನ್ನು ನಾಶಗೊಳಿಸುವ ಸಾಧ್ಯತೆಗಳಿರುವುದರಿಂದ, ಶ್ರೀ ಎಸ್.ಪಿ. ರಾಜು, ಉಪ ನಿರ್ದೇಶಕರು, ಗಣಿ ಮತ್ತು ಭೂವಿಜ್ಞಾನ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕರ್ನಾಟಕ ನಾಗರೀಕ ಸೇವಾ (ನಿಯಂತ್ರಣ, ವರ್ಗೀಕರಣ ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ-10(1)(aa)ರ ಪ್ರಕಾರ ಸರ್ಕಾರವು ಅಮಾನತ್ತುಗೊಳಿಸಿದೆ.

ಶ್ರೀ ಎಸ್.ಪಿ. ರಾಜು, ಉಪನಿರ್ದೇಶಕರು, ಇವರ ಲೀನ್ ಅನ್ನು ಉಪನಿರ್ದೇಶಕರು, ಸೇಡಂ ಹುದ್ದೆಗೂ ಮತ್ತು ಅಮಾನತ್ತಿನಲ್ಲಿರುವ ಶ್ರೀ ಎಸ್.ಆರ್. ನಿಡಗುಂದಿ, ಉಪನಿರ್ದೇಶಕರು, ಇವರ ಲೀನ್ ಅನ್ನು ಉಪ ನಿರ್ದೇಶಕರು (ಪಿ.ಎಂ.ಯು.), ಕೇಂದ್ರ ಕಛೇರಿಗೆ ವರ್ಗಾಯಿಸಿದೆ.

ಸದರಿ ಅಧಿಕಾರಿಯು ಅಮಾನತ್ತಿನ ಅವಧಿಯಲ್ಲಿ ನಿಯಮಾನುಸಾರ ಜೀವನಧಾರ ಭತ್ಯೆ ಪಡೆಯಲು ಸರ್ಕಾರವು ಅನುಮತಿಯನ್ನು ನೀಡಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 811

ಎ.ಪಿ. ರಾಮಕೃಷ್ಣ

ಪೀಠಾಧಿಕಾರಿ (ಗಣಿ),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

I -F6 -★

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕು, ಗಾಮನಗಟ್ಟಿ ಗ್ರಾಮದ ಬ್ಲಾಕ್ ನಂ. 208ರ 278-20 ಎಕರೆ ಇನಾಂ ಜಮೀನಿಗೆ ದಯಾತ್ಮಕ ಪರಿಹಾರ ನಿಗದಿಪಡಿಸುವ ಬಗ್ಗೆ.

ಓದಲಾಗಿದೆ : 1. ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ದಿನಾಂಕ 26.10.2008ರ ಸಭೆಯ ನಡವಳಿ.

2. ಜಿಲ್ಲಾಧಿಕಾರಿಗಳು, ಧಾರವಾಡ ಇವರ ಅ.ಸ. ಪತ್ರ ಸಂಖ್ಯೆ: ಡಬ್ಲ್ಯೂಎಟಿಎನ್/ಸಿಆರ್-10/05-06, ದಿನಾಂಕ 14.10.2008 ಮತ್ತು 30.10.2008.

ಪ್ರಸ್ತಾವನೆ :

ದಿನಾಂಕ 1.7.2006ರಂದು ನಡೆದ ಕೆಐಎಡಿಬಿ ಸಭೆಯಲ್ಲಿ ಧಾರವಾಡ ಜಿಲ್ಲೆ, ತಾರೀಹಾಳ್ ಮತ್ತು ಗಾಮನಗಟ್ಟಿ ಗ್ರಾಮಗಳಲ್ಲಿ 500-00 ಎಕರೆ ಜಮೀನನ್ನು ಮಂಡಳಿಯಿಂದ ಕೈಗಾರಿಕಾ ಪ್ರದೇಶಕ್ಕಾಗಿ ಭೂಸ್ವಾಧೀನ ಪಡಿಸಲು ನಿರ್ಣಯವಾಗಿರುತ್ತದೆ. ಮಂಡಳಿ ಸಭೆಯ ನಿರ್ಣಯದಂತೆ 231 ಎಕರೆ 23 ಗುಂಟೆ ಖಾಸಗಿ ಹಾಗೂ 278 ಎಕರೆ 20 ಗುಂಟೆ ಸರ್ಕಾರಿ ಜಮೀನುಗಳು ಸೇರಿ ಒಟ್ಟು 510 ಎಕರೆ 03 ಗುಂಟೆ ಜಮೀನನ್ನು ಭೂಸ್ವಾಧೀನ ಪಡಿಸಲು ಪ್ರಸ್ತಾಪಿಸಲಾಗಿತ್ತು. ಅದರಂತೆ ಅಧಿಸೂಚನೆ ಸಂಖ್ಯೆ: ಸಿಐ 245 ಎಸ್‌ಪಿಕ್ಯೂ 2006, ದಿನಾಂಕ 19.8.2006ರಂದು 226 ಎಕರೆ 38 ಗುಂಟೆ ಖಾಸಗಿ ಜಮೀನಿಗೆ ಕೆಐಎಡಿ ಕಲಂ 28(1)ರನ್ವಯ ಪ್ರಾರಂಭಿಕ ಅಧಿಸೂಚನೆ ಹೊರಡಿಸಲಾಗಿದೆ. ಹಾಗೂ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಐ 246 ಎಸ್‌ಪಿಕ್ಯೂ 2007, ದಿನಾಂಕ 17.5.2007ರಂದು 278 ಎಕರೆ 20 ಗುಂಟೆ ಸರ್ಕಾರಿ ಜಮೀನಿಗೆ ಪ್ರತ್ಯೇಕವಾಗಿ ಕೆ.ಐ.ಎ.ಡಿ. ಕಲಂ 28(1)ರ ಅಧಿಸೂಚನೆ ಹೊರಡಿಸಲಾಗಿದೆ.

2. ತದನಂತರ ಒಟ್ಟು 510 ಎಕರೆ 03 ಗುಂಟೆ ಜಮೀನಿಗೆ ಕೆಐಎಡಿ ಕಲಂ 28(4)ರಂತೆ ಅಧಿಸೂಚನೆ ಸಂಖ್ಯೆ: ಸಿಐ 246 ಎಸ್‌ಪಿಕ್ಯೂ 2007, ದಿನಾಂಕ 6.10.2007ರಂದು ಅಂತಿಮ ಅಧಿಸೂಚನೆಯನ್ನು ಹೊರಡಿಸಲಾಗಿದೆ.

3. ಜಿಲ್ಲಾಧಿಕಾರಿಗಳು, ಧಾರವಾಡ ಇವರು ಓದಲಾದ (2)ರ ದಿನಾಂಕ 14.10.2008ರ ಪತ್ರದಲ್ಲಿ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಗಾರಿಕಾ ಪ್ರದೇಶಕ್ಕೆ ಒಟ್ಟು 510 ಎಕರೆ 03 ಗುಂಟೆ ಜಮೀನನ್ನು ಭೂಸ್ವಾಧೀನಪಡಿಸಿಕೊಳ್ಳಲಾಗಿದೆ. ಇದರಲ್ಲಿ 231 ಎಕರೆ 23 ಗುಂಟೆ ಖಾಸಗಿ ಜಮೀನು ಮತ್ತು 278 ಎಕರೆ 20 ಗುಂಟೆ ಸರ್ಕಾರಿ ಜಮೀನು ಇರುತ್ತದೆ. ಖಾಸಗಿ ಜಮೀನಿಗೆ ಈಗಾಗಲೇ ಪ್ರತಿ ಎಕರೆಗೆ ರೂ. 13.36 ಲಕ್ಷ ಭೂ ದರ ನಿಗದಿಯಾಗಿದೆ. ಅದರಂತೆ ಹಣ ಸಹ ಪಾವತಿ (consent award) ಮಾಡಲಾಗಿದೆ. ಸರ್ಕಾರಿ ಜಮೀನು ಹಾಗೂ ಖಾಸಗಿ ಜಮೀನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳದ ಹೊರತು ಖಾಸಗಿ ಜಮೀನಿಗೆ ಹಣ ಪಾವತಿ ಮಾಡಿರುವುದರಿಂದ ಸದರಿ ಜಮೀನನ್ನು ಉಪಯೋಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಭೂ ದಾಖಲೆಗಳ ಪ್ರಕಾರ 278 ಎಕರೆ 20 ಗುಂಟೆ ಜಮೀನು (ಹಿಂದಿನ ಸರ್ವೆ ನಂ: 60) ಖರಾಬು ಜಮೀನು ಆಗಿದ್ದು 1957-58ರಿಂದ RTCಯಲ್ಲಿನ ಕಾಲಂ 12ರಲ್ಲಿ ಖರಾಬು ಜಮೀನು ಎಂದು ದಾಖಲಾಗಿರುತ್ತದೆ. ಆದರೆ ಈ ಜಮೀನನ್ನು ಅನಧಿಕೃತ ಸಾಗುವಳಿ ಮಾಡುತ್ತಿದ್ದ ರೈತರು Principal Civil Judge (Senior Division) Hubli ಇಲ್ಲಿನ ನ್ಯಾಯಾಲಯದಲ್ಲಿ ದಾವೆ ಹೂಡಿ ತಮ್ಮ ಸಾಗುವಳಿ ಖರಾಬು ಜಮೀನಿನ ಹಕ್ಕನ್ನು ತಮಗೆ ನೀಡಲು ಪ್ರಾರ್ಥಿಸಿದ್ದರು. ಮಾನ್ಯ ನ್ಯಾಯಾಲಯವು ದಿನಾಂಕ 20.4.2006ರ ಆದೇಶದಲ್ಲಿ ಮನವಿದಾರರ ಮನವಿಯನ್ನು ತಿರಸ್ಕರಿಸಿರುತ್ತದೆ. ನಂತರ ಅನಧಿಕೃತ ಸಾಗುವಳಿದಾರರು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ Regular First Appeal ಸಂ: 971, 1175, 1177, 1178 ರಿಂದ 1183, 1619 to 1622, 1625 1537, 1547, 1548, 1558 to 1561/2006 ಸಲ್ಲಿಸಿರುತ್ತಾರೆ. ಸದರಿ RFA ದಿನಾಂಕ 31.10.2006ರಂದು ಈ ಕೆಳಕಂಡಂತೆ ಆದೇಶವಾಗಿರುತ್ತದೆ.

> The appeals are partly allowed. The judgment and decree dated 20th April 2006 passed on O.S. No. 135, 136, 137, 138, 139, 140, 141, 142, 143, 144, 145, 146, 147, 148, 149, 150, 151, 152, 153, 154 and 1554 of 2005 by the Principal Civil Judge (Sr. Divn.), Hubli is set aside. The suit is decreed granting decree for permanent injunction restraining the respondents from interfering with peaceful possession and enjoyment of the respective suit lands by the plaintiffs. In so far as the declaration declaring that the plaintiffs- appellants have perfected their title over the suit schedule property is concerned, same is dismissed.
>
> Appeals are partly allowed subject to above observation. However, no order as to the cost.

4. ಈ ಆದೇಶದ ವಿರುದ್ಧ ಕಂದಾಯ ಇಲಾಖೆಯು ಮಾನ್ಯ ಸರ್ವೋಚ್ಚ ನ್ಯಾಯಾಲಯದಲ್ಲಿ ಸಂಖ್ಯೆ: 5624/2007ರಲ್ಲಿ SLP ದಾಖಲು ಮಾಡಿರುತ್ತದೆ.

5. ಮೇಲೆ ಓದಲಾದ (2)ರ ದಿನಾಂಕ 30.10.2008ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಧಾರವಾಡ ಇವರು ಗಾಮನಗಟ್ಟಿ ಗ್ರಾಮದ ಬ್ಲಾಕ್ ನಂ. 208ರಲ್ಲಿ ಭೂಸ್ವಾಧೀನಪಡಿಸಿಕೊಂಡಿರುವ ಜಮೀನಿನಲ್ಲಿ 278 ಎಕರೆ 20 ಗುಂಟೆ ಜಮೀನು ಸರ್ಕಾರಿ ಜಮೀನು ಆಗಿದ್ದು ಈ ಜಮೀನು ಪ್ರಸ್ತುತ ರೈತರುಗಳ ಮತ್ತು ಸರ್ಕಾರದ ಮಧ್ಯ ತಕರಾರಿನಲ್ಲಿ ಇರುತ್ತದೆ. Bombay Personal Inam Abolition Act ಅಡಿಯಲ್ಲಿ ರಾಜ್ಯ ಸರ್ಕಾರವು ಈ ಜಮೀನು ಸರ್ಕಾರಕ್ಕೆ ಸೇರಿದ ಜಮೀನು ಎಂದು ಆದರೆ ರೈತರು ತಮ್ಮ ಈ ಜಮೀನಿನ tenants of the Inamder ಆಗಿದ್ದು, ಜಮೀನಿನ ಹಕ್ಕು ತಮಗೆ ಸಲ್ಲುವುದೆಂದು ವಾದ ಮಂಡಿಸಿರುತ್ತಾರೆ. ಈ ಬಗ್ಗೆ ಪ್ರಧಾನ ಕಾರ್ಯದರ್ಶಿಗಳು ಕಂದಾಯ ಇಲಾಖೆ ಇವರನ್ನು ಜಿಲ್ಲಾಧಿಕಾರಿಗಳು, ಧಾರವಾಡ ಇವರು ಸ್ಪಷ್ಟೀಕರಣ ಕೇಳಿದಾಗ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ ಇವರ ಸಮ್ಮುಖದಲ್ಲಿ ಜಿಲ್ಲಾಧಿಕಾರಿಗಳು, ಧಾರವಾಡ ಇವರನ್ನು ಒಳಗೊಂಡಂತೆ ಸಭೆ ನಡೆಸಲಾಗಿದೆ. ಸದರಿ ಸಭೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವರ ಸಮ್ಮುಖದಲ್ಲಿ ರೈತರುಗಳನ್ನು ಒಳಗೊಂಡಂತೆ ನ್ಯಾಯಾಲಯದಿಂದ ಹೊರಗಡೆ ಸಮಸ್ಯೆ ಇತ್ಯರ್ಥಪಡಿಸಿಕೊಳ್ಳಲು ಸಭೆಯನ್ನು ಕರೆಯಲು ತೀರ್ಮಾನಿಸಲಾಗಿತ್ತು. ಅದರಂತೆ ದಿನಾಂಕ 26.10.2008ರಂದು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಹುಬ್ಬಳ್ಳಿಯಲ್ಲಿ ರೈತರುಗಳನ್ನೊಳಗೊಂಡು ಸಭೆ ಜರುಗಿಸಲಾಗಿತ್ತು. ಸದರಿ ಸಭೆಯಲ್ಲಿ ಈ ಕೆಳಕಂಡಂತೆ ನಿರ್ಣಯ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿರುತ್ತಾರೆ.

> As per the discussions the farmers have agreed for an out of court settlement of Rs. 10.02 lakhs per Acre, which would be 75% of the amount determined for the acquisition i.e. Rs. 13.36 Lakhs per Acre. The farmers have agreed to relinguish all their rights, withdraw all the litigations and hand over the possession of the lands in case the above-mentioned compensation is paid to them. The letter of indemnity executed by the farmers, who are in possession of the land, is sent to the Government.

6. ಈಗಾಗಲೇ ಇಂತಹ ಜಮೀನಿನ ಬಗ್ಗೆ ಶಿವಮೊಗ್ಗ ವಿಮಾನ ನಿಲ್ದಾಣಕ್ಕೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳುವಾಗ ex-gratia ಮೊತ್ತ ರೈತರಿಗೆ ಪಾವತಿಸಲಾಗಿದ್ದ ಬಗ್ಗೆ ಸಭೆಯಲ್ಲಿ ಚರ್ಚಿಸಲಾಯಿತು. ಈ ಅನಧಿಕೃತ ಸಾಗುವಳಿದಾರರೊಡನೆ ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರು ಚರ್ಚಿಸಿದಾಗ ತಾವು ಸಾಗುವಳಿ ಮಾಡುತ್ತಿರುವ ಜಮೀನಿಗೆ ex-gratia ಮೊತ್ತ ಪಾವತಿಸಿದಲ್ಲಿ ತಮ್ಮ ಹಕ್ಕನ್ನು ಬಿಟ್ಟು ಕೊಡಲಾಗುವುದು ಎಂದು ತಿಳಿಸಿರುತ್ತಾರೆ.

7. ಈ ಬಗ್ಗೆ ಕಂದಾಯ ಇಲಾಖೆಯ ಅಭಿಪ್ರಾಯವನ್ನು ಪಡೆಯಲಾಯಿತು. ಕಂದಾಯ ಇಲಾಖೆಯಿಂದ ಟಿಪ್ಪಣಿ ಸಂಖ್ಯೆ: ಕಂಇ 88 ಭೂಸ್ವಾವ್ಯ 2008 ದಿನಾಂಕ 9.1.2009ರಲ್ಲಿ ಹಾಗೂ ದಿನಾಂಕ 17.2.2009ರಲ್ಲಿ ಅಭಿಪ್ರಾಯ ನೀಡಿರುತ್ತದೆ. ಕಂದಾಯ ಇಲಾಖೆಯ ಅಭಿಪ್ರಾಯದ ಅನ್ವಯ ವಿಷಯವನ್ನು ಸಚಿವ ಸಂಪುಟ ಸಭೆಯಲ್ಲಿ ಮಂಡಿಸಲಾಯಿತು.

8. ಈ ಯೋಜನೆಯ ಜಮೀನಿನ ಬಗ್ಗೆ ಈಗಾಗಲೇ ಸರ್ಕಾರದ ಪ್ರತಿನಿಧಿಯಾಗಿ, ಉನ್ನತ ಮಟ್ಟದ ಸಭೆಯ ನಿರ್ಣಯದಂತೆ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಉಸ್ತುವಾರಿ ಮಂತ್ರಿಗಳು ರೈತರೊಡನೆ ಸಭೆ ನಡೆಸಿ, ಒಮ್ಮತ ನಿರ್ಣಯಕ್ಕೆ ಬಂದು ರೈತರಿಂದ ಒಪ್ಪಿಗೆ ಪತ್ರಗಳನ್ನು ಸಹ ಪಡೆದಿರುವುದರಿಂದ ಈಗ ಪರಿಹಾರ ಧನ ನೀಡುವಲ್ಲಿ ವ್ಯತ್ಯಯವಾದರೆ ಹುಬ್ಬಳ್ಳಿ ಧಾರವಾಡದಲ್ಲಿ ಸ್ಥಾಪಿಸಲು ಉದ್ದೇಶಿಸಿರುವ ಐಟಿ-ಬಿಟಿ ಯೋಜನೆಗೆ ಮತ್ತು ಇತರೆ ಕೈಗಾರಿಕಾ ಅಭಿವೃದ್ಧಿಗೆ ಸ್ಥಳ ಒದಗಿಸಲು ಸಾಧ್ಯವಾಗುವುದಿಲ್ಲ. ಇದರ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ಆಸ್ತಿ ಬೆಲೆಯು ಈಗಾಗಲೇ ಸುಮಾರು 3 ಪಟ್ಟು ಹೆಚ್ಚಾಗಿರುವುದರಿಂದ ಇನ್ನು ವಿಳಂಬವಾದರೆ ಸರ್ಕಾರಕ್ಕೆ ಹೆಚ್ಚಿನ ಭಾರವಾಗಬಾರದು ಎಂಬ ಉದ್ದೇಶದಿಂದ ಹಾಗೂ ಹೊಸ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಪರಿಹಾರ ಧನ ನಿಗದಿಯಾಗುವ ಮೊದಲು ಈ ಹಿಂದಿನ ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸುವುದು ಸರ್ಕಾರದ ದೃಷ್ಟಿಯಿಂದ ಹೆಚ್ಚು ಆರೋಗ್ಯಕರ ಬೆಳವಣಿಗೆಯಾಗುತ್ತದೆ.

9. ಈ ಹಿನ್ನೆಲೆಯಲ್ಲಿ ಕೆ.ಐ.ಎ.ಡಿ.ಬಿ.ಯಿಂದ ಸ್ವಾಧೀನವಾಗಿರುವ ಧಾರವಾಡ ಜಿಲ್ಲೆ, ಹುಬ್ಬಳ್ಳಿ ತಾಲ್ಲೂಕು, ಗಾಮನಗಟ್ಟಿ ಗ್ರಾಮದ ಬ್ಲಾಕ್ ಸಂ. 208ರ 278 ಎಕರೆ 20 ಗುಂಟೆ ಇನಾಂ ಜಮೀನಿನ ಭೂ ಮಾಲೀಕರಿಗೆ ದಯಾತ್ಮಕ ಪರಿಹಾರವಾಗಿ ನೀಡುವ ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ: ಸಿಐ 246 ಎಸ್‌ಪಿಕ್ಯೂ 2007, ಬೆಂಗಳೂರು, ದಿನಾಂಕ: 2ನೇ ಮಾರ್ಚ್ 2009

1) ಹುಬ್ಬಳ್ಳಿ-ಧಾರವಾಡದಲ್ಲಿ ಕೈಗಾರಿಕಾಭಿವೃದ್ಧಿ ದೃಷ್ಟಿಯಿಂದ ಹುಬ್ಬಳ್ಳಿ ತಾಲ್ಲೂಕು, ಗಾಮನಗಟ್ಟಿ ಗ್ರಾಮದಲ್ಲಿ ಭೂಸ್ವಾಧೀನ ಪಡಿಸಿಕೊಂಡ ಖಾಸಗೀ ಜಮೀನಿನ ಮಾಲೀಕರಿಗೆ ಪ್ರತಿ ಎಕರೆಗೆ ರೂ. 13,36,000/-ರಂತೆ ಪಾವತಿ

ಮಾಡಲಾಗುತ್ತಿದ್ದು, ಸದರಿ ಗ್ರಾಮದ ಬ್ಲಾಕ್ ನಂ: 208ರಲ್ಲಿನ ಕ್ಷೇತ್ರ 278 ಎಕರೆ 20 ಗುಂಟೆ ಇನಾಂ ಜಮೀನಿನಲ್ಲಿ ಅನಾದಿ ಕಾಲದಿಂದಲೂ ಪ್ರತ್ಯೇಕವಾಗಿ ಸಾಗುವಳಿ ಮಾಡುತ್ತಿರುವ ಒಟ್ಟು 21 ರೈತ ಕುಟುಂಬದವರಿಗೆ ಖಾಸಗಿ ಜಮೀನು ಮಾಲೀಕರಿಗೆ ಪ್ರತಿ ಎಕರೆಗೆ ನೀಡಿದ ಈ ಪರಿಹಾರ ಧನದಲ್ಲಿನ ಮೊತ್ತದಲ್ಲಿ ಶೇಕಡಾ 75ರಷ್ಟು ಅಂದರೆ ಪ್ರತಿ ಎಕರೆಗೆ ರೂ. 10,02,000/- ಗಳನ್ನು ಸದರಿ ರೈತರುಗಳು ಮಾನ್ಯ ನ್ಯಾಯಾಲಯಗಳಲ್ಲಿ ದಾಖಲಿಸಿರುವ ವ್ಯಾಜ್ಯಗಳನ್ನು ಹಿಂಪಡೆದು, ತಮ್ಮ ಹಕ್ಕುಗಳನ್ನು ಬಿಟ್ಟುಕೊಟ್ಟನಂತರ ಪಾವತಿಸಲು ಹಾಗೂ ಕೆ.ಐ.ಎ.ಡಿ.ಬಿ.ಯು ರೈತರು ಮತ್ತು ಸರ್ಕಾರದ ಮಧ್ಯೆ ಇರುವ ಎಲ್ಲಾ ವ್ಯಾಜ್ಯಗಳನ್ನು ಅಂತ್ಯಗೊಳಿಸಿ, ಆಸ್ತಿಯನ್ನು ಕಬ್ಜೆಗೆ ಪಡೆಯುವುದು.

2) ಮಾರುಕಟ್ಟೆ ಬೆಲೆಯ ರೂ. 13,36,000/- (ಖಾಸಗಿ ಜಮೀನಿಗೆ ಪ್ರತಿ ಎಕರೆಗೆ ನೀಡಿದ ದರ)ಗಳಲ್ಲಿ ಉಳಿದ ಶೇಕಡಾ 25% ರಷ್ಟು ಮೊತ್ತವನ್ನು ಕಂದಾಯ ಇಲಾಖೆಯು ಪಾವತಿಸಿಕೊಂಡು, ಮಾನ್ಯ ಸರ್ವೋಚ್ಛ ನ್ಯಾಯಾಲಯದಲ್ಲಿ ಬಾಕಿಯಿರುವ ಸ್ಪೆಷಲ್ ಲೀವ್ ಪಿಟಿಷನ್ ಸಂಖ್ಯೆ: 5624/2007ನ್ನು ವಾಪಸ್ಸು ಪಡೆಯಲು ಕ್ರಮ ತೆಗೆದುಕೊಳ್ಳತಕ್ಕದ್ದು.

ಈ ಆದೇಶವು ಈ ಭೂಸ್ವಾಧೀನ ಪ್ರಕ್ರಿಯೆಯಲ್ಲಿ ಒಡಂಬಡಿಕೆ ಪತ್ರ ಬರೆದು ಕೊಟ್ಟಿರುವ 21 ಕುಟುಂಬಗಳಿಗೆ ಮಾತ್ರ ಅನ್ವಯಿಸಲ್ಪಟ್ಟಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 771

ಕೆ.ಎಂ. ವೀರಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ (ಕೈ.ಅ),

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ

COMMERCE AND INDUSTRIES SECRETARIAT

Sub : Project proposal of M/s Jaiprakash Engineering & Steel Company Ltd., to establish "Gem and Jewellary Park" at Thokur Village, Mangalore Taluk, Dakshina Kannada District – Approval for – Orders reg.

Read : Proceedings of the 16th State High Level Clearance Committee (SHLCC) meeting held on 19.11.2008.

Preamble:

M/s Jaiprakash Engineering & Steel Company Ltd., (JESCO), a public limited company, Kanpur, U.P. M/s. Nagarjuna Fertilizers & Chemicals Ltd., is the holding company of JESCO, has proposed to establish "Gem and Jewellary Park" in 10 acres of land at Thokur Village, Mangalore Taluk, Dakshina Kannada District with an investment of Rs. 38.00 Crores.

In the proposal submitted before the 16th State High Level Clearance Committee meeting (SHLCC) held on 19.11.2008, the Company had requested for various Infrastructure facilities as well as incentives and concessions as envisaged in the New Industrial Policy 2006-11 from the Government. The State High Level Clearance Committee, after detailed discussion of the project proposal of the said Company, vide the proceedings read above, has recommended for approval of the project, to provide infrastructural facilities and to extend incentives & concessions as envisaged in the Industrial Policy of the State Government 2006-11.

Government has examined the recommendations made by the State High Level Clearance Committee in its 16th Meeting held on 19.11.2008 in all aspects. Hence the following order.

Government Order No. CI 17 SPI 2009, Bangalore, Dated 10th FEBRUARY 2009

In the circumstances explained above, Government is pleased to accord approval to M/s Jaiprakash Engineering & Steel Company Ltd., (JESCO), to establish "Gem and Jewellary Park" in 10 acres of land at Thokur Village, Mangalore Taluk, Dakshina Kannada District with an investment of Rs. 38.00 Crores, with the following infrastructural facilities, incentives and concessions:

INFRASTRUCTURE FACILITIES:

LAND

10 acres of land already allotted by KIADB.

WATER

4 lakh 1pd to be supplied by KIADB and unit to minimize the usage of water and shall establish structure / facility for rainwater harvesting and groundwater recharge and to conduct an annual 'Water Audit'.

POWER

1 MW to be serviced by MESCOM.

INCENTIVES & CONCESSIONS

As per New Industrial Policy 2006-2011.

ENVIRONMENT

KSPCB to issue CFE as per their norms. The company shall obtain environmental clearance from State and MOEF, GoI before commencement of work.

EMPLOYMENT

Project proponents shall play a proactive role in enhancing the employability of the local job seekers, including the land losers. Further, the Company shall prepare a plan for development of human resources required for the project, train local people and provide employment to these trained local youth and comply with Government policy of Employment to local people i.e. Dr. Sarojini Mahishi report. A copy of human resources development plan shall be sent to the Commissioner for I.D. & Director of Industries and Commerce for monitoring.

VENDOR DEVELOPMENT

Where ever there is scope for vendor development for the project, the company shall prepare a vendor development plan develop local vendors and procure the required inputs, components and sub assemblies from these local vendor units. A copy of the vendor development plan shall be sent to the Commissioner for I.D. & Director of Industries and Commerce for monitoring.

SOCIAL INFRASTRUCTURE DEVELOPMENT

The Company is advised to take up social infrastructure development projects in the vicinity of proposal location of the unit as per R & R policy 2007 (GoI). A copy of such projects shall be sent to the Government.

OTHERS

The promoter shall take all statutory and other necessary clearances and shall submit milestones/ progress in implementation of the project regularly, which will be monitored by the Departments concerned.

This approval is valid for a period of two years from the date of issue.

By order and in the name of the Governor of Karnataka,

PR. 603

APARNA PAVATE

Desk Officer (Technical Cell)

Commerce & Industries Department.

FOREST, ECOLOGY AND ENVIRONMENT SECRETARIAT

Sub : Diversion of 2.00 ha. of forest land in Sy. No. 108A1A1A1A1A1 of Manaki village for the purpose of solid waste Management of Kumta Town in favour of Chief Officer, Town Municipal Council, Kumta.

Read : 1. Government Order No. FEE 3 FGL 2006, dated 27.11.2007.

2. Principal Chief Conservator of Forests, Bangalore, Letter No. A5(2)GFL-CR-7/05-06, dated 25.11.2008.

Preamble:

In Government order read at (1) above approval was accorded for diversion of 2.00 ha of forest land in Sy.No. 108A of Manaki village for the purpose of solid waste Management of Kumta Town in favour of Chief Officer, Town Municipal Council, Kumta.

The Principal Chief Conservator of Forests vide his letter read at (2) above has stated as per the conditions laid down both Government of India and Government of Karnataka and Deputy Conservator of Forests, Honnavar was directed to hand over the forest land to the Chief Officer, Town Municipal Council, Kumta. Maruru Gudda Hitharakshana Samithi, Kumta filed an objection petition against establishment of the above solid waste management unit before the HRC stating that the unit pollute the underground water in vicinity and would seriously affect the health of residents in the area. In this regard a meeting was held under the Chairmanship of the Deputy Commissioner, Uttara Kannada, Karwar and decided to find an alternate site for establishing the unit. As suggested by the Conservator of Forests, Kanara Circle and alternate site in the some area in Manaki Village Sy.No. 108 AIAIAIAIAI has been identified by the Town Municipal Council, Kumta and the area does not have any tree growth and is not suitable for taking up any forestry work and it is completely surrounded by laterite stone and very much suitable for establishing solid waste disposal unit by Town Municipal Council, Kumta.

Proposal has been examined in detail and hence the order.

Government Order No. FEE 03 FGL 2009, Bangalore, Dated 6th APRIL 2009

In the circumstances explained above, in partial modification read at (1) above Government is pleased to accord approval for diversion of 2.00 ha. of forest land in Sy.No. 108 AIAIAIAIAI of Manaki village for the purpose of solid waste Management of Kumta Town in favour of Chief Officer, Town Municipal Council, Kumta instead of Sy. No. 108A of Manaki village.

All other conditions the Government Order dated 27.11.2007 remain unchanged.

By order and in the name of the Governor of Karnataka,

PR. 1141

H.M. MALLIKARJUNA SWAMY
Under Secretary to Government,
Forest, Ecology and Environment Department.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ : ಔಷಧ ನಿಯಂತ್ರಣ ಇಲಾಖೆಯ ಅಮಲುಜಾರಿ ವಿಭಾಗದ ಪುನರ್ ರಚನೆಯ ಬಗ್ಗೆ.

ಓದಲಾಗಿದೆ :
1. ಔಷಧ ನಿಯಂತ್ರಕರು, ಬೆಂಗಳೂರು ಇವರ ಅರೆ ಸರ್ಕಾರಿ ಪತ್ರ ಸಂಖ್ಯೆ: ಡಿಸಿಡಿ/98/ಇಎಸ್‌ಟಿ/2008-09, ದಿನಾಂಕ 30.5.2008.
2. ಸರ್ಕಾರದ ಆದೇಶ ಸಂಖ್ಯೆ: ಆಕುಕ 73 ಐಎಂಎಂ 2008, ದಿನಾಂಕ 21.6.2008.
3. ಔಷಧ ನಿಯಂತ್ರಕರು, ಬೆಂಗಳೂರು ಇವರ ಏಕ ಕಡತ ಸಂಖ್ಯೆ: ಔನಿಇ/361/ಸಿಬ್ಬಂದಿ/2008-09.

ಪ್ರಸ್ತಾವನೆ :

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ಪತ್ರದಲ್ಲಿ, ಔಷಧ ನಿಯಂತ್ರಕರು ನೆರೆ ರಾಜ್ಯಗಳಾದ ಮಹಾರಾಷ್ಟ್ರ, ಗುಜರಾತ್ ಮತ್ತು ಆಂಧ್ರ ಪ್ರದೇಶಗಳಲ್ಲಿ ಅಲ್ಲಿಯ ಔಷಧ ನಿಯಂತ್ರಣ ಇಲಾಖೆಯ ಗುಪ್ತ ಹಾಗೂ ವಿಚಕ್ಷಣ ವಿಭಾಗಗಳು ಅಲ್ಲದೇ ಅಮಲುಜಾರಿ ವಿಭಾಗಗಳಲ್ಲಿ ವಿವಿಧ ಕಾನೂನುಗಳನ್ನು ಕಾರ್ಯಗತಗೊಳಿಸುವಲ್ಲಿ ತೆಗೆದುಕೊಳ್ಳುತ್ತಿರುವ ಕ್ರಮಗಳನ್ನು ಅಧ್ಯಯನ ಮಾಡಿ, ಸೂಕ್ತ ಮಾರ್ಪಾಡನ್ನು ಕರ್ನಾಟಕ ರಾಜ್ಯದ ಔಷಧ ನಿಯಂತ್ರಣ ಇಲಾಖೆಯಲ್ಲಿಯೂ ಸಹ ಅಳವಡಿಸುವುದರಿಂದ ರಾಜ್ಯದಲ್ಲಿ ನಕಲಿ ಔಷಧಿಗಳನ್ನು ಪತ್ತೆ ಹಚ್ಚುವಲ್ಲಿ ಹೆಚ್ಚಿನ ಸಾಧನೆಯನ್ನು ಕಂಡುಕೊಳ್ಳಲು ಹಾಗೂ ಅಮಲುಜಾರಿ ವಿಭಾಗವು ಇನ್ನೂ ಹೆಚ್ಚಿನ ದಕ್ಷತೆಯಿಂದ ಕಾರ್ಯನಿರ್ವಹಿಸಲು ಅನುಕೂಲವಾಗುವಂತೆ ಔಷಧ ನಿಯಂತ್ರಣ ಇಲಾಖೆಯ ಅಧಿಕಾರಿಗಳನ್ನು ನಿಯೋಜಿಸಲು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿನ ಸರ್ಕಾರದ ಆದೇಶದಲ್ಲಿ, ನೆರೆ ರಾಜ್ಯಗಳಾದ ಮಹಾರಾಷ್ಟ್ರ, ಗುಜರಾತ್ ಮತ್ತು ಆಂಧ್ರಪ್ರದೇಶಗಳಲ್ಲಿ ಔಷಧ ನಿಯಂತ್ರಣ ಇಲಾಖೆಯ ಕಾರ್ಯವೈಖರಿಯನ್ನು ಅದರಲ್ಲೂ ಗುಪ್ತ ಹಾಗೂ ವಿಚಕ್ಷಣ ವಿಭಾಗಗಳ ಕಾರ್ಯವೈಖರಿಗಳನ್ನು ಅಧ್ಯಯನ ಮಾಡಿ, ಸರ್ಕಾರಕ್ಕೆ ಒಂದು ತಿಂಗಳ ಒಳಗಾಗಿ ವರದಿಯನ್ನು ಸಲ್ಲಿಸುವಂತೆ ಶ್ರೀ ರಘುರಾಮ ಭಂಡಾರಿ, ಹಿಂದಿನ ಉಪ ಔಷಧ ನಿಯಂತ್ರಕರು, ಕೇಂದ್ರ ಕಛೇರಿ, ಶ್ರೀ ಖಾಲಿದ್ ಅಹ್ಮದ್ ಖಾನ್, ಸಹಾಯಕ ಔಷಧ ನಿಯಂತ್ರಕರು, ಶ್ರೀ ಅಜಯರಾಜ್ ಡಿ. ಷಹಾ, ಔಷಧ ಪರಿವೀಕ್ಷಕರು ಮತ್ತು ಶ್ರೀ ಅಜಯ್ ಮುದುಗಲ್ ಕೃಷ್ಣಪ್ಪ, ಔಷಧ ಪರಿವೀಕ್ಷಕರು ಇವರುಗಳನ್ನೊಳಗೊಂಡ ತಂಡವನ್ನು ರಚಿಸಿ ನಿಯೋಜಿಸಲಾಗಿತ್ತು.

ಮೇಲಿನಂತೆ ಸದರಿ ತಂಡವು ನೆರೆ ರಾಜ್ಯಗಳಾದ ಮಹಾರಾಷ್ಟ್ರ, ಗುಜರಾತ್ ಮತ್ತು ಆಂಧ್ರಪ್ರದೇಶಗಳಲ್ಲಿ ಔಷಧ ನಿಯಂತ್ರಣ ಇಲಾಖೆಯ ಕಾರ್ಯಗಳನ್ನು ಅಧ್ಯಯನ ಮಾಡಿ, ಕರ್ನಾಟಕದಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ತಮ್ಮ ವರದಿಯಲ್ಲಿ ಈ ಕೆಳಕಂಡ ಶಿಫಾರಸ್ಸುಗಳನ್ನು ಮಾಡಿರುತ್ತಾರೆ.

1. Presence of a full fledged intelligence branch/wing at the Head Quarters supported by branches/ wings situated at Divisional levels is very much essential for curbing the menace of Spurious drugs/ cosmetics, counterfeit drugs/ cosmetics and other violations. The Intelligence branch may report directly either to the Drugs Controller or Additional Drugs Controller. The work of these branches/ wings may be reviewed every quarterly by the Drugs Controller.
2. The said wing may be exclusively named as Intelligence Branch.
3. The officers posted in the Intelligence branch may not be assigned any routine work and they shall not be given any routine targets.
4. They may be provided with facilities such as Cell phones, vehicles, computers, cameras and adequate staff.
5. The Drugs Inspectors posted in the Intelligence branch may be given one – step promotion by designating them with the next higher designation and they may be given one rise in basic pay till the time they serve in this branch.
6. The officers of this wing shall devote their time in collecting information from the field and where any action is required they shall provide support to the local jurisdictional officers in conducting the raid and mahazar.
7. Only in important issues, depending on the directions of the Drugs Controller, they shall act individually as investigating officers.
8. Legal Samples drawn by this wing shall be analysed on top priority.
9. Posts of watchers/ information may be created.
10. A 'Secret Fund' may be created which shall be at the disposal of the Drugs Controller.

ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿನ ಪತ್ರದಲ್ಲಿ, ಔಷಧ ನಿಯಂತ್ರಕರು, ಸಮಿತಿಯ ಶಿಫಾರಸ್ಸಿನ ಹಿನ್ನೆಲೆಯಲ್ಲಿ, ರಾಜ್ಯದಲ್ಲಿನ ಔಷಧ ನಿಯಂತ್ರಣ ಇಲಾಖೆಯನ್ನು ಈ ಕೆಳಕಂಡಂತೆ ಪುನರ್‌ರಚಿಸಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

1. ಮಹಾರಾಷ್ಟ್ರದ ಮಾದರಿಯಲ್ಲಿ ರಾಜ್ಯ ಗುಪ್ತವಾರ್ತಾ ವಿಭಾಗವನ್ನು ಕೇಂದ್ರ ಸ್ಥಾನದಲ್ಲಿ ಪ್ರಾರಂಭಿಸುವುದು. ಸದರಿ ವಿಭಾಗವನ್ನು ಅಪರ ಔಷಧ ನಿಯಂತ್ರಕರ ನೇತೃತ್ವದಲ್ಲಿ ಕಾರ್ಯನಿರ್ವಹಿಸುವಂತೆ ಮಾಡುವುದು.
2. ಕರ್ನಾಟಕ ರಾಜ್ಯದ ಅಪರ ಔಷಧ ನಿಯಂತ್ರಕರನ್ನು ಇಲಾಖೆಯ ಎಲ್ಲಾ ಅಧೀನ ಅಧಿಕಾರಿ ಹಾಗೂ ಸಿಬ್ಬಂದಿಗೆ ಸಂಬಂಧಪಟ್ಟಂತೆ "ಜಾಗೃತ ತನಿಖಾಧಿಕಾರಿ" (Vigilance Officer) ಎಂದು ಘೋಷಿಸುವುದು.
3. ರಾಜ್ಯದಲ್ಲಿರುವ 04 ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ ಮತ್ತು 01 ಔಷಧ ಬೆಲೆ ನಿಯಂತ್ರಣ ಕೋಶವನ್ನು ಪುನರ್ ಪದನಾಮೀಕರಿಸಿ, ರಾಜ್ಯದಲ್ಲಿ 05 ಪ್ರಾದೇಶಿಕ ಕಛೇರಿಗಳನ್ನು ಉಪ ಔಷಧ ನಿಯಂತ್ರಕರ ನೇತೃತ್ವದಲ್ಲಿ ಪ್ರಾರಂಭಿಸುವುದು.
4. ಬೆಂಗಳೂರಿನಲ್ಲಿರುವ ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗವನ್ನು ಎಲ್ಲಾ ಹುದ್ದೆಗಳೊಂದಿಗೆ ಬಳ್ಳಾರಿಗೆ ಸ್ಥಳಾಂತರಿಸುವುದು.
5. ಈಗಿರುವ ಸಿಬ್ಬಂದಿಗಳನ್ನು ಸಮಾನಾಂತರವಾಗಿ ಸ್ಥಳಾಂತರಿಸಿ, ಎಲ್ಲಾ ಪ್ರದೇಶಗಳಲ್ಲಿ ಔಷದ ನಿಯಂತ್ರಣ ಇಲಾಖೆಯ ಕಾರ್ಯಚಟುವಟಿಕೆಗಳನ್ನು ಚುರುಕುಗೊಳಿಸುವುದು.
6. ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗಗಳಲ್ಲಿ ಕಾರ್ಯ ನಿರ್ವಹಿಸುವ ಔಷಧ ಪರಿವೀಕ್ಷಕರುಗಳಿಗೆ ಮಾಹೆಯಾನ ರೂ. 1000/-ಗಳನ್ನು ವಿಶೇಷ ಭತ್ಯೆಯನ್ನಾಗಿ ನೀಡುವುದು.
7. ನಕಲಿ ಔಷಧಗಳ ಮಾರಾಟ ಮತ್ತು ತಯಾರಿಕೆಯನ್ನು ತಡೆಗಟ್ಟುವ ವಿಷಯವು ಅತ್ಯಂತ ಸೂಕ್ಷ್ಮವಾಗಿದ್ದು, ಅದರಲ್ಲಿ ತೊಡಗಿರುವ ವ್ಯಕ್ತಿಗಳು ಹಾಗೂ ಸಂಸ್ಥೆಯನ್ನು ಪತ್ತೆ ಹಚ್ಚುವುದಕ್ಕೆ ಅಧಿಕಾರಿಗಳು ವಿವಿಧ ರೀತಿಯ

ಮಾಹಿತಿಯ ಸಂಗ್ರಹಣೆ ಮಾಡುವ ಅವಶ್ಯಕತೆ ಇರುವುದರಿಂದ, ಅದಕ್ಕಾಗಿ ವರ್ಷಕ್ಕೆ ರೂ. 5.00 ಲಕ್ಷಗಳನ್ನು ಸೀಕ್ರೆಟ್ ಫಂಡ್ ಅಥವಾ ಗುಪ್ತ ನಿಧಿಯನ್ನಾಗಿ ಬಳಸಲು ಮಂಜೂರಾತಿ ನೀಡುವುದು.

8. ಮಹಾರಾಷ್ಟ್ರ ಮಾದರಿಯಂತೆ ಔಷಧ ಮತ್ತು ಕಾಂತಿವರ್ಧಕ ನಿಯಮಗಳಡಿಯಲ್ಲಿ ಕೈಗೊಳ್ಳಬೇಕಾದ ತನಿಖೆಗೆ ಸಂಬಂಧಪಟ್ಟ ವ್ಯಕ್ತಿಗಳು ಸಹಕಾರ ನೀಡದಿರುವಂತಹ ಪ್ರಸಂಗಗಳಲ್ಲಿ ಈ ಇಲಾಖಾ ಅಧಿಕಾರಿಗಳು ಕೇಳಿದ ಸಹಾಯವನ್ನು ಎಲ್ಲಾ ಹಂತಗಳಲ್ಲಿ ನೀಡುವಂತೆ ರಾಜ್ಯದ ಎಲ್ಲಾ ಪೊಲೀಸ್ ಅಧಿಕಾರಿಗಳಿಗೆ ಒಂದು ಸುತ್ತೋಲೆಯನ್ನು ಹೊರಡಿಸಲು ಗೃಹ ಇಲಾಖೆಯನ್ನು ಕೋರುವುದು.

9. ಔಷಧ ನಿಯಂತ್ರಣ ಇಲಾಖೆಯಲ್ಲಿ ಸಿಬ್ಬಂದಿ ಸಂಖ್ಯೆಯು ಗಮನಾರ್ಹವಾಗಿ ಹೆಚ್ಚಾಗುತ್ತಿರುವುದರಿಂದ, ಆಡಳಿತಾತ್ಮಕ ಸಮಸ್ಯೆಗಳನ್ನು ಬಗೆಹರಿಸಲು ಆಡಳಿತಾಧಿಕಾರಿಯ ಹುದ್ದೆಯನ್ನು ಸೃಜಿಸಿ, ಸದರಿ ಹುದ್ದೆಗೆ ಸರ್ಕಾರದ ಸಚಿವಾಲಯದ ಮಟ್ಟದಲ್ಲಿನ ಒಬ್ಬ ಅಧೀನ ಕಾರ್ಯದರ್ಶಿಯವರನ್ನು ನಿಯೋಜನೆಯ ಮೇರೆಗೆ ಇಲಾಖೆಗೆ ಭರ್ತಿ ಮಾಡುವುದು.

10. ಔಷಧ ನಿಯಂತ್ರಣ ಇಲಾಖೆಯ ಅಮಲುಜಾರಿ ವಿಭಾಗದ ಪುನರ್ ರಚನೆಗಾಗಿ ಅಧಿಕಾರಿಗಳ ಹಾಗೂ ಲಿಪಿಕ ಹಾಗೂ ಇತರೆ ವೃಂದದ ಸಿಬ್ಬಂದಿಗಳ ಕೆಲವು ಹುದ್ದೆಗಳನ್ನು ಸ್ಥಳಾಂತರಿಸುವುದು.

ಔಷಧ ನಿಯಂತ್ರಕರ ಪ್ರಸ್ತಾವನೆಯ ಹಿನ್ನೆಲೆಯಲ್ಲಿ ಔಷಧ ನಿಯಂತ್ರಣ ಇಲಾಖೆಯ ಅಮಲುಜಾರಿ ವಿಭಾಗವನ್ನು ಚುರುಕುಗೊಳಿಸಿ, ರಾಜ್ಯದಲ್ಲಿ ನಡೆಯುವ ನಕಲಿ ಔಷಧಗಳನ್ನು ಪತ್ತೆ ಹಚ್ಚುವಲ್ಲಿ ಕಟ್ಟುನಿಟ್ಟಾದ ಕ್ರಮಗಳನ್ನು ಜಾರಿಗೊಳಿಸುವುದು ಅತ್ಯವಶ್ಯಕವಾಗಿರುವುದರಿಂದ, ಔಷಧ ನಿಯಂತ್ರಣ ಇಲಾಖೆಯ ಅಮಲುಜಾರಿ ವಿಭಾಗವನ್ನು ಪುನರ್‌ರಚಿಸುವುದು ಅತ್ಯವಶ್ಯಕವಾಗಿರುವುದನ್ನು ಸರ್ಕಾರವು ಮನಗಂಡು, ಈ ಕೆಳಕಂಡಂತೆ ಔಷಧ ನಿಯಂತ್ರಣ ಇಲಾಖೆಯ ಅಮಲುಜಾರಿ ವಿಭಾಗವನ್ನು ಪುನರ್ ರಚಿಸಲು ತೀರ್ಮಾನಿಸಿ, ಈ ಕೆಳಗಿನಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಆಕುಕ 130 ಐಎಂಎಂ 2008, ಬೆಂಗಳೂರು, ದಿನಾಂಕ: 31ನೇ ಡಿಸೆಂಬರ್ 2008

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಮಹಾರಾಷ್ಟ್ರ, ಗುಜರಾತ್ ಮತ್ತು ಆಂಧ್ರ ಪ್ರದೇಶಗಳ ಮಾದರಿಯಲ್ಲಿ ಕರ್ನಾಟಕ ರಾಜ್ಯದಲ್ಲಿ ನಕಲಿ ಔಷಧಗಳನ್ನು ಪತ್ತೆ ಹಚ್ಚಲು ಮತ್ತು ಆ ಸಂಬಂಧ ಕಟ್ಟುನಿಟ್ಟಿನ ಕ್ರಮ ಜರುಗಿಸಲು ಕರ್ನಾಟಕ ರಾಜ್ಯದಲ್ಲಿನ ಔಷಧ ನಿಯಂತ್ರಣ ಇಲಾಖೆಯ ಅಮಲುಜಾರಿ ವಿಭಾಗವನ್ನು ಕೆಲವು ಹುದ್ದೆಗಳ ಸ್ಥಳಾಂತರದೊಂದಿಗೆ ಈ ಕೆಳಕಂಡಂತೆ ಕೂಡಲೇ ಹಾಗೂ ಮುಂದಿನ ಆದೇಶದವರೆಗೆ ಜಾರಿಯಲ್ಲಿರುವಂತೆ ಪುನರ್‌ರಚಿಸಿದೆ.

1. **"ರಾಜ್ಯ ಗುಪ್ತ ವಾರ್ತಾ ಶಾಖೆ"** ಯನ್ನು ಅಪರ ಔಷಧ ನಿಯಂತ್ರಕರ ನೇತೃತ್ವದಲ್ಲಿ ಈ ಕೆಳಕಂಡ ಹುದ್ದೆಗಳೊಂದಿಗೆ ಬೆಂಗಳೂರಿನ ಔಷಧ ನಿಯಂತ್ರಕರ ಕಛೇರಿಯಲ್ಲಿ ಕಾರ್ಯನಿರ್ವಹಿಸಲು ಸರ್ಕಾರವು ಅನುಮೋದನೆ ನೀಡಿದೆ. ಈ ಶಾಖೆಯು ಇಡೀ ರಾಜ್ಯದ ಕಾರ್ಯಕ್ಷೇತ್ರಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಹಿಸತಕ್ಕದ್ದು.

ರಾಜ್ಯ ಗುಪ್ತವಾರ್ತಾ ಶಾಖೆ, ಬೆಂಗಳೂರು

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ	ಸ್ಥಳಾಂತರಿಸಲಾದ ಹುದ್ದೆ ಹಾಗೂ ಕಛೇರಿಯ ವಿವರ
1	ಔಷಧ ಪರಿವೀಕ್ಷಕರು	1	ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬೆಂಗಳೂರು ಇಲ್ಲಿಂದ (2 ಹುದ್ದೆಗಳ ಪೈಕಿ 1 ಹುದ್ದೆ)
2	ಔಷಧ ಪರಿವೀಕ್ಷಕರು	1	ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಗುಲ್ಬರ್ಗಾ ಇಲ್ಲಿಂದ (2 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)
3	ಔಷಧ ಪರಿವೀಕ್ಷಕರು	1	ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಮೈಸೂರು ಇಲ್ಲಿಂದ (2 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)
4	ಔಷಧ ಪರಿವೀಕ್ಷಕರು	1	ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಹುಬ್ಬಳ್ಳಿ ಇಲ್ಲಿಂದ (2 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)
5	ಔಷಧ ಪರಿವೀಕ್ಷಕರು	1	ಔಷಧ ಬೆಲೆ ನಿಯಂತ್ರಣ ಕೋಶ, ಬೆಂಗಳೂರು ಇಲ್ಲಿಂದ (2 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)
6	ಕಛೇರಿ ಅಧೀಕ್ಷಕರು	1	ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿರುವ 6 ಹುದ್ದೆಗಳ ಪೈಕಿ 1 ಹುದ್ದೆ

ಕ್ರಮ ಸಂಖ್ಯೆ	ಹುದ್ದೆಯ ಪದನಾಮ	ಹುದ್ದೆಗಳ ಸಂಖ್ಯೆ	ಸ್ಥಳಾಂತರಿಸಲಾದ ಹುದ್ದೆ ಹಾಗೂ ಕಛೇರಿಯ ವಿವರ
7	ಪ್ರಥಮ ದರ್ಜೆ ಸಹಾಯಕರು	1	ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿರುವ 14 ಹುದ್ದೆಗಳ ಪೈಕಿ 1 ಹುದ್ದೆ
8	ದ್ವಿತೀಯ ದರ್ಜೆ ಸಹಾಯಕರು	1	ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿರುವ 9 ಹುದ್ದೆಗಳ ಪೈಕಿ 1 ಹುದ್ದೆ
9	ಬೆರಳಚ್ಚುಗಾರರು	1	ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿರುವ 6 ಹುದ್ದೆಗಳ ಪೈಕಿ 1 ಹುದ್ದೆ
10	ವಾಹನ ಚಾಲಕರು	1	ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿರುವ 4 ಹುದ್ದೆಗಳ ಪೈಕಿ 1 ಹುದ್ದೆ
11	ಗ್ರೂಪ್-ಡಿ	1	ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿರುವ 11 ಹುದ್ದೆಗಳ ಪೈಕಿ 1 ಹುದ್ದೆ

ಕೇಂದ್ರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುವ ಜೇಷ್ಠತೆಯಲ್ಲಿ ಹಿರಿಯರಾದ ಸಹಾಯಕ ಔಷಧ ನಿಯಂತ್ರಕರು ತಮ್ಮ ಇತರೆ ಕರ್ತವ್ಯಗಳೊಂದಿಗೆ, ಈ ಶಾಖೆಯಲ್ಲಿ ಕಾರ್ಯನಿರ್ವಹಿಸಲು ಆದೇಶಿಸಿದೆ.

2. ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬೆಂಗಳೂರು ಇದನ್ನು ಈ ಕೆಳಕಂಡ ಹುದ್ದೆಗಳೊಂದಿಗೆ ಬಳ್ಳಾರಿಗೆ ಸ್ಥಳಾಂತರಿಸಲು ಸರ್ಕಾರದ ಅನುಮೋದನೆಯನ್ನು ನೀಡಿದೆ.

ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬಳ್ಳಾರಿ

ಕ್ರಮ ಸಂಖ್ಯೆ	ಹುದ್ದೆಯ ಪದನಾಮ ಮತ್ತು ಸ್ಥಳಾಂತರಗೊಳಿಸಬೇಕಾದ ಕಛೇರಿ	ಹುದ್ದೆಗಳ ಸಂಖ್ಯೆ	ಸ್ಥಳಾಂತರಗೊಳಿಸಿದ ನಂತರದ ಹುದ್ದೆ ಹಾಗೂ ಕಛೇರಿಯ ವಿವರ
1	ಉಪ ಔಷಧ ನಿಯಂತ್ರಕರು, ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬೆಂಗಳೂರು	1	ಉಪ ಔಷಧ ನಿಯಂತ್ರಕರು, ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬಳ್ಳಾರಿ
2	ಔಷಧ ಪರಿವೀಕ್ಷಕರು, ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬೆಂಗಳೂರು	1	ಔಷಧ ಪರಿವೀಕ್ಷಕರು, ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬಳ್ಳಾರಿ
3	ಕಛೇರಿ ಅಧೀಕ್ಷಕರು, ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬೆಂಗಳೂರು	1	ಕಛೇರಿ ಅಧೀಕ್ಷಕರು, ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬಳ್ಳಾರಿ
4	ಪ್ರಥಮ ದರ್ಜೆ ಸಹಾಯಕರು, ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು	1	ಪ್ರಥಮ ದರ್ಜೆ ಸಹಾಯಕರು, ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬಳ್ಳಾರಿ
5	ಬೆರಳಚ್ಚುಗಾರರು, ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬೆಂಗಳೂರು	1	ಬೆರಳಚ್ಚುಗಾರರು, ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬಳ್ಳಾರಿ
6	ಗ್ರೂಪ್-ಡಿ ನೌಕರರು, ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬೆಂಗಳೂರು	1	ಗ್ರೂಪ್-ಡಿ ನೌಕರರು, ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬಳ್ಳಾರಿ

3. ಹಾಲಿ ಕಾರ್ಯನಿರ್ವಹಿಸುತ್ತಿರುವ ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಮೈಸೂರು, ಗುಲ್ಬರ್ಗಾ, ಹುಬ್ಬಳ್ಳಿ, ಔಷಧ ಬೆಲೆ ನಿಯಂತ್ರಣ ಕೋಶ, ಬೆಂಗಳೂರು ಮತ್ತು ಸ್ಥಳಾಂತರಗೊಂಡ ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಬಳ್ಳಾರಿ ಈ ಕಛೇರಿಗಳ ಹೆಸರುಗಳನ್ನು ಕೆಳಗಿನ ಕೋಷ್ಟಕದ ಕಲಂ (3)ರಲ್ಲಿ ನಮೂದಿಸಿದಂತೆ ಆಯಾ "ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ"ಗಳೆಂದು ಮರುಪದನಾಮ ಮಾಡಿದೆ. ಈ ಪ್ರಾದೇಶಿಕ ಕಛೇರಿಗಳಲ್ಲಿಯ ಉಪ ಔಷಧ ನಿಯಂತ್ರಕರುಗಳನ್ನು ಆಯಾ ಕಛೇರಿಯ ಮುಖ್ಯಸ್ಥರಾಗಿ ಮತ್ತು

ಬಟವಾಡೆ ಅಧಿಕಾರಿಗಳನ್ನಾಗಿ ನೇಮಕ ಮಾಡಿದೆ. ಆಯಾ ಪ್ರಾದೇಶಿಕ ಉಪ ಔಷಧ ನಿಯಂತ್ರಕರು ಕೋಷ್ಟಕದ (4)ನೇ ಕಲಂನಲ್ಲಿ ನಮೂದಿಸಿದಂತೆ ಕಾರ್ಯಕ್ಷೇತ್ರದಲ್ಲಿನ ವೃತ್ತ ಕಛೇರಿಗಳ ಮೇಲುಸ್ತುವಾರಿ ಅಧಿಕಾರವನ್ನು ಹೊಂದಿರುತ್ತಾರೆ.

ಕ್ರಮ ಸಂಖ್ಯೆ	ಈಗಿರುವ ಕಛೇರಿಯ ಹೆಸರು	ಮರುಪದನಾಮೀಕರಿಸಿದ ನಂತರದ ಕಛೇರಿಯ ಹೆಸರು	ಕಾರ್ಯಕ್ಷೇತ್ರ
1	ಔಷಧ ಬೆಲೆ ನಿಯಂತ್ರಣ ಕೋಶ, ಬೆಂಗಳೂರು	ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಬೆಂಗಳೂರು	1. ಬೆಂಗಳೂರು ಗ್ರಾಮಾಂತರ ವೃತ್ತ 2. ಚಿಕ್ಕಬಳ್ಳಾಪುರ ವೃತ್ತ 3. ಕೋಲಾರ ವೃತ್ತ 4. ತುಮಕೂರು ವೃತ್ತ 5. ರಾಮನಗರ ವೃತ್ತ 6. ಮಂಡ್ಯ ವೃತ್ತ
2	ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಮೈಸೂರು	ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಮೈಸೂರು	1. ಮೈಸೂರು ವೃತ್ತ-1 2. ಮೈಸೂರು ವೃತ್ತ-2 3. ಚಾಮರಾಜನಗರ ವೃತ್ತ 4. ಕೊಡಗು ವೃತ್ತ, ಮಡಿಕೇರಿ 5. ಹಾಸನ ವೃತ್ತ 6. ಮಂಗಳೂರು ವೃತ್ತ 7. ಉಡುಪಿ ವೃತ್ತ 8. ಚಿಕ್ಕಮಗಳೂರು ವೃತ್ತ
3	ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಹುಬ್ಬಳ್ಳಿ	ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಹುಬ್ಬಳ್ಳಿ-ಧಾರವಾಡ, ಹುಬ್ಬಳ್ಳಿ	1. ಧಾರವಾಡ ವೃತ್ತ, ಹುಬ್ಬಳ್ಳಿ 2. ಬೆಳಗಾಂ ವೃತ್ತ 3. ಉತ್ತರ ಕನ್ನಡ ವೃತ್ತ, ಕಾರವಾರ 4. ಶಿವಮೊಗ್ಗ ವೃತ್ತ 5. ಹಾವೇರಿ ವೃತ್ತ 6. ಗದಗ ವೃತ್ತ
4	ರಕ್ತನಿಧಿ ಮತ್ತು ಗುಪ್ತವಾರ್ತಾ ವಿಭಾಗ, ಗುಲ್ಬರ್ಗಾ	ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಗುಲ್ಬರ್ಗಾ	1. ಗುಲ್ಬರ್ಗಾ ವೃತ್ತ 2. ಬೀದರ್ ವೃತ್ತ 3. ಬಿಜಾಪುರ ವೃತ್ತ 4. ಬಾಗಲಕೋಟೆ ವೃತ್ತ
5	ರಕ್ತನಿಧಿ ಮತ್ತು ಗುಪ್ತ ವಾರ್ತಾ ವಿಭಾಗ, ಬಳ್ಳಾರಿ	ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಬಳ್ಳಾರಿ	1. ಬಳ್ಳಾರಿ ವೃತ್ತ 2. ಕೊಪ್ಪಳ ವೃತ್ತ 3. ರಾಯಚೂರು ವೃತ್ತ 4. ದಾವಣಗೆರೆ ವೃತ್ತ 5. ಚಿತ್ರದುರ್ಗ ವೃತ್ತ

ಬೆಂಗಳೂರು ನಗರ ವೃತ್ತ ಕಛೇರಿಗಳಿಗೆ ಸಂಬಂಧಪಟ್ಟಂತೆ, ಮೇಲುಸ್ತುವಾರಿ ಕೆಲಸ ಕಾರ್ಯಗಳನ್ನು ಕೇಂದ್ರ ಸ್ಥಾನದಲ್ಲಿ ಇರುವ ಉಪ ಔಷಧ ನಿಯಂತ್ರಕರುಗಳಿಗೆ, ಔಷಧ ನಿಯಂತ್ರಕರು ತಮ್ಮ ಕಛೇರಿ ಆದೇಶದ ಮುಖಾಂತರ ಕಾಲಕಾಲಕ್ಕೆ ಕಾರ್ಯಕ್ಷೇತ್ರವನ್ನು ನಿಗದಿಪಡಿಸಲು ಅಧಿಕಾರ ನೀಡಿದೆ.

4. ರಾಜ್ಯ ಗುಪ್ತ ವಾರ್ತಾ ಶಾಖೆ, ಔಷಧ ನಿಯಂತ್ರಕರ ಕಛೇರಿ, ಬೆಂಗಳೂರು ಮತ್ತು ಬೆಂಗಳೂರು, ಮೈಸೂರು, ಹುಬ್ಬಳ್ಳಿ, ಗುಲ್ಬರ್ಗ, ಬಳ್ಳಾರಿಯ ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿಗಳಲ್ಲಿ ಕೆಲಸ ನಿರ್ವಹಿಸುವ ಔಷಧ ಪರಿವೀಕ್ಷಕ ಹುದ್ದೆಗಳನ್ನು "ಔಷಧ ಪರಿವೀಕ್ಷಕ (ಗುಪ್ತವಾರ್ತೆ)" ಎಂದು ಮರುಪದನಾಮೀಕರಿಸಿದೆ.

5. ರಾಜ್ಯದ ಎಲ್ಲಾ ಪ್ರಾದೇಶಿಕ ಹಾಗೂ ವೃತ್ತ ಕಛೇರಿಗಳಲ್ಲಿ ವಿವಿಧ ವೃಂದದ ಹುದ್ದೆಗಳನ್ನು ಕಾರ್ಯದ ಒತ್ತಡಕ್ಕೆ ಅನುಗುಣವಾಗಿ ಹಾಗೂ ಏಕರೂಪವಾಗಿರುವಂತೆ, ಈ ಕೆಳಗಿನ ಕೋಷ್ಟಕದಲ್ಲಿ ನಮೂದಿಸಲಾದ ವಿವಿಧ ವೃಂದದ ಹುದ್ದೆಗಳನ್ನು ಸ್ಥಳಾಂತರಿಸಲು ಸರ್ಕಾರದ ಅನುಮೋದನೆ ನೀಡಿದೆ.

ಕ್ರಮ ಸಂಖ್ಯೆ	ಸ್ಥಳಾಂತರಗೊಳಿಸುವ ಹಾಲಿ ಹುದ್ದೆ ಹಾಗೂ ಕಛೇರಿ	ಹುದ್ದೆಗಳ ಸಂಖ್ಯೆ	ಸ್ಥಳಾಂತರಗೊಳಿಸಲಾದ ಕಛೇರಿ
1	ಕಿರಿಯ ಕೆಮಿಕಲ್ ಎಕ್ಸ್‌ಪರ್ಟ್, (ಮರುಪದನಾಮೀಕರಿಸಿದ ಜೂನಿಯರ್ ಸೈಂಟಿಫಿಕ್ ಆಫೀಸರ್), ರಾಮನಗರ ವೃತ್ತ, ರಾಮನಗರ	1	ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು
2	ಕಿರಿಯ ರಸಾಯನತಜ್ಞ, (ಮರುಪದನಾಮೀಕರಿಸಿದ ಜೂನಿಯರ್ ಸೈಂಟಿಫಿಕ್ ಆಫೀಸರ್), ಚಿಕ್ಕಬಳ್ಳಾಪುರ ವೃತ್ತ, ಚಿಕ್ಕಬಳ್ಳಾಪುರ	1	ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು
3	ಕಛೇರಿ ಅಧೀಕ್ಷಕರು, ಔಷಧ ಬೆಲೆ ನಿಯಂತ್ರಣ ಕೋಶ, ಬೆಂಗಳೂರು (ಇಲ್ಲಿರುವ 2 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಕಛೇರಿ ಅಧೀಕ್ಷಕರು, ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಗುಲ್ಬರ್ಗಾ
4	ಕಛೇರಿ ಅಧೀಕ್ಷಕರು, ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು (ಇಲ್ಲಿರುವ 3 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಕಛೇರಿ ಅಧೀಕ್ಷಕರು, ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಮೈಸೂರು
5	ಪ್ರಥಮ ದರ್ಜೆ ಸಹಾಯಕರು, ಕೇಂದ್ರ ಕಛೇರಿ, ಬೆಂಗಳೂರು (ಇಲ್ಲಿರುವ 14 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಪ್ರಥಮ ದರ್ಜೆ ಸಹಾಯಕರು, ಸಹಾಯಕ ಔಷಧ ನಿಯಂತ್ರಕರ ಕಛೇರಿ, ಬೆಂಗಳೂರು ವೃತ್ತ-6.
6	ಪ್ರಥಮ ದರ್ಜೆ ಸಹಾಯಕರು, ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು (ಇಲ್ಲಿರುವ 8 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಪ್ರಥಮ ದರ್ಜೆ ಸಹಾಯಕರು, ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಬೆಂಗಳೂರು
7	ಪ್ರಥಮ ದರ್ಜೆ ಸಹಾಯಕರು, ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು (ಇಲ್ಲಿರುವ 8 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಪ್ರಥಮ ದರ್ಜೆ ಸಹಾಯಕರು, ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಗುಲ್ಬರ್ಗಾ
8	ಪ್ರಥಮ ದರ್ಜೆ ಸಹಾಯಕರು, ಪರೀಕ್ಷಾ ಪ್ರಾಧಿಕಾರ ಮಂಡಳಿ, ಬೆಂಗಳೂರು (ಇಲ್ಲಿರುವ 8 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಪ್ರಥಮ ದರ್ಜೆ ಸಹಾಯಕರು, ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಹುಬ್ಬಳ್ಳಿ
9	ಪ್ರಥಮ ದರ್ಜೆ ಸಹಾಯಕರು, ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು (ಇಲ್ಲಿರುವ 7 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಪ್ರಥಮ ದರ್ಜೆ ಸಹಾಯಕರು, ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಮೈಸೂರು
10	ದ್ವಿತೀಯ ದರ್ಜೆ ಸಹಾಯಕರು, ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು (ಇಲ್ಲಿರುವ 7 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ದ್ವಿತೀಯ ದರ್ಜೆ ಸಹಾಯಕರು, ಸಹಾಯಕ ಔಷಧ ನಿಯಂತ್ರಕರ ಕಛೇರಿ, ಹಾಸನ ವೃತ್ತ

11	ಬೆರಳಚ್ಚುಗಾರರು, ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು (ಇಲ್ಲಿರುವ 3 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಬೆರಳಚ್ಚುಗಾರರು, ಸಹಾಯಕ ಔಷಧ ನಿಯಂತ್ರಕರ ಕಛೇರಿ, ಬೆಂಗಳೂರು ವೃತ್ತ-6
12	ಗ್ರೂಪ್-ಡಿ ನೌಕರರು, ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು (ಇಲ್ಲಿರುವ 6 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಗ್ರೂಪ್-ಡಿ ನೌಕರರು, ಉಪ ಔಷಧ ನಿಯಂತ್ರಕರ ಪ್ರಾದೇಶಿಕ ಕಛೇರಿ, ಗುಲ್ಬರ್ಗಾ
13	ಗ್ರೂಪ್-ಡಿ ನೌಕರರು, ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು (ಇಲ್ಲಿರುವ 6 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಗ್ರೂಪ್-ಡಿ ನೌಕರರು, ಸಹಾಯಕ ಔಷಧ ನಿಯಂತ್ರಕರ ಕಛೇರಿ, ಬೆಂಗಳೂರು ವೃತ್ತ-6
14	ಗ್ರೂಪ್-ಡಿ ನೌಕರರು, ಔಷಧ ಪರೀಕ್ಷಾ ಪ್ರಯೋಗಾಲಯ, ಬೆಂಗಳೂರು (ಇಲ್ಲಿರುವ 6 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಗ್ರೂಪ್-ಡಿ ನೌಕರರು, ಸಹಾಯಕ ಔಷಧ ನಿಯಂತ್ರಕರ ಕಛೇರಿ, ಗದಗ ವೃತ್ತ
15	ಗ್ರೂಪ್-ಡಿ ನೌಕರರು, ಔಷಧ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು (ಇಲ್ಲಿರುವ 6 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಗ್ರೂಪ್-ಡಿ ನೌಕರರು, ಸಹಾಯಕ ಔಷಧ ನಿಯಂತ್ರಕರ ಕಛೇರಿ, ಬೆಂಗಳೂರು ಗ್ರಾಮಾಂತರ ವೃತ್ತ
16	ಗ್ರೂಪ್-ಡಿ ನೌಕರರು, ಔಷಧ ಸರ್ಕಾರಿ ಔಷಧ ವಿಜ್ಞಾನ ಮಹಾವಿದ್ಯಾಲಯ, ಬೆಂಗಳೂರು (ಇಲ್ಲಿರುವ 6 ಹುದ್ದೆಗಳ ಪೈಕಿ ಖಾಲಿ ಇರುವ 1 ಹುದ್ದೆ)	1	ಗ್ರೂಪ್-ಡಿ ನೌಕರರು, ಸಹಾಯಕ ಔಷಧ ನಿಯಂತ್ರಕರ ಕಛೇರಿ, ಕೊಪ್ಪಳ ವೃತ್ತ
17	ಗ್ರೂಪ್-ಡಿ ನೌಕರರು, ಸಹಾಯಕ ಔಷಧ ನಿಯಂತ್ರಕರ ಕಛೇರಿ, ಮಂಗಳೂರು ವೃತ್ತ, ಮಂಗಳೂರು (ಇಲ್ಲಿರುವ 2 ಹುದ್ದೆಗಳ ಪೈಕಿ 1 ಹುದ್ದೆಯನ್ನು ಸ್ಥಳಾಂತರಿಸುವುದು)	1	ಗ್ರೂಪ್-ಡಿ ನೌಕರರು, ಸಹಾಯಕ ಔಷಧ ನಿಯಂತ್ರಕರ ಕಛೇರಿ, ಉಡುಪಿ ವೃತ್ತ

6. ಅಪರ ಔಷಧ ನಿಯಂತ್ರಕರು, ಔಷಧ ನಿಯಂತ್ರಣ ಇಲಾಖೆ ಇವರನ್ನು ಅವರ ಕರ್ತವ್ಯಗಳೊಂದಿಗೆ ಔಷಧ ನಿಯಂತ್ರಣ ಇಲಾಖೆಗೆ ಸಂಬಂಧಿಸಿದಂತೆ ಎಲ್ಲಾ ಅಧೀನ ಅಧಿಕಾರಿ ಹಾಗೂ ಸಿಬ್ಬಂದಿಗಳ ಕಾರ್ಯಚಟುವಟಿಕೆಗಳ ಮೇಲೆ ನಿಗಾ ವಹಿಸಲು "ಜಾಗೃತ ತನಿಖಾಧಿಕಾರಿ" (Vigilance Officer)ಯಾಗಿ ಕಾರ್ಯನಿರ್ವಹಿಸಲು ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 250

ಕೆ. ಕೃಷ್ಣಮೂರ್ತಿ

ಸರ್ಕಾರದ ಉಪ ಕಾರ್ಯದರ್ಶಿ-2,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಜಲಸಂಪನ್ಮೂಲ ಸಚಿವಾಲಯ

ವಿಷಯ : ರಾಜ್ಯ ಮಟ್ಟದ ಅಣೆಕಟ್ಟು ಸುರಕ್ಷತಾ ಸಮಿತಿಯ ಪುನರ್ ರಚನೆ ಕುರಿತಂತೆ.

ಓದಲಾಗಿದೆ :
1. ಸರ್ಕಾರಿ ಆದೇಶ ಸಂಖ್ಯೆ: ನೀಇ 74 ಕಾವಿಇ 99, ಬೆಂಗಳೂರು, ದಿನಾಂಕ 13.9.2000.
2. ಸರ್ಕಾರಿ ತಿದ್ದುಪಡಿ ಆದೇಶ ಸಂಖ್ಯೆ: ನೀಇ 15 ಇಂಸಂಕೇ 2000, ಬೆಂಗಳೂರು ದಿ: 24.5.2001.
3. ಸರ್ಕಾರಿ ಆದೇಶ ಸಂಖ್ಯೆ: ನೀಇ 15 ಇಂಸಂಕೇ 2000, ಬೆಂಗಳೂರು, ದಿನಾಂಕ 5.9.2001.
4. ಸರ್ಕಾರಿ ಪತ್ರ ಸಂಖ್ಯೆ: ಜಸಂಇ 15 ಇಂಸಂಕೇ 2005, ದಿನಾಂಕ 19.4.2005.
5. ಶ್ರೀ ಎಸ್. ವಿಶ್ವನಾಥ್, ನಿವೃತ್ತ ಪ್ರಧಾನ ಇಂಜಿನಿಯರ್ ರವರ ಪತ್ರ ದಿ: 20.10.2005.
6. ಸರ್ಕಾರದ ಪತ್ರ ಸಂಖ್ಯೆ: ಜಸಂಇ 39 ಇಂಸಂಕೇ 2005, ದಿ: 23.11.2005.
7. ನಿರ್ದೇಶಕರು, ಕ.ಇಂ.ಸಂ.ಕೇ., ಕೆ.ಆರ್. ಸಾಗರ ಇವರ ಪತ್ರ ಸಂಖ್ಯೆ: 2393/26.8.2008 ಹಾಗೂ 3257/17.10.2008.

ಪ್ರಸ್ತಾವನೆ :

ಮೇಲಿನ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ರಾಜ್ಯ ಮಟ್ಟದ ಅಣೆಕಟ್ಟು ಸುರಕ್ಷತಾ ಸಮಿತಿಯನ್ನು ಪುನರ್ ರಚಿಸಲಾಗಿತ್ತು. ಕ್ರಮ ಸಂಖ್ಯೆ (2) ಹಾಗೂ (3) ರನ್ವಯ ಮೇಲಿನ ಸರ್ಕಾರಿ ಆದೇಶದಲ್ಲಿ ಕೆಲ ತಿದ್ದುಪಡಿಗಳನ್ನು ಸಹ ಮಾಡಲಾಗಿತ್ತು. ದಿ: 13.9.2000ರ ಆದೇಶದಲ್ಲಿನ ಕ್ರಮ ಸಂಖ್ಯೆ (5)ರಲ್ಲಿರುವ ಸದಸ್ಯರಾದ ಶ್ರೀ ಎಸ್. ವಿಶ್ವನಾಥ್, ಪ್ರಧಾನ ಇಂಜಿನಿಯರ್ (ನಿವೃತ್ತ) ರವರು ಮೇಲೆ ಓದಲಾದ ಪತ್ರ (5)ರನ್ವಯ ಅನಾರೋಗ್ಯದ ನಿಮಿತ್ತವಾಗಿ SLDSCಯ ಸದಸ್ಯತ್ವಕ್ಕೆ ತಮ್ಮ ರಾಜೀನಾಮೆಯನ್ನು ಸಲ್ಲಿಸಿರುವರು. ಸದರಿಯವರ ರಾಜೀನಾಮೆಯನ್ನು ಮೇಲೆ ಓದಲಾದ ಕ್ರಮ ಸಂಖ್ಯೆ (6)ರ ಸರ್ಕಾರಿ ಪತ್ರದನ್ವಯ ಅಂಗೀಕರಿಸಿ ಸ್ವೀಕೃತಿ ನೀಡಲಾಗಿದೆ.

2. ಶ್ರೀ ಎಸ್. ವಿಶ್ವನಾಥ್ ರವರ ರಾಜೀನಾಮೆಯಿಂದ ಖಾಲಿಯಾದ ಸ್ಥಾನಕ್ಕೆ ಶ್ರೀ ಬಿ.ಎಂ. ರಾಮೇಗೌಡ, (Rtd) Joint Director, C.W.P.RS. Pune ರವರ ಸದಸ್ಯತ್ವ ಪಡೆಯಲು ತಮ್ಮ ಇಚ್ಛೆಯನ್ನು ವ್ಯಕ್ತಪಡಿಸಿರುವರೆಂದು ಸದರಿಯವರ ಇಚ್ಛೆಯನ್ನು ಪರಿಗಣಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (7)ರಲ್ಲಿಯ ಪತ್ರಗಳ ಮೂಲಕ ನಿರ್ದೇಶಕರು, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ ಹಾಗೂ ಸದಸ್ಯ ಕಾರ್ಯದರ್ಶಿ, SLDSCರವರು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

3. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿದ ನಂತರ ಮಾನ್ಯ ಮುಖ್ಯಮಂತ್ರಿ ಹಾಗೂ ಜಲಸಂಪನ್ಮೂಲ ಸಚಿವರ ಅನುಮೋದನೆಯನ್ನು ಪಡೆಯಲಾಗಿದೆ.

4. ರಾಜ್ಯದ ವಿವಿಧ ಇಲಾಖೆಗಳಲ್ಲಿ ಆಗಿರುವ ಕೆಲವು ಆಡಳಿತಾತ್ಮಕ ಬದಲಾವಣೆಯ ಹಿನ್ನೆಲೆಯಲ್ಲಿ ಪ್ರಸ್ತುತ ಚಾಲ್ತಿಯಲ್ಲಿರುವ ಈ ಸಮಿತಿಯನ್ನು ಪುನರ್ ರಚಿಸಲು ನಿರ್ದೇಶಕರು, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ ಹಾಗೂ ಸದಸ್ಯ ಕಾರ್ಯದರ್ಶಿ, SLDSCರವರು ಮೇಲೆ ಓದಲಾದ ಕ್ರಮ ಸಂಖ್ಯೆ (7)ರ ಪತ್ರದಲ್ಲಿ ಕೋರಿರುತ್ತಾರೆ.

5. ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ: ಜಸಂಇ 3 ಅಭಯೋ 2008, ಬೆಂಗಳೂರು, ದಿನಾಂಕ: 7ನೇ ಜನವರಿ 2009

1	ಸರ್ಕಾರದ ಕಾರ್ಯದರ್ಶಿಗಳು, ಜಲಸಂಪನ್ಮೂಲ ಇಲಾಖೆ, ವಿಕಾಸಸೌಧ, ಬೆಂಗಳೂರು	ಅಧ್ಯಕ್ಷರು
2	ಮುಖ್ಯ ಇಂಜಿನಿಯರ್, ಜಲಸಂಪನ್ಮೂಲ ಅಭಿವೃದ್ಧಿ ಸಂಸ್ಥೆ, ಆನಂದರಾವ್ ವೃತ್ತ, ಬೆಂಗಳೂರು-560 009	ಸದಸ್ಯರು
3	ಮುಖ್ಯ ಇಂಜಿನಿಯರ್, ಬಿಡಬ್ಲ್ಯೂಎಸ್‌ಎಸ್‌ಬಿ, ಸಿಬಿಎಬಿ ಕಾಂಪ್ಲೆಕ್ಸ್, ಬೆಂಗಳೂರು-560 009	ಸದಸ್ಯರು
4	ಶ್ರೀ ಎಸ್.ಆರ್. ಉಜ್ಜನಿಕೊಪ, ಪ್ರ.ಇಂ. (ನಿವೃತ್ತ), ನಂ. 9301, ಸೆಕ್ಟರ್ ನಂ.2, ಮಹಾಂತೇಶ ನಗರ, ಬೆಳಗಾಂ-590 016	ಸದಸ್ಯರು
5	ಶ್ರೀ ಬಿ.ಎಂ. ರಾಮೇಗೌಡ, ಜಂಟಿ ನಿರ್ದೇಶಕರು (ನಿವೃತ್ತ), C.W.P.R.S. ಬಿ-5, ಮಾಂಟ್ ವರ್ಟ್-1 ಸಸ್ ರೋಡ್, ಪಾಶಾನ್ ಪುಣೆ-411 021 ಮತ್ತು ಬಿ-204, ಗಿರಿ ಅಪಾರ್ಟ್‌ಮೆಂಟ್ಸ್ ಜೆ.ಪಿ.ನಗರ 2ನೇ ಫೇಸ್, ಬೆಂಗಳೂರು-560 078	ಸದಸ್ಯರು

6	ಶ್ರೀ ಆರ್.ಹೆಚ್. ಸಾವಕಾರ, ನಿರ್ದೇಶಕರು (ನಿವೃತ್ತ), ಗಣಿ ಮತ್ತು ಭೂವಿಜ್ಞಾನ, 292, 5ನೇ ಬ್ಲಾಕ್, 38ನೇ 'ಎ' ಕ್ರಾಸ್, 10ನೇ ಮೈನ್, ಜಯನಗರ, ಬೆಂಗಳೂರು–560 041	ಸದಸ್ಯರು
7	ಮುಖ್ಯ ಇಂಜಿನಿಯರ್, ನೀರಾವರಿ (ದಕ್ಷಿಣ) ವಲಯ, ಪಬ್ಲಿಕ್ ಅಫೀಸಸ್ ಬಿಲ್ಡಿಂಗ್, ಮೈಸೂರು–570 001	ಸದಸ್ಯರು
8	ಮುಖ್ಯ ಇಂಜಿನಿಯರ್, ಹೇಮಾವತಿ ಯೋಜನಾ ವಲಯ, ಗೊರೂರು–578 120	ಸದಸ್ಯರು
9	ಮುಖ್ಯ ಇಂಜಿನಿಯರ್, ಹೇಮಾವತಿ ಕಾಲುವೆ ವಲಯ, ಕುಣಿಗಲ್ ರಸ್ತೆ, ಅಲ್ ಸೆಟ್ಟ್ಯಾಕೆರೆ ಪಾಳ್ಯ, ತುಮಕೂರು–572 102	ಸದಸ್ಯರು
10	ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ದ) ಕೆ.ಆರ್.ವೃತ್ತ, ಬೆಂಗಳೂರು–560 001	ಸದಸ್ಯರು
11	ಮುಖ್ಯ ಇಂಜಿನಿಯರ್, ಕೆಯುಡಬ್ಲ್ಯೂಎಸ್ ಅಂಡ್ ಡಿಬಿ ಜಲ ಭವನ, ಬನ್ನೇರುಘಟ್ಟ ಮೈನ್ ರಸ್ತೆ, ಬೆಂಗಳೂರು–560 029	ಸದಸ್ಯರು
12	ಮುಖ್ಯ ಇಂಜಿನಿಯರ್, (ಸಿವಿಲ್ ಡಿಸೈನ್ಸ್) ಕೆಪಿಸಿಎಲ್, ಸುದರ್ಶನ್ ಕಾಂಪ್ಲೆಕ್ಸ್, ಶೇಷಾದ್ರಿ ರಸ್ತೆ, ಬೆಂಗಳೂರು–560 029	ಸದಸ್ಯರು
13	ಮುಖ್ಯ ಇಂಜಿನಿಯರ್, ಕನೀನಿನಿ ತುಂಗಾ ಮೇಲ್ದಂಡೆ ಯೋಜನೆ, ಎಸ್.ಪಿ.ಎಂ. ರಸ್ತೆ, ಶಿವಮೊಗ್ಗ–577 202	ಸದಸ್ಯರು
14	ಮುಖ್ಯ ಇಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್–583 233	ಸದಸ್ಯರು
15	ಮುಖ್ಯ ಇಂಜಿನಿಯರ್, ಕನೀನಿನಿ ನೀರಾವರಿ (ಉತ್ತರ) ವಲಯ, ಕ್ಲಬ್ ರಸ್ತೆ, ಬೆಳಗಾವಿ–590 001	ಸದಸ್ಯರು
16	ಮುಖ್ಯ ಇಂಜಿನಿಯರ್, ನೀರಾವರಿ ಯೋಜನಾ ವಲಯ, ಗುಲ್ಬರ್ಗಾ–585 102	ಸದಸ್ಯರು
17	ಮುಖ್ಯ ಇಂಜಿನಿಯರ್, ಕೃ.ಭಾ.ಜ.ನಿ.ನಿ. ಕೃಷ್ಣ ಮೇಲ್ದಂಡೆ ಯೋಜನೆ, ಕಾರ್ಯ ಮತ್ತು ನಿರ್ವಹಣೆ ವಲಯ, ನಾರಾಯಣಪುರ–585 219	ಸದಸ್ಯರು
18	ಮುಖ್ಯ ಇಂಜಿನಿಯರ್, ಕೃ.ಭಾ.ಜ.ನಿ.ನಿ. ಕೃಷ್ಣ ಮೇಲ್ದಂಡೆ ಯೋಜನೆ, ಅಣೆಕಟ್ಟು ವಲಯ, ಆಲಮಟ್ಟಿ–585 201	ಸದಸ್ಯರು
19	ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ (ಉತ್ತರ) ವಲಯ, ಅಥಣಿ ರಸ್ತೆ, ಬಿಜಾಪುರ–586 103	ಸದಸ್ಯರು
20	ಮುಖ್ಯ ಇಂಜಿನಿಯರ್, ಮಲಪ್ರಭಾ ಯೋಜನಾ ವಲಯ, ಕಾಲೇಜು ರಸ್ತೆ, ಧಾರವಾಡ–580 001	ಸದಸ್ಯರು
21	ಮುಖ್ಯ ಇಂಜಿನಿಯರ್, ವರಾಹಿ ಯೋಜನಾ ವಲಯ, ಸಿದ್ಧಾಪುರ–581 355	ಸದಸ್ಯರು
22	ಮುಖ್ಯ ಇಂಜಿನಿಯರ್, ಕಾಲುವೆ ವಲಯ–2, ಕೆಂಭಾವಿ–585 216	ಸದಸ್ಯರು
23	ಮುಖ್ಯ ಇಂಜಿನಿಯರ್, ಕೆಯುಡಬ್ಲ್ಯೂಎಸ್ ಅಂಡ್ ಡಿಬಿ ಉತ್ತರ, D.C. Compound, ಧಾರವಾಡ–580 001	ಸದಸ್ಯರು

24 ಮುಖ್ಯ ಇಂಜಿನಿಯರ್, ಸದಸ್ಯರು
ನೀರಾವರಿ ಶಾಖೆ, ತುಂಗಭದ್ರಾ ಬೋರ್ಡ್, ತುಂಗಭದ್ರಾ ಡ್ಯಾಂ-583 225

25 ಅಡಿಷನಲ್ ಜನರಲ್ ಮ್ಯಾನೇಜರ್, ಸದಸ್ಯರು
ಮೆ॥ ಕೆ.ಐ.ಓ.ಸಿ.ಎಲ್., ಕುದುರೆಮುಖ-577 142

26 ಅಧೀಕ್ಷಕ ಅಭಿಯಂತರರು, ಸದಸ್ಯರು
ಉಸ್ತುವಾರಿ ಮತ್ತು ಮೌಲ್ಯಮಾಪನ, ಬಸವ ಭವನ, ಬಸವೇಶ್ವರ ರಸ್ತೆ, ಬೆಂಗಳೂರು-560 001

27 ನಿರ್ದೇಶಕರು, ಸದಸ್ಯ ಕಾರ್ಯದರ್ಶಿಗಳು
ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೆ.ಆರ್. ಸಾಗರ-571 607

2. ಕ್ರಮ ಸಂಖ್ಯೆ 4, 5 ಮತ್ತು 6 ರಲ್ಲಿರುವ ಸದಸ್ಯರುಗಳಿಗೆ ಸಭೆ ನಡೆಯುವ ದಿನಗಳಲ್ಲಿ ಸರ್ಕಾರಿ ಆದೇಶ ಸಂಖ್ಯೆ ಎಫ್‌ಡಿ 2 ಎಸ್‌ಆರ್‌ಎ 99, ದಿ: 22.4.1999ರಂತೆ ಪ್ರಯಾಣ ಭತ್ಯೆ, ದಿನಭತ್ಯೆ ಮತ್ತು ಉಪಸ್ಥಿತಿ ಭತ್ಯೆಯನ್ನು ನೀಡುವುದು. ಈ ಸಂಬಂಧದ ಬಿಲ್ಲುಗಳನ್ನು ನಿರ್ದೇಶಕರು, ಕರ್ನಾಟಕ ಇಂಜಿನಿಯರಿಂಗ್ ಸಂಶೋಧನಾ ಕೇಂದ್ರ, ಕೆ.ಆರ್.ಎಸ್. ರವರು ಪಾವತಿಸಲು ಕ್ರಮ ಕೈಗೊಳ್ಳುವುದು.

3. ಈ ಮೇಲಿನ ಆದೇಶವು ಮುಂದಿನ ಆದೇಶದವರೆಗೆ ಜಾರಿಯಲ್ಲಿರುತ್ತದೆ. ಹಾಗೂ ಈ ವಿಷಯ ಕುರಿತು, ಈ ಹಿಂದೆ ಹೊರಡಿಸಲಾದ ಎಲ್ಲಾ ಸರ್ಕಾರದ ಆದೇಶಗಳನ್ನು ಅಧಿಕ್ರಮಿಸಲಾಗಿದೆ (Superceded).

4. ಈ ಸಮಿತಿಯ ಕಾರ್ಯವ್ಯಾಪ್ತಿ, ನಿಬಂಧನೆಗಳು ಹಾಗೂ ಷರತ್ತುಗಳು ಇದರೊಡನೆ ಲಗತ್ತಿಸಿರುವ ಪಟ್ಟಿಯಲ್ಲಿ ವಿವರಿಸಿರುವಂತೆ ಇರುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಹೆಚ್. ಪರಶುರಾಮ್
ಸರ್ಕಾರದ ಉಪ ಕಾರ್ಯದರ್ಶಿ (ಕೆ.ಬಿ.ಜೆ.ಎನ್.)
ಜಲಸಂಪನ್ಮೂಲ ಇಲಾಖೆ

ANNEXURE TO G.O. NO. WRD 03 DSP 2008, DATED 7.1.2009

The terms of reference of the State Level Dam Safety Committee shall be as under:

1. To prepare and update checklists for the preparation of inventory of Dams and to compile the history of each Dam.
2. To review the particulars furnished by the Chief Engineers on the checklist and to identify such of the areas, which require special attention of the committee and offer, advise thereon.
3. To inspect such of the identified areas and to forward its findings and recommendations to the Government for taking further action.
4. To suggest remedial measures, follow-up actions subsequent to the inspection by the committee and to forward its report to Government.
5. To obtain required information directly from the Chief Engineers concerned of large Dams in Karnataka and to take action on above points.
6. To co-opt official members from any Department of Government of Karnataka, if need be.
7. The Member Secretary shall act as a Liaison Officer between the Government and the Committee and shall forward monthly reports, the inspection reports and such other reports formulated by the committee. The Member Secretary shall keep the Secretary, Water Resources Department informed about the latest activities and developments of the committee.
8. The Member Secretary shall arrange for periodical meetings and emergency meetings if required at the instance of the Chairman or otherwise either at State Headquarters or at K.R. Sagar or at the project sites looking to the necessity and convenience.
9. The final recommendations of the committee (SLDSC) with probable financial implications of such recommendations will be placed before the State Cabinet for its decision

H. PARASHURAM
Deputy Secretary, (KBJNL),
Water Resources Department.

PR. 318

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಸಚಿವಾಲಯ

ವಿಷಯ : ಬೆಂಗಳೂರು ಮೈಸೂರು ರಾಜ್ಯ ಹೆದ್ದಾರಿ-17ರ ಭಾಗವಾದ ಬೆಂಗಳೂರು-ಮದ್ದೂರು ನಾಲ್ಕು ಪಥದ ರಸ್ತೆಯನ್ನು ವರ್ಷಾಸನ ಆಧಾರದ ಮೇಲೆ (ಅನ್ಯೂಟಿ ಸ್ಕೀಮ್) ಕೈಗೊಂಡಿರುವ ಮೆ:ಬೃಂದಾವನ್ ಇನ್ ಫ್ರಾಸ್ಟ್ರಕ್ಚರ್ ಕಂಪನಿ ಲಿ. ರವರಿಗೆ 7ನೇ ಅರ್ಧ ವರ್ಷಾಸನವನ್ನು ಪಾವತಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ :ಲೋಇ 96 ಇಎಪಿ 2003, ದಿನಾಂಕ :15.3.2003.
2. ಕನ್ಸಿಷನ್ ಅಗ್ರಿಮೆಂಟ್ ದಿನಾಂಕ :22.1.2004.
3. ಸರ್ಕಾರದ ಸಮಸಂಖ್ಯೆ ಆದೇಶ ದಿನಾಂಕ :16.4.2009
4. ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ :ಕೆ.ಆರ್.ಡಿ.ಸಿ.ಎಲ್/ಎಂಡಿ/2009-10/1530 ದಿನಾಂಕ :16.9.2009.

ಪ್ರಸ್ತಾವನೆ:

ಓದಲಾದ (1)ರಲ್ಲಿನ ಸರ್ಕಾರಿ ಆದೇಶದಲ್ಲಿ, ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿ-17ನ್ನು ನಾಲ್ಕು ಪಥದ ರಸ್ತೆಯನ್ನಾಗಿ ಪರಿವರ್ತಿಸುವಲ್ಲಿನ ಬೆಂಗಳೂರಿನಿಂದ ಮದ್ದೂರುವರೆಗೆ ಇರುವ ಮೊದಲನೇ ಪ್ಯಾಕೇಜ್ ಗುತ್ತಿಗೆಯನ್ನು ಮೆ:ಕೆ.ಎಂ.ಸಿ. ಕನ್ಸ್‌ಟ್ರಕ್ಷನ್ಸ್, ಮೆ:ನಾಗರ್ಜುನ ಕನ್ಸ್‌ಟ್ರಕ್ಸನ್ಸ್, ಲಿ. ಮತ್ತು ಮೆ:ಮೈಟಾಸ್ ಕನ್ಸ್‌ಟ್ರಕ್ಷನ್ಸ್ ಕಂಪನಿ (ಜೆ.ವಿ) ಇವರಿಗೆ ವಹಿಸಿದ್ದು, ಅರ್ಧವಾರ್ಷಿಕ ಪಾವತಿ ಮೊತ್ತವಾದ ರೂ. 29.70 ಕೋಟಿ ಯೋಜನೆಯು ಮುಗಿದ ಮೇಲೆ ಎಂಟು ವರ್ಷಗಳು ಪಾವತಿ ಮಾಡಲು ಆದೇಶ ಹೊರಡಿಸಲಾಗಿತ್ತು.

ಓದಲಾದ (2)ರಲ್ಲಿನ ದಿನಾಂಕದಂದು ಮೆ:ಬೃಂದಾವನ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಲಿಮಿಟೆಡ್ (ಕನ್ಸೆಷನ್ಯೆರ್) ಹೆಸರಿನಲ್ಲಿ ಸ್ಪೆಷಲ್ ಪ್ರಾಜೆಕ್ಟ್ ವೆಹಿಕಲ್ ನಂತೆ ಕನ್ಸೆಷನ್ ಅಗ್ರಿಮೆಂಟ್ ಮಾಡಿಕೊಳ್ಳಲಾಗಿದೆ.

ಓದಲಾದ (3)ರಲ್ಲಿನ ಸರ್ಕಾರಿ ಆದೇಶ ದಿನಾಂಕ:16.4.2009ರಲ್ಲಿ ಆರನೇ ಅನ್ಯೂಟಿ ಮೊತ್ತವಾದ ರೂ. 29.70 ಕೋಟಿಗಳನ್ನು ಮೆ:ಬೃಂದಾವನ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಲಿಮಿಟೆಡ್ ರವರಿಗೆ ಪಾವತಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಿ ಆದೇಶ ಹೊರಡಿಸಲಾಗಿತ್ತು. ದಿನಾಂಕ: 21.10.2006 ರಿಂದ 16.4.2009 ರವರೆಗೆ ಒಟ್ಟು 6 ಕಂತುಗಳ ಅನ್ಯೂಟಿ ಮೊತ್ತವಾದ ರೂ. 29.70 ಕೋಟಿಗಳನ್ನು ಸದರಿ ಕಂಪನಿಗೆ ಪಾವತಿಸಲು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲಾಗಿದೆ.

ಓದಲಾದ (4)ರಲ್ಲಿನ ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ದಿನಾಂಕ:16.9.2009ರ ಪತ್ರದಲ್ಲಿ ಮೆ:ಬೃಂದಾವನ್ ಇನ್ ಫ್ರಾಸ್ಟ್ರಕ್ಚರ್ ಕಂಪನಿ ಲಿಮಿಟೆಡ್‌ರವರಿಗೆ ಏಳನೇ ಕಂತಿನ ಮೊತ್ತವಾದ ರೂ. 29.70 ಕೋಟಿಗಳನ್ನು ದಿನಾಂಕ: 20.10.2009 ರೊಳಗೆ ಪಾವತಿಸಬೇಕಾಗಿರುವುದರಿಂದ ರೂ. 29.70 ಕೋಟಿ ಹಣವನ್ನು ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತದವರಿಗೆ ಬಿಡುಗಡೆ ಮಾಡುವಂತೆ ಕೋರಿರುವರು.

ಸದರಿ ಪ್ರಸ್ತಾವನೆಯನ್ನು ಸರ್ಕಾರದ ಮಟ್ಟದಲ್ಲಿ ಕೂಲಂಕಷವಾಗಿ ಪರಿಶೀಲಿಸಲಾಗಿದ್ದು, ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಸರ್ಕಾರಿ ಆದೇಶ ಸಂಖ್ಯೆ:ಲೋಇ 59 ಇಎಪಿ 2009 (P), ಬೆಂಗಳೂರು ದಿನಾಂಕ:8ನೇ ಅಕ್ಟೋಬರ್, 2009

ಬೆಂಗಳೂರು-ಮೈಸೂರು ರಾಜ್ಯ ಹೆದ್ದಾರಿಯ ಭಾಗವಾದ ಬೆಂಗಳೂರು-ಮದ್ದೂರನ್ನು ನಾಲ್ಕು ಪಥದ ರಸ್ತೆಯನ್ನಾಗಿ ಪರಿವರ್ತಿಸುವ ಕಾಮಗಾರಿಯನ್ನು ಕೈಗೊಂಡು ಮುಗಿಸಲಾದ ಮೆ: ಬೃಂದಾವನ್ ಇನ್‌ಫ್ರಾಸ್ಟ್ರಕ್ಚರ್ ಕಂಪನಿ ಲಿಮಿಟೆಡ್ ರವರಿಗೆ ಪಾವತಿಸಬೇಕಾದ ಏಳನೇ ಅನ್ಯೂಟಿ ಮೊತ್ತವಾದ (ಅರ್ಧ ವಾರ್ಷಿಕ ಪಾವತಿ) 29.70 ಕೋಟಿ ರೂಪಾಯಿಗಳನ್ನು (ಇಪ್ಪತ್ತೊಂಬತ್ತು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ) ಲೆಕ್ಕ ಶೀರ್ಷಿಕೆ 5054-80-190-0-01-132-ಬಂಡವಾಳ (ಯೋಜನೆ) ಅಡಿಯಲ್ಲಿ, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತಕ್ಕೆ ಬಿಡುಗಡೆ ಮಾಡಲು ಆದೇಶ ಹೊರಡಿಸಲಾಗಿದೆ.

ಮುಂದುವರೆದು, ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು ರೂ. 29.70 (ಇಪ್ಪತ್ತೊಂಬತ್ತು ಕೋಟಿ ಎಪ್ಪತ್ತು ಲಕ್ಷ ರೂಪಾಯಿಗಳು ಮಾತ್ರ) ಕೋಟಿಗಳ ಬಿಲ್ಲನ್ನು ಕೆ.ಎಫ್.ಸಿ. 17(ಎ) (II) ಸಿ. ರಲ್ಲಿನಂತೆ ಮಹಾಲೇಖಪಾಲರಿಂದ (ಎ ಅಂಡ್ ಇ) ಇವರಿಂದ ಆಥರೈಸೇಷನ್ ಇಲ್ಲದೆಯೇ ಮನ್ನಣೆ ಮಾಡುವುದು ಹಾಗೂ ಸದರಿ ಬಿಲ್ಲಿನ ಮೊತ್ತಕ್ಕೆ ನಿರ್ದೇಶಕರು (ಆರ್ಥಿಕ) ಹಾಗೂ ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ, ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ ಇವರ ಮೇಲುರುಜು ಮಾಡಿಸಿ ಈ ಬಿಲ್ಲನ್ನು (ಸ್ವೀಕೃತದ ರಶೀತಿ) ರಾಜ್ಯ ಹುಜೂರು ಖಜಾನೆ, ಬೆಂಗಳೂರು ಇಲ್ಲಿಂದ ಡ್ರಾ ಮಾಡತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಲೋಇ/781/ಆಕೋ-1/09 ದಿನಾಂಕ:5.10.2009 ರಲ್ಲಿನ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2356

ಎಂ. ದೇವಿಪ್ರಸಾದ್

ಸರ್ಕಾರದ ಅಧೀನ ಕಾರ್ಯದರ್ಶಿ

ಲೋಕೋಪಯೋಗಿ, ಬಂದರು ಹಾಗೂ ಒಳನಾಡು ಜಲಸಾರಿಗೆ ಇಲಾಖೆ

(ಇಎಪಿ)

ಶಿಕ್ಷಣ ಸಚಿವಾಲಯ

ವಿಷಯ : ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಪ್ರಥಮ ದರ್ಜೆ ಕಾಲೇಜುಗಳನ್ನು ಅನುದಾನದ ವ್ಯಾಪ್ತಿಗೆ ಒಳಪಡಿಸುವ ಕುರಿತು ಮಾನದಂಡಗಳನ್ನು ನಿಗಧಿಪಡಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರಿ ಅಧಿಸೂಚನೆ ಸಂಖ್ಯೆ :ಇಡಿ 551 ಯುಪಿಸಿ 99 ದಿನಾಂಕ :7.8.2003
2. ಸರ್ಕಾರಿ ಅಧಿಸೂಚನೆ ಸಂಖ್ಯೆ :ಇಡಿ 30 ಯುಪಿಸಿ 2008 ದಿನಾಂಕ :2.3.2009
3. ಸರ್ಕಾರಿ ಅಧಿಸೂಚನೆ ಸಂಖ್ಯೆ :ಇಡಿ 30 ಯುಪಿಸಿ 2008 ದಿನಾಂಕ :13.5.2009

ಪ್ರಸ್ತಾವನೆ:

ಮೇಲೆ ಓದಲಾದ (1)ರ ದಿನಾಂಕ:7.8.2003ರ ಸರ್ಕಾರಿ ಅಧಿಸೂಚನೆಯನ್ವಯ ಕಾಲೇಜು ಶಿಕ್ಷಣ ಇಲಾಖೆಯ ವ್ಯಾಪ್ತಿಗೆ ಒಳಪಡುವ ಖಾಸಗಿ ಅನುದಾನಿತ ಪದವಿ ಕಾಲೇಜುಗಳಿಗೆ ಸಂಬಂಧಪಟ್ಟಂತೆ ನಿಯಮಾವಳಿಗಳನ್ನು ರೂಪಿಸಲಾಗಿರುತ್ತದೆ. ರೂಪಿಸಲಾಗಿರುವ ನಿಯಮಾವಳಿಗಳಂತೆ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು, 2003ರ ನಿಯಮ 8ರಡಿಯಲ್ಲಿ ನಿಗಧಿಪಡಿಸಿರುವಂತೆ ದಿನಾಂಕ:1.6.1987ರ ನಂತರ ಪ್ರಾಂರಭಿಸಲಾದ ಯಾವುದೇ ವಿಷಯಗಳು ಮತ್ತು ಕಾಲೇಜುಗಳು ಅನುದಾನ ಪಡೆಯಲು ಶಾಶ್ವತವಾಗಿ ಅನರ್ಹವೆಂದು ತೀರ್ಮಾನಿಸಲಾಗಿರುತ್ತದೆ.

ದಿನಾಂಕ:1.6.87 ರಿಂದ 31.3.95 ರ ಅವಧಿಯಲ್ಲಿ ಪ್ರಾರಂಭಿಸಲ್ಪಟ್ಟ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೊಳಪಡಿಸಲು ಸರ್ಕಾರ ನಿರ್ಧರಿಸಿ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು, 2003ರ ನಿಯಮ 8ಕ್ಕೆ ಸೂಕ್ತ ತಿದ್ದುಪಡಿ ತರಲು ಮೇಲೆ (2)ರಲ್ಲಿ ಓದಲಾದ ದಿನಾಂಕ:2.3.2009ರ ಅಧಿಸೂಚನೆಯಲ್ಲಿ ಕರಡು ನಿಯಮಾವಳಿಗಳನ್ನು ಪ್ರಕಟಿಸಿ ಆಕ್ಷೇಪಣೆಗಳನ್ನು/ಸಲಹೆಗಳನ್ನು ಆಹ್ವಾನಿಸಲಾಗಿತ್ತು. ತದನಂತರ ಇದನ್ನು ಅಂತಿಮಗೊಳಿಸಿ ಮೇಲೆ (3)ರಲ್ಲಿ ಓದಲಾದ ದಿನಾಂಕ:13.5.2009ರ ಅಧಿಸೂಚನೆಯಲ್ಲಿ ಪ್ರಕಟಿಸಲಾಗಿದೆ.

ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು, 2003ರ ನಿಯಮ 8ಕ್ಕೆ ಸೂಕ್ತ ತಿದ್ದುಪಡಿ ತರುವ ಮೂಲಕ ದಿನಾಂಕ: 1.,6.1987ರಿಂದ 31.3.1995 ರ ಅವಧಿಯಲ್ಲಿ ಪ್ರಾರಂಭಿಸಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಪ್ರಥಮ ದರ್ಜೆ ಕಾಲೇಜುಗಳನ್ನು ಅನುದಾನದ ವ್ಯಾಪ್ತಿಗೆ ಒಳಪಡಿಸಲು ಅವಕಾಶ ಕಲ್ಪಿಸಲಾಗಿದ್ದು, ವೇತನಾನುದಾನ ಪಡೆಯಲು ಸದರಿ ಸಂಸ್ಥೆಗಳು ಹೊಂದಿರಬೇಕಾದ/ಪೂರೈಸಬೇಕಾದ ಮಾನದಂಡಗಳನ್ನು ನಿಗದಿಪಡಿಸಬೇಕಾಗಿದ್ದು, ಈ ಬಗ್ಗೆ ಕಾಲೇಜು ಶಿಕ್ಷಣ ಆಯುಕ್ತರು ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರ ಪರಿಶೀಲಿಸಿದೆ:

ಆದ್ದರಿಂದ ಈ ಆದೇಶ.

ಸರ್ಕಾರದ ಆದೇಶ ಸಂಖ್ಯೆ:ಇಡಿ 30 ಯುಪಿಸಿ 2008, ಬೆಂಗಳೂರು, ದಿನಾಂಕ:5ನೇ ಅಕ್ಟೋಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಸಂದರ್ಭಗಳ ಹಿನ್ನೆಲೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಆಡಳಿತ ಮಂಡಳಿಗಳಿಗೆ ಸೇರಿದ ಶಿಕ್ಷಣ ಸಂಸ್ಥೆಗಳ ವತಿಯಿಂದ ದಿನಾಂಕ:1.6.1987 ರಿಂದ 31.3.1995 ರ ಅವಧಿಯಲ್ಲಿ ಪ್ರಾರಂಭಿಸಿ ನಡೆಸಲ್ಪಡುತ್ತಿರುವ ಪ್ರಥಮ ದರ್ಜೆ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸಲು ಈ ಕೆಳಕಂಡ ಮಾನದಂಡಗಳನ್ನು ಸರ್ಕಾರ ನಿಗಧಿಪಡಿಸಿದೆ.

1) ಇಂತಹ ಕಾಲೇಜು ನಡೆಸುವ ಶಿಕ್ಷಣ ಸಂಸ್ಥೆ ಕರ್ನಾಟಕ ಶಿಕ್ಷಣ ಅಧಿನಿಯಮದ ಅಡಿಯಲ್ಲಿ ರಚಿತವಾಗಿರುವ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಾವಳಿ 1992ರ ಪ್ರಕಾರ ನೊಂದಾವಣೆಯಾಗಿರತಕ್ಕದ್ದು.

2) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು, 2003ರ ನಿಯಮ 2(ಡಿ)ರಡಿಯಲ್ಲಿ ನಿಗಧಿಪಡಿಸಿರುವಂತೆ ಕಾಲೇಜುಗಳು ಆಯಾ ವಿಶ್ವವಿದ್ಯಾಲಯಗಳಿಂದ ಸಹಾಯಾನುದಾನ ನೀಡುವ ವರ್ಷದವರೆಗೆ ಸಕ್ಷಮ ಪ್ರಾಧಿಕಾರದಿಂದ ಮಾನ್ಯತೆಯನ್ನು ಪಡೆದಿರತಕ್ಕದ್ದು.

3) ಸಂಸ್ಥೆಯ ಬೈಲಾದಲ್ಲಿ ನಿಗಧಿಪಡಿಸಿರುವಂತೆ ಆಡಳಿತ ಮಂಡಳಿಯ ಎಲ್ಲಾ ಪದಾಧಿಕಾರಿಗಳು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದವರೇ ಆಗಿರಬೇಕು.

4) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು, 2003ರ ನಿಯಮ 15(ಇ)ರಡಿಯಲ್ಲಿ ನಿಗಧಿಪಡಿಸಿರುವ ಅಪೆಂಡಿಕ್ಸ್ (2)ರಲ್ಲಿ ಸೂಚಿಸಿರುವಂತೆ ಬೋಧನಾ ಕೊಠಡಿಗಳು, ಪ್ರಯೋಗಾಲಯಗಳು, ಶೌಚಾಲಯ ಇತ್ಯಾದಿಗಳನ್ನು ಒಳಗೊಂಡ ಮೂಲಭೂತ ಸೌಕರ್ಯಗಳನ್ನು ಸಂಸ್ಥೆಯು ಒದಗಿಸಿರತಕ್ಕದ್ದು.

5) ಸದರಿ ಕಾಲೇಜಿಗೆ ನೇಮಕಗೊಂಡಿರುವ ಬೋಧಕ ಹಾಗೂ ಬೋಧಕೇತರ ವೃಂದಗಳಲ್ಲಿ ಜಾರಿಯಲ್ಲಿರುವ ನಿಯಮಾವಳಿಗಳ ಪ್ರಕಾರ ಮೀಸಲಾತಿಯನ್ವಯ ಆಯ್ಕೆಗೊಂಡಿರತಕ್ಕದ್ದು.

6) ಖಾಸಗಿ ಪದವಿ ಕಾಲೇಜುಗಳಲ್ಲಿನ ಶಿಕ್ಷಣ ಸಂಸ್ಥೆಗಳಲ್ಲಿ ಈಗಾಗಲೇ ನೇಮಕಾತಿ ಮಾಡಿಕೊಂಡಿರುವ ಅಥವಾ ಮಾಡಿಕೊಳ್ಳುವ ಉಪನ್ಯಾಸಕರು ಮತ್ತು ನೌಕರರು ಕಾಲಕಾಲಕ್ಕೆ ಸರ್ಕಾರಿ ಕಾಲೇಜುಗಳಲ್ಲಿನ ತತ್ಸಬಂಧ ಹುದ್ದೆಗಳಿಗೆ ನಿಗಧಿಪಡಿಸಿರುವ ವಿದ್ಯಾರ್ಹತೆ ಮತ್ತು ಇತರೆ ಅರ್ಹತೆಗಳನ್ನು ಕಡ್ಡಾಯವಾಗಿ ಹೊಂದಿರತಕ್ಕದ್ದು. ಸದರಿ ಕಾಲೇಜುಗಳಲ್ಲಿನ ಶಿಕ್ಷಕರು ಮತ್ತು ಸಿಬ್ಬಂದಿ ವರ್ಗದವರನ್ನು ಯು.ಜಿ.ಸಿ. ಮತ್ತು ಸರ್ಕಾರದ ನಿಯಮಾವಳಿಗಳನ್ವಯ ಮಾತ್ರ ನೇಮಕ ಮಾಡಿಕೊಂಡಿರತಕ್ಕುದು.

7) ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ನಡೆಸುತ್ತಿರುವ ಕಾಲೇಜುಗಳನ್ನು ವೇತನಾನುದಾನಕ್ಕೆ ಒಳಪಡಿಸುವ ಸಂದರ್ಭದಲ್ಲಿ ಅಂತಹ ಕಾಲೇಜುಗಳಲ್ಲಿ ಒಟ್ಟು ವಿದ್ಯಾರ್ಥಿಗಳ ಸಂಖ್ಯೆಯಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳು ಕನಿಷ್ಠ ಶೇಕಡಾ 35ರಷ್ಟು ಇರತಕ್ಕದ್ದು.

8) ವಿಶ್ವವಿದ್ಯಾಲಯದವರು ನಿಗಧಿಪಡಿಸಿರುವ ಸರಾಸರಿ ಪ್ರವೇಶಾತಿಗೆ ಸಮಾನಾಂತರವಾಗಿ ಈ ಕಾಲೇಜುಗಳು ಕನಿಷ್ಠ ಪ್ರವೇಶಾತಿಯನ್ನು ಮಾಡಿಕೊಳ್ಳತಕ್ಕದ್ದು ಮತ್ತು ಪ್ರವೇಶಾತಿ (enrolement) ಪಡೆದ ಕಾಲೇಜಿನ ವಿದ್ಯಾರ್ಥಿಗಳ ಪೈಕಿ ಕನಿಷ್ಠ ಶೇಕಡ 75ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತುಕೊಳ್ಳುವಂತೆ ಕ್ರಮಾವಹಿಸತಕ್ಕದು.

9) ಇಂತಹ ಕಾಲೇಜುಗಳಲ್ಲಿನ ಪರೀಕ್ಷಾ ಫಲಿತಾಂಶಗಳು ಸಂಬಂಧಪಟ್ಟ ವಿಶ್ವವಿದ್ಯಾಲಯದ ಮಾನ್ಯತೆ ಪಡೆದ ಇತರೆ ಕಾಲೇಜುಗಳಲ್ಲಿನ ಸರಾಸರಿ ಫಲಿತಾಂಶಕ್ಕಿಂತ ಕಡಿಮೆ ಇತರಕ್ಕದ್ದು.

10) ಈ ರೀತಿ ಸಕ್ಷಮ ಪ್ರಾಧಿಕಾರದಿಂದ ಅನುಮತಿ ಪಡೆದು ಪ್ರಾರಂಭವಾದ ಪದವಿ ಕಾಲೇಜುಗಳನ್ನು ಮಧ್ಯದಲ್ಲಿ ಯಾವುದೇ ವಿಚ್ಛಿನ್ನತೆ ಇಲ್ಲದೆ ಸತತವಾಗಿ ನಡೆಸಿರಬೇಕು.

11) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು 2003ರ ಮತ್ತು ಇತರ ಸಂಬಂಧಿತ ನಿಯಮಗಳಡಿಯಲ್ಲಿ ನಿಗಧಿಪಡಿಸಿರುವಂತೆ ಮಾದರಿ ಸಿಬ್ಬಂದಿಯನ್ವಯ ನೇಮಕಾತಿ ಮಾಡಿಕೊಂಡಿರಬೇಕು. ಪ್ರತಿಯೊಂದು ತರಗತಿಯಲ್ಲಿ ನಿಗಧಿತ ಕನಿಷ್ಠ ಮಟ್ಟದ ವಿದ್ಯಾರ್ಥಿ ಹಾಜರಾತಿ ಸಂಖ್ಯಾಬಲವನ್ನು ಹೊಂದಿರತಕ್ಕದ್ದು. ಪದವಿ ಕಾಲೇಜುಗಳಿಗೆ ಸಂಬಂಧಪಟ್ಟಂತೆ ಪ್ರತಿಯೊಂದು ತರಗತಿಯಲ್ಲಿ ಕನಿಷ್ಠ 40 ವಿದ್ಯಾರ್ಥಿಗಳ ಹಾಜರಾತಿ ಕಡ್ಡಾಯವಾಗಿರಬೇಕು, ಭಾಷಾ ವಿಷಯದಲ್ಲಿ ಕನಿಷ್ಠ 10 ವಿದ್ಯಾರ್ಥಿಗಳು ಹಾಗೂ ಐಚ್ಛಿಕ ವಿಷಯಗಳಿಗೆ ಕನಿಷ್ಠ 15 ವಿದ್ಯಾರ್ಥಿಗಳ ಸಂಖ್ಯೆ ಇರಬೇಕು.

12) ಶಿಕ್ಷಣ ಸಂಸ್ಥೆಗಳಲ್ಲಿ ಬೋಧಕ/ಬೋಧಕೇತರ ಹುದ್ದೆಗಳಿಗೆ ಮಾಡಿಕೊಂಡಿರುವ ನೇಮಕಾತಿಯಲ್ಲಿ ಮೀಸಲಾತಿ ಪ್ರಕಾರ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ಸಿಬ್ಬಂದಿಗಳ ಅನುಪಾತವನ್ನು ಕಡ್ಡಾಯವಾಗಿ ಕಾಯ್ದುಕೊಂಡಿತಕ್ಕದ್ದು.

13) ಆಡಳಿತ ಮಂಡಳಿಯ ಮಾಲೀಕತ್ವದ ಬಗ್ಗೆ ಯಾವುದೇ ರೀತಿಯ ವ್ಯಾಜ್ಯ ಇರತಕ್ಕದ್ದಲ್ಲ. ಒಂದು ವೇಳೆ ಅಂತಹ ವ್ಯಾಜ್ಯವಿದ್ದಲ್ಲಿ ಅಂತಹ ಸಂಸ್ಥೆಗಳ ಪದವಿ ಕಾಲೇಜುಗಳು ವೇತನಾನುದಾನಕ್ಕೆ ಅನರ್ಹವಾಗುತ್ತದೆ.

14) ನಿಗಧಿತ ಮೂಲಭೂತ ಸೌಲಭ್ಯಗಳಲ್ಲದೆ ಸ್ವಂತ ಕಟ್ಟಡ ಮತ್ತು ಆಟದ ಮೈದಾನಗಳನ್ನು ಹೊಂದಿರತಕ್ಕದ್ದು. ಇವುಗಳನ್ನು ಹೊಂದದೇ ಇರುವ ಸಂಸ್ಥೆಗಳ ಪ್ರಕರಣಗಳಲ್ಲಿ ಈ ಮೂಲಭೂತ ಸೌಲಭ್ಯಗಳನ್ನು ಹೊಂದಲು ಸಹಾಯಾನುದಾನಕ್ಕೆ ಒಳಪಡಿಸಿದ ದಿನಾಂಕದಿಂದ ಮೂರು ವರ್ಷಗಳ ಕಾಲಾವಕಾಶ ನೀಡಬಹುದು. ಹಾಗೂ ಮೂರು ವರ್ಷಗಳ ನಂತರವೂ ಈ ಸೌಲಭ್ಯಗಳನ್ನು ಒದಗಿಸದೇ ಇದ್ದಲ್ಲಿ ಸಹಾಯಾನುದಾನವನ್ನು ನಿಲ್ಲಿಸಲಾಗುವುದು ಎಂಬ ಷರತ್ತಿಗೆ ಒಳಪಟ್ಟು ಸಹಾಯಾನುದಾನಕ್ಕೆ ಒಳಪಡಿಸುವ ಕುರಿತು ಪರಿಗಣಿಸಬಹುದು.

15) ಕಂಡಿಕೆ (5), (6) ಮತ್ತು (12)ರಲ್ಲಿನ ಷರತ್ತುಗಳನ್ನು ಪೂರೈಸಿರುವ ಪ್ರತಿ ಬೋಧಕ ಮತ್ತು ಬೋಧಕೇತರ ಪ್ರಕರಣವನ್ನು ಸಹಾಯಾನುದಾನಕ್ಕೆ ಒಳಪಡಿಸಲು ಪ್ರತ್ಯೇಕವಾಗಿ ಪ್ರಸ್ತಾವನೆಯನ್ನು ಪ್ರಾದೇಶಿಕ ನಿರ್ದೇಶಕರು ಕಾಲೇಜು ಶಿಕ್ಷಣ ಆಯುಕ್ತರಿಗೆ ಸಲ್ಲಿಸತಕ್ಕದ್ದು. ನೇಮಕಾತಿ ಅನುಮೋದನೆ ಪ್ರಕರಣಗಳನ್ನು ರಾಜ್ಯ ಮಟ್ಟದಲ್ಲಿ ಪರಿಶೀಲಿಸಿ ಶಿಫಾರಸ್ಸು ಸಹಿತ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲು ಈ ಕೆಳಕಂಡ ಸಮಿತಿ ರಚಿಸಲಾಗಿದೆ.

(i) ಆಯುಕ್ತರು, ಕಾಲೇಜು ಶಿಕ್ಷಣ ಇಲಾಖೆ– ಅಧ್ಯಕ್ಷರು

(ii) ನಿರ್ದೇಶಕರು, ಕಾಲೇಜು ಶಿಕ್ಷಣ ಇಲಾಖೆ– ಸದಸ್ಯರು

(iii) ಮುಖ್ಯ ಆಡಳಿತಾಧಿಕಾರಿ, ಕಾಲೇಜು ಶಿಕ್ಷಣ ಇಲಾಖೆ–ಸದಸ್ಯ ಕಾರ್ಯದರ್ಶಿ

ಕಾಲೇಜು ಶಿಕ್ಷಣ ಇಲಾಖೆಯಡಿ ಬರುವ ಖಾಸಗಿ ಅನುದಾನಿತ ಶಿಕ್ಷಣ ಸಂಸ್ಥೆಗಳ ಉದ್ಯೋಗಿಗಳ ಸೇವಾ ಭದ್ರತೆ ಇತ್ಯಾದಿಗಳ ಬಗ್ಗೆ ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕಾಲೇಜು ಶಿಕ್ಷಣ) ನಿಯಮಗಳು, 2003 ಅನ್ವಯವಾಗುತ್ತದೆ. ಈ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಿರುವುದನ್ನು /ಪಾಲಿಸುವುದನ್ನು ಸಕ್ಷಮ ಪ್ರಾಧಿಕಾರಿಗಳು ದೃಢಪಡಿಸಿಕೊಳ್ಳತಕ್ಕದ್ದು. ಈ ನಿಯಮಗಳ ಉಲ್ಲಂಘನೆಯಾಗಿದ್ದಲ್ಲಿ ಅಂತಹ ಪ್ರಕರಣಗಳು ಸಹಾಯಾನುದಾನಕ್ಕೆ ಪಡೆಯಲು ಅರ್ಹವಾಗುವುದಿಲ್ಲ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ:966:ವೆಚ್ಚ–8/09 ದಿನಾಂಕ:8.9.2009ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2357

ಎಸ್.ಎಂ. ನಂದಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಕಾಲೇಜು ಶಿಕ್ಷಣ)

ವಿಷಯ : ರಾಜಾರಾಂ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಬಗ್ಗೆ ರಾಜ್ಯ ಗ್ರಂಥಾಲಯ ಸಮಿತಿಯನ್ನು ರಚಿಸುವ ಕುರಿತು.

ಓದಲಾಗಿದೆ : 1. ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆಯ ಏಕ ಕಡತ ಸಂಖ್ಯೆ :ಸಾಗ್ರಂಇ/ನಿಕ/ಆರ್ ಆರ್ ಎಲ್ ಎಫ್/ಸ.ನೆ/2009.

2. ಸರ್ಕಾರದ ಆದೇಶ ಸಂಖ್ಯೆ :ಇಡಿ 98 ಎಲ್‌ಐಬಿ 2004, ದಿನಾಂಕ :16.3.2005.

ಪ್ರಸ್ತಾವನೆ:

ಮೇಲೆ (1)ರಲ್ಲಿ ಓದಲಾದ ಏಕಕಡತದನ್ವಯ ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ, ಇವರು ರಾಜಾರಾಂ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನದ ಮ್ಯಾನ್ಯುಯಲ್‌ನ ಚಾಪ್ಟರ್ 5ರನ್ವಯ ರಾಜ್ಯದಲ್ಲಿ ಸದರಿ ಪ್ರತಿಷ್ಠಾನದ ಯೋಜನೆಗಳನ್ನು ಜಾರಿಗೊಳಿಸಲು ಪ್ರತ್ಯೇಕವಾದ ಸಮಿತಿಯ ಅಗತ್ಯವಿದ್ದು ಈ ಸಂಬಂಧವಾಗಿ ಮೇಲೆ (2)ರಲ್ಲಿ ಓದಲಾದ ದಿನಾಂಕ:16.3.2005ರಲ್ಲಿ ರಚಿಸಲಾದ ಸಮಿತಿಯ ಅವಧಿಯು ಮುಗಿದಿರುವುದಾಗಿ ತಿಳಿಸಿ ಇನ್ನೊಂದು ಸಮಿತಿಯನ್ನು ರಚಿಸಿ ಆದೇಶ ಹೊರಡಿಸುವಂತೆ ಕೋರಿರುವರು. ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ..

ಸರ್ಕಾರದ ಆದೇಶ ಸಂಖ್ಯೆ:ಇಡಿ 230 ಎಲ್‌ಐಬಿ 2009, ಬೆಂಗಳೂರು, ದಿನಾಂಕ:1ನೇ ಅಕ್ಟೋಬರ್, 2009

2. ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ರಾಜಾರಾಂ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನದ ಯೋಜನೆಗಳನ್ನು ರಾಜ್ಯದಲ್ಲಿ ತ್ವರಿತವಾಗಿ ಅನುಷ್ಠಾನಗೊಳಿಸುವ ಬಗ್ಗೆ ಈ ಕೆಳಕಂಡಂತೆ ರಾಜ್ಯ ಗ್ರಂಥಾಲಯ ಸಮಿತಿಯನ್ನು ಸರ್ಕಾರ ರಚಿಸಿದೆ:

ಕ್ರ.ಸಂ.	ವಿವರ	ಪದನಾಮ
1	ಗ್ರಂಥಾಲಯ ಇಲಾಖಾ ಸಚಿವರು	ಅಧ್ಯಕ್ಷರು
2	ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಇಲಾಖೆ, ಕರ್ನಾಟಕ ಸರ್ಕಾರ, ಬೆಂಗಳೂರು	ಸದಸ್ಯರು
3	ನಿರ್ದೇಶಕರು, ರಾಜಾರಾಂ ಮೋಹನ್ ರಾಯ್ ಗ್ರಂಥಾಲಯ ಪ್ರತಿಷ್ಠಾನ ಕೋಲ್ಕತ್ತಾ ಅಥವಾ ಅವರ ಪ್ರತಿನಿಧಿ	ಸದಸ್ಯರು
4	ರಾಜರಾಂ ಮೋಹನ್‌ರಾಯ್ ಗ್ರಂಥಾಲಯ ಪ್ರತಿಷ್ಠಾನದಿಂದ ರಾಜ್ಯದ ಪ್ರತಿನಿಧಿಯಾಗಿ ನಾಮಕರಣಗೊಂಡವರು.	ಸದಸ್ಯರು
5	ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳು ರಾಜ್ಯ ಗ್ರಂಥಾಲಯ ಸಂಘ	ಸದಸ್ಯರು
6	ಶ್ರೀ ರಂಗಣ್ಣ ಪಾಟೀಲ್ ಅಳ್ಳುಂಡಿ, ಅಧ್ಯಕ್ಷರು ಕನ್ನಡ ಸಾಹಿತ್ಯ ಪರಿಷತ್ತು ತಾಲ್ಲೂಕು ಘಟಕ, ದೇವದುರ್ಗ, ರಾಯಚೂರು ಜಿಲ್ಲೆ	ಸದಸ್ಯರು
7	ನಿರ್ದೇಶಕರು, ಸಾರ್ವಜನಿಕ ಗ್ರಂಥಾಲಯ ಇಲಾಖೆ ಬೆಂಗಳೂರು	ಸದಸ್ಯರು ಕಾರ್ಯದರ್ಶಿಗಳು (ಕನ್ವಿನರ್)

ಈ ಸಮಿತಿ ಆದೇಶವನ್ನು ಹೊರಡಿಸಿದ ದಿನಾಂಕದಿಂದ ಎರಡು ವರ್ಷಗಳ ಅವಧಿಗೆ ಅಥವಾ ಮುಂದಿನ ಸಮಿತಿ ಅಸ್ತಿತ್ವಕ್ಕೆ ಬರುವವರೆಗೆ ಇವೆರಡರಲ್ಲಿ ಯಾವುದು ನಂತರವೋ ಅಲ್ಲಿಯವರೆವಿಗೆ ಜಾರಿಯಲ್ಲಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2358

ಎಂ.ಎನ್. ಸೋಮಶೇಖರ್
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ (ಆಡಳಿತ)

INFRASTRUCTURE DEVELOPMENT SECRETARIAT

Sub: Release of funds for construction of RoB in lieu of L.C.No. 114 at Bellary.

Read:
1. Letter No.W. 352/CN/BNC/RoB at L.C.No. 114/BAY dated:24.8.2009 from the Chief Administrative Officer/Construction SWR, Bangalore.
2. Government letter No.IDD 108 NSW 07dated 7.9.2009
3. Letter No.W. 352./CN/BNC/RoB/LCNo. 114 at Bellary dated 10.9.2009 from the Deputy Chief Engineer, Planning and Design for Chief Administrative Officer/Construction, SWR, Bangalore.

Preamble:

The Chief Administrative Officer (Construction), SWR, Bangalore in his letter dated:24.8.2009 read at (1) above, has stated that the GAD for the above said RoB has been approved by the railways and the PWD of the state Government The detailed estimate for the work.in railway portion is under finalization. Railway proposes to call for tenders for the railway portion of the work namely the limited-use subway and 3 spans of the RoB which fall within the railway limits. The cost of the work including drainage arrangements, but excluding land and structures acquisition and shifting of utilities such as electrical posts drains cables, water pipes, private utilities etc., is under estimation and is about Rs. 9.50 crores. For the Railways to take up the work, CAO, SWR has requested to deposit the State's Share of an amount of Rs.,4.75 crore.

2. In the Government's letter dated 7.9.09 read at (2) above, willingness of Government of Karnataka to share the cost of the RoB/RuB as per the standard practice was communicated.

3. Deputy Chief Engineer, Planning and Design, SWR Bangalore in his letter dated 10.9.09 read at (3) above, has stated that the RoB beyond the railway limit will be executed by the state PWD and its cost also will have fully borne by GoK and has requested to confirm whether the above cost sharing proposal is agreeable to Government.

4. As per the railway policy 1816.

If an existing busy level crossing originally provided at Railway's cost is to be replaced by a road over or under bridge the apportionment of the cost of replacement will be as under:

(i) The Railway will bear 50% of the total cos for the over or under-bridge including approaches, The total cost would include the cost of diversion of road, sewers cables, gas and water mains etc., but would exclude the cost of acquisition of any land and structures there on required for approaches or diversion.

(ii) The Road Authority will bear 50% of the total cost of over or under –bridge including approaches etc., as referred to above and the cost of acquisition of any land required for approaches and diversions and structures thereon.

5. The Government of Karnataka would bear 50% of the cost of the project including RuB/RoB as above. The land would be separately provided by the State Government as per the above said policy.

6. Government of Karnataka after examining the proposal of the Chief Administrative Officer and Deputy Chief Engineer Planning and Design, SWR, Bangalore, has decided to release an amount of Rs .3.00 crore as first installment towards construction of Road over Bridge and sub way (RuB) in lieu of L.C.No.114 at Bellary, as per the railway policy.

7. Hence this order.

Government Order No. IDD 108 NSW 2007, Bangalore, Dated:23rd September, 2009

After careful examination of the request of railways, Government is pleased to release an amount of Rs .3.00 crore (Three Crore only) for construction of RoB and sub way (RuB) in lieu of L.C.No. 114 at Bellary subject to the following conditions:

(i) The Railway will bare 50% of the total cost of the RoB/RuB including approaches, The tota cost include the cost of diversion of road, Sewers, Cables, Gas and Water Mains ext., but would exclud the cost of the acquisition of any land and structures there on required for approaches of diversion.

2. This amount shall be met out under the Head of Account 5465-01-190-3-04 (P) -211 K-RIDI RoB/RuB investments.

3. The Chief Executive Officer, K-RIDE, is authorized to draw the amount on a payee's receip duly countersigned by the Under Secretary to Govt., IDD and K-RIDE, shall in turn deposit the same wit the Financial Advisor and Chief Accounts Officer (Construction) ,SWR, Bangalore.

4. This order is issued in accordance with the financial powers delegated to Principa Secretaries/Secretaries vide G.O.No. FD 1 TFP 2008 dated 16.5.2008.

By order and in the name of Governor of Karnataka

P.R. 2351

N. MANJULA GEETHA

Under Secretary to Government

Infrastructure Development Department

ENERGY SECRETARIAT

Sub: Supply of power by Generators of Karnataka to the State Grid.

Read:
1. Govt. Order No. EN:391:NCE:2008 (1) dt:17.12.2008
2. Govt. Order No. EN:540:NCE:2003 (1) dt:30.12.2008
3. Govt. Order No. EN:328:NCE:2009 (1) dt:1.6.2009
4. Govt. Order No. EN: 328 : NCE:2009 (1) dt:6th June 2009.
5. Letter No.EN:540:NCE:2008 dt:13th July 2009

Vide Order under reference (3) above, State Government in exercise of powers conferred unde Section 11 of Electricity Act, 2003, directed all Generators existing and operating in Karnataka State to operate and maintain Generating Stations to their maximum exportable capacity and PLF. All the Private Generators including Co-Gen Units in the State were also directed to supply 50% of their exportable capacity form June 2009 to September 2009 to the State Grid.

Reckoning the subsequent easing of the power situation, the Cabinet Sub-Committee resolved that all the Private Generators including Co-Gen Uints in the State ot bound by Power Purchase Agreement (PPA) need not supply 50% of the power as directed in G.O. No. under reference (3) to the State Gird. While issuing necessary orders to this effect vide Govt. Order under reference (4), it was also clarified vide letter under reference (5) to MD, KPTCL that all Private Generators including Co-Gen Units in State who have entered into Power Purchase Agreement (PPA) with the State Utilities shall supply the committed power under the PPA to the ESCOMs. I t has come to the notice of the Government that many of the Generators of power are seeking permission to sell power to the third parties in violation of terms of the Power Purchase Agreements existing and binding on parties. In this background, it has become necessary to clarify aspects regarding the same.

Hence the following clarificatory order.

Government Order No:EN 540 NCE 2008, Bangalore, Dated:1st September, 2009

In the circumstances explained above, it is hereby clarified that the Government Order dated:6.6.2009 does not empower the private Generators having subsisting Power Purchase Agreements with Power Utilities in the State to sell power to Third Parties. The Private Generators having valid Power

Purchase Agreements are bound to supply power to the respective Power Utilities in the State in terms of Power Purchase Agreements.

By order and in the name of Governor of Karnataka

P.R. 2155

S.J. SAMPATH KUMAR

Under Secretary to Government

Energy Department

ವಸತಿ ಸಚಿವಾಲಯ

ವಿಷಯ : 2009–10ನೇ ಸಾಲಿನಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಎರಡನೇ ತ್ರೈಮಾಸಿಕ ಕಂತಿನ ಅನುದಾನ ಬಿಡುಗಡೆ ಬಗ್ಗೆ.

ಓದಲಾಗಿದೆ : 1. ಸರ್ಕಾರದ ಆದೇಶ ಸಂಖ್ಯೆ :ವಇ 11 ಕೊಮಂಲೆ 2009, ದಿನಾಂಕ :23.6.2009.

2. ಆಯುಕ್ತರು, ಕಕೊನಿಮ, ಬೆಂಗಳೂರು ಇವರ ಪತ್ರ ಸಂಖ್ಯೆ :ಕಕೊನಿಮ/ಲೆಪಶಾ/ಅನುಧಾನ : 2009–2010, ದಿನಾಂಕ :18.8.2009

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿ ಮೊದಲನೇ ತ್ರೈಮಾಸಿಕ ಕಂತಿನ ಅನುದಾನ ಮೊದಲನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಲೆಕ್ಕಶೀರ್ಷಿಕೆಗಳಾದ ಸಿಬ್ಬಂದಿ ವೆಚ್ಚ ಯೋಜನೆ ಮತ್ತು ಯೋಜನೇತರ ಹಾಗೂ ಹುಡ್ಕೋ ಸಾಲದ ಮೇಲು ಉಸ್ತುವಾರಿ (ಯೋಜನೇತರ)ಗಾಗಿ ಒಟ್ಟು ರೂ. 826.57517 ಲಕ್ಷಗಳನ್ನು ಬಿಡುಗಡೆ ಮಾಡಲಾಗಿರುತ್ತದೆ. ಕ್ರಮ ಸಂಖ್ಯೆ (2)ರಲ್ಲಿ 2009–10ನೇ ಸಾಲಿನ ತ್ರೈಮಾಸಿಕ ಕಂತಿನ ಅನುದಾನ ಸಿಬ್ಬಂದಿ ವೆಚ್ಚಕ್ಕೆ (ಯೋಜನೆ ಮತ್ತು ಯೋಜನೇತರಡಿ) ರೂ. 143.91 ಲಕ್ಷಗಳು ಹಾಗೂ ಹುಡ್ಕೋ ಸಾಲಗಳ ಮೇಲು ಉಸ್ತುವಾರಿ ರೂ. 660.97 ಲಕ್ಷಗಳು (ಹುಡ್ಕೋ ಸಂಸ್ಥೆಯ ಬೇಡಿಕೆಯನ್ವಯ) ಒಟ್ಟು ಯೋಜನೆಯಡಿ ರೂ. 75.00 ಲಕ್ಷಗಳು ಹಾಗೂ ಯೋಜನೇತರಡಿಯಲ್ಲಿ ರೂ. 729.88ಲಕ್ಷಗಳು ಒಟ್ಟು ರೂ. 804.88ಲಕ್ಷಗಳನ್ನು ಮಂಡಳಿಗೆ ಬಿಡುಗಡೆ ಮಾಡಬೇಕೆಂದು ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಪರಿಶೀಲಿಸಿ ವಿವಿಧ ಲೆಕ್ಕಶೀರ್ಷಿಕೆಗಳಡಿ ಎರಡನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ ಬಿಡುಗಡೆ ಮಾಡಲು ತೀರ್ಮಾನಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ವಇ 11 ಕೊಮಂಲೆ 2009, ಬೆಂಗಳೂರು, ದಿನಾಂಕ:24ನೇ ಸೆಪ್ಟೆಂಬರ್, 2009

ಪ್ರಸ್ತಾವನೆಗಳಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ಕೊಳಚೆ ನಿರ್ಮೂಲನ ಮಂಡಳಿಗೆ 2009–10ನೇ ಸಾಲಿಗೆ ಎರಡನೇ ತ್ರೈಮಾಸಿಕ ಕಂತಾಗಿ ಅನುದಾನವನ್ನು ಈ ಕೆಳಕಂಡ ಲೆಕ್ಕಶೀರ್ಷಿಕೆಗಳಾದ ಸಿಬ್ಬಂದಿ ವೆಚ್ಚ (ಯೋಜನೆ ಮತ್ತು ಯೋಜನೇತರ) ಹಾಗೂ ಹುಡ್ಕೋ ಸಾಲದ ಮೇಲು ಉಸ್ತುವಾರಿ (ಯೋಜನೇತರ)ಗಾಗಿ ಒಟ್ಟು ರೂ. 804.87 ಲಕ್ಷಗಳು (ಎಂಟು ಕೋಟಿ ನಾಲ್ಕು ಲಕ್ಷದ ಎಂಭತ್ತೇಳು ಸಾವಿರ ರೂಪಾಯಿಗಳು ಮಾತ್ರ) ಕರ್ನಾಟಕ ಕೊಳಚೆ ಸಿರ್ಮೂಲನ ಮಂಡಳಿಗೆ ಬಿಡುಗಡೆ ಮಾಡಿ ಸರ್ಕಾರ ಆದೇಶಿಸಿದೆ.

ರೂ. ಲಕ್ಷಗಳಲ್ಲಿ

ಕ್ರಸಂ	ಲೆಕ್ಕ ಶೀರ್ಷಿಕೆ	ಎರಡನೇ ತ್ರೈಮಾಸಿಕ		
		ಯೋಜನೆ	ಯೋಜನೇತರ	ಒಟ್ಟು
1	ಸಿಬ್ಬಂದಿ ವೆಚ್ಚ 2217–04–191–2–01	75.00	68.91	143.91
2	ಹುಡ್ಕೋ ಸಾಲಗಳ ಮೇಲು ಉಸ್ತುವಾರಿ 4217–60–800–3–01	–	660.96	660.96
	ಒಟ್ಟು			804.87

ಈ ಅನುದಾನವನ್ನು ಈ ಕೆಳಕಂಡ ನಿಬಂಧನೆಗೊಳಪಟ್ಟು ಬಿಡುಗಡೆ ಗೊಳಿಸಿದೆ.

1. ಸರ್ಕಾರದ ಉಪ ಕಾರ್ಯದರ್ಶಿ, ವಸತಿ ಇಲಾಖೆ, ಬೆಂಗಳೂರು ಇವರು ಹಣ ಬಿಡುಗಡೆ ಮಾಡುವ ಬಿಲ್ಲಿಗೆ ಮೇಲು ರುಜು ಮಾಡಲು ಅಧಿಕೃತವಾಗಿರುತ್ತಾರೆ.

2. ಈ ಆದೇಶದಲ್ಲಿ ಬಿಡುಗಡೆ ಮಾಡಲಾಗಿರುವ ಅನುದಾನದ ಬಗ್ಗೆ ಪ್ರತ್ಯೇಕ ಲೆಕ್ಕವನ್ನು ಇಡತಕ್ಕದ್ದು.

3. ಯಾವ ಉದ್ದೇಶಕ್ಕಾಗಿ ಹಣ ಬಿಡುಗಡೆ ಮಾಡಿದೆಯೋ ಅದೇ ಉದ್ದೇಶಕ್ಕಾಗಿ ಬಳಸತಕ್ಕದ್ದು.

4. ಪ್ರಸಕ್ತ ಸಾಲಿನಲ್ಲಿ ಬಿಡುಗಡೆ ಮಾಡಿದ ಹಣಕಾಸಿನ ಮೊತ್ತಕ್ಕೆ ಬಳಕೆ ಪ್ರಮಾಣ ಪತ್ರವನ್ನು ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು ಇವರಿಗೆ ಕಳುಹಿಸಿ ಅದರ ಪ್ರತಿಯನ್ನು ಸರ್ಕಾರಕ್ಕೆ ಕಳುಹಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಹಿಂಬರಹ ಸಂಖ್ಯೆ:ಎಫ್ ಡಿ 571 ವೆಚ್ಚ–9/2009, ದಿನಾಂಕ:22.9.2009ರ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2361

ಜಿ.ಆರ್. ನಾಗರಾಜ

ಪೀಠಾಧಿಕಾರಿ–4, ವಸತಿ ಇಲಾಖೆ

ಕಾರ್ಮಿಕ ಸಚಿವಾಲಯ

ವಿಷಯ : ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಅಸ್ತಿತ್ವದಲ್ಲಿರುವ **"ಆಡಳಿತ ಸಹಾಯಕರು"** ಹುದ್ದೆಯ ಪದನಾಮವನ್ನು **"ಆಡಳಿತಾಧಿಕಾರಿ"** ಎಂದು ಬದಲಾಯಿಸುವ ಬಗ್ಗೆ.

ಓದಲಾಗಿದೆ : ಆಯುಕ್ತರು, ಉದ್ಯೋಗ ಮತ್ತು ತರಬೇತಿ ಇವರ ಪತ್ರ ಸಂಖ್ಯೆ :ಉತಇ/ತರಬೇತಿ/ಆಡಳಿತ–06/ವಿವ–21/2009–10 ದಿನಾಂಕ :29.7.2009.

ಪ್ರಸ್ತಾವನೆ:

ಆಯುಕ್ತರು ಉದ್ಯೋಗ ಮತ್ತು ತರಬೇತಿ, ಬೆಂಗಳೂರು ರವರು ಮೇಲೆ ಓದಲಾದ ತಮ್ಮ ಪತ್ರದಲ್ಲಿ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಅಸ್ತಿತ್ವದಲ್ಲಿರುವ "ಆಡಳಿತ ಸಹಾಯಕರು" ವೃಂದದ ಹುದ್ದೆಗಳು ಪತ್ರಾಂಕಿತ 'ಬಿ'ಶ್ರೇಣಿಯ ಹುದ್ದೆಗಳಾಗಿದ್ದು, ಸದರಿ ಹುದ್ದೆಗಳ ವೇತನ ಶ್ರೇಣಿ ರೂ. 10800=20025 ಆಗಿರುತ್ತದೆಯೆಂದೂ ಆದರೆ, ಇದರ ಪದನಾಮವನ್ನು ಗಮನಿಸಿದಾಗ ಸದರಿ ಹುದ್ದೆಯು ಪತ್ರಾಂಕಿತ ವೃಂದವೆಂದು ಯಾರೂ ಭಾವಿಸುವುದಿಲ್ಲ ಎಂದು ತಿಳಿಸಿರುತ್ತಾರೆ. ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿಯೇ ಗ್ರೂಪ್–'ಸಿ' ಹುದ್ದೆಗಳಾದ ಗ್ರೂಪ್ ಇನ್‌ಸ್ಟ್ರಕ್ಟರ್, ಸೀನಿಯರ್ ಇನ್‌ಸ್ಟ್ರಕ್ಟರ್ ಮತ್ತು ಜೂನಿಯರ್ ಇನ್‌ಸ್ಟ್ರಕ್ಟರ್ ಹುದ್ದೆಗಳ ಪದನಾಮಗಳನ್ನು ಕ್ರಮವಾಗಿ ತರಬೇತಿ ಅಧಿಕಾರಿ, ಹಿರಿಯ ತರಬೇತಿ ಅಧಿಕಾರಿ ಮತ್ತು ಕಿರಿಯ ತರಬೇತಿ ಅಧಿಕಾರಿ ಎನ್ನುವುದಾಗಿ ಬದಲಾಯಿಸಲಾಗಿರುತ್ತದೆ ಎಂದು ಸದರಿ ಇಲಾಖೆಯ ಉದ್ಯೋಗ ವಿಭಾಗದ ಸಹಾಯಕ ಉದ್ಯೋಗಾಧಿಕಾರಿ ಹುದ್ದೆಯೂ ಸಹ ಅಪತ್ರಾಂಕಿತ ಗ್ರೂಪ್–ಸಿ ಹುದ್ದೆಯಾಗಿದೆ ಎಂದು ತಿಳಿಸಿರುತ್ತಾರೆ. ಈ ರೀತಿ ಗ್ರೂಪ್ –ಸಿ ಹುದ್ದೆಗಳ ಹೆಸರಿನಲ್ಲಿ ಅಧಿಕಾರಿ ಎನ್ನುವ ಪದವು ಬಳಕೆಯಾಗಿದ್ದು, ಆಡಳಿತ ಸಹಾಯಕರ ಹುದ್ದೆಯು ಪತ್ರಾಂಕಿತ ಹುದ್ದೆಯಾಗಿದ್ದರೂ ಸಹ ಅಧಿಕಾರಿ ಎನ್ನುವ ಪದವು ಪದನಾಮದಲ್ಲಿ ಬಳಕೆಯಲ್ಲಿ ಇಲ್ಲದೇ ಇರುವುದು ಸೂಕ್ತವಲ್ಲವೆಂದು ತಿಳಿಸುತ್ತಾ, **"ಆಡಳಿತ ಸಹಾಯಕರ"** ಹುದ್ದೆಯ ಪದನಾಮವನ್ನು **"ಆಡಳಿತಾಧಿಕಾರಿ"** ಎಂದು ಬದಲಾಯಿಸಲು ಸರ್ಕಾರದ ಮಂಜೂರಾತಿಯನ್ನು ಕೋರಿರುತ್ತಾರೆ.

ವಿಷಯವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಸರ್ಕಾರವು ತೀರ್ಮಾನಿಸಿ ಈ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಕಾಇ 66 ಇಟಿಎಂ 2009, ಬೆಂಗಳೂರು, ದಿನಾಂಕ:3ನೇ ಅಕ್ಟೋಬರ್, 2009

ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿನ ತರಬೇತಿ ವಿಭಾಗದ "ಆಡಳಿತ ಸಹಾಯಕರ" ಹುದ್ದೆಯು ಪತ್ರಾಂಕಿತ 'ಬಿ' ವೃಂದದ ಹುದ್ದೆಯಾಗಿರುವುದರಿಂದ ಈ ಪದನಾಮವನ್ನು "ಆಡಳಿತಾಧಿಕಾರಿ" ಎಂದು ಬದಲಾಯಿಸಲು ಮಂಜೂರಾತಿ ನೀಡಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2362

ಎ.ಎಸ್. ವಿಶ್ವೇಶ್ವರಯ್ಯ

ಪೀಠಾಧಿಕಾರಿ

ಕಾರ್ಮಿಕ ಇಲಾಖೆ (ಉದ್ಯೋಗ ಮತ್ತು ತರಬೇತಿ)

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಾಹನ ಸಂಖ್ಯೆ ಕೆಎ–04–ಜಿ–1818ರ ನಿರ್ವಹಣೆ /ದುರಸ್ತಿ ಬಿಲ್ ಪಾವತಿ ಕುರಿತು ಆದೇಶ.

ಓದಲಾಗಿದೆ :

1. ಕೇಂದ್ರ ಯಾಂತ್ರಿಕ ಸಂಸ್ಥೆಯ ಅಂದಾಜು ಪಟ್ಟಿ ಸಂಖ್ಯೆ :CMO :AEE :No.2,W& MSD:BNG : AE-1 :Rep. Certii :2008-09/1576-77 dt.13.8.2008 ;
2. ಕೇಂದ್ರ ಯಾಂತ್ರಿಕ ಸಂಸ್ಥೆಗೆ ಹೊರಡಿಸಿರುವ ಕಾರ್ಯಾದೇಶದ ದಿನಾಂಕ :25.9.2008 ;
3. ಕೇಂದ್ರ ಯಾಂತ್ರಿಕ ಸಂಸ್ಥೆಯ ಬೆಲೆ ಪತ್ರ (bill of cost) ಸಂಖ್ಯೆ :CMO :AEE :No. 2W&M SD : BNG :AE-1 :AMB CAR KA-04-G1818 :BOC :08-09 ಹಾಗೂ ಪತ್ರ ಸಂಖ್ಯೆ ಸಿಎಂಒ :ಕಾಯಾವಿ :ಗೊರೂರು :ಯೋ.ಶಾ–1 :2007–08 :5633 ದಿನಾಂಕ :3.3.2009
4. ಹಿರಿಯ ಮೋಟಾರು ವಾಹನಗಳ ನಿರೀಕ್ಷಕರು ಲಾಗ್ ಪುಸ್ತಕದಲ್ಲಿ ನೀಡಿರುವ ದಿನಾಂಕ :25.8.2009ರ ವರದಿ :

ಪ್ರಸ್ತಾವನೆ:

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಾಹನ ಸಂಖ್ಯೆ ಕೆಎ-04-ಜಿ-1818ರ ಸುಸ್ಥಿತಿಗಾಗಿ ದುರಸ್ತಿ/ನಿರ್ವಹಣೆಗಳು ಅಗತ್ಯವಿದ್ದುದರಿಂದ ಸಾರಿಗೆ ಇಲಾಖೆಯ ಹಿರಿಯ ಮೋಟಾರು ವಾಹನಗಳ ನಿರೀಕ್ಷಕರು ದಿನಾಂಕ:6.8.08ರ ಪರಿಶೀಲನಾ ವರದಿಯಲ್ಲಿ ಸೂಚಿಸಿದಂತೆ ಸರ್ಕಾರಿ ಕಾರ್ಯಾಗಾರವಾದ 'ಕೇಂದ್ರ ಯಾಂತ್ರಿಕ ಸಂಸ್ಥೆಯಿಂದ ಮೇಲೆ (1)ರಲ್ಲಿ ಓದಲಾದ ಅಂದಾಜು ಪಟ್ಟಿ ಪಡೆದು ವಾಹನವನ್ನು ಸರ್ಕಾರಿ ಕಾರ್ಯಾಗಾರವಾದ ಕೇಂದ್ರ ಯಾಂತ್ರಿಕ ಸಂಸ್ಥೆಯಲ್ಲಿ ಸೆಪ್ಟೆಂಬರ್-ಡಿಸೆಂಬರ್, 2008ರಲ್ಲಿ ದುರಸ್ತಿಗೊಳಿಸಿದ್ದು, ಕೇಂದ್ರ ಯಾಂತ್ರಿಕ ಸಂಸ್ಥೆ, ಗೊರೂರು ಮೇಲೆ ಓದಲಾಗಿರುವ (3)ರ ಪತ್ರದ ಮೂಲಕ ಸಲ್ಲಿಸಿರುವ ಬಿಲೆ ಪತ್ರ ಸಂಖ್ಯೆ CMO :AEE :No. 2W&M SD : BNG :AE-1 :AMB CAR KA-04-G1818 :BOC :08-09ಯ ಮೊತ್ತ ರೂ. 95,308/- (ತೊಂಭತ್ತೈದು ಸಾವಿರದ ಮುನ್ನೂರ ಎಂಟು ರೂಪಾಯಿಗಳು ಮತ್ರ ಪಾವತಿಸಬೇಕಾಗಿರುವುದರಿಂದ ಈ ಕೆಳಕಂಡಂತೆ ಆದೇಶವನ್ನು ಹೊರಡಿಸಿದೆ.

ಸರ್ಕಾರಿ ಆದೇಶ ಸಂಖ್ಯೆ:ಐಟಿಡಿ 4 ಎಡಿಎಂ 2008, ಬೆಂಗಳೂರು, ದಿನಾಂಕ:12ನೇ ಅಕ್ಟೋಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವಂತೆ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಾಹನ ಸಂಖ್ಯೆ ಕೆಎ-04-ಜಿ-1818ರ ದುರಸ್ತಿ/ನಿರ್ವಹಣೆಯ ಬಿಲ್ ಮೊತ್ತ ರೂ. 95, 308/-(ತೊಂಭತ್ತೈದು ಸಾವಿರದ ಮುನ್ನೂರ ಎಂಟು ರೂಪಾಯಿಗಳು ಮಾತ್ರ)ಗಳನ್ನು "ಕಾಯಾಪಾಲಕ ಇಂಜಿನಿಯರ್, ಕಾರ್ಯಾಗಾರ ಮತ್ತು ಯಾಂತ್ರಿಕ ವಿಭಾಗ, ಕೇಂದ್ರ ಯಾಂತ್ರಿಕ ಸಂಸ್ಥೆ, ಗೊರೂರು" ಇವರಿಗೆ ಪಾವತಿಸಲು ಅನುಮೊದನೆ ನೀಡಿದೆ.

ಈ ಹಣವನ್ನು ಲೆಕ್ಕ ಶೀರ್ಷಿಕೆ 2052-00-090-0-01-195 (ಸಾರಿಗೆ ವೆಚ್ಚ)ರಲ್ಲಿ ಭರಿಸುವುದು.

ಈ ಆದೇಶವನ್ನು ಸರ್ಕಾರಿ ಆದೇಶ ಸಂಖ್ಯೆ:ಎಫ್‌ಡಿ 1:ಟಿಎಫ್‌ಪಿ:2008 ದಿನಾಂಕ:16.5.2008ರ ಪ್ರಕಾರ ಆರ್ಥಿಕ ಇಲಾಖೆಯ ಸಹಮತಿಯನ್ನು ಪರಿಭಾವಿಸಿ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2363

ಎಂ.ವಿ. ಕೃಷ್ಣಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವಾಲಯ

ವಿಷಯ : ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದಿಂದ ಪಡೆಯುವ ಸಾಲಕ್ಕೆ ಸರ್ಕಾರದ ಗ್ಯಾರಂಟಿಯನ್ನು ನೀಡುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂಖ್ಯೆ :ಮಮಇ 356 ಪಿಹೆಚ್‌ಪಿ 2006, ದಿನಾಂಕ :25.6.2008.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ, ಬೆಂಗಳೂರು ಇವರ ಪತ್ರಸಂಖ್ಯೆ :ಮಅನಿ NHFDC :009 :2008-09/164,ದಿನಾಂಕ :31.10.2008 ಮತ್ತು 13.2.2009.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಾಂಕ(1)ರ ಸರ್ಕಾರದ ಆದೇಶದಲ್ಲಿ ರಾಷ್ಟ್ರೀಯ ಅಂಗವಿಕಲರ ಹಣಕಾಸು ಅಭಿವೃದ್ಧಿ ನಿಗಮದ ವತಿಯಿಂದ ಕರ್ನಾಟಕ ರಾಜ್ಯದಲ್ಲಿ ಅಂಗವಿಕಲರಿಗಾಗಿ ಸಾಲ ಸೌಲಭ್ಯ ದೊರಕಿಸಿಕೊಡಲು ಚಾನಲೈಸಿಂಗ್ ಏಜನ್ಸಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವ ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಬದಲಾಗಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವನ್ನು 2008-09ನೇ ಆರ್ಥಿಕ ಸಾಲಿನಿಂದ ಚಾನಲೈಸಿಂಗ್ ಏಜೆನ್ಸಿಯಾಗಿ ಕರ್ತವ್ಯ ನಿರ್ವಹಿಸಲು ಆದೇಶಿಸಿದೆ.

ಮೇಲೆ ಓದಲಾದ ಕ್ರಮಾಂಕ (2)ರ ಪತ್ರಗಳಲ್ಲಿ ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ರವರು ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ನಿಗಮದ ಆರ್ಥಿಕ ನೆರವಿನೊಂದಿಗೆ ರಾಜ್ಯದಲ್ಲಿರುವ ಅಂಗವಿಕಲರಿಗೆ ಸಾಲ ಸೌಲಭ್ಯವನ್ನು ಒದಗಿಸಲು ಚಾನಲೈಸಿಂಗ್ ಏಜೆನ್ಸಿಯಾಗಿ ನೇಮಿಸಲಾಗಿದ್ದು, ಇಲ್ಲಿಯವರೆವಿಗೂ ಡಿ. ದೇವರಾಜು ಅರಸು, ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ನಿಯಮಿತ ಚಾನಲೈಸಿಂಗ್ ಏಜೆನ್ಸಿಯಾಗಿ ಕಾರ್ಯನಿರ್ವಹಿಸುತ್ತಿದ್ದು, ಪ್ರಸಕ್ತ ಸಾಲಿನಲ್ಲಿ ಈ ಯೋಜನೆಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮದ ಮೂಲಕ ಅನುಷ್ಠಾನಗೊಳಿಸಲು ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ಸಂಸ್ಥೆಯು ತಮ್ಮ ಸಹಮತಿಯನ್ನು ನೀಡಿರುವುದಾಗಿ ಹಾಗೂ ರಾಷ್ಟ್ರೀಯ ಅಂಗವಿಕಲರ ಹಣಕಾಸು ಮತ್ತು ಅಭಿವೃದ್ಧಿ ಸಂಸ್ಥೆಯೊಂದಿಗೆ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಸಾಮಾನ್ಯ ಸಾಲದ ಒಪ್ಪಂದವನ್ನು (General Loan Agreement) ಮಾಡಿಕೊಳ್ಳಲು ಕ್ರಮವನ್ನು ಕೈಗೊಳ್ಳಲಾಗುತ್ತಿದ್ದು, 2008-09ನೇ ಸಾಲಿನಲ್ಲಿ ಈ ಯೋಜನೆಯಡಿಯಲ್ಲಿ ಸುಮಾರು 800 ಅಂಗವಿಕಲರಿಗೆ ಪ್ರಯೋಜನ ಕಲ್ಪಿಸಲು ಕನಿಷ್ಠ ರೂ. 2.00 ಕೋಟಿಗಳ ಸರ್ಕಾರದ ಗ್ಯಾರಂಟಿ ಅವಶ್ಯಕತೆ ಇರುತ್ತದೆ ಎಂದು ಹಾಗೂ ಸರ್ಕಾರವು ಗ್ಯಾರಂಟಿ ನೀಡಿದಲ್ಲಿ ಅಂಗವಿಕಲರಿಗೆ ಸ್ವಯಂ ಉದ್ಯೋಗ ಹಾಗೂ ಇತರೆ ಚಟುವಟಿಕೆಗಳನ್ನು ಕೈಗೊಳ್ಳಲು ಸಾಲ ನೀಡಲು ಕ್ರಮ ಕೈಗೊಳ್ಳುವ ಸಲುವಾಗಿ ಗ್ಯಾರಂಟಿ ಒದಗಿಸುವಂತೆ ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಮಮಇ 81 ಮಅನಿ 2008, ಬೆಂಗಳೂರು, ದಿನಾಂಕ:5ನೇ ಅಕ್ಟೋಬರ್, 2009

ಮೇಲೆ ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ರಾಷ್ಟ್ರೀಯ ಅಂಗವಿಕಲರ ಹಣಕಾಸು ನಿಗಮದ ವತಿಯಿಂದ ಸಾಲ ಪಡೆದು ಅಂಗವಿಕಲರಿಗೆ ಸಾಲ ಮತ್ತು ಇತರೆ ಆದಾಯ ತರುವಂತಹ ಚಟುವಟಿಕೆಗಳನ್ನು ಕೈಗೊಳ್ಳಲು ರೂ. 2.00 ಕೋಟಿಗಳ ಗ್ಯಾರಂಟಿ ನೀಡಲು ಹಾಗೂ ವಿವಿಧ ಯೋಜನೆಗಳಡಿ ಬರುವ ಬಡ್ಡಿ ಹಣದಿಂದ ರಾಜ್ಯ ಸರ್ಕಾರಕ್ಕೆ ಗ್ಯಾರಂಟಿ ಕಮಿಷನ್ ಮತ್ತು ರಾಷ್ಟ್ರೀಯ ಅಂಗವಿಕಲ ಹಣಕಾಸು ಅಭಿವೃದ್ಧಿ ನಿಗಮಕ್ಕೆ ಭವಿಷ್ಯದಲ್ಲಿ ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಹಣ ಮರುಪಾವತಿ ಮಾಡಲು ಈ ಕೆಳಕಂಡ ಷರತ್ತಿಗೊಳಪಟ್ಟು ಅಧಿಕಾರ ನೀಡಿ ಆದೇಶಿಸಿದೆ:

1. ಮೊದಲ ಹಂತದಲ್ಲಿ ಶೇಖಡವಾರು ಹಣ ವಸೂಲಾತಿಯು, ಒಂದು ವರ್ಷದೊಳಗೆ ಕನಿಷ್ಠ 50 ರಷ್ಟಿರಬೇಕು.
2. ಕರ್ನಾಟಕ ಸರ್ಕಾರಕ್ಕೆ ಗ್ಯಾರಂಟಿ, ಕಮಿಷನ್ ಅನ್ನು ಪಾವತಿಸಲು ಸೂಕ್ತ ಆಯವ್ಯಯವನ್ನು ಹಾಗೂ ರಾಷ್ಟ್ರೀಯ ಅಂಗವಿಕಲರ ಹಣಕಾಸು ನಿಗಮಕ್ಕೆ (NHFDC) ಭವಿಷ್ಯದಲ್ಲಿ ಮರುಪಾವತಿಸುವ ವ್ಯವಸ್ಥೆಯನ್ನು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮವು ಮಾಡಿಕೊಳ್ಳತಕ್ಕದ್ದು.
3. ಈ ಹಿಂದೆ ದೇವರಾಜ ಅರಸ್ ಹಿಂದುಳಿದ ಜನಾಂಗದ ಅಭಿವೃದ್ಧಿ ನಿಗಮವು (ಡಿಬಿಸಿಡಿಸಿ) ಹಂಚಿಕೆ ಮಾಡಿದ್ದ ಹಣವನ್ನು ಆ ನಿಗಮವೇ ಮರುಪಾವತಿಸತಕ್ಕದ್ದು ಹಾಗೂ ಅದರ ವಿವರಗಳನ್ನು ಮತ್ತು ದಾಖಲೆಗಳನ್ನು ಸದರಿ ನಿಗಮವು ಕರ್ನಾಟಕ ರಾಜ್ಯ ಮಹಿಳಾ ಅಭಿವೃದ್ಧಿ ನಿಗಮಕ್ಕೆ ವರ್ಗಾಯಿಸತಕ್ಕದ್ದು.
4. ಇದನ್ನು revolving guarantee ಎಂದು ತಿಳಿಯತಕ್ಕದ್ದಲ್ಲ.
5. ಶೇಖಡಾ 1 ರಷ್ಟು ಗ್ಯಾರಂಟಿ ಕಮಿಷನ್ ಅನ್ನು ರಾಜ್ಯ ಸರ್ಕಾರಕ್ಕೆ ಪಾವತಿಸತಕ್ಕದು.

ಈ ಆದೇಶವನ್ನು ಆರ್ಥಿಕ ಇಲಾಖೆ ಟಿಪ್ಪಣಿ ಸಂಖ್ಯೆ:FD 263 Exp-3/09 ದಿನಾಂಕ: 25.6.2009 ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಪಿ.ಆರ್. 2364

ಆರ್. ನರಸಿಂಹಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ–2 (ಪ್ರ),
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ವಿಷಯ : ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ವರದಿಯಲ್ಲಿ ಬರುವ ಇಲಾಖಾ ಮುಖ್ಯಸ್ಥರಿಗೆ ಹಾಲಿ ಇರುವ ವಿಶೇಷ ಆರ್ಥಿಕ ಅಧಿಕಾರವನ್ನು ಪರಿಷ್ಕರಿಸುವ :ಹೆಚ್ಚಿಸುವ ಬಗ್ಗೆ.

ಓದಲಾಗಿದೆ :
1. ಸರ್ಕಾರದ ಆದೇಶ ಸಂ :ಮಮಇ 108 ಪಿಹೆಚ್‌ಪಿ 2004, ದಿ :19.9.08
2. ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಬಿವೃದ್ಧಿ ಇಲಾಖೆ ಇವರ ಏಕ ಕಡತ ಸಂಖ್ಯೆ:ಮಮಅಇ: ಸುಶಾ:ಮಂ :77 :2006–07.
3. ಅಪರ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿ :21.5.2009 ರಂದು ನಡೆದ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯ ಸಮಿತಿ ಸಭೆಯ ನಡವಳಿ.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮಸಂಖ್ಯೆ (1)ರ ಆದೇಶದಲ್ಲಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯಕ್ಕೆ ಸದರಿ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿ ತಿಳಿಸಿರುವಂತೆ ಆರ್ಥಿಕ ಅಧಿಕಾರವನ್ನು ವಿಸ್ತರಿಸಿ ಸರ್ಕಾರದ ಮಂಜೂರಾತಿ ನೀಡಲಾಗಿದೆ. ಹಾಗೂ ನಿರ್ದೇಶಕರು, ಅಂಗವಿಕಲರ ಹಾಗೂ ಹಿರಿಯ ನಾಗರೀಕರ ಕಲ್ಯಾಣ ಇಲಾಖೆ ಇವರಿಗೆ ಸರ್ಕಾರದ ಆದೇಶ ಸಂಖ್ಯೆ ಎಸ್‌ಡಬ್ಲ್ಯೂಎಲ್ 102 ಎಸ್‌ಜೆಡಿ 81, ದಿನಾಂಕ:3/9 ಜೂನ್ 1981ರಲ್ಲಿ ನೀಡಿರುವ ಆರ್ಥಿಕ ಅಧಿಕಾರ ಪ್ರಸ್ತುತ ಜಾರಿಯಲ್ಲಿರುವಂತೆ ಮುಂದುವರೆಯತಕ್ಕದ್ದು ಎಂದು ತಿಳಿಸಲಾಗಿದೆ.

ಮೇಲೆ ಓದಲಾದ ಕ್ರಮಸಂಖ್ಯೆ (2)ರ ಏಕಕಡತದಲ್ಲಿ, ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಇವರು ಸಾಮಾನ್ಯ ಆರ್ಥಿಕ ಪ್ರತ್ಯಾಯೋಜನೆಯಂತೆ ಪರಿಗಣಿಸಿದಲ್ಲಿ ಸುಧಾರಣಾ ಸಂಸ್ಥೆಗಳ ಸಮರ್ಪಕ ನಿರ್ವಹಣೆಗೆ ಬೇಕಾದ ಅವಶ್ಯಕವಾದ ಆರ್ಥಿಕ ಪ್ರತ್ಯಾಯೋಜನೆ ಸಾಕಾಗುವುದಿಲ್ಲದಿರುವುದರಿಂದ ಮತ್ತು ವಿಳಂಬವಾಗುವುದರಿಂದ ಇಲಾಖಾ ವತಿಯಿಂದ ಸಲ್ಲಿಸಿರುವ ಪರಿಷ್ಕೃತ ಪ್ರಸ್ತಾವನೆಯಲ್ಲಿರುವಂತೆಯೇ ಆರ್ಥಿಕ ಪ್ರತ್ಯಾಯೋಜನೆ ಮಂಜೂರು ಮಾಡುವುದು ಅವಶ್ಯಕವಾಗಿರುತ್ತದೆ ಎಂದು ತಿಳಿಸುತ್ತಾ ಈ ಬಗ್ಗೆ ಮತ್ತೊಮ್ಮೆ ಪರಿಶೀಲಿಸಿ ಆಡಳಿತ ವಿಕೇಂದ್ರೀಕರಣಗೊಳಿಸಿ ಅನಾವಶ್ಯಕ ವಿಳಂಬವನ್ನು ತಡೆಗಟ್ಟಿ ಆಡಳಿತ ಸುಧಾರಣೆಯನ್ನು ಮಾಡಲು ಅನುಕೂಲವಾಗುವ ನಿಟ್ಟಿನಲ್ಲಿ ಸರ್ಕಾರಕ್ಕೆ ಮನಃ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲೆ (3)ರಲ್ಲಿ ಓದಲಾದ ದಿನಾಂಕ:21.5.2009ರಂದು ಅಪರ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ಅಧಿಕಾರ ಪ್ರತ್ಯಾಯೋಜನೆ ಬಗ್ಗೆ ನಡೆದ ಸಮಿತಿ ಸಭೆಯ ನಡವಳಿಯಲ್ಲಿ ಅಜೆಂಡಾ ನಂ. 1ರಲ್ಲಿ ಹಿಂದೆ ಮಹಿಳಾ ಮತ್ತು ಮಕ್ಕಳ

ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಆರ್ಥಿಕ ಅಧಿಕಾರವನ್ನು ಪರಿಷ್ಕರಣೆ ಮಾಡುವ ಸಂಬಂಧ ದಿನಾಂಕ:20.5.2008ರಂದು ನಡೆದ ಸಭೆಯಲ್ಲಿ ಕ್ರಮ ಸಂಖ್ಯೆ:9, 16 ಮತ್ತು 17ರಲ್ಲಿರುವ ಅಧಿಕಾರಗಳನ್ನು ಸಾಮಾನ್ಯ ಆರ್ಥಿಕ ಅಧಿಕಾರ ಪರಿಶೀಲಿಸುವ ಸಮಯದಲ್ಲಿ ಪರಿಷ್ಕರಣೆ ಮಾಡುವುದಾಗಿ ತಿಳಿಸಿದ್ದರೂ ಪುನಃ ಇಲಾಖೆಯಿಂದ ಈ ವಿಶೇಷ ಅಧಿಕಾರಗಳನ್ನು ಪರಿಷ್ಕರಣೆ ಮಾಡಲು ಕೋರಿಕೆ ಬಂದ ಪ್ರಯುಕ್ತ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಸಂಬಂಧಿಸಿದಂತೆ ಸಭೆಯು ಕೂಲಂಕಷವಾಗಿ ಚರ್ಚಿಸಿ ನಡವಳಿಯೊಂದಿಗೆ ಲಗತ್ತಿಸಿದ ಅನುಬಂಧದಲ್ಲಿರುವಂತೆ ಆರ್ಥಿಕ ಅಧಿಕಾರಗಳನ್ನು ಪ್ರತ್ಯಾಯೋಜಿಸಲು ತೀರ್ಮಾನವನ್ನು ತೆಗೆದುಕೊಂಡಿರುತ್ತದೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂ:ಮಮಇ 317 ಪಿಹೆಚ್‌ಪಿ 2008, ಬೆಂಗಳೂರು, ದಿನಾಂಕ:29ನೇ ಸೆಪ್ಟೆಂಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಲಾದ ಹಿನ್ನೆಲೆಯಲ್ಲಿ ಈ ಆದೇಶದೊಂದಿಗೆ ಲಗತ್ತಿಸಿರುವ ಅನುಬಂಧದಲ್ಲಿರುವ ಅಂಶಗಳ ಬಗ್ಗೆ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿರ್ದೇಶನಾಲಯದ ವಿವಿಧ ಹಂತದ ಅಧಿಕಾರಿಗಳ ಆರ್ಥಿಕ ಅಧಿಕಾರ ಪ್ರತ್ಯಾಯೋಜನೆಯನ್ನು ಪರಿಷ್ಕೃತ ಪಟ್ಟಿಯಲ್ಲಿರುವಂತೆ ಜಾರಿಗೊಳಿಸಲು ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಮಂಜೂರಾತಿ ನೀಡಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 690 ವೆಚ್ಚ-3:2009, ದಿ:22.8.2009, ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಆರ್. ನರಸಿಂಹಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ-2 (ಪ್ರ),
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ANNEXURE TO GOVERNMENT ORDER NO WCD 317 PHP 2008 DATED:29.9.2009

DELEGATION OF SPECIAL FINANCIAL POWERS TO DEPUTY DIRECTORS/ASSIST DIRECTORS OF DISTRICT OFFICIARS OF THE DEPARTMETN OF WOMEN AND CHILD DEVELOPMENT

Sl. No.	Description of powers	Existing Powers As per G.o.No. DWCD 131 SJD 2000 Dated:30.6.2003	Proposed for revision	Delegated powers [Revised]
1	Disposal of unusable clothing and bedding articles, periodicals, text books, library books, utenslis, sports articles, gazette, furniture, tools and equipment and other dead stock	Rs. 100/- each case Rs. 10.000/- per Annum	Up to Rs 25,000/- each case Rs, 50,000/-per annum per Institution	Upto Rs. 5000/- each case Rs. 20,000/-per annum per Institution
2	issue of A.C.Bill authorization towards purchase of PDS Food articles, gas Cylinders and medicines			
	[a] PDS food articles	Rs. 7,500/-	Up to Rs .1,00,000/-each time	Upto Rs .10000/- each time
	[b] Gas Cylinders	Nill	Up to Rs. 15,000/- each time	Upto Rs .5,000/- each month
	[c] Medicines	Rs. 500/-each case subject to Rs. 5,000/- per annum	Up to Rs .1,000/- each time	Up to Rs. 1,000/- each time

3.	Countersiognature of Bills:	Full powers	Full Powers	Full powers
	All Types of bills within their Jurisdiction			
	1. A.C. Bills			
	2. T.A. Bills			
	3. D.C. Bills			
	4. NDC Bills			
	5. Grant-in-aid Bills			
	6. Scholarship Bills			
	7. Fit institution Bills			
	8. Supplementary Nutrition Bills			
	9. Arrears bills, i.r.o. and allowance			

ಆರ್. ನರಸಿಂಹಯ್ಯ
ಸರ್ಕಾರದ ಅಧೀನ ಕಾರ್ಯದರ್ಶಿ–2 (ಪ್ರ),
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಪಿ.ಆರ್. 2365

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ವಿಷಯ : ಶ್ರೀ ಮಂಜುನಾಥ ಸುಳ್ಳೊಳ್ಳಿ, ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ವಿಜಾಪುರ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ : ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿ, ವಿಜಾಪುರ ಜಿಲ್ಲೆ, ವಿಜಾಪುರ ರವರ ಪತ್ರ ಸಂಖ್ಯೆ :ಆರ್‌ಬಿ :ಎಸ್.ಸಿ:ವ್ಲೆ:ಸಿಆರ್ :2009–10, ದಿನಾಂಕ :2.10.2009

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ದಂಡಾಧಿಕಾರಿಗಳು, ವಿಜಾಪುರ ಜಿಲ್ಲೆ, ವಿಜಾಪುರ ರವರು ವಿಜಾಪುರ ಜಿಲ್ಲೆಯಲ್ಲಿ ಹೆಚ್ಚಿನ ಮಳೆ ಸುರಿದು, ಅನೇಕ ಕಡೆ ಮನೆಗಳು ಬಿದ್ದು ಬಹಳಷ್ಟು ಪ್ರಾಣ ಹಾನಿ ಹಾಗೂ ಆಸ್ತಿ ಹಾನಿಯಾಗಿರುತ್ತದೆ ಎಂದು ಈ ಸಂದರ್ಭದಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಜಿಲ್ಲೆಗೆ ಆಗಮಿಸಿ ಸಂತ್ರಸ್ತರಿಗೆ ಸಾಂತ್ವನ ಹೇಳುವ ಜೊತೆಗೆ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸುವ ಸಂದರ್ಭದಲ್ಲಿ ಶ್ರೀ ಮಂಜುನಾಥ ಸುಳ್ಳೊಳ್ಳಿ, ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ವಿಜಾಪುರ ಇವರನ್ನು ಅನೇಕ ಬಾರಿ ಸಂಪರ್ಕಿಸಿದಾಗ್ಯೂ ದೊರೆತಿಲ್ಲವೆಂದು ಮಾನ್ಯ ಸಚಿವರು ತಿಳಿಸಿರುತ್ತಾರೆಂದು ಹಾಗೂ ಖುದ್ದಾಗಿ ಜಿಲ್ಲಾಧಿಕಾರಿಯವರೂ ಸಹ ಅನೇಕ ಬಾರಿ ಸಂಪರ್ಕಿಸಲು ಪ್ರಯತ್ನಪಟ್ಟರೂ ಸಹ ಅವರು ಲಭ್ಯವಾಗಿರುವುದಿಲ್ಲವೆಂದು ತಿಳಿಸಿ ಅವರನ್ನು ಕೂಡಲೇ ಅಮಾನತ್ತುಗೊಳಿಸಲು ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ತಿಳಿಸಿರುತ್ತಾರೆಂದು ಆದ್ದರಿಂದ ಶ್ರೀ ಮಂಜುನಾಥ ಸುಳ್ಳೊಳ್ಳಿ, ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ವಿಜಾಪುರ ಇವರನ್ನು ಕೂಡಲೇ ಸೇವೆಯಿಂದ ಅಮಾನತ್ತುಗೊಳಿಸಬೇಕೆಂದು ಸರ್ಕಾರವನ್ನು ಕೋರಿರುತ್ತಾರೆ.

ತತ್ಸಬಂಧದಲ್ಲಿ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ:ಕಸಂವಾಪ್ರ 98 ವಾಪ್ರಸಿ 2009, ಬೆಂಗಳೂರು, ದಿನಾಂಕ:12ನೇ ಅಕ್ಟೋಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಶ್ರೀ ಮಂಜುನಾಥ ಸುಳ್ಳೊಳ್ಳಿ, ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ವಿಜಾಪುರ ಜಿಲ್ಲೆಯಲ್ಲಿ ಪ್ರವಾಹ ಪೀಡಿತ ಪ್ರದೇಶಗಳಿಗೆ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರು ಭೇಟಿ ನೀಡಿದ ಸಮಯದಲ್ಲಿ ಮಾನ್ಯ ಸಚಿವರ ಹಾಗೂ ಜಿಲ್ಲಾಧಿಕಾರಿಗಳ ಸಂಪರ್ಕಕ್ಕೆ ದೊರೆತಿಲ್ಲವಾದ ಕಾರಣ ಸದರಿಯವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಕರ್ನಾಟಕ ನಾಗರೀಕ ಸೇವಾ [ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ]ನಿಯಮಗಳು 1957ರ ನಿಯಮ 10(1)(ಎ)ರ ಜೊತೆಯಲ್ಲಿ ಓದಲಾದ ಕರ್ನಾಟಕ ನಾಗರೀಕ ಸೇವಾ [ನಡತೆ] ನಿಯಮಗಳು 1966ರ ನಿಯಮ 3(1)(iii)ರ ಪ್ರಕಾರ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಗೊಳಿಸಿದೆ.

ಶ್ರೀ ಮಂಜುನಾಥ ಸುಳ್ಳೊಳ್ಳಿ, ಸಹಾಯಕ ನಿರ್ದೇಶಕರು, ವಾರ್ತಾ ಇಲಾಖೆ, ವಿಜಾಪುರ ಇವರು ನಿಯಮಾನುಸಾರ ಜೀವನಾಧಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಅಲ್ಲದೆ ಇವರು ಕೇಂದ್ರ ಸ್ಥಾನವನ್ನು ಸರ್ಕಾರದ ಪೂರ್ವಾನುಮತಿಯಿಲ್ಲದೆ ಬಿಡುವಂತಿಲ್ಲ ಎಂದು ಈ ಮೂಲಕ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ
ಎಸ್. ನಾರಾಯಣಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ಪಿ.ಆರ್. 2366

FOREST, ECOLOGY AND ENVIRONMENT SECRETARIAT

Sub : Diversion of 56.508 ha. of forest land in Hyarada Reserve Forest of Davangere Forest Division for establishing 39.60 MW Wind Power project in favour of M/s Chitradurga Wind Power Private limited, Bangalore

Read :
1. Letter No.A5(5)GFL.CR-13/07-08, dated:02-02-09 of Principal Chief Conservator of Forests, Bangalore.
2. State Government letter No. FEE 141 FLL 2008, dated: 12-02-2009
3. Letter No.8-11/2009-FC, dated:24th March 2009 of Government of India, Ministry of Environment and Forests, New Delhi.
4. Letter No.A5(5)GFL.CR.13/07-08, dated:27-05-09 of Principal Chief Conservator of Forests, Bangalore.
5. State Government letter No. FEE 141 FLL 2009, dated: 04-08-2009
6. LetterNo.8-11/2009-FC,dated:13.08.2009 of Government of India, Ministry of Environment and Forests, New Delhi.

PREAMBLE:

The Principal Chief Conservator of Forests, Bangalore vide his letter dated:02.02.2009 read at 1 above has submitted the proposal to obtain the approval of Government of India under Section 2 of Forest (Conservation) Act,1980 for diversion of 56.508 ha. of forest land in Hyarada Reserve Forest of Davangere Forest Division for establishing 39.60 MW Wind Power project in favour of M/s Chitradurga Wind Power Private Limited, Bangalore subject to certain conditions.

Accordingly the proposal was recommended to Government of India vide State Government letter dated 12-02-2009 read at 2 above.

The Government of India, Ministry of Environment and Forests, New Delhi vide their letter dated: 24-03-2009 read at 3 above has given its approval in Principle (Stage-I) subject to fulfillment of certain conditions and the same was communicated to the Principal Chief Conservator of Forests, Bangalore for compliance.

The Principal Chief Conservator of Forests, Bangalore vide his letter dated: 27.05.2009 read at 4 above furnished the compliance report and the same has been sent to Government of India vide State Government letter dated: 04-08-2009 read at 5 above.

Sri S. Shanthaveer, Civil Judge (Sr. Dn), JMFC, Bhadravathi is granted Earned leave for 13 days from 13.4.2009 to 25.4.2009 (bdi) with permission to prefix and suffix the General Holidays on 10th, 11th, 12th, 26th and 27th of April 2009, on Private Affairs.

The II Addl. Civil Judge (Sr. Dn.) and JMFC, Shimoga, from 10.4.2009 till the commencement of office hours of 13.4.2009 and the Civil Judge (Jr .Dn) and JMFC., Bhadravathi, from commencement of office hours of 13.4.2009 till 27.4.2009, have been placed in additional charge of the court of the Civil Judge (Sr. Dn) JMFC., Bhadravathi.

Sri S. Shanthaveer, Civil Judge (Sr. Dn), JMFC., Bhadravathi, is re-posted to the same post on expiry of the above leave period.

By Order of the High Court,

P.R. 1514 Deputy Registrar

HIGH COURT OF KARNATAKA

NOTIFICATION

GOB (I) 382/2008, Bangalore, Dated: 26th October, 2009

Sri M.S. Balakrishna, the then Presiding Officer, Industrial Tribunal, Bangalore, presently working as Presiding Officer, II Addl Labour Court, Bangalore, is granted Earned leave for 10 days from 1.12.2008 to 10.12.2008 (bdi), on Private Affairs.

The Presiding Officer, II Addl Labour Court, Bangalore, is placed in additional charge of the court of the Presiding Officer, Industrial Tribunal, Bangalore, during the above leave period.

Sri, M.S. Balakrishna, the then Presiding Officer, Industrial Tribunal, Bangalore, presently working as Presiding Officer, II Addl. Labour Court, Bangalore, is re-posted to the same post on expiry of the above leave period.

By Order of the High Court,

P.R. 1515 Deputy Registrar

HIGH COURT OF KARNATAKA

NOTIFICATION

GOB (I) 103/2009, Bangalore, Dated: 26th October, 2009

Sri A.V. Vaidya, XIV Addl. Chief Metropolitan Magistrate, Bangalore, is granted Earned leave for 10 days from 10.8.2009 to 19.8.2009 (bdi), on Private Affairs.

The X Addl., Chief Metropolitan Magistrate, Bangalore, is placed in additional charge of the court of the XIV Addl. Chief Metropolitan Magistrate, Bangalore, during the above leave period.

Sri A.V. Vaidya, XIV Addl. Chief Metropolitan Magistrate, Bangalore, is re-posted to the same post on expiry of the above leave period.

By Order of the High Court,

P.R. 1516 Deputy Registrar

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೪	ಬೆಂಗಳೂರು, ಗುರುವಾರ, ನವೆಂಬರ್ ೧೯, ೨೦೦೯ (ಕಾರ್ತೀಕ ೨೮, ಶಕ ವರ್ಷ ೧೯೩೧)	ಸಂಚಿಕೆ ೪೬

ಭಾಗ-೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ
ಬಿ3:ಅಮೊ:ವಾಹನ:18/2001-02, ದಿನಾಂಕ:1ನೇ ಆಗಸ್ಟ್, 2009

ಉಪಸ್ಥಿತರು: ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ.
ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಪಿರ್ಯಾಧಿದಾರರು: ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ಹೊಸನಗರ, (ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಬಾಧ್ಯತೆದಾರರು: ಶ್ರೀ ಅಬ್ಬು ಬಿನ್ ಸೈಯದ್ ಆಲಿ,
ಬನ್ನೂರು ಗ್ರಾಮ, ಮತ್ತು ಅಂಚೆ, ಬಾಳೆಹೊನ್ನೂರು, ಎನ್.ಆರ್.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ.
(ಶ್ರೀ ಎಸ್.ಎನ್. ಮಂಜುನಾಥ, ವಕೀಲರು, ಸಾಗರ)

ಪ್ರಸ್ತಾವನೆ:

ದಿನಾಂಕ:21.07.2001 ರಂದು ಹೊಸನಗರ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿಯವರು ರಾತ್ರಿ ಗಸ್ತು ಮಾಡಲು ಸುಮಾರು ಮಧ್ಯರಾತ್ರಿ 1-00 ಗಂಟೆ ಸಮಯದಲ್ಲಿ ಹೊಸನಗರ ಬಸ್‌ಸ್ಟ್ಯಾಂಡ್ ಹತ್ತಿರ ಕಾಯುತ್ತಾ ನಿಂತಿದ್ದಾಗ ರಿಪ್ಪನ್‌ಪೇಟೆ ಕಡೆಯಿಂದ ಒಂದು 407 ವಾಹನ ನಂ. ಕೆಎ-18-3212 ಆಗಿದ್ದು, ಅದನ್ನು ನಿಲ್ಲಿಸಲು ಸೂಚಿಸಿದರೂ ನಿಲ್ಲಿಸದೆ ಇಲಾಖೆಯ ಸಮವಸ್ತ್ರದಾರಿಗಳನ್ನು ಕಂಡು ವೇಗವಾಗಿ ಚಲಿಸಿರುತ್ತದೆ. ನಂತರ ಇಲಾಖಾ ಜೀಪು ನಂ. ಕೆಎ-14-ಜಿ-421ರಲ್ಲಿ ಈ ವಾಹನವನ್ನು ಹಿಂಭಾಲಿಸಿ ಪೊಲೀಸ್ ಠಾಣೆಗೆ ವೈರ್‌ಲೆಸ್ ಮೂಲಕ ತಿಳಿಸಿ ವಾಹನ ತಡೆಯಲು ಸೂಚಿಸಿದಂತೆ, ಮುಸ್ಲಿಂ ಕೇರಿಯಲ್ಲಿ ವಾಹನವನ್ನು ನಿಲ್ಲಿಸಿ ಆರೋಪಿಗಳು ಕತ್ತಲೆಯಲ್ಲಿ ಪರಾರಿಯಾಗಿರುತ್ತಾರೆ. ನಂತರ ವಾಹನ ಪರಿಶೀಲಿಸಲಾಗಿ ಅದರಲ್ಲಿ 25 ಚೀಲ ಹಸಿ ಶುಂಠಿ ಇದ್ದು, ಅದರ ಕೆಳಭಾಗದಲ್ಲಿ 10 ಶ್ರೀಗಂಧ ತುಂಬಿದ ಚೀಲಗಳಿದ್ದು, ಯಾವುದೇ ಪರವಾನಿಗೆ ಇಲ್ಲದೆ ಕಾನೂನು ಬಾಹಿರವಾಗಿ ಶ್ರೀಗಂಧವನ್ನು ಕಳ್ಳ ಸಾಗಾಣಿಕೆ ಮಾಡುತ್ತಿದ್ದಾರೆಂದು ಪರಿಗಣಿಸಿ, ವಾಹನ, ಶ್ರೀಗಂಧ ಮತ್ತು ಹಸಿ ಶುಂಠಿ ಜಪ್ತುಮಾಡಿ ಮಹಜರ್ ಕ್ರಮ ಜರುಗಿಸಿ ಹೊಸನಗರ ಪೊಲೀಸ್ ಠಾಣೆ ಗುನ್ನೆ ನಂ.88/2001 ದಿನಾಂಕ:22.07.2001 ರಂದು ದಾಖಲಿಸಿ ನಂತರ ವಾಹನ ಮತ್ತು ಶ್ರೀಗಂಧವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ನಂತರ ವಾಹನ ಮತ್ತು ಶ್ರೀಗಂಧವನ್ನು ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಡಲು ಆದೇಶವಾಗಿರುತ್ತದೆ.

ನಂತರ ಈ ವಾಹನದ ಮಾಲೀಕರೆಂದು ಮತ್ತು ಲಭ್ಯತೆಯ ಆರ್.ಸಿ. ವಿವರದಂತೆ ಮಾಲೀಕರಾದ ಶ್ರೀ ಅಬ್ಬು ಬಿನ್ ಸೈಯದ್ ಆಲಿ, ಬನ್ನೂರು ಗ್ರಾಮ ಮತ್ತು ಅಂಚೆ, ಬಾಳೆಹೊನ್ನೂರು, ಎನ್.ಆರ್.ಪುರ ತಾಲ್ಲೂಕು ರವರು ವಕೀಲರಾದ ಶ್ರೀ ಪಿ.ಎ. ಪುಟ್ಟಪ್ಪ, ಸಾಗರ ಇವರ ಮುಖಾಂತರ ಕ್ಲೈಮು ಅರ್ಜಿಯನ್ನು ದಿನಾಂಕ:26.09.2001 ರಂದು ಈ ನ್ಯಾಯಾಲಯಕ್ಕೆ

ಸಲ್ಲಿಸಿ ವಾಹನವನ್ನು ಮಧ್ಯಂತರ ಅವಧಿಗೆ ಬಿಟ್ಟುಕೊಡಲು ಕೋರಿರುತ್ತಾರೆ. ಇವರ ಕೋರಿಕೆ ಅರ್ಜಿಯನ್ನು ಈ ನ್ಯಾಯಾಲಯದ ಆದೇಶ ಸಂಖ್ಯೆ: ಅಮೊ:ವಾಹನ-18/01-02 ದಿನಾಂಕ:07.06.2003 ರಂದು ತಿರಸ್ಕರಿಸಿ ಆದೇಶವಾಗಿದೆ. ಈ ಆದೇಶದ ಮೇಲೆ ವಾಹನ ಮಾಲೀಕರು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ ಇಲ್ಲಿ ಕ್ರಿಮಿನಲ್ ಮಿಸಲೇನಿಯಸ್ ಅಪೀಲ್ ನಂ.22/03ರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ಸದರಿ ಅಪೀಲಿನ ದಿನಾಂಕ:20.10.2003ರಲ್ಲಿ 5 ಷರತ್ತುಗಳನ್ನು ವಿಧಿಸಿ ಖಾಲಿ ವಾಹನವನ್ನು ಮಧ್ಯಂತರ ಅವಧಿಗೆ ಬಿಡುಗಡೆಗೆ ಆದೇಶವಾಗಿರುತ್ತದೆ. ಆದರೆ ವಾಹನವನ್ನು ಇಲ್ಲಿಯವರೆವಿಗೂ ವಾಹನ ಮಾಲೀಕರು ಬಿಡಿಸಿಕೊಂಡಿರುವುದಿಲ್ಲ.

ನಂತರ ಪಿಡಬ್ಲ್ಯೂ-2 ಬಿ.ಕೆ. ನಂಜೇಗೌಡ, ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಇವರನ್ನು ದಿನಾಂಕ:06.08.2005ರಂದು ಕರೆಸಿ ಸಹಾಯಕ ಸರ್ಕಾರಿ ಅಭಿಯೋಜಕರಿಂದ ಮುಖ್ಯ ವಿಚಾರಣೆ 2001ರಲ್ಲಿ ಹೊಸನಗರದಲ್ಲಿ ಆರಕ್ಷಕ ವೃತ್ತ ನಿರೀಕ್ಷಕನಾಗಿದ್ದೆ. ದಿನಾಂಕ:27.02.2001ರಂದು ಗಸ್ತಿನಲ್ಲಿದ್ದಾಗ ಹೊಸನಗರ ಕಡೆಯಿಂದ ರಿಪ್ಪನ್‌ಪೇಟೆ ಕಡೆ ಹೋಗಲು ಒಂದು 407 ವಾಹನ ಬಂದಿತು. ನಿಲ್ಲಿಸಲು ಸೂಚಿಸಿದೆವು. ನಿಲ್ಲಿಸದೆ ವಾಪಾಸ್ ಹೊಸನಗರದ ಕಡೆ ಹೋದಾಗ ಬೆನ್ನಟ್ಟಿದಾಗ ಮಸೀದಿ ರಸ್ತೆಯ ಭಾಷಾ ಸಾಬ್‌ನ ಅಂಗಡಿ ಹತ್ತಿರ ನಿಲ್ಲಿಸಿ ಆರೋಪಿಗಳು ಓಡಿಹೋಗಿರುತ್ತಾರೆ. ವಾಹನ ನಂ.ಕೆಎ-18-3212 ಆಗಿದ್ದು, ವಾಹನದೊಳಗೆ 25 ಚೀಲ ಶುಂಠಿ ಇದ್ದು, ಅದರ ಕೆಳಭಾಗದಲ್ಲಿ 10 ಚೀಲದಲ್ಲಿ ಶ್ರೀಗಂಧದ ಚಕ್ಕೆ, ಬೇರು, ಕಾಂಡ ಇದ್ದು, ಇದನ್ನು ಸಾಗಿಸಲು ರಹದಾರಿ ಇಲ್ಲದ ಕಾರಣ ಇದು ಅಕ್ರಮ ಸಾಗಾಣಿಕೆ ಎಂದು ಪರಿಗಣಿಸಿ, ಮಹಜರ್ ಕ್ರಮದೊಂದಿಗೆ ವಾಹನ ಮತ್ತು ಶ್ರೀಗಂಧವನ್ನು ಜಪ್ತುಮಾಡಿ ನಂಬರ್ ಕೊಟ್ಟು ಶ್ರೀಗಂಧ 181.5 ಕೆ.ಜಿ. ಇದ್ದು, ನಿಪಿ-1ಎ ಮತ್ತು ನಿಪಿ-2ಎ ನನ್ನ ಸಹಿ ಇರುತ್ತದೆ. ಮಹಜರ್‌ನ್ನು ನನ್ನ ಉಕ್ತಲೇಖನದಲ್ಲಿ ಬರೆದಿದೆ. ಮಹಜರ್ ಮುಗಿಯುವಾಗ ಬೆಳಿಗ್ಗೆ 6 ಗಂಟೆಯಾಗಿತ್ತು. ವಾಹನ ಮತ್ತು ಮುದ್ದೆಮಾಲನ್ನು ಠಾಣಾಧಿಕಾರಿಗೆ ವಹಿಸಿಕೊಟ್ಟೆ, ಮುಂದಿನ ತನಿಖೆಯನ್ನು ಆರಕ್ಷಕ ಉಪ ನಿರೀಕ್ಷಕರು ಕೈಗೊಂಡಿದ್ದಾರೆ. ಆರೋಪಿಗಳ ಪತ್ತೆಗೆ ಪ್ರಯತ್ನಿಸಿದರೂ ಪತ್ತೆಯಾಗಿಲ್ಲ. ವಾಸನೆ ಮತ್ತು ಮೇಲ್ನೋಟದಿಂದ ಅದು ಶ್ರೀಗಂಧ ಎಂದು ಖಚಿತಪಡಿಸಿಕೊಂಡೆವು. ವಾಹನ ಮಾಲೀಕರ ಗಮನದಲ್ಲಿದ್ದು ಈ ಅಪರಾಧ ಎಸಗಿದ್ದರಿಂದ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಪಾಟಿ ಸವಾಲು ಎಸ್.ಎನ್.ಎಂ. ವಕೀಲರಿಂದ ವಾಹನದಿಂದ ಇಳಿದು ಓಡಿದವರು ಯಾರೆಂದು ಗುರುತಿಸಲು ಸಾಧ್ಯವಾಗಲಿಲ್ಲ. ವಾಹನ ಪರಿಶೀಲಿಸಿದಾಗ 25 ಚೀಲ ಶುಂಠಿ ಕೆಳಗೆ 10 ಚೀಲ ಶ್ರೀಗಂಧವಿತ್ತು. ಈ ವಾಹನದ ಮಾಲೀಕತ್ವದ ಬಗ್ಗೆ ವಿಚಾರಣೆ ಮಾಡಲಿಲ್ಲ. ಅಬ್ಬು ಎನ್ನುವವರು ಈ ವಾಹನ ಬಾಡಿಗೆಗೆ ಕೊಟ್ಟು ಜೀವನ ಮಾಡುತ್ತಿರುವುದು ತಿಳಿದಿಲ್ಲ. ಜಪ್ತಾದ ಅರಣ್ಯ ಉತ್ಪನ್ನವನ್ನು ತೂಕ ಮಾಡಿ ಮಹಜರ್ ಬರೆದಿದೆ. ಈ ಮಹಜರನ್ನು ಪಿಸಿ-1231 ಬರೆದಿದ್ದು, ಈ ವಾಹನವನ್ನು ನಾನು, ವಾಹನ ಚಾಲಕ ಮತ್ತು ಇಬ್ಬರು ಸಿಬ್ಬಂದಿಯವರು ಜಪ್ತು ಮಾಡಿದ್ದು ಮಹಜರಿಗೆ ವಾಹನ ಚಾಲಕ ಸಹಿಮಾಡಿಲ್ಲ. ಎಲ್ಲಾ ಚೀಲಗಳನ್ನು ವಾಹನದಿಂದ ಇಳಿಸಿ ಪರಿಶೀಲಿಸಿರುತ್ತೇವೆ. ದಿನಾಂಕ:22.07.2001ರಂದು ಜಪ್ತಾದ ವಾಹನದಲ್ಲಿ ಶ್ರೀಗಂಧವಿರಲಿಲ್ಲ. ಸುಳ್ಳು ಕೇಸು ದಾಖಲಿಸಿದ್ದೇವೆ ಎನ್ನುವುದು, ಕ್ರೈಂ ಪ್ರಕರಣಗಳ ಅಂಕಿಅಂಶ ಹೆಚ್ಚಿಸುವ ಬಗ್ಗೆ ಅಮಾಯಕರ ವಾಹನಕ್ಕೆ ವಾರಸುದಾರರಿಲ್ಲದ ಶ್ರೀಗಂಧವನ್ನು ಹಾಕಿ ಕೇಸು ದಾಖಲಿಸಿದೆ ಎಂದರೆ ಸರಿಯಲ್ಲ.

ಡಿಫೆನ್ಸ್ ಸಾಕ್ಷಿ ವಿಚಾರಣೆಗೆ ದಿನಾಂಕ:24.01.2009, 04.04.2009, 30.05.2009ರಂದು ಮೂರು ಬಾರಿ ದಿನಾಂಕವನ್ನು ನಿಗದಿಪಡಿಸಿದ್ದು, ಡಿಫೆನ್ಸ್ ಸಾಕ್ಷಿಯು 3 ದಿನಾಂಕಗಳಲ್ಲಿ ಗೈರುಹಾಜರಾಗಿದ್ದು, ಈ ಪ್ರಕರಣದಲ್ಲಿ ಸಾಕ್ಷಿ ನುಡಿಯಲು ಆಸಕ್ತಿ ಇಲ್ಲವೆಂದು ಪರಿಗಣಿಸಿ ಮುಂದಿನ ಹಂತಕ್ಕೆ ದಿನಾಂಕ ನಿಗದಿಪಡಿಸಿದೆ.

ಡಿಫೆನ್ಸ್ ಕಡೆಯವರಿಗೆ ವಾದ ಮಂಡಿಸಲು ದಿನಾಂಕ:06.06.2009, 20.06.2009, 27.06.2009, 18.07.2009ರಂದು 4 ಬಾರಿ ದಿನಾಂಕವನ್ನು ನಿಗದಿಪಡಿಸಿದ್ದರೂ ವಾಹನ ಮಾಲೀಕರಾಗಲೀ, ಅವರ ಪರ ವಕೀಲರಾಗಲೀ ಹಾಜರಾಗದೇ ಇದ್ದುದ್ದರಿಂದ ಈ ಪ್ರಕರಣದಲ್ಲಿ ಡಿಫೆನ್ಸ್ ಕಡೆಯವರಿಗೆ ವಾದ ಮಂಡಿಸಲು ಆಸಕ್ತಿ ಇಲ್ಲವೆಂದು ಪರಿಗಣಿಸಿ ಏನೂ ವಾದವಿಲ್ಲವೆಂದು ತೀರ್ಮಾನಿಸಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:18.07.2009 ರಂದು ವಾದ ಮಂಡಿಸಿ, ವಾಹನವನ್ನು ಶ್ರೀಗಂಧದ ಸಮೇತ ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿಯವರು ದಿನಾಂಕ:22.07.2001 ರಂದು ಪತ್ತೆ ಹಚ್ಚಿ ವಾಹನ 407 ವ್ಯಾನ್ ಕೆಎ-18-3212 ನ್ನು ಮತ್ತು ಶ್ರೀಗಂಧ 181 ಕೆ.ಜಿ. 500 ಗ್ರಾಂ ನ್ನು ಜಪ್ತು ಮಾಡಿ, ಹೊಸನಗರ ಪೋಲೀಸ್ ಠಾಣೆಯ ಗುನ್ಹೆ ನಂ.88/01ನ್ನು ದಾಖಲಿಸಿ ವಾಹನ ಮತ್ತು ಶ್ರೀಗಂಧವನ್ನು ಮಹಜರ್, ಪ್ರಥಮ ವರ್ತಮಾನ ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಮತ್ತು ಸಾಕ್ಷಿಯ ಹೇಳಿಕೆಗೂ, ಸಲ್ಲಿಸಿದ ದಾಖಲೆಗೂ ಒಂದಕ್ಕೊಂದು ತಾಳೆಯಾಗುತ್ತಿದೆ. ಘಟನೆ ದಿನ ವಾಹನ ಮಾಲೀಕರು ವಾಹನಕ್ಕೆ ನೇಮಿಸಿದ ಚಾಲಕನನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ಪೂರ್ಣ ಸಾಕ್ಷಿ ನುಡಿಸಿರುವುದಿಲ್ಲ. ಅಲ್ಲದೇ ಆರ್.ಸಿ. ಮಾಲೀಕರು ಸಾಕ್ಷಿ ನುಡಿದಿರುವುದಿಲ್ಲ. ಈ ಬಗ್ಗೆ ಡಿಫೆನ್ಸ್ ಕಡೆಯವರು ಸತ್ಯವನ್ನು ಮರೆಮಾಚಿರುತ್ತಾರೆ. ಇಂತಹುದೇ ಅಂಶವನ್ನು ಗಣನೆಗೆ ತೆಗೆದುಕೊಂಡು ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕ, ಬೆಂಗಳೂರು ರಿಟ್ ಪಿಟಿಷನ್ ನಂ.10144/2006 ದಿನಾಂಕ:23.10.2008ರಲ್ಲಿ ಆದೇಶವಾಗಿರುತ್ತದೆ. ಆದ್ದರಿಂದ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿರುತ್ತಾರೆ.

ಈ ಪ್ರಕರಣದಲ್ಲಿ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಗ್ರಿಗಳ ತಳಹದಿಯ ಮೇಲೆ ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತಿದೆ.

1) ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು 407 ವ್ಯಾನ್ ನಂ.ಕೆಎ-18-3212 ರಲ್ಲಿ ಶ್ರೀಗಂಧ 181.500 ಕೆ.ಜಿ.ಯನ್ನು ದಿನಾಂಕ:22.07.2001 ರಂದು ಅಕ್ರಮವಾಗಿ ಅರಣ್ಯ ಉತ್ಪನ್ನವನ್ನು ಸಾಗಿಸಲು ಉಪಯೋಗಿಸಲಾಗಿತ್ತೇ ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?

2) ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರವರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?

3) ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ 407 ವ್ಯಾನ್‌ನಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಶ್ರೀಗಂಧವನ್ನು ಸಾಗಿಸಲು ಶಾಮೀಲಾಗಿದ್ದಾರೆಯೇ ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಕೆ ತೆಗೆದುಕೊಂಡಿರುತ್ತಾರೆಯೇ?

4) ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ
2. ಎರಡನೇ ಅಂಶಕ್ಕೆ ಹೌದು ಎಂತಲೂ
3. ಮೂರನೇ ಅಂಶಕ್ಕೆ ಹೌದು ಎಂದಾಗಿರುತ್ತದೆ.

ಅಂಶ-1:

ದಿನಾಂಕ:21.07.2001ರಂದು ಹೊಸನಗರ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿಯವರು ರಾತ್ರಿ ಗಸ್ತು ತಿರುಗುತ್ತಿದ್ದಾಗ ಸುಮಾರು 1 ಗಂಟೆ ಸಮಯದಲ್ಲಿ ರಿಪ್ಪನ್‌ಪೇಟೆ ಕಡೆಯಿಂದ ಹೊಸನಗರಕ್ಕೆ ರಾಜ್ಯ ಹೆದ್ದಾರಿ 206ರಲ್ಲಿ ಒಂದು 407 ವಾಹನ ಕೆಎ-18-3212 ಶ್ರೀಗಂಧವನ್ನು ಕಳ್ಳ ಸಾಗಾಣಿಕೆ ಮಾಡುತ್ತಿರುವುದನ್ನು ಪತ್ತೆಹಚ್ಚಿ ವಾಹನದಲ್ಲಿ 25 ಚೀಲ ಶುಂಠಿ ಜೊತೆಯಲ್ಲಿ ತಳಭಾಗದಲ್ಲಿ ಶ್ರೀಗಂಧ 10 ಚೀಲ ಇದ್ದು, ತೂಕ 181.500 ಕೆ.ಜಿ. ಇದ್ದು, ಇದನ್ನು ಸಾಗಿಸಲು ರಹದಾರಿ ಇಲ್ಲದ ಕಾರಣ ವಾಹನ ಮತ್ತು ಶ್ರೀಗಂಧವನ್ನು ಪ್ರಥಮ ವರ್ತಮಾನ ವರದಿ ಮತ್ತು ಮಹಜರ್ ವರದಿಯೊಂದಿಗೆ ಇಲಾಖಾ ಪರ ಜಪ್ತು ಮಾಡಿ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 86, 87 ಮತ್ತು ಐ.ಪಿ.ಸಿ. ಕಲಂ 379 ರ ಅಡಿಯಲ್ಲಿ ಗುನ್ನೆ ನಂ.88/2001ರಲ್ಲಿ ಕೇಸನ್ನು ದಾಖಲಿಸಿ ದಾಖಲೆಗಳನ್ನು ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದರಿಂದ ಈ ವಾಹನವನ್ನು ಶ್ರೀಗಂಧ 181.500 ಕೆ.ಜಿ. ಕಳ್ಳಸಾಗಾಣಿಕೆಗೆ ಉಪಯೋಗಿಸಿರುವುದರಿಂದ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೆಂದು ನನ್ನ ಉತ್ತರವಾಗಿದೆ.

ಅಂಶ-2:

ಆರ್.ಸಿ. ಮಾಲೀಕರಾದ ಶ್ರೀ ಅಬ್ಬು ಬಿನ್ ಸೈಯದ್ ಆಲಿ, ಬನ್ನೂರು ಗ್ರಾಮ ಮತ್ತು ಅಂಚೆ, ಬಾಳೆಹೊನ್ನೂರು, ಎನ್.ಆರ್.ಪುರ ತಾಲ್ಲೂಕು, ಚಿಕ್ಕಮಗಳೂರು ಜಿಲ್ಲೆ, ಇವರು ದಿನಾಂಕ:26.09.2001 ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. ಇವರ ಅರ್ಜಿಯಲ್ಲಿ ಮತ್ತು ಬಿ ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದ ವಿಳಾಸದಂತೆ ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ)(1) ಪ್ರಕಾರ ಕಾರಣ ಕೇಳಿ ಪತ್ರವನ್ನು ದಿನಾಂಕ:12.09.2001 ರಂದು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದೆ. ನಂತರ ಆರ್.ಸಿ. ಮಾಲೀಕರು ಈ ವಾಹನವನ್ನು ಮಧ್ಯಂತರ ಸುಪರ್ಧಿಗೆ ಬಿಟ್ಟುಕೊಡಲು ಈ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯನ್ನು ದಿನಾಂಕ:07.06.2003ರಂದು ತಿರಸ್ಕರಿಸಿ ಆದೇಶವಾಗಿದೆ. ಈ ಆದೇಶದ ಮೇಲೆ ವಾಹನ ಮಾಲೀಕರು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ ಇಲ್ಲಿ ಕ್ರಿಮಿನಲ್ ಮಿಸಲೇನಿಯಸ್ ಅಪೀಲ್ ನಂ.22/03ರಲ್ಲಿ ಮೇಲ್ಮನವಿ ಸಲ್ಲಿಸಿ ಸದರಿ ಅಪೀಲ್ ದಿನಾಂಕ:20.10.2003ರಲ್ಲಿ ವಾಹನ ಮಾಲೀಕರಿಗೆ ಷರತ್ತು ವಿಧಿಸಿ ವಾಹನವನ್ನು ಮಧ್ಯಂತರ ಅವಧಿಗೆ ಬಿಟ್ಟುಕೊಡಲು ಆದೇಶವಾಗಿದೆ. ಆದರೆ ಇಲ್ಲಿಯವರೆವಿಗೂ ವಾಹನವನ್ನು ಮಧ್ಯಂತರ ಅವಧಿಗೆ ಬಿಡಿಸಿಕೊಂಡಿರುವುದಿಲ್ಲ. ಇದರಿಂದ ನ್ಯಾಯಾಲಯದ ಆದೇಶವನ್ನು ವಾಹನ ಮಾಲೀಕರು ಪಾಲಿಸಿರುವುದಿಲ್ಲ. ನಂತರ ಡಿಫೆನ್ಸ್ ಸಾಕ್ಷಿ ಹೇಳಿಕೆಗೆ 3 ಬಾರಿ ಮತ್ತು ಡಿಫೆನ್ಸ್ ಕಡೆಯವರು ವಾದ ಮಂಡಿಸಲು 4 ಬಾರಿ ಕಾಲಾವಕಾಶ ನೀಡಿದೆ. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

ಅಂಶ-3:

ದಿನಾಂಕ:22.07.2001 ರಂದು 407 ವಾಹನ ಕೆಎ-18-3212 ರಲ್ಲಿ ಶ್ರೀಗಂಧ 181.500 ಕೆ.ಜಿ.ಯನ್ನು ರಹದಾರಿ ಇಲ್ಲದೆ ಅಕ್ರಮವಾಗಿ ರಿಪ್ಪನ್‌ಪೇಟೆಯಿಂದ ಹೊಸನಗರ ಮಾರ್ಗವಾಗಿ ಸಾಗಿಸುತ್ತಿರುವಾಗ ಹೊಸನಗರ ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್ ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಕೇಸ್ ನಂ.88/2001ನ್ನು ದಾಖಲಿಸಿ ಎಲ್ಲಾ ದಾಖಲೆಗಳೊಂದಿಗೆ ಸಾಕ್ಷಿ ಸಹಿಯೊಂದಿಗೆ ವಾಹನವನ್ನು ಈ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ಮತ್ತು ಈ ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಮತ್ತು ಈ ವಾಹನದಲ್ಲಿದ್ದ ಶ್ರೀಗಂಧವನ್ನು ಬಿಟ್ಟುಕೊಡುವಂತೆ ಯಾರೂ ಈ ನ್ಯಾಯಾಲಯಕ್ಕೆ ಕ್ಲೈಮು ಅರ್ಜಿ ಸಲ್ಲಿಸಿರುವುದಿಲ್ಲ. ಆರ್.ಸಿ. ಮಾಲೀಕರು ದಿನಾಂಕ:26.09.2001ರಂದು ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯಲ್ಲಿ ಬಾಧ್ಯತೆದಾರರು ಮುಗ್ದರೆಂದು ಮತ್ತು ಇವರ ಗಮನಕ್ಕೆ ಬರಲಿಲ್ಲವೆಂದು ಮತ್ತು ಈ ವಾಹನ ಕಳ್ಳತನವಾದ ಬಗ್ಗೆ ಠಾಣೆಗೆ ದೂರು ನೀಡಿದ ಬಗ್ಗೆಯಾಗಲೀ ಯಾವುದೇ ಸಾಕ್ಷ್ಯಾಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಆದರೆ ಯಾರೂ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಆಗದಂತೆ ಆರ್.ಸಿ. ಮಾಲೀಕರು ಮುನ್ನೆಚ್ಚರಿಕೆ ಕ್ರಮ ಕೈಗೊಂಡಿರುವುದಿಲ್ಲ ಎಂಬುದು ನನ್ನ ಉತ್ತರವಾಗಿದೆ.

ಅಂಶ-4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಹಾಗೂ ಇಲ್ಲಿಯವರೆಗಿನ ತಿದ್ದುಪಡಿ ಕಾಯಿದೆ, ಪೊಲೀಸ್ ಸರ್ಕಲ್ ಇನ್ಸ್‌ಪೆಕ್ಟರ್, ಹೊಸನಗರ ಇವರು ಜಪ್ತು ಮಾಡಿದ ವಾಹನ 407 ವ್ಯಾನ್ ಕೆಎ-18-3212 ರಲ್ಲಿ ಮತ್ತು ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಶ್ರೀಗಂಧ 181.500 ಕೆ.ಜಿ.ಯನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುತ್ತಾರೆ. ಆದ್ದರಿಂದ 407 ವ್ಯಾನ್ ಕೆಎ-18-3212 ಮತ್ತು ಈ ವಾಹನದಲ್ಲಿದ್ದ ಶ್ರೀಗಂಧ 181.500 ಕೆ.ಜಿ.ಯನ್ನು ಅಂತಿಮವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿನಾಂಕ:01.08.2009ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ.

ಪಿ.ಆರ್.765

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ ಸಾಗರ ವಿಭಾಗ, ಸಾಗರ ಇವರ ನ್ಯಾಯಾಲಯದಲ್ಲಿ
ಬಿ3:ಅಮೊ:ವಾಹನ:32/99-2000, ದಿನಾಂಕ:1ನೇ ಆಗಸ್ಟ್, 2009

ಉಪಸ್ಥಿತರು: ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ.

ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ.

ಪಿರ್ಯಾಧಿದಾರರು: ವಲಯ ಅರಣ್ಯಾಧಿಕಾರಿಗಳು, ನಗರ ವಲಯ, ನಗರ.

(ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು, ಸಾಗರ)

ಬಾಧ್ಯತೆದಾರರು: ಶ್ರೀ ಎನ್. ವಾಮನ್ ನಾಯ್ಕ ಬಿನ್ ಗೋವಿಂದನಾಯ್ಕ, ಅಂಬಾನಿಲಯ ವಾಸಿ, ನೆರಳಗಟ್ಟ ಗ್ರಾಮ, ಕುರಕುಂಜಿ ಅಂಚೆ, ಕುಂದಾಪುರ ತಾಲ್ಲೂಕು, ಉಡುಪಿ ಜಿಲ್ಲೆ, (ಶ್ರೀ ಬಿ. ನಾಗರಾಜ್, ವಕೀಲರು ಸಾಗರ)

ಪ್ರಸ್ತಾವನೆ:

ದಿನಾಂಕ:21.09.1999 ರಂದು ನಗರ ವಲಯದ ಯಡೂರು ಶಾಖೆಯ ಮತ್ತು ಹುಲಿಕಲ್ ತನಿಖಾ ಠಾಣೆಯ ವನಪಾಲಕರು ಮತ್ತು ಸಿಬ್ಬಂದಿಯವರು ಗೇಟಿನಲ್ಲಿ ಕಾಯುತ್ತಿರುವಾಗ ಮಧ್ಯಾಹ್ನ 1-45 ರ ಸಮಯದಲ್ಲಿ ಒಂದು ಬಸ್ ಬಂದಿದ್ದು, ಅದನ್ನು ಗೇಟಿನಲ್ಲಿ ಹೋಗಲು ಬಿಟ್ಟಾಗ ಅದರ ಹಿಂದೆ 407 ಮಿನಿಲಾರಿ ವೇಗವಾಗಿ ಬಂದು ತೆರೆದ ಗೇಟಿನಲ್ಲಿ ಹಾದುಹೋಗಲು ಪ್ರಯತ್ನಿಸಿದಾಗ ಕೂಡಲೇ ಗೇಟ್ ಬಂದ್ ಮಾಡಿದಾಗ ಚಾಲಕನು ವಾಹನವನ್ನು ನಿಲ್ಲಿಸಿ ನಂ. ಕೆಎ-20-2637 ಇದ್ದು, ಲಾರಿಯನ್ನು ವಾಚರ್ ಹತ್ತಿ ಪರಿಶೀಲಿಸುತ್ತಿರುವಾಗ ಶ್ರೀಗಂಧ ಎಂದು ಕೂಗಿದನು. ಅಷ್ಟರಲ್ಲಿ ವಾಹನವನ್ನು

ಚಾಲಕನು ಹಿಂದಕ್ಕೆ ಜೋರಾಗಿ ತಿರುಗಿಸಿದಾಗ ವಾಹನದಲ್ಲಿದ್ದ ವಾಚರ್ ಕೆಳಕ್ಕೆ ಹಾರಿದನು. ಲಾರಿಯಲ್ಲಿ ಡೀಸೆಲ್‌ನ ಖಾಲಿ ಬ್ಯಾರಲ್‌ಗಳಿದ್ದು, ಅದರಲ್ಲಿ ಶ್ರೀಗಂಧದ ತುಂಡುಗಳನ್ನು ಚೀಲದಲ್ಲಿ ಹಾಕಿರುವುದನ್ನು ವಾಚರ್ ನೋಡಿರುತ್ತಾನೆ. ನಂತರ ವಾಹನವನ್ನು ನಗರದ ಕಡೆ ವೇಗವಾಗಿ ಓಡಿಸಿರುತ್ತಾನೆ. ಆ ವಾಹನವನ್ನು ಬೆನ್ನಟ್ಟಿ ಘಾಟಿಯಿಂದ ಬರುತ್ತಿರುವ ಲಾರಿಯಲ್ಲಿ ಮಾಸ್ತಿಕಟ್ಟೆಗೆ ಬಂದು ಅಲ್ಲಿಂದ ದೂರವಾಣಿ ಮೂಲಕ ನಗರ ವಲಯ ಕಛೇರಿಗೆ ತಿಳಿಸಿದನು. ನಂತರ ದಾರಿಯಲ್ಲಿ ಬರುತ್ತಿರುವಾಗ ಗ್ರಾಮಸ್ಥರನ್ನು ವಿಚಾರಿಸಿದಾಗ ಸದರಿ ಲಾರಿಯಲ್ಲಿನ ಶ್ರೀಗಂಧವನ್ನು ಹೆಬ್ಬಲಿಗೆ ಮತ್ತು ನೇರಲಿಗದ್ದೆಯ ಮಧ್ಯವಿರುವ ಎರಡನೇ ಮೋರಿಯ ಅಡಿಯಲ್ಲಿ ಮುಚ್ಚಿಟ್ಟು ಲಾರಿಯನ್ನು ವೇಗವಾಗಿ ಓಡಿಸಿರುತ್ತಾನೆಂದು ತಿಳಿಸಿದರು. ಮೋರಿಯಡಿಯಲ್ಲಿದ್ದ ಶ್ರೀಗಂಧದ ಮೂಟೆಗಳು ಲಾರಿಯಲ್ಲಿ ಕಂಡ ಮೂಟೆಗಳೆಂದು ವನಪಾಲಕರು ಖಚಿತಪಡಿಸಿಕೊಂಡು 1 ರಿಂದ 80 ಶ್ರೀಗಂಧದ ತುಂಡುಗಳ ತೂಕ 220 ಕೆ.ಜಿ. ಇದ್ದು, ನಂತರ ವಾಹನವನ್ನು ವಿಚಾರಿಸುತ್ತಾ ಮುಂದೆ ಬಂದಾಗ 1999ನೇ ಎಂಪಿಎಂ ನೆಡುತೋಪಿನಲ್ಲಿ 4 ಖಾಲಿ ಬ್ಯಾರಲ್‌ಗಳನ್ನು ಅಡಗಿಸಿಟ್ಟು, ಅಲ್ಲಿಂದ ಲಾರಿಯನ್ನು ನಗರದ ಚಿಕ್ಕಪೇಟೆಯ ಚಂದ್ರಶೆಟ್ಟರ ಮನೆಯ ಮುಂದೆ ನಿಲ್ಲಿಸಿರುತ್ತಾರೆ. ಲಾರಿಯನ್ನು ಇಲಾಖಾ ಪರ ಜಪ್ತು ಮಾಡಿಕೊಳ್ಳಲಾಯಿತು. ಈ ರೀತಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದೆ ಎಂದು ಪರಿಗಣಿಸಿ ಮಹಜರ್ ಕ್ರಮ ಜರುಗಿಸಿ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 84, 85, 86, 87, 71(ಎ) ರಿಂದ (ಜಿ) ಮತ್ತು ಕರ್ನಾಟಕ ಅರಣ್ಯ ಕಾನೂನು1969ರ ಉಪನಿಯಮ 144, 165ರ ಪ್ರಕಾರ ನಗರ ವಲಯದ ಅರಣ್ಯ ಮೊಕದ್ದಮೆ ಸಂಖ್ಯೆ:36/99–2000 ವನ್ನು ದಾಖಲಿಸಿ ನಂತರ ವಾಹನವನ್ನು ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಗರ ವಿಭಾಗ, ಸಾಗರ ಇವರ ಸಮಕ್ಷಮ ಹಾಜರುಪಡಿಸಿರುತ್ತಾರೆ. ನಂತರ ಈ ವಾಹನವನ್ನು ಸುರಕ್ಷತೆಗಾಗಿಡಲು ವಲಯ ಅರಣ್ಯಾಧಿಕಾರಿ, ಸರ್ಕಾರಿ ನಾಟಾ ಸಂಗ್ರಹಾಲಯ, ಸಾಗರ ಇವರ ಸುಪರ್ಧಿಗೆ ಕೊಟ್ಟಿದೆ.

ನಂತರ ಈ ಕೇಸಿಗೆ ಸಂಬಂಧಿಸಿದ ಆಸಾಮಿಗಳು ದಿನಾಂಕ:22.09.1999 ರಂದು ಬೆಳಿಗ್ಗೆ ನಗರ ವಲಯ ಕಛೇರಿಗೆ ಬಂದು ಕಛೇರಿಯ ಬಾಗಿಲು ಒಡೆದು ಒಳನುಗ್ಗಿ ರಾತ್ರಿ ಕಾವಲುಗಾರನ್ನು ಹೊಡೆದು, ಬಡಿದು, ಜೀವಬೆದರಿಕೆಯೊಡ್ಡಿ, ಕುರ್ಚಿ, ಮೇಜು, ಫ್ಯಾನು, ಕನ್ನಡಿ ಇತರೆ ಸಾಮಾನುಗಳನ್ನು ಜಖಂಗೊಳಿಸಿ ಸರ್ಕಾರಕ್ಕೆ ಸಾವಿರಾರು ರೂಪಾಯಿ ನಷ್ಟ ಉಂಟುಮಾಡಿರುತ್ತಾರೆ. ಈ ಬಗ್ಗೆ ಹೊಸನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ಗುನ್ನೆ ನಂ.87/99ನ್ನು ದಿನಾಂಕ:22.09.1999 ರಂದು ದಾಖಲಿಸಿರುತ್ತಾರೆ. ನಂತರ ಈ ಪ್ರಕರಣದಲ್ಲಿ ಪ್ರತಿಯೊಬ್ಬ ಆಸಾಮಿಗೆ ರೂ.1050/– ದಂಡ ವಿಧಿಸಿ, ದಂಡ ತುಂಬಲು ತಪ್ಪಿದಲ್ಲಿ 15 ದಿನ ಸಜೆ ನೀಡಲು ಮುನ್ಸಿಫ್ ನ್ಯಾಯಾಲಯ, ಹೊಸನಗರ ದಿನಾಂಕ:09.04.2008ರಂದು ತೀರ್ಪು ನೀಡಿದೆ.

ನಂತರ ಈ ವಾಹನದ ಬಗ್ಗೆ ಶ್ರೀ ಗೋವಿಂದರಾಯ ನಾಯ್ಕ ಬಿನ್ ವಾಮನ ನಾಯ್ಕ ಇವರು ವಕೀಲರ ಮುಖಾಂತರ ಕ್ಲೈಮು ಅರ್ಜಿಯನ್ನು ದಿನಾಂಕ:29.11.1999 ರಂದು ಈ ನ್ಯಾಯಾಲಯಕ್ಕೆ ಸಲ್ಲಿಸಿರುತ್ತಾರೆ. ಆರ್.ಸಿ. ಮಾಲೀಕರ ಅರ್ಜಿಯನ್ನು ದಿನಾಂಕ:25.06.2005 ರಂದು ತಿರಸ್ಕರಿಸಿ ಆದೇಶವನ್ನು ಈ ನ್ಯಾಯಾಲಯದಿಂದ ಹೊರಡಿಸಿದೆ. ಆರ್.ಸಿ. ಮಾಲೀಕರು ಮೃತರಾದ ಬಗ್ಗೆ ಈ ನ್ಯಾಯಾಲಯದಿಂದ ನೊಂದಣಿ ಅಂಚೆ ಮೂಲಕ ನೋಟೀಸ್ ನಂ. ಅಮೊ:ವಾಹನ:32/99–2000ವನ್ನು ದಿನಾಂಕ:27.08.2003ರಲ್ಲಿ ಜಾರಿ ಮಾಡಿದ ಲಕೋಟೆಯ ಮೇಲೆ ಅಂಚೆ ಇಲಾಖೆಯವರು ``Addressed deceased. Return to sender" ಎಂದು ನಮೂದಿಸಿ ಈ ನ್ಯಾಯಾಲಯಕ್ಕೆ ಲಕೋಟೆ ಹಿಂದಿರುಗಿಸಿರುತ್ತಾರೆ. ಮತ್ತು ಆರ್.ಸಿ. ಮಾಲೀಕರು ದಿನಾಂಕ:12.09.2001 ರಂದು ಮೃತರಾದ ಬಗ್ಗೆ ಈ ನ್ಯಾಯಾಲಯಕ್ಕೆ ವಕೀಲರು ದಿನಾಂಕ:27.12.2003ರಂದು ಮೆಮೋದೊಂದಿಗೆ ಮರಣ ದೃಢೀಕರಣ ಪತ್ರ ಸಲ್ಲಿಸಿರುತ್ತಾರೆ. ನಂತರ ಈ ಬಗ್ಗೆ ಮೃತರ ವಾರಸುದಾರರು ಈ ವಾಹನದ ಬಗ್ಗೆ ಕ್ಲೈಮು ಅರ್ಜಿ ಸಲ್ಲಿಸಲು ಅನುಕೂಲವಾಗುವಂತೆ ಪೇಪರ್ ಪ್ರಕಟಣೆಯನ್ನು ದಿನಾಂಕ:04.12.2003 ರಂದು ಹೊರಡಿಸಿ, ಸದರಿ ಪ್ರಕಟಣೆಯು ದಿನಾಂಕ:12.12.2003ರಂದು "ವನಕೃಪ" ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುತ್ತದೆ. ನಂತರ ಮೃತರ ಮಗನಾದ ಶ್ರೀ ಎನ್. ವಾಮನ್ ನಾಯಕ್ ಬಿನ್ ಗೋವಿಂದನಾಯ್ಕ, ನೇರಳಗದ್ದೆ ಗ್ರಾಮ, ಕುಂದಾಪುರ ಇವರು ದಿನಾಂಕ:03.01.2004 ರಂದು ಈ ನ್ಯಾಯಾಲಯಕ್ಕೆ ಕ್ಲೈಮು ಅರ್ಜಿಯನ್ನು ಶ್ರೀ ಬಿ. ನಾಗರಾಜ್, ವಕೀಲರು, ಸಾಗರ ಇವರ ಮುಖಾಂತರ ಸಲ್ಲಿಸಿರುತ್ತಾರೆ. ಇವರು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ ಬಗ್ಗೆ ಪುನಃ ಪೇಪರ್ ಪ್ರಕಟಣೆಯನ್ನು ದಿನಾಂಕ:07.02.2005ರಂದು ಹೊರಡಿಸಿ 15 ದಿನಗಳ ಕಾಲಾವಕಾಶ ನೀಡಿ ತಕರಾರು ಇದ್ದಲ್ಲಿ ನ್ಯಾಯಾಲಯಕ್ಕೆ ಸಲ್ಲಿಸಲು ಸೂಚಿಸಿದ್ದು, ಪ್ರತಿಯನ್ನು ನಿರ್ದೇಶಕರು, ವಾರ್ತಾ ಮತ್ತು ಪ್ರಚಾರ ಇಲಾಖೆ, ಬೆಂಗಳೂರು ಇವರಿಗೆ ಕಳುಹಿಸಿ ಪೇಪರ್‌ನಲ್ಲಿ ಪ್ರಕಟಿಸಲು ಕೋರಲಾಯಿತು. ಈ ಪ್ರಕಟಣೆಯು ದಿನಾಂಕ:15.02.2005ರಂದು "ಮನೋಭೂಮಿ" ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುತ್ತದೆ ಮತ್ತು ನಿಗದಿತ ಕಾಲಾವಕಾಶದಲ್ಲಿ ಯಾರೂ ಶ್ರೀ ಎನ್. ವಾಮನ್ ನಾಯಕ್ ಇವರ ಅರ್ಜಿಗೆ ತಕರಾರು ಸಲ್ಲಿಸಿರುವುದಿಲ್ಲ.

ದಿನಾಂಕ:25.06.2005ರ ಈ ನ್ಯಾಯಾಲಯದ ಆದೇಶದ ಮೇಲೆ ಬಾಧ್ಯತೆದಾರರು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ ಇಲ್ಲಿ ಕ್ರಿಮಿನಲ್ ಮಿಸಲೇನಿಯಸ್ ಅಪೀಲ್ ನಂ.27/05ರಲ್ಲಿ ಮೇಲ್ಮನವಿ ಸಲ್ಲಿಸಿದ್ದು, ಈ ಪ್ರಕರಣದ ಮೂಲ ದಾಖಲೆಗಳನ್ನು ಮಾನ್ಯ ಜಿಲ್ಲಾ ನ್ಯಾಯಾಲಯ, ಶಿವಮೊಗ್ಗದ ಪತ್ರ ಸಂಖ್ಯೆ: ಡಿಜೆಎಸ್–8196/07

ದಿನಾಂಕ:02.07.2007ರಲ್ಲಿ ಸಲ್ಲಿಸಲು ಆದೇಶಿಸಿದ ಮೇರೆಗೆ ಸಂಪೂರ್ಣ ಕಡತ 1 ರಿಂದ 35 ಪುಟಗಳ ಕಡತವನ್ನು ಈ ನ್ಯಾಯಾಲಯದ ಪತ್ರ ಸಂಖ್ಯೆ: ಬಿ3:ಅಮೊ: ವಾಹನ:32/99-00 ದಿನಾಂಕ:16.07.2007 ರಂದು ಮಾನ್ಯ ಜಿಲ್ಲಾ ನ್ಯಾಯಾಲಯ, ಶಿವಮೊಗ್ಗಕ್ಕೆ ನೊಂದಣಿ ಅಂಚೆ ಮೂಲಕ ಸಲ್ಲಿಸಲಾಗಿರುತ್ತದೆ. ಸದರಿ ಅಪೀಲಿನ ದಿನಾಂಕ:08.04.2009ರಲ್ಲಿ ಜಿಲ್ಲಾ ನ್ಯಾಯಾಲಯವು ದಿನಾಂಕ:25.06.2005 ರ ಈ ನ್ಯಾಯಾಲಯದ ಆದೇಶವನ್ನು ಎತ್ತಿಹಿಡಿದ ವಾಹನ ಮಾಲೀಕರ ಮನವಿಯನ್ನು ತಳ್ಳಿಹಾಕಿ ಆದೇಶ ಹೊರಡಿಸಿರುತ್ತದೆ. ದಿನಾಂಕ:16.07.2007 ರಿಂದ 15.04.2009ರವರೆಗೆ ಸದರಿ ಪ್ರಕರಣದ ಮೂಲ ಕಡತವನ್ನು ಮಾನ್ಯ ಜಿಲ್ಲಾ ನ್ಯಾಯಾಲಯ, ಶಿವಮೊಗ್ಗ ಇಲ್ಲಿ ಕ್ರಿಮಿನಲ್ ಮಿಸಲೇನಿಯಸ್ ಅಪೀಲ್ ನಂ.27/05ರ ವಿಚಾರಣೆಗೆ ಸಲ್ಲಿಸಿರುತ್ತದೆ.

ಪ್ರಾಸಿಕ್ಯೂಷನ್ ಸಾಕ್ಷಿ ಶ್ರೀ ಎಂ.ಬಿ. ಪೂವಪ್ಪ, ವನಪಾಲಕ ಇವರನ್ನು ದಿನಾಂಕ:19.08.2006 ರಂದು ಕರೆಸಿ ಮುಖ್ಯ ವಿಚಾರಣೆ ಸಹಾಯಕ ಸರ್ಕಾರಿ ಅಭಿಯೋಜಕರಿಂದ ನಾನು ನಗರ ವಲಯದ ಯಡೂರು ಶಾಖೆಯಲ್ಲಿ 1992-2004ರವರೆಗೆ ವನಪಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿನಾಂಕ:21.01.1999 ರಂದು ನಾನು ನನ್ನ ಶಾಖೆಯಲ್ಲಿ ಗಸ್ತು ಮಾಡುತ್ತಿರುವಾಗ ನನಗೆ ಗೇಟ್ ವನಪಾಲಕ ಮತ್ತು ವಲಯ ಅರಣ್ಯಾಧಿಕಾರಿಗಳಿಂದ ಒಂದು ಶ್ರೀಗಂಧ ಕೊಂಡೊಯ್ಯುತ್ತಿರುವ ಲಾರಿ ತಪ್ಪಿಸಿಕೊಂಡು ಹೋಗುವ ಬಗ್ಗೆ ಮಾಹಿತಿ ತಿಳಿಯಿತು. ನಂತರ ನಾನು ನಮ್ಮ ಸಿಬ್ಬಂದಿಗಳಾದ ನಾಗಪ್ಪ, ಕರಿಬಸಪ್ಪ ಮತ್ತು ರಂಗಪ್ಪ ಎಂಬುವವರ ಜೊತೆಗೆ ಸದರಿ ಲಾರಿ ಹುಡುಕಲು ಹೊರಟೆವು. ಈ ರೀತಿಯಾಗಿ ನಾವು ಹುಡುಕುತ್ತಿದ್ದಾಗ ಹೆಬ್ಬುಲಿಗೆ ಮತ್ತು ನೇರಲುಗದ್ದೆಗೆ ಹೋಗುವ ಅಡ್ಡ ರಸ್ತೆಯಲ್ಲಿ ಒಬ್ಬ ಹಳ್ಳಿಯವನು ಸಿಕ್ಕಿ ಒಂದು ಲಾರಿ ಅಲ್ಲಿಗೆ ಬಂದು ಒಂದು ಮೋರಿ ಕೆಳಗೆ ಕೆಲವು ಚೀಲಗಳನ್ನು ಹಾಕಿ ಜೋರಾಗಿ ಹೋಗಿದ್ದನ್ನು ನೋಡಿ ಆ ಮೋರಿ ಬಳಿ ಕರೆದುಕೊಂಡು ಹೋಗಿ ತೋರಿಸಿದನು. ಮತ್ತು ಲಾರಿಯಲ್ಲಿ ಚಂದ್ರಶೆಟ್ಟಿ, ಸುನಿಲ್ ಮತ್ತು ಬಾಬಣ್ಣ ಎಂಬ ನಗರದ ವ್ಯಕ್ತಿಗಳು ಹೋದರೆಂದು ತಿಳಿಸಿದರು. ನಂತರ ಆ ಚೀಲಗಳನ್ನು ಬಿಚ್ಚಿ ನೋಡಿದಾಗ ಅವುಗಳಲ್ಲಿ ಶ್ರೀಗಂಧದ ತುಂಡುಗಳಿದ್ದು ಅವುಗಳನ್ನು ಅಳತೆ ಮಾಡಿ ಲೆಕ್ಕ ಮಾಡಿ ಮಹಜರ್ ತಯಾರಿಸಿದೆವು. ಲಾರಿಯ ಸಂಖ್ಯೆ: ಕೆಎ-20-2637 ಎಂದು ನಮ್ಮ ತನಿಖಾ ಠಾಣೆಯ ವನಪಾಲಕರಿಂದ ತಿಳಿದುಕೊಂಡೆನು. ನಂತರ ನನ್ನ ಜೊತೆಯಲ್ಲಿದ್ದ ತನಿಖಾ ಠಾಣೆಯ ಸಿಬ್ಬಂದಿಯೂ ಸಹ ಆ ಚೀಲಗಳನ್ನು ಗುರ್ತಿಸಿರುತ್ತಾರೆ. ನಂತರ ನಾವು ಮತ್ತು ತನಿಖಾ ಠಾಣೆಯ ಸಿಬ್ಬಂದಿ ಜೊತೆಗೂಡಿ ಲಾರಿ ಹುಡುಕುತ್ತಾ ಹೋದೆವು. ನಾವು ನಗರದ ಹತ್ತಿರ ಮುಂಡಳ್ಳಿ ಕ್ರಾಸ್ ಮತ್ತು ಸಾವೆಹಕ್ಲಿಗೆ ಹೋಗುವ ದಾರಿಯಲ್ಲಿ ಹೋಗುತ್ತಿರುವಾಗ ಅಲ್ಲಿ ಸ್ಥಳೀಯ ಜನರನ್ನು ವಿಚಾರಿಸಿದಾಗ ಚಂದ್ರಶೆಟ್ಟಿ ಎಂಬುವವರ ಲಾರಿಯು ಸಾವೆಹಕ್ಲು ಡ್ಯಾಂ ಕಡೆಗೆ ಜೋರಾಗಿ ಹೋಗಿರುವುದನ್ನು ನೋಡಿರುವುದಾಗಿ ತಿಳಿಸಿದರು. ನಾವು ಇದೇ ದಾರಿಯಲ್ಲಿ ಲಾರಿ ಹುಡುಕಿಕೊಂಡು ಹೋಗುತ್ತಿರುವಾಗ ದಾರಿಯಲ್ಲಿ ಮೈಸೂರು ಪೇಪರ್ ಮಿಲ್ಸ್ ನವರು ಮಾಡಿರುವ ನೆಡುತೋಪಿನಲ್ಲಿ 'ಖಾಲಿ ಬ್ಯಾರಲ್ ಬಿದ್ದಿರುವುದನ್ನು ನೋಡಿದೆವು. ಸದರಿ ಬ್ಯಾರಲ್‌ಗಳನ್ನು ತನಿಖಾ ಠಾಣೆಯ ಸಿಬ್ಬಂದಿ ಗುರ್ತಿಸಿ ಅವರು ಸದರಿ ಲಾರಿಯು ತನಿಖಾ ಠಾಣೆಯ ಮುಖಾಂತರ ತಪ್ಪಿಸಿಕೊಂಡು ಹೋಗುವಾಗ ಇವುಗಳನ್ನು ನೋಡಿರುವುದಾಗಿ ತಿಳಿಸಿದರು. ನಾವು ಸದರಿ ಖಾಲಿ ಬ್ಯಾರಲ್‌ಗಳನ್ನು ಅಮಾನತ್ತು ಪಡಿಸಿಕೊಂಡೆವು. ನಂತರ ನಾವು ನಗರಕ್ಕೆ ಬಂದು ಚಂದ್ರಶೆಟ್ಟಿ ಮನೆಯ ಬಳಿ ನೋಡಿದಾಗ ಸದರಿ ಲಾರಿ ನಿಂತಿರುವುದು ಕಂಡುಬಂದು ಅದನ್ನು ಅಮಾನತ್ತುಪಡಿಸಿ ಇಲಾಖಾ ವಶಕ್ಕೆ ತೆಗೆದುಕೊಂಡು ಈ ಎಲ್ಲಾ ಸ್ಥಳಗಳಲ್ಲೂ ಜಪ್ತುಮಾಡಿದ ಎಲ್ಲಾ ವಸ್ತುಗಳ ಬಗ್ಗೆ ಒಂದು ಮಹಜರ್ ತಯಾರಿಸಿದೆವು. ಇದನ್ನು ಗುರ್ತಿಸಿ ನಿಶಾನೆ ಪಿ1 ಎಂದು ನಮೂದಿಸಿದೆ. ಹಾಗೂ ಪ್ರಥಮ ವರ್ತಮಾನ ವರದಿಯನ್ನು ಸಹ ತಯಾರಿಸಿ ನ್ಯಾಯಾಲಯಕ್ಕೆ ಕಳಿಸಿರುತ್ತೇನೆ. ಇದನ್ನು ನಿಶಾನೆ ಪಿ2 ಎಂದು ಗುರ್ತಿಸಿದೆ ಮತ್ತು ಜಪ್ತು ವರದಿಯನ್ನೂ ಸಹ ಕಳಿಸಿಕೊಟ್ಟಿರುತ್ತೇನೆ. ಇದನ್ನು ನಿಶಾನೆ ಪಿ3 ಎಂದು ಗುರ್ತಿಸಿದೆ. ಸದರಿ ಲಾರಿಯು ಅಕ್ರಮವಾಗಿ ಶ್ರೀಗಂಧ ಕಳ್ಳ ಸಾಗಾಣಿಕೆ ಮಾಡಲು ತೊಡಗಿದ್ದರಿಂದ ಇದನ್ನು ಅಮಾನತ್ತು ಪಡಿಸಿಕೊಳ್ಳಲು ಕೋರಿಕೊಳ್ಳುತ್ತೇನೆ.

ವಕೀಲರು ಗೈರುಹಾಜರಾಗಿದ್ದು ಪಾಟೀಸವಾಲು ಇಲ್ಲ ಎಂದು ಪರಿಗಣಿಸಿ ಡಿಫೆನ್ಸ್ ಸಾಕ್ಷಿ ವಿಚಾರಣೆಗೆ ದಿನಾಂಕ ನಿಗದಿಪಡಿಸಲಾಯಿತು.

ಡಿಫೆನ್ಸ್ ಸಾಕ್ಷಿ ವಿಚಾರಣೆಗೆ ದಿನಾಂಕ:17.02.2007, 17.03.2007, 07.04.2007, 28.04.2007, 05.05.2007, 23.06.2007, 30.06.2007ರಂದು 7 ಬಾರಿ ದಿನಾಂಕ ನಿಗದಿಪಡಿಸಿದ್ದು, ಒಮ್ಮೆಯೂ ವಾಹನ ಮಾಲೀಕರಾಗಲೀ, ಅವರ ಪರ ವಕೀಲರಾಗಲೀ ಹಾಜರಾಗಿರುವುದಿಲ್ಲ. ಇದರಿಂದ ವಾಹನ ಮಾಲೀಕರಿಗೆ ಈ ಪ್ರಕರಣದ ವಿಚಾರಣೆಗೆ ಹಾಜರಾಗಲು ಆಸಕ್ತಿ ಇಲ್ಲವೆಂದು ಪರಿಗಣಿಸಿ ಮುಂದಿನ ಹಂತಕ್ಕೆ ದಿನಾಂಕ ನಿಗದಿಪಡಿಸಲಾಯಿತು.

ಡಿಫೆನ್ಸ್ ಕಡೆ ವಾದಕ್ಕೆ ದಿನಾಂಕ:25.04.2009, 27.06.2009, 18.07.2009 ರಂದು 3 ಬಾರಿ ದಿನಾಂಕವನ್ನು ನಿಗದಿಪಡಿಸಿದರು. ಸದರಿ ದಿನಾಂಕಗಳಂದು ವಾಹನ ಮಾಲೀಕರಾಗಲೀ, ಅವರ ಪರ ವಕೀಲರಾಗಲೀ ನ್ಯಾಯಾಲಯಕ್ಕೆ ಹಾಜರಾಗಿರುವುದಿಲ್ಲ. ಈ ಪ್ರಕರಣದ ವಸ್ತುಸ್ಥಿತಿ ನಿರ್ಧರಿಸಿ ಮುಂದಿನ ಕ್ರಮ ಕೈಗೊಳ್ಳಲಾಯಿತು.

ಸಹಾಯಕ ಸರ್ಕಾರಿ ಅಭಿಯೋಜಕರು ದಿನಾಂಕ:18.07.2009ರಂದು ವಾದ ಮಂಡಿಸಿ ಈ ಪ್ರಕರಣದಲ್ಲಿ ಶ್ರೀಗಂಧ ಅಕ್ರಮ ಸಾಗಾಣಿಕೆಯಲ್ಲಿ ತೊಡಗಿದ್ದ ವಾಹನ ಕೆಎ-20-2637 ನ್ನು ಮಾಲು ಸಹಿತ ದಿನಾಂಕ:21.09.1999ರಂದು ಇಲಾಖಾ ಪರ ವಶಪಡಿಸಿಕೊಂಡು ಮಹಜರ್ ವರದಿಯಲ್ಲಿ ಸಾಕ್ಷಿಗಳ ಸಹಿಯೊಂದಿಗೆ ವಾಹನ ಮತ್ತು ಅರಣ್ಯ ಉತ್ಪನ್ನವನ್ನು

ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತಾರೆ. ಸಾಕ್ಷಿಯ ಹೇಳಿಕೆಗೂ, ಈ ನ್ಯಾಯಾಲಯಕ್ಕೆ ಸಲ್ಲಿಸಿದ ದಾಖಲೆಗಳಿಗೂ ಹೋಲಿಕೆಯಾಗಿರುತ್ತದೆ. ಅಲ್ಲದೇ ಈ ವಾಹನಕ್ಕೆ ಘಟನಾ ದಿನ ನೇಮಿಸಿದ ಚಾಲಕನನ್ನು ಈ ನ್ಯಾಯಾಲಯಕ್ಕೆ ಡಿಫೆನ್ಸ್ ಕಡೆಯವರು ಕರೆಸಿ ಪೂರ್ಣ ಸಾಕ್ಷಿಯನ್ನು ಹೇಳಿಸಿರುವುದಿಲ್ಲ. ಹಾಗೂ ಆರ್.ಸಿ. ಮಾಲೀಕರು ಸಹಾ ಸಾಕ್ಷಿಯನ್ನು ನುಡಿದಿರುವುದಿಲ್ಲ. ಇದರಿಂದ ವಾಹನ ಮಾಲೀಕರು ಮುಗ್ದರೆಂದು ಮತ್ತು ತಮ್ಮ ಗಮನಕ್ಕೆ ಬರಲಿಲ್ಲ ಎನ್ನುವುದನ್ನು ಸಾಬೀತುಪಡಿಸಲು ಸಂಪೂರ್ಣ ವಿಫಲರಾಗಿರುತ್ತಾರೆ. ಅಲ್ಲದೇ ಇಂತಹುದೇ ಅಂಶವನ್ನು ಗಣನೆಗೆ ತೆಗೆದುಕೊಂಡು ಮಾನ್ಯ ಉಚ್ಚ ನ್ಯಾಯಾಲಯ, ಕರ್ನಾಟಕದ ರಿಟ್ ಪಿಟಿಷನ್ ನಂ.10144/2006ರ ದಿನಾಂಕ:23.10.2008ರ (ಶ್ರೀ ಹೆಚ್.ಟಿ. ಗಣೇಶ್ ಬಿನ್ ದಿ॥ ಚೋಮ ವಿರುದ್ಧ ಸ್ಟೇಟ್ ಆಫ್ ಕರ್ನಾಟಕ ರೆಪ್ರೆಸೆಂಟೆಡ್ ಬೈ ವಲಯ ಅರಣ್ಯಾಧಿಕಾರಿ, ಮತ್ತು ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ) ವಾಹನ ಮಾಲೀಕರ ಮನವಿಯನ್ನು ತಿರಸ್ಕರಿಸಿ ಅಧಿಕೃತ ಅಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿ ವನ್ಯಜೀವಿ ವಿಭಾಗದ ಆದೇಶವನ್ನು ಎತ್ತಿಹಿಡಿದು ಆದೇಶವಾಗಿರುತ್ತದೆ. ಅಲ್ಲದೇ ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಬಿ) (2)ರ ಪ್ರಕಾರ ಮಾಲೀಕರು ವಾಹನದಲ್ಲಿ ಕಳ್ಳಸಾಗಾಣಿಕೆಗೆ ಉಪಯೋಗಿಸದಂತೆ ಮುನ್ನೆಚ್ಚರಿಕೆ ಕ್ರಮ ಜರುಗಿಸಬೇಕಾಗಿರುತ್ತದೆ. ಆದ್ದರಿಂದ ಈ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಕೋರಿದೆ.

ಈ ಪ್ರಕರಣದಲ್ಲಿ ವಾಸ್ತವಾಂಶ ಮತ್ತು ಕಾನೂನಿನ ವಸ್ತುಸ್ಥಿತಿ ಹಾಗೂ ಲಭ್ಯವಿದ್ದ ವಿಷಯ ಸಾಮಾಗ್ರಿಗಳ ತಳಹದಿಯ ಮೇಲೆ ಗಮನಿಸಿ ಪರಿಗಣಿಸಬೇಕಾದ ಅಂಶಗಳು ಈ ಕೆಳಗಿನಂತಿದೆ.

1) ಆರ್.ಸಿ. ಮಾಲೀಕರು ಹಾಗೂ ಅರ್ಜಿದಾರರು 407 ವಾಹನ ನಂ.ಕೆಎ-20-2637 ರಲ್ಲಿ ಶ್ರೀಗಂಧ 220 ಕೆ.ಜಿ.ಯನ್ನು ದಿನಾಂಕ:21.09.1999 ರಂದು ಅಕ್ರಮವಾಗಿ ಅರಣ್ಯ ಉತ್ಪನ್ನವನ್ನು ಸಾಗಿಸಲು ಉಪಯೋಗಿಸಲಾಗಿತ್ತೇ ಹಾಗೂ ಈ ರೀತಿ ಸಾಗಿಸುವ ಮುಖಾಂತರ ಅರಣ್ಯ ಅಪರಾಧವೆಸಗಿ ಕರ್ನಾಟಕ ಅರಣ್ಯ ಕಾಯಿದೆ ಮತ್ತು ನಿಯಮವನ್ನು ಉಲ್ಲಂಘಿಸಲಾಗಿದೆಯೇ?

2) ಕರ್ನಾಟಕ ಅರಣ್ಯ ವಿಧಿ 71(ಬಿ)(1)ರ ಪ್ರಕಾರ ವಾಹನದ ಮಾಲೀಕರಿಗೆ ಕಾರಣ ಕೇಳಿ ನೋಟೀಸ್ ನೀಡಲಾಗಿದೆಯೇ? ಹಾಗೂ ಮಾಲೀಕರವರಿಗೆ ಅವರ ಅಹವಾಲನ್ನು ಮಂಡಿಸಿ ಸಮರ್ಥಿಸಿಕೊಳ್ಳಲು ಸಾಕಷ್ಟು ಅವಕಾಶವನ್ನು ನೀಡಲಾಗಿದೆಯೇ?

3) ವಾಹನದ ಮಾಲೀಕರು ಅಥವಾ ಅವರ ವಾಹನ ಚಾಲಕನಾಗಲೀ ಅಥವಾ ಅವರ ಪ್ರತಿನಿಧಿಯಾಗಲೀ 407 ವಾಹನದಲ್ಲಿ ಅಕ್ರಮವಾಗಿ ಸರ್ಕಾರದ ಸ್ವತ್ತಾದ ಶ್ರೀಗಂಧವನ್ನು ಸಾಗಿಸಲು ಶಾಮೀಲಾಗಿದ್ದಾರೆಯೇ ಹಾಗೂ ಈ ವಾಹನವನ್ನು ಇಂತಹ ಅಕ್ರಮ ಕಾನೂನು ಬಾಹಿರ ಅರಣ್ಯ ಉತ್ಪನ್ನ ಸಾಗಾಣಿಕೆಗೆ ಉಪಯೋಗಿಸದಂತೆ ವಾಹನದ ಮಾಲೀಕರು ವಾಹನದ ಚಾಲಕರು ಅಥವಾ ಅವರ ಪ್ರತಿನಿಧಿಗಳು ಸಾಕಷ್ಟು ಸೂಕ್ತ ಮುನ್ನೆಚ್ಚರಿಕೆ ತೆಗೆದುಕೊಂಡಿರುತ್ತಾರೆಯೇ?

4) ತೀರ್ಮಾನಕ್ಕೆ ಬರಬಹುದಾಗಿದೆ.

ಈ ಮೇಲಿನ ಅಂಶಗಳಿಗೆ ಈ ಕೆಳಗಿನಂತೆ ಉತ್ತರಿಸಿ ಈ ಕೆಳಗಿನಂತೆ ತೀರ್ಮಾನಕ್ಕೆ ಬರಲಾಗಿದೆ, ಅದಕ್ಕೆ ಕಾರಣಗಳು ಈ ಕೆಳಗಿನಂತೆ ನೀಡಲಾಗಿದೆ.

1. ಒಂದನೇ ಅಂಶಕ್ಕೆ ಹೌದು ಎಂತಲೂ
2. ಎರಡನೇ ಅಂಶಕ್ಕೆ ಹೌದು ಎಂತಲೂ
3. ಮೂರನೇ ಅಂಶಕ್ಕೆ ಹೌದು ಎಂದಾಗಿರುತ್ತದೆ.

ಅಂಶ-1:

ದಿನಾಂಕ:21.09.1999ರಂದು ನಗರ ವಲಯದ ಯಡೂರು ಶಾಖೆಯ ಮತ್ತು ಹುಲಿಕಲ್ ತನಿಖಾ ಠಾಣೆಯ ವನಪಾಲಕರು ತನಿಖಾ ಗೇಟಿನಲ್ಲಿ ಕಾಯುತ್ತಿರುವಾಗ ಮಧ್ಯಾಹ್ನ 1-45ರ ಸಮಯದಲ್ಲಿ ಟಾಟಾ 407 ಮಿನಿಲಾರಿ ಕೆಎ-20-2367 ರಲ್ಲಿ ಶ್ರೀಗಂಧ 220 ಕೆ.ಜಿ.ಯನ್ನು ಅಕ್ರಮವಾಗಿ ಸಾಗಿಸಿದ ಬಗ್ಗೆ ಪ್ರಥಮ ವರ್ತಮಾನ ವರದಿ, ಮಹಜರ್ ವರದಿ, ಜಪ್ತು ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಈ ನ್ಯಾಯಾಲಯಕ್ಕೆ ವಾಹನ ಮತ್ತು ಶ್ರೀಗಂಧವನ್ನು ಹಾಜರುಪಡಿಸಿರುತ್ತಾರೆ. ಸಲ್ಲಿಸಿದ ದಾಖಲೆಗಳಿಗೂ ಮತ್ತು ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ತಾಳೆಯಾಗಿದ್ದು, ಇದರಿಂದ ಈ ವಾಹನದಲ್ಲಿ ಶ್ರೀಗಂಧವನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿದ್ದರಿಂದ ಕರ್ನಾಟಕ ಅರಣ್ಯ ಕಾಯ್ದೆ ಮತ್ತು ಕಾನೂನನ್ನು ಉಲ್ಲಂಘಿಸಿರುತ್ತಾರೆ ಎಂದು ನನ್ನ ಉತ್ತರವಾಗಿದೆ.

ಅಂಶ-2:

ಆರ್.ಸಿ. ಮಾಲೀಕರಾದ ದಿವಂಗತ ಎನ್. ಗೋವಿಂದರಾಯ ನಾಯ್ಕ ಬಿನ್ ವಾಮನ ನಾಯ್ಕ, ಅಂಬಾನಿಲಯ ವಾಸಿ, ನೇರಳೇಗದ್ದೆ ಗ್ರಾಮ, ಕುರಕುಂಜಿ ಅಂಚೆ, ಕುಂದಾಪುರ ತಾ:, ಉಡುಪಿ ಜಿಲ್ಲೆ ಇವರು ದಿನಾಂಕ:22.12.1999 ರಂದು ಈ ನ್ಯಾಯಾಲಯಕ್ಕೆ ವಕೀಲರ ಮುಖಾಂತರ ಅರ್ಜಿ ಸಲ್ಲಿಸಿರುತ್ತಾರೆ. ಇವರ ಅರ್ಜಿಯಲ್ಲಿ ಮತ್ತು ಬಿ ಎಕ್ಸ್‌ಟ್ರ್ಯಾಕ್ಟ್‌ನಲ್ಲಿ ನಮೂದಿಸಿದ ವಿಳಾಸದಂತೆ ಆರ್.ಸಿ. ಮಾಲೀಕರಿಗೆ ಕರ್ನಾಟಕ ಅರಣ್ಯ ಕಾಯ್ದೆ 1963 ಸೆಕ್ಷನ್ 71(ಬಿ)(1) ಪ್ರಕಾರ ಕಾರಣ ಕೇಳಿ

ಪತ್ರವನ್ನು ದಿನಾಂಕ:12.01.2001 ರಂದು ನೊಂದಣಿ ಅಂಚೆ ಮೂಲಕ ಜಾರಿ ಮಾಡಿದೆ. ನಂತರ ಆರ್.ಸಿ. ಮಾಲೀಕರು ಈ ವಾಹನವನ್ನು ಮಧ್ಯಂತರ ಸುಪರ್ಧಿಗೆ ಬಿಟ್ಟುಕೊಡಲು ಈ ನ್ಯಾಯಾಲಯಕ್ಕೆ ಸಲ್ಲಿಸಿದ ಅರ್ಜಿಯನ್ನು ದಿನಾಂಕ:25.06.2005ರಂದು ತಿರಸ್ಕರಿಸಿ ಆದೇಶವಾಗಿದೆ. ಈ ಆದೇಶದ ಮೇಲೆ ವಾಹನ ಮಾಲೀಕರು ಮಾನ್ಯ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಶಿವಮೊಗ್ಗ ಇಲ್ಲಿ ಕ್ರಿಮಿನಲ್ ಮಿಸಲೇನಿಯಸ್ ಅಪೀಲ್ ನಂ.27/05ರಲ್ಲಿ ಮೇಲ್ಮನವಿ ಸಲ್ಲಿಸಿ ಸದರಿ ಅಪೀಲ್ ದಿನಾಂಕ:08.04.2009ರಲ್ಲಿ ವಾಹನ ಮಾಲೀಕರ ಮನವಿಯನ್ನು ತಳ್ಳಿಹಾಕಿ ಆದೇಶವಾಗಿದೆ. ಮತ್ತು ಆರ್.ಸಿ. ಮಾಲೀಕರು ಮೃತರಾದ ಬಗ್ಗೆ ಈ ನ್ಯಾಯಾಲಯಕ್ಕೆ ತಿಳಿಸಿದ ಮೇರೆಗೆ ಮೃತ ಆರ್.ಸಿ. ಮಾಲೀಕರ ವಾರಸುದಾರರು ಇದ್ದಲ್ಲಿ ನ್ಯಾಯಾಲಯಕ್ಕೆ ಎಲ್.ಆರ್.ಎಸ್. ಸಲ್ಲಿಸುವ ಬಗ್ಗೆ ಪೇಪರ್ ಪ್ರಕಟಣೆಯನ್ನು ದಿನಾಂಕ:04.12.2003ರಂದು ಹೊರಡಿಸಿದೆ. ದಿನಾಂಕ:12.12.2003ರಂದು "ವನಕೃಪ" ದಿನ ಪತ್ರಿಕೆಯಲ್ಲಿ ಈ ಪ್ರಕಟಣೆಯು ಪ್ರಕಟವಾಗಿರುತ್ತದೆ. ಮತ್ತು ದಿನಾಂಕ:03.01.2004ರಂದು ಮೃತರ ವಾರಸುದಾರರಾದ ಶ್ರೀ ಎನ್. ವಾಮನ್ ನಾಯ್ಕ ಇವರು ಪ್ರಮಾಣ ಪತ್ರವನ್ನು ವಕೀಲರ ಮುಖಾಂತರ ಸಲ್ಲಿಸಿರುತ್ತಾರೆ. ಇವರ ಕ್ಲೈಮ್‌ನ ಬಗ್ಗೆ ತಕರಾರು ಸಲ್ಲಿಸಲು 15 ದಿನಗಳ ಕಾಲಾವಕಾಶ ನೀಡಿ ಪೇಪರ್ ಪ್ರಕಟಣೆಯನ್ನು ದಿನಾಂಕ:07.02.2005ರಂದು ಹೊರಡಿಸಿರುತ್ತದೆ. ಸದರಿ ಪ್ರಕಟಣೆಯು ದಿನಾಂಕ:15.02.2005ರಂದು "ಮನೋಭೂಮಿ" ದಿನಪತ್ರಿಕೆಯಲ್ಲಿ ಪ್ರಕಟಗೊಂಡಿರುತ್ತದೆ ಮತ್ತು ಡಿಫೆನ್ಸ್ ಸಾಕ್ಷಿ ಹೇಳಿಕೆಗೆ 7 ಬಾರಿ ದಿನಾಂಕ ನಿಗದಿಪಡಿಸಿರುತ್ತದೆ ಮತ್ತು ಡಿಫೆನ್ಸ್ ವಾದಕ್ಕೆ 3 ಬಾರಿ ದಿನಾಂಕವನ್ನು ನಿಗದಿಪಡಿಸಿರುತ್ತದೆ. ಒಮ್ಮೆಯೂ ವಾಹನ ಮಾಲೀಕರಾಗಲೀ, ಅವರ ಪರ ವಕೀಲರಾಗಲೀ ಈ ಪ್ರಕರಣದ ವಿಚಾರಣೆಗೆ ಹಾಜರಾಗಿರುವುದಿಲ್ಲ. ಇದರಿಂದ ಆರ್.ಸಿ. ಮಾಲೀಕರಿಗೆ ತಮ್ಮ ಅಹವಾಲನ್ನು ಮಂಡಿಸಲು ಈ ನ್ಯಾಯಾಲಯ ಬಹಳಷ್ಟು ಕಾಲಾವಕಾಶ ನೀಡಿದೆ ಎಂಬುದು ನನ್ನ ಉತ್ತರವಾಗಿದೆ.

ಅಂಶ–3:

ದಿನಾಂಕ:21.09.1999 ರಂದು 407 ಮಿನಿಲಾರಿಯಲ್ಲಿ ಶ್ರೀಗಂಧ 220 ಕೆ.ಜಿ.ಯನ್ನು ಅಕ್ರಮವಾಗಿ ಸಾಗಿಸುತ್ತಿದ್ದಾಗ ನಗರ ವಲಯದ ಯಡೂರು ಶಾಖೆಯ ಮತ್ತು ಹುಲಿಕಲ್ ತನಿಖಾ ಠಾಣೆಯ ವನಪಾಲಕರು ಮತ್ತು ಸಿಬ್ಬಂದಿಯವರು ಪತ್ತೆಹಚ್ಚಿ ಪ್ರಥಮ ವರ್ತಮಾನ ವರದಿ, ಜಪ್ತಿ ವರದಿ, ಮಹಜರ್ ವರದಿಯನ್ನು ಸಾಕ್ಷಿಗಳ ಸಹಿಯೊಂದಿಗೆ ಮತ್ತು ಈ ನ್ಯಾಯಾಲಯಕ್ಕೆ ವಲಯ ಅರಣ್ಯಾಧಿಕಾರಿ, ನಗರ ಇವರು ವಿಚಾರಣಾ ವರದಿಯೊಂದಿಗೆ ಸಲ್ಲಿಸಿದ್ದಾರೆ. ಪ್ರಾಸಿಕ್ಯೂಷನ್ ಸಾಕ್ಷಿ ಹೇಳಿಕೆಗೂ ಮತ್ತು ಈ ನ್ಯಾಯಾಲಯಕ್ಕೆ ಹಾಜರುಪಡಿಸಿದ ದಾಖಲೆಗಳಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಆರ್.ಸಿ. ಮಾಲೀಕರು ದಿನಾಂಕ:22.12.1999 ರಂದು ಸಲ್ಲಿಸಿದ ಅರ್ಜಿಯಲ್ಲಿ ತಿಳಿಸಿದಂತೆ, ಈ ವಾಹನದಲ್ಲಿ ದಿನಾಂಕ:20.09.2009ರಂದು ಕುಂದಾಪುರದಿಂದ ಶಿವಮೊಗ್ಗಕ್ಕೆ ತೆಂಗಿನ ಕಾಯಿ ಕಳುಹಿಸುತ್ತಿದ್ದರು ಎನ್ನುವುದಕ್ಕಾಗಲೀ, ಈ ವಾಹನ ದುರಸ್ತಿಗೆ ಬಂದಿದೆ ಎನ್ನುವುದಕ್ಕಾಗಲೀ, ಅದನ್ನು ರಿಪೇರಿ ಮಾಡಿಸಲು ಹೊಸನಗರಕ್ಕೆ ಹೋದ ಬಗ್ಗೆಯಾಗಲೀ ಯಾವುದೇ ಸಾಕ್ಷ್ಯಾಧಾರಗಳನ್ನು ವಿಚಾರಣಾ ಸಮಯದಲ್ಲಿ ಈ ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ಅಲ್ಲದೇ ಯಾರೂ ಈ ವಾಹನದಲ್ಲಿ ಅರಣ್ಯ ಉತ್ಪನ್ನವನ್ನು ಕಳ್ಳಸಾಗಾಣಿಕೆ ಮಾಡದಂತೆ ಆರ್.ಸಿ. ಮಾಲೀಕರಾಗಲೀ, ಅವರ ಪರ ವಾಹನ ಚಾಲಕರಾಗಲೀ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿರುವುದಿಲ್ಲ ಎಂಬುದು ನನ್ನ ಉತ್ತರವಾಗಿದೆ.

ಅಂಶ–4:

ಈ ಮೇಲಿನ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿ ಮತ್ತು ಈ ಪ್ರಕರಣದ ವಿದ್ಯಾಮಾನಗಳನ್ನು ಅರಿತು, ವಾದವನ್ನು ಕೇಳಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

ಆದೇಶ

ಮೇಲ್ಕಂಡ ಪ್ರಸ್ತಾವನೆಯಲ್ಲಿ ವಿವರಿಸಿದ ಅಂಶಗಳನ್ನು ಗಣನೆಗೆ ತೆಗೆದುಕೊಂಡು ಶ್ರೀ ಮಹೇಶ್ ಬಿ. ಶಿರೂರ್, ಭಾ.ಅ.ಸೇ. ಅಧಿಕೃತ ಅಧಿಕಾರಿ ಹಾಗೂ ಉಪ ಅರಣ್ಯ ಸಂರಕ್ಷಣಾಧಿಕಾರಿ, ಸಾಗರ ವಿಭಾಗ, ಸಾಗರ ಆದ ನಾನು ಕರ್ನಾಟಕ ಅರಣ್ಯ ಕಾಯಿದೆ 1963 ಸೆಕ್ಷನ್ 71(ಎ) ರಿಂದ (ಜಿ) ಹಾಗೂ ಇಲ್ಲಿಯವರೆಗಿನ ತಿದ್ದುಪಡಿ ಕಾಯಿದೆ ಪ್ರಕಾರ ವಲಯ ಅರಣ್ಯಾಧಿಕಾರಿ, ನಗರ ಇವರು ಜಪ್ತು ಮಾಡಿದ ವಾಹನ ಟಾಟಾ 407 ಮಿನಿ ಲಾರಿ ಕೆಎ–20–2637 ನ್ನು ಮತ್ತು ಈ ವಾಹನದಲ್ಲಿ ಕರ್ನಾಟಕ ಸರ್ಕಾರದ ಸಂಪತ್ತು ಆದ ಶ್ರೀಗಂಧದ 88 ತುಂಡುಗಳ ಒಟ್ಟು ತೂಕ 220 ಕೆ.ಜಿ.ಯನ್ನು ಅಕ್ರಮವಾಗಿ ಸಾಗಿಸಲು ಉಪಯೋಗಿಸಿರುತ್ತಾರೆ. ಆದ್ದರಿಂದ 407 ಮಿನಿ ಲಾರಿ ಸಂಖ್ಯೆ:ಕೆಎ–20–2637ನ್ನು ಮತ್ತು ಈ ವಾಹನದಲ್ಲಿದ್ದ ಶ್ರೀಗಂಧದ 88 ತುಂಡುಗಳ ಒಟ್ಟು ತೂಕ 220 ಕೆ.ಜಿ.ಯನ್ನು ಅಂತಿಮವಾಗಿ ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡಿರುತ್ತೇನೆ. ಮುಟ್ಟುಗೋಲು ಹಾಕಿಕೊಂಡ ವಾಹನ ಮತ್ತು ಅರಣ್ಯ ಉತ್ಪನ್ನವನ್ನು ಸರ್ಕಾರಕ್ಕೆ ಅನುಕೂಲಕರವಾಗಿ ವಿಲೇ ಮಾಡಲು ಆದೇಶಿಸಿದೆ. ಈ ಆದೇಶವನ್ನು ಹೇಳಿ ಬರೆಯಿಸಿ, ಗಣಕಯಂತ್ರದಲ್ಲಿ ಮುದ್ರಿಸಿ, ನಂತರ ಸರಿಪಡಿಸಿ ದಿನಾಂಕ:01.08.2009ರಂದು ನನ್ನ ಸಹಿ ಹಾಗೂ ಮೊಹರಿನೊಂದಿಗೆ ತೆರೆದ ನ್ಯಾಯಾಲಯದಲ್ಲಿ ಆದೇಶಿಸಿದ್ದೇನೆ. ಈ ಆದೇಶ ಹೊರಡಿಸಿದ 30 (ಮೂವತ್ತು) ದಿನಗಳ ಒಳಗಾಗಿ ಯಾರು ಮೇಲ್ಮನವಿ ಸಲ್ಲಿಸದೇ ಹೋದಲ್ಲಿ ಇದೇ ಅಂತಿಮ ಆದೇಶವಾಗಿರುತ್ತದೆ.

ಅಧಿಕೃತ ಅಧಿಕಾರಿ ಹಾಗೂ
ಉಪ ಅರಣ್ಯ ಸಂರಕ್ಷಣಾಧಿಕಾರಿ
ಸಾಗರ ವಿಭಾಗ, ಸಾಗರ.

ಪಿ.ಆರ್.766

MURUGAN OIL EXTRACTIONS PVT LTD.,

No.4, 2nd Floor, 3rd Main Road, Seshadripuram, Bangalore-560020

NOTICE OF THE CREDITOR'S MEETING

Notice is hereby given, pursuant to section 500 of the Companies Act, 1956, that the meeting of the creditor of the above named company will be held at No.4, 2nd Floor, 3rd Main Road, Sheshadri Puram, Bangalore-560020, on 26.11.2009 At 10 AM for the purpose mentioned in section 500, 502, 503, 504 and 505 of the said Act. A Separate notice, enclosing a list of the creditors and the statement of financial position has been sent to all the creditors by post under certificate of posting.

Place:Bangalore
Date:22.10.2009
PD-69

By order of the Board,
Chairman/ Liquidator.

ಕಾರ್ಖಾನೆ ಮತ್ತು ಬಾಯ್ಲರುಗಳ ಇಲಾಖೆ

ಕಾರ್ಖಾನೆ ಮತ್ತು ಬಾಯ್ಲರುಗಳ ನಿರ್ದೇಶನಾಲಯ, ಮತ್ತು ಅಧ್ಯಕ್ಷರು, ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷಾ ಮಂಡಳಿ, ಕಾರ್ಮಿಕ ಭವನ, 2ನೇ ಮಹಡಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-560029

ಅಧಿಸೂಚನೆ

ಸಂಖ್ಯೆ:BLR-4/BAE/Exam/CR-18/2009-10, ದಿನಾಂಕ:27ನೇ ಅಕ್ಟೋಬರ್, 2009

ವಿಷಯ: ಪ್ರಥಮ ಮತ್ತು ದ್ವಿತೀಯ ದರ್ಜೆ ಅರ್ಹತಾ ಪ್ರಮಾಣ ಪತ್ರದ ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷೆ ಬಗ್ಗೆ.

ಉಲ್ಲೇಖ: ಸರ್ಕಾರದ ಅಧಿಸೂಚನೆ ಕ್ರಮಾಂಕ: ಕಾಇ 4 ಕಾಬಾಸೇ 2009, ದಿನಾಂಕ:25.08.2009.

ಮುಂದಿನ ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷೆಯನ್ನು ನಡೆಸಲು ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷಾ ಮಂಡಳಿಯು ಉದ್ದೇಶಿಸಲಾಗಿದೆ. ಸದರಿ ಪರೀಕ್ಷೆಗೆ ವಿವಿಧ ಜಿಲ್ಲೆಗಳಿಂದ ಬರುವ ಅರ್ಜಿಗಳ ಸಂಖ್ಯೆಯ ಮೇಲೆ, ಪರೀಕ್ಷಾ ಸ್ಥಳವನ್ನು ಮತ್ತು ದಿನಾಂಕವನ್ನು ನಿಗದಿಪಡಿಸಿ ಅಭ್ಯರ್ಥಿಗಳಿಗೆ ತಿಳಿಸಲಾಗುವುದು.

ಆಸಕ್ತ ಅಭ್ಯರ್ಥಿಗಳು ಪರೀಕ್ಷೆಯ ಅರ್ಜಿ ನಮೂನೆಗಳಿಗಾಗಿ ಮನವಿಯನ್ನು ಸ್ವವಿಳಾಸವುಳ್ಳ ಐದು ರೂಪಾಯಿಗಳ ಅಂಚೆ ಚೀಟಿ ಹಚ್ಚಿದ ಲಕೋಟೆಯೊಂದಿಗೆ ಕಾರ್ಯದರ್ಶಿಗಳು, ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷಾ ಮಂಡಳಿ, ಕಾರ್ಮಿಕ ಭವನ, 2ನೇ ಮಹಡಿ, ಬೆಂಗಳೂರು ಡೈರಿ ವೃತ್ತದ ಬಳಿ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29 ಇವರಿಗೆ ಸಲ್ಲಿಸಬೇಕು.

ಕನಿಷ್ಠ ಅರ್ಹತೆ

1) ಪ್ರಥಮ ದರ್ಜೆ ಅರ್ಹತಾ ಪ್ರಮಾಣ ಪತ್ರದ ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷೆಗೆ ಕುಳಿತುಕೊಳ್ಳಲಿಚ್ಛಿಸುವ ಅಭ್ಯರ್ಥಿಯ ವಯಸ್ಸು 21 ವರ್ಷಕ್ಕಿಂತ ಕಡಿಮೆ ಇರಬಾರದು ಮತ್ತು 500 ಚದರ ಅಡಿಗಿಂತ ಕಡಿಮೆ ಇರದ ಹೀಟಿಂಗ್ ಸರ್ಫೇಸ್ ಉಳ್ಳ ಬಾಯ್ಲರ್‌ನ ಮೇಲೆ ಎರಡು ವರ್ಷ ದ್ವಿತೀಯ ದರ್ಜೆ ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷೆಯ ಅರ್ಹತಾ ಪ್ರಮಾಣ ಪತ್ರ ಹೊಂದಿ ಕೆಲಸ ಮಾಡಿರಬೇಕು.

2) ದ್ವಿತೀಯ ದರ್ಜೆ ಅರ್ಹತಾ ಪ್ರಮಾಣ ಪತ್ರದ ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷೆಗೆ ಅಭ್ಯರ್ಥಿಯ ವಯಸ್ಸು 20 ವರ್ಷಕ್ಕಿಂತ ಕಡಿಮೆ. ಇರಬಾರದು ಮತ್ತು ಯಾವುದಾದರೂ ಬಾಯ್ಲರ್ ಮೇಲೆ ಫೈರ್‌ಮನ್/ಅಸಿಸ್ಟೆಂಟ್ ಫೈರ್ಮನ್/ ಡಾಂಕಿ ಮ್ಯಾನ್ ಆಗಿ ಕನಿಷ್ಠ ಮೂರು ವರ್ಷ ಕೆಲಸ ಮಾಡಿರಬೇಕು.

3) ಅಭ್ಯರ್ಥಿಗಳು ಮೊದಲನೇ ಮತ್ತು ಎರಡನೇ ದರ್ಜೆ ಪರಿಷ್ಕೃತ ಪರೀಕ್ಷಾ ಶುಲ್ಕವನ್ನು ಡಿಡಿ ಅಥವಾ ಪೇ ಆರ್ಡರ್ ಅಥವಾ ಚಲನ್ ಮುಖಾಂತರ ಸಂದಾಯ ಮಾಡತಕ್ಕದ್ದು. ಡಿಡಿ ಅಥವಾ ಪೇ ಆರ್ಡರ್ ಅನ್ನು "Director of Factories and Boilers, Bangalore" ಅವರ ಹೆಸರಿನಲ್ಲಿ ಯಾವುದೇ ರಾಷ್ಟ್ರೀಕೃತ ಬ್ಯಾಂಕಿನಿಂದ ಪಡೆಯತಕ್ಕದ್ದು. ಚಲನ್ ಮುಖಾಂತರ ಪರೀಕ್ಷಾ ಶುಲ್ಕವನ್ನು ಸಂದಾಯ ಮಾಡಿದಲ್ಲಿ 0230 ಲೇಬರ್ ಅಂಡ್ ಎಂಪ್ಲಾಯ್‌ಮೆಂಟ್, 103 ಫೀ ಫಾರ್ ಇನ್ಸ್‌ಪೆಕ್ಷನ್ ಆಫ್ ಸ್ಟೀಮ್ ಬಾಯ್ಲರ್ ಲೆಕ್ಕ ಶೀರ್ಷಿಕೆಯಲ್ಲಿ ಜಮಾ ಮಾಡತಕ್ಕದ್ದು.

ಮೊದಲನೇ ದರ್ಜೆ ಬಾಯ್ಲರ್ ಅಟೆಂಡೆಂಟ್ಸ್ ಪರೀಕ್ಷಾ ಶುಲ್ಕ ರೂ.100-00

ಎರಡನೇ ದರ್ಜೆ ಬಾಯ್ಲರ್ ಅಟೆಂಡೆಂಟ್ ಪರೀಕ್ಷಾ ಶುಲ್ಕ ರೂ.50-00

ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕಡೆಯ ದಿನಾಂಕ:30.11.2009 ಆಗಿರುತ್ತದೆ. ಹೆಚ್ಚಿನ ಮಾಹಿತಿಯನ್ನು ಸದರಿ ಕಛೇರಿಯಿಂದ ಪಡೆಯಬಹುದು.

ಕೆ.ವಿ. ಪಾಲಯ್ಯ
ಕಾರ್ಯದರ್ಶಿ,
ಬಾಯ್ಲರ್ ಅಟೆಂಡೆಂಟ್ ಪರೀಕ್ಷಾ ಮಂಡಳಿ, ಬೆಂಗಳೂರು.

ಪಿ.ಆರ್.1097

ಸಹಾಯಕ ಕಾರ್ಮಿಕ ಆಯುಕ್ತರು ಹಾಗೂ ಉಪಧನ ಪಾವತಿ ಕಾಯ್ದೆಯಡಿ ನಿಯಂತ್ರಣಾಧಿಕಾರಿಯವರ ನ್ಯಾಯಾಲಯ, ವಿಭಾಗ-4, ಬೆಂಗಳೂರು

ಸಂಖ್ಯೆ: ಪಿಜಿಎ/ಎಸ್.ಆರ್-237/2008-09

ಅರ್ಜಿದಾರರು

ಶ್ರೀಮತಿ ವೀಣಾಬಾಯಿ ಕೋಂ ಲೇಟ್ ಜಿ.ಆರ್. ದೇಶಪಾಂಡೆ, ನಂ.38/50, 2ನೇ ಎ ಮುಖ್ಯರಸ್ತೆ, ಬಿ.ಎಸ್.ಕೆ. 3ನೇ ಹಂತ, ಆಂಜನೇಯ ದೇವಸ್ಥಾನದ ರಸ್ತೆ, ಇಟ್ಟಮಡು, ಶ್ರೀರಾಮನಗರ, ಬೆಂಗಳೂರು-560 035.

ವಿರುದ್ಧ

ಪ್ರತಿವಾದಿಗಳು

ಮುಖ್ಯ ಸಂಚಾರ ವ್ಯವಸ್ಥಾಪಕರು ಬಿ.ಎಂ.ಟಿ.ಸಿ. ಕೇಂದ್ರ ಕಛೇರಿ, ಕೆ.ಹೆಚ್. ರಸ್ತೆ, ಶಾಂತಿನಗರ, ಬೆಂಗಳೂರು-560 027.

ಪ್ರಕಟಣೆ

ಸಾರ್ವಜನಿಕರಿಗೆ ಹಾಗೂ ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರು ಈ ನ್ಯಾಯಾಲಯದಲ್ಲಿ ದಿನಾಂಕ:22.01.2009 ರಂದು ಉಪಧನ ಪಾವತಿ ಕಾಯ್ದೆಯಡಿಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅರ್ಜಿಯಲ್ಲಿ ಅವರ ಪತಿ ಜಿ.ಆರ್. ದೇಶಪಾಂಡೆ ಇವರು ಪ್ರತಿವಾದಿ ಸಂಸ್ಥೆಯಲ್ಲಿ ತಮ್ಮ 34 ವರ್ಷಗಳ ಸೇವೆಯ ನಂತರ, ಸೇವೆಯಲ್ಲಿರುವಾಗಲೇ ದಿನಾಂಕ:21.02.1996 ರಂದು ಮರಣ ಹೊಂದಿರುತ್ತಾರೆಂದು ತಿಳಿಸಿ, ಪ್ರತಿವಾದಿಗಳಿಂದ ಕಾನೂನು ರೀತ್ಯ ಬರಬೇಕಾದ ಉಪಧನವನ್ನು ಕೊಡಿಸಿಕೊಡಬೇಕೆಂದು ಕೋರಿರುತ್ತಾರೆ.

ಸದರಿ ದಾವೆಯ ವಿಚಾರಣೆ ನಡೆಯುತ್ತಿದ್ದು, ಈ ಬಗ್ಗೆ ಆದೇಶ ಹೊರಡಿಸಬೇಕಾಗಿರುವುದರಿಂದ ಮೇಲೆ ಸೂಚಿಸಿರುವ ಅರ್ಜಿಯನ್ನು ಹೊರತುಪಡಿಸಿ (ಜೀವಂತ ಸದಸ್ಯರು) ಬೇರೆ ಯಾರಾದರೂ ಸದರಿ ಕಾರ್ಮಿಕರಿಗೆ ಸಂಬಂಧಿಸಿದ ಶಾಸನಬದ್ಧ ವಾರಸುದಾರರು ಎಂದು ಪರಿಗಣಿಸಲು ಪ್ರಾರ್ಥಿಸುವುದಾದಲ್ಲಿ ಅಂತಹವರು ಈ ಪ್ರಕಟಣೆಯನ್ನು ರಾಜ್ಯ ಪತ್ರದಲ್ಲಿ ಪ್ರಕಟಿಸಿದ 30 ದಿವಸಗಳೊಳಗಾಗಿ ಅಂತಹ ಆಕ್ಷೇಪಣೆಗಳನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದೆಂದು ಈ ಮೂಲಕ ಸೂಚಿಸಲಾಗಿದೆ.

ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ದಿನಾಂಕ:02.11.2009

ಪಿ.ಆರ್.1096

ಎ.ಹೆಚ್. ಉಮೇಶ
ಸಹಾಯಕ ಕಾರ್ಮಿಕ ಆಯುಕ್ತರು, ಮತ್ತು
ನಿಯಂತ್ರಣಾಧಿಕಾರಿಗಳು, ಉಪಧನ ಪಾವತಿ
ಕಾಯ್ದೆ, ವಿಭಾಗ-4, ಬೆಂಗಳೂರು.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಶಿವಮೊಗ್ಗ ಜಿಲ್ಲೆ, ಶಿವಮೊಗ್ಗ

ಕೋರ್ಟ್ ಸಮ್ಮನ್ಸ್

ಸಂಖ್ಯೆ: ಕಾನಪ/ಡಬ್ಲ್ಯೂಸಿಎ/ಸಿಆರ್-53/2009, ದಿನಾಂಕ:30ನೇ ಅಕ್ಟೋಬರ್, 2009

ಅರ್ಜಿದಾರರು

1) ಶ್ರೀಮತಿ ನುಸರತ್ ಜಹಾನ್ ಕೋಂ ಲೇಟ್ ರಫೀಕ್ ಅಹಮದ್,
2) ಮೊಹಮ್ಮದ್ ಫಾರೂಕ್ ಬಿನ್ ಲೇಟ್ ರಫೀಕ್ ಅಹಮದ್,
3) ಹರ್‌ಶಿಯಾ ಬಾನು ಬಿನ್ ಲೇಟ್ ರಫೀಕ್ ಅಹಮದ್,
4) ಮಹಮ್ಮದ್ ಅನ್ವರ್ ಪಾಶ ಬಿನ್ ಲೇಟ್ ರಫೀಕ್ ಅಹಮದ್,
5) ಹಸ್‌ಫಿಯಾ ಬಾನು ಬಿನ್ ಲೇಟ್ ರಫೀಕ್ ಅಹಮದ್
6) ಅಸ್ಮಾ ಬಾನು ಬಿನ್ ಲೇಟ್ ರಫೀಕ್ ಅಹಮದ್,
7) ನಗ್ಮಾ ಬಾನು ಲೇಟ್ ರಫೀಕ್ ಅಹಮದ್,
ವಾಸ: ನುಸರತ್ ಬಹಾನ್, ಅನವಟ್ಟಿ, ಸೊರಬ ತಾಲ್ಲೂಕು.

ಪ್ರತಿವಾದಿಗಳು

ಉದಯ್ ಕುಮಾರ್ ಬಿನ್ ಸುಬ್ರಮಣ್ಯ ಪಿಳ್ಳೈ, ಪೈಂಟ್ ಕಂಟ್ರಾಕ್ಟರ್, ವಿನಾಯಕನಗರ, ಕಾಚಿನಕಟ್ಟೆ, ಶಿವಮೊಗ್ಗ ತಾ:

ಅಧಿಸೂಚನೆ

ಅರ್ಜಿದಾರರಾದ ಶ್ರೀಮತಿ ನುಸರತ್ ಜಹಾನ್ ಮತ್ತು ಇತರರು ಇವರು ಲೇಟ್ ರಫೀಕ್ ಅಹಮದ್ ಇವರು ಪ್ರತಿವಾದಿಗಳಲ್ಲಿ ಕೆಲಸಗಾರರಾಗಿದ್ದು, ಕೆಲಸದಲ್ಲಿ ನಿರತನಾಗಿದ್ದಾಗ, ದಿನಾಂಕ;15.07.2009 ರಂದು ಸಂಭವಿಸಿದ ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತಳಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೇ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿದಂತೆ ಇನ್ನಿತರೇ ಯಾವುದೇ ರೀತಿಯ ತಕರಾರು ಇದ್ದಲ್ಲಿ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಾಗಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದು ಎಂದು ತಿಳಿಸಲಾಗಿದೆ.

ಪಿ. ವಿಜಯ್ ದೇವ್ ನಾಯಕ್
ಕಾರ್ಮಿಕ ಪರಿಹಾರ ಆಯುಕ್ತರು,
ಕಾರ್ಮಿಕ ಪರಿಹಾರ ಆಯುಕ್ತರವರ ನ್ಯಾಯಾಲಯ, ಶಿವಮೊಗ್ಗ.

ಪಿ.ಆರ್.1099

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಮಂಡ್ಯ ಉಪವಿಭಾಗ-2, ಮಂಡ್ಯ ಇವರ ನ್ಯಾಯಾಲಯ
ಸಂಖ್ಯೆ:ಡಬ್ಲ್ಯೂಸಿಎ:ಎಫ್‌ಸಿ/ಸಿಆರ್-5/2009, ದಿನಾಂಕ:28ನೇ ಅಕ್ಟೋಬರ್, 2009

ಅರ್ಜಿದಾರರು

ಶ್ರೀಮತಿ ಚೆನ್ನಾಜಮ್ಮ ವೈಫ್ ಆಫ್ ಕೃಷ್ಣಾಚಾರಿ, ಗೆಜ್ಜಲಗೆರೆ, ಮದ್ದೂರು ತಾಲ್ಲೂಕು, ಮಂಡ್ಯ ಜಿಲ್ಲೆ.

ಪ್ರತಿವಾದಿಗಳು

1) ಶ್ರೀಮತಿ ಜಬೀನಾ ವೈಫ್ ಆಫ್ ಇಲಿಯಾಜ್ ಶರೀಫ್ ನಂ.21, 1ನೇ ಎ ಕ್ರಾಸ್, ಗಂಗನಹಳ್ಳಿ, ನಾಯಂಡನಹಳ್ಳಿ, ಬೆಂಗಳೂರು-32.

2) ದಿ ಡಿವಿಜನಲ್ ಮ್ಯಾನೇಜರ್, ಓರಿಯಂಟಲ್ ಇನ್‌ಶ್ಯೂರೆನ್ಸ್ ಕಂ.ಲಿ., ಡಿ.ಓ.-2, ನ್ಯೂ ಮುಸ್ಲಿಂ ಹಾಸ್ಟೆಲ್ ಕಾಂಪ್ಲೆಕ್ಸ್, ಫೈರ್ ಬ್ರಿಗೇಡ್ ರಸ್ತೆ, ಸರಸ್ವತಿಪುರಂ, ಮೈಸೂರು.

ಪ್ರಕಟಣೆ

ಈ ಮೇಲೆ ವಿಳಾಸಿಸಿರುವ ಅರ್ಜಿದಾರರು ದಿನಾಂಕ:27.10.2009 ರಂದು ಈ ನ್ಯಾಯಾಲಯಕ್ಕೆ ಅರ್ಜಿಯೊಂದನ್ನು ಸಲ್ಲಿಸಿ, ಅರ್ಜಿದಾರರ ಪತಿ ಶ್ರೀ ಜಿ.ಕೆ. ನಾಗೇಂದ್ರ @ ಜಿ.ಕೆ. ನಾಗೇಂದ್ರ ಕುಮಾರ್ ಇವರು ಮೇಲೆ ವಿಳಾಸಿಸಿರುವ 1ನೇ ಪ್ರತಿವಾದಿ ಬಳಿ ಕೆಲಸ ನಿರ್ವಹಿಸುತ್ತಿದ್ದಾಗ ಉದ್ಯೋಗ ಸಮಯದಲ್ಲಿ ಅಪಘಾತ ಸಂಭವಿಸಿ, ಮರಣ ಹೊಂದಿರುತ್ತಾರೆಂದು ತಿಳಿಸಿ, ಮೇಲೆ ವಿಳಾಸಿಸಿರುವ ಪ್ರತಿವಾದಿಗಳ ವಿರುದ್ಧ ಕ್ರಮ ತೆಗೆದುಕೊಂಡು ತಮಗೆ ಕಾಯ್ದೆಯನ್ವಯ ಪರಿಹಾರ ಹಾಗೂ ಇತರ ಉಪಶಮನಗಳನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯವನ್ನು ಪ್ರಾರ್ಥಿಸಿರುತ್ತಾರೆ.

ಆದ್ದರಿಂದ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಪ್ರಕಟಣೆ ಮೂಲಕ ತಿಳಿಸುವುದೇನೆಂದರೆ ಈ ಬಗ್ಗೆ ತಮ್ಮ ಆಕ್ಷೇಪಣೆಗಳೇನಾದರೂ ಇದ್ದರೆ ಹಾಗೂ ಅರ್ಜಿದಾರರಲ್ಲದೆ ತಾವೇನಾದರೂ ಮೃತರ ನಿಜವಾದ "ಅವಲಂಬಿತರು" ಎಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿವಸಗಳೊಳಗಾಗಿ ತಮ್ಮ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಈ ನ್ಯಾಯಾಲಯಕ್ಕೆ ಸಲ್ಲಿಸಬೇಕು. ನಿಗದಿಪಡಿಸಿದ ಅವಧಿಯಲ್ಲಿ ಯಾರಿಂದಲೂ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಕ್ಲೈಮ್ ಅರ್ಜಿಯ ಬಗ್ಗೆ ಮುಂದಿನ ಕ್ರಮ ಜರುಗಿಸಲಾಗುವುದು. ತದ ನಂತರ ಬಂದ ಆಕ್ಷೇಪಣೆ ಅಥವಾ ಅರ್ಜಿಗಳನ್ನು ಸ್ವೀಕರಿಸುವುದಿಲ್ಲ.

ಮೊಹಮದ್ ಯೂಸುಫ್
ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ಪರಿಹಾರ ಆಯುಕ್ತರು,
ಮಂಡ್ಯ ಉಪವಿಭಾಗ-2, ಮಂಡ್ಯ-571401.

ಪಿ.ಆರ್.1104

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ನ್ಯಾಯಾಲಯದಲ್ಲಿ, ಕೋಲಾರ
ಪ್ರಕರಣ ಸಂಖ್ಯೆ:ಡಬ್ಲ್ಯೂಸಿಎ:ಎಫ್‌ಸಿ-08/09

ಅರ್ಜಿದಾರರು

1) Padmavathi W/o Shanmugam
2) Suseela D/o Shanmugam
3) S. Majula D/o Shanmugam
R/o Door No.176, 9th cross, Indira Devi Compound, Vijaya Nagar BEML Nagar Post, Kolar Gold Fields-563115.

ಪ್ರತಿವಾದಿಗಳು

M/s BEML Management, K.G.F.

ಅಧಿಸೂಚನೆ

ಗುತ್ತಿಗೆ ಕಾರ್ಮಿಕರಾದ ಶ್ರೀ ಶಣ್ಮುಗಂ, ಗುತ್ತಿಗೆ ಎಲೆಕ್ಟ್ರೀಷನ್ ಅವರು ಬಿ.ಇ.ಎಂ.ಎಲ್. ಕೆ.ಜಿ.ಎಫ್. ರಲ್ಲಿ ಕರ್ತವ್ಯ ನಿರತನಾಗಿದ್ದಾಗ ದಿನಾಂಕ:19.03.2009 ರಂದು ಅಪಘಾತಕ್ಕೀಡಾಗಿ ಮರಣ ಹೊಂದಿರುತ್ತಾರೆಂದು ತಿಳಿಸಿ ನಷ್ಟ ಪರಿಹಾರದ ಬಾಬ್ತು ಠೇವಣಿಗೊಳಿಸಿ ಮೃತನ ಅವಲಂಬಿತರಾದ ಮೇಲ್ಕಂಡ 1 ರಿಂದ 3ನೇ ಅರ್ಜಿದಾರರೆಂದು ತೋರಿಸಿರುವವರಿಗೆ ಪರಿಹಾರ ಕೊಡಬೇಕೆಂದು ಈ ನ್ಯಾಯಾಲಯಕ್ಕೆ ಬಿಇಎಂಎಲ್ ಅವರು ಕೋರಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರನ್ನು ಸೇರಿದಂತೆ ಬೇರೆ ಯಾರಾದರೂ ಅರ್ಜಿದಾರರಿದ್ದು ಅವರು ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಪ್ರಕರಣಕ್ಕೆ ಸಂಬಂಧಿಸಿದ ಇನ್ನಿತರೆ ಯಾವುದೇ ರೀತಿಯ ತಕರಾರು

ಇದ್ದರೆ, ಈ ಅಧಿಸೂಚನೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟಣೆಯಾದ ದಿನಾಂಕದಿಂದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಮೇಲ್ಕಂಡ ಅರ್ಜಿದಾರರು ಸಹ ಅಧಿಕೃತವಾಗಿ ಅರ್ಜಿಸಲ್ಲಿಸಿ ಪರಿಹಾರದ ಹಣ ಪಡೆಯಲು ತಿಳಿಸಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈ ಅರ್ಜಿ:ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮ ಜರುಗಿಸಲಾಗುತ್ತದೆಂದು ತಿಳಿಸಲಾಗಿದೆ.

ಈ ಅಧಿಸೂಚನೆಯನ್ನು ನನ್ನ ಹಸ್ತಾಕ್ಷರ ಹಾಗೂ ಈ ನ್ಯಾಯಾಲಯದ ಮೊಹರಿನೊಂದಿಗೆ ಇದೇ ದಿನಾಂಕ....... ರಂದು ನೀಡಲಾಗಿದೆ.

ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು,
ಕೋಲಾರ ಉಪವಿಭಾಗ, ಕೋಲಾರ.

ಪಿ.ಆರ್.1100

ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು ರಾಮನಗರ ಜಿಲ್ಲೆ, ರಾಮನಗರ ರವರ ನಡವಳಿಕೆಗಳು

ಪ್ರಕರಣ ಸಂಖ್ಯೆ: ರಾಜಿಕಾ/ಎಂಎಸ್ಸಿ/ ಕ್ಯೂಎಲ್517/09-10, ದಿನಾಂಕ:7ನೇ ಅಕ್ಟೋಬರ್, 2009

ವಿಷಯ: ರಾಮನಗರ ಜಿಲ್ಲೆಯಲ್ಲಿ ಅಕ್ರಮ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ತಡೆಗಟ್ಟುವ ಬಗ್ಗೆ ಕೆಲವು ರಸ್ತೆಗಳಲ್ಲಿ ವಾಹನ ನಿಷೇಧ ಕುರಿತು.

ಪ್ರಸ್ತಾವನೆ:

ರಾಮನಗರ ಜಿಲ್ಲಾ ವ್ಯಾಪ್ತಿಯಲ್ಲಿ ಅಕ್ರಮ ಮರಳು ಗಣಿಗಾರಿಕೆ ಮತ್ತು ಸಾಗಾಣಿಕೆಯನ್ನು ಅಧಿಕೃತವಾಗಿ ಸಕ್ಷಮ ಪ್ರಾಧಿಕಾರಿಗಳ ಪೂರ್ವಾನುಮತಿ ಪಡೆಯದೆ ಸಾಗಾಣಿಕೆ ಮಾಡುತ್ತಿರುವುದು ಜಿಲ್ಲಾಡಳಿತ ಗಮನಕ್ಕೆ ಬಂದಿದ್ದು, ಲಾರಿಗಳು ಹಾಗೂ ಟ್ರಾಕ್ಟರ್‌ಗಳಲ್ಲಿ ಪರವಾನಿಗೆಯನ್ನು ಪಡೆಯದೆ ರಾತ್ರಿ ವೇಳೆಯಲ್ಲಿ ಬೇರೆ ಕಡೆಗೆ ಸಾಗಾಣಿಕೆ ಮಾಡುತ್ತಿದ್ದು, ಲಾರಿಗಳು ಅತ್ಯಧಿಕ ಮಟ್ಟದಲ್ಲಿ ಮರಳನ್ನು ತುಂಬಿಕೊಂಡು ಸಾಗಾಣಿಕೆ ಮಾಡುತ್ತಿದ್ದು ಇದರಿಂದ ಮುಖ್ಯ ರಸ್ತೆಗಳು ಹಾಗೂ ಸಂಪರ್ಕ ರಸ್ತೆಗಳು ಹಾಳಾಗುತ್ತಿದ್ದು, ಇದಲ್ಲದೇ ರಾತ್ರಿ ವೇಳೆಯಲ್ಲಿ ವಾಹನಗಳು ಚಲಿಸುವುದರಿಂದ ಹಳ್ಳಿಯ ಜನರಿಗೆ ನಿದ್ರೆಗೆ ಭಂಗ ಉಂಟಾಗುವುದಲ್ಲದೆ, ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವ ಸಾಧ್ಯತೆಗಳಲ್ಲದೆ, ಅರ್ಕಾವತಿ, ಕಣ್ವನದಿಗಳ ಪರಿಸರದ ಮೇಲೆ ಹಾಗೂ ಮಂಚನಬೆಲೆ ಡ್ಯಾಮ್‌ಗಳಿಗೆ ದುಷ್ಪರಿಣಾಮ ಬೀರುತ್ತಿದೆ.

ಮುಂದುವರೆದು, ಈಗಾಗಲೇ ರಚನೆಗೊಂಡಿರುವ ಮೊಬೈಲ್ ಸ್ಕ್ವಾಡ್‌ಗಳು ಅಕ್ರಮ ಮರಳು ಸಾಗಾಣಿಕೆಯ ವಾಹನಗಳನ್ನು ತಪಾಸಣೆ ನಡೆಸಿ ವಾಹನಗಳ ವಿರುದ್ಧ ಪ್ರಕರಣ ದಾಖಲಿಸಿರುವುದು ಕಂಡು ಬಂದಿರುತ್ತದೆ. ಈಗಾಗಲೇ ಹಲವಾರು ಗ್ರಾಮ ಪಂಚಾಯಿತಿಗಳ ಸದಸ್ಯರುಗಳು ಇದರಿಂದ ಪರಿಸರಕ್ಕೆ ಆಗುವ ತೊಂದರೆಗಳನ್ನು ವಿವರಿಸಿರುತ್ತಾರೆ. ಒಟ್ಟಾರೆ ಅರ್ಕಾವತಿ, ಕಣ್ವ ನದಿ ಪಾತ್ರದಲ್ಲಿ, ಮಂಚನಬೆಲೆಯ ರಸ್ತೆಯಲ್ಲಿ ರಾತ್ರಿ ಹೊತ್ತು ಸಂಚರಿಸುತ್ತಾ ಪರಿಸರವನ್ನು, ರಸ್ತೆಯನ್ನು, ಹಳ್ಳಿಯ ಜನರ ಆರೋಗ್ಯ, ಪರಿಸರದ ಮೇಲೆ ಉಂಟಾಗುತ್ತಿರುವ ದುಷ್ಪರಿಣಾಮಗಳನ್ನು ಗಮನದಲ್ಲಿಟ್ಟುಕೊಂಡು ರಾತ್ರಿಯ ವೇಳೆ ಮಂಚನಬೆಲೆಯಿಂದ ರಾಮನಗರಕ್ಕೆ ಬರುವ ರಸ್ತೆಗಳಲ್ಲಿ ಅಕ್ರಮ ಮರಳು ಸಾಗಿಸುವ ವಾಹನಗಳ ಸಂಚಾರವನ್ನು ನಿರ್ಬಂಧಿಸುವುದು ಸೂಕ್ತವೆಂದು ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ

ಪ್ರಸ್ತಾವನೆಯನ್ನು ಮೇಲಿನ ವಿಷಯವಾರು ಪರಿಶೀಲನೆ ಹಾಗೂ ಮತ್ತಿತರೆ ವಾಸ್ತವಾಂಶಗಳನ್ನು ಗಮನದಲ್ಲಿಟ್ಟುಕೊಂಡು, ಜಿ.ಎಲ್.ಚಂದ್ರಶೇಖರಯ್ಯ, ಭಾ.ಆ.ಸೇ. ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ದಂಡಾಧಿಕಾರಿಗಳು, ರಾಮನಗರ ಜಿಲ್ಲೆ, ರಾಮನಗರ ಆದ ನಾನು ನನಗೆ ದತ್ತವಾದ ಅಧಿಕಾರವನ್ನು ಚಲಾಯಿಸಿ, ಮೋಟಾರು ವಾಹನ ಕಾಯಿದೆ 1988ರ ಕಲಂ 115 ರಡಿಯಲ್ಲಿ ಹಾಗೂ ಕರ್ನಾಟಕ ಮೋಟಾರು ವಾಹನ ನಿಯಮ 221ಎ(5) ಮತ್ತು ಕರ್ನಾಟಕ ಭೂ ಕಂದಾಯ ಕಾಯಿದೆ 1964ರ ಕಲಂ 70 ಮತ್ತು 73 ರಡಿಯಲ್ಲಿ ರಾಮನಗರ ಜಿಲ್ಲೆಯ ಮಂಚನಬೆಲೆ-ರಾಮನಗರ ಮಾರ್ಗ ಮಂಚನಬೆಲೆ-ರಾಮನಗರ ಕೆಂಪೇಗೌಡ ಸರ್ಕಲ್ (ಲಿಂಗೇಗೌಡನದೊಡ್ಡಿ ಹಾಗಲಹಳ್ಳಿ-ರಾಮಪುರ ಕಗ್ಗಲಹಳ್ಳಿ-ಹರಿಸಂದ್ರ ಹಳ್ಳಿಮಾಳ- ಕೆಂಪೇಗೌಡನದೊಡ್ಡಿ ಮಾರ್ಗ) ಕಣ್ವ-ರಾಮನಗರ ಕೆಂಪೇಗೌಡ ಸರ್ಕಲ್ ಕ್ಯಾಸಾಪುರ ಶ್ಯಾನುಭೋಗನಹಳ್ಳಿ-ಎರೆಹಳ್ಳಿ ಕೂಟಗಲ್ಲು ಹೊಸೂರು ಶ್ಯಾನುಬೋಗನಹಳ್ಳಿ ಮಾರ್ಗ ಮಂಚನಬೆಲೆ-ಮಾಯಗಾನಹಳ್ಳಿ ಮಂಚನಬೆಲೆ-ಸುಗ್ಗನಹಳ್ಳಿ ಮಾಯಗಾನಹಳ್ಳಿ-ಮಂಚನಬೆಲೆ-ಚಿಕ್ಕೇನಹಳ್ಳಿ-ಚಂದ್ರಪ್ಪ ಸರ್ಕಲ್ ದೊಡ್ಡಆಲದಮರ, ಮಂಚನಬೆಲೆ-ವಿ.ಜಿ.ದೊಡ್ಡಿ-ನಾಯ್ಕನಪಾಳ್ಯ-ಮಾಗಡಿ ಕೆಂಪೇಗೌಡನದೊಡ್ಡಿ, ರಾಮದೇವರಪಾದ-ಚಿಕ್ಕೇಗೌಡನದೊಡ್ಡಿ-ದೊಮ್ಮನಹಳ್ಳಿ-ಕಗ್ಗಲಹಳ್ಳಿ-ದೇವಿಸಿದ್ದೇಗೌಡನದೊಡ್ಡಿ-ಚಂದ್ರಪ್ಪ ಸರ್ಕಲ್-ದೊಡ್ಡಾಲದಮರ- ಈ ಮಾರ್ಗವಾಗಿ ಸಂಚರಿಸುವ ಎಲ್ಲಾ ಲಾರಿ ಮತ್ತು ಟ್ರಾಕ್ಟರ್ ವಾಹನಗಳ ಸಂಚಾರವನ್ನು ರಾತ್ರಿ 8.00 ಗಂಟೆಯಿಂದ ಬೆಳಿಗ್ಗೆ 7.00 ಗಂಟೆಯವರೆಗೆ ನಿಷೇಧಿಸಲಾಗಿದೆ ಎಂದು ಆದೇಶಿಸಿದ್ದೇನೆ.

ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ ಮತ್ತು ಮುಂದಿನ ಆದೇಶದವರೆವಿಗೆ ಜಾರಿಯಲ್ಲಿರುತ್ತದೆ. ಮೋಟಾರ್ ವಾಹನ ಕಾಯಿದೆ 1988ರ ಕಲಂ 116 ರಡಿಯಲ್ಲಿ ಕರ್ನಾಟಕ ಮೋಟಾರು ವಾಹನಗಳ ನಿಯಮ 221ಎ(2) ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ರಾಮನಗರ ಇವರು ಅವಶ್ಯವಿದ್ದ ಕಡೆ ಸೂಚನಾ ಫಲಕಗಳನ್ನು ಅಳವಡಿಸಿ ನಿಷೇಧವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಕ್ರಮ ಕೈಗೊಳ್ಳತಕ್ಕದ್ದು.

ಜಿ.ಎಲ್. ಚಂದ್ರಶೇಖರಯ್ಯ, ಭಾ.ಆ.ಸೇ.
ಜಿಲ್ಲಾಧಿಕಾರಿಗಳು, ಹಾಗೂ ಜಿಲ್ಲಾ ದಂಡಾಧಿಕಾರಿಗಳು,
ರಾಮನಗರ ಜಿಲ್ಲಾ, ರಾಮನಗರ.

ಪಿ.ಆರ್.1098

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆಯಡಿ ಆಯುಕ್ತರು, ಗದಗ ಜಿಲ್ಲೆ, ಗದಗ ಇವರ ನ್ಯಾಯಾಲಯದಲ್ಲಿ

ಸಂಖ್ಯೆ:ಕಾಅಗ/ಕಾನಪ/ಎಫ್-76/2009-10/526, ದಿನಾಂಕ:23ನೇ ಅಕ್ಟೋಬರ್, 2009

ಅರ್ಜಿದಾರರು:		ಪ್ರತಿವಾದಿಗಳು:
1) ಶ್ರೀಮತಿ ಪಿ. ಸಾಯಮ್ಮ, ಸಾ: ಗಂಗಾಪುರ ತಾ: ಮುಂಡರಗಿ, ಜಿ: ಗದಗ.	ವಿರುದ್ಧ	1) ದಿ ಜನರಲ್ ಮ್ಯಾನೇಜರ್, ವಿಜಯನಗರ ಶುಗರ್ ಫ್ಯಾಕ್ಟರಿ ಲಿ., ಗಂಗಾಪುರ ತಾ: ಮುಂಡರಗಿ, ಜಿ: ಗದಗ.
2) ಪಿ. ದೀನಬಂಧು, ಸಾ: ಗಂಗಾಪುರ ತಾ: ಮುಂಡರಗಿ, ಜಿ:ಗದಗ.		2) ಯುನೈಟೆಡ್ ಇನ್ಸೂರೆನ್ಸ್ ಕಂ.ಲಿ., ತೋಂಟದಾರ್ಯ ವಿದ್ಯಾಪೀಠ ಬಿಲ್ಡಿಂಗ್, ರೋಟರಿ ಸರ್ಕಲ್, ಗದಗ.

ಪ್ರಕಟಣೆ

ಅರ್ಜಿದಾರರಾದ (1) ಶ್ರೀ:ಶ್ರೀಮತಿ ಪಿ.ಸಾಯಮ್ಮ (2) ಪಿ. ದೀನಬಂದು ಸಾ:ಗಂಗಾಪುರ, ತಾ:ಮುಂಡರಗಿ, ಜಿ:ಗದಗ, ಇವರು ತಾವು ಮೃತ ಲಕ್ಷ್ಮಣ ಪಿ. ದೀನಬಂದು ಇವರ ತಾಯಿ ಮತ್ತು ತಂದೆ ಎಂದೂ, ಅವರ ಮರಣದಿಂದ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಲಕ್ಷ್ಮಣ ಪಿ.ದೀನಬಂದು ಇವರು ಒಂದನೇ ಪ್ರತಿವಾದಿಗಳಾದ ದಿ ಜನರಲ್ ಮ್ಯಾನೇಜರ್ ವಿಜಯನಗರ ಶುಗರ್ ಫ್ಯಾಕ್ಟರಿ ಲಿ., ಗಂಗಾಪುರ ತಾ: ಮುಂಡರಗಿ, ಇವರಲ್ಲಿ .... ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲಿ ಅಥವಾ ಬೇರೆ ಯಾರಾದರೂ ಮೃತರ ಕಾನೂನುಬದ್ಧ ಆಶ್ರಿತರೆಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ, ಅಂತಹವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಆಕ್ಷೇಪಣೆಗಳನ್ನಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ಗದಗ ಜಿಲ್ಲೆ, ಗದಗ
ಹಾಗೂ ಕಾರ್ಮಿಕ ನಷ್ಟ ಪರಿಹಾರ
ಕಾನೂನು ಅಡಿ ಆಯುಕ್ತರು.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಕಾಯ್ದೆಯಡಿ ಆಯುಕ್ತರು, ಗದಗ ಜಿಲ್ಲೆ, ಗದಗ ಇವರ ನ್ಯಾಯಾಲಯದಲ್ಲಿ

ಸಂಖ್ಯೆ:ಕಾಅಗ/ಕಾನಪ/ಎಫ್-77/2009/531, ದಿನಾಂಕ:23ನೇ ಅಕ್ಟೋಬರ್, 2009

ಅರ್ಜಿದಾರರು:		ಪ್ರತಿವಾದಿಗಳು:
ಷಣ್ಮುಕಪ್ಪ ಶಿವಲಿಂಗಪ್ಪ ಹಲಗಟ್ಟಿ R/o ಹದ್ಲಿ ತಾ: ನರಗುಂದ, ಜಿ:ಗದಗ.	ವಿರುದ್ಧ	1) ವೆಂಕಟೇಶ ಹನುಮಂತಪ್ಪ ಕೊರವರ, R/o ಗಂಗಾಧರ ನಗರ, ಸೆಟ್ಲಮೆಂಟ್, 8ನೇ ಕ್ರಾಸ್, ಹುಬ್ಬಳ್ಳಿ.
		2) ದಿ ಡಿವಿಜನಲ್ ಮ್ಯಾನೇಜರ್, ದಿ ನ್ಯೂ ಇಂಡಿಯಾ ಅಶ್ಯೂರೆನ್ಸ್ ಕಂ.ಲಿ., ಕಿಟಲ್ ಕಾಲೇಜ್ ಹತ್ತಿರ, ಧಾರವಾಡ.

ಪ್ರಕಟಣೆ

ಅರ್ಜಿದಾರರಾದ (1) ಶ್ರೀ: ಷಣ್ಮುಕಪ್ಪ ಶಿವಲಿಂಗಪ್ಪ ಹಲಗಟ್ಟಿ, ಸಾ:ಹದ್ಲಿ, ತಾ:ನರಗುಂದ ಜಿ:ಗದಗ, ಇವರು ತಾವು ಮೃತ ಮಂಜುನಾಥ ಹಲಗಟ್ಟಿ ಇವರ ತಂದೆ ಎಂದೂ, ಅವರ ಮರಣದಿಂದ ನಷ್ಟ ಪರಿಹಾರ ಕೋರಿ ಈ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಮೃತ ಮಂಜುನಾಥ ಹಲಗಟ್ಟಿ ಇವರು ಒಂದನೇ ಪ್ರತಿವಾದಿಗಳಾದ ವೆಂಕಟೇಶ ಹನುಮಂತಪ್ಪ ಕೊರವರ R/o ಗಂಗಾಧರನಗರ, ಹುಬ್ಬಳ್ಳಿ ಇವರಲ್ಲಿ ಡ್ರೈವರ್ ಆಗಿ ಕೆಲಸ ನಿರ್ವಹಿಸುತ್ತಿದ್ದಾಗ ಸಂಭವಿಸಿದ ಅಪಘಾತದಲ್ಲಿ ಮರಣ ಹೊಂದಿದರೆಂದು ಸದರಿ ಅರ್ಜಿದಾರರು ತಿಳಿಸಿರುತ್ತಾರೆ. ಈ ಸಂಬಂಧವಾಗಿ ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ, ಈ ಬಗ್ಗೆ ಏನಾದರೂ ಆಕ್ಷೇಪಣೆಗಳಾಗಲಿ ಅಥವಾ ಬೇರೆ ಯಾರಾದರೂ ಮೃತರ ಕಾನೂನುಬದ್ಧ ಆಶ್ರಿತರೆಂದು ಪರಿಗಣಿಸಬೇಕೆಂದು ಪ್ರಾರ್ಥಿಸುವುದಾದರೆ, ಅಂತಹವರು ಈ ಪ್ರಕಟಣೆಯನ್ನು ಈ ನ್ಯಾಯಾಲಯದ ನಾಮಫಲಕದಲ್ಲಿ ಪ್ರಕಟಿಸಿದ 30 ದಿನಗಳೊಳಗಾಗಿ ಆಕ್ಷೇಪಣೆಗಳನ್ನಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯದಲ್ಲಿ ಸಲ್ಲಿಸತಕ್ಕದ್ದು. ಅವಧಿ ಮೀರಿ ಬಂದ ಅರ್ಜಿಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಕಾರ್ಮಿಕ ಅಧಿಕಾರಿ ಗದಗ ಜಿಲ್ಲೆ, ಗದಗ
ಹಾಗೂ ಕಾರ್ಮಿಕ ನಷ್ಟ ಪರಿಹಾರ
ಕಾನೂನು ಅಡಿ ಆಯುಕ್ತರು.

ಪಿ.ಆರ್.1084

ಕೃಷಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಗಳು, ಬೆಂಗಳೂರು ಇವರ ನಡವಳಿಗಳು

ವಿಷಯ: ಶ್ರೀ ಎಂ.ವಿ. ಕಲ್ಲೂರುಮಠ, ಕೃಷಿ ಸಹಾಯಕ, ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಮಾಲೂರು ಇವರು ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿಯಾದ ಬಗ್ಗೆ ಶಿಸ್ತುಕ್ರಮ.

ಓದಲಾಗಿದೆ: 1) ಜಂಟಿ ಕೃಷಿ ನಿರ್ದೇಶಕರು, ಗುಲ್ಬರ್ಗಾ ಇವರ ಪತ್ರಸಂಖ್ಯೆ: ಸಿಬ್ಬಂದಿ-1/ಕೃಸ/ಅಗೈಹಾ-5/2002-03, ದಿನಾಂಕ:28/31.05.2002.

2) ಈ ಕಛೇರಿಯ ಆದೇಶ ಸಂಖ್ಯೆ: ಸಿಬ್ಬಂದಿ-2/ಎಎ/ಎಇಪಿ(1)2 ಮಾಹೊ/26, 2002-03, ದಿನಾಂಕ:10.06.2002.

3) ಈ ಕಛೇರಿಯ ಸೂಚನ ಪತ್ರ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-6/11/2002-03, ದಿನಾಂಕ:04.03.2003.

4) ಶ್ರೀ ಎಂ.ವಿ. ಕಲ್ಲೂರುಮಠ, ಕೃಷಿ ಸಹಾಯಕ, ಇವರ ಸ್ವೀಕೃತಿ ಪತ್ರ ದಿನಾಂಕ:21.05.2003.

5) ಇಲಾಖಾ ಆದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-6/11/2002-03, ದಿನಾಂಕ:24.07.2003.

6) ಸಹಾಯಕ ಕೃಷಿ ನಿರ್ದೇಶಕರು, ಮಾಲೂರು ಇವರ ಪತ್ರ ಸಂಖ್ಯೆ: ಸಕೃನಿ-ಮಾ/ಸಿಬ್ಬಂದಿ/ಕೃಸ/ಅಗೈಹಾ/ಎಂ.ವಿ.ಕ/2002-03, ದಿನಾಂಕ:05.08.2003.

7) ಇಲಾಖಾ ಪತ್ರ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-6/11/2002-03, ದಿನಾಂಕ:22-9/08-10.2003.

8) ಆರೋಪಿತರ ಸ್ವೀಕೃತಿ ಪತ್ರ ದಿನಾಂಕ:04.11.2003.

9) ಇಲಾಖಾ ಪತ್ರ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-6/11/2002-03, ದಿನಾಂಕ:23.10.2003.

10) ಇಲಾಖಾ ಆದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-7/11/2002-03, ದಿನಾಂಕ:16.02.2004.

11) ವಿಚಾರಣಾಧಿಕಾರಿಗಳ ವಿಚಾರಣಾ ವರದಿ ದಿನಾಂಕ:27-4/08.06.2006.

12) ಇಲಾಖಾ ಪತ್ರ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-6/11/2002-03, ದಿನಾಂಕ:17.07.2006 ಹಾಗೂ 08.07.2008.

13) ಸಹಾಯಕ ಕೃಷಿ ನಿರ್ದೇಶಕರು ಜಲಾನಯನ ಅಭಿವೃದ್ಧಿ ಇಲಾಖಾ ರಾಣಿಬೆನ್ನೂರು ಇವರ ಪತ್ರ ದಿನಾಂಕ:06.08.2007 ಮತ್ತು 19.08.2008.

ಪ್ರಸ್ತಾವನೆ:

ಶ್ರೀ ಎಂ.ವಿ. ಕಲ್ಲೂರುಮಠ, ಕೃಷಿ ಸಹಾಯಕ, ಹಿಂದಿನ ರೈತ ಸಂಪರ್ಕ ಕೇಂದ್ರ ಕಮಲಾಪುರ ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಗುಲ್ಬರ್ಗಾ ಹಾಲಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಮಾಲೂರು, ಕೋಲಾರ ಜಿಲ್ಲೆ ಇವರು ರೈತ ಸಂಪರ್ಕ ಕೇಂದ್ರ ಕಮಲಾಪುರ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದಾಗ ದಿನಾಂಕ:13.06.2001 ರಿಂದ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿಯಾದ ಬಗ್ಗೆ ಓದಲಾದ ಕ್ರ.ಸಂ.(1) ರ ಪತ್ರ ಮುಖೇನ ಜಂಟಿ ಕೃಷಿ ನಿರ್ದೇಶಕರು ಗುಲ್ಬರ್ಗಾ ರವರು ಶಿಸ್ತುಕ್ರಮ ಕೈಗೊಳ್ಳುವಂತೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಪ್ರಸ್ತಾವನೆಯನ್ನು ಪರಿಶೀಲಿಸಲಾಗಿ ಆರೋಪಿತರು ಕರ್ತವ್ಯಕ್ಕೆ ಗೈರು ಹಾಜರಾಗಿರುವುದು ಮೇಲ್ನೋಟಕ್ಕೆ ಕಂಡುಬಂದ ಹಿನ್ನೆಲೆಯಲ್ಲಿ ಇವರ ವಿರುದ್ಧದ ಆರೋಪಗಳ ಬಗ್ಗೆ ಓದಲಾದ ಕ್ರ.ಸಂ. (3)ರ ಪತ್ರದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರ ಅಡಿಯಲ್ಲಿ ಅನುಬಂಧ-1 ರಿಂದ 4 ನ್ನು ಜಾರಿ ಮಾಡಲಾಯಿತು. ಈ ದೋಷಾರೋಪಣೆ ಪಟ್ಟಿ ತಲುಪಿದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಸೂಚಿಸಲಾಗಿತ್ತು, ಜಾರಿ ಮಾಡಲಾದ ದೋಷಾರೋಪಣೆ ಪಟ್ಟಿಯನ್ನು ಓದಲಾದ ಕ್ರ.ಸಂ.(4)ರಲ್ಲಿ ನೌಕರರು ದಿನಾಂಕ:21.05.2003ರಲ್ಲಿ ಸ್ವೀಕರಿಸಿರುವ ಸ್ವೀಕೃತಿಯನ್ನು ಇಲಾಖೆಗೆ ಸಲ್ಲಿಸಿರುತ್ತಾರೆ. ಇಲಾಖಾ ಸೂಚನಾ ಪತ್ರವನ್ನು ಸ್ವೀಕರಿಸಿ ನಿಗದಿತ ಅವಧಿಯೊಳಗೆ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ಸದರಿ ಪ್ರಕರಣದಲ್ಲಿನ ಸತ್ಯಾಸತ್ಯತೆಯನ್ನು ತಿಳಿಯಲು ವಿಚಾರಣೆ ನಡೆಸಲು ನಿರ್ಧರಿಸಿ ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿಯನ್ನು ಓದಲಾದ ಕ್ರಮಸಂಖ್ಯೆ (5)ರಲ್ಲಿ ನೇಮಿಸಿ ಆದೇಶಿಸಿದೆ.

ಮುಂದುವರೆಸುತ್ತ ಶ್ರೀ ಎಂ.ವಿ. ಕಲ್ಲೂರುಮಠ, ಕೃಷಿ ಸಹಾಯಕ, ಇವರು ರೈತ ಸಂಪರ್ಕ ಕೇಂದ್ರ ಲಕ್ಕೂರು, ಸಹಾಯಕ ಕೃಷಿ ನಿರ್ದೇಶಕರ ಮಾಲೂರು ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿದ್ದಾಗ ದಿನಾಂಕ:13.11.2002 ರಿಂದ 26.11.2002 ಮತ್ತು 11.12.2002 ರಿಂದ 20.05.2003 ರವರೆಗೆ ಕರ್ತವ್ಯಕ್ಕೆ ಅನಧಿಕೃತ ಗೈರು ಹಾಜರಿಯಾದ ಬಗ್ಗೆ ಓದಲಾದ ಕ್ರ.ಸಂ. (6)ರ ಪತ್ರದಲ್ಲಿ ಸಹಾಯಕ ಕೃಷಿ ನಿರ್ದೇಶಕರು ಮಾಲೂರು ಇವರು ಶಿಸ್ತುಕ್ರಮ ಕೈಗೊಳ್ಳುವಂತೆ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಸದರಿ ಆರೋಪದ ಬಗ್ಗೆ ಓದಲಾದ ಕ್ರ.ಸಂ.(7) ರಲ್ಲಿ ಇಲಾಖಾ ಪತ್ರದಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರ ಅಡಿಯಲ್ಲಿ ಹೆಚ್ಚುವರಿ ದೋಷಾರೋಪಣ ಪಟ್ಟಿ ಅನುಬಂಧ-1 ರಿಂದ 4 ನ್ನು ಜಾರಿ ಮಾಡಲಾಯಿತು. ಈ ದೋಷಾರೋಪಣೆ ಪಟ್ಟಿ ತಲುಪಿದ 15 ದಿನಗಳೊಳಗಾಗಿ ಲಿಖಿತ ಹೇಳಿಕೆಯನ್ನು ಸಲ್ಲಿಸಲು ಸೂಚಿಸಲಾಗಿತ್ತು. ಜಾರಿ ಮಾಡಲಾದ ದೋಷಾರೋಪಣೆ ಪಟ್ಟಿಯನ್ನು

ಓದಲಾದ ಕ್ರ.ಸಂ. (8) ರಲ್ಲಿ ಸ್ವೀಕರಿಸಿ ನೌಕರರು ಯಾವುದೇ ಲಿಖಿತ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ. ಈ ಅವಧಿಯು ಸೇರಿದಂತೆ ಮೊದಲನೆಯ ಅವಧಿಯ ಬಗ್ಗೆಯು ವಿಚಾರಣೆ ನಡೆಸಿ ವರದಿ ಸಲ್ಲಿಸಲು ಓದಲಾದ ಕ್ರಮಸಂಖ್ಯೆ (9) ರಲ್ಲಿ ಇಲಾಖಾ ಪತ್ರದಲ್ಲಿ ಸೂಚಿಸಲಾಗಿತ್ತು. ಈ ಮಧ್ಯ ನೌಕರರು ಸಹಾಯಕ ಕೃಷಿ ನಿರ್ದೇಶಕರ ಕಛೇರಿ ಜಲಾನಯನ ಅಭಿವೃದ್ಧಿ ಇಲಾಖೆ ರಾಣೆಬೆನ್ನೂರು ಕಛೇರಿಗೆ ವರ್ಗಾವಣೆ ಹೊಂದಿರುತ್ತಾರೆ. ಸದರಿ ನೌಕರರು ಹಾವೇರಿ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವುದರಿಂದ ಅವರ ಮನವಿಯ ಮೇರೆಗೆ ಓದಲಾದ ಕ್ರಮಸಂಖ್ಯೆ (10)ರ ಇಲಾಖಾ ಆದೇಶದಲ್ಲಿ ಜಂಟಿ ಕೃಷಿ ನಿರ್ದೇಶಕರು ಹಾವೇರಿ ಇವರನ್ನು ವಿಚಾರಣಾಧಿಕಾರಿಯನ್ನಾಗಿ ನೇಮಿಸಿ ಆದೇಶಿಸಿದೆ. ವಿಚಾರಣಾಧಿಕಾರಿಗಳು ನಿಯಮಾನುಸಾರ ವಿಚಾರಣೆ ನಡೆಸಿ ಓದಲಾದ ಕ್ರಮ ಸಂಖ್ಯೆ (11)ರಲ್ಲಿ ವಿಚಾರಣಾ ವರದಿಯನ್ನು ಇಲಾಖೆಗೆ ಸಲ್ಲಿಸಿರುತ್ತಾರೆ. ವಿಚಾರಣಾ ವರದಿಯಲ್ಲಿ ಓದಲಾದ ಕ್ರಮಸಂಖ್ಯೆ (3) ಮತ್ತು (7) ರಲ್ಲಿ ಜಾರಿ ಮಾಡಿರುವ ದೋಷಾರೋಪಣಾ ಪಟ್ಟಿಯಲ್ಲಿರುವ ಆರೋಪಗಳನ್ನು ಒಳಗೊಂಡಿದೆ. ವಿಚಾರಣಾ ವರದಿಯಲ್ಲಿ ಆರೋಪವು ಸಾಕ್ಷಿ ಹಾಗೂ ದಾಖಲಾತಿಗಳ ಆಧಾರದ ಮೇರೆಗೆ ರುಜುವಾತು ಆಗಿರುತ್ತದೆ. ಓದಲಾದ ಕ್ರಮಸಂಖ್ಯೆ (12) ರಲ್ಲಿ 2ನೇ ಕಾರಣ ಕೇಳುವ ಸೂಚನಾ ಪತ್ರವನ್ನು ವಿಚಾರಣಾ ವರದಿಯೊಂದಿಗೆ ಆಪಾದಿತ ನೌಕರರಿಗೆ ಜಾರಿ ಮಾಡಲಾಯಿತು. ಸೂಚನಾ ಪತ್ರವನ್ನು ಸ್ವೀಕರಿಸಿರುವ ಬಗ್ಗೆ ಓದಲಾದ ಕ್ರಮ ಸಂಖ್ಯೆ (13)ರಲ್ಲಿ ಸಹಾಯಕ ಕೃಷಿ ನಿರ್ದೇಶಕರು ಜಲಾನಯನ ಅಭಿವೃದ್ಧಿ ಇಲಾಖೆ, ರಾಣೆಬೆನ್ನೂರು ಇವರು ದೃಢೀಕರಿಸಿರುತ್ತಾರೆ. ವಿಚಾರಣಾ ವರದಿಯನ್ನು ಪಡೆದು ನೌಕರರು ಯಾವುದೇ ಹೇಳಿಕೆ ಸಲ್ಲಿಸಿರುವುದಿಲ್ಲ. ವಿಚಾರಣಾ ವರದಿಯಲ್ಲಿ ಆರೋಪ ಸಾಭೀತಾಗಿರುವುದರಿಂದ ಇವರ ಆರೋಪ ಗಂಭೀರವಾಗಿ ಪರಿಗಣಿಸಿ ಓದಲಾದ ಕ್ರಮಸಂಖ್ಯೆ (11)ರ ವಿಚಾರಣಾ ವರದಿಯನ್ನು ಒಪ್ಪಿಕೊಂಡು ಸದರಿಯವರನ್ನು ಆರೋಪಿ ಎಂದು ಪರಿಗಣಿಸಿ ದಂಡನೆ ವಿಧಿಸಲು ನಿರ್ಧರಿಸಿ ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಕಛೇರಿ ಆದೇಶ ಸಂಖ್ಯೆ: ಸಿಬ್ಬಂದಿ-1/ವಿಚಾರಣೆ-6/11/2002-03, ದಿನಾಂಕ:24ನೇ ಅಕ್ಟೋಬರ್, 2009

ಈ ಕೆಳಗೆ ಸಹಿ ಮಾಡಿರುವ ಡಾ: ಬಾಬುರಾವ್ ಮುಡಬಿ, ಭಾ.ಆ.ಸೇ. ಕೃಷಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿ, ಬೆಂಗಳೂರು, ಆದ ನಾನು ಈ ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಪ್ರಕರಣವನ್ನು ಕೂಲಂಕುಷವಾಗಿ ಪರಿಶೀಲಿಸಿ ಶ್ರೀ ಎಂ.ವಿ. ಕಲ್ಲೂರುಮಠ, ಕೃಷಿ ಸಹಾಯಕ, ಹಿಂದಿನ ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಮಾಲೂರು ಹಾಲಿ ಸಹಾಯಕ ಕೃಷಿ ನಿರ್ದೇಶಕರ ಕಛೇರಿ, ಜಲಾನಯನ ಅಭಿವೃದ್ಧಿ ಇಲಾಖೆ, ರಾಣೆಬೆನ್ನೂರು ಇವರನ್ನು ಆರೋಪಿ ಎಂದು ಪರಿಗಣಿಸಿ ಇವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 8(vi)ರ ಪ್ರಕಾರ ತಕ್ಷಣದಿಂದ ಜಾರಿಗೆ ಬರುವಂತೆ ಸರ್ಕಾರದ ಸೇವೆಯಿಂದ "ಕಡ್ಡಾಯ ನಿವೃತ್ತಿ"ಗೊಳಿಸಿ ಆದೇಶಿಸಿರುತ್ತೇನೆ.

ಸದರಿಯವರ ಅನಧಿಕೃತ ಗೈರು ಹಾಜರಿ ಅವಧಿಯನ್ನು ಅನಧಿಕೃತ ಗೈರು ಹಾಜರಿ ಎಂದು ಪರಿಗಣಿಸಿ ಆದೇಶಿಸಿರುತ್ತೇನೆ.

ಡಾ: ಬಾಬುರಾವ್ ಮುಡಬಿ

ಪಿ.ಆರ್.1103 ಕೃಷಿ ಆಯುಕ್ತರು ಹಾಗೂ ಶಿಸ್ತು ಪ್ರಾಧಿಕಾರಿಗಳು.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಅಧಿಸೂಚನೆ

ಸಂಖ್ಯೆ: ಆಕುಕ 739 ಹೆಚ್‌ಎಸ್‌ಹೆಚ್ 2008 (ಭಾ), ಬೆಂಗಳೂರು, ದಿನಾಂಕ:27ನೇ ಅಕ್ಟೋಬರ್, 2009

ಕರ್ನಾಟಕ ಲೋಕಸೇವಾ ಆಯೋಗವು ದಿನಾಂಕ:27.11.2008 ರಂದು ಹೊರಡಿಸಿದ ಅಧಿಸೂಚನೆ ಸಂಖ್ಯೆ: ಪಿಎಸ್‌ಸಿ/72/ಆರ್‌ಟಿಬಿ/2007ರಲ್ಲಿ ಆಯ್ಕೆಯಾದ ಪದವೀಧರ ವೈದ್ಯರನ್ನು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಯಾಗಿ ರೂ.14050-350-14400-400-16800-450-19500-525-22650-600-25050 ಗಳ ವೇತನ ಶ್ರೇಣಿಯಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ: ಆಕುಕ 739 ಹೆಚ್‌ಎಸ್‌ಹೆಚ್ 2008 ದಿನಾಂಕ:09.01.2009 ರಂದು ಎರಡು ವರ್ಷಗಳ ಖಾಯಂ ಪೂರ್ವ ಸೇವಾವಧಿಯ ಮೇರೆಗೆ ಹಂಗಾಮಿಯಾಗಿ ನೇಮಿಸಲಾಗಿತ್ತು.

ಶ್ರೀ ಅಂಥೋಣಿರಾಜ್, ಬಾಂದು ಜವಾನರು ಇವರು ಈ ಹಿಂದೆ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಶಿವಮೊಗ್ಗ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ, ಕಾರ್ಯವ್ಯಾಪ್ತಿ ಮೀರಿ ಇತರೆ ವಿಷಯಗಳಲ್ಲಿ ತಲೆ ತೂರಿಸಿ, ಅನಾವಶ್ಯಕ ವಿವಾದಗಳನ್ನು ಸೃಷ್ಟಿಸಿ, ಕಛೇರಿಯ ಇತರೆ ನೌಕರರಿಗೆ ಬೆದರಿಕೆಯನ್ನು ಹಾಕಿ ಬಾಂದು ಜವಾನರಾಗಿ ಕರ್ತವ್ಯ ನಿರ್ವಹಿಸುವ ಬದಲು, ಸಾರ್ವಜನಿಕರ ಮಧ್ಯವರ್ತಿಯಾಗಿ ಕೆಲಸ ನಿರ್ವಹಿಸಿರುವುದು ದಾಖಲೆಗಳನ್ನು ಪರಿಶೀಲಿಸಿದಾಗ ಸ್ಪಷ್ಟವಾಗಿ ಕಂಡು ಬರುತ್ತದೆ.

ಮೇಲಿನ ಎಲ್ಲಾ ಅಂಶಗಳನ್ನು ಪರಿಗಣನೆಗೆ ತೆಗೆದುಕೊಂಡು, ನೌಕರರುಗಳು ತಪ್ಪು ಎಸಗಿರುವುದು ಮನದಟ್ಟಾಗಿರುವುದರಿಂದ ಈ ಕೆಳಕಂಡಂತೆ ದಂಡನೆಯನ್ನು ವಿಧಿಸಿ ಆದೇಶಿಸಿದ್ದೇನೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಆರೋಪಿತ ನೌಕರರುಗಳಾದ ಶ್ರೀ ಹೆಚ್.ಜಿ. ರಮೇಶ್, ದ್ವಿತೀಯ ದರ್ಜೆ ಭೂಮಾಪಕರು, ಶ್ರೀ ಎಂ. ಚೇತನ್, ದ್ವಿತೀಯ ದರ್ಜೆ ಭೂಮಾಪಕರು, ಶ್ರೀ ಕೆ.ಪಿ. ಸಿದ್ದರಾಜು, ದ್ವಿತೀಯ ದರ್ಜೆ ಭೂಮಾಪಕರು, ಶ್ರೀ ನಿಂಗಯ್ಯ, ದ್ವಿತೀಯ ದರ್ಜೆ ಭೂಮಾಪಕರು ಶ್ರೀ ಅಂಥೋಣಿರಾಜ್, ಬಾಂದು ಜವಾನರು ಇವರುಗಳ ಮೇಲೆ ಮಾಡಲಾಗಿರುವ ದೋಷಾರೋಪಣೆ ಬಗ್ಗೆ ದಿನಾಂಕ:09.01.2007 ರ ಎರಡನೇ ಕಾರಣ ಕೇಳಿ ನೋಟೀಸಿಗೆ ಉತ್ತರವಾಗಿ, ಸಲ್ಲಿಸಿರುವ ರಕ್ಷಣಾ ಹೇಳಿಕೆಯಲ್ಲಿನ ಅಂಶಗಳನ್ನು ಸಂಬಂಧಿಸಿದ ವಿಚಾರಣಾ ವರದಿ ಮತ್ತು ವಿಚಾರಣಾ ಕಡತದೊಂದಿಗೆ ಪರಿಶೀಲಿಸಿದೆ. ವಿಚಾರಣಾಧಿಕಾರಿಗಳು ಆರೋಪಿತ ನೌಕರರುಗಳ ವಿರುದ್ಧ ಮಾಡಲಾಗಿರುವ ಆರೋಪಗಳು ಭಾಗಶ: ಹಾಗೂ ಪೂರ್ಣ ಸಾಬೀತಾಗಿದೆಯೆಂದು ಅಭಿಪ್ರಾಯಪಟ್ಟಿರುವ ವಿಚಾರಣಾ ವರದಿಯನ್ನು ಒಪ್ಪಿಕೊಂಡು, ಆರೋಪಿತ ನೌಕರರುಗಳು ತಪ್ಪೆಸಗಿರುವುದು ಮನದಟ್ಟಾಗಿರುವುದರಿಂದ, ರಾಜೀವ್ ಚಾವ್ಲಾ, ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಆದ ನಾನು, ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 9(2)(ಸಿ) ಹಾಗೂ 9(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8 (ii) ಮತ್ತು 8(iv)ಎ ಮತ್ತು 8(viii) ರನ್ವಯ ಈ ಕೆಳಕಂಡಂತೆ ದಂಡನೆಯನ್ನು ವಿಧಿಸಿ ಆದೇಶಿಸಿದ್ದೇನೆ.

1) ಶ್ರೀ ಎಂ.ಚೇತನ, ದ್ವಿತೀಯ ದರ್ಜೆ ಭೂಮಾಪಕರು, ಹಾಲಿ ತಹಶೀಲ್ದಾರ್, ದೊಡ್ಡಬಳ್ಳಾಪುರ ಇವರಿಗೆ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8 (ii) ರನ್ವಯ 'ವಾಗ್ದಂಡನೆ' ಯನ್ನು ವಿಧಿಸಿದೆ.

2) (i) ಶ್ರೀ ಹೆಚ್.ಜಿ. ರಮೇಶ್, ದ್ವಿತೀಯ ದರ್ಜೆ ಭೂಮಾಪಕರು, ಹಾಲಿ ಚನ್ನರಾಯಪಟ್ಟಣ, ಶ್ರೀ ನಿಂಗಯ್ಯ, ದ್ವಿತೀಯ ದರ್ಜೆ ಭೂಮಾಪಕರು, ಹಾಲಿ ತಹಶೀಲ್ದಾರ್, ಹಾಸನ ಮತ್ತು ಶ್ರೀ ಅಂಥೋಣಿರಾಜ್, ಬಾಂದು ಜವಾನರು, ಉಪ ವಿಭಾಗಾಧಿಕಾರಿಗಳು, ತರೀಕೆರೆ, ಇವರುಗಳಿಗೆ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8(iv)ಎ ರನ್ವಯ ನೌಕರರುಗಳು ದ್ವಿತೀಯ ದರ್ಜೆ ಭೂಮಾಪಕರ ಹುದ್ದೆಯಲ್ಲಿ ಪಡೆಯುತ್ತಿರುವ, ಮೂಲ ವೇತನ ಶ್ರೇಣಿಯಾದ ರೂ. 6250-12000 ವೇತನ ಶ್ರೇಣಿಯ ಕನಿಷ್ಠ ವೇತನಕ್ಕೆ ಅಂದರೆ ರೂ.6250/- ಕ್ಕೆ ಇಳಿಸಿದೆ, ಹಾಗೂ ಶ್ರೀ ಅಂಥೋಣಿರಾಜ್, ಬಾಂದು ಜವಾನರು, ಇವರಿಗೆ ಇವರು ಪಡೆಯುತ್ತಿರುವ ಮೂಲ ವೇತನ ಶ್ರೇಣಿಯಾದ ರೂ.5500-9500 ರ ವೇತನ ಶ್ರೇಣಿಯ ಕನಿಷ್ಠ ವೇತನಕ್ಕೆ ಅಂದರ ರೂ.5500/-ಕ್ಕೆ ಇಳಿಸುವ ದಂಡನೆಯನ್ನು ವಿಧಿಸಿದೆ.

(ii) ಮುಂದೆ ಲಭ್ಯವಾಗುವ ವಾರ್ಷಿಕ ವೇತನ ಬಡ್ತಿಯನ್ನು ನಿಯಮಗಳನುಸಾರ ಕನಿಷ್ಠ ವೇತನ ಹಂತದಿಂದ ನೀಡುವುದು.

3) ಶ್ರೀ ಕೆ.ಪಿ. ಸಿದ್ದರಾಜು, ದ್ವಿತೀಯ ದರ್ಜೆ ಭೂಮಾಪಕರು, ಹಾಲಿ ತಹಶೀಲ್ದಾರ್, ಹರಿಹರ ಇವರು ಈ ಹಿಂದೆ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಶಿವಮೊಗ್ಗ ಕಛೇರಿ ಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ಅಕ್ರಮ ತಿದ್ದುಪಡಿ ಮಾಡಿ ಇತರೆ ಸಹ ಆಪಾದಿತ ನೌಕರರುಗಳ ಪ್ರಚೋದನೆ ಮೇರೆಗೆ, ಅಕ್ರಮ ತಿದ್ದುಪಡಿ ಮಾಡಿರುವುದಾಗಿ ತಿಳಿಸಿರುವುದು ಹಾಗೂ ಇವರು ಎಲ್.ಆರ್.ಪಕ್ಕಾ ಬುಕ್ಕಿನಲ್ಲಿ ಬೇಸ್ ಮಾಫಿಗೆ ಅನುಗುಣವಾಗಿ ಮೂಲ ಟಿಪ್ಪಣಿಯಲ್ಲಿನ ಬೇಸ್ ಮಾಫನ್ನು ತಿದ್ದಿ ಕೊಟ್ಟಿರುತ್ತೇನೆ ಎಂದು ನೌಕರರೇ ಒಪ್ಪಿಕೊಂಡಿರುತ್ತಾರೆ. ಭೂಮಾಪನ ಇಲಾಖೆಯಲ್ಲಿನ ದಾಖಲೆಗಳು ಮಹತ್ವಪೂರ್ಣವಾಗಿದ್ದು, ಇಂತಹ ಒಂದು ದಾಖಲೆಯನ್ನು ಮೇಲಾಧಿಕಾರಿಗಳ ಆದೇಶವಿಲ್ಲದೇ ಅಕ್ರಮ ತಿದ್ದಿರುವುದು ಮಹಾಪರಾಧವಾಗಿರುತ್ತದೆ ಮತ್ತು ವಿಚಾರಣೆಯಿಂದ ಸ್ಪಷ್ಟವಾಗಿ ಸಾಬೀತಾಗಿರುತ್ತದೆ. ಸದರಿ ಅಪಾದಿತರನ್ನು ಸೇವೆಯಲ್ಲಿ ಮುಂದುವರೆಸಿದ್ದೇ ಆದರೆ ಈ ರೀತಿ ದುರ್ನಡತೆ ಪುನರಾವರ್ತನೆಯಾಗಿ ಸಾರ್ವಜನಿಕ ವ್ಯಾಜ್ಯಗಳು ಹೆಚ್ಚಾಗಿ ಇಲಾಖೆಗೆ ಕೆಟ್ಟ ಹೆಸರು ಬರುವುದರಲ್ಲಿ ಸಂಶಯವಿಲ್ಲ. ಆದ್ದರಿಂದ ಆಪಾದಿತರ ವಿರುದ್ಧ ಗಂಭೀರ ಸ್ವರೂಪದ ಆರೋಪವಾದ ಕಾರಣ, ಕರ್ನಾಟಕ

ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8(viii) ರನ್ವಯ, ಶ್ರೀ ಕೆ.ಪಿ. ಸಿದ್ದರಾಜು, ದ್ವಿತೀಯ ದರ್ಜೆ ಭೂಮಾಪಕರು, ಹಾಲಿ ತಹಶೀಲ್ದಾರ್, ಹರಿಹರ ಇವರನ್ನು ಸೇವೆಯಿಂದ ವಜಾಗೊಳಿಸಿದೆ.

ಈ ಆದೇಶವು ತಕ್ಷಣದಿಂದ ಜಾರಿಗೆ ಬರುತ್ತದೆ.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಪಿ.ಆರ್.945

ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಇವರ ನಡೆವಳಿ

ವಿಷಯ: ಶ್ರೀ ಆರ್.ವೈ. ಪಾಟೀಲ, ದ್ವಿ.ದ.ಭೂಮಾಪಕರು, ಹಾಲಿ ತಹಶೀಲ್ದಾರ್, ಹಾವೇರಿ ಇವರ ಅನಧಿಕೃತ ಗೈರು ಹಾಜರಿ ಬಗ್ಗೆ ಶಿಸ್ತುಕ್ರಮ - ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಉಲ್ಲೇಖ:
1) ಜಿಲ್ಲಾಧಿಕಾರಿಗಳು, ಹಾವೇರಿ ಇವರ ನಡೆವಳಿ ಸಂಖ್ಯೆ: ಸಿಬ್ಬಂದಿ/ ಅಗೈಹಾ/67/05-06, ದಿನಾಂಕ:05.04.2006, 07.05.2007, 16.06.2007, 24.09.2007 ಮತ್ತು 18.02.2009.
2) ವಿಚಾರಣಾಧಿಕಾರಿಗಳು, ವಿಚಾರಣಾ ವರದಿ ಸಲ್ಲಿಸಿದ ಸಂಖ್ಯೆ: ಸಿಬ್ಬಂದಿ/ಇಚಾ (11)/ವಹಿ 11/06-07, ದಿನಾಂಕ:08.09.2008.
3) ಈ ಕಛೇರಿಯ ಎರಡನೇ ಕಾರಣ ಕೇಳಿ ನೋಟೀಸು ಸಂಖ್ಯೆ: ಸಿಬ್ಬಂದಿ/ಶಿಸ್ತು ಅಗೈಹಾ 1/06-07, ದಿನಾಂಕ:20.04.2009 (ವಿಚಾರಣಾ ವರದಿ ಪ್ರತಿಯೊಂದಿಗೆ)
4) ಸರ್ಕಾರದ ಸುತ್ತೋಲೆ ಸಂ:ಸಿಆಸುಇ 18 ಸೇಇವಿ 2001, ದಿನಾಂಕ:14.09.2001.

ಪ್ರಸ್ತಾವನೆ:

ಶ್ರೀ ಆರ್.ವೈ. ಪಾಟೀಲ, ದ್ವಿತೀಯ ದರ್ಜೆ ಭೂಮಾಪಕರು, ಹಾಲಿ ತಹಶೀಲ್ದಾರ್, ಹಾವೇರಿ ಕಛೇರಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಇವರು ಈ ಹಿಂದೆ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಹಾವೇರಿ ಕಛೇರಿ ವ್ಯಾಪ್ತಿಯ ತಾಲ್ಲೂಕು ಭೂಮಾಪನ ಕಛೇರಿ, ಹಿರೇಕೆರೂರು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಸಮಯದಲ್ಲಿ ದಿನಾಂಕ:05.04.2004 ರಿಂದ 29.4.2004 ರವರೆಗೆ ಅನಧಿಕೃತ ಗೈರು ಹಾಜರಾಗಿದ್ದು, ನಂತರ ಈ ಇಲಾಖೆಯು ಕಂದಾಯ ಇಲಾಖೆಯೊಂದಿಗೆ ಕಾರ್ಯವಿಲೀನಗೊಂಡ ನಂತರವು ಸಹ ದಿನಾಂಕ:01.04.2005 ರಿಂದ 30.06.2005 ರವರೆಗೆ ನಂತರ ದಿನಾಂಕ:05.09.2005 ರಿಂದ 22.04.2006 ರವರೆಗೆ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೇ, ಸಕ್ಷಮ ಪ್ರಾಧಿಕಾರಿಯಿಂದ ಪೂರ್ವಾನುಮತಿಯನ್ನು ಪಡೆಯದೇ, ಕರ್ತವ್ಯಕ್ಕೆ ಗೈರು ಹಾಜರಾಗಿರುತ್ತಾರೆ. ನೌಕರರು ಗೈರು ಹಾಜರಾಗಿದ್ದ ಕಾರಣ, ಜಿಲ್ಲಾಧಿಕಾರಿಗಳು, ಹಾವೇರಿ ಇವರು ದಿ:5.4.2006 ರಂದು ಅಮಾನತ್ತುಗೊಳಿಸಿ, ನಂತರ ಶಿಸ್ತುಕ್ರಮದ ಇತ್ಯರ್ಥವನ್ನು ಕಾಯ್ದಿರಿಸಿ, ತಹಶೀಲ್ದಾರ್, ಹಾವೇರಿ ಕಛೇರಿಗೆ ಪುನರ್ ನೇಮಕಗೊಳಿಸಿ, ಜಿಲ್ಲಾಧಿಕಾರಿಗಳು, ಹಾವೇರಿ ರವರು ದಿನಾಂಕ:07.05.2007 ರಲ್ಲಿ ಆದೇಶಿಸಿರುತ್ತಾರೆ. ಅದರಂತೆ ದಿ: 10.05.2007 ರ ಪೂರ್ವಾಹ್ನ ನೌಕರರು ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಈ ಬಗ್ಗೆ ಜಿಲ್ಲಾಧಿಕಾರಿಗಳು, ಹಾವೇರಿ ಇವರು ದಿ: 16.06.2007 ರ ನೋಟೀಸಿನೊಂದಿಗೆ ಆರೋಪ ಪಟ್ಟಿಯನ್ನು ಜಾರಿ ಮಾಡಿರುತ್ತಾರೆ. ನೌಕರರ ವಿರುದ್ಧ ಮಾಡಲಾದ ಆರೋಪಗಳನ್ನು ಈ ಕೆಳಕಂಡಂತೆ ಪುನರುಚ್ಚರಿಸಿದೆ. (ಸದರಿ ನೌಕರರನ್ನು ಇನ್ನು ಮುಂದೆ ಆಪಾದಿತ ನೌಕರರೆಂದು ಕರೆಯಲಾಗಿದೆ)

"ನೀವು ದಿನಾಂಕ:05.04.2004 ರಿಂದ 29.04.2004 ರವರೆಗೆ ಮತ್ತು ದಿನಾಂಕ:01.04.2005 ರಿಂದ 30.06.2005 ರವರೆಗೆ ಹಾಗೂ ದಿನಾಂಕ:05.09.2005 ರಿಂದ 22.04.2006 ರವರೆಗೆ ನಿಲಂಬನೆ ಆದೇಶ ಜಾರಿ ಆಗುವವರೆಗೆ ಅನಧಿಕೃತ ಗೈರು ಹಾಜರಿರುತ್ತೀರಿ.

ನೀವು ಗೈರು ಹಾಜರಿಯಿಂದ ಮರಳಿ ಸರ್ಕಾರಿ ಕೆಲಸಕ್ಕೆ ಹಾಜರಾಗುವಂತೆ ದಿನಾಂಕ:08.04.2004, 16.04.2004 ಮತ್ತು 05.06.2004 ರಂದು ಭೂದಾಖಲೆಗಳ ಸಹಾಯಕ ನಿರ್ದೇಶಕರು, ಹಾವೇರಿ ಇವರು ಜ್ಞಾಪನ ನೀಡಿದರೂ ನೀವು ಕರ್ತವ್ಯಕ್ಕೆ ಹಾಜರಾಗಿರುವುದಿಲ್ಲ ಮತ್ತು ತಾಲ್ಲೂಕು ಭೂಮಾಪನಾಧಿಕಾರಿಗಳು, ಹಿರೇಕೆರೂರು ಇವರು ದಿನಾಂಕ:20.04.2004 ರಂದು ಪುನಃ ಹಾಜರಾಗುವಂತೆ ಜ್ಞಾಪನ ನೀಡಿದಾಗ್ಯೂ ಕರ್ತವ್ಯಕ್ಕೆ ಹಾಜರಾಗದೇ ಗೈರು ಉಳಿದು ಸರ್ಕಾರಿ ಕೆಲಸಕ್ಕೆ ಹಾಗೂ ಸಾರ್ವಜನಿಕರ ಕೆಲಸಕ್ಕೆ ತೊಂದರೆ ಮಾಡಿ ಬೇಜವಾಬ್ದಾರಿತನದಿಂದ ಕರ್ತವ್ಯಲೋಪವೆಸಗಿ ಕರ್ನಾಟಕ ನಾಗರೀಕ ಸೇವಾ ನಿಯಮಗಳು 1957 ನಿಯಮ 3(1) ಮತ್ತು (2) ಉಲ್ಲಂಘನೆ ಮಾಡಿ ಅಪರಾಧವೆಸಗಿರುತ್ತೀರಿ.

ನೀವು ಭೂಮಾಪನ ಕಛೇರಿಯು ತಹಶೀಲ್ದಾರ್ ಕಛೇರಿಯಲ್ಲಿ ವಿಲೀನ ಆದ ನಂತರ ಜುಲೈ 2005 ಮತ್ತು ಆಗಸ್ಟ್ 2005 ನೇ ತಿಂಗಳುಗಳಲ್ಲಿ ಕರ್ತವ್ಯಕ್ಕೆ ಹಾಜರಾಗಿ ತದ ನಂತರ ಪುನಃ ದಿನಾಂಕ:05.09.2005 ರಿಂದ ನಿಲಂಬನೆ ಆದೇಶ ಜಾರಿ ಆಗುವವರೆಗೆ ಕರ್ತವ್ಯಕ್ಕೆ ಗೈರು ಹಾಜರು ಉಳಿದಿರುತ್ತೀರಿ."

ಆಪಾದಿತ ನೌಕರರು ದಿನಾಂಕ:20.06.2007 ರಂದು ಸ್ವೀಕರಿಸಿ. ದಿನಾಂಕ:14.08.2007 ರಂದು ಬರಹ ಹೇಳಿಕೆಯನ್ನು ಸಲ್ಲಿಸಿದ್ದು, ಸದರಿ ಬರಹ ಹೇಳಿಕೆಯಲ್ಲಿ ಅವರ ವಿರುದ್ಧ ಮಾಡಲಾದ ಆರೋಪವನ್ನು ನಿರಾಕರಿಸಿರುವ ಕಾರಣ, ಆರೋಪದಲ್ಲಿನ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ಸಲುವಾಗಿ ಉಪ ವಿಭಾಗಾಧಿಕಾರಿಗಳು, ಹಾವೇರಿ ಇವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು ಶಿರಸ್ತೆದಾರ ಸಿಬ್ಬಂದಿ ಶಾಖೆ, ಉಪ ವಿಭಾಗಾಧಿಕಾರಿಗಳ ಕಛೇರಿ, ಹಾವೇರಿ ಇವರನ್ನು ಮಂಡನಾಧಿಕಾರಿಯನ್ನಾಗಿ, ಜಿಲ್ಲಾಧಿಕಾರಿಗಳು, ಹಾವೇರಿ ಇವರು ದಿನಾಂಕ:24.09.2007 ರ ನಡವಳಿಯಲ್ಲಿ ನೇಮಕ ಮಾಡಿದಂತೆ, ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ, ವಿಚಾರಣಾ ವರದಿಯನ್ನು ವಿಚಾರಣಾ ದಾಖಲೆಗಳೊಂದಿಗೆ ಜಿಲ್ಲಾಧಿಕಾರಿಗಳು, ಹಾವೇರಿ ಇವರಿಗೆ ಉಲ್ಲೇಖ(2) ರ ಪ್ರಕಾರ ಸಲ್ಲಿಸಿರುತ್ತಾರೆ. ಸದರಿ ದಾಖಲೆಗಳನ್ನು ವಿಚಾರಣಾ ವರದಿಯೊಂದಿಗೆ ಮುಂದಿನ ಕ್ರಮಕ್ಕಾಗಿ ಈ ಕಛೇರಿಗೆ ದಿನಾಂಕ:18.02.2009 ರಂದು ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯನ್ನು ಪರಿಶೀಲಿಸಲಾಗಿ ಆಪಾದಿತ ನೌಕರರ ವಿರುದ್ಧ ಮಾಡಲಾದ ಆರೋಪವು ಸಾಬೀತಾಗಿರುವ ಕಾರಣ, ಉಲ್ಲೇಖ(3) ರನ್ವಯ, ಎರಡನೇ ಕಾರಣ ಕೇಳಿ ನೋಟೀಸನ್ನು ವಿಚಾರಣಾ ವರದಿಯೊಂದಿಗೆ ಜಾರಿ ಮಾಡಲಾಗಿದ್ದು, ಸದರಿ ನೋಟೀಸನ್ನು ದಿನಾಂಕ:02.05.2009 ರಂದು ಸ್ವೀಕರಿಸಿರುತ್ತಾರೆ. ಆದರೆ ಯಾವುದೇ ಹೇಳಿಕೆಯನ್ನು ಸಲ್ಲಿಸಿರುವುದಿಲ್ಲ.

ಆಪಾದಿತ ನೌಕರರು ಹಾಲಿ ತಹಶೀಲ್ದಾರ್, ಹಾವೇರಿ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಸದರಿ ಕಛೇರಿಯಲ್ಲಿಯೂ ಸಹ ಅವರ ಸೇವೆ ತೃಪ್ತಿಕರವಾಗಿರುವುದಿಲ್ಲವೆಂದು ಹಾಗೂ ದಿನಚರಿಗೆ ಹಚ್ಚಿದ 49 ಪ್ರಕರಣಗಳನ್ನು ಬಾಕಿ ಇಟ್ಟುಕೊಂಡಿರುವ ಬಗ್ಗೆ ನೌಕರರ ವಿರುದ್ಧ ಪುನಃ ಮತ್ತೊಂದು ಶಿಸ್ತು ಪ್ರಕರಣವನ್ನು ಪ್ರಾರಂಭಿಸಲಾಗಿರುತ್ತದೆ ಎಂದು ಜಿಲ್ಲಾಧಿಕಾರಿಗಳು, ಹಾವೇರಿ ಇವರು ತಿಳಿಸಿರುತ್ತಾರೆ. ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಸದರಿಯವರಿಗೆ ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ ಶ್ರದ್ಧೆ ಆಸಕ್ತಿ ಇಲ್ಲದಿರುವುದು ಕಂಡು ಬರುತ್ತಿದ್ದು, ಆಪಾದಿತ ನೌಕರರು ಗಂಭೀರವಾದ ಕರ್ತವ್ಯಲೋಪ ಮತ್ತು ದುರ್ನಡತೆ ಎಸಗಿರುತ್ತಾರೆ.

ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ 1958 ರ ನಿಯಮ 108 ರ ಪ್ರಕಾರ ಸರ್ಕಾರವು ಪ್ರಕರಣದ ವಿಶೇಷ ಸಂದರ್ಭಗಳಿಂದಾಗಿ ಅನ್ಯಥಾ ನಿರ್ಣಯಿಸದ ಹೊರತು 4 ತಿಂಗಳು ಹಾಗೂ ಹೆಚ್ಚಿನ ಅವಧಿಗೆ ರಜೆ ಪಡೆದುಕೊಳ್ಳದೇ ಕರ್ತವ್ಯಕ್ಕೆ ವಿಮುಖರಾಗಿ ಗೈರು ಹಾಜರಾಗುವ ನೌಕರರು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957ರ ನಿಯಮಾವಳಿಯಲ್ಲಿ ನಮೂದಿಸಲಾದ ಕಾರ್ಯವಿಧಾನವನ್ನನುಸರಿಸಿ, ಸೇವೆಯಿಂದ ವಜಾ ಮಾಡಬಹುದಾಗಿರುತ್ತದೆ ಅಥವಾ ಸೇವೆಯಿಂದ ತೆಗೆದು ಹಾಕಬಹುದಾಗಿರುತ್ತದೆ. ಆದ ಕಾರಣ, ಆಪಾದಿತ ನೌಕರರು 309 ದಿವಸ ಗೈರು ಹಾಜರಾಗಿರುವುದು ತೀವ್ರತರನಾದ ದುರ್ವರ್ತನೆ ಆಗಿರುವುದರಿಂದ ಹಾಗೂ ಅವರ ಸೇವೆಯು ತೃಪ್ತಿಕರವಾಗಿಲ್ಲದೇ ಸರ್ಕಾರಿ ಸೇವೆ ಮಾಡಲು ಅನರ್ಹರಾಗಿರುತ್ತಾರೆಂದು ಸ್ಪಷ್ಟವಾಗಿ ವರದಿ ಮಾಡಿರುವುದನ್ನು ಒಪ್ಪಿ, ಆಪಾದಿತ ನೌಕರರು ಅವರ ವಿರುದ್ಧ ಮಾಡಲಾದ ಆರೋಪವನ್ನು ಅಲ್ಲಗಳೆಯುವಂತಹ ಸಾಕ್ಷಿ ದಾಖಲೆಗಳನ್ನು ಹಾಜರುಪಡಿಸದೇ, ಇರುವುದರಿಂದ ಹಾಗೂ ಎರಡನೇ ಕಾರಣ ಕೇಳಿ ನೋಟೀಸನ್ನು ವಿಚಾರಣಾ ವರದಿಯೊಂದಿಗೆ ಜಾರಿ ಮಾಡಿರುವುದನ್ನು ಸ್ವೀಕರಿಸಿ, ಇದುವರೆವಿಗೂ ಯಾವುದೇ ಬರಹ ಹೇಳಿಕೆಯನ್ನು ಸಲ್ಲಿಸದೇ ಇರುವುದನ್ನು ಗಮನಿಸಿದಾಗ, ನೌಕರರಿಗೆ ಸರ್ಕಾರಿ ಕೆಲಸದಲ್ಲಿ ಯಾವುದೇ ಆಸಕ್ತಿ ಹಾಗೂ ಶ್ರದ್ಧೆ ಇಲ್ಲದಿರುವುದು ಕಂಡು ಬಂದಿದ್ದು ಹಾಗೂ ಅವರ ವಿರುದ್ಧ ಮಾಡಲಾದ ಆರೋಪವು ಸಾಬೀತಾಗಿರುವ ಹಿನ್ನೆಲೆಯಲ್ಲಿ ಆಪಾದಿತರಿಗೆ ಕಠಿಣ ದಂಡನೆ ವಿಧಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ ಸಂಖ್ಯೆ:ಸಿಬ್ಬಂದಿ/ಶಿಸ್ತು ಅಗೈಹಾ 1/06-07, ಬೆಂಗಳೂರು, ದಿನಾಂಕ:22ನೇ ಸೆಪ್ಟೆಂಬರ್, 2009

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ರಾಜೀವ್ ಚಾವ್ಲಾ, ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಆದ ನಾನು, ಈ ಪ್ರಕರಣದ ವಿಚಾರಣಾ ವರದಿ ಮತ್ತು ದಾಖಲೆಗಳನ್ನು ಹಾಗೂ ಜಿಲ್ಲಾಧಿಕಾರಿಗಳು, ಹಾವೇರಿ ಇವರ ವರದಿಯನ್ನು ಪರಿಶೀಲಿಸಲಾಗಿ, ಆಪಾದಿತ ನೌಕರರು ಹಾಲಿ ತಹಶೀಲ್ದಾರ್ ಕಛೇರಿ, ಹಾವೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅಲ್ಲಿಯೂ ಸಹ ಅವರ ಸೇವೆ ತೃಪ್ತಿಕರವಾಗಿರುವುದಿಲ್ಲ ಎಂಬ ಅಂಶವನ್ನು ಪರಿಗಣಿಸಿ, ಆರೋಪ ಸಾಬೀತಾಗಿರುವ ಕಾರಣ, ನೀಡಲಾದ ಎರಡನೇ ಕಾರಣ ಕೇಳಿ ನೋಟೀಸಿಗೆ ತನ್ನನ್ನು ಸಮರ್ಥಿಸಿಕೊಳ್ಳುವ ಯಾವುದೇ ದಾಖಲೆಯೊಂದಿಗೆ ಪ್ರತಿರಕ್ಷಣಾ ಹೇಳಿಕೆಯನ್ನು ನೀಡದಿರುವ ಹಾಗೂ ದೀರ್ಘಾವಧಿ ಅನಧಿಕೃತ ಗೈರು ಹಾಜರಿಯಾಗಿರುವ ಅಂಶವನ್ನು ಗಮನಿಸಿದಾಗ, ಸದರಿಯವರಿಗೆ ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ ಯಾವುದೇ ಶ್ರದ್ಧೆ ಆಸಕ್ತಿ ಇಲ್ಲದಿರುವುದು ಕಂಡು ಬಂದಿರುತ್ತದೆ. ಆದಕಾರಣ, ಶ್ರೀ ಆರ್.ವೈ. ಪಾಟೀಲ್, ದ್ವಿತೀಯ ದರ್ಜೆ ಭೂಮಾಪಕರು ಇವರನ್ನು ಸರ್ಕಾರಿ ಸೇವೆಯಲ್ಲಿ ಮುಂದುವರೆಸುವುದು ಸೂಕ್ತವಲ್ಲವೆಂದು ಅಭಿಪ್ರಾಯಪಟ್ಟು, ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 9(3) ರೊಂದಿಗೆ ಓದಿಕೊಂಡ ನಿಯಮ 8(viii) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಆರ್.ವೈ. ಪಾಟೀಲ್, ದ್ವಿತೀಯ ದರ್ಜೆ ಭೂಮಾಪಕರು, ಹಾಲಿ ತಹಶೀಲ್ದಾರ್ ಕಛೇರಿ, ಹಾವೇರಿ ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾ ಮಾಡಿ ಆದೇಶಿಸಿದ್ದೇನೆ.

ಪಿ.ಆರ್.963

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ
ಸಂಖ್ಯೆ: ಎಸ್‌ಡಿಕೆ/74/ಡಿಟಿಸಿಆರ್/2008-09 ದಿನಾಂಕ:25ನೇ ಸೆಪ್ಟೆಂಬರ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:
ಪೊಲೀಸ್ ಉಪ ನಿರೀಕ್ಷಕರು,
ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ,
ಪುತ್ತೂರು.

ಆರೋಪಿಗಳು:
ಮಹಮ್ಮದ್ ಹನೀಫ್(29 ವ),
ಬಿನ್:ಸಂಶುದ್ದೀನ್, ಪೆರಿಯಡ್ಕ ಮನೆ, ಕುಡಾಲ, ಮೆರ್ಕಳ ಗ್ರಾಮ ಮತ್ತು ಅಂಚೆ, ಪೆರ್ಮುದೆ, ಕಾಸರಗೋಡು, ಕೇರಳ ಮತ್ತು ಅಬ್ದುಲ್ ಲತೀಫ್.

ವಾಹನ ಮಾಲೀಕರು:
ಪತ್ತೆಯಾಗಿರುವುದಿಲ್ಲ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:31-08-2008 ರಂದು ರಾತ್ರಿ 9-45 ಗಂಟೆ ಸಮಯದಲ್ಲಿ ಫಿರ್ಯಾದುದಾರರಿಗೆ ದೂರವಾಣಿ ಕರೆ ಮುಖಾಂತರ ಪುತ್ತೂರು ತಾಲೂಕು ಆರ್ಯಾಪು ಗ್ರಾಮದ ಪಿಲಿಕುಂಡ ಎಂಬಲ್ಲಿ ಒಂದು ಕಾರು ರಸ್ತೆಯ ಬದಿಯ ಆಳಕ್ಕೆ ಮಗುಚಿ ಬಿದ್ದಿರುವುದಾಗಿ ತಿಳಿಸಿರುವ ಖಚಿತ ಮಾಹಿತಿಯ ಮೇರೆಗೆ, ಫಿರ್ಯಾದುದಾರರು ರಾತ್ರಿ 10-15 ಗಂಟೆ ಸಮಯಕ್ಕೆ ಸದರಿ ಸ್ಥಳಕ್ಕೆ ತಮ್ಮ ಸಿಬ್ಬಂದಿಯವರೊಂದಿಗೆ ಹೋಗಿ ಪರಿಶೀಲಿಸಿದಾಗ, ಕಾರು ರಸ್ತೆ ಬದಿಯ ಆಳಕ್ಕೆ ಮಗುಚಿ ಬಿದ್ದುಕೊಂಡಿದ್ದು ಅದನ್ನು ಪರಿಶೀಲಿಸಿದಾಗ, ಕಾರಿನ ಒಳಗಡೆ ಸಾರಾಯಿ ತುಂಬಿದ ಸ್ಯಾಚೆಟ್‌ಗಳಿದ್ದು ಹಾಗೂ ಕಾರಿನ ಒಳಗಡೆ ಒಬ್ಬ ವ್ಯಕ್ತಿ ಸಿಲುಕಿಕೊಂಡಿರುತ್ತಾನೆ. ಆತನನ್ನು ನಿಧಾನವಾಗಿ ಕಾರಿನ ಒಳಗಡೆಯಿಂದ ಹೊರಗೆ ತೆಗೆದು ಆತನನ್ನು ವಿಚಾರಿಸಿದಾಗ, ಆತನು ತನ್ನ ಹೆಸರು ಮಹಮ್ಮದ್ ಹನೀಫ್(29 ವ), ಬಿನ್:ಸಂಶುದ್ದೀನ್, ಪೆರಿಯಡ್ಕ ಮನೆ, ಕುಡಾಲ, ಮೆರ್ಕಳ ಗ್ರಾಮ ಮತ್ತು ಅಂಚೆ, ಪೆರ್ಮುದೆ, ಕಾಸರಗೋಡು, ಕೇರಳ ಎಂದು ಮತ್ತು ಕಾರಿನ ಚಾಲಕ ಅಬ್ದುಲ್ ಲತೀಫ್ ಎಂಬುವವನು ಕಾರು ಕೆಳಗೆ ಬಿದ್ದ ಕೂಡಲೇ ಆತನು ಕಾರಿನಿಂದ ಹೊರಗೆ ಬಂದು ಪರಾರಿಯಾಗಿರುತ್ತಾನೆ ಎಂದು ತಿಳಿಸಿದನು. ಕಾರಿನ ಒಳಗಡೆ ಇದ್ದ ಸಾರಾಯಿ ಸ್ಯಾಚೆಟ್‌ಗಳ ಬಗ್ಗೆ ವಿಚಾರಿಸಲಾಗಿ, ಕರ್ನಾಟಕದಿಂದ ಕೇರಳ ರಾಜ್ಯಕ್ಕೆ ಸಾಗಾಟ ಮಾಡಿರುವುದಾಗಿ ತಿಳಿಸಿದನು. ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಟ ಮಾಡಲು ದಾಖಲೆ ಪತ್ರ ಹಾಗೂ ಪರವಾನಿಗೆ ಇದೆಯೇ ಎಂದು ವಿಚಾರಿಸಲಾಗಿ, ತನ್ನ ಬಳಿ ಯಾವುದೂ ಇಲ್ಲವೆಂದು ತಿಳಿಸಿರುವ ಮೇರೆಗೆ ಪಂಚರನ್ನು ಸ್ಥಳಕ್ಕೆ ಬರಮಾಡಿಕೊಂಡು, ಪಂಚರ ಸಮಕ್ಷಮ ಮಾರುತಿ ಆಲ್ಟೋ ಕಾರಿನ ಒಳಗಡೆಯಿರುವ ಸಾರಾಯಿ ಸ್ಯಾಚೆಟ್‌ಗಳನ್ನು ತೆಗೆದು ಪರಿಶೀಲಿಸಿದಾಗ, ಅದರಲ್ಲಿ ಒಟ್ಟು 10 ಪಾಲಿಥಿನ್ ಚೀಲಗಳಲ್ಲಿ ತಲಾ 450 ರಂತೆ ಒಟ್ಟು 100 ಎಂ.ಎಲ್.ನ 4500 ಸಾರಾಯಿ ಸ್ಯಾಚೆಟ್‌ಗಳಿರುವುದು ಕಂಡು ಬಂತು. ಸಾರಾಯಿ ಸ್ಯಾಚೆಟ್‌ಗಳಿಂದ ರಾಸಾಯನಿಕ ಪರೀಕ್ಷೆಗಾಗಿ ಪ್ರತಿಯೊಂದು ಪಾಲಿಥಿನ್ ಚೀಲಗಳಿಂದ ತಲಾ 100 ಎಂ.ಎಲ್.ನ 5 ರಂತೆ ಸಾರಾಯಿ ಸ್ಯಾಚೆಟ್‌ಗಳನ್ನು ಪ್ರತ್ಯೇಕಿಸಿ, ಅದಕ್ಕೆ ಬಿಳಿ ಬಟ್ಟೆಯಿಂದ ಸುತ್ತಿ ಅರಗು ಸೀಲ್ ಮಾಡಿ ಎಸ್.ಹೆಚ್.ಓ. ಮೊಹರು ಹಾಕಿ, ಪಂಚರು ಹಾಗೂ ತನಿಖಾಧಿಕಾರಿಯವರ ಸಹಿಯಿರುವ ಚೀಟಿಯನ್ನು ಮಾದರಿಯಾಗಿ ತೆಗೆದಿರುವ ಸಾರಾಯಿ ಸ್ಯಾಚೆಟ್‌ಗಳಿಗೂ ಹಾಗೂ ಸೊತ್ತುಗಳಿಗೆ ಅಂಟಿಸಲಾಯಿತು.

ಸಾಗಾಟಕ್ಕೆ ಬಳಸಿದ ಮಾರುತಿ ಕಂಪೆನಿಯ ಆಲ್ಟೋ ಕಾರನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಅದರ ನಂಬರು ಪ್ಲೇಟ್ ಕಾರು ಅಪಘಾತಕ್ಕೆ ಒಳಗೊಂಡಿರುವುದರಿಂದ ಪಕ್ಕದಲ್ಲಿ ತುಂಡಾಗಿ ಬಿದ್ದುಕೊಂಡಿದ್ದು, ಅದರ ನಂಬರು ಕೆಎ-19-ಪಿ-5239 ಎಂದು ಬರೆದಿರುವುದು ಕಂಡು ಬಂತು ಮತ್ತು ಇದರ ಪಕ್ಕದಲ್ಲಿ ಮತ್ತೊಂದು ನಂಬರು ಕೆಎಲ್-14-ಜಿ-2359 ಎಂದು ಅಳವಡಿಸಿರುವುದು ಕಂಡು ಬಂತು. ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಆರೋಪಿಗಳು ನಕಲಿ ಸಾರಾಯಿ ಸ್ಯಾಚೆಟ್‌ಗಳನ್ನು ತಯಾರಿಸಿ ಅಕ್ರಮವಾಗಿ ಕೇರಳ ರಾಜ್ಯಕ್ಕೆ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 32,34 ಮತ್ತು 43ಎ ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಸದರಿ ಸೊತ್ತುಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಆರೋಪಿಗಳ ವಿರುದ್ಧ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರು ತಕ್ಷೀರು ಸಂ:87/2008 ದಿ:01-09-2008 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಸದರಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಹಾಗೂ ದಾಖಲಾತಿಗಳನ್ನು ಮುಂದಿನ ತನಿಖೆಯ ಬಗ್ಗೆ ಈ ಪ್ರಾಧಿಕಾರದ ಆದೇಶ ಸಂಖ್ಯೆ ದಿ:30-9-2008 ರ ಅನುಸಾರ, ಸದರಿ ತಕ್ಷೀರಿನಲ್ಲಿ ವಶಪಡಿಸಿಕೊಂಡಿರುವ ಸೊತ್ತುಗಳನ್ನು ದಿ:7-11-2008 ರಂದು ಅಬಕಾರಿ ನಿರೀಕ್ಷಕರು,ಪುತ್ತೂರು ವಲಯ, ಪುತ್ತೂರು ಇವರಿಗೆ ಹಸ್ತಾಂತರಿಸಿರುತ್ತಾರೆ.

ಮುಟ್ಟುಗೋಲು ಕ್ರಮದ ಬಗ್ಗೆ ತನಿಖೆಯನ್ನು ಮುಂದುವರಿಸಿದ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ,ಪುತ್ತೂರು ಇವರ ವರದಿ ಸಂಖ್ಯೆ:ಆರ್‌ಸಿಆರ್/31/2008-09 ದಿ:4-3-2009 ರ ತನಿಖಾ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳ ಸ್ಯಾಂಪಲ್‌ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪೊಲೀಸ್ ಉಪ ನಿರೀಕ್ಷಕರು ಇವರ ಮುಖಾಂತರ ಕಳುಹಿಸಲಾಗಿದ್ದು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ವರದಿ ಸಂಖ್ಯೆ:ಇ-463-10 ದಿ:15-10-2008 ರ ವರದಿಯಲ್ಲಿ, ಸಾರಾಯಿಯ ಮದ್ಯಸಾರ ಪ್ರಮಾಣ ಶೇ.28.5 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುವ ಮೇರೆಗೆ ಈ ಪ್ರಾಧಿಕಾರದ ಆದೇಶ ಸಂ: ಎಸ್‌ಡಿಕೆ/74/ಡಿಟಿಸಿಆರ್/2008-09 ದಿ:11-6-2009 ರ ಆದೇಶದಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರ ಸಮಕ್ಷಮ ನಾಶಪಡಿಸಲು ಆದೇಶ ನೀಡಲಾಗಿರುತ್ತದೆ.

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ತನಿಖಾ ವರದಿ ಸಂಖ್ಯೆ: ಆರ್‌ಸಿಆರ್/31/2008-09 ದಿ:15-6-2009 ರ ತನಿಖಾ ವರದಿಯಲ್ಲಿ, ವಶಪಡಿಸಿಕೊಂಡ ಆಲ್ಟೋ ಕಾರಿನ ನಕಲಿ ನೋಂದಣಿ ಸಂಖ್ಯೆ: ಕೆಎ-19-ಪಿ-5239 ರ ಮಾಲೀಕತ್ವದ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಇವರಲ್ಲಿ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಪಡೆಯಲು ಸಂಪರ್ಕಿಸಿ, ಅವರು ದಿ: 16-1-2009 ರಂದು ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಸಲ್ಲಿಸಿರುತ್ತಾರೆ. ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ಸದರಿ ನಂಬರಿನಲ್ಲಿ ನೋಂದಾಯಿಸಲಾಗಿರುವ ವಾಹನವು ಟಾಟಾ ಇಂಡಿಕಾ ಡಿಎಲ್‌ಜಿ-ವಿ2 ಆಗಿದ್ದು, ಇದರ ನೋಂದಣಿ ಸಂಖ್ಯೆ: ಕೆಎ-19-ಪಿ-5239 ಆಗಿರುತ್ತದೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನ ಮಾರುತಿ ಕಂಪೆನಿಯ ತಯಾರಿಕಾ ಆಲ್ಟೋ ಕಾರಿನ ಚಾಸೀಸ್ ನಂಬರಿಗೂ ಹಾಗೂ ಇಂಜಿನ್ ನಂಬರಿಗೂ ಸಾರಿಗೆ ಅಧಿಕಾರಿಯವರು ಸಲ್ಲಿಸಿದ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯಲ್ಲಿ ನಮೂದಿಸಿದ ಚಾಸೀಸ್ ನಂಬರು ಹಾಗೂ ಇಂಜಿನ್ ನಂಬರು ಒಂದಕ್ಕೊಂದು ತಾಳೆಯಾಗಿರುವುದಿಲ್ಲ ಮತ್ತು ಸದರಿ ವಾಹನದಲ್ಲಿರುವ ಇನ್ನೊಂದು ನಂಬರು ಪ್ಲೇಟ್‌ನ ನೋಂದಣಿ ಸಂಖ್ಯೆ: ಕೆಎಲ್-14-ಜಿ-2359 ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಕಾಸರಗೋಡು ಜಿಲ್ಲೆ, ಕೇರಳ ಇವರನ್ನು ದಿ: 13-1-2009 ಮತ್ತು ದಿ:11-2-2009 ರಂದು ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ತರಿಸಲು ಪತ್ರ ಬರೆಯಲಾಗಿದ್ದು, ಇದುವರೆಗೂ ಅವರಿಂದ ಯಾವುದೇ ವರದಿ ಸ್ವೀಕೃತವಾಗಿರುವುದಿಲ್ಲ. ಸದರಿ ತಕ್ಷೀರಿನಲ್ಲಿ ಅಕ್ರಮ ಸಾರಾಯಿ ಸಾಗಾಟಕ್ಕೆ ಬಳಸಿದ ಆಲ್ಟೋ ಕಾರನ್ನು ಆರೋಪಿಗಳು ಹಾಗೂ ವಾಹನದ ಮಾಲೀಕರು ನಕಲಿ ನಂಬರನ್ನು ಅಳವಡಿಸಿ, ಕರ್ನಾಟಕ ರಾಜ್ಯದಿಂದ ಕೇರಳ ರಾಜ್ಯಕ್ಕೆ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ ಹಾಗೂ ತಕ್ಷೀರು ದಾಖಲಿಸಿ ಒಂದು ವರ್ಷ ಒಂದು ತಿಂಗಳು ಕಳೆದರೂ ವಾಹನದ ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ಮತ್ತು ದಸ್ತಗಿರಿಯಾದ ಆರೋಪಿ ಮತ್ತು ಪರಾರಿಯಾದ ಆರೋಪಿ ಇವರುಗಳು ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಹಾಗೂ ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ಕಚೇರಿಯಲ್ಲಿ ಯಾರೂ ಕೂಡಾ ವಾಹನದ ಮಾಲಿಕತ್ವದ ಬಗ್ಗೆ ಸೂಕ್ತ ದಾಖಲಾತಿಗಳೊಂದಿಗೆ ವಾಹನದ ಬಿಡುಗಡೆಗಾಗಿ ಇದುವರೆಗೂ ಅರ್ಜಿ ಸಲ್ಲಿಸಿರುವುದಿಲ್ಲ. ಈ ವಾಹನವನ್ನು ಅಕ್ರಮ ಸಾರಾಯಿ ಸಾಗಾಟಕ್ಕೆ ಆರೋಪಿಗಳು ಉಪಯೋಗಿಸಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವ ಕಾರಣ, ಸದ್ರಿ ಆಲ್ಟೋ ಕಾರನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿ ಮಾಡಲು ಶಿಫಾರಸ್ಸು ಮಾಡಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ:31-8-2008 ರಂದು ಮಾರುತಿ ಕಂಪೆನಿಯ ಆಲ್ಟೋ ಕಾರಿನ ನಕಲಿ ನೋಂದಣಿ ಸಂಖ್ಯೆ: ಕೆಎ-19-ಪಿ-5239 ಮತ್ತು ಕೆಎಲ್-14-ಜಿ-2359 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) **ಎರಡನೇ ವಿವಾದಾಂಶ:** ಸದರಿ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳು ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೋ ಅಥವಾ ಇಲ್ಲವೆ

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ.ಶಿವ ಪ್ರಸಾದ್, ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರು ದಿ:15-9-09 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ಸಪ್ಟೆಂಬರ್-2005 ರಿಂದ ಇಲ್ಲಿಯವರೆಗೆ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಕರಣಕ್ಕೆ ಸಂಬಂಧಿಸಿದ ಸೊತ್ತುಗಳನ್ನು ಹಾಗೂ ದಾಖಲಾತಿಗಳನ್ನು ಫಿರ್ಯಾದಾದಾರರು ಇವರ ವಶಕ್ಕೆ ಹಸ್ತಾಂತರಿಸಲಾಗಿದ್ದು, ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ ಇವರು ಸಲ್ಲಿಸಿದ ರಾಸಾಯನಿಕ ಕೆಮಿಕಲ್ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ತನಿಖಾ ವರದಿಯನ್ನು ಸಲ್ಲಿಸಿರುತ್ತೇನೆ. ಸದರಿ ರಾಸಾಯನಿಕ ವರದಿಯನ್ನು ನಿಶಾನೆ ಪಿ-1 ಎಂದು ಗುರುತಿಸಲಾಯಿತು. ತನಿಖಾ ವರದಿಯನ್ನು ನಿಶಾನೆ ಪಿ-2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-2ಎ ಎಂದು ಗುರುತಿಸಲಾಯಿತು. ತಕ್ಷೀರಿಗೆ ಸಂಬಂಧಿಸಿದ ನಕಲಿ ಪ್ಲೇಟ್‌ನ ನೋಂದಣಿ ಸಂಖ್ಯೆ: ಕೆಎ-19-ಪಿ-5239 ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಗಳಿಂದ ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆ. ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ಸದರಿ ವಾಹನವು ಟಾಟಾ ಇಂಡಿಕಾ ಕಾರು ಆಗಿದ್ದು, ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನದ ಚಾಸೀಸ್ ನಂಬರಿಗೂ, ಇಂಜಿನ್ ನಂಬರಿಗೂ ಒಂದಕ್ಕೊಂದು ತಾಳೆಯಾಗಿರುವುದಿಲ್ಲ. ಸದರಿ ಬಿ ವರದಿಯನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು. ಇನ್ನೊಂದು ನಂಬರು ಪ್ಲೇಟ್‌ನ ಸಂಖ್ಯೆ: ಕೆಎಲ್-14-ಜಿ-2359 ರ ಬಿ ವರದಿಯನ್ನು ಪಡೆಯಲು ಸಂಬಂಧಪಟ್ಟ ಪ್ರಾದೇಶಿಕ ಸಾರಿಗೆ ಅಧಿಕಾರಿಯವರನ್ನು ಸಂಪರ್ಕಿಸಿ, ಇದುವರೆಗೂ ಯಾವುದೇ ಬಿ ಎಕ್ಸ್‌ಟ್ರ್ಯಾಕ್ಟ್ ವರದಿ ಸ್ವೀಕೃತವಾಗಿರುವುದಿಲ್ಲ. ಆದುದರಿಂದ ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಲ್ಟೊ ಕಾರನ್ನು ವಶಪಡಿಸಿಕೊಂಡು ಈಗಾಗಲೇ ಒಂದು ವರ್ಷ ಕಳೆದಿದ್ದು ವಾಹನದ ಮಾಲೀಕರಾಗಲಿ, ಆರೋಪಿಯಾಗಲಿ ಅಥವಾ ಅವರ ಪರ ವಕೀಲರಾಗಲಿ, ಪೊಲೀಸ್ ಇಲಾಖೆ ಹಾಗೂ ತಮ್ಮ ಕಚೇರಿಯಲ್ಲಿ ಯಾರೂ ಕೂಡಾ ವಾಹನದ ಬಿಡುಗಡೆಗಾಗಿ ಇದುವರೆಗೂ ಅರ್ಜಿ ಸಲ್ಲಿಸಿರುವುದಿಲ್ಲ. ಸದರಿ ಆಲ್ಟೊ ಕಾರಿನಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಹೊಂದಿ ಕೇರಳ ರಾಜ್ಯಕ್ಕೆ ಸಾಗಾಟ ಮಾಡಿರುವುದರಿಂದ, ಸದರಿ ಆಲ್ಟೊ ಕಾರನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ದಿ:15-6-2009 ರಂದು ಈ ಪ್ರಾಧಿಕಾರಕ್ಕೆ ತನಿಖಾ ವರದಿಯನ್ನು ಸಲ್ಲಿಸಿರುತ್ತೇನೆ. ತನಿಖಾ ವರದಿಯನ್ನು ನಿಶಾನೆ ಪಿ-4 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-4ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:31-8-2008 ರಂದು ಜಪ್ತುಪಡಿಸಿಕೊಂಡಿರುವ ಮಾರುತಿ ಕಂಪೆನಿಯ ಆಲ್ಟೊ ಕಾರಿನ ನಕಲಿ ನೋಂದಣಿ ಸಂಖ್ಯೆ: ಕೆಎ-19-ಪಿ-5239 ಮತ್ತು ಕೆಎಲ್-14-ಜಿ-2359 ರಲ್ಲಿ ನಕಲಿ ನಂಬರು ಅಳವಡಿಸಿ ಅಕ್ರಮವಾಗಿ 100 ಎಂ.ಎಲ್.ನ 4500 ಸಾರಾಯಿ ಸ್ಯಾಚೆಟ್‌ಗಳನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಆಧಾರಿತ ನೈಜ ದಾಖಲೆಗಳೊಂದಿಗೆ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣಕ್ಕೆ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಂಡು ಇದನ್ನು ನಕರಾತ್ಮಕವಾಗಿ ಪರಿಗಣಿಸಿದೆ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ 100 ಎಂ.ಎಲ್.ನ 4500 ಸಾರಾಯಿ ತುಂಬಿದ ಸ್ಯಾಚೆಟ್‌ಗಳು ಒಟ್ಟು 450 ಲೀಟರ್ ಸಾರಾಯಿಯನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಸಾರಾಯಿ ಎಂದು ದೃಢಪಟ್ಟಿದ್ದು, ಪ್ರಾದೇಶಿಕ ಸಾರಿಗೆ ಅಧಿಕಾರಿಗಳು ನೀಡಿರುವ "ಬಿ" ಎಕ್ಸ್‌ಟ್ರ್ಯಾಕ್ಟ್ ವರದಿ ಪ್ರಕಾರ ಆರೋಪಿಗಳು ನಕಲಿ ನೋಂದಣಿ ನಂಬರು ಬಳಸಿ ವಾಹನವನ್ನು ಬಳಸಿರುವುದು ಸಾಬೀತಾಗಿರುವುದರಿಂದ, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 32 ಮತ್ತು 38ಎ ರ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ ಕಂಪೆನಿಯ ಆಲ್ಟೊ ಕಾರಿನ ನಕಲಿ ನೋಂದಣಿ ಸಂಖ್ಯೆ:ಕೆಎ-19-ಪಿ-5239 ಮತ್ತು ಕೆಎಲ್-14-ಜಿ-2359 ನ್ನು ವಶಪಡಿಸಿಕೊಂಡು ಸುಮಾರು ಒಂದು ವರ್ಷ ಒಂದು ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ ಮತ್ತು ತನಿಖಾಧಿಕಾರಿಯವರ ಕಚೇರಿ, ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರಾಗಲಿ ಹಾಗೂ ದಸ್ತಗಿರಿಯಾದ ಆರೋಪಿ ಮತ್ತು ಪರಾರಿಯಾದ ಆರೋಪಿಯು ಕೂಡಾ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ತನಿಖಾಧಿಕಾರಿಯವರು ಸಲ್ಲಿಸಿದ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮಾರುತಿ ಕಂಪೆನಿಯ ಆಲ್ಟೊ ಕಾರಿನ ನಕಲಿ ನೋಂದಣಿ ಸಂಖ್ಯೆ: ಕೆಎ-19-ಪಿ-5239 ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯಲ್ಲಿ, ಸದರಿ ವಾಹನವು ಟಾಟಾ ಇಂಡಿಕಾ ಡಿಎಲ್‌ಜಿ-ವಿ2 ಆಗಿದ್ದು, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಲ್ಟೊ ಕಾರಿನ ಚಾಸೀಸ್ ನಂಬರಿಗೂ ಹಾಗೂ ಇಂಜಿನ್ ನಂಬರಿಗೂ ಸಾರಿಗೆ ಅಧಿಕಾರಿಯವರು ಸಲ್ಲಿಸಿದ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯಲ್ಲಿ ನಮೂದಿಸಿದ ಟಾಟಾ ಇಂಡಿಕಾ ಕಾರಿನ ಚಾಸೀಸ್ ನಂಬರು ಹಾಗೂ ಇಂಜಿನ್ ನಂಬರು ಒಂದಕ್ಕೊಂದು ತಾಳೆಯಾಗಿರುವುದಿಲ್ಲ ಮತ್ತು ಸದರಿ ವಾಹನದಲ್ಲಿರುವ ಇನ್ನೊಂದು ನಂಬರು ಪ್ಲೇಟ್ ನೋಂದಣಿ ಸಂಖ್ಯೆ: ಕೆಎಲ್-14-ಜಿ-2359 ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು,ಕಾಸರಗೋಡು ಜಿಲ್ಲೆ,ಕೇರಳ ಇವರನ್ನು ದಿ:13-1-2009 ಮತ್ತು ದಿ:11-2-2009 ರಂದು ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ತರಿಸಲು ಪತ್ರ ಬರೆಯಲಾಗಿದ್ದು, ಇದುವರೆಗೂ ಅವರಿಂದ ಯಾವುದೇ ವರದಿ ಸ್ವೀಕೃತವಾಗಿರುವುದಿಲ್ಲ ಎಂದು ವರದಿ ಸಲ್ಲಿಸಿರುತ್ತಾರೆ. ಆದುದರಿಂದ ತನಿಖಾಧಿಕಾರಿಯವರ ತನಿಖಾ ವರದಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ವಾಹನದ ಮಾಲೀಕರು ಹಾಗೂ ಆರೋಪಿಗಳು ಆಲ್ಟೊ ಕಾರಿಗೆ ನಕಲಿ ನಂಬರನ್ನು ಅಳವಡಿಸಿ ಸಾರಾಯಿ ಸ್ಯಾಚೆಟ್‌ಗಳನ್ನು ಕರ್ನಾಟಕ ರಾಜ್ಯದಿಂದ ಕೇರಳಕ್ಕೆ ಯಾವುದೇ ರಹದಾರಿ ಪತ್ರವಿಲ್ಲದೆ ಅಕ್ರಮವಾಗಿ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ. ಆದುದರಿಂದ ಅಕ್ರಮ ಸಾರಾಯಿ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಲ್ಟೊ ಕಾರನ್ನು ಈಗಾಗಲೇ ಒಂದು ವರ್ಷ ಒಂದು ತಿಂಗಳು ಕಳೆದರೂ ಅದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಅಕ್ರಮ ಸಾರಾಯಿ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಮಾರುತಿ ಕಂಪೆನಿಯ ಆಲ್ಟೊ ಕಾರಿನ ನಕಲಿ ನೋಂದಣಿ ಸಂಖ್ಯೆ:ಕೆಎ-19-ಪಿ-5239 ಮತ್ತು ಕೆಎಲ್-14-ಜಿ-2359 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/74/ಡಿಟಿಸಿಆರ್/2008-09 ದಿನಾಂಕ:25ನೇ ಸೆಪ್ಟೆಂಬರ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ಉಪ ನಿರೀಕ್ಷಕರು, ಪುತ್ತೂರು ಗ್ರಾಮಾಂತರ ಪೊಲೀಸ್ ಠಾಣೆ, ಪುತ್ತೂರು ಇವರ ತಕ್ಷೀರು ಸಂ:87/2008 ದಿ:1-9-2008 ರಲ್ಲಿ ಜಪ್ತುಪಡಿಸಿರುವ ಮಾರುತಿ ಕಂಪೆನಿಯ ಆಲ್ಟೊ ಕಾರಿನ ನಕಲಿ ನೋಂದಣಿ ಸಂಖ್ಯೆ: ಕೆಎ-19-ಪಿ-5239 ಮತ್ತು ಕೆಎಲ್-14-ಜಿ-2359 ನ್ನು (ಚಾಸೀಸ್ ನಂಬರು ಎಂಎ3ಇವೈಡಿ818010369502/ಜೆ7 ಮತ್ತು ಇಂಜಿನ್ ನಂಬರು 78ಡಿಎಸ್ 3453187) ನಿಯಮ 43(ಸಿ) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿ:25-09-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1: ಶ್ರೀ.ಶಿವ ಪ್ರಸಾದ್, ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಕೆಮಿಕಲ್ ವರದಿ.

ನಿಶಾನೆ ಪಿ-2 : ತನಿಖಾ ವರದಿ.

ನಿಶಾನೆ ಪಿ-2A : ತನಿಖಾ ವರದಿಯಲ್ಲಿರುವ ತನಿಖಾಧಿಕಾರಿಯವರ ಸಹಿ.

ನಿಶಾನೆ ಪಿ-3 : ಬಿ ಅಬ್‌ಸ್ಟ್ರ್ಯಾಕ್ಟ್ ವರದಿ

ನಿಶಾನೆ ಪಿ-4 : ಮುಟ್ಟುಗೋಲು ಹಾಕಿಕೊಳ್ಳಲು ತನಿಖಾ ವರದಿ

ನಿಶಾನೆ ಪಿ-4ಎ : ತನಿಖಾ ವರದಿಯಲ್ಲಿರುವ ತನಿಖಾಧಿಕಾರಿಯವರ ಸಹಿ.

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.1026

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ
ಸಂಖ್ಯೆ: ಎಸ್‌ಡಿಕೆ/352/ಡಿಟಿಸಿಆರ್/2008-09, ದಿನಾಂಕ:21ನೇ ಆಗಸ್ಟ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿರ್ಯಾದುದಾರರು:
ಅಬಕಾರಿ ನಿರೀಕ್ಷಕರು,
ಸುಳ್ಯ ವಲಯ, ಸುಳ್ಯ.

ಆರೋಪಿಗಳು:
ಪರಾರಿಯಾಗಿರುತ್ತಾರೆ.

ವಾಹನ ಮಾಲೀಕರು:
ಎನ್.ಎ.ಪ್ರಕಾಶ್, ಬಿನ್:ಎನ್.ಎಲ್.ಆನಂದ, ನಿಡಿಂಜೆ ಮನೆ,
ಬಳೆಂಬಿ ಅಂಚೆ, ಚೆಂಬು ಗ್ರಾಮ, ಮಡಿಕೇರಿ ತಾಲೂಕು,
ಕೊಡಗು ಜಿಲ್ಲೆ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:18-4-2009 ರಂದು ರಾತ್ರಿ 10-45 ಗಂಟೆ ಸಮಯದಲ್ಲಿ ಅಬಕಾರಿ ನಿರೀಕ್ಷಕರು ಮತ್ತು ಸಿಬ್ಬಂದಿಯವರು ಸುಳ್ಯ ತಾಲೂಕು ತೋಡಿಕಾನ ಗ್ರಾಮದ ಅರಂತೋಡಿನಿಂದ ತೋಡಿಕಾನ ರಸ್ತೆಯ ಅಡ್ಯನಡ್ಕ ಎಂಬಲ್ಲಿ ರಸ್ತೆಗಾವಲು ನಡೆಸುತ್ತಿದ್ದ ಸಂದರ್ಭದಲ್ಲಿ ಒಂದು ಬಜಾಜ್ ಎಂ-80 ಅತೀ ವೇಗವಾಗಿ ಹೋಗುತ್ತಿರುವುದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ, ಆತನು ನಿಲ್ಲಿಸದೆ ಮುಂದಕ್ಕೆ ಚಲಾಯಿಸಿಕೊಂಡು ಹೋದನು. ಸಂಶಯದ ಮೇರೆಗೆ ಸದರಿ ವಾಹನವನ್ನು ಬೆನ್ನಟ್ಟಿದಾಗ, ಸದರಿ ವಾಹನದಲ್ಲಿ ಇಬ್ಬರು ವ್ಯಕ್ತಿಗಳಿದ್ದು, ಅವರಲ್ಲಿ ಒಂದು ರಟ್ಟಿನ ಪೆಟ್ಟಿಗೆ ಇರುವುದು ಕಂಡು ಬಂತು. ಸದರಿ ವಾಹನವು ತೋಡಿಕಾನ ರಸ್ತೆಯ ಅಡ್ಯನಡ್ಕ ಎಂಬಲ್ಲಿ ಸದರಿ ವ್ಯಕ್ತಿಗಳು ವಾಹನ ಮತ್ತು ರಟ್ಟಿನ ಪೆಟ್ಟಿಗೆಯನ್ನು

ರಸ್ತೆಯ ಬದಿಯಲ್ಲಿ ಬಿಟ್ಟು ಓಡಿ ಹೋಗಿ ತಲೆಮರೆಸಿಕೊಂಡಿರುತ್ತಾರೆ. ಆ ಸಮಯ ರಾತ್ರಿಯಾಗಿರುವುದರಿಂದ, ಸದರಿ ವ್ಯಕ್ತಿಗಳನ್ನು ಗುರುತು ಹಿಡಿಯಲು ಸಾಧ್ಯವಾಗಿರುವುದಿಲ್ಲ. ರಟ್ಟಿನ ಪೆಟ್ಟಿಗೆಯನ್ನು ಪರಿಶೀಲಿಸಿದಾಗ, ಒರಿಜಿನಲ್ ಚಾಯ್ಸ್ ಎಂಬ ವಿಸ್ಕಿಯ 180 ಎಂ.ಎಲ್.ನ 27 ಸೀಸೆಗಳಿರುವುದು ಕಂಡು ಬಂತು. ಸದರಿ ವಾಹನದ ಶೋಧನಾ ಕಾರ್ಯ ನಡೆಸಲು ಮಾನ್ಯ ನ್ಯಾಯಾಲಯದಿಂದ ಸರ್ಮೋಚಿತ ಆಧಾರ ಪಡೆಯಲು ಕಾಲಾವಕಾಶವಿಲ್ಲದ ಪ್ರಯುಕ್ತ ಸರ್ಚ್ ಮೆಮೊವನ್ನು ಸ್ಥಳದಲ್ಲಿಯೇ ತಯಾರಿಸಲಾಯಿತು. ಯಾರೂ ಸಾಕ್ಷಿದಾರರು ಸಿಗದ ಪ್ರಯುಕ್ತ ಇಲಾಖಾ ಸಿಬ್ಬಂದಿಯವರನ್ನೇ ಸಾಕ್ಷಿಯನ್ನಾಗಿರಿಸಿಕೊಂಡು ವಾಹನವನ್ನು ಪೂರ್ಣ ತಪಾಸಣೆ ನಡೆಸಿದಾಗ, ವಾಹನದ ನೋಂದಣಿ ಸಂಖ್ಯೆ: ಕೆಎ-12-ಇ-5915, ಇದು ಬಜಾಜ್ ಎಂ-80 ಆಗಿದ್ದು, ಮದ್ಯವನ್ನು ಸಾಗಾಟ ಮಾಡಲು ಯಾವುದೇ ದಾಖಲೆ ಪತ್ರಗಳು ದೊರೆತ್ತಿಲ್ಲದ ಕಾರಣ, ಇದು ಅಕ್ರಮ ಮದ್ಯವೆಂದು ಪರಿಗಣಿಸಿ ದೊರೆತ ಮದ್ಯದಿಂದ 180 ಎಂ.ಎಲ್.ನ ಒಂದು ಬಾಟ್ಲಿಯನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಅದಕ್ಕೆ ಬಟ್ಟೆದಾರ ಕಟ್ಟಿ, ಇಲಾಖಾ ಸೀಲ್‌ನಿಂದ ಸೀಲ್ ಮಾಡಿ ಮಾದರಿ ಮೊಹರನ್ನು ಸ್ಥಳದಲ್ಲಿಯೇ ತಯಾರಿಸಲಾಯಿತು. ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 13, 14 ರ ಪ್ರಕಾರ ಅಪರಾಧವಾಗಿದ್ದು, ಕಲಂ 32,34, 38(ಎ) ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದರಿ ಸೊತ್ತುಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಓಡಿ ಹೋದ ಆರೋಪಿಗಳ ವಿರುದ್ಧ ತಕ್ಷೀರು ಸಂ:1/2009-10 ದಿ:18-4-2009 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಸುಳ್ಯ ವಲಯ, ಸುಳ್ಯ ಇವರ ತನಿಖಾ ವರದಿ ಸಂಖ್ಯೆ: ಸಿಆರ್‌ಎಂ/2/2009-10 ದಿ:24-6-2009 ರ ವರದಿಯಲ್ಲಿ,ವಶಪಡಿಸಿಕೊಂಡ ಬಜಾಜ್ ಎಂ-80 ಸಂಖ್ಯೆ: ಕೆಎ-12-ಇ-5915 ರ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪ್ರಾದೇಶಿಕ ಅಧಿಕಾರಿ, ಮಡಿಕೇರಿ, ಕೊಡಗು ಇವರಿಂದ ಪಡೆದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ಸದರಿ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯಲ್ಲಿ ವಾಹನದ ನೋಂದಣಿ ಮಾಲೀಕ ಎಸ್.ಎ.ಪ್ರಕಾಶ್, ಬಿನ್:ಎಸ್.ಎಲ್.ಆನಂದ, ನಿಡಿಂಜೆ ಮನೆ, ಬಳೆಂಬಿ ಅಂಚೆ, ಚೆಂಬು ಗ್ರಾಮ, ಮಡಿಕೇರಿ ತಾಲೂಕು, ಕೊಡಗು ಜಿಲ್ಲೆ ಆಗಿದ್ದು, ಇದರ ಚಾಸೀಸ್ ನಂ: 16ಸಿಬಿಡಿಎಂ 82210 ಮತ್ತು ಇಂಜಿನ್ ನಂ:16ಇಬಿಡಿಎಂ 87071 ಆಗಿದ್ದು, ಇದು ಬಜಾಜ್ ಎಂ-80 ವಾಹನ ಆಗಿರುತ್ತದೆಂದು ದೃಢೀಕರಣ ಪತ್ರ ನೀಡಿರುತ್ತಾರೆ. ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯಂತೆ ವಾಹನದ ನೋಂದಣಿ ಮಾಲೀಕರಾದ ಶ್ರೀ.ಎಸ್.ಎ. ಪ್ರಕಾಶ್ ಇವರಿಗೆ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43 ಬಿ ಪ್ರಕಾರ ಕಾರಣ ಕೇಳಿ ನೋಟೀಸನ್ನು ದಿ: 27-6-09 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ವಾಹನ ಮಾಲೀಕರು ನೀಡಿರುವ ಕಾರಣ ಕೇಳಿ ನೋಟಿಸಿಗೆ ಉತ್ತರವನ್ನು ಸಲ್ಲಿಸುತ್ತಾ, ತನ್ನ ವಾಹನವನ್ನು ತಾನು ಶ್ರೀ.ಎ.ನಾಗೇಶ್ ಟೈಲರ್, ಬಿನ್: ಮೋನಪ್ಪ ಗೌಡ, ಅಬೀರ ಮನೆ, ಬೈಲೆಗೂನಡ್ಕ ಅಂಚೆ, ಸಂಪಾಜೆ ಗ್ರಾಮ, ಸುಳ್ಯ ಇವರಿಗೆ ಹಸ್ತಾಂತರಿಸಿರುತ್ತೇನೆ ಎಂದು ತಿಳಿಸಿದ್ದು, ಯಾವುದೇ ಅಧಿಕೃತ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ.

ಅಬಕಾರಿ ನಿರೀಕ್ಷಕರು,ಸುಳ್ಯ ವಲಯ,ಸುಳ್ಯ ಇವರ ವರದಿ ಸಂ:ಸಿಆರ್‌ಎಂ/2/2009-10 ದಿ:1-8-2009 ರ ತನಿಖಾ ವರದಿಯಲ್ಲಿ, ವಾಹನದ ಈಗಿನ ಮೌಲ್ಯ ರೂ.2,000/- ಗಳಾಗಬಹುದೆಂದು ಮೋಟಾರು ವಾಹನ ನಿರೀಕ್ಷಕರು, ಮಂಗಳೂರು ಇವರಿಂದ ಮೌಲ್ಯಮಾಪನ ಪತ್ರ ಹಾಗೂ ತಕ್ಷೀರಿನಲ್ಲಿ ತೆಗೆದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗೆ ತನ್ನ ಅಬಕಾರಿ ರಕ್ಷಕರ ಮೂಲಕ ಕಳುಹಿಸಲಾಗಿದ್ದು, ಅವರ ಪತ್ರ ಸಂಖ್ಯೆ:ಇ-208-1 ದಿ:10-6-2009 ರ ವರದಿಯಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.42.5 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ ಹಾಗೂ ವಾಹನದ ಬಿಡುಗಡೆಗಾಗಿ ಓಡಿ ಹೋದ ಆರೋಪಿಗಳು ಹಾಗೂ ವಾಹನದ ಮಾಲೀಕರು ಅಧಿಕೃತ ದಾಖಲಾತಿಗಳೊಂದಿಗೆ ತನಿಖಾಧಿಕಾರಿಯವರ ಸುಳ್ಯ ವಲಯ ಕಚೇರಿಯಲ್ಲಿ ಹಾಜರಾಗಿ ಅಥವಾ ಈ ಪ್ರಾಧಿಕಾರದಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) **ಮೊದಲನೇ ವಿವಾದಾಂಶ:** ದಿ:18-4-2009 ರಂದು ಬಜಾಜ್ ಎಂ-80 ಮೋಟಾರು ಸಂಖ್ಯೆ: ಕೆಎ-12-ಇ-5915 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) **ಎರಡನೇ ವಿವಾದಾಂಶ:** ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) **ಮೂರನೇ ವಿವಾದಾಂಶ:** ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾದ ಶ್ರೀ.ಎಸ್.ತಮ್ಮ, ಅಬಕಾರಿ ನಿರೀಕ್ಷಕರು, ಮಂಗಳೂರು ಉಪ ವಿಭಾಗ-1, ಮಂಗಳೂರು ಇವರು ದಿ:12-8-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ಮಾರ್ಚ್-2009 ರಿಂದ ಜೂನ್-2009 ರ ತನಕ ಪ್ರಭಾರದಲ್ಲಿ ಸುಳ್ಯ ವಲಯ ಅಬಕಾರಿ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ದಿನಾಂಕ:18-4-2009 ರಂದು 10-45 ಗಂಟೆ ಸಮಯದಲ್ಲಿ ತನ್ನ ಸಿಬ್ಬಂದಿಯವರೊಂದಿಗೆ ಸುಳ್ಯ ತಾಲೂಕು ತೋಡಿಕಾನ ಗ್ರಾಮದ ಅರಂತೋಡ್‌ನಲ್ಲಿ ರಸ್ತೆಗಾವಲು ನಡೆಸುತ್ತಿದ್ದ ಸಂದರ್ಭದಲ್ಲಿ ಒಂದು ಬಜಾಜ್ ಎಂ-80 ಅತೀ ವೇಗವಾಗಿ ಹೋಗುತ್ತಿರುವುದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ, ಆತನು ನಿಲ್ಲಿಸದೆ ಮುಂದಕ್ಕೆ ಚಲಾಯಿಸಿಕೊಂಡು ಹೋದನು. ಸಂಶಯದ ಮೇರೆಗೆ ಸದರಿ ವಾಹನವನ್ನು ಬೆನ್ನಟ್ಟಿದಾಗ, ಸದರಿ ವಾಹನದಲ್ಲಿ ಇಬ್ಬರು ವ್ಯಕ್ತಿಗಳಿದ್ದು, ಅವರಲ್ಲಿ ಒಂದು ರಟ್ಟಿನ ಪೆಟ್ಟಿಗಳಿರುವುದು ಕಂಡು ಬಂತು. ಸದರಿ ವಾಹನವು ತೋಡಿಕಾನ ರಸ್ತೆಯ ಅಡ್ಯನಡ್ಕ ಎಂಬಲ್ಲಿ ಸದರಿ ವ್ಯಕ್ತಿಗಳು ವಾಹನ ಮತ್ತು ರಟ್ಟಿನ ಪೆಟ್ಟಿಗೆಯನ್ನು ರಸ್ತೆಯ ಬದಿಯಲ್ಲಿ ಬಿಟ್ಟು ಓಡಿ ಹೋಗಿ ತಲೆಮರೆಸಿಕೊಂಡಿರುತ್ತಾರೆ. ಆ ಸಮಯ ರಾತ್ರಿಯಾಗಿರುವುದರಿಂದ, ಸದರಿ ವ್ಯಕ್ತಿಗಳನ್ನು ಗುರುತು ಹಿಡಿಯಲು ಸಾಧ್ಯವಾಗಿರುವುದಿಲ್ಲ. ರಟ್ಟಿನ ಪೆಟ್ಟಿಗೆಯನ್ನು ಪರಿಶೀಲಿಸಿದಾಗ, ಒರಿಜಿನಲ್ ಚಾಯ್ಸ್ ಎಂಬ ವಿಸ್ಕಿಯ 180 ಎಂ.ಎಲ್.ನ 27 ಸೀಸೆಗಳಿರುವುದು ಕಂಡು ಬಂತು. ಸದರಿ ವಾಹನದ ಶೋಧನಾ ಕಾರ್ಯ ನಡೆಸಲು ಮಾನ್ಯ ನ್ಯಾಯಾಲಯದಿಂದ ಸಮೋಚಿತ ಆಧಾರ ಪಡೆಯಲು ಕಾಲಾವಕಾಶಯಿಲ್ಲದ ಪ್ರಯುಕ್ತ ಸರ್ಚ್ ಮೆಮೋವನ್ನು ಸ್ಥಳದಲ್ಲಿಯೇ ತಯಾರಿಸಲಾಯಿತು. ಯಾರೂ ಸಾಕ್ಷಿದಾರರು ಸಿಗದ ಪ್ರಯುಕ್ತ ಇಲಾಖಾ ಸಿಬ್ಬಂದಿಯವರನ್ನೇ ಸಾಕ್ಷಿಯನ್ನಾಗಿರಿಸಿಕೊಂಡು ವಾಹನವನ್ನು ಪೂರ್ಣ ತಪಾಸಣೆ ನಡೆಸಿದಾಗ, ವಾಹನದ ನೋಂದಣಿ ಸಂಖ್ಯೆ: ಕೆಎ-12-ಇ-5915, ಇದು ಬಜಾಜ್ ಎಂ-80 ಆಗಿದ್ದು, ಮದ್ಯವನ್ನು ಸಾಗಾಟ ಮಾಡಲು ಯಾವುದೇ ದಾಖಲೆ ಪತ್ರಗಳು ದೊರೆತ್ತಿಲ್ಲದ ಕಾರಣ, ಇದು ಅಕ್ರಮ ಮದ್ಯವೆಂದು ಪರಿಗಣಿಸಿ ದೊರೆತ ಮದ್ಯದಿಂದ 180 ಎಂ.ಎಲ್.ನ ಒಂದು ಬಾಟ್ಲಿಯನ್ನು ರಾಸಾಯನಿಕ ಪರೀಕ್ಷೆಗಾಗಿ ತೆಗೆದು ಅದಕ್ಕೆ ಬಟ್ಟೆದಾರ ಕಟ್ಟಿ, ಇಲಾಖಾ ಸೀಲ್‌ನಿಂದ ಸೀಲ್ ಮಾಡಿ ಮಾದರಿ ಮೊಹರನ್ನು ಸ್ಥಳದಲ್ಲಿಯೇ ತಯಾರಿಸಲಾಯಿತು. ಮಹಜರನ್ನು ಸ್ಥಳದಲ್ಲಿಯೇ ಬರೆದು ಅದನ್ನು ನಿಶಾನೆ ಪಿ-1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು ಗುರುತಿಸಲಾಯಿತು. ನಂತರ ಕಚೇರಿಗೆ ಬಂದು ಪ್ರಥಮ ಮಾಹಿತಿ ವರದಿಯನ್ನು ತಯಾರಿಸಲಾಯಿತು. ಅದನ್ನು ನಿಶಾನೆ ಪಿ-2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-2ಎ ಎಂದು ಗುರುತಿಸಲಾಯಿತು. ನಂತರ ತನಿಖೆಯನ್ನು ಮುಂದುವರಿಸಿ ಮದ್ಯದಿಂದ ತೆಗೆದ ಮಾದರಿಗಳನ್ನು ತನ್ನ ಅಬಕಾರಿ ರಕ್ಷಕರಾದ ಶ್ರೀ.ವಿಜಯ ಕುಮಾರ್ ಇವರ ಮುಖಾಂತರ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಲಾಗಿದ್ದು, ಅವರಿಂದ ದಿ:10-6-2009 ರಂದು ಪಡೆದಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು. ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಡಿಕೇರಿ, ಕೊಡಗು ಜಿಲ್ಲೆ ಇವರಿಂದ ಪಡೆದಿದ್ದು, ಸದರಿ ವರದಿಯನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ನಂತರ ಪ್ರಕರಣದ ತನಿಖೆಯ ಬಗ್ಗೆ ಶ್ರೀಮತಿ.ಗೀತಾ, ಅಬಕಾರಿ ಉಪ ನಿರೀಕ್ಷಕರು, ಸುಳ್ಯ ವಲಯ ಇವರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:18-4-2009 ರಂದು ಜಪ್ತುಪಡಿಸಿಕೊಂಡಿರುವ ಬಜಾಜ್ ಎಂ-80 ಮೋಟಾರು ಸೈಕಲ್ ಸಂಖ್ಯೆ: ಕೆಎ-12-ಇ-5915 ರಲ್ಲಿ ಅಕ್ರಮವಾಗಿ 4-860 ಲೀಟರ್ ಮದ್ಯವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣಕ್ಕೆ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯತೆವಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ

ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಅಬಕಾರಿ ನಿರೀಕ್ಷಕರು, ಸುಳ್ಯ ವಲಯ, ಸುಳ್ಯ ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡುವಾಗ ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯವೆಂದು ದೃಢಪಟ್ಟಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಎಂ-80 ಮೋಟಾರು ಸೈಕಲ್ ಸಂಖ್ಯೆ: ಕೆಎ-12-ಇ-5915ನ್ನು ವಶಪಡಿಸಿಕೊಂಡು ಸುಮಾರು 5 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ಸುಳ್ಯ ವಲಯ ಕಚೇರಿಯಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರು ಹಾಗೂ ಆರೋಪಿಗಳು ಕೂಡಾ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ಈ ಪ್ರಾಧಿಕಾರದಿಂದ ವಾಹನದ ನೋಂದಣಿ ಮಾಲೀಕರಿಗೆ ನೀಡಿದ ಕಾರಣ ಕೇಳಿ ನೋಟೀಸಿಗೆ ಅನುಗುಣವಾಗಿ ತನ್ನ ವಾಹನವನ್ನು ಶ್ರೀ.ಎ.ನಾಗೇಶ್ ಟೈಲರ್, ಬಿನ್: ಮೋನಪ್ಪ ಗೌಡ, ಅಬೀರ ಮನೆ, ಬೈಲೆಗೂನಡ್ಕ ಅಂಚೆ, ಸಂಪಾಜೆ ಗ್ರಾಮ, ಸುಳ್ಯ ದಿ:1-6-2000 ರಂದು ಹಸ್ತಾಂತರಿಸಿರುತ್ತೇನೆ ಎಂದು ತಿಳಿಸಿರುತ್ತಾರೆ. ಆದರೆ ಅಧಿಕೃತ ದಾಖಲಾತಿಗಳು ಹಾಜರುಪಡಿಸಿರುವುದಿಲ್ಲ. ಆದುದರಿಂದ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ ಹಾಗೂ ದಸ್ತಗಿರಿಯಾದ ಆರೋಪಿಗಳು ಪರಾರಿಯಾಗಿದ್ದು, ಇದುವರೆಗೂ ಪತ್ತೆಯಾಗದ ಕಾರಣ ವಾಹನದಲ್ಲಿ ಮದ್ಯ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾವು ಈಗಾಗಲೇ 5 ತಿಂಗಳು ಕಳೆದರೂ ಅದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಸರಕಾರದ ಆರ್ಥಿಕ ಹಿತದೃಷ್ಟಿಯಿಂದ ಅಕ್ರಮ ಮದ್ಯ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಬಜಾಜ್ ಎಂ-80 ಮೋಟಾರು ಸೈಕಲ್ ಸಂಖ್ಯೆ: ಕೆಎ-12-ಇ-5915 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/352/ಡಿಟಿಸಿಆರ್/2008-09, ದಿನಾಂಕ:21ನೇ ಆಗಸ್ಟ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ನಿರೀಕ್ಷಕರು, ಸುಳ್ಯ ವಲಯ, ಸುಳ್ಯ ಇವರ ತಕ್ಷೀರು ಸಂ: 1/2009-10 ದಿ:18-4-2009 ರಲ್ಲಿ ಜಪ್ತುಪಡಿಸಿಕೊಂಡಿರುವ 4-860 ಲೀಟರ್ ಮದ್ಯದಲ್ಲಿ ರಾಸಾಯನಿಕ ವಿಶ್ಲೇಷಣೆಗೆ ತೆಗೆದ ಮದ್ಯವನ್ನು ಹೊರತುಪಡಿಸಿ, ಉಳಿದ 4-680 ಲೀಟರ್ ಮದ್ಯವನ್ನು ಹಾಗೂ ಅಕ್ರಮ ಸಾಗಾಟಕ್ಕೆ ಬಳಸಿದ ಬಜಾಜ್ ಎಂ-80 ಮೋಟಾರು ಸೈಕಲ್ ಸಂಖ್ಯೆ: ಕೆಎ-12-ಇ-5915 ನ್ನು ನಿಯಮ 43(ಸಿ) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಎಎಸ್/2007 ದಿ:13-7-2007 ರಂತೆ ಮಾರಾಟ ಮಾಡಲು ನಿಷೇಧಿಸಿದ್ದು, ಮುಟ್ಟುಗೋಲು ಹಾಕಿಕೊಳ್ಳಲಾದ ಸೊತ್ತುಗಳನ್ನು ಸದ್ರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರ ಅನ್ವಯ ಅಬಕಾರಿ ನಿರೀಕ್ಷಕರು, ಸುಳ್ಯ ವಲಯ, ಸುಳ್ಯ ಇವರ ಸಮಕ್ಷಮ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ: ಇಸಿಸಿ/73/ಸಿಆರ್‌ಎಂ/2004 ದಿ:12-9-2005 ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ, ಮದ್ಯವನ್ನು ಬಾಟ್ಲಿಗಳ ಸಮೇತ ನಾಶಪಡಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:21-08-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.
ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1: ಶ್ರೀ.ಎಸ್.ತಮ್ಮ, ಅಬಕಾರಿ ನಿರೀಕ್ಷಕರು, ಮಂಗಳೂರು ಉಪ ವಿಭಾಗ-1, ಮಂಗಳೂರು.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಮಹಜರು.
ನಿಶಾನೆ ಪಿ-1ಎ : ಮಹಜರಿನಲ್ಲಿ ಫಿರ್ಯಾದುದಾರರ ಸಹಿ
ನಿಶಾನೆ ಪಿ-2 : ಪ್ರಥಮ ಮಾಹಿತಿ ವರದಿ
ನಿಶಾನೆ ಪಿ-2ಎ : ಪ್ರಥಮ ಮಾಹಿತಿ ವರದಿಯಲ್ಲಿ ಫಿರ್ಯಾದುದಾರರ ಸಹಿ
ನಿಶಾನೆ ಪಿ-3 : ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ-4 : ಬಿ ಅಬ್‌ಸ್ಟ್ರ್ಯಾಕ್ಟ್ ವರದಿ.

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಪಿ.ಆರ್.904 ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ
ಸಂಖ್ಯೆ: ಎಸ್‌ಡಿಕೆ/182/ಡಿಟಿಸಿಆರ್/2008-09 ದಿನಾಂಕ:20ನೇ ಆಗಸ್ಟ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿರ್ಯಾದುದಾರರು:
ಪೊಲೀಸ್ ಉಪ ನಿರೀಕ್ಷಕರು,
ಉಪ್ಪಿನಂಗಡಿ ಪೊಲೀಸ್ ಠಾಣೆ, ಉಪ್ಪಿನಂಗಡಿ.

ಆರೋಪಿಗಳು:
1 ನವಾಜ್ ಪಿರಾನ್, ಬಿನ್: ಗೌಸ್ ಪಿರ್(58 ವ), ವಾಸ:4443 1 ನೇ ಹಂತ, ಎರಡನೇ ಮುಖ್ಯ ರಸ್ತೆ, ಬಿ.ಬಿ.ಎಂ.ಲೇಔಟ್, ಬೆಂಗಳೂರು-29.
2 ಅಜೇಯ್.ವಿ.ಎ, ಬಿನ್:ಅಶೋಕನ್(30 ವ), ವಾಸ:ಪೆರಿಗಾಂನ್ ತಾಲ್ಲೂಕು, ತ್ರಿಶೂರು, ಕೊಡಗಲೂರು ತಾಲ್ಲೂಕು, ಕೇರಳ
3 ಗಿರೀಶ್.ಟಿ.ಸಿ, ಬಿನ್:ಚಂದ್ರನ್.ಟಿ.ವಿ(32 ವ), ತೋಡಪುರ ತಾಲ್ಲೂಕು, ಶಾರಿಗೋಡು ವಿಲೇಜ್, ಇಡಕ್ಕಿ ಜಿಲ್ಲೆ, ಕೇರಳ.
4 ಜಾವೇದ್ ಖಾನ್, ಬಿನ್:ಶರೀಫ್ ಖಾನ್, ಚಾಮಂಡ ವಿಲೇಜ್, ಕಸರವಾಡ್ ತಾಲ್ಲೂಕು, ಮಧ್ಯಪ್ರದೇಶ.
5 ತಬರೇಶ್ ಯಾನೆ ತಬ್ಬು, ಬಿನ್:ಬಬ್ಬು ಖಾನ್, ಚಾಮಂಡ ವಿಲೇಜ್, ಕಸರವಾಡ್ ತಾಲ್ಲೂಕು, ಮಧ್ಯಪ್ರದೇಶ.

ವಾಹನ ಮಾಲೀಕರು:
ಪತ್ತೆಯಾಗಿರುವುದಿಲ್ಲ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:2-12-2008 ರಂದು ಅಬಕಾರಿ ಜಾರಿ ಮತ್ತು ಲಾಟರಿ ನಿಷೇಧದಳದ ಪೊಲೀಸ್ ಅಧೀಕ್ಷಕರು ಹಾಗೂ ಕೇಂದ್ರ ವಲಯದ ಪೊಲೀಸ್ ಅಧೀಕ್ಷಕರ ನೇತೃತ್ವದಲ್ಲಿ ಮತ್ತು ತಮ್ಮ ಸಿಬ್ಬಂದಿಯವರೊಂದಿಗೆ ಪುತ್ತೂರು ತಾಲೂಕು ಉಪ್ಪಿನಂಗಡಿ ಪೊಲೀಸ್ ಠಾಣೆಯ ಸರಹದ್ದಿನ ಇಚ್ಲಂಪಾಡಿ ಹಾಗೂ ಕೋರವೇರು ಗ್ರಾಮದ ರಾಷ್ಟ್ರೀಯ ಹೆದ್ದಾರಿ 48 ರಲ್ಲಿ ದೊರೆತ ಖಚಿತ ವರ್ತಮಾನದ ಮೇರೆಗೆ ಗಸ್ತು ತಿರುಗುತ್ತಿರುವಾಗ ಬೆಳಗ್ಗಿನ ಜಾವ ಸುಮಾರು 6-00 ಗಂಟೆ ಸಮಯದಲ್ಲಿ ಒಂದು ಲಾರಿ ಬರುತ್ತಿರುವುದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ, ಚಾಲಕ ಲಾರಿಯನ್ನು ನಿಲ್ಲಿಸಿ, ಅದರಲ್ಲಿರುವ ವ್ಯಕ್ತಿಗಳು ಓಡಲಾರಂಭಿಸಿದರು. ಸಿಬ್ಬಂದಿಯವರ ಸಹಾಯದಿಂದ ಸದರಿ ಓಡಲಾರಂಭಿಸಿದ ವ್ಯಕ್ತಿಗಳಲ್ಲಿ 4 ಮಂದಿಯನ್ನು ಹಿಡಿದು ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ, ಮೇಲಿನ ಕ್ರಮ ಸಂಖ್ಯೆ:1 ರಿಂದ 5 ರವರೆಗೆ ತಿಳಿಸಿದ ವಿಳಾಸಗಳ ಮಾಹಿತಿಗಳನ್ನು ತಿಳಿಸಿರುತ್ತಾರೆ. ನಂತರ ಲಾರಿಯನ್ನು ಪರಿಶೀಲಿಸಲಾಗಿ, ಲಾರಿಯ ನೋಂದಣಿ ಸಂಖ್ಯೆ: ಕೆಎ–19–ಎ–3257 ಆಗಿದ್ದು, ಇದರ ಮೇಲೆ ಪಬ್ಲಿಕ್ ಕ್ಯಾರಿಯರ್ ಎಂಬ ನಾಮಫಲಕವಿದ್ದು, ಟಾಟಾ ಕಂಪೆನಿಯ ಲಾರಿಯಾಗಿರುತ್ತದೆ. ಲಾರಿಯ ಮೇಲ್ಭಾಗಕ್ಕೆ ಪ್ಲಾಸ್ಟಿಕ್ ಟರ್ಪಾಲನ್ನು ಹಾಕಿದ್ದು, ಅದರಲ್ಲಿ ಎರಡು ಅಡಿಯಷ್ಟು ಮಣ್ಣನ್ನು ತೆಗೆದು ನೋಡಲಾಗಿದ್ದು, ಅದರ ಕೆಳಗೆ ಫ್ಲೈವುಡ್ ಶೀಟ್‌ಗಳ ಹಲಗೆಯ ಪೀಸ್‌ಗಳಿದ್ದು, ಅಲ್ಲಲ್ಲಿ ಬಿಳಿ ಬಣ್ಣದ ಪ್ಲಾಸ್ಟಿಕ್ ಕ್ಯಾನುಗಳಲ್ಲಿ ಮದ್ಯಸಾರ ತುಂಬಿರುವುದು ಕಂಡು ಬಂತು. ಪ್ಲಾಸ್ಟಿಕ್ ಕ್ಯಾನುಗಳನ್ನು ಎಣಿಸಿದಾಗ, 35 ಲೀಟರ್ ಸಾಮರ್ಥ್ಯದ 240 ಕ್ಯಾನುಗಳಲ್ಲಿ ಮದ್ಯಸಾರವಿರುವುದು ಕಂಡು ಬಂತು. ಆರೋಪಿಯಾದ ಜಿ.ನವಾಜ್ ಪಿರಾನ್ ಎಂಬವನನ್ನು ವಿಚಾರಣೆ ಮಾಡಲಾಗಿ, ಆತನು ಹುಬ್ಬಳ್ಳಿ ಜಿಲ್ಲೆಯ ಲೋಕೇಶ್ ಹಾಗೂ ಬೇಲೂರು ಹೊಸ ಪೇಟೆಯ ನಾಗರಾಜ ಇವರುಗಳಿಂದ ಮದ್ಯಸಾರ ಖರೀದಿ ಮಾಡಿಕೊಂಡು ಕೇರಳ ರಾಜ್ಯದ ವಿಜಯ.ವಿ.ಎ ಹಾಗೂ ಗಿರೀಶ್‌ರವರ ಮುಖಾಂತರ ಅಕ್ರಮವಾಗಿ ನಕಲಿ ಮದ್ಯ ತಯಾರು ಮಾಡಿ, ಮಂಗಳೂರು ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಮಾರಾಟ ಮಾಡುತ್ತಿರುವುದು ಎಂದು ತಿಳಿಸಿ ಹಾಗೂ ಸದರಿ ಸರಕನ್ನು ಎಲ್ಲಿಂದ ತೆಗೆದುಕೊಂಡು ಬಂದಿರುತ್ತೀರಿ ಎಂದು ವಿಚಾರಿಸಿದಾಗ, ಬಾಗಲಕೋಟೆ ಜಿಲ್ಲೆಯ ಜಮಖಂಡಿ ತಾಲೂಕಿನ ಜಮಖಂಡಿ ಶುಗರ್ ಕಂಪೆನಿಯಿಂದ ತೆಗೆದುಕೊಂಡು ಬಂದಿರುವುದಾಗಿ, ಅಲ್ಲಿ ಕೆಲಸ ಮಾಡುವ ಮೈಲಾರಿ ಎಂಬವವರು ಕಾರ್ಖಾನೆಯಿಂದ ತನಗೆ ಕೊಟ್ಟಿರುತ್ತಾರೆಂದು ತಿಳಿಸಿದನು. ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 32,34,43 ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುತ್ತದೆಂದು ಆರೋಪಿಗಳಿಗೆ ತಿಳಿಸಿ, ಸದರಿ ಮದ್ಯಸಾರದಿಂದ ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಳನ್ನು ತೆಗೆದು, ಅದಕ್ಕೆ ಬಟ್ಟೆದಾರ ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಿ ಆರೋಪಿಗಳ ಗುರುತಿನ ಚೀಟಿಯನ್ನು ಅಂಟಿಸಿ ಮಾದರಿ ಸೀಲನ್ನು ಸ್ಥಳದಲ್ಲಿಯೇ ತಯಾರಿಸಿರುತ್ತಾರೆ. ನಂತರ ಸದರಿ ಲಾರಿಯನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ಅದರಲ್ಲಿ ಎರಡು ನಂಬರು ಪ್ಲೇಟ್‌ಗಳಿದ್ದು, ಅದರ ಮೇಲೆ ಕೆಎ–12–ಬಿ–5936 ಹಾಗೂ ಆರ್.ಸಿ. ಪುಸ್ತಕ ದೊರೆತ್ತಿದ್ದು, ಅದರ ನೋಂದಣಿ ಸಂಖ್ಯೆ: ಕೆಎ–19–ಎ–3257 ಆಗಿರುತ್ತದೆ. ಮಾಲಿಕರ ಹೆಸರು ರಾಮನಾಥ ಪೂಜಾರಿ, ಬಿನ್:ಪ್ರದೀಪ್ ಪೂಜಾರಿ, ನಂ.73/ಎ ಕಾಲನಿ, ಹರೀಶ್ ನಗರ ಮೈನ್ ರೋಡ್, ಮಂಗಳೂರು ಎಂದು ಬರೆದಿರುತ್ತದೆ. ಮಹಜರನ್ನು ಸ್ಥಳದಲ್ಲಿಯೇ ಬರೆದು ಸ್ಥಳ ಚೆಕ್‌ಬಂದಿಯನ್ನು ಮಹಜರಿನಲ್ಲಿ ನಮೂದಿಸಿರುತ್ತಾರೆ. ಆರೋಪಿಗಳನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ ಅಕ್ರಮವಾಗಿ ಹೊಂದಿದ್ದ ಮದ್ಯಸಾರ ಹಾಗೂ ಸಾಗಾಟಕ್ಕೆ ಬಳಸಿದ ಲಾರಿಯನ್ನು ಇಲಾಖಾ ವಶಕ್ಕೆ ತೆಗೆದುಕೊಂಡು, ಆರೋಪಿಗಳ ವಿರುದ್ಧ ಪೊಲೀಸ್ ಉಪ ನಿರೀಕ್ಷಕರು, ಉಪ್ಪಿನಂಗಡಿ ಪೊಲೀಸ್ ಠಾಣೆ, ಪುತ್ತೂರು ಗ್ರಾಮಾಂತರ, ಪುತ್ತೂರು ಇವರು ತಕ್ಷೀರು ಸಂಖ್ಯೆ: 215/2008 ದಿ:2-12-2008 ರಂದು ಮೊಕದ್ದಮೆಯನ್ನು ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿಯನ್ನು ಹಾಗೂ ದಾಖಲಾತಿಗಳನ್ನು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ. ಸದರಿ ಸೊತ್ತುಗಳನ್ನು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರಿಗೆ ಹಸ್ತಾಂತರಿಸಲು ದಿ:16-12-2008 ರಂದು ಪೊಲೀಸ್ ಉಪ ನಿರೀಕ್ಷಕರು, ಉಪ್ಪಿನಂಗಡಿ ಪೊಲೀಸ್ ಠಾಣೆ ಇವರು ಈ ಪ್ರಾಧಿಕಾರಕ್ಕೆ ಪತ್ರ ಬರೆಯಲಾಗಿದ್ದು, ಸದರಿ ಪತ್ರದಂತೆ ಈ ಪ್ರಾಧಿಕಾರದ ಆದೇಶ ಸಂಖ್ಯೆ: ಎಸ್‌ಡಿಕೆ/182/ಡಿಟಿಸಿಆರ್/2008-09 ದಿ:26-12-2008 ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರಿಗೆ ಹಸ್ತಾಂತರಿಸಲು ಅನುಮತಿ ಆದೇಶ ನೀಡಲಾಗಿರುತ್ತದೆ.

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರ ಪತ್ರ ಸಂಖ್ಯೆ: ಆರ್‌ಸಿಆರ್/ 45 /2008-09 ದಿ:12-02-2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಈ ಕೆಳಗಿನ ಸೊತ್ತುಗಳನ್ನು ದಿ:11-02-2009 ರಂದು ಸ್ವೀಕರಿಸಿರುತ್ತಾರೆ.

1) ಲಾರಿ ಸಂಖ್ಯೆ: ಕೆಎ–19–ಎ–3257 ಮತ್ತು ನಕಲಿ ಸಂಖ್ಯೆ: ಕೆಎ–12–ಬಿ–5936 ಎಂದು ಬರೆದಿರುವ ನಂಬರು ಪ್ಲೇಟ್‌ಗಳು–2.
2) ಫ್ಲೈವುಡ್ ಶೀಟ್‌ಗಳು–3
3) 35 ಲೀಟರ್‌ನ 150 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ತಲಾ 35 ಲೀಟರ್‌ನಂತೆ – 5425-000 ಲೀ. ಮದ್ಯಸಾರ.
4) 35 ಲೀಟರ್‌ನ 4 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ತಲಾ 30 ಲೀಟರ್‌ನಂತೆ – 120 ಲೀ. ಮದ್ಯಸಾರ.
5) 35 ಲೀಟರ್‌ನ 3 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ತಲಾ 25 ಲೀಟರ್‌ನಂತೆ : 75-000 ಲೀ. ಮದ್ಯಸಾರ.

6) 35 ಲೀಟರ್‌ನ 1 ಪ್ಲಾಸ್ಟಿಕ್ ಕ್ಯಾನಿನಲ್ಲಿ ತಲಾ 10 ಲೀಟರ್‌ನಂತೆ : 10-000 ಲೀ. ಮದ್ಯಸಾರ.
7) 35 ಲೀಟರ್‌ನ 1 ಪ್ಲಾಸ್ಟಿಕ್ ಕ್ಯಾನಿನಲ್ಲಿ ತಲಾ 15 ಲೀಟರ್‌ನಂತೆ : 15-000 ಲೀ. ಮದ್ಯಸಾರ.
8) 35 ಲೀಟರ್‌ನ 76 ಒಡೆದು ಹೋದ ಖಾಲಿ ಪ್ಲಾಸ್ಟಿಕ್ ಕ್ಯಾನುಗಳು.

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ತನಿಖಾ ವರದಿ ಸಂಖ್ಯೆ: ಆರ್‌ಸಿಆರ್/45/2008-09 ದಿ:13-5-2009 ರ ತನಿಖಾ ವರದಿಯಲ್ಲಿ, ಸಹಾಯಕ ಪೊಲೀಸ್ ಅಧೀಕ್ಷಕರು ಪುತ್ತೂರು ಉಪ ವಿಭಾಗ, ಪುತ್ತೂರು ಇವರು ಸಲ್ಲಿಸಿದ ಕೆಮಿಕಲ್ ವರದಿ ಸಂಖ್ಯೆ: ಇ-585-2 ದಿ: 13-1-2009 ರ ವರದಿಯಲ್ಲಿ ಮದ್ಯಸಾರದ ಪ್ರಮಾಣದ ಶೇ.95 ಇರುವುದಾಗಿ, ತಕ್ಷೀರಿನಲ್ಲಿ ಈ ಮೇಲಿನ ಹಸ್ತಾಂತರಗೊಂಡ ಮದ್ಯಸಾರ ಹಾಗೂ ಫ್ಲೈವುಡ್ ಶೀಟ್ ಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯಸಾರವನ್ನು ನಾಶಪಡಿಸಲು ಶಿಫಾರಸ್ಸು ಮಾಡಿರುತ್ತಾರೆ.

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ತನಿಖಾ ವರದಿಯನ್ನು ಆಧರಿಸಿ, ಈಪ್ರಾಧಿಕಾರದ ಆದೇಶ ಸಂಖ್ಯೆ: ಎಸ್‌ಡಿಕೆ/182/ಡಿಟಿಸಿಆರ್ /2008-09 ದಿ:21-5-2009 ರ ಆದೇಶದಲ್ಲಿ ಈ ಕೆಳಕಂಡ ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಲಾಗಿರುತ್ತದೆ.

1.	35 ಲೀಟರ್ ಗಾತ್ರದ 150 ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ ಸುಮಾರು 5425-000 ಲೀಟರ್ ಮದ್ಯಸಾರ.
2.	35 ಲೀಟರ್ ಗಾತ್ರದ 4 ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ ತಲಾ 30 ಲೀಟರ್‌ನಂತೆ ಒಟ್ಟು 120-000 ಲೀಟರ್ ಮದ್ಯಸಾರ.
3.	35 ಲೀಟರ್ ಗಾತ್ರದ 3 ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ ತಲಾ 25 ಲೀಟರ್ ನಂತೆ ಒಟ್ಟು 75-000 ಲೀಟರ್ ಮದ್ಯಸಾರ.
4.	35 ಲೀಟರ್ ಗಾತ್ರದ 1 ಪ್ಲಾಸ್ಟಿಕ್ ಕ್ಯಾನ್‌ನಲ್ಲಿ 10 ಲೀಟರ್ ಮದ್ಯಸಾರ.
5.	35 ಲೀಟರ್ ಗಾತ್ರದ 1 ಪ್ಲಾಸ್ಟಿಕ್ ಕ್ಯಾನ್‌ನಲ್ಲಿ 15 ಲೀಟರ್ ಮದ್ಯಸಾರ.
	ಒಟ್ಟು – 5645-000 ಲೀಟರ್ ಮದ್ಯಸಾರ.
6.	35 ಲೀಟರ್ ಗಾತ್ರದ ಖಾಲಿ ಪ್ಲಾಸ್ಟಿಕ್ ಕ್ಯಾನ್‌ಗಳು–76.
7.	ಫ್ಲೈವುಡ್ ಶೀಟ್‌ಗಳು–3.

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯಸಾರವನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಐಎಸ್/2007 ದಿ:13–7–2007 ರಂತೆ ಮಾರಾಟ ಮಾಡಲು ನಿಷೇಧಿಸಿದ್ದು, ಮುಟ್ಟುಗೋಲು ಹಾಕಿಕೊಳ್ಳಲಾದ ಸೊತ್ತುಗಳನ್ನು ನಾಶಪಡಿಸುವಂತೆ ಆದೇಶವಿರುವುದರಿಂದ, ಸದರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43(ಎ)3 ರ ಅನ್ವಯ ಅಬಕಾರಿ ಉಪ ಅಧೀಕ್ಷಕರು, ಪುತ್ತೂರು ಉಪ ವಿಭಾಗ ಇವರ ಸಮಕ್ಷಮ ಮತ್ತು ಪೊಲೀಸ್ ಉಪ ನಿರೀಕ್ಷಕರು, ಉಪ್ಪಿನಂಗಡಿ ಪೊಲೀಸ್ ಠಾಣೆ ಹಾಗೂ ವ್ಯವಸ್ಥಾಪಕರು, ಕೆ.ಎಸ್.ಬಿ.ಸಿ.ಎಲ್. ಡಿಪೋ, ಪುತ್ತೂರು ಇವರನ್ನು ಮತ್ತು ಸ್ಥಳೀಯ ಸಾರ್ವಜನಿಕರು ಹಾಗೂ ಮಾಧ್ಯಮ ಪತ್ರಿಕಾ ವರದಿಗಾರರನ್ನು ಸೇರಿಸಿ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂಖ್ಯೆ:ಇಸಿಸಿ/73/ಸಿಆರ್‌ಎಂ/2004 ದಿ:12–9–05 ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ಮದ್ಯಸಾರವನ್ನು ನಾಶಪಡಿಸಲು ಆದೇಶಿಸಿದೆ ಹಾಗೂ ಉಳಿದ ಖಾಲಿ ಪ್ಲಾಸ್ಟಿಕ್ ಕ್ಯಾನುಗಳನ್ನು ಹಾಗೂ ಫ್ಲೈವುಡ್ ಶೀಟ್ ಗಳನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಆದೇಶಿಸಿದೆ.

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯಸಾರವನ್ನು ಈ ಪ್ರಾಧಿಕಾರದ ಆದೇಶಾನುಸಾರ ನಾಶಪಡಿಸಲಾಗಿದ್ದು, ಉಳಿದ ಪ್ಲಾಸ್ಟಿಕ್ ಕ್ಯಾನ್ ಹಾಗೂ ಫ್ಲೈವುಡ್ ಶೀಟ್‌ಗಳನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಿ, ಅದರಲ್ಲಿ ಬಂದ ಒಟ್ಟು ರೂ.4,500/– ನ್ನು ಸರಕಾರಕ್ಕೆ ಪಾವತಿಸಿ ವರದಿಯನ್ನು ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರು ದಿ:3–6–2009 ರಂದು ಸಲ್ಲಿಸಿರುತ್ತಾರೆ.

ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ತನಿಖಾ ವರದಿ ಸಂ: ಆರ್‌ಸಿಆರ್/45/2008-09 ದಿ:15-6-2009 ರ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನ ಸಂಖ್ಯೆ: ಕೆಎ–19–ಎ–3257 ರ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಸಾರಿಗೆ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಮಂಗಳೂರು ಇವರಿಂದ ಪಡೆಯಲಾಗಿದ್ದು, ಸದರಿ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯಲ್ಲಿ ನೋಂದಣಿ ಸಂಖ್ಯೆ: ಕೆಎ–19–ಎ–3257 ಇದರ ಚಾಸೀಸ್ ನಂ:ಟಿ–55011282ಜೆ99 ಹಾಗೂ ಇಂಜಿನ್ ನಂ: ಡಿ010024647 ಆಗಿದ್ದು, ಇದು ಟೆಂಪೂ ಟ್ರ್ಯಾಕ್ಸ್ ವಾಹನವಾಗಿರುತ್ತದೆ. ಆದರೆ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವು ಟಾಟಾ ಕಂಪೆನಿಯ ವಾಹನವಾಗಿದ್ದು, ತಕ್ಷೀರಿನಲ್ಲಿ ವಶಪಡಿಸಿಕೊಂಡ ಲಾರಿಯ ಇಂಜಿನ್ ನಂಬರ್ ಹಾಗೂ ಚಾಸೀಸ್ ನಂಬರ್ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯಲ್ಲಿ ನಮೂದಿಸಿದ ಇಂಜಿನ್ ನಂಬರ್ ಹಾಗೂ ಚಾಸೀಸ್

ನಂಬರ್ ಒಂದಕ್ಕೊಂದು ತಾಳೆಯಾಗಿರುವುದಿಲ್ಲ. ಆದುದರಿಂದ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನದ ನೋಂದಣಿ ಸಂಖ್ಯೆ ನಕಲಿಯಾಗಿರುತ್ತದೆಂದು ದೃಢೀಕರಿಸಿರುತ್ತಾರೆ. ಲಾರಿಯಲ್ಲಿ ಸಿಕ್ಕಿದ ಇನ್ನೊಂದು ನಂಬರ್ ಪ್ಲೇಟ್‌ನ ನೋಂದಣಿ ಸಂ: ಕೆಎ-12-ಬಿ-5936 ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಸಾರಿಗೆ ಅಧಿಕಾರಿಗಳು, ಕೊಡಗು ಜಿಲ್ಲೆ, ಮಡಿಕೇರಿ ಇವರಿಗೆ ಪತ್ರ ಬರೆಯಲಾಗಿದ್ದು, ಅವರ ಪತ್ರ ಸಂಖ್ಯೆ: ಕೆಎ-12-ಬಿ-5936/2009-10 ದಿ:29-5-2009 ರ ವರದಿಯಲ್ಲಿ, ಅವರ ಕಚೇರಿಯಲ್ಲಿ ಲಭ್ಯವಿರುವ ದಾಖಲಾತಿಗಳನ್ನು ಪರಿಶೀಲಿಸಲಾಗಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ 2 ನೇ ನೋಂದಣಿ ಸಂಖ್ಯೆ: ಕೆಎ-12-ಬಿ-5936 ನೋಂದಣಿ ಆಗಿರುವುದಿಲ್ಲವೆಂದು, ಈ ಬಗ್ಗೆ ವಾಹನದ ವಿವರಗಳನ್ನು ಕಳುಹಿಸಿಕೊಡಲು ಸಾಧ್ಯವಾಗಿರುವುದಿಲ್ಲವೆಂದು ದೃಢೀಕರಣ ಪತ್ರವನ್ನು ನೀಡಿರುತ್ತಾರೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ಈಗಾಗಲೇ ವಶಪಡಿಸಿಕೊಂಡು ಈಗಾಗಲೇ 8 ತಿಂಗಳು ಕಳೆದರೂ, ಉಪ್ಪಿನಂಗಡಿ ಪೊಲೀಸ್ ಠಾಣೆ ಹಾಗೂ ಪುತ್ತೂರು ವಲಯ ಕಚೇರಿಯಲ್ಲಿ ದಸ್ತಗಿರಿಯಾದ ಆರೋಪಿಗಳು, ವಾಹನದ ಮಾಲೀಕರು ಹಾಗೂ ಅವರ ಪರ ವಕೀಲರು ವಾಹನದ ಬಿಡುಗಡೆಗಾಗಿ ಯಾರೂ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ಸದರಿ ವಾಹನದಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಮದ್ಯಸಾರವನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ಸದರಿ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಿಲೇವಾರಿಗೊಳಿಸಲು ಶಿಫಾರಸ್ಸು ಮಾಡಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) **ಮೊದಲನೇ ವಿವಾದಾಂಶ:** ದಿ:2-12-2008 ರಂದು ಲಾರಿಯ ನಕಲಿ ಸಂಖ್ಯೆ: ಕೆಎ-19-ಎ-3257 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) **ಎರಡನೇ ವಿವಾದಾಂಶ:** ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) **ಮೂರನೇ ವಿವಾದಾಂಶ:** ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ.ಶಿವ ಪ್ರಸಾದ್, ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ ಇವರು ದಿ:12-8-09 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು 2005 ರಿಂದ ಇಲ್ಲಿಯವರೆಗೆ ಅಬಕಾರಿ ನಿರೀಕ್ಷಕರಾಗಿ ಪುತ್ತೂರು ವಲಯ ಇಲ್ಲಿ ಕಾರ್ಯನಿರ್ವಹಿಸುತ್ತಿದ್ದು, ತಕ್ಷೀರಿಗೆ ಸಂಬಂಧಿಸಿದ ಈ ಕೆಳಕಂಡ ಸೊತ್ತುಗಳನ್ನು ಉಪ್ಪಿನಂಗಡಿ ಪೊಲೀಸ್ ಠಾಣೆಯ ಕಾನ್ಸ್‌ಟೇಬಲ್ 629 ಶ್ರೀ.ದೇವದಾಸ್‌ನಿಂದ ದಿ:11-2-2009 ರಂದು ಸ್ವೀಕರಿಸಿದ್ದು, ಸ್ವೀಕೃತಿಯನ್ನು ನೀಡಿರುತ್ತೇನೆ.

ಹಸ್ತಾಂತರಗೊಂಡ ಸೊತ್ತುಗಳು:

1) ಲಾರಿ ಸಂಖ್ಯೆ: ಕೆಎ-19-ಎ-3257 ಮತ್ತು ನಕಲಿ ಸಂಖ್ಯೆ: ಕೆಎ-12-ಬಿ-5936 ಎಂದು ಬರೆದಿರುವ ನಂಬರು ಪ್ಲೇಟ್‌ಗಳು-2.
2) ಪ್ಲೈವುಡ್ ಶೀಟ್‌ಗಳು-3
3) 35 ಲೀಟರ್‌ನ 150 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ತಲಾ 35 ಲೀಟರ್‌ನಂತೆ - 5425-000 ಲೀ. ಮದ್ಯಸಾರ.
4) 35 ಲೀಟರ್‌ನ 4 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ತಲಾ 30 ಲೀಟರ್‌ನಂತೆ -120 ಲೀ. ಮದ್ಯಸಾರ.
5) 35 ಲೀಟರ್‌ನ 3 ಪ್ಲಾಸ್ಟಿಕ್ ಕ್ಯಾನುಗಳಲ್ಲಿ ತಲಾ 25 ಲೀಟರ್‌ನಂತೆ :75-000 ಲೀ. ಮದ್ಯಸಾರ.
6) 35 ಲೀಟರ್‌ನ 1 ಪ್ಲಾಸ್ಟಿಕ್ ಕ್ಯಾನಿನಲ್ಲಿ ತಲಾ 10 ಲೀಟರ್‌ನಂತೆ : 10-000 ಲೀ. ಮದ್ಯಸಾರ.
7) 35 ಲೀಟರ್‌ನ 1 ಪ್ಲಾಸ್ಟಿಕ್ ಕ್ಯಾನಿನಲ್ಲಿ ತಲಾ 15 ಲೀಟರ್‌ನಂತೆ : 15-000 ಲೀ. ಮದ್ಯಸಾರ.
8) 35 ಲೀಟರ್‌ನ 76 ಒಡೆದು ಹೋದ ಖಾಲಿ ಪ್ಲಾಸ್ಟಿಕ್ ಕ್ಯಾನುಗಳು.

ತಕ್ಷೀರಿಗೆ ಸಂಬಂಧಿಸಿದ ಮದ್ಯಸಾರದ ಮಾದರಿಗಳನ್ನು ಸಹಾಯಕ ಪೊಲೀಸ್ ಅಧೀಕ್ಷಕರು, ಪುತ್ತೂರು ಉಪ ವಿಭಾಗ, ಪುತ್ತೂರು ಇವರು ಸಲ್ಲಿಸಿದ ಕೆಮಿಕಲ್ ವರದಿ ಸಂಖ್ಯೆ: ಇ-585-2 ದಿ:13-1-2009 ರ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ತಕ್ಷೀರಿನಲ್ಲಿ ಮದ್ಯಸಾರ ಹಾಗೂ ಪ್ಲೈವುಡ್ ಶೀಟ್‌ಗಳನ್ನು ಸರಕಾರಕ್ಕೆ ಮುಟ್ಟುಗೋಲು

ಹಾಕಿಕೊಂಡು ವಿಲೇವಾರಿಗೊಳಿಸಲು ತನಿಖಾ ವರದಿಯನ್ನು ದಿ:13-5-2009 ರಂದು ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ-1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು ಗುರುತಿಸಲಾಯಿತು. ನಂತರ ತಕ್ಷೀರಿನಲ್ಲಿ ವಶಪಡಿಸಿಕೊಂಡ ಲಾರಿಯ ನಕಲಿ ನೋಂದಣಿ ಸಂಖ್ಯೆ: ಕೆಎ-19-ಎ-3257 ಮತ್ತು ಕೆಎ-19-ಬಿ-5936 ರ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ತರಿಸಲು ಸಂಬಂಧಪಟ್ಟ ಸಾರಿಗೆ ಅಧಿಕಾರಿಗಳನ್ನು ಸಂಪರ್ಕಿಸಲಾಗಿ, ಅದರಂತೆ ಕೆಎ-19-ಎ-3257 ರ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯಲ್ಲಿ ವಾಹನ ಟೆಂಪೋ ಟ್ರ್ಯಾಕ್ಸ್ ಆಗಿದ್ದು, ಇದರ ಚಾಸೀಸ್ ನಂಬರ್ ನಂ:ಟಿ-55011282ಜೆ99 ಹಾಗೂ ಇಂಜಿನ್ ನಂ: ಡಿ010024647 ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನಕ್ಕೆ ಒಂದಕ್ಕೊಂದು ತಾಳೆಯಾಗಿರುವುದಿಲ್ಲ. ಇನ್ನೊಂದು ನೋಂದಣಿ ಸಂಖ್ಯೆ: ಕೆಎ-12-ಬಿ-5936 ರ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ತರಿಸಲು ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಡಿಕೇರಿ ಇವರನ್ನು ಸಂಪರ್ಕಿಸಲಾಗಿ, ಅವರ ಪತ್ರ ಸಂಖ್ಯೆ ದಿ:29-5-2009 ರ ವರದಿಯಲ್ಲಿ ಸದರಿ ನೋಂದಣಿ ಸಂಖ್ಯೆ ಅವರ ಪ್ರಾಧಿಕಾರದಲ್ಲಿ ನೋಂದಣಿ ಆಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಕ್ರಮವಾಗಿ ನಿಶಾನೆ ಪಿ-2 ಮತ್ತು ನಿಶಾನೆ ಪಿ-3 ಎಂದು ಗುರುತಿಸಲಾಯಿತು. ವಾಹನದ ಬಿಡುಗಡೆಗಾಗಿ ಹಾಗೂ ಅವರ ಪರ ಯಾರೂ ವಕೀಲರು ಹಾಜರಾಗಿರುವುದಿಲ್ಲ ಹಾಗೂ ಅಕ್ರಮ ಮದ್ಯಸಾರ ಆಗಿರುವುದರಿಂದ, ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ತನಿಖಾ ವರದಿಯನ್ನು ದಿನಾಂಕ:15-6-2009 ರಂದು ಸಲ್ಲಿಸಲಾಗಿದ್ದು, ಸದರಿ ವರದಿಯನ್ನು ನಿಶಾನೆ ಪಿ-4 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-4ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ, ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:2-12-2008 ರಂದು ಜಪ್ತುಪಡಿಸಿಕೊಂಡಿರುವ ಲಾರಿಯ ನಕಲಿ ಸಂಖ್ಯೆ: ಕೆಎ-19-ಎ-3257 ರಲ್ಲಿ ಅಕ್ರಮವಾಗಿ 8400 ಲೀಟರ್ ಮದ್ಯಸಾರ ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ, ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣಕ್ಕೆ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯತೆವಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ಧವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಪೊಲೀಸ್ ನಿರೀಕ್ಷಕರು, ಅಬಕಾರಿ ಲಾಟರಿ ಮತ್ತು ನಿಷೇಧದಳ ಇವರು ದಾಖಲಿಸಿದ ಪ್ರಕರಣವನ್ನು ಪೊಲೀಸ್ ಉಪ ನಿರೀಕ್ಷಕರು, ಉಪ್ಪಿನಂಗಡಿ ಪೊಲೀಸ್ ಠಾಣೆ, ಉಪ್ಪಿನಂಗಡಿ ಇವರು ದಾಖಲಿಸಿದ ತಕ್ಷೀರು ಸಂಖ್ಯೆ: 215/2008 ದಿ:2-12-2008 ರ ಪ್ರಕರಣದಲ್ಲಿ ಆರೋಪಿಗಳು ಅಕ್ರಮವಾಗಿ ಮದ್ಯಸಾರ ಸಾಗಾಣಿಕೆ ಮಾಡುವಾಗ ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯಸಾರವೆಂದು ದೃಢಪಟ್ಟಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ಪೊಲೀಸ್ ಅಧೀಕ್ಷಕರು,ಅಬಕಾರಿ ಲಾಟರಿ ಮತ್ತು ನಿಷೇಧದಳ ಮತ್ತು ಸಿಬ್ಬಂದಿಯವರು ದಾಖಲಿಸಿದ ಮಹಜರಿನಲ್ಲಿ ನಮೂದಿಸಿದಂತೆ ಆರೋಪಿಗಳ ಹೇಳಿಕೆಗಳಲ್ಲಿ, ಸದರಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯಸಾರವನ್ನು ಕಾಳಸಂತೆಯಲ್ಲಿ ಖರೀದಿಸಿ ಮಾರಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿದ್ದು, ತಕ್ಷೀರಿನಲ್ಲಿ ವಶಪಡಿಸಿಕೊಂಡ ಲಾರಿಯಲ್ಲಿ ಅಕ್ರಮವಾಗಿ ಮದ್ಯಸಾರ ಸಾಗಾಟ ಮಾಡಿರುವುದನ್ನು ರುಜುವಾತುಪಡಿಸಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಲಾರಿಯ ನಕಲಿ ಸಂಖ್ಯೆ: ಕೆಎ-19-ಎ-3257ನ್ನು ವಶಪಡಿಸಿಕೊಂಡು ಸುಮಾರು 8 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ಉಪ್ಪಿನಂಗಡಿ ಪೊಲೀಸ್ ಠಾಣೆ ಮತ್ತು ಪುತ್ತೂರು ವಲಯ ಕಚೇರಿಯಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ

ಮಾಲೀಕರು ಹಾಗೂ ಆರೋಪಿಗಳು ಕೂಡಾ ವಾಹನವು ತನ್ನದೆಂದು ಬಿಡುಗಡೆಗೆ ಅರ್ಜಿ ಸಲ್ಲಿಸಿರುವುದಿಲ್ಲ. ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು ಇವರ ತನಿಖಾ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನದ ನೋಂದಣಿ ಸಂಖ್ಯೆ ನಕಲಿಯಾಗಿರುವುದು ಎಂದು ದೃಢೀಕರಣ ಪತ್ರ ನೀಡಿರುತ್ತಾರೆ. ಸದರಿ ವರದಿಯಂತೆ ಆರೋಪಿಗಳು ಸದರಿ ಲಾರಿಯಲ್ಲಿ ನಕಲಿ ನಂಬರುಗಳನ್ನು ಅಳವಡಿಸಿ ಅಕ್ರಮವಾಗಿ ಮದ್ಯಸಾರವನ್ನು ಯಾವುದೇ ರಹದಾರಿ ಪತ್ರವಿಲ್ಲದೆ ಸಾಗಾಟಕ್ಕೆ ವಾಹನವನ್ನು ಬಳಸಿರುವುದು ಸಾಬೀತಾಗಿರುತ್ತದೆ. ಆದುದರಿಂದ ವಾಹನದ ಮಾಲೀಕರು ಅಕ್ರಮ ಮದ್ಯಸಾರ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ನಕಲಿ ನಂಬರ್ ಅಳವಡಿಸಿ ಮದ್ಯಸಾರ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ದಸ್ತಗಿರಿಯಾದ ಆರೋಪಿಗಳು ಖುದ್ದಾಗಿ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಆದುದರಿಂದ ವಾಹನ ಮಾಲೀಕರೇ ಸ್ವತ: ತನ್ನ ಲಾರಿಯಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಮದ್ಯಸಾರ ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಲಾರಿಯು ಈಗಾಗಲೇ 8 ತಿಂಗಳು ಕಳೆದರೂ ಅದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಸರಕಾರದ ಆರ್ಥಿಕ ಹಿತದೃಷ್ಟಿಯಿಂದ ಅಕ್ರಮ ಮದ್ಯಸಾರ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಕೆಳಕಂಡ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/182/ಡಿಟಿಸಿಆರ್/2008-09 ದಿನಾಂಕ:20ನೇ ಆಗಸ್ಟ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಪೊಲೀಸ್ ನಿರೀಕ್ಷಕರು, ಅಬಕಾರಿ ಲಾಟರಿ ಮತ್ತು ನಿಷೇಧದಳ ಇವರು ಪತ್ತೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸ್ ಉಪ ನಿರೀಕ್ಷಕರು, ಉಪ್ಪಿನಂಗಡಿ ಪೊಲೀಸ್ ಠಾಣೆ, ಉಪ್ಪಿನಂಗಡಿ ಇವರು ದಾಖಲಿಸಿದ ತಕ್ಷೀರು ಸಂ:215/2008 ದಿ:2-12-2008 ರಲ್ಲಿ ಜಪ್ತುಪಡಿಸಿಕೊಂಡಿರುವ ಟಾಟಾ ಲಾರಿಯನ್ನು (ನಕಲಿ ಸಂಖ್ಯೆ: ಕೆಎ-19-ಎ-3257) ನಿಯಮ 43(ಸಿ) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:20-08-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1: ಶ್ರೀ.ಶಿವ ಪ್ರಸಾದ್, ಅಬಕಾರಿ ನಿರೀಕ್ಷಕರು, ಪುತ್ತೂರು ವಲಯ, ಪುತ್ತೂರು.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಪ್ರಥಮ ತನಿಖಾ ವರದಿ.
ನಿಶಾನೆ ಪಿ-1ಎ : ತನಿಖಾ ವರದಿಯಲ್ಲಿ ತನಿಖಾಧಿಕಾರಿಯವರ ಸಹಿ
ನಿಶಾನೆ ಪಿ-2 : ಕೆಎ-19-ಎ-3257 ರ ಬಿ ಅಬ್‌ಸ್ಟ್ರ್ಯಾಕ್ಟ್ ವರದಿ.
ನಿಶಾನೆ ಪಿ-3 : ಕೆಎ-12-ಬಿ-5936 ರ ಬಿ ಅಬ್‌ಸ್ಟ್ರ್ಯಾಕ್ಟ್ ವರದಿ.
ನಿಶಾನೆ ಪಿ-4 : ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸಲ್ಲಿಸಿದ ಪ್ರಸ್ತಾವನೆ.
ನಿಶಾನೆ ಪಿ-4ಎ : ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸಲ್ಲಿಸಿದ ಪ್ರಸ್ತಾವನೆಯಲ್ಲಿ ತನಿಖಾಧಿಕಾರಿಯವರ ಸಹಿ.

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.916

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ
ಸಂಖ್ಯೆ: ಎಸ್‌ಡಿಕೆ/227/ಡಿಟಿಸಿಆರ್/2008-09 ದಿನಾಂಕ:17ನೇ ಆಗಸ್ಟ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿರ್ಯಾದುದಾರರು:
ಅಬಕಾರಿ ಉಪ ನಿರೀಕ್ಷಕರು(ನಂ.1),
ಬೆಳ್ತಂಗಡಿ ವಲಯ, ಬೆಳ್ತಂಗಡಿ.

ಆರೋಪಿಗಳು:
ಯಶೋಧರ, ಬಿನ್:ಲಕ್ಷ್ಮಣ(36 ವ),
ಕಲ್ಲುಗುಡ್ಡೆ ಮನೆ, ಮೇಲಂತಬೆಟ್ಟು ಗ್ರಾಮ ಮತ್ತು ಪೋಸ್ಟ್,
ಬೆಳ್ತಂಗಡಿ.

ವಾಹನ ಮಾಲೀಕರು:
ಯುನೈಟೆಡ್ ಮೋಟಾರ್ಸ್, ಎನ್.ಎ.ಯುನೈಟೆಡ್ ಬಿಲ್ಡಿಂಗ್,
ಕದ್ರಿ ರೋಡ್, ಮಂಗಳೂರು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:27-1-2009 ರಂದು ಸಂಜೆ 6-30 ಗಂಟೆ ಸಮಯದಲ್ಲಿ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಬೆಳ್ತಂಗಡಿ ತಾಲೂಕು ಮೇಲಂತಬೆಟ್ಟು ಗ್ರಾಮದ ಕಲ್ಲುಗುಡ್ಡೆ ಜಂಕ್ಷನ್‌ನಲ್ಲಿ ಸಾರಾಯಿ ಸ್ಯಾಚೆಟ್‌ಗಳನ್ನು ಮಾರಾಟ ಮಾಡುತ್ತಿರುತ್ತಾರೆ ಎಂದು ಸಾರ್ವಜನಿಕರು ದೂರಿರುವ ಹಿನ್ನಲೆಯಲ್ಲಿ ಸದರಿ ಸ್ಥಳದಲ್ಲಿ ಗಸ್ತು ತಿರುಗುತ್ತಿರುವಾಗ, ಬೆಳ್ತಂಗಡಿ ಪೇಟೆಯ ಚರ್ಚ್ ರೋಡ್‌ನಿಂದ ಮೇಲಂತಬೆಟ್ಟು ಕಡೆಗೆ ಬರುತ್ತಿದ್ದ ಎಲ್.ಎಂ.ಎಲ್. ವೆಸ್ಪಾ ಸ್ಕೂಟರ್ ಸಂಖ್ಯೆ: ಕೆಎ-19-ಇ-5267 ಬರುತ್ತಿರುವುದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ, ಸದರಿ ವಾಹನವನ್ನು ನಿಲ್ಲಿಸಿ ಚಾಲಕನು ಅತೀ ಗಾಬರಿಯಿಂದ ಹೆದರಿ ನಡುಗಲಾರಂಭಿಸಿದನು. ಸಂಶಯಗೊಂಡು ವಾಹನವನ್ನು ತಪಾಸಣೆ ಮಾಡುವ ಮೊದಲು ಸದರಿ ಸ್ಥಳದಲ್ಲಿ ಸಾಕ್ಷಿದಾರರನ್ನು ಹುಡುಕಲಾಗಿ, ಯಾರೂ ಮುಂದೆ ಬಾರದ ಕಾರಣ ಹಾಗೂ ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆಯಲು ಕಾಲಾವಕಾಶ ಇಲ್ಲದಿದ್ದುದರಿಂದ, ಸ್ಥಳದಲ್ಲಿಯೇ ಸರ್ಚ್ ಮೆಮೊವನ್ನು ತಯಾರಿಸಿ, ಸಿಬ್ಬಂದಿಯವರನ್ನೇ ಸಾಕ್ಷಿದಾರರನ್ನಾಗಿ ಮಾಡಿಕೊಂಡು ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ, ತನ್ನ ಹೆಸರು ಯಶೋಧರ, ಬಿನ್:ಲಕ್ಷ್ಮಣ (36 ವ), ಕಲ್ಲುಗುಡ್ಡೆ ಮನೆ, ಮೇಲಂತಬೆಟ್ಟು ಗ್ರಾಮ ಮತ್ತು ಪೋಸ್ಟ್, ಬೆಳ್ತಂಗಡಿ ತಾಲೂಕು ಎಂದು ತಿಳಿಸಿದನು. ಆತನನ್ನು ಶೋಧಿಸಿದಾಗ, ಆತನಲ್ಲಿ ಒಂದು ನೋಕಿಯೊ ಮೊಬೈಲ್ ಮತ್ತು ನಗದು ಹಣ ರೂ.220/- ಇದ್ದು, ನಂತರ ವಾಹನವನ್ನು ಶೋಧನೆ ಮಾಡಿದಾಗ ಅದರ ಡೆಸ್ಕ್ ಬಾಕ್ಸ್‌ನಲ್ಲಿ ಸಾರಾಯಿ ಸ್ಯಾಚೆಟ್‌ಗಳು ಹಾಗೂ ಮದ್ಯದ ಸೀಸೆಗಳು ಕಂಡು ಬಂತು. ಅದನ್ನು ಎಣಿಸಿ ನೋಡಿದಾಗ 100 ಎಂ.ಎಲ್.ನ 20 ಸಾರಾಯಿ ಸ್ಯಾಚೆಟ್‌ಗಳು ಮತ್ತು 180 ಎಂ.ಎಲ್.ನ ವನ್‌ಅಪ್ ಲೇಬಲ್ ಇರುವ ಮದ್ಯ ತುಂಬಿರುವ 8 ಸೀಸೆಗಳು ಇರುವುದು ಕಂಡು ಬಂತು. ಸಾರಾಯಿ ಸ್ಯಾಚೆಟ್‌ಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ದಿ ಮೈಸೂರು ಶುಗರ್ ಕಂಪೆನಿ ಲಿಮಿಟೆಡ್, ಮಂಡ್ಯ ಎಂದು ಕೆಂಪು ಅಕ್ಷರದಲ್ಲಿ ಮುದ್ರಿತವಾಗಿದ್ದು, ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಮತ್ತು ಮದ್ಯದ ಸೀಸೆಗಳನ್ನು ಮೇಲಂತ ಪರಿಸರದಲ್ಲಿ ಇರುವ ವ್ಯಕ್ತಿಗಳಿಗೆ ಮಾರಾಟ ಮಾಡಲೆಂದು ಕೊಂಡೊಯ್ಯುವುದು ಎಂದು ಆರೋಪಿ ತಿಳಿಸಿರುತ್ತಾನೆ. ನಂತರ ದೊರೆತ ಸಾರಾಯಿ ಸ್ಯಾಚೆಟ್‌ಗಳಿಂದ ಮತ್ತು ಮದ್ಯದ ಸೀಸೆಗಳಿಂದ ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಳನ್ನು ತೆಗೆದು, ಅದಕ್ಕೆ ಬಟ್ಟೆಯಿಂದ ಸುತ್ತಿ ಅರಗು ಸೀಲ್ ಹಾಕಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು. ಮಾದರಿ ಮೊಹರನ್ನು ಸ್ಥಳದಲ್ಲಿಯೇ ತಯಾರಿಸಲಾಯಿತು. ನಂತರ ಆರೋಪಿಯ ಹೆಸರು ಮತ್ತು ವಿಳಾಸವಿರುವ ಗುರುತಿನ ಚೀಟಿಯನ್ನು ತಯಾರಿಸಿ ಮಾದರಿ ಸ್ಯಾಚೆಟ್‌ಗಳಿಗೆ ಮತ್ತು ಮಾದರಿ ಸೀಸೆಗಳಿಗೆ ಅಂಟಿಸಲಾಯಿತು. ಸದರಿ ವಾಹನವನ್ನು ಪರಿಶೀಲಿಸಿದಾಗ, ಇದರ ಇಂಜಿನ್ ಸಂ: 676809 ಆಗಿದ್ದು, ಚಾಸೀಸ್ ನಂಬರು ಕಂಡು ಬಂದಿರುವುದಿಲ್ಲ. ಸದರಿ ವಾಹನದಲ್ಲಿ ಯಾವುದೇ ರಹದಾರಿ ಅಥವಾ ಬಿಲ್ಲುಗಳು ದೊರಕದ ಕಾರಣ, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 15 ರ ಪ್ರಕಾರ ಅಪರಾಧವಾಗಿದ್ದು, ಕಲಂ 32, 34 ರ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದರಿ ಸೊತ್ತುಗಳನ್ನು ಇಲಾಖಾ ವಶಕ್ಕೆ

ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಆರೋಪಿಯನ್ನು ದಸ್ತಗಿರಿ ಮಾಡಿ, ಆರೋಪಿಯ ವಿರುದ್ಧ ತಕ್ಷೀರು ಸಂ:19/2008-09 ದಿ: 27-01-2009 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ಉಪ ನಿರೀಕ್ಷಕರು(ನಂ.1), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರ ತನಿಖಾ ವರದಿ ಸಂಖ್ಯೆ: ಸಿಆರ್‌ಎಂ/35/2008-09 ದಿ:6-6-2009 ರ ವರದಿಯಲ್ಲಿ, ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳ ಹಾಗೂ ಮದ್ಯದ ಸೀಸೆಗಳಿಂದ ತೆಗೆದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಲಾಗಿದ್ದು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ವರದಿ ಸಂಖ್ಯೆ:ಇ-106-8 ದಿ:6-4-2009 ರ ವರದಿಯಲ್ಲಿ ಸಾರಾಯಿಯ ಮದ್ಯಸಾರ ಪ್ರಮಾಣ ಶೇ.24 ಮತ್ತು ಮದ್ಯದ ಮದ್ಯಸಾರ ಪ್ರಮಾಣ ಶೇ.41-5 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಎಲ್.ಎಂ.ಎಲ್. ವೆಸ್ಪಾ ಮೋಟಾರು ಸೈಕಲ್ ಸಂಖ್ಯೆ: ಕೆಎ-19-ಇ-5267 ರ ಮಾಲೀಕತ್ವದ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಇವರಲ್ಲಿ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪಡೆಯಲು ಸಂಪರ್ಕಿಸಿ, ಅವರಿಂದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪಡೆದು, ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯ ಪ್ರಕಾರ ಸದರಿ ವಾಹನದ ನೋಂದಣಿ ಮಾಲೀಕರಾದ ಯುನೈಟೆಡ್ ಮೋಟಾರ್ಸ್, ಎನ್.ಎ.ಯುನೈಟೆಡ್ ಬಿಲ್ಡಿಂಗ್, ಕದ್ರಿ ರೋಡ್, ಮಂಗಳೂರು ಆಗಿರುತ್ತದೆ ಹಾಗೂ ಚಾಸೀಸ್ ನಂಬರು ಸಿಹೆಚ್ 678392 ಮತ್ತು ಇಂಜಿನ್ ನಂ:ಸಿಎನ್ 6709 ಆಗಿರುತ್ತದೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಇಂಜಿನ್ ನಂಬರಿಗೆ ಒಂದಕ್ಕೊಂದು ತಾಳೆಯಾಗಿರುತ್ತದೆ. ಅಬಕಾರಿ ಉಪ ನಿರೀಕ್ಷಕರು(ನಂ.1), ಬೆಳ್ತಂಗಡಿ ವಲಯ ಇವರು ವಾಹನ ನೋಂದಣಿ ಮಾಲೀಕರಾದ ಯುನೈಟೆಡ್ ಮೋಟಾರ್ಸ್, ಎನ್.ಎ.ಯುನೈಟೆಡ್ ಬಿಲ್ಡಿಂಗ್, ಕದ್ರಿ ರೋಡ್, ಮಂಗಳೂರು ಇವರಿಗೆ ದಿ:25-3-2009 ರಂದು ವಾಹನವು ಅಕ್ರಮದಲ್ಲಿ ಭಾಗಿಯಾದ ಬಗ್ಗೆ ಅಬಕಾರಿ ಕಾಯಿದೆ ಕಲಂ 43ಬಿ ರಡಿ ಕಾರಣ ಕೇಳಿ ನೋಟೀಸನ್ನು ನೀಡಲಾಗಿದ್ದು, ಆರ್.ಸಿ. ಮಾಲೀಕರು ದಿ:28-3-2009 ರಂದು ಕಾರಣ ಕೇಳಿ ನೋಟೀಸಿಗೆ ಉತ್ತರವನ್ನು ನೀಡಿರುತ್ತಾರೆ. ಸದರಿ ಉತ್ತರದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ದಿ:27-6-1995 ರಂದು ಶ್ರೀ.ಹಸನಬ್ಬ, ಬಿನ್:ಅಬ್ದುಲ್ಲಾ, ಬಸ್‌ಸ್ಟ್ಯಾಂಡ್ ಬಳಿ, ಬೆಳ್ತಂಗಡಿ ಇವರಿಗೆ ನೀಡಿದ್ದು, ಆ ವ್ಯಕ್ತಿಗೆ ವಾಹನವನ್ನು ತನ್ನ ಹೆಸರಿಗೆ ಹಸ್ತಾಂತರಿಸಿಕೊಳ್ಳಲು ಫಾರಂ-29 ಮತ್ತು 30 ಹಾಗೂ ಮೂಲ ಆರ್.ಸಿ. ಪುಸ್ತಕವನ್ನು ಕೊಟ್ಟಿರುತ್ತೇನೆಂದು ತಿಳಿಸಿರುತ್ತಾರೆ. ಆದರೆ ಯಾವುದೇ ಅಧಿಕೃತ ದಾಖಲಾತಿಗಳನ್ನು ನೀಡಿರುವುದಿಲ್ಲ. ನಂತರ ಹಸನಬ್ಬ, ಬೆಳ್ತಂಗಡಿ ಎಂಬ ವ್ಯಕ್ತಿಯ ಬಗ್ಗೆ ಸ್ಥಳೀಯ ಪರಿಸರದಲ್ಲಿ ಹುಡುಕಿ ಕೇಳಲಾಗಿ, ಆ ಹೆಸರಿನ ವ್ಯಕ್ತಿಯ ಬಗ್ಗೆ ಯಾವುದೇ ಮಾಹಿತಿ ಲಭ್ಯವಾಗಿರುವುದಿಲ್ಲ. ಆದುದರಿಂದ ಎಲ್.ಎಂ.ಎಲ್. ವೆಸ್ಪಾ ಮೋಟಾರು ಸೈಕಲ್‌ನಲ್ಲಿ ಆರೋಪಿಯು ಅಕ್ರಮವಾಗಿ ಸಾರಾಯಿ ಮತ್ತು ಮದ್ಯವನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ತಕ್ಷೀರು ದಾಖಲಿಸಿ ಈಗಾಗಲೇ 8 ತಿಂಗಳು ಕಳೆದರೂ, ಅವರ ಕಚೇರಿಯಲ್ಲಿ ಆರೋಪಿಯಾಗಲಿ ಅಥವಾ ವಾಹನದ ಮಾಲೀಕರಾಗಲಿ ವಾಹನದ ಹಾಗೂ ಸೊತ್ತುಗಳ ಬಿಡುಗಡೆಗಾಗಿ ಯಾರೂ ಅಧಿಕೃತ ದಾಖಲಾತಿಗಳಿಂದ ಇದುವರೆಗೂ ಬಿಡುಗಡೆಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ. ಆದುದರಿಂದ ಸದರಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಸಾರಾಯಿ ಹಾಗೂ ಮದ್ಯವನ್ನು ನಾಶಪಡಿಸಲು ವಾಹನ, ನಗದು ಹಣ ಮತ್ತು ಮೊಬೈಲ್‌ನ್ನು ವಿಲೇವಾರಿಗೊಳಿಸಲು ಸೂಕ್ತ ಆದೇಶ ನೀಡಬೇಕೆಂದು ದಿ:06-06-2009 ರ ತನಿಖಾ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ. ಅಬಕಾರಿ ಉಪ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ವರದಿ ಸಂಖ್ಯೆ: 46/2008-09 ದಿ:30-6-2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನ ಹಾಗೂ ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಅಬಕಾರಿ ಉಪ ನಿರೀಕ್ಷಕರು(ನಂ.1), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರು ದಿ:27-1-2009 ರಂದು ದಾಖಲಿಸಿದ ಮೊಕದ್ದಮೆಗೆ ಸಂಬಂಧಿಸಿದ ಈ ಕೆಳಕಂಡ ಸೊತ್ತುಗಳ ಬಗ್ಗೆ ತಕ್ಷೀರು ದಾಖಲಿಸಿ ಈಗಾಗಲೇ 8 ತಿಂಗಳು ಕಳೆದರೂ ಆರೋಪಿಯಾಗಲಿ, ಅಥವಾ ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರಾಗಲಿ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಅಧಿಕೃತ ದಾಖಲಾತಿಗಳೊಂದಿಗೆ ಸದರಿ ಸೊತ್ತುಗಳನ್ನು ತನ್ನದೆಂದು ಯಾರೂ ಸಹಾ ಅರ್ಜಿ ಇದುವರೆಗೂ ಸಲ್ಲಿಸಿರುವುದಿಲ್ಲ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳು;

1) ಎಲ್.ಎಂ.ಎಲ್. ವೆಸ್ಪಾ ಸ್ಕೂಟರ್ ಸಂಖ್ಯೆ: ಕೆಎ-19-ಇ-5267
2) 100 ಎಂ.ಎಲ್.ನ 20 ಸಾರಾಯಿ ಸ್ಯಾಚೆಟ್‌ಗಳು
3) 180 ಎಂ.ಎಲ್.ನ ವನ್ ಅಪ್ ವಿಸ್ಕಿ 8 ಸೀಸೆಗಳು
4) ನಗದು ಹಣ ರೂ.220/-
5) ನೋಕಿಯೊ ಮೊಬೈಲ್ ಫೋನ್:1

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತವೆ.

1) **ಮೊದಲನೇ ವಿವಾದಾಂಶ:** ದಿ: 27-1-2009 ರಂದು ಎಲ್.ಎಂ.ಎಲ್. ವೆಸ್ಪಾ ಸ್ಕೂಟರ್ ಸಂಖ್ಯೆ: ಕೆಎ-19-ಇ-5267 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯ ಮತ್ತು ಸಾರಾಯಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) **ಎರಡನೇ ವಿವಾದಾಂಶ:** ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯ ಮತ್ತು ಸಾರಾಯಿ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) **ಮೂರನೇ ವಿವಾದಾಂಶ:** ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀ.ಕೆ.ಟಿ.ಧರ್ಮಪ್ಪ, ಅಬಕಾರಿ ಉಪ ನಿರೀಕ್ಷಕರು(ನಂ.1), ಬೆಳ್ತಂಗಡಿ ವಲಯ ಇವರು ದಿ:11-8-09 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ದಿ:10-6-2006 ರಿಂದ ಇಲ್ಲಿಯವರೆಗೆ ಬೆಳ್ತಂಗಡಿ ವಲಯ ಕಚೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ದಿನಾಂಕ:27-1-2009 ರಂದು ಸಂಜೆ 6-30 ಗಂಟೆ ಸಮಯದಲ್ಲಿ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರೊಂದಿಗೆ ಬೆಳ್ತಂಗಡಿ ತಾಲೂಕು ಮೇಲಂತಬೆಟ್ಟು ಗ್ರಾಮದ ಕಲ್ಲುಗುಡ್ಡೆ ಜಂಕ್ಷನ್‌ನಲ್ಲಿ ಸಾರಾಯಿ ಸ್ಯಾಚೆಟ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ ಎಂದು ಸಾರ್ವಜನಿಕರು ದೂರಿರುವ ಹಿನ್ನಲೆಯಲ್ಲಿ ಸದರಿ ಸ್ಥಳದಲ್ಲಿ ಗಸ್ತು ತಿರುಗುತ್ತಿರುವಾಗ, ಬೆಳ್ತಂಗಡಿ ಪೇಟೆಯ ಚರ್ಚ್ ರೋಡ್‌ನಿಂದ ಮೇಲಂತಬೆಟ್ಟು ಕಡೆಗೆ ಬರುತ್ತಿದ್ದ ಎಲ್.ಎಂ.ಎಲ್. ವೆಸ್ಪಾ ಸ್ಕೂಟರ್ ಸಂಖ್ಯೆ: ಕೆಎ-19-ಇ-5267 ಬರುತ್ತಿರುವುದನ್ನು ಕಂಡು ನಿಲ್ಲಿಸಲು ಸೂಚನೆ ನೀಡಿದಾಗ, ಸದರಿ ವಾಹನವನ್ನು ನಿಲ್ಲಿಸಿ ಚಾಲಕನು ಅತೀ ಗಾಬರಿಯಿಂದ ಹೆದರಿ ನಡುಗಲಾರಂಭಿಸಿದನು. ಸಂಶಯಗೊಂಡು ವಾಹನವನ್ನು ತಪಾಸಣೆ ಮಾಡುವ ಮೊದಲು ಸದರಿ ಸ್ಥಳದಲ್ಲಿ ಸಾಕ್ಷಿದಾರರನ್ನು ಹುಡುಕಲಾಗಿ, ಯಾರೂ ಮುಂದೆ ಬಾರದ ಕಾರಣ ಮಾನ್ಯ ನ್ಯಾಯಾಲಯದಿಂದ ಸರ್ಚ್ ವಾರಂಟ್ ಪಡೆಯಲು ಕಾಲಾವಕಾಶವಿಲ್ಲದಿರುವುದರಿಂದ, ಸ್ಥಳದಲ್ಲಿಯೇ ಸರ್ಚ್ ಮೆಮೊವನ್ನು ತಯಾರಿಸಿ ಸಿಬ್ಬಂದಿಯವರನ್ನೇ ಸಾಕ್ಷಿದಾರರನ್ನಾಗಿ ಮಾಡಿಕೊಂಡು, ಸದರಿ ವ್ಯಕ್ತಿಯನ್ನು ವಿಚಾರಿಸಿದಾಗ, ತನ್ನ ಹೆಸರು ಯಶೋಧರ, ಬಿನ್:ಲಕ್ಷ್ಮಣ (36 ವ), ಕಲ್ಲುಗುಡ್ಡೆ ಮನೆ, ಮೇಲಂತಬೆಟ್ಟು ಗ್ರಾಮ ಮತ್ತು ಪೋಸ್ಟ್, ಬೆಳ್ತಂಗಡಿ ತಾಲೂಕು ಎಂದು ತಿಳಿಸಿದನು. ಆತನನ್ನು ಶೋಧಿಸಿದಾಗ, ಆತನಲ್ಲಿ ಒಂದು ನೋಕಿಯೊ ಮೊಬೈಲ್ ಮತ್ತು ನಗದು ಹಣ ರೂ.220/- ಇದ್ದು, ವಾಹನವನ್ನು ಶೋಧನೆ ಮಾಡಿದಾಗ ಅದರ ಡೆಸ್ಕ್ ಬಾಕ್ಸ್‌ನಲ್ಲಿ ಸಾರಾಯಿ ಸ್ಯಾಚೆಟ್‌ಗಳು ಹಾಗೂ ಮದ್ಯದ ಸೀಸೆಗಳು ಇರುವುದು ಕಂಡು ಬಂತು. ಅದನ್ನು ಎಣಿಸಿ ನೋಡಿದಾಗ 100 ಎಂ.ಎಲ್.ನ 20 ಸಾರಾಯಿ ಸ್ಯಾಚೆಟ್‌ಗಳು ಮತ್ತು 180 ಎಂ.ಎಲ್.ನ ವನ್‌ಅಪ್ ಲೇಬಲ್ ಇರುವ ಮದ್ಯ ತುಂಬಿರುವ 8 ಸೀಸೆಗಳು ಇರುವುದು ಕಂಡು ಬಂತು. ಸಾರಾಯಿ ಸ್ಯಾಚೆಟ್‌ಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ, ದಿ ಮೈಸೂರು ಶುಗರ್ ಕಂಪೆನಿ ಲಿಮಿಟೆಡ್, ಮಂಡ್ಯ ಎಂದು ಕೆಂಪು ಅಕ್ಷರದಲ್ಲಿ ಮುದ್ರಿತವಾಗಿದ್ದು, ಸದರಿ ಸಾರಾಯಿ ಸ್ಯಾಚೆಟ್‌ಗಳನ್ನು ಮತ್ತು ಮದ್ಯದ ಸೀಸೆಗಳನ್ನು ಮೇಲಂತ ಪರಿಸರದಲ್ಲಿ ಇರುವ ವ್ಯಕ್ತಿಗಳಿಗೆ ಮಾರಾಟ ಮಾಡಲೆಂದು ಕೊಂಡೊಯ್ಯುವುದು ಎಂದು ಆರೋಪಿ ತಿಳಿಸಿರುತ್ತಾನೆ. ನಂತರ ದೊರೆತ ಸಾರಾಯಿ ಸ್ಯಾಚೆಟ್‌ಗಳಿಂದ ಮತ್ತು ಮದ್ಯದ ಸೀಸೆಗಳಿಂದ ರಾಸಾಯನಿಕ ಪರೀಕ್ಷೆಗಾಗಿ ಮಾದರಿಗಳನ್ನು ತೆಗೆದು, ಅದಕ್ಕೆ ಬಟ್ಟೆಯಿಂದ ಸುತ್ತಿ ಅರಗು ಹಾಕಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು. ಮಾದರಿ ಮೊಹರನ್ನು ಸ್ಥಳದಲ್ಲಿಯೇ ತಯಾರಿಸಲಾಯಿತು. ನಂತರ ಆರೋಪಿಯ ಹೆಸರು ಮತ್ತು ವಿಳಾಸವಿರುವ ಚೀಟಿಯನ್ನು ತಯಾರಿಸಿ ಮಾದರಿ ಸ್ಯಾಚೆಟ್‌ಗಳಿಗೆ ಮತ್ತು ಮಾದರಿ ಸೀಸೆಗಳಿಗೆ ಅಂಟಿಸಲಾಯಿತು. ಸದರಿ ವಾಹನವನ್ನು ಪರಿಶೀಲಿಸಿದಾಗ, ಇದರ ಇಂಜಿನ್ ಸಂ: 676809 ಆಗಿದ್ದು, ಚಾಸೀಸ್ ನಂಬರು ಕಂಡು ಬಂದಿರುವುದಿಲ್ಲ. ಇದು ಅಕ್ರಮ ಮದ್ಯ ಹಾಗೂ ಸಾರಾಯಿ ಸಾಗಾಣಿಕೆಯಾಗಿರುವುದರಿಂದ, ಸದರಿ ಸೊತ್ತುಗಳನ್ನು ಹಾಗೂ ಆರೋಪಿಯನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ತಯಾರಿಸಲಾಯಿತು. ಮಹಜರನ್ನು ನಿಶಾನೆ ಪಿ-1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು ಗುರುತಿಸಲಾಯಿತು. ಮಾದರಿ ಮೊಹರನ್ನು ನಿಶಾನೆ ಪಿ-2 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-2ಎ ಎಂದು ಗುರುತಿಸಲಾಯಿತು. ನಂತರ ಸೊತ್ತುಗಳನ್ನು ಕಚೇರಿಗೆ ತಂದು ಪ್ರಥಮ ಮಾಹಿತಿಯನ್ನು ತಯಾರಿಸಿ ಆರೋಪಿಯೊಂದಿಗೆ ದಿ:28-1-2009 ರಂದು ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ತದನಂತರ

ವಾಹನದ ಮಾಲಿಕತ್ವದ ಬಗ್ಗೆ ಸಾರಿಗೆ ಅಧಿಕಾರಿಗಳನ್ನು ಸಂಪರ್ಕಿಸಿ, ಅವರಿಂದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪಡೆದಿರುತ್ತೇನೆ. ವಾಹನದ ಬಿ ವಹಿಯಲ್ಲಿ ನಮೂದಿಸಿದ ಮಾಲೀಕರಾದ ಯುನೈಟೆಡ್ ಮೋಟಾರ್ಸ್, ಯುನೈಟೆಡ್ ಬಿಲ್ಡಿಂಗ್, ಕದ್ರಿ ರೋಡ್, ಮಂಗಳೂರು ಇವರಿಗೆ ತಮ್ಮ ಕಚೇರಿಯಿಂದ ಕಾರಣ ಕೇಳಿ ನೋಟೀಸನ್ನು ನೀಡಿರುತ್ತೇನೆ. ಅವರು ಉತ್ತರವನ್ನು ನೀಡುತ್ತಾ, ದಿ:27-6-1995 ರಂದು ಹಸನಬ್ಬ ಇವರಿಗೆ ಮಾರಾಟ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದ್ರಿ ವಾಹನಕ್ಕೂ ಹಾಗೂ ತನಗೂ ಯಾವುದೇ ಸಂಬಂಧಪಿಲ್ಲವೆಂದು ಸ್ಪಷ್ಟೀಕರಣ ನೀಡಿರುತ್ತಾರೆ. ವಾಹನವನ್ನು ಪಡೆದುಕೊಂಡ ವ್ಯಕ್ತಿಯಾದ ಹಸನಬ್ಬ ಇವರನ್ನು ಪತ್ತೆ ಹಚ್ಚಲು ಪ್ರಯತ್ನಿಸಲಾಗಿ, ಸದರಿ ಹೆಸರಿನ ವ್ಯಕ್ತಿ ಆ ವಿಳಾಸದಲ್ಲಿ ಇಲ್ಲವೆಂದು ತಿಳಿದು ಬಂದಿದ್ದು ಹಾಗೂ ಪ್ರಕರಣದಲ್ಲಿ ತೆಗೆದ ಮದ್ಯ ಹಾಗೂ ಸಾರಾಯಿ ಸ್ಯಾಚೆಟ್‌ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿ ವರದಿಯನ್ನು ಪಡೆದಿರುತ್ತೇನೆ. ವಾಹನದ ಮಾಲಿಕತ್ವವನ್ನು ಕೋರಿ ಯಾರೂ ಮುಂದೆ ಬಾರದ ಕಾರಣ, ವಾಹನದ ಮಾಲಿಕತ್ವವನ್ನು ಪತ್ತೆ ಮಾಡುವ ಸಂಭವವಿಲ್ಲವೆಂದು ಖಚಿತವಾಗಿರುವುದರಿಂದ, ವಾಹನ ಹಾಗೂ ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಸ್ತಾವನೆಯನ್ನು ದಿ:6-6-2009 ರಂದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆ. ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ-3 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-3ಎ ಎಂದು ಗುರುತಿಸಲಾಯಿತು. ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ನಿಶಾನೆ ಪಿ-4 ಎಂದು, ರಾಸಾಯನಿಕ ವರದಿಯನ್ನು ನಿಶಾನೆ ಪಿ-5 ಎಂದು, ತನಿಖಾ ವರದಿಯನ್ನು ನಿಶಾನೆ ಪಿ-6 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-6ಎ ಎಂದು ಗುರುತಿಸಲಾಯಿತು. ಪ್ರಕರಣಕ್ಕೆ ಸಂಬಂಧಿಸಿದಂತೆ ಅಂತಿಮ ದೋಷಾರೋಪಣ ಪಟ್ಟಿಯನ್ನು ಮಾನ್ಯ ನ್ಯಾಯಾಲಯಕ್ಕೆ ದಿನಾಂಕ: 9-7-2009 ರಂದು ಸಲ್ಲಿಸಲಾಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:27-1-2009 ರಂದು ಜಪ್ತುಪಡಿಸಿಕೊಂಡಿರುವ ಎಲ್.ಎಂ.ಎಲ್. ವೆಸ್ಪಾ ಸ್ಕೂಟರ್ ಸಂಖ್ಯೆ: ಕೆಎ-19-ಇ-5267 ರಲ್ಲಿ ಅಕ್ರಮವಾಗಿ 1-440 ಲೀಟರ್ ಮದ್ಯ ಹಾಗೂ 100 ಎಂ.ಎಲ್.ನ 20 ಸಾರಾಯಿ ಸ್ಯಾಚೆಟ್‌ಗಳನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ ಸಂಬಂಧಿಸಿ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣಕ್ಕೆ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯತೆವಿರುವುದಿಲ್ಲ.

1965ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ದವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ, ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಅಬಕಾರಿ ಉಪ ನಿರೀಕ್ಷಕರು(ನಂ.1), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಯು ಅಕ್ರಮವಾಗಿ ಮದ್ಯ ಹಾಗೂ ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಣಿಕೆ ಮಾಡುವಾಗ ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯ ಹಾಗೂ ಸಾರಾಯಿ ಎಂದು ದೃಢಪಟ್ಟಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾನೂನಿನ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಎಲ್.ಎಂ.ಎಲ್. ವೆಸ್ಪಾ ಸ್ಕೂಟರ್ ಸಂಖ್ಯೆ: ಕೆಎ-19-ಇ-5267ನ್ನು ವಶಪಡಿಸಿಕೊಂಡು ಸುಮಾರು 8 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ಬೆಳ್ತಂಗಡಿ ವಲಯ ಕಚೇರಿಯಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರು ಹಾಗೂ ಆರೋಪಿಯು ಕೂಡಾ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ಅಬಕಾರಿ ಉಪ ನಿರೀಕ್ಷಕರು(ನಂ.1), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರು ನೀಡಲಾಗಿರುವ ಕಾರಣ ಕೇಳಿ ನೋಟೀಸಿಗೆ ಅನುಗುಣವಾಗಿ ಯುನೈಟೆಡ್ ಮೋಟಾರ್ಸ್, ಎನ್.ಎ.ಯುನೈಟೆಡ್ ಬಿಲ್ಡಿಂಗ್, ಕದ್ರಿ ರೋಡ್, ಮಂಗಳೂರು ಇವರು ತನ್ನ ವಾಹನವನ್ನು ದಿ:27-6-1995 ರಂದು ಹಸ್ತಾಂತರಿಸಿರುತ್ತೇನೆ. ಫಾರಂ-29 ಮತ್ತು 30 ಕ್ಕೆ ಸಹಿ ಮಾಡಿಕೊಂಡಿರುತ್ತೇನೆ ಎಂದು

ತಿಳಿಸಿರುತ್ತಾರೆ. ಆದರೆ ಅಧಿಕೃತ ದಾಖಿಲಾತಿಗಳು ಹಾಜರುಪಡಿಸಿರುವುದಿಲ್ಲ. ಆದುದರಿಂದ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಮದ್ಯ ಮತ್ತು ಸಾರಾಯಿ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ ಹಾಗೂ ದಸ್ತಗಿರಿಯಾದ ಆರೋಪಿಯಾದ ಯಶೋಧರ ಇವರು ಖುದ್ದಾಗಿ ಈ ಪ್ರಾಧಿಕಾರದ ಮುಂದೆ ಹಾಜರಾಗಿರುವುದಿಲ್ಲ. ಆದುದರಿಂದ ವಾಹನ ಮಾಲೀಕರೇ ಸ್ವತ: ತನ್ನ ಮೋಟಾರು ಸೈಕಲ್‌ನಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಮದ್ಯ ಹಾಗೂ ಸಾರಾಯಿಯನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾವು ಈಗಾಗಲೇ 8 ತಿಂಗಳು ಕಳೆದರೂ ಅದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಆರೋಪಿತರು ಅಕ್ರಮ ಮದ್ಯ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಎಲ್.ಎಂ.ಎಲ್. ವೆಸ್ಪಾ ಸ್ಕೂಟರ್ ಸಂಖ್ಯೆ:ಕೆಎ-19-ಇ-5267 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/227/ಡಿಟಿಸಿಆರ್/2008-09 ದಿನಾಂಕ:17ನೇ ಆಗಸ್ಟ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ಉಪ ನಿರೀಕ್ಷಕರು(ನಂ.1), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರ ತಕ್ಷೀರು ಸಂ: 19/2008-09 ದಿ:27-1-2009 ರಲ್ಲಿ ಜಪ್ತುಪಡಿಸಿರುವ ಈ ಕೆಳಕಂಡ ಸೊತ್ತುಗಳನ್ನು ನಿಯಮ 43(ಸಿ) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳು:

1) ಎಲ್.ಎಂ.ಎಲ್. ವೆಸ್ಪಾ ಸ್ಕೂಟರ್ ಸಂಖ್ಯೆ: ಕೆಎ-19-ಇ-5267
2) 100 ಎಂ.ಎಲ್.ನ 20 ಸಾರಾಯಿ ಸ್ಯಾಚೆಟ್‌ಗಳಿಂದ ರಾಸಾಯನಿಕ ವಿಶ್ಲೇಷಣೆಗೆ ತೆಗೆದ ಮಾದರಿಗಳನ್ನು ಹೊರತುಪಡಿಸಿ, ಉಳಿದ 15 ಸಾರಾಯಿ ಸ್ಯಾಚೆಟ್‌ಗಳು:1-500 ಲೀ. ಸಾರಾಯಿ.
3) 180 ಎಂ.ಎಲ್.ನ ವನ್‌ಅಪ್ ವಿಸ್ಕಿ 8 ಸೀಸೆಗಳಿಂದ ರಾಸಾಯನಿಕ ವಿಶ್ಲೇಷಣೆಗೆ ತೆಗೆದ ಮಾದರಿಗಳನ್ನು ಹೊರತುಪಡಿಸಿ, ಉಳಿದ 6 ಮದ್ಯದ ಸೀಸೆಗಳು: 1-080 ಲೀ. ಮದ್ಯ.
4) ನಗದು ಹಣ ರೂ.220/-
5) ನೋಕಿಯೊ ಮೊಬೈಲ್ ಫೋನ್:1

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯ ಹಾಗೂ ಸಾರಾಯಿಯನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಇಎಸ್/2007 ದಿ:13-7-2007 ರಂತೆ ಮಾರಾಟ ಮಡಲು ನಿಷೇಧಿಸಿದ್ದು, ಮುಟ್ಟುಗೋಲು ಹಾಕಿಕೊಳ್ಳಲಾದ ಸೊತ್ತುಗಳನ್ನು ನಾಶಪಡಿಸುವಂತೆ ಆದೇಶ ಇರುವುದರಿಂದ, ಸದ್ರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರ ಅನ್ವಯ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ಸಮಕ್ಷಮ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರುರವರ ಸುತ್ತೋಲೆ ಸಂಖ್ಯೆ:ಇಸಿಸಿ/73/ಸಿಆರ್‌ಎಂ/2004 ದಿ:12-9-2005ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ, ಮದ್ಯವನ್ನು ಸೀಸೆಗಳ ಸಮೇತ ಹಾಗೂ ಸಾರಾಯಿಯನ್ನು ನಾಶಪಡಿಸಲು ಆದೇಶಿಸಿದೆ ಹಾಗೂ ನೋಕಿಯೊ ಮೊಬೈಲ್ ಫೋನ್‌ನ್ನು ವಿಲೇವಾರಿಗೊಳಿಸಲು ಹಾಗೂ ನಗದು ಹಣ ರೂ.220/- ನ್ನು ಚಲನ್ ಮೂಲಕ ಸರಕಾರಕ್ಕೆ ಪಾವತಿಸಿ ವರದಿ ಒಪ್ಪಿಸಲು ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:17-08-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಪಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1: ಶ್ರೀ.ಕೆ.ಟಿ.ಧರ್ಮಪ್ಪ, ಅಬಕಾರಿ ಉಪ ನಿರೀಕ್ಷಕರು(ನಂ.1), ಬೆಳ್ತಂಗಡಿ ವಲಯ, ಬೆಳ್ತಂಗಡಿ.

ಅನುಬಂಧ-2

ಪಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಮಹಜರು.

ನಿಶಾನೆ ಪಿ-1ಎ : ಮಹಜರಿನಲ್ಲಿ ಪಿರ್ಯಾದುದಾರರ ಸಹಿ

ನಿಶಾನೆ ಪಿ-2 : ಮಾದರಿ ಮೊಹರು

ನಿಶಾನೆ ಪಿ-2ಎ : ಮಾದರಿ ಮೊಹರಿನಲ್ಲಿರುವ ಪಿರ್ಯಾದುದಾರರ ಸಹಿ

ನಿಶಾನೆ ಪಿ-3 : ಪ್ರಥಮ ಮಾಹಿತಿ ವರದಿ

ನಿಶಾನೆ ಪಿ-3ಎ : ಪ್ರಥಮ ಮಾಹಿತಿ ವರದಿಯಲ್ಲಿ ಪಿರ್ಯಾದುದಾರರ ಸಹಿ

ನಿಶಾನೆ ಪಿ-4 : ಬಿ ಅಬ್‌ಸ್ಟ್ರ್ಯಾಕ್ಟ್ ವರದಿ.

ನಿಶಾನೆ ಪಿ-5: ರಾಸಾಯನಿಕ ವಿಶ್ಲೇಷಣಾ ವರದಿ

ನಿಶಾನೆ ಪಿ-6: ತನಿಖಾ ವರದಿ

ನಿಶಾನೆ ಪಿ-6ಎ : ತನಿಖಾ ವರದಿಯಲ್ಲಿರುವ ಪಿರ್ಯಾದುದಾರರ ಸಹಿ.

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.917

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/262/ಡಿಟಿಸಿಆರ್/2008-09 ದಿನಾಂಕ:17ನೇ ಆಗಸ್ಟ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿರ್ಯಾದುದಾರರು:
ಅಬಕಾರಿ ಉಪ ನಿರೀಕ್ಷಕರು(ನಂ.2),
ಬೆಳ್ತಂಗಡಿ ವಲಯ, ಬೆಳ್ತಂಗಡಿ.

ಆರೋಪಿಗಳು:
ಕೃಷ್ಣಪ್ಪ ಪೂಜಾರಿ (45 ವ),
ಕಿಲ್ಲೂರು ಮನೆ, ಮಿತ್ತಬಾಗಿಲು ಗ್ರಾಮ,
ಬೆಳ್ತಂಗಡಿ.

ವಾಹನ ಮಾಲೀಕರು:
ಪದ್ಮನಾಭ ಪೂಜಾರಿ, ಬಿನ್:ವೆಂಕಪ್ಪ ಪೂಜಾರಿ, ವಲ್ಲಿಪಾಡಿ ಕೊಪ್ಪಳ ಹೌಸ್, ರೇಂಜ್ ಆಫೀಸಿನ ಹಿಂದುಗಡೆ, ಮೂಡಬಿದ್ರೆ, ಮಂಗಳೂರು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:21-02-2009 ರಂದು ಸಂಜೆ 5-00 ಗಂಟೆ ಸಮಯದಲ್ಲಿ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಬೆಳ್ತಂಗಡಿ ತಾಲೂಕು ನಾವೂರು ಇಂದಬೆಟ್ಟು ರಸ್ತೆಯಲ್ಲಿ ಗಸ್ತು ತಿರುಗುತ್ತಿರುವಾಗ, ನಾವೂರಿನಿಂದ ಇಂದಬೆಟ್ಟು ಕಡೆಗೆ ಹೋಗುತ್ತಿದ್ದ ಮೋಟಾರು ಸೈಕಲ್‌ನ ಪೆಟ್ರೋಲ್ ಟ್ಯಾಂಕ್‌ನ ಮೇಲೆ ಪ್ಲಾಸ್ಟಿಕ್ ಗೋಣಿ ಚೀಲದ ಕಟ್ಟು ಒಂದು ಇರುವುದು ಕಂಡು ಬಂತು. ಅನುಮಾನದ ಮೇರೆಗೆ ಸದರಿ ದ್ವಿಚಕ್ರ ವಾಹನವನ್ನು ನಿಲ್ಲಿಸಲು ಸೂಚನೆ ನೀಡಿದಾಗ, ಬೈಕ್ ಸವಾರನು ಮೋಟಾರು ಸೈಕಲನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಹೋಗಲು ಪ್ರಯತ್ನಿಸಿದಾಗ, ಆತನನ್ನು ಬೆನ್ನಟ್ಟಿ ಒಂದೆರಡು ಕಿ.ಮೀ.ಗಳಷ್ಟು ದೂರ ಹೋದ ನಂತರ ಸದರಿ ಸವಾರನು ಪ್ಲಾಸ್ಟಿಕ್ ಚೀಲದ ಪೊಟ್ಟಣವನ್ನು ಮಾರ್ಗದ ಬದಿಗೆ ಎಸೆದು ಬೈಕನ್ನು ಮಾರ್ಗದ ಬದಿಯಲ್ಲಿ ಬಿಟ್ಟು ಪಕ್ಕದ ಗುಡ್ಡದಲ್ಲಿ ಪರಾರಿಯಾಗಿರುತ್ತಾನೆ. ಓಡಿ ಹೋದ ಆರೋಪಿಯು ಕೃಷ್ಣಪ್ಪ ಪೂಜಾರಿ ಎಂದು ತಿಳಿದು ಬಂದಿರುತ್ತದೆ. ಸದರಿ ಬೈಕ್ ಹಾಗೂ ಆರೋಪಿಯು ಎಸೆದಿರುವ ಕಟ್ಟನ್ನು ಶೋಧಿಸಬೇಕಾಗಿರುವುದರಿಂದ, ಮಾನ್ಯ ಘನ ನ್ಯಾಯಾಲಯದಿಂದ ಶೋಧನಾ ವಾರಂಟ್ ತರಲು

ಸಮಯಾವಕಾಶವಿಲ್ಲದಿದ್ದುದರಿಂದ, ಸದರಿ ಕಾರಣವನ್ನು ಸ್ಥಳದಲ್ಲಿಯೇ ದಾಖಲಿಸಿಕೊಂಡು ಶೋಧನೆ ಸಮಯದಲ್ಲಿ ಪಂಚರನ್ನು ಹುಡುಕಲಾಗಿ, ಯಾರೂ ಸಿಗದ ಕಾರಣ ಇಲಾಖಾ ಸಿಬ್ಬಂದಿಯವರನ್ನೇ ಪಂಚರಾಗಿರಿಸಿಕೊಂಡು ಶೋಧನೆ ನಡೆಸಲಾಯಿತು. ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿದಾಗ, ಅದರಲ್ಲಿ 180 ಎಂ.ಎಲ್.ನ ಮದ್ಯ ತುಂಬಿರುವ ಬಾಟಲ್‌ಗಳು ಹಾಗೂ ಒಡೆದ ಬಾಟಲ್‌ಗಳು ಪತ್ತೆಯಾದವು. ಅವುಗಳನ್ನು ಎಣಿಸಿ ನೋಡಲಾಗಿ, ಹೈವೆ ಫೈನ್ ವಿಸ್ಕಿ ಎಂಬ ಲೇಬಲ್ ಅಂಟಿಸಿರುವ 180 ಎಂ.ಎಲ್.ನ 32 ಸೀಸೆಗಳು ಹಾಗೂ ಒಡೆದು ಹೋದ 180 ಎಂ.ಎಲ್.ನ 16 ಬಾಟಲ್‌ಗಳು ಪತ್ತೆಯಾದವು. ಸದರಿ ಮೋಟಾರು ಬೈಕನ್ನು ಪರಿಶೀಲಿಸಲಾಗಿ, ಅದು ಬಜಾಜ್ ಕವಾಸಕಿ ಎಂಬ ವಾಹನವಾಗಿದ್ದು, ಇದರ ನೋಂದಣಿ ಸಂಖ್ಯೆ: ಕೆಎ-19-ಕ್ಯೂ-2432 ಆಗಿದೆ. ಇದರ ಚಾಸೀಸ್ ಸಂಖ್ಯೆ: ಡಿಎಫ್‌ಎಫ್‌ಬಿಹೆಚ್‌ಎಲ್ 22569 ಆಗಿರುತ್ತದೆ. ಸದರಿ ಮದ್ಯದಿಂದ 180 ಎಂ.ಎಲ್.ನ ವಿಸ್ಕಿ ತುಂಬಿದ ಎರಡು ಬಾಟ್ಲಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಮಾದರಿಗಳನ್ನು ತೆಗೆದು, ಅವುಗಳಿಗೆ ಬಟ್ಟೆ ದಾರ ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು ಹಾಗೂ ಸ್ಥಳದಲ್ಲಿಯೇ ಮಾದರಿ ಮೊಹರು ತಯಾರಿಸಲಾಯಿತು. ಸದರಿ ವಾಹನದಲ್ಲಿ ಯಾವುದೇ ರಹದಾರಿ ಅಥವಾ ಬಿಲ್ಲುಗಳು ದೊರಕದ ಕಾರಣ, ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14 ರ ಪ್ರಕಾರ ಅಪರಾಧವಾಗಿದ್ದು, ಕಲಂ 32,38ಎ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಸದರಿ ಸೊತ್ತುಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಮಹಜರನ್ನು ಸ್ಥಳದಲ್ಲಿಯೇ ಬರೆದು, ಓಡಿ ಹೋದ ಆರೋಪಿಯ ವಿರುದ್ಧ ಅಬಕಾರಿ ಉಪ ನಿರೀಕ್ಷಕರು(ನಂ.2), ಬೆಳ್ತಂಗಡಿ ವಲಯ ಇವರು ತಕ್ಷೀರು ಸಂ:6/2008-09 ದಿ:21-02-2009 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಅಬಕಾರಿ ಉಪ ನಿರೀಕ್ಷಕರು(ನಂ.2), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರ ತನಿಖಾ ವರದಿ ಸಂಖ್ಯೆ: ಸಿಆರ್‌ಎಂ/41/2008-09 ದಿ:25-5-2009 ರ ವರದಿಯಲ್ಲಿ ವಶಪಡಿಸಿಕೊಂಡಿರುವ ಮದ್ಯದ ಸೀಸೆಗಳಿಂದ ತೆಗೆದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಲಾಗಿದ್ದು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ವರದಿ ಸಂಖ್ಯೆ:ಇ-112-2 ದಿ:8-4-2009 ರ ವರದಿಯಲ್ಲಿ, ಮದ್ಯದ ಮದ್ಯಸಾರ ಪ್ರಮಾಣ ಶೇ.42 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಕವಾಸಕಿ ಮೋಟಾರು ಸೈಕಲ್ ಸಂಖ್ಯೆ: ಕೆಎ-19-ಕ್ಯೂ-2432 ರ ಮಾಲೀಕತ್ವದ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಇವರಲ್ಲಿ ಬಿ ಆಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪಡೆಯಲು ಸಂಪರ್ಕಿಸಿ, ಅವರು ದಿ: 23-3-2009 ರಂದು ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಸಲ್ಲಿಸಿರುತ್ತಾರೆ. ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯ ಪ್ರಕಾರ ಸದರಿ ವಾಹನವು ಬಜಾಜ್ ಬಾಕ್ಸರ್ ಆಗಿದ್ದು, ಇದರ ಸಂಖ್ಯೆ: ಕೆಎ-19-ಕ್ಯೂ-2432 ಆಗಿರುತ್ತದೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಚಾಸೀಸ್ ನಂಬರು ಹಾಗೂ ಇಂಜಿನ್ ನಂಬರಿಗೂ ಒಂದಕ್ಕೊಂದು ತಾಳೆಯಾಗಿರುತ್ತದೆ. ಇದರ ನೋಂದಣಿ ಆರ್.ಸಿ. ಮಾಲೀಕ ಪದ್ಮನಾಭ ಪೂಜಾರಿ, ಬಿನ್:ವೆಂಕಪ್ಪ ಪೂಜಾರಿ, ವಲ್ಲಿಪಾಡಿ ಕೊಪ್ಪಳ ಹೌಸ್, ರೇಂಜ್ ಆಫೀಸಿನ ಹಿಂದುಗಡೆ, ಮೂಡಬಿದ್ರೆ, ಮಂಗಳೂರು ಆಗಿರುತ್ತದೆ ಎಂದು ದೃಢೀಕರಣ ಪತ್ರ ನೀಡಿರುತ್ತಾರೆ ಹಾಗೂ ವಾಹನದ ಆರ್.ಸಿ.ಮಾಲೀಕರಾದ ಶ್ರೀ.ಪದ್ಮನಾಭ ಪೂಜಾರಿ ಇವರಿಗೆ ಅಬಕಾರಿ ಉಪ ನಿರೀಕ್ಷಕರು(ನಂ.2), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರು ಕಾರಣ ಕೇಳಿ ನೋಟೀಸನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಯಾವುದೇ ಉತ್ತರವನ್ನು ಸಲ್ಲಿಸಿರುವುದಿಲ್ಲ. ವಾಹನ ಮಾಲೀಕರು ಅಕ್ರಮ ದಂಧೆಯಲ್ಲಿ ಭಾಗಿಯಾಗಿರುವುದು ಸ್ಪಷ್ಟವಾಗಿರುವುದರಿಂದ, ವಶಪಡಿಸಿಕೊಂಡ ಮದ್ಯ ಹಾಗೂ ಸಾಗಾಟಕ್ಕೆ ಬಳಸಿದ ಮೋಟಾರು ಸೈಕಲನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಮದ್ಯವನ್ನು ನಾಶಪಡಿಸಲು ಮತ್ತು ಮೋಟಾರು ಸೈಕಲನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ಆದೇಶ ನೀಡಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ. ಸದರಿ ತನಿಖಾ ವರದಿಯನ್ನು ಆಧರಿಸಿ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ವರದಿ ಸಂಖ್ಯೆ: 52/2008-09 ದಿ:27-5-2009 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯ ಹಾಗೂ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಅಬಕಾರಿ ಉಪ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಈ ಪ್ರಾಧಿಕಾರವ ಆದೇಶ ಸಂ:ಎಸ್‌ಡಿಕೆ/262/ ಡಿಟಿಸಿಆರ್/2008-09 ದಿ:11-6-2009 ರಂದು ತಕ್ಷೀರಿನಲ್ಲಿ ವಶಪಡಿಸಿಕೊಂಡ ಮೋಟಾರು ಸೈಕಲನ್ನು ಹೊರತುಪಡಿಸಿ, ಉಳಿದ 5-760 ಲೀಟರ್ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ಮದ್ಯವನ್ನು ಸರಕಾರದ ಅಧಿಸೂಚನೆ ಸಂಖ್ಯೆ: ಎಫ್‌ಡಿ/06/ಪಿಇಎಸ್/2007 ದಿ: 13-7-2007 ರಂತೆ ಮಾರಾಟ ಮಾಡಲು ನಿರ್ದೇಶಿಸಿದ್ದು, ಮುಟ್ಟುಗೋಲು ಹಾಕಿಕೊಳ್ಳಲಾದ ಸೊತ್ತುಗಳನ್ನು ನಾಶಪಡಿಸಲು ಆದೇಶಿಸಿರುವುದರಿಂದ, ಸದರಿ ಅಧಿಸೂಚನೆಯನ್ನು ಅನುಸರಿಸಿ ಕಲಂ 43ಎ(3) ರನ್ವಯ ಅಬಕಾರಿ ನಿರೀಕ್ಷಕರು, ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರ ಸಮಕ್ಷಮ ಅಬಕಾರಿ ಆಯುಕ್ತರು, ಕರ್ನಾಟಕ ರಾಜ್ಯ, ಬೆಂಗಳೂರು ಇವರ ಸುತ್ತೋಲೆ ಸಂ:ಇಸಿಸಿ/73/ಸಿಆರ್‌ಎಂ /2004 ದಿ: 12-9-2005 ರ ಮಾರ್ಗಸೂಚಿಗಳನ್ನು ಅನುಸರಿಸಿ ಮಹಜರು ಜರುಗಿಸಿ ಮದ್ಯವನ್ನು ನಾಶಪಡಿಸಲು ಹಾಗೂ ಉಳಿದ ಸೀಸೆಗಳನ್ನು ವಿಲೇವಾರಿ ಮಾಡಲು ಆದೇಶ ನೀಡಲಾಗಿರುತ್ತದೆ.

ಪ್ರಾದೇಶಿಕ ಸಾರಿಗೆ ಅಧಿಕಾರಿ, ದ.ಕ.ಜಿಲ್ಲೆ, ಮಂಗಳೂರು ಇವರು ಸಲ್ಲಿಸಿದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿ ಪ್ರಕಾರ ವಾಹನದ ನೋಂದಣಿ ಮಾಲೀಕರಾದ ಶ್ರೀ.ಪದ್ಮನಾಭ ಪೂಜಾರಿ, ಬಿನ್:ವೆಂಕಪ್ಪ ಪೂಜಾರಿ, ವಲ್ಲಿಪಾಡಿ ಕೊಪ್ಪಳ ಹೌಸ್, ರೇಂಜ್ ಆಫೀಸಿನ ಹಿಂದುಗಡೆ, ಮೂಡಬಿದ್ರೆ, ಮಂಗಳೂರು ಮತ್ತು ಓಡಿ ಹೋದ ಆರೋಪಿ ಕೃಷ್ಣಪ್ಪ ಪೂಜಾರಿ(45 ವ), ಕಿಲ್ಲೂರು ಮನೆ, ಮಿತ್ತಬಾಗಿಲು ಗ್ರಾಮ, ಬೆಳ್ತಂಗಡಿ ಇವರುಗಳಿಗೆ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ಕಲಂ 43ಬಿ ಪ್ರಕಾರ ಕಾರಣ ಕೇಳಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ಹಾಗೂ ಅಬಕಾರಿ ಉಪ ನಿರೀಕ್ಷಕರು(ನಂ.2), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರ ಮುಖಾಂತರ ದಿ:11-6-2009 ರಂದು ನೀಡಲಾಗಿದ್ದು, ವಾಹನ ಮಾಲೀಕರಿಗೆ ಹಾಗೂ ಆರೋಪಿಗೆ ನೋಟೀಸು ಜಾರಿಗೊಳಿಸಲಾಗಿದ್ದು ಹಾಗೂ ಅಬಕಾರಿ ಉಪ ನಿರೀಕ್ಷಕರು(ನಂ.2), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರು ಖುದ್ದಾಗಿ ದಿ:30-6-2009 ರಂದು ಪದ್ಮನಾಭ ಪೂಜಾರಿ ಹಾಗೂ ಆರೋಪಿಯಾದ ಕೃಷ್ಣಪ್ಪ ಪೂಜಾರಿ ಇವರುಗಳಿಗೆ ಕಾರಣ ಕೇಳಿ ನೋಟಿಸನ್ನು ಜಾರಿ ಮಾಡಿರುತ್ತಾರೆ. ಆದರೆ ಇದುವರೆಗೂ ವಾಹನ ಮಾಲೀಕರಾಗಲಿ, ಅವರ ಪರ ವಕೀಲರಾಗಲಿ ಹಾಗೂ ಓಡಿ ಹೋದ ಆರೋಪಿಯು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನದ ಬಿಡುಗಡೆಗಾಗಿ ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲವೆಂದು ತಮ್ಮ ಪತ್ರ ಸಂ:ಸಿಆರ್‌ಎಂ/41/2008-09 ದಿ:6-7-2009 ರ ವರದಿಯಲ್ಲಿ ತಿಳಿಸಿರುತ್ತಾರೆ.

ವಾಹನದ ನೋಂದಣಿ ಮಾಲೀಕರಾದ ಪದ್ಮನಾಭ ಪೂಜಾರಿ ಇವರಿಗೆ ನೀಡಲಾದ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಬಿ ಪ್ರಕಾರ ನೀಡಿರುವ ಕಾರಣ ಕೇಳಿ ನೋಟೀಸಿಗೆ ಅನುಗುಣವಾಗಿ ಅವರು ದಿ:1-7-2009 ರಂದು ಉತ್ತರವನ್ನು ಸಲ್ಲಿಸಿರುತ್ತಾರೆ. ತಾನು ತನ್ನ ವಾಹನವನ್ನು 3 ವರ್ಷದ ಮೊದಲೇ ಕೃಷ್ಣಪ್ಪ ಪೂಜಾರಿ ಇವರಿಗೆ ಮಾರಾಟ ಮಾಡಿರುತ್ತೇನೆ. ಈ ಬಗ್ಗೆ ಸಾರಿಗೆ ಅಧಿಕಾರಿಯವರ ಕಾನೂನು ಅನ್ವಯ ಫಾರಂ-29 ಮತ್ತು 30 ಕ್ಕೆ ಸಹಿ ಮಾಡಿ ಕೊಟ್ಟಿರುತ್ತೇನೆ. ತನಗೆ ಪೂರ್ತಿ ಹಣ ಸಂದಾಯವಾಗಿರುತ್ತದೆ. ತಕ್ಸೀರಿನಲ್ಲಿ ವಶಪಡಿಸಿಕೊಂಡ ಮೋಟಾರು ಸೈಕಲಿಗೂ ಹಾಗೂ ತನಗೂ ಯಾವುದೇ ಸಂಬಂಧವಿಲ್ಲವೆಂದು ತಿಳಿಸಿರುತ್ತಾರೆ. ಆದರೆ ವಾಹನದ ವರ್ಗಾವಣೆಯಾದ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಲ್ಲಿಸಿರುವುದಿಲ್ಲ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

1) ಮೊದಲನೇ ವಿವಾದಾಂಶ: ದಿ: 21-2-2009 ರಂದು ಬಜಾಜ್ ಕವಾಸಕಿ ಮೋಟಾರು ಸೈಕಲ್ ಸಂಖ್ಯೆ: ಕೆಎ-19-ಕ್ಯೂ-2432 ರಲ್ಲಿ ವಾಹನದ ಮಾಲೀಕರ ತಿಳುವಳಿಕೆಯಿಂದಲೇ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

2) ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾಸಾ: 1

ಪ್ರಾಸಿಕ್ಯೂಷನ್ ಪರ ಪ್ರಕರಣದ ತನಿಖಾಧಿಕಾರಿಯಾದ ಶ್ರೀಮತಿ.ಎನ್.ಸೌಮ್ಯಲತ, ಅಬಕಾರಿ ಉಪ ನಿರೀಕ್ಷಕರು(ನಂ.2), ಬೆಳ್ತಂಗಡಿ ವಲಯ ಇವರು ದಿ:11-8-09 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ಮೇ-2005 ರಿಂದ ಇಲ್ಲಿಯವರೆಗೆ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ಪ್ರಕರಣಕ್ಕೆ ಸಂಬಂಧ ಸೊತ್ತುಗಳನ್ನು ಹಾಗೂ ದಾಖಲಾತಿಗಳನ್ನು ಫಿರ್ಯಾದಿದಾರರು ಹಸ್ತಾಂತರಿಸಲಾಗಿದ್ದು, ತಕ್ಸೀರಿಗೆ ಸಂಬಂಧಪಟ್ಟ ಮಾದರಿ ಸೀಸೆಗಳನ್ನು ರಾಸಾಯನಿಕ ವಿಶ್ಲೇಷಕರಿಗೆ ಕಳುಹಿಸಿಕೊಟ್ಟಿರುತ್ತೇನೆ. ಅವರಿಂದ ದಿನಾಂಕ: 21-5-2009 ರಂದು ಪಡೆದುಕೊಂಡಿರುತ್ತೇನೆ. ಸದರಿ ರಾಸಾಯನಿಕ ವರದಿಯನ್ನು ನಿಶಾನೆ ಪಿ-1 ಎಂದು ಗುರುತಿಸಲಾಯಿತು. ಪ್ರಾದೇಶಿಕ ಸಾರಿಗೆ ಅಧಿಕಾರಿಯವರು ಸಲ್ಲಿಸಿದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ದಿ:23-3-2009 ರಂದು ಪಡೆದುಕೊಂಡಿರುತ್ತೇನೆ. ಸದರಿ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ನಿಶಾನೆ ಪಿ-2 ಎಂದು ಗುರುತಿಸಿರುತ್ತೇನೆ. ವಾಹನದ ನೋಂದಣಿ ಮಾಲೀಕರಾದ ಶ್ರೀ.ಪದ್ಮನಾಭ ಪೂಜಾರಿ ಇವರಿಗೆ ಈ ಪ್ರಾಧಿಕಾರದಿಂದ ಕಾರಣ ಕೇಳಿ ನೋಟೀಸನ್ನು ದಿ: 24-3-2009 ರಂದು ನೀಡಲಾಗಿದ್ದು, ಸದರಿ ನೋಟೀಸು ದಿ:1-4-2009 ರಂದು ಜಾರಿಯಾಗಿರುತ್ತದೆ. ಆದರೆ ಯಾವುದೇ ಉತ್ತರ ಸ್ವೀಕೃತವಾಗಿರುವುದಿಲ್ಲ. ಸದರಿ ತಕ್ಸೀರಿನಲ್ಲಿ ವಶಪಡಿಸಿಕೊಂಡ

ಸೊತ್ತುಗಳನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಪ್ರಸ್ತಾಪನೆಯನ್ನು ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ-3 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-3ಎ ಎಂದು ಗುರುತಿಸಲಾಯಿತು. ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ದಿ: 21-7-2009 ರಂದು ಸಲ್ಲಿಸಲಾಗಿದೆ. ಈ ಪ್ರಾಧಿಕಾರದ ಮುಟ್ಟುಗೋಲು ಆದೇಶಾನುಸಾರ ಮದ್ಯವನ್ನು ದಿ:30-6-2009 ರಂದು ನಾಶಪಡಿಸಲಾಗಿದೆ ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರಾದ ಶ್ರೀ.ರತ್ನಾಕರ ರೈ,ಅಬಕಾರಿ ಉಪ ನಿರೀಕ್ಷಕರು(ನಂ.1),ಬಂಟ್ವಾಳ ವಲಯ ಇವರು ದಿ:11-8-2009 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ಡಿಸೆಂಬರ್-2008 ರಿಂದ ಮಾರ್ಚ್-2009 ರವರೆಗೆ ಬೆಳ್ತಂಗಡಿ ವಲಯದಲ್ಲಿ ಪ್ರಭಾರ ಅಬಕಾರಿ ಉಪ ನಿರೀಕ್ಷಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು, ತಾನು ದಿನಾಂಕ:21-02-2009 ರಂದು ಸಂಜೆ 5-00 ಗಂಟೆ ಸಮಯದಲ್ಲಿ ತನ್ನ ಸಿಬ್ಬಂದಿಯವರೊಂದಿಗೆ ಬೆಳ್ತಂಗಡಿ ತಾಲೂಕು ನಾವೂರು ಇಂದಬೆಟ್ಟು ರಸ್ತೆಯಲ್ಲಿ ಗಸ್ತು ತಿರುಗುತ್ತಿರುವಾಗ, ನಾವೂರಿನಿಂದ ಇಂದಬೆಟ್ಟು ಕಡೆಗೆ ಹೋಗುತ್ತಿದ್ದ ಮೋಟಾರು ಸೈಕಲ್‌ನ ಪೆಟ್ರೋಲ್ ಟ್ಯಾಂಕ್‌ನ ಮೇಲೆ ಪ್ಲಾಸ್ಟಿಕ್ ಗೋಣಿ ಚೀಲದ ಕಟ್ಟು ಒಂದು ಇರುವುದು ಕಂಡು ಬಂತು. ಅನುಮಾನದ ಮೇರೆಗೆ ನಿಲ್ಲಿಸಲು ಸೂಚನೆ ನೀಡಿದಾಗ, ಬೈಕ್ ಸವಾರನು ಮೋಟಾರು ಸೈಕಲನ್ನು ಅತೀ ವೇಗವಾಗಿ ಚಲಾಯಿಸಿಕೊಂಡು ಹೋಗಲು ಯತ್ನಿಸಿದಾಗ, ಆತನನ್ನು ಬೆನ್ನಟ್ಟಿ ಒಂದೆರಡು ಕಿ.ಮೀ.ಗಳಷ್ಟು ದೂರ ಹೋದ ನಂತರ ಸದರಿ ಸವಾರನು ಪ್ಲಾಸ್ಟಿಕ್ ಚೀಲದ ಕಟ್ಟನ್ನು ಮಾರ್ಗದ ಬದಿಗೆ ಎಸೆದು ಬೈಕನ್ನು ಮಾರ್ಗದ ಬದಿಯಲ್ಲಿ ಬಿಟ್ಟು ಪಕ್ಕದ ಗುಡ್ಡದಲ್ಲಿ ಪರಾರಿಯಾಗಿರುತ್ತಾನೆ. ಓಡಿ ಹೋದ ಆರೋಪಿಯು ಕೃಷ್ಣಪ್ಪ ಪೂಜಾರಿ ಎಂದು ತಿಳಿದು ಬಂದಿರುತ್ತದೆ. ಸದರಿ ಬೈಕ್ ಹಾಗೂ ಆರೋಪಿಯು ಎಸೆದಿರುವ ಕಟ್ಟನ್ನು ಶೋಧಿಸಬೇಕಾಗಿರುವುದರಿಂದ, ಮಾನ್ಯ ಘನ ನ್ಯಾಯಾಲಯದಿಂದ ಶೋಧನಾ ವಾರಂಟ್ ತರಲು ಸಮಯಾವಕಾಶವಿಲ್ಲದಿದ್ದುದರಿಂದ, ಸದರಿ ಕಾರಣವನ್ನು ಸ್ಥಳದಲ್ಲಿಯೇ ದಾಖಲಿಸಿಕೊಂಡು ಶೋಧನೆ ಸಮಯದಲ್ಲಿ ಪಂಚರನ್ನು ಹುಡುಕಲಾಗಿ, ಯಾರೂ ಸಿಗದ ಕಾರಣ ಇಲಾಖಾ ಸಿಬ್ಬಂದಿಯವರನ್ನೇ ಪಂಚರಾಗಿರಿಸಿಕೊಂಡು ಶೋಧನೆ ನಡೆಸಲಾಯಿತು. ಪ್ಲಾಸ್ಟಿಕ್ ಚೀಲವನ್ನು ಪರಿಶೀಲಿಸಿದಾಗ, ಅದರಲ್ಲಿ 180 ಎಂ.ಎಲ್.ನ ಮದ್ಯದ ಬಾಟಲ್‌ಗಳು ಹಾಗೂ ಒಡೆದ ಬಾಟಲ್‌ಗಳು ಪತ್ತೆಯಾದವು. ಅವುಗಳನ್ನು ಎಣಿಸಿ ನೋಡಲಾಗಿ, ಹೈವೆ ಫೈನ್ ವಿಸ್ಕಿ ಎಂಬ ಲೇಬಲ್ ಅಂಟಿಸಿರುವ 180 ಎಂ.ಎಲ್.ನ 32 ಸೀಸೆಗಳು ಹಾಗೂ ಒಡೆದು ಹೋದ 180 ಎಂ.ಎಲ್.ನ 16 ಬಾಟಲ್‌ಗಳು ಪತ್ತೆಯಾದವು. ಸದರಿ ಮೋಟಾರು ಬೈಕನ್ನು ಪರಿಶೀಲಿಸಲಾಗಿ, ಅದು ಬಜಾಜ್ ಕವಾಸಕಿ ಆಗಿದ್ದು, ಇದರ ನೋಂದಣಿ ಸಂಖ್ಯೆ: ಕೆಎ-19-ಕ್ಯೂ-2432 ಆಗಿದ್ದು, ಇದರ ಚಾಸೀಸ್ ಸಂಖ್ಯೆ:ಡಿಎಫ್‌ಎಫ್‌ಬಿಹೆಚ್‌ಎಲ್ 22569 ಆಗಿರುತ್ತದೆ. ಸದರಿ ಮದ್ಯದಿಂದ ರಾಸಾಯನಿಕ ಪರೀಕ್ಷೆಗಾಗಿ ಎರಡು ಬಾಟಲ್‌ಗಳನ್ನು ತೆಗೆದು, ಅವುಗಳಿಗೆ ಬಟ್ಟೆ ದಾರ ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಲಾಯಿತು ಹಾಗೂ ಸ್ಥಳದಲ್ಲಿಯೇ ಮಾದರಿ ಮೊಹರು ತಯಾರಿಸಲಾಯಿತು. ಸದರಿ ವಾಹನದಲ್ಲಿ ಯಾವುದೇ ರಹದಾರಿ ಅಥವಾ ಬಿಲ್ಲುಗಳು ದೊರಕದ ಕಾರಣ, ಇದು ಅಕ್ರಮ ಮದ್ಯ ಸಾಗಾಣಿಕೆಯಾಗಿರುವುದರಿಂದ, ಸ್ಥಳದಲ್ಲಿಯೇ ಮಹಜರನ್ನು ತಯಾರಿಸಿ ಎಲ್ಲಾ ಸೊತ್ತುಗಳನ್ನು ಕಚೇರಿಗೆ ತಂದು, ಕಚೇರಿಯಲ್ಲಿ ಪ್ರಥಮ ಮಾಹಿತಿ ವರದಿಯನ್ನು ತಯಾರಿಸಲಾಯಿತು. ಸದರಿ ವರದಿ ಬೆಳ್ತಂಗಡಿ ವಲಯ ಅಬಕಾರಿ ಉಪ ನಿರೀಕ್ಷಕರು(ನಂ.2) ಇವರ ಪ್ರಥಮ ಮಾಹಿತಿ ವರದಿ ಸಂ:6/2008-09 ದಿ:21-2-2009 ಆಗಿರುತ್ತದೆ. ತದನಂತರ ದಿ:4-3-2009 ರಂದು ಜಪ್ತಾದ ವಾಹನದ ಬಿ ವಹಿಯನ್ನು ಕೋರಿ ಮಂಗಳೂರು ಸಾರಿಗೆ ಅಧಿಕಾರಿಯವರಿಗೆ ಪತ್ರ ಬರೆಯಲಾಗಿದೆ. ನಂತರ ಕಡತವನ್ನು ಶ್ರೀಮತಿ.ಸೌಮ್ಯಲತ, ಅಬಕಾರಿ ಉಪ ನಿರೀಕ್ಷಕರು ಇವರಿಗೆ ಹಸ್ತಾಂತರಿಸಿರುತ್ತೇನೆ. ಪ್ರಥಮ ಮಾಹಿತಿ ವರದಿಯನ್ನು ತಯಾರಿಸಿ ಅದನ್ನು ನಿಶಾನೆ ಪಿ-4 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-4ಎ ಎಂದು, ಮಹಜರನ್ನು ನಿಶಾನೆ ಪಿ-5 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-5ಎ ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ. ವಾಹನದ ಮಾಲೀಕರಾಗಲಿ ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದಿರದ ಪ್ರಯುಕ್ತ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಿ ಮೊಕದ್ದಮೆಯ ವಿಚಾರಣೆಯನ್ನು ನ್ಯಾಯಾಲಯದಲ್ಲಿ ಮುಕ್ತಾಯಗೊಳಿಸಲಾಯಿತು.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:21-2-2009 ರಂದು ಜಪ್ತುಪಡಿಸಿಕೊಂಡಿರುವ ಬಜಾಜ್ ಕವಾಸಕಿ ಮೋಟಾರು ಸೈಕಲ್ ಸಂಖ್ಯೆ: ಕೆಎ-19-ಕ್ಯೂ-2432 ರಲ್ಲಿ ಅಕ್ರಮವಾಗಿ 5-760 ಲೀಟರ್ ಮದ್ಯವನ್ನು ಯಾವುದೇ ಅಧಿಕೃತ ರಹದಾರಿ ಪತ್ರವಿಲ್ಲದೆ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ, ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ. ವಾಹನ ಮಾಲೀಕರು ಹಾಗೂ ಅವರ ಪರ ವಕೀಲರು ಯಾರೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ವಾಹನಕ್ಕೆ

ಸಂಬಂಧಿಸಿ ಯಾವುದೇ ಅರ್ಜಿ ಸಲ್ಲಿಸದೇ ಇರುವ ಕಾರಣಕ್ಕೆ ಎರಡನೇ ಅಂಶವನ್ನು ಗಣನೆಗೆ ತೆಗೆದುಕೊಳ್ಳುವ ಅಗತ್ಯತೆವಿರುವುದಿಲ್ಲ.

1965 ನೇ ಕರ್ನಾಟಕ ಅಬಕಾರಿ ಕಾಯಿದೆಯಡಿಯಲ್ಲಿ ಪ್ರಕರಣವನ್ನು ದಾಖಲು ಮಾಡುವಾಗ ಆರೋಪಿಯು ಪತ್ತೆಯಾಗದಿದ್ದಲ್ಲಿ ಅಥವಾ ಪತ್ತೆಯಾಗುವ ಸಾಧ್ಯತೆಯಿಲ್ಲದಿದ್ದಲ್ಲಿ, ಪ್ರಕರಣವನ್ನು ಪತ್ತೆ ಹಚ್ಚಿದ ಒಂದು ತಿಂಗಳಲ್ಲಿ ಯಾವುದೇ ವ್ಯಕ್ತಿಯು ಪ್ರಾಧಿಕಾರದ ಮುಂದೆ ಹಾಜರಾಗಿ ಅಪರಾಧದಲ್ಲಿ ಜಪ್ತಾಗಿರುವ ಸೊತ್ತುಗಳು ತಮ್ಮದೆಂದು, ಅವುಗಳು ಕಾನೂನುಬದ್ದವಾಗಿದೆಯೆಂದು ಸಾಕ್ಷ್ಯಾಧಾರದೊಂದಿಗೆ ಸಾಬೀತುಪಡಿಸದೇ ಇದ್ದಲ್ಲಿ, ಸದರಿ ಸೊತ್ತುಗಳು ಕರ್ನಾಟಕ ಅಬಕಾರಿ ಕಾಯಿದೆ ಕಾಲಂ 43 ರ ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿರುವ ಸೊತ್ತುಗಳಾಗಿದ್ದಲ್ಲಿ,ಅಂತಹ ಸೊತ್ತುಗಳನ್ನು ಕಾಲಂ 43(ಸಿ) ಅಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುತ್ತದೆ.

ಸದರಿ ಪ್ರಕರಣದಲ್ಲಿ ಅಬಕಾರಿ ಉಪ ನಿರೀಕ್ಷಕರು(ನಂ.2), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರು ದಾಖಲಿಸಿರುವ ಪ್ರಕರಣದಲ್ಲಿ ಆರೋಪಿಯು ಅಕ್ರಮವಾಗಿ 5-760 ಲೀಟರ್ ಮದ್ಯವನ್ನು ಸಾಗಾಣಿಕೆ ಮಾಡುವಾಗ, ವಾಹನವನ್ನು ಪಂಚನಾಮೆಯ ಮುಖಾಂತರ ಸ್ವಾಧೀನಪಡಿಸಿದ್ದು ಹಾಗೂ ವಾಹನದಲ್ಲಿ ಜಪ್ತುಪಡಿಸಲಾಗಿರುವ ವಸ್ತು ರಾಸಾಯನಿಕ ತಜ್ಞರ ಅಭಿಪ್ರಾಯದಂತೆ ಮದ್ಯವೆಂದು ದೃಢಪಟ್ಟಿದ್ದು, ಸದರಿ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14, 32 ಮತ್ತು 38ಎ ರ ಉಲ್ಲಂಘನೆಗಾಗಿ ಬಳಸಿರುವುದು ಸ್ಪಷ್ಟವಾಗಿ ಸಾಬೀತಾಗಿರುವುದಾಗಿ ಈ ಪ್ರಾಧಿಕಾರವು ತೀರ್ಮಾನ ತೆಗೆದುಕೊಳ್ಳಬೇಕಾಗಿರುತ್ತದೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಕವಾಸಕಿ ಮೋಟಾರು ಸೈಕಲ್ ಸಂಖ್ಯೆ: ಕೆಎ-19-ಕ್ಯೂ-2432 ನ್ನು ವಶಪಡಿಸಿಕೊಂಡು ಸುಮಾರು 6 ತಿಂಗಳು ಕಳೆದರೂ ಈ ಪ್ರಾಧಿಕಾರದ ಮುಂದೆ ಹಾಗೂ ತಕ್ಷೀರು ದಾಖಲಿಸಿದ ಬೆಳ್ತಂಗಡಿ ವಲಯ ಕಚೇರಿಯಲ್ಲಿ ಇದುವರೆಗೂ ವಾಹನದ ಬಿಡುಗಡೆಗಾಗಿ ಅಧಿಕೃತ ದಾಖಲಾತಿಗಳೊಂದಿಗೆ ವಾಹನ ಮಾಲೀಕರು ಹಾಗೂ ಆರೋಪಿಯು ಕೂಡಾ ವಾಹನವು ತನ್ನದೆಂದು ಬಿಡುಗಡೆ ಅರ್ಜಿ ಸಲ್ಲಿಸಿರುವುದಿಲ್ಲ. ಈ ಪ್ರಾಧಿಕಾರದಿಂದ ನೀಡಲಾಗಿರುವ ಕಾರಣ ಕೇಳಿ ನೋಟೀಸಿಗೆ ಅನುಗುಣವಾಗಿ ಶ್ರೀ.ಪದ್ಮನಾಭ ಪೂಜಾರಿ ಇವರು ದಿ:1-7-2009 ರಂದು ಸಲ್ಲಿಸಿದ ಉತ್ತರದಲ್ಲಿ, ತನ್ನ ವಾಹನವನ್ನು 3 ವರ್ಷದ ಮೊದಲೇ ಆರೋಪಿಯಾದ ಕೃಷ್ಣಪ್ಪ ಪೂಜಾರಿ ಇವರಿಗೆ ಹಸ್ತಾಂತರಿಸಿರುತ್ತೇನೆ. ಫಾರಂ-29 ಮತ್ತು 30 ಕ್ಕೆ ಸಹಿ ಮಾಡಿಕೊಂಡಿರುತ್ತೇನೆ ಎಂದು ತಿಳಿಸಿರುತ್ತಾರೆ. ಆದರೆ ಅಧಿಕೃತ ದಾಖಲಾತಿಗಳು ಹಾಜರುಪಡಿಸಿರುವುದಿಲ್ಲ. ಆದುದರಿಂದ ಅಕ್ರಮ ಮದ್ಯ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಮದ್ಯ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ ಹಾಗೂ ಆರೋಪಿಯಾದ ಕೃಷ್ಣಪ್ಪ ಪೂಜಾರಿ ಇವರಿಗೆ ನೀಡಿದ ಕಾರಣ ಕೇಳಿ ನೋಟೀಸು ಮತ್ತು ಹಾಜರಾತಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು ಅದು ಸ್ವೀಕೃತಿಯಾಗಿದ್ದರೂ, ಅವರು ಖುದ್ದಾಗಿ ಈ ಪ್ರಾಧಿಕಾರದ ಮುಂದೆ ಹಾಜರಾಗಿ, ಸದರಿ ವಾಹನವನ್ನು ಅಕ್ರಮ ಮದ್ಯ ಸಾಗಾಣಿಕೆಯಲ್ಲಿ ಉಪಯೋಗವಾಗಿರುವುದಿಲ್ಲವೆಂದು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸಿರುವುದಿಲ್ಲ. ಆದುದರಿಂದ ವಾಹನ ಮಾಲೀಕರೇ ಸ್ವತ: ತನ್ನ ಮೋಟಾರು ಸೈಕಲ್‌ನಲ್ಲಿ ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಮದ್ಯವನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ ಹಾಗೂ ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾವು ಈಗಾಗಲೇ 6 ತಿಂಗಳು ಕಳೆದರೂ ಅದರ ಮಾಲೀಕತ್ವದ ಬಗ್ಗೆ ಹಾಗೂ ವಾಹನದ ಬಿಡುಗಡೆ ಬಗ್ಗೆ ಯಾರೂ ಅರ್ಜಿಯನ್ನು ಸಲ್ಲಿಸದಿರುವ ಕಾರಣ, ಅಕ್ರಮ ಮದ್ಯ ಸಾಗಾಟಕ್ಕೆ ಬಳಸಿದ ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಬಜಾಜ್ ಬಾಕ್ಸರ್ ಮೋಟಾರು ಸೈಕಲ್ ಸಂಖ್ಯೆ: ಕೆಎ-19-ಕ್ಯೂ-2432 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/262/ಡಿಟಿಸಿಆರ್/2008-09 ದಿನಾಂಕ:17ನೇ ಆಗಸ್ಟ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ಉಪ ನಿರೀಕ್ಷಕರು(ನಂ.2), ಬೆಳ್ತಂಗಡಿ ವಲಯ, ಬೆಳ್ತಂಗಡಿ ಇವರ ತಕ್ಷೀರು ಸಂ: 6/2008-09 ದಿ:21-2-2009 ರಲ್ಲಿ ಜಪ್ತುಪಡಿಸಿರುವ ಬಜಾಜ್ ಬಾಕ್ಸರ್ ಮೋಟಾರು ಸೈಕಲ್ ಸಂಖ್ಯೆ: ಕೆಎ-19-ಕ್ಯೂ-2432 ನ್ನು ನಿಯಮ 43(ಸಿ) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಆದೇಶವನ್ನು ದಿನಾಂಕ:17-08-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ-1: ಶ್ರೀಮತಿ.ಎನ್.ಸೌಮ್ಯಲತ, ಅಬಕಾರಿ ಉಪ ನಿರೀಕ್ಷಕರು(ನಂ.2), ಬೆಳ್ತಂಗಡಿ ವಲಯ, ಬೆಳ್ತಂಗಡಿ.

ಪ್ರಾ.ಸಾ-2: ಶ್ರೀರತ್ನಾಕರ ರೈ, ಅಬಕಾರಿ ಉಪ ನಿರೀಕ್ಷಕರು(ನಂ.1),ಬಂಟ್ವಾಳ ವಲಯ.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ರಾಸಾಯನಿಕ ವಿಶ್ಲೇಷಣಾ ವರದಿ.

ನಿಶಾನೆ ಪಿ-2 : ಬಿ ಅಬ್‌ಸ್ಟ್ರಾಕ್ಟ್ ವರದಿ.

ನಿಶಾನೆ ಪಿ-3 : ತನಿಖಾ ವರದಿ.

ನಿಶಾನೆ ಪಿ-3ಎ : ತನಿಖಾ ವರದಿಯಲ್ಲಿರುವ ತನಿಖಾಧಿಕಾರಿಯವರ ಸಹಿ.

ನಿಶಾನೆ ಪಿ-4 : ಪ್ರಥಮ ಮಾಹಿತಿ ವರದಿ

ನಿಶಾನೆ ಪಿ-4ಎ : ಪ್ರಥಮ ಮಾಹಿತಿ ವರದಿಯಲ್ಲಿ ಫಿರ್ಯಾದುದಾರರ ಸಹಿ

ನಿಶಾನೆ ಪಿ-5 : ಮಹಜರು

ನಿಶಾನೆ ಪಿ-5ಎ: ಮಹಜರಿನಲ್ಲಿ ಫಿರ್ಯಾದುದಾರರ ಸಹಿ.

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.935

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/232/ಡಿಟಿಸಿಆರ್/2006-07 ದಿನಾಂಕ: 25ನೇ ಸೆಪ್ಟೆಂಬರ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿರ್ಯಾದುದಾರರು:
ಪೊಲೀಸ್ ಉಪ ನಿರೀಕ್ಷಕರು,
ಬಂಟ್ವಾಳ ನಗರ ಪೊಲೀಸ್ ಠಾಣೆ,
ಬಂಟ್ವಾಳ.

ಆರೋಪಿ:
ಪತ್ತೆಯಾಗಿರುವುದಿಲ್ಲ.

ವಾಹನ ಮಾಲೀಕರು:
1) ಖಾದರ್, ಬಿನ್: ಇಬ್ರಾಹಿಂ,
ವಾಸ: ಕಟ್ಟಡ ಸಂ:1-121, ನೀರಪಾಲ್ಕೆ, ಬಂಟ್ವಾಳ.
2) ಮೆ: ಶ್ರೀರಾಮ್ ಟ್ರಾನ್ಸ್ ಪೋರ್ಟ್ ಫೈನಾನ್ಸ್ ಕಂಪೆನಿ ಲಿ.,ಪ್ಯಾರಡಿ ಜಿಮ್ ಪ್ಲಾಸಾ, ಎ.ಬಿ.ಶೆಟ್ಟಿ ಸರ್ಕಲ್,
ಮಂಗಳೂರು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:27-04-2006 ರಂದು ಫಿರ್ಯಾದುದಾರರು ಅವರಿಗೆ ದೊರೆತ ಖಚಿತ ವರ್ತಮಾನದ ಮೇರೆಗೆ ತಮ್ಮ ಸಿಬ್ಬಂದಿಯೊಂದಿಗೆ ಬಂಟ್ವಾಳ ತಾಲೂಕಿನ ಗೋಳ್ತಮಜಲು ಗ್ರಾಮದ ಕಲ್ಲಡ್ಕ ಜಂಕ್ಷನ್‌ನಲ್ಲಿ ತನ್ನ ಇಲಾಖಾ ವಾಹನದಲ್ಲಿ ಬೆಳಗ್ಗಿನ ಜಾವ ಸುಮಾರು 2-00 ಗಂಟೆ ಸಮಯದಲ್ಲಿ ರಸ್ತೆ ಕಾವಲು ನಡೆಸುತ್ತಿರುವಾಗ, ರಾಷ್ಟ್ರೀಯ ಹೆದ್ದಾರಿ 48 ರ ರಸ್ತೆಯ ಕಲ್ಲಡ್ಕ ಜಂಕ್ಷನ್ ಕಡೆಗೆ ಜೀಪು ಅತೀ ವೇಗವಾಗಿ ಬರುತ್ತಿದ್ದು, ಕಲ್ಲಡ್ಕ ಜಂಕ್ಷನ್‌ನಲ್ಲಿ ಕೇರಳ ಕಡೆಗೆ ಹೋಗಲು ವಿಟ್ಲ ರಸ್ತೆಯ ಕಡೆ ಚಲಾಯಿಸಿಕೊಂಡು ಹೋಗುತ್ತಿರುವುದನ್ನು ತಡೆದು ನಿಲ್ಲಿಸಿದಾಗ, ಸದರಿ ಜೀಪಿನ ಚಾಲಕ ಜೀಪನ್ನು ಮಾರ್ಗದ ಮಧ್ಯದಲ್ಲಿ ನಿಲ್ಲಿಸಿ ಓಡಿ ಪರಾರಿಯಾಗಿರುತ್ತಾನೆ. ಚಾಲಕನನ್ನು ಹಿಡಿಯಲು ಪ್ರಯತ್ನಿಸಿದರೂ ಆತನು ಕತ್ತಲೆಯಲ್ಲಿ ಕಣ್ಮರೆಯಾಗಿರುತ್ತಾನೆ. ನಂತರ ಸದರಿ ಜೀಪನ್ನು ಪರಿಶೀಲಿಸಿದಾಗ, ಅದರಲ್ಲಿ 3 ಗೋಣಿ ಚೀಲಗಳಿದ್ದು, ಗೋಣಿ ಚೀಲಗಳಲ್ಲಿ ಸಾರಾಯಿ ಸ್ಯಾಚೆಟ್‌ಗಳನ್ನು ತುಂಬಿಸಿಕೊಂಡು ಸಾಗಾಟ ಮಾಡುತ್ತಿರುವುದು ಪತ್ತೆಯಾಯಿತು. ಸದರಿ 3 ಗೋಣಿ ಚೀಲಗಳನ್ನು ಪರಿಶೀಲಿಸಿದಾಗ, ಪ್ರತಿ ಗೋಣಿ ಚೀಲದಲ್ಲಿ 100 ಎಂ.ಎಲ್.ನ 400 ಸಾರಾಯಿ ಸ್ಯಾಚೆಟ್‌ಗಳಂತೆ ಒಟ್ಟು 1,200 ಸಾರಾಯಿ ಸ್ಯಾಚೆಟ್‌ಗಳಿರುವುದು ಪತ್ತೆಯಾದವು. ಸದರಿ ಗೋಣಿ ಚೀಲಗಳಿಂದ ಸಾರಾಯಿ ಸ್ಯಾಚೆಟ್‌ಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಿ ಅದನ್ನು ಬಿಳಿ ಬಟ್ಟೆಯಿಂದ ಕಟ್ಟಿ ಅರಗು ಸೀಲ್ ಹಾಕಿ ಗುರುತಿನ ಚೀಟಿಯನ್ನು ಅಂಟಿಸಲಾಯಿತು. ಅಕ್ರಮವಾಗಿ ಸಾಗಾಟಕ್ಕೆ ಬಳಸಿದ ಜೀಪನ್ನು ಪರಿಶೀಲಿಸಿದಾಗ, ಇದು ಮಹೇಂದ್ರ ಕಂಪೆನಿಯ ತಯಾರಿಕಾ ಜೀಪು ನೋಂದಣಿ ಸಂಖ್ಯೆ: ಕೆಎ-22-ಎಂ-3339 ಆಗಿರುತ್ತದೆ. ಆರೋಪಿಯು ಅಕ್ರಮವಾಗಿ ಯಾವುದೇ ರಹದಾರಿ ಪತ್ರವಿಲ್ಲದೆ ಕೇರಳ ರಾಜ್ಯಕ್ಕೆ ಸಾಗಾಟ ಮಾಡುವುದನ್ನು ಖಚಿತಪಡಿಸಿಕೊಂಡು ಹಾಗೂ ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 13,14,32,34,43(1)(2) ರ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವುದರಿಂದ, ಸ್ಥಳ ಮಹಜರನ್ನು ಸ್ಥಳದಲ್ಲಿಯೇ ಬರೆದು, ಜೀಪು ಹಾಗೂ ಸಾರಾಯಿ ಸ್ಯಾಚೆಟ್‌ಗಳನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಓಡಿ ಹೋದ ಆರೋಪಿಯ ವಿರುದ್ಧ ತಕ್ಷೀರು ಸಂ: 83/2006 ದಿ:27-04-2006 ರಂತೆ ಪ್ರಕರಣವನ್ನು ನೋಂದಾಯಿಸಿ ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ಪೊಲೀಸ್ ಉಪ ನಿರೀಕ್ಷಕರು, ಬಂಟ್ವಾಳ ನಗರ ಪೊಲೀಸ್ ಠಾಣೆ, ಬಂಟ್ವಾಳ ಇವರು ತಕ್ಷೀರಿನಲ್ಲಿ ವಶಪಡಿಸಿಕೊಂಡ ಸೊತ್ತುಗಳನ್ನು ಹಾಗೂ ದಾಖಲಾತಿಗಳನ್ನು ಮುಂದಿನ ತನಿಖೆಯ ಬಗ್ಗೆ ಅಬಕಾರಿ ಉಪ ನಿರೀಕ್ಷಕರು(ನಂ.2), ಜಾರಿ ಮತ್ತು ತನಿಖೆ, ಬಂಟ್ವಾಳ ಇವರಿಗೆ ದಿನಾಂಕ:17-2-2007 ರಂದು ಕಡತ ಹಾಗೂ ಸೊತ್ತುಗಳೊಂದಿಗೆ ಹಸ್ತಾಂತರಿಸಿರುತ್ತಾರೆ.

ತನಿಖೆಯನ್ನು ಕೈಗೊಂಡ ಅಬಕಾರಿ ಉಪ ನಿರೀಕ್ಷಕರು(ನಂ.2), ಜಾರಿ ಮತ್ತು ತನಿಖೆ, ಬಂಟ್ವಾಳ ಇವರ ತನಿಖಾ ವರದಿ ಸಂ:ಸಿಆರ್‌ಎಂ/26/2006-07 ದಿ:21-3-2007 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಸಾರಾಯಿ ಸ್ಯಾಚೆಟ್‌ಗಳಿಂದ ತೆಗೆದ ಸ್ಯಾಂಪಲ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ಕಳುಹಿಸಲಾಗಿದ್ದು, ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರ ಪತ್ರ ಸಂಖ್ಯೆ: ಇ-74-30 ದಿ:9-3-2007 ರ ವರದಿಯಲ್ಲಿ ಸಾರಾಯಿಯ ಮದ್ಯಸಾರ ಪ್ರಮಾಣ ಶೇ.24 ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ ಹಾಗೂ ಸಂಬಂಧಪಟ್ಟ ಸಾರಿಗೆ ಅಧಿಕಾರಿಯಿಂದ ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪಿನ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಪಡೆಯಲಾಗಿದ್ದು, ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಮಾಲೀಕರಾದ ಖಾದರ್, ಬಿನ್: ಇಬ್ರಾಹಿಂ, ವಾಸ: ಕಟ್ಟಡ ಸಂ:1-121, ನೀರಪಾಲ್ಕೆ, ಬಂಟ್ವಾಳ ಮತ್ತು ಹೆಚ್.ಪಿ.ಎ.ದಾರರಾದ ಮೆ: ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂಪೆನಿ ಲಿ., ಪ್ಯಾರಡಿ ಜಿಮ್ ಪ್ಲಾಸಾ, ಎ.ಬಿ.ಶೆಟ್ಟಿ ಸರ್ಕಲ್, ಮಂಗಳೂರು ಎಂದು ದೃಢೀಕರಿಸಿ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿದ್ದು, ಸಾರಾಯಿ ಸ್ಯಾಚೆಟ್‌ಗಳನ್ನು ಹಾಗೂ ಅಕ್ರಮ ಸಾಗಾಟಕ್ಕೆ ಬಳಸಿದ ಜೀಪನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಸಾರಾಯಿ ಸ್ಯಾಚೆಟ್‌ಗಳನ್ನು ನಾಶಪಡಿಸಲು ಹಾಗೂ ಜೀಪನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ತನ್ನ ತನಿಖಾ ವರದಿಯಲ್ಲಿ ಶಿಫಾರಸ್ಸು ಮಾಡಿರುತ್ತಾರೆ.

ಅಬಕಾರಿ ಉಪ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ಮುಟ್ಟುಗೋಲು ಆದೇಶ ಸಂಖ್ಯೆ: ಇ.ಐ.ಬಿ/ಡಿಟಿಸಿಆರ್/232/ 2006-07 ದಿ:13-4-2007 ರ ಆದೇಶದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ 100 ಎಂ.ಎಲ್.ನ 1200 ಸಾರಾಯಿ ಸ್ಯಾಚೆಟ್‌ಗಳನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿಯಲ್ಲಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಸಾರಾಯಿ ಸ್ಯಾಚೆಟ್‌ಗಳನ್ನು ನಾಶಪಡಿಸಲು ಆದೇಶಿಸಲಾಗಿರುತ್ತದೆ.

ಸಾರಿಗೆ ಅಧಿಕಾರಿಗಳು ಸಲ್ಲಿಸಿದ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಮಾಲೀಕರಾದ ಖಾದರ್, ಬಿನ್: ಇಬ್ರಾಹಿಂ, ವಾಸ: ಕಟ್ಟಡ ಸಂ:1-121, ನೀರಪಾಲ್ಕೆ, ಬಂಟ್ವಾಳ ಮತ್ತು ಹೆಚ್.ಪಿ.ಎ.ದಾರರಾದ ಮೆ: ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂಪೆನಿ ಲಿ.,ಪ್ಯಾರಡಿ ಜಿಮ್ ಪ್ಲಾಸಾ, ಎ.ಬಿ.ಶೆಟ್ಟಿ ಸರ್ಕಲ್, ಮಂಗಳೂರು ಇವರಿಗೆ ಈ ಪ್ರಾಧಿಕಾರದಿಂದ ದಿ: 24-4-2007 ರಂದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಸೆಕ್ಷನ್ 43ಬಿ ಪ್ರಕಾರ

ಕಾರಣ ಕೇಳಿ ನೋಟೀಸನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಹೆಚ್.ಪಿ.ಎ.ದಾರರಿಗೆ ನೀಡಿರುವ ನೋಟೀಸು ದಿ: 27-4-2007 ರಂದು ಸ್ವೀಕೃತಿಯಾಗಿ, ಸ್ವೀಕೃತ ರಶೀದಿ ಈ ಪ್ರಾಧಿಕಾರಕ್ಕೆ ಬಂದಿರುತ್ತದೆ ಹಾಗೂ ವಾಹನದ ಮಾಲೀಕರಿಗೆ ನೀಡಿರುವ ನೋಟೀಸು ಜಾರಿಯಾಗದೆ ಹಿಂದೆ ಬಂದಿರುತ್ತದೆ.

ಮೆ: ಶ್ರೀರಾಮ್ ಟ್ರಾನ್ಸ್ ಪೋರ್ಟ್ ಫೈನಾನ್ಸ್ ಕಂಪೆನಿ ಲಿ.,ಪ್ಯಾರಡಿ ಜಿಮ್ ಪ್ಲಾಸಾ, ಎ.ಬಿ.ಶೆಟ್ಟಿ ಸರ್ಕಲ್, ಮಂಗಳೂರು ಇವರು ತನ್ನ ವಕೀಲರ ಮೂಲಕ ಈ ಪ್ರಾಧಿಕಾರಕ್ಕೆ ದಿ:18-5-2007 ರಂದು ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಜೀಪು ಸಂಖ್ಯೆ: ಕೆಎ–22–ಎಂ–3339 ಕ್ಕೆ ಅವರ ಸಂಸ್ಥೆಯಿಂದ ಧನ ಸಾಲವನ್ನು ನೀಡಿದ್ದು, ವಾಹನ ಮಾಲೀಕ ಸಾರಾಯಿ ಸ್ಯಾಚೆಟ್‌ಗಳನ್ನು ಅಕ್ರಮವಾಗಿ ಸಾಗಾಟ ಮಾಡಿರುವುದು ತನಗೆ ಗೊತ್ತಿರುವುದಿಲ್ಲ. ಜೀಪಿಗೆ ನೀಡಿರುವ ಧನ ಸಾಲದ ಬಾಕಿ ಬಾಬ್ತನ್ನು ವಾಹನ ಮಾಲೀಕನು ತಮಗೆ ಪಾವತಿಸಲು ಇನ್ನೂ ಬಾಕಿಯಿದ್ದು, ಸದರಿ ವಾಹನವನ್ನು ತನಗೆ ಬಿಡುಗಡೆಗೊಳಿಸಬೇಕೆಂದು ಈ ಪ್ರಾಧಿಕಾರಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಅಕ್ರಮವಾಗಿ ಸಾಗಾಟಕ್ಕೆ ಬಳಸಿದ ಜೀಪು ಸಂಖ್ಯೆ: ಕೆಎ–22–ಎಂ–3339 ರ ಮುಟ್ಟುಗೋಲು ನಡವಳಿಗೆ ಸಂಬಂಧಿಸಿ ಸಾಕ್ಷಿ ವಿಚಾರಣೆಯಾಗಿ ಸಂಬಂಧಪಟ್ಟ ಸಾಕ್ಷಿದಾರರಿಗೂ ಹಾಗೂ ವಾಹನದ ಮಾಲೀಕರು ಮತ್ತು ಹೆಚ್.ಪಿ.ಎ.ದಾರರಿಗೆ ಹಾಜರಾತಿ ನೋಟೀಸನ್ನು ಈ ಪ್ರಾಧಿಕಾರದಿಂದ ನೀಡಲಾಗಿರುತ್ತದೆ.

ಈ ಪ್ರಕರಣದಲ್ಲಿ ಸರಕಾರದ ಅಭಿಯೋಜನಾ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸಬೇಕಾಗಿರುವುದು ಅಗತ್ಯವಾಗಿರುವುದರಿಂದ, ಪರಿಶೀಲನಾ ಅಂಶಗಳು ಈ ಕೆಳಗಿನಂತಿರುತ್ತದೆ.

1) ದಿ: 27-04-2006 ರಂದು ಜೀಪು ಸಂಖ್ಯೆ: ಕೆಎ–22–ಎಂ–3339 ರಲ್ಲಿ ಅಕ್ರಮವಾಗಿ 100 ಎಂ.ಎಲ್.ನ 1200 ಸಾರಾಯಿ ಸ್ಯಾಚೆಟ್‌ಗಳನ್ನು ಸಾಗಾಟ ಮಾಡಲಾಗಿತ್ತೇ?

2) ಸದರಿ ವಾಹನದಲ್ಲಿ ಅಕ್ರಮ ಸಾರಾಯಿ ಸ್ಯಾಚೆಟ್‌ಗಳನ್ನು ತನ್ನ ತಿಳುವಳಿಕೆಗೆ ಬಾರದೆ ಮಾಡಲಾಗಿತ್ತೇ ಎಂಬುವುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?

3) ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಈ ಮೇಲಿನ ಪರಿಶೀಲನಾಂಶಗಳನ್ನು ಲಭ್ಯವಿರುವ ಸಾಕ್ಷ್ಯಾಧಾರದ ಮೇಲೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ ಹೌದು ಎಂದು, ಎರಡನೇ ಅಂಶವನ್ನು ನಕರಾತ್ಮಕವಾಗಿ ಇಲ್ಲವೆಂದು ಹಾಗೂ ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಶ್ರೀಮತಿ.ಶೋಭಾ, ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ಬಂಟ್ವಾಳ ಇವರು ಈ ಪ್ರಕರಣದ ತನಿಖಾಧಿಕಾರಿಯಾಗಿದ್ದು, ಇವರು ದಿ:14-6-2007 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿ ಹೇಳಿಕೆಯನ್ನು ನೀಡಿರುತ್ತಾರೆ.

ತಾನು ತಕ್ಷೀರಿಗೆ ಸಂಬಂಧಿಸಿದ ಸೊತ್ತುಗಳನ್ನು ಹಾಗೂ ಕಡತವನ್ನು ದಿ: 17-2-2007 ರಂದು ಬಂಟ್ವಾಳ ನಗರ ಪೊಲೀಸ್ ಠಾಣೆಯ ಅಧಿಕಾರಿಯವರಿಂದ ಪಡೆದುಕೊಂಡಿರುತ್ತೇನೆ. ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ–1 ಎಂದು, ಮಹಜರನ್ನು ನಿಶಾನೆ ಪಿ–2 ಎಂದು, ರಾಸಾಯನಿಕ ವಿಶ್ಲೇಷಕರ ವರದಿಯನ್ನು ನಿಶಾನೆ ಪಿ–3 ಎಂದು ಗುರುತಿಸಲಾಯಿತು. ದಿ:19-2-2007 ರಂದು ತಕ್ಷೀರಿಗೆ ಸಂಬಂಧಿಸಿದ ವಾಹನದ ಮಾಲೀಕತ್ವದ ಬಗ್ಗೆ ಪ್ರಾದೇಶಿಕ ಸಾರಿಗೆ ಅಧಿಕಾರಿ, ಮಂಗಳೂರು ಇವರಿಗೆ ಪತ್ರ ವ್ಯವಹಾರ ಮಾಡಲಾಗಿದ್ದು, ಸದರಿ ಕಚೇರಿಯಿಂದ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಪಡೆದಿದ್ದು, ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಮೂಲಕ ಖಾದರ್ ಎಂಬುವುದಾಗಿ ತಿಳಿದು ಬಂದಿರುತ್ತದೆ. ಈ ಬಗ್ಗೆ ತನಿಖಾ ವರದಿಯನ್ನು ಅಬಕಾರಿ ಅಧೀಕ್ಷಕರು, ಮಂಗಳೂರು ಇವರಿಗೆ ಸಲ್ಲಿಸಿರುತ್ತೇನೆ. ಸದರಿ ವರದಿಯನ್ನು ನಿಶಾನೆ ಪಿ–4 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರಾದ ಮೆ: ಶ್ರೀರಾಮ್ ಟ್ರಾನ್ಸ್ ಪೋರ್ಟ್ ಫೈನಾನ್ಸ್ ಕಂಪೆನಿ ಲಿ.,ಪ್ಯಾರಡಿ ಜಿಮ್ ಪ್ಲಾಸಾ, ಎ.ಬಿ.ಶೆಟ್ಟಿ ಸರ್ಕಲ್, ಮಂಗಳೂರು ಇವರ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ, ವಾಹನದ ಮಾಲೀಕರ ಪರ ತನಿಖೆಯನ್ನು ಪೂರ್ಣಗೊಳಿಸಿ ಮಾನ್ಯ ಜೆ.ಎಂ.ಎಫ್.ಸಿ. ನ್ಯಾಯಾಲಯಕ್ಕೆ ದೋಷಾರೋಪಣ ಪಟ್ಟಿಯನ್ನು ಸಲ್ಲಿಸಿರುತ್ತೇನೆ. ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯಲ್ಲಿ ಮೆ: ಶ್ರೀರಾಮ್ ಟ್ರಾನ್ಸ್ ಪೋರ್ಟ್ ಫೈನಾನ್ಸ್ ಕಂಪೆನಿ ಲಿ., ಪ್ಯಾರಡಿ ಜಿಮ್ ಪ್ಲಾಸಾ, ಎ.ಬಿ.ಶೆಟ್ಟಿ ಸರ್ಕಲ್, ಮಂಗಳೂರು ಎಂದು ನಮೂದಿಸಲಾಗಿದೆ ಎಂದರೆ ಸರಿ. ನಿಶಾನೆ ಪಿ–4 ನ್ನು ಸುಳ್ಳು ವರದಿ ಎಂದು ಹೇಳುವುದು ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ತನಿಖಾಧಿಕಾರಿಯವರು ಸಲ್ಲಿಸಿದ ಹೇಳಿಕೆಗಳು ದಾಖಲಿಸಿದ ತಕ್ಷೀರಿಗೆ ಒಂದಕ್ಕೊಂದು ತಾಳೆಯಾಗಿದ್ದು, ಅರ್ಜಿದಾರರಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಸಾಕ್ಷಿದಾರರು ನೀಡಿರುವ ಹೇಳಿಕೆಗಳು ದಾಖಲಿಸಿದ ತಕ್ಷೀರಿಗೆ ಸಂಬಂಧಿಸಿ ಮಹಜರಿಗೆ ಒಂದಕ್ಕೊಂದು ಪೂರಕವಾಗಿದ್ದು, ಸ್ಥಳದಲ್ಲಿ ತಯಾರಿಸಿದ ಮಹಜರು ಮತ್ತು ಪ್ರಕರಣದ ಪ್ರಥಮ ಮಾಹಿತಿ ವರದಿಯು ಈ ಸಾಕ್ಷಿದಾರರ ಹೇಳಿಕೆಯಿಂದ ಸದ್ರಿ ಅಪರಾಧ ನಡೆದಿರುವುದು ಈ ಪ್ರಾಧಿಕಾರಕ್ಕೆ ಮನದಟ್ಟಾಗಿದೆ. ಆದುದರಿಂದ ಜಪ್ತುಪಡಿಸಿರುವ ವಾಹನದಲ್ಲಿ ಯಾವುದೇ ರಹದಾರಿ ಪತ್ರವಿಲ್ಲದೆ ವಾಹನ ಮಾಲೀಕನು ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ದಾಸ್ತಾನು ಹೊಂದಿ ಜೀಪಿನಲ್ಲಿ ಕೇರಳ ರಾಜ್ಯಕ್ಕೆ ಸಾಗಾಟ ಮಾಡಿರುವುದು ಸ್ಪಷ್ಟವಾಗಿ ಸಾಬೀತಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ, ಮೊದಲನೇ ವಿವಾದಾಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಈ ಪ್ರಕರಣದ ಎರಡನೇ ಅಂಶವನ್ನು ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ವಾಹನದಲ್ಲಿ ವಾಹನ ಮಾಲೀಕರಿಗೆ ತಿಳಿಯದೆ ಈ ಕೃತ್ಯವು ಎಸಗಲಾಗಿದೆ ಎಂಬುವುದನ್ನು ಸಾಬೀತುಪಡಿಸಬೇಕಾಗಿದ್ದು, ವಾಹನ ಮಾಲೀಕರು ಇದುವರೆಗೂ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ. ಹೆಚ್.ಪಿ.ಎ.ದಾರರಿಗೆ ಹಾಗೂ ಅವರ ಪರ ವಕೀಲರಿಗೆ ಈ ಪ್ರಾಧಿಕಾರದಿಂದ ಹಲವಾರು ಬಾರಿ ಹಾಜರಾತಿ ನೋಟೀಸುಗಳನ್ನು ಮತ್ತು ಪ್ರತಿರಕ್ಷೆ ಸಾಕ್ಷಿಗಳನ್ನು ಹಾಜರುಪಡಿಸಲು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸುಗಳನ್ನು ಅರ್ಜಿದಾರರು ಹಾಗೂ ಅವರ ಪರ ವಕೀಲರು ಸ್ವೀಕರಿಸಿದರೂ ಈ ಪ್ರಾಧಿಕಾರದ ಮುಂದೆ ಸಾಕ್ಷಿ ವಿಚಾರಣೆಗಾಗಿ ಹಾಜರಾಗಿರುವುದಿಲ್ಲ. ವಾಹನದ ಮಾಲೀಕರಿಗೆ ಹಲವಾರು ಬಾರಿ ಕಾಲಾವಕಾಶ ನೀಡಲಾಗಿದ್ದರೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನೀಡಲು ಹಾಜರಾಗದಿರುವುದನ್ನು ಗಮನಿಸಿದಾಗ, ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳ ಸಾಗಾಣಿಕೆಗೆ ತೊಡಗಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ ಹಾಗೂ ವಾಹನದ ಹೆಚ್.ಪಿ.ಎ. ಹೊಂದಿರುವ ಮೆ: ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂಪೆನಿ ಲಿ., ಪ್ಯಾರಡಿ ಜೆಮ್ ಪ್ಲಾಸಾ, ಎ.ಬಿ.ಶೆಟ್ಟಿ ಸರ್ಕಲ್, ಮಂಗಳೂರು ಇವರು ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ಸೆಕ್ಷನ್ 43 ಬಿ ಪ್ರಕಾರ ಕಾರಣ ಕೇಳಿ ನೋಟೀಸನ್ನು ಸ್ವೀಕರಿಸಿದ್ದು, ಇದಕ್ಕೆ ಉತ್ತರವಾಗಿ ದಿ: 18-5-2007 ರಂದು ಸದರಿ ವಾಹನವನ್ನು ತನ್ನ ಪರ ಬಿಡುಗಡೆಗೊಳಿಸಲು ಅರ್ಜಿ ಸಲ್ಲಿಸಿರುತ್ತಾರೆ. ಆದರೆ ಇವರು ಸದರಿ ವಾಹನದ ಹೆಚ್.ಪಿ.ಎ.ದಾರರಾಗಿದ್ದು, ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನದ ಆರ್.ಸಿ. ಮಾಲೀಕರ ಪರ ಬಂಡವಾಳ ಒದಗಿಸಿದ್ದು, ಸದರಿ ಆರ್.ಸಿ. ಮಾಲೀಕರಿಂದ ಅವರಿಗೆ ಸಾಲದ ಬಾಬ್ತು ಪಾವತಿಗೆ ಬಾಕಿಯಿರುವುದಾಗಿ ತಿಳಿಸಿರುತ್ತಾರೆ. ಆದರೆ ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ(2) ರಂತೆ ವಾಹನವನ್ನು ಅಕ್ರಮ ಸೊತ್ತುಗಳ ಸಾಗಾಣಿಕೆ ಬಳಸದೇ ಇರುವ ಬಗ್ಗೆ ಅವರು ತೋರಿಸಿರುವ ಯಾವುದೇ ಷರತ್ತುಗಳ ಮಾಹಿತಿ ಮತ್ತು ಸದರಿ ವಾಹನವನ್ನು ಅವರು ಆಗಾಗ್ಗೆ ಮರುಪರಿಶೀಲನೆಗೊಳಪಡಿಸಿ, ಸದರಿ ವಾಹನವನ್ನು ಯಾವುದೇ ಅಕ್ರಮ ಸೊತ್ತುಗಳ ಸಾಗಾಣಿಕೆ ಬಗ್ಗೆ ಉಪಯೋಗಿಸದಿರುವ ಕುರಿತು ದೃಢೀಕರಣಗೊಳ್ಳದಿರುವುದರಿಂದ, ಅವರು ಸಲ್ಲಿಸಿದ ಅರ್ಜಿಯನ್ನು ತಿರಸ್ಕರಿಸಬಹುದಾಗಿದೆ. ಸದರಿ ವಾಹನವು ಜಪ್ತಾಗಿ ಈಗಾಗಲೇ ಸುಮಾರು 3 ವರ್ಷ 5 ತಿಂಗಳು ಕಳೆದಿದ್ದು, ಸದರಿ ಅವಧಿಯಲ್ಲಿ ವಾಹನದ ಮೂಲ ಆರ್.ಸಿ. ಮಾಲೀಕ ಈ ಪ್ರಾಧಿಕಾರದ ಮುಂದೆ ವಾಹನದ ಬಿಡುಗಡೆಗಾಗಿ ಅರ್ಜಿ ಸಲ್ಲಿಸಿರುವುದಿಲ್ಲ. ಆದುದರಿಂದ ವಾಹನ ಮಾಲೀಕರ ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ಸಾರಾಯಿ ಸ್ಯಾಚೆಟ್‌ಗಳನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುವುದರಿಂದ ಹಾಗೂ ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಎಲ್ಲಾ ಕಾರಣಗಳು ಮತ್ತು ಪುರಾವೆಗಳಿಂದ ಈ ಪ್ರಕರಣದಲ್ಲಿ ಜಪ್ತುಗೊಳಿಸಿರುವ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಜೀಪ್ ಸಂಖ್ಯೆ: ಕೆಎ-22-ಎಂ-3339 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಆದೇಶ.

ಆದೇಶ ಸಂಖ್ಯೆ: ಎಸ್‌ಡಿಕೆ/232/ಡಿಟಿಸಿಆರ್/2006-07 ದಿನಾಂಕ: 25ನೇ ಸೆಪ್ಟೆಂಬರ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ,ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಾಲಂ 43 ಎ ರಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಪೊಲೀಸ್ ಉಪ ನಿರೀಕ್ಷಕರು, ಬಂಟ್ವಾಳ ನಗರ ಪೊಲೀಸ್ ಠಾಣೆ, ಬಂಟ್ವಾಳ ಇವರ ತಕ್ಷೀರು ಸಂ: 83/2006 ದಿ:27-04-2006 ರಲ್ಲಿ ಜಪ್ತುಪಡಿಸಿರುವ ವಾಹನ ಜೀಪ್ ಸಂಖ್ಯೆ:ಕೆಎ-22-ಎಂ-3339 ನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ವಾಹನದ ಮಾಲೀಕರು ಸದ್ರಿ ವಾಹನವನ್ನು ತನ್ನ ತಿಳುವಳಿಕೆಯಿಂದಲೇ ಅಕ್ರಮವಾಗಿ ಸಾರಾಯಿ ಸಾಗಾಣಿಕೆಗೆ ಉಪಯೋಗಿಸಲಾಗಿರುವುದು. ಅವರು ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ ಕಲಂ 43 ಬಿ ರೀತ್ಯಾ ನೀಡಲಾದ ನೋಟೀಸನ್ನು ಸ್ವೀಕರಿಸದೆ ಹಾಗೂ ಪ್ರಾಧಿಕಾರದ ಮುಂದೆ ಅವರ ವಿರುದ್ಧ ಇರುವ ಆರೋಪವನ್ನು ಅಲ್ಲಗಳೆಯುವ ಬಗ್ಗೆ ಯಾವುದೇ ಪ್ರಯತ್ನ ಮಾಡದೆ ಹಾಗೂ ತತ್ಸಂಬಂಧ ಯಾವುದೇ ಪುರಾವೆಗಳನ್ನು ನೀಡಲು ವಿಫಲರಾಗಿರುವ ಕಾರಣ, ಅವರ ತಿಳುವಳಿಕೆಯಿಂದಲೇ ಈ ಅಪರಾಧವನ್ನು ಎಸಗಿರುವುದರಿಂದ, ವಾಹನದ ಮಧ್ಯಂತರ

ಬಿಡುಗಡೆಗೆ ಆಸ್ಪದ ಇರುವುದಿಲ್ಲ. ಕಾರಣ ಸದ್ರಿ ವಾಹನದ ಫೈನಾನ್ಸ್ ಸಂಸ್ಥೆಯಾದ ಮೆ: ಶ್ರೀರಾಮ್ ಟ್ರಾನ್ಸ್‌ಪೋರ್ಟ್ ಫೈನಾನ್ಸ್ ಕಂಪೆನಿ ಲಿ., ಪ್ಯಾರಡಿ ಜಿವ್ ಪ್ಲಾಸಾ, ಎ.ಬಿ.ಶೆಟ್ಟಿ ಸರ್ಕಲ್, ಮಂಗಳೂರು ಇವರು ಮಧ್ಯಂತರ ಬಿಡುಗಡೆಗೆ ಈ ಪ್ರಾಧಿಕಾರದಲ್ಲಿ ಒಪ್ಪಿಸಿದ ಅರ್ಜಿಯನ್ನು ತಿರಸ್ಕರಿಸಿ ಆದೇಶಿಸಿದೆ.

ಈ ಆದೇಶವನ್ನು ದಿನಾಂಕ:25-09-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ.-1: ಶ್ರೀಮತಿ.ಶೋಭಾ, ಅಬಕಾರಿ ಉಪ ನಿರೀಕ್ಷಕರು, ಜಾರಿ ಮತ್ತು ತನಿಖೆ, ಬಂಟ್ವಾಳ.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1	:	ಪ್ರಥಮ ಮಾಹಿತಿ ವರದಿ ಪ್ರತಿ
ನಿಶಾನೆ ಪಿ-2	:	ಮಹಜರು ಪ್ರತಿ
ನಿಶಾನೆ ಪಿ-3	:	ರಾಸಾಯನಿಕ ವಿಶ್ಲೇಷಣಾ ವರದಿ
ನಿಶಾನೆ ಪಿ-4	:	ತನಿಖಾ ವರದಿ

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು:-

-ಇಲ್ಲ-

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.1027

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ
ಸಂಖ್ಯೆ: ಎಸ್‌ಡಿಕೆ/30/ಡಿಟಿಸಿಆರ್/2004-05 ದಿನಾಂಕ:29ನೇ ಸೆಪ್ಟೆಂಬರ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿರ್ಯಾದುದಾರರು:
ಅಬಕಾರಿ ಉಪ ನಿರೀಕ್ಷಕರು,
ಬಂಟ್ವಾಳ ಉಪ ವಲಯ,
ಬಂಟ್ವಾಳ.

ಆರೋಪಿ ಹಾಗೂ ವಾಹನ ಮಾಲೀಕರು:
ಡಿ.ಜಯರಾಮ ಶೆಟ್ಟಿ,
ಬಿನ್: ಡಿ.ಪೂವಪ್ಪ ಶೆಟ್ಟಿ, ಶ್ರೀದೇವಿಕೃಪಾ ಮನೆ,
ಬುಡೋಳಿ ಗ್ರಾಮ, ದಂಡೆಗೋಳಿ ಅಂಚೆ, ಬಂಟ್ವಾಳ.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:10-08-2004 ರಂದು ಫಿರ್ಯಾದುದಾರರು ತಮ್ಮ ಸಿಬ್ಬಂದಿಯೊಂದಿಗೆ ದೊರೆತ ಖಚಿತ ವರ್ತಮಾನದ ಮೇರೆಗೆ ಬಂಟ್ವಾಳ ತಾಲೂಕಿನ ವಾಮದಪದವು ಮುಖಾಂತರ ಬೆಳ್ತಂಗಡಿ ತಾಲೂಕಿಗೆ ಅಕ್ರಮ ಮದ್ಯ ಸರಬರಾಜು ಆಗುತ್ತಿದೆ ಎಂಬ ವರ್ತಮಾನದ ಮೇರೆಗೆ ಖಾಸಗಿ ವಾಹನದಲ್ಲಿ ರಾತ್ರಿ 10-00 ಗಂಟೆಗೆ ಸದರಿ ಸ್ಥಳಕ್ಕೆ ಹೋದಾಗ, ಒಬ್ಬ ವ್ಯಕ್ತಿಯು ಕಪ್ಪು ಬಣ್ಣದ ಬಜಾಜ್ ಬಾಕ್ಸರ್ ಮೋಟಾರು ಬೈಕ್ ಸಂಖ್ಯೆ: ಕೆಎ-19-ಎಸ್-878 ನ್ನು ರಸ್ತೆಯ ಬದಿಯಲ್ಲಿ ನಿಲ್ಲಿಸಿ ಅನುಮಾನದ ರೀತಿಯಲ್ಲಿ ವರ್ತಿಸುತ್ತಿರುವುದನ್ನು ಕಂಡು ಕೂಡಲೇ ಸದರಿ ವ್ಯಕ್ತಿಯ ಬಳಿ ಧಾವಿಸಿ ಬೈಕನ್ನು

ಪರಿಶೀಲಿಸಿದಾಗ, ಸದರಿ ಬೈಕಿನ ಪೆಟ್ರೋಲ್ ಟ್ಯಾಂಕ್‌ನ ಮೇಲೆ ಎರಡು ಪ್ಲಾಸ್ಟಿಕ್ ಗೋಣಿ ಚೀಲದ ಕಟ್ಟುಗಳು ಇರುವುದು ಕಂಡು ಬಂತು. ಅನುಮಾನದ ಮೇರೆಗೆ ಗೋಣಿ ಚೀಲವನ್ನು ಪರಿಶೀಲಿಸಿದಾಗ, ಪ್ರತಿಯೊಂದು ಗೋಣಿ ಚೀಲದಲ್ಲಿ ತಲಾ 12 ರಂತೆ ಒಟ್ಟು 24 ಬಾಟಲ್‌ಗಳು 750 ಎಂ.ಎಲ್.ನ ಕೊಲಂಬಿಯ ವಿಸ್ಕಿ ಎಂದು ಲೇಬಲ್ ಹಚ್ಚಿರುವ ಮದ್ಯದ ಬಾಟಲ್‌ಗಳು ಇರುವುದು ಕಂಡು ಬಂತು. ಸದರಿ ಮದ್ಯದ ಬಾಟಲ್‌ಗಳನ್ನು ಸಾಗಾಟ ಮಾಡಲು ಪರವಾನಿಗೆ ಇದೆಯೇ ಎಂದು ಪ್ರಶ್ನಿಸಿದಾಗ, ತನ್ನಲ್ಲಿ ಯಾವುದೂ ಇಲ್ಲವೆಂದು ತಿಳಿಸಿರುತ್ತಾನೆ. ಸದರಿ ವ್ಯಕ್ತಿಯ ವಿಳಾಸವನ್ನು ವಿಚಾರಿಸಿದಾಗ ತನ್ನ ಹೆಸರು ಡಿ.ಜಯರಾಮ ಶೆಟ್ಟಿ, ಬಿನ್: ಡಿ.ಪೂವಪ್ಪ ಶೆಟ್ಟಿ, ಶ್ರೀದೇವಿಕೃಪಾ ಮನೆ, ಬುಡೋಳಿ ಗ್ರಾಮ, ದಂಡೆಗೋಳಿ ಅಂಚೆ, ಬಂಟ್ವಾಳ ಎಂದು ತಿಳಿಸಿರುತ್ತಾನೆ. ಸದರಿ ಮದ್ಯದ ಬಾಟಲ್‌ಗಳನ್ನು ತಾನು ಬೆಳ್ತಂಗಡಿಗೆ ಮಾರಾಟ ಮಾಡಲೆಂದು ಸಾಗಿಸುತ್ತಿರುವುದಾಗಿ ತಿಳಿಸಿರುವ ಮೇರೆಗೆ, ಸಾಕ್ಷಿಗಾಗಿ ರಾತ್ರಿ ವೇಳೆಯಾಗಿರುವುದರಿಂದ ಆಸುಪಾಸಿನಲ್ಲಿ ಯಾರೂ ದೊರಕದ ಕಾರಣ ಸಿಬ್ಬಂದಿಯವರನ್ನೇ ಸಾಕ್ಷಿಯನ್ನಾಗಿರಿಸಿ, ಸದರಿ ಮದ್ಯದ ಬಾಟಲ್‌ಗಳಿಂದ ಎರಡು ಬಾಟಲ್‌ಗಳನ್ನು ರಾಸಾಯನಿಕ ಪರೀಕ್ಷೆಗೆ ಪ್ರತ್ಯೇಕಿಸಿ ಮುಚ್ಚಳವನ್ನು ಬಟ್ಟೆದಾರದಿಂದ ಕಟ್ಟಿ ಇಲಾಖಾ ಮೊಹರು ಹಾಗೂ ಮಾದರಿ ಮೊಹರನ್ನು ಸ್ಥಳದಲ್ಲಿಯೇ ತಯಾರಿಸಲಾಯಿತು ಹಾಗೂ ಆರೋಪಿಯ ಹೆಸರು ಮತ್ತು ವಿಳಾಸವಿರುವ ಗುರುತಿನ ಚೀಟಿಯನ್ನು ಅಂಟಿಸಲಾಯಿತು. ಇದು ಕರ್ನಾಟಕ ಅಬಕಾರಿ ಕಾಯಿದೆ ಕಲಂ 14 ರ ಪ್ರಕಾರ ಅಪರಾಧವಾಗಿದ್ದು, ಕಲಂ 34, 38(ಎ) ರೀತ್ಯಾ ಶಿಕ್ಷಾರ್ಹವಾಗಿರುವುದರಿಂದ, ಸ್ಥಳ ಮಹಜರನ್ನು ಸ್ಥಳದಲ್ಲಿಯೇ ಬರೆದು, ಬಜಾಜ್ ಬಾಕ್ಸರ್ ಹಾಗೂ ಮದ್ಯ ಮತ್ತು ಆರೋಪಿಯನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ,ಆರೋಪಿಯ ವಿರುದ್ಧ ತಕ್ಷೀರು ಸಂ:1/2004-05 ದಿ:10-08-2004 ರಂತೆ ಪ್ರಕರಣವನ್ನು ನೋಂದಾಯಿಸಿ ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ವಾಹನದ ನೋಂದಣಿ ಮಾಲೀಕ ಹಾಗೂ ಮೊಕದ್ದಮೆಯಲ್ಲಿ ಆರೋಪಿಯಾಗಿರುವ ಡಿ.ಜಯರಾಮ ಶೆಟ್ಟಿ, ಬಿನ್: ಡಿ.ಪೂವಪ್ಪ ಶೆಟ್ಟಿ, ಶ್ರೀದೇವಿಕೃಪಾ ಮನೆ, ಬುಡೋಳಿ ಗ್ರಾಮ, ದಂಡೆಗೋಳಿ ಅಂಚೆ, ಬಂಟ್ವಾಳ ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:19-8-2004 ರಂದು ಅರ್ಜಿ ಸಲ್ಲಿಸಿ ತಾನು ನಿರಪರಾಧಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ಹಾಗೂ ಅರ್ಜಿದಾರರು ಮೋಟಾರು ಬೈಕಿಗೆ ಸಮಾನವಾದ ರೂ.24,000/- ಇಂಡೆಮ್ನಿಟಿ ಬಾಂಡ್ ಹಾಗೂ ಅಷ್ಟೇ ಮೊತ್ತಕ್ಕೆ ಸಮಾನವಾದ ಜಾಮೀನುದಾರರಾದ ಶ್ರೀ.ದಿನೇಶ್ ಶೆಟ್ಟಿ, ಬಿನ್: ದಿ.ಪೂವಪ್ಪ, ದೇವಿಕೃಪಾ ಹೌಸ್, ಬುಡೋಳಿ ವಿಲೇಜ್, ದಂಡೆಗೋಳಿ ಪೋಸ್ಟ್, ಬಂಟ್ವಾಳರವರ ಜಮೀನಿನ ಆರ್.ಟಿ.ಸಿ.ಯನ್ನು ಈ ಪ್ರಾಧಿಕಾರಕ್ಕೆ ನೀಡಿದ್ದು ಹಾಗೂ ಪ್ರಾಧಿಕಾರವು ವಿಧಿಸಿದ ಷರತ್ತುಗಳಿಗೆ ಬದ್ಧನಾಗಿರುವುದಾಗಿ ತನ್ನ ಅರ್ಜಿಯಲ್ಲಿ ತಿಳಿಸಿರುತ್ತಾನೆ.

ಸದರಿ ಅರ್ಜಿಯನ್ನು ಪರಿಶೀಲಿಸಿದ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ, ಮಂಗಳೂರುರವರ ನ್ಯಾಯಾಲಯದ ಆದೇಶ ಸಂಖ್ಯೆ: ಎಸ್‌ಡಿಕೆ/30 /ಡಿಟಿಸಿಆರ್/2004-05 ದಿ:15-10-2004 ರ ಆದೇಶದಲ್ಲಿ ಪ್ರಕರಣವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡು ಹಾಗೂ ಶೀಘ್ರಗತಿಯಲ್ಲಿ ಇತ್ಯರ್ಥಪಡಿಸುವ ಉದ್ದೇಶದಿಂದ ಅರ್ಜಿದಾರರ ಅರ್ಜಿಯನ್ನು ಪರಿಶೀಲಿಸಿ, ಅರ್ಜಿದಾರರು ಸಲ್ಲಿಸಿದ ರೂ.24,000/- ಮೌಲ್ಯದ ಇಂಡೆಮ್ನಿಟಿ ಬಾಂಡ್ ಹಾಗೂ ಅಷ್ಟೇ ಮೊತ್ತಕ್ಕೆ ಸಮನಾಗಿ ಒಬ್ಬ ಜಾಮೀನುದಾರರನ್ನು ಸಲ್ಲಿಸಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮೋಟಾರ್ ಬೈಕನ್ನು ಅರ್ಜಿದಾರರ ಸುಪರ್ದಿಗೆ ಕೆಲವು ಷರತ್ತುಗಳನ್ವಯ ವಾಹನದ ಮುಟ್ಟುಗೋಲು ನಡವಳಿಯನ್ನು ಕಾಯ್ದಿರಿಸಿ, ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಆದೇಶಿಸಿರುತ್ತಾರೆ.

ಪ್ರಕರಣದ ತನಿಖೆಯನ್ನು ಫಿರ್ಯಾದುದಾರರು ಮುಂದುವರಿಸುತ್ತ, ಇವರ ತನಿಖಾ ವರದಿ ಸಂ: ಸಿಆರ್.ಸಂ.1/2004-05 ದಿ:16-2-2005ರ ತನಿಖಾ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿ, ಸದರಿ ವರದಿಯಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯದ ಮಾದರಿ ಬಾಟಲ್‌ಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಒಳಪಡಿಸಿದ್ದು, ಸಹಾಯಕ ರಾಸಾಯನಿಕ ವಿಶ್ಲೇಷಕರು, ದ.ಕ.ಜಿಲ್ಲೆ, ಮಂಗಳೂರು ಇವರ ವರದಿ ಸಂ: ಇ-739-2 ದಿ: 31-1-2005 ರಲ್ಲಿ ಮದ್ಯದ ಮದ್ಯಸಾರ ಪ್ರಮಾಣ ಶೇ.43% ಇರುವುದಾಗಿ ದೃಢೀಕರಣ ಪತ್ರ ನೀಡಿರುತ್ತಾರೆ. ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯದ ಬಾಟಲ್‌ಗಳಿಗೆ ಹಚ್ಚಿದ ಲೇಬಲ್ ಗೋವಾ ರಾಜ್ಯದಲ್ಲಿ ಮಾರಾಟಕ್ಕೆ ಎಂದು ನಮೂದಿಸಿರುವ ಕಾರಣ, ಕರ್ನಾಟಕ ರಾಜ್ಯದಲ್ಲಿ ಮಾರಾಟ ಮಾಡಲು ಅಸಾಧ್ಯವಾಗಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಶಿಫಾರಸ್ಸು ಮಾಡಿರುತ್ತಾರೆ. ಅಬಕಾರಿ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ದ.ಕ.ಜಿಲ್ಲೆ, ಮಂಗಳೂರುರವರ ಮುಟ್ಟುಗೋಲು ಆದೇಶ ಸಂಖ್ಯೆ: ಎಸ್‌ಡಿಕೆ/30/ಡಿಟಿಸಿಆರ್/ 2004-05 ದಿ:26-2-2005 ರ ಆದೇಶದಲ್ಲಿ, ಮದ್ಯದ ಸೀಸೆಗಳ ಮೇಲೆ ಗೋವಾ ರಾಜ್ಯದಲ್ಲಿ ಮಾರಾಟಕ್ಕೆ ಮಾತ್ರ ಎಂದು ನಮೂದಿಸಿರುವ ಲೇಬಲ್‌ಗಳನ್ನು ಅಂಟಿಸಿರುವುದರಿಂದ, ಇದನ್ನು ಕರ್ನಾಟಕ ರಾಜ್ಯದಲ್ಲಿ ಮಾರಾಟ ಮಾಡಲು ನಿಷೇಧವಿರುವ ಕಾರಣ ಹಾಗೂ ಸದರಿ ಮದ್ಯವು ಅಧಿಕೃತ ಸನ್ನದು ಸಂಸ್ಥೆಯಿಂದ ತಯಾರಿಸಲಾಗಿರುವ ಬಗ್ಗೆ ಯಾವುದೇ ಆಧಾರಗಳು ಲಭ್ಯವಿಲ್ಲದಿರುವ ಕಾರಣ, ಇಂತಹ ಮದ್ಯವನ್ನು ಸಾರ್ವಜನಿಕರಿಗೆ

ಸೇವನೆಗೆ ನೀಡುವುದು ಪ್ರಾಣಕ್ಕೆ ಹಾನಿಯಾಗುವ ಸಾಧ್ಯತೆ ಸಂಭವವಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಮದ್ಯವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶ ನೀಡಲಾಗಿರುತ್ತದೆ.

ವಾಹನದ ನೋಂದಣಿ ಮಾಲೀಕರಾದ ಶ್ರೀ.ಡಿ.ಜಯರಾಮ ಶೆಟ್ಟಿ, ಬಿನ್: ಡಿ.ಪೂವಪ್ಪ ಶೆಟ್ಟಿ, ಶ್ರೀದೇವಿಕೃಪಾ ಮನೆ, ಬುಡೋಳಿ ಗ್ರಾಮ, ದಂಡೆಗೋಳಿ ಅಂಚೆ, ಬಂಟ್ವಾಳ ಇವರಿಗೆ ಈ ಪ್ರಾಧಿಕಾರದಿಂದ ದಿ:27-6-2009 ರಂದು ಕರ್ನಾಟಕ ಅಬಕಾರಿ ಕಾಯಿದೆ ಸೆಕ್ಷನ್ 43ಬಿ ಪ್ರಕಾರ ಕಾರಣ ಕೇಳಿ ನೋಟೀಸನ್ನು ನೋಂದಣಿ ಅಂಚೆ ಮೂಲಕ ಹಾಗೂ ಫಿರ್ಯಾದುದಾರರ ಮೂಲಕ ನೀಡಲಾಗಿದ್ದು, ಆರ್.ಸಿ. ಮಾಲೀಕರು ನೋಂದಣಿ ಅಂಚೆ ಮೂಲಕ ನೀಡಿದ ನೋಟೀಸು ಜಾರಿಯಾಗಿ, ಅಂಚೆ ಸ್ವೀಕೃತಿ ರಶೀದಿ ಈ ಕಚೇರಿಗೆ ಬಂದಿರುತ್ತದೆ ಹಾಗೂ ಅಬಕಾರಿ ನಿರೀಕ್ಷಕರು ಖುದ್ದಾಗಿ ದಿ:11-7-2009 ರಂದು ಜಾರಿಗೊಳಿಸಿ ವರದಿಯನ್ನು ದಿ:13-7-2009 ರಂದು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ. ವಾಹನದ ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ಈ ಪ್ರಾಧಿಕಾರದ ಮುಂದೆ ಹಾಜರಾಗಿ, ಈ ಪ್ರಾಧಿಕಾರವು ನೀಡಿರುವ ದಿ:27-6-2009 ರಂದು ನೀಡಿದ ಕಾರಣ ಕೇಳಿ ನೋಟೀಸಿಗೆ ಉತ್ತರವನ್ನು ಇದುವರೆಗೂ ಸಲ್ಲಿಸಿರುವುದಿಲ್ಲ. ಇದಲ್ಲದೆ ಮಧ್ಯಂತರ ಸುಪರ್ಧಿಗೆ ಪಡೆದುಕೊಂಡ ವಾಹನವನ್ನು ನ್ಯಾಯಾಲಯದ ಕಲಾಪದ ವೇಳೆಯಲ್ಲಿ ಹಾಜರುಪಡಿಸಲು ಹಲವಾರು ಬಾರಿ ನೋಟೀಸು ನೀಡಿದರೂ, ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿದ ವಾಹನವನ್ನು ಈ ಪ್ರಾಧಿಕಾರದ ಮುಂದೆ ಹಾಜರುಪಡಿಸಿರುವುದಿಲ್ಲ.

ಈ ಪ್ರಕರಣದಲ್ಲಿ ಸರಕಾರದ ಅಭಿಯೋಜನಾ ಪರ ಸಲ್ಲಿಸಿರುವ ಸಾಕ್ಷ್ಯಾಧಾರಗಳ ಮೇಲೆ ಈ ಕೆಳಗಿನ ವಿವಾದಾಂಶಗಳನ್ನು ತೀರ್ಮಾನಿಸಬೇಕಾಗಿರುವುದು ಅಗತ್ಯವಾಗಿರುವುದರಿಂದ, ಪರಿಶೀಲನಾ ಅಂಶಗಳು ಈ ಕೆಳಗಿನಂತಿರುತ್ತದೆ.

1) ದಿ: 10-8-2004 ರಂದು ಬಜಾಜ್ ಬಾಕ್ಸರ್ ಮೋಟರು ಬೈಕ್ ಸಂಖ್ಯೆ: ಕೆಎ-19-ಎಸ್-878 ರಲ್ಲಿ ಅಕ್ರಮವಾಗಿ ಗೋವಾ ರಾಜ್ಯದಲ್ಲಿ ತಯಾರಾದ ಮದ್ಯ ಸಾಗಾಟ ಮಾಡಲಾಗಿತ್ತೇ?

2) ಸದರಿ ವಾಹನದಲ್ಲಿ ಅಕ್ರಮವಾಗಿ ಗೋವಾ ರಾಜ್ಯದಲ್ಲಿ ತಯಾರಾದ ಮದ್ಯವನ್ನು ತನ್ನ ತಿಳುವಳಿಕೆಗೆ ಬಾರದೆ ಮಾಡಲಾಗಿತ್ತೇ ಎಂಬುವುದನ್ನು ವಾಹನ ಮಾಲೀಕರು ಸಾಬೀತುಪಡಿಸಿದ್ದಾರೆಯೇ?

3) ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದೇ?

ಈ ಮೇಲಿನ ಪರಿಶೀಲನಾಂಶಗಳನ್ನು ಲಭ್ಯವಿರುವ ಸಾಕ್ಷಿಗಳ ಆಧಾರದ ಮೇಲೆ ಈ ಕೆಳಗಿನಂತೆ ಉತ್ತರಿಸಲಾಗಿದೆ.

ಒಂದನೇ ಅಂಶವನ್ನು ಗುಣಾತ್ಮಕವಾಗಿ ಹೌದು ಎಂದು, ಎರಡನೇ ಅಂಶವನ್ನು ನಕರಾತ್ಮಕವಾಗಿ ಇಲ್ಲವೆಂದು ಹಾಗೂ ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಶ್ರೀ.ಕಮಲಾಕ್ಷ ಬಲ್ಯಾಯ, ಅಬಕಾರಿ ಉಪ ನಿರೀಕ್ಷಕರು, ಬಂಟ್ವಾಳ ಉಪ ವಲಯ, ಬಂಟ್ವಾಳ ಇವರು ಈ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾಗಿದ್ದು, ಇವರು ದಿ:27-4-2005 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷಿ ಹೇಳಿಕೆಯನ್ನು ನೀಡಿರುತ್ತಾರೆ.

ತಾನು ದಿ: 10-8-2004 ರಂದು ರಾತ್ರಿ 10-00 ಗಂಟೆ ಸಮಯದಲ್ಲಿ ಬಂಟ್ವಾಳ ತಾಲೂಕು ವಾಮದಪದವು ಪೇಟೆಯ ರಸ್ತೆಯ ಬದಿಯಲ್ಲಿ ಒಂದು ಮೋಟಾರು ಬೈಕನ್ನು ನಿಲ್ಲಿಸಿದ್ದು, ಅದರ ನೋಂದಣಿ ಸಂಖ್ಯೆ: ಕೆಎ-19-ಎಸ್-878 ಆಗಿದ್ದು, ಸದರಿ ವಾಹನವನ್ನು ಪರಿಶೀಲಿಸಲಾಗಿ, ಸದರಿ ವಾಹನದ ಪೆಟ್ರೋಲ್ ಟ್ಯಾಂಕ್‌ನ ಮೇಲೆ ಎರಡು ಗೋಣಿ ಚೀಲಗಳಿದ್ದು, ಅವುಗಳಲ್ಲಿ 750 ಎಂ.ಎಲ್.ನ 12 ಸೀಸೆಗಳಂತೆ ಒಟ್ಟು 24 ಬಾಟಲ್‌ಗಳಲ್ಲಿ ಕೊಲಂಬಿಯ ವಿಸ್ಕಿ ಎಂದು ಬರೆದಿರುವ ಲೇಬಲ್ ಇದ್ದು, ಸದರಿ ಮದ್ಯವನ್ನು ಸಾಗಾಟ ಮಾಡಲು ಪರವಾನಿಗೆ ಇದೆಯೇ ಎಂದು ವಿಚಾರಿಸಲಾಗಿ, ತನ್ನಲ್ಲಿ ಯಾವುದೂ ಇಲ್ಲವೆಂದು ಹಾಗೂ ಸದರಿ ವ್ಯಕ್ತಿಯ ಹೆಸರು ಮತ್ತು ವಿಳಾಸವನ್ನು ವಿಚಾರಿಸಿದಾಗ ತಾನು ಡಿ.ಜಯರಾಮ ಶೆಟ್ಟಿ, ಬಿನ್: ಡಿ.ಪೂವಪ್ಪ ಶೆಟ್ಟಿ, ಶ್ರೀದೇವಿಕೃಪಾ ಮನೆ, ಬುಡೋಳಿ ಗ್ರಾಮ, ದಂಡೆಗೋಳಿ ಅಂಚೆ, ಬಂಟ್ವಾಳ ಎಂದು ತಿಳಿಸಿದನು. ಸ್ಥಳದಲ್ಲಿ ತನ್ನ ಸಿಬ್ಬಂದಿಯಲ್ಲದೆ ಬೇರೆ ಸಾಕ್ಷಿದಾರರು ದೊರಕಿಲ್ಲದ ಕಾರಣ ಸಿಬ್ಬಂದಿಯವರನ್ನೇ ಸಾಕ್ಷಿದಾರರನ್ನಾಗಿರಿಸಿ ಮಹಜರನ್ನು ಸ್ಥಳದಲ್ಲಿಯೇ ತಯಾರಿಸಿದೆವು. ಸದರಿ ಮದ್ಯದಿಂದ ರಾಸಾಯನಿಕ ಪರೀಕ್ಷೆಗೆ ಎರಡು ಮಾದರಿ ಸೀಸೆಗಳನ್ನು ಪ್ರತ್ಯೇಕ ಮಾಡಿ, ಅದರ ಬಾಯಿಗೆ ಬಟ್ಟೆ ದಾರ ಸುತ್ತಿ, ಸ್ಥಳದಲ್ಲಿಯೇ ಮಾದರಿ ಸೀಲ್ ಹಾಗೂ ಮಾದರಿ ಮೊಹರನ್ನು ತಯಾರಿಸಲಾಯಿತು. ವಾಹನ, ಸೊತ್ತು ಹಾಗೂ ಆರೋಪಿಯನ್ನು ವಶಕ್ಕೆ ಪಡೆದುಕೊಂಡು, ನಂತರ ಕಚೇರಿಗೆ ಬಂದು ಪ್ರಥಮ ಮಾಹಿತಿ ವರದಿಯನ್ನು ತಯಾರಿಸಿ ಮಾನ್ಯ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ಆರೋಪಿಯು ಸೂಕ್ತ ಜಾಮೀನು ಕೊಟ್ಟಿರುವುದರಿಂದ, ಆತನನ್ನು ಕಾನೂನಿನಂತೆ ಬಿಡುಗಡೆಗೊಳಿಸಿರುತ್ತೇನೆ. ಸದರಿ ಸೊತ್ತುಗಳನ್ನು ತನ್ನ ವಶದಲ್ಲಿಟ್ಟುಕೊಳ್ಳಲು ಈ ಪ್ರಾಧಿಕಾರದಿಂದ ಅನುಮತಿ ಪಡೆದಿರುತ್ತೇನೆ. ತಕ್ಷೀರಿಗೆ ಸಂಬಂಧಿಸಿದ ಮಾದರಿ ಸೀಸೆಗಳನ್ನು ತನ್ನ ಅಬಕಾರಿ ರಕ್ಷಕರ ಮುಖಾಂತರ ರಾಸಾಯನಿಕ

ವಿಶ್ಲೇಷಕರಿಗೆ ಕಳುಹಿಸಿಕೊಟ್ಟಿರುತ್ತೇನೆ. ಮಹಜರನ್ನು ನಿಶಾನೆ ಪಿ-1 ಎಂದು, ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ-2 ಎಂದು, ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಎ ರಡಿಯಲ್ಲಿ ತಯಾರಿಸಿದ ವರದಿಯನ್ನು ನಿಶಾನೆ ಪಿ-3 ಎಂದು ಹಾಗೂ ರಾಸಾಯನಿಕ ವಿಶ್ಲೇಷಕರ ವರದಿಯನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪರ ವಕೀಲರ ಪಾಟೀ ಸವಾಲಿಗೆ ಉತ್ತರಿಸುತ್ತಾ, ತಕ್ಷೀರು ನಡೆದ ಸ್ಥಳದಲ್ಲಿ ಸಾಕ್ಷಿದಾರರಾಗಿ ಬೇರೆ ಯಾರೂ ಸಿಗದ ಕಾರಣ, ಸಿಬ್ಬಂದಿಯವರನ್ನೇ ಸಾಕ್ಷಿಯಾಗಿ ಇರಿಸಿಕೊಂಡಿರುತ್ತೇನೆ. ಸದರಿ ಮದ್ಯವನ್ನು ಮಾರಾಟ ಮಾಡುವ ಉದ್ದೇಶದಿಂದ ಸಾಗಾಟ ಮಾಡಿರುವುದು, ಸದರಿ ಮದ್ಯದಲ್ಲಿ ಸುಮಾರು 24 ಬಾಟಲ್‌ಗಳಿದ್ದು, ಅದು ಪ್ಲಾಸ್ಟಿಕ್ ಬಾಟಲ್ ಆಗಿದ್ದುದರಿಂದ ಸಾಗಿಸಲು ಸಾಧ್ಯವಾಗಿರುತ್ತದೆ. ಸುಳ್ಳು ಮೊಕದ್ದಮೆಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ. ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯವರು ಸಲ್ಲಿಸಿದ ಹೇಳಿಕೆಗಳು ತಾವು ದಾಖಲಿಸಿದ ತಕ್ಷೀರಿಗೆ ಒಂದಕ್ಕೊಂದು ತಾಳೆಯಾಗಿದ್ದು, ಅರ್ಜಿದಾರರಿಗೆ ಯಾವುದೇ ಪ್ರಯೋಜನವಾಗಿರುವುದಿಲ್ಲ.

ಪ್ರಾ.ಸಾ: 2

ಶ್ರೀ.ವಾಮನ, ಅಬಕಾರಿ ರಕ್ಷಕ, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ಪ್ರಕರಣದ ಕೆಮಿಕಲ್ ಕ್ಯಾರಿಯರ್ ಆಗಿದ್ದು, ಇವರು ದಿ:29-03-2007 ರಂದು ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ತಾನು ತಕ್ಷೀರಿಗೆ ಸಂಬಂಧಿಸಿದ ಮಾದರಿ ಸೀಸೆಗಳನ್ನು ದಿ: 23-4-2004 ರಂದು ಅಬಕಾರಿ ಉಪ ನಿರೀಕ್ಷಕರಿಂದ ಪಡೆದುಕೊಂಡು ರಾಸಾಯನಿಕ ತಜ್ಞರಿಗೆ ತಲುಪಿಸಿರುತ್ತೇನೆ. ದಿ: 5-2-2005 ರಂದು ರಾಸಾಯನಿಕ ತಜ್ಞರಿಂದ ಮಾದರಿ ಸೀಸೆಗಳ ವರದಿಯನ್ನು ಅಬಕಾರಿ ಉಪ ನಿರೀಕ್ಷಕರಿಗೆ ತಲುಪಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ. ಅರ್ಜಿದಾರರ ಪಾಟೀ ಸವಾಲಿಗೆ ಉತ್ತರಿಸುತ್ತಾ, ತಾನು ಮದ್ಯದ ಮಾದರಿಯನ್ನು ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡು ಹೋಗಿಲ್ಲ ಎಂದರೆ ಸರಿಯಲ್ಲ ಎಂದು ಸಾಕ್ಷಿ ನುಡಿದಿರುತ್ತಾರೆ.

ಸಾಕ್ಷಿದಾರರು ನೀಡಿರುವ ಹೇಳಿಕೆಗಳು ದಾಖಲಿಸಿದ ತಕ್ಷೀರಿಗೆ ಸಂಬಂಧಿಸಿ ಮಹಜರಿಗೆ ಒಂದಕ್ಕೊಂದು ಪೂರಕವಾಗಿದ್ದು, ಅದಲ್ಲದೆ ಸ್ಥಳದಲ್ಲಿ ತಯಾರಿಸಿದ ಮಹಜರು ಮತ್ತು ಪ್ರಕರಣದ ಪ್ರಥಮ ಮಾಹಿತಿ ವರದಿಯು ಈ ಸಾಕ್ಷಿದಾರರ ಹೇಳಿಕೆಯನ್ನು ಪುಷ್ಟೀಕರಿಸುತ್ತೇನೆ. ಆದುದರಿಂದ ಜಪ್ತುಪಡಿಸಿರುವ ವಾಹನದಲ್ಲಿ ಅಕ್ರಮವಾಗಿ ಗೋವಾ ರಾಜ್ಯದಲ್ಲಿ ತಯಾರಾದ ಮದ್ಯ ದಾಸ್ತಾನು ಹೊಂದಿ ಸಾಗಾಟ ಮಾಡಿರುವುದು ಸ್ಪಷ್ಟವಾಗಿ ಸಾಬೀತಾಗಿದೆ ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತ, ಮೊದಲನೇ ವಿವಾದಾಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಈ ಪ್ರಕರಣದ ಎರಡನೇ ಅಂಶವನ್ನು ಪ್ರಕರಣದಲ್ಲಿ ವಶಪಡಿಸಿಕೊಂಡಿರುವ ವಾಹನದಲ್ಲಿ ವಾಹನ ಮಾಲೀಕರಿಗೆ ತಿಳಿಯದೆ ಈ ಕೃತ್ಯವು ಎಸಗಲಾಗಿದೆ ಎಂಬುವುದನ್ನು ಅರ್ಜಿದಾರರು ಸಾಬೀತುಪಡಿಸಬೇಕಾಗಿದ್ದು, ಅರ್ಜಿದಾರರಿಗೂ ಹಾಗೂ ಅವರ ಪರ ವಕೀಲರಿಗೆ ಈ ಪ್ರಾಧಿಕಾರದಿಂದ ಹಲವಾರು ಬಾರಿ ಹಾಜರಾತಿ ನೋಟೀಸುಗಳನ್ನು ಮತ್ತು ಪ್ರತಿರಕ್ಷೆ ಸಾಕ್ಷಿಗಳನ್ನು ಹಾಜರುಪಡಿಸಲು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸುಗಳನ್ನು ಅರ್ಜಿದಾರರು ಹಾಗೂ ಅವರ ಪರ ವಕೀಲರು ಸ್ವೀಕರಿಸಿದರೂ ಈ ಪ್ರಾಧಿಕಾರದ ಮುಂದೆ ಸಾಕ್ಷಿ ವಿಚಾರಣೆಗಾಗಿ ಹಾಜರಾಗಿರುವುದಿಲ್ಲ. ವಾಹನದ ಮಾಲೀಕರಿಗೆ ಹಲವಾರು ಬಾರಿ ಕಾಲಾವಕಾಶ ನೀಡಲಾಗಿದ್ದರೂ ಈ ಪ್ರಾಧಿಕಾರದ ಮುಂದೆ ಹಾಜರಾಗಿ ತನ್ನ ನಿರಪರಾಧವನ್ನು ಸಾಬೀತುಪಡಿಸಲು ಯಾವುದೇ ಆಸಕ್ತಿ ತೋರಿರುವುದಿಲ್ಲ. ಆದುದರಿಂದ ಅರ್ಜಿದಾರರು ಸಾಕ್ಷ್ಯಾಧಾರಗಳನ್ನು ನೀಡಲು ಹಾಜರಾಗದಿರುವುದನ್ನು ಗಮನಿಸಿದಾಗ ಮತ್ತು ವಾಹನದ ಮಾಲೀಕರೇ ಅಪರಾಧ ಸ್ಥಳದಲ್ಲಿ ವಾಹನದೊಂದಿಗೆ ಸಿಕ್ಕಿಬಿದ್ದು, ವಾಹನದೊಂದಿಗೆ ದಸ್ತಗಿರಿಗೆ ಒಳಪಟ್ಟಿರುತ್ತಾರೆ. ಆದುದರಿಂದ ವಾಹನದ ಮಾಲೀಕರು ತನ್ನ ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ಗೋವಾ ರಾಜ್ಯದಲ್ಲಿ ತಯಾರಾದ ಮದ್ಯ ಸಾಗಾಣಿಕೆಗೆ ತೊಡಗಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ ಹಾಗೂ ವಾಹನದ ಮಾಲೀಕರಿಗೆ ಈ ಪ್ರಾಧಿಕಾರದಿಂದ ಕರ್ನಾಟಕ ಅಬಕಾರಿ ಕಾಯಿದೆ 1965 ಸೆಕ್ಷನ್ 43 ಬಿ ಪ್ರಕಾರ ಕಾರಣ ಕೇಳಿ ನೋಟೀಸನ್ನು ದಿ: 27-6-2009 ರಂದು ನೋಂದಣಿ ಅಂಚೆ ಮೂಲಕ ನೀಡಲಾಗಿ ಹಾಗೂ ತನಿಖಾಧಿಕಾರಿಗಳ ಮೂಲಕ ಜಾರಿಗೊಳಿಸಲಾಗಿದ್ದು, ಅದಕ್ಕೆ ಉತ್ತರವನ್ನು ನೀಡಿರುವುದಿಲ್ಲ. ಪ್ರಕರಣದಲ್ಲಿ ದಸ್ತಗಿರಿಯಾದ ಆರೋಪಿಯು ವಾಹನದ ಮೂಲ ನೋಂದಣಿ ಮಾಲೀಕರಾಗಿದ್ದು, ಅಪರಾಧ ಸ್ಥಳದಲ್ಲಿ ದಸ್ತಗಿರಿಯಾಗಿರುವ ಕಾರಣ, ಅವರ ತಿಳುವಳಿಕೆಯಿಂದಲೇ ವಾಹನದಲ್ಲಿ ಅಕ್ರಮವಾಗಿ ಗೋವಾ ರಾಜ್ಯದಲ್ಲಿ ತಯಾರಾದ ಮದ್ಯವನ್ನು ಹೊಂದಿ ಸಾಗಾಣಿಕೆ ಮಾಡಿರುವುದು ಸಾಬೀತಾಗಿರುವುದರಿಂದ ಹಾಗೂ ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಎಲ್ಲಾ ಕಾರಣಗಳು ಮತ್ತು ಪುರಾವೆಗಳಿಂದ ಈ ಪ್ರಕರಣದಲ್ಲಿ ಜಪ್ತುಗೊಳಿಸಿರುವ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಸೂಕ್ತವೆಂದು ಪ್ರಾಧಿಕಾರವು ತೀರ್ಮಾನಿಸಿ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಬಜಾಜ್ ಬಾಕ್ಸರ್ ಮೋಟಾರು ಬೈಕ್ ಸಂಖ್ಯೆ: ಕೆಎ-19-ಎಸ್-878 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಆದೇಶ.

ಆದೇಶ ಸಂಖ್ಯೆ: ಎಸ್‌ಡಿಕೆ/30/ಡಿಟಿಸಿಆರ್/2004-05 ದಿನಾಂಕ:29ನೇ ಸೆಪ್ಟೆಂಬರ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43 (ಎ) ಅಡಿಯಲ್ಲಿ ದತ್ತವಾದ ಧಿಕಾರವನ್ನು ಚಲಾಯಿಸಿ ಅನುಸರಿಸಬೇಕಾದ ಕ್ರಮಗಳನ್ನು ಅನುಸರಿಸಿದ ನಂತರ ಕಾಲಂ 43 ಎ ರಡಿಯಲ್ಲಿ ಪ್ರದತ್ತವಾದ ಧಿಕಾರವನ್ನು ಚಲಾಯಿಸಿ ಅಬಕಾರಿ ಉಪ ನಿರೀಕ್ಷಕರು, ಬಂಟ್ವಾಳ ಉಪ ವಲಯ, ಬಂಟ್ವಾಳ ಇವರ ತಕ್ಷೀರು ಸಂ: 2004-05 ದಿ:10-8-2004 ರಲ್ಲಿ ಜಪ್ತುಪಡಿಸಿರುವ ವಾಹನ ಬಜಾಜ್ ಬಾಕ್ಸರ್ ಮೋಟಾರು ಬೈಕ್ ಸಂಖ್ಯೆ: ಕೆಎ-19-ಸ್-878 ನ್ನು ಈ ಪ್ರಾಧಿಕಾರದ ಆದೇಶದ ಸಂಖ್ಯೆ: ಎಸ್‌ಡಿಕೆ/30/ಡಿಟಿಸಿಆರ್/2004-05 ದಿ: 15-10-2004 ರಲ್ಲಿ ಾಹನದ ಆರ್.ಸಿ. ಮಾಲೀಕರಾದ ಡಿ.ಜಯರಾಮ ಶೆಟ್ಟಿ, ಬಿನ್: ಡಿ.ಪೂವಪ್ಪ ಶೆಟ್ಟಿ, ಶ್ರೀ ದೇವಿಕೃಪಾ ಮನೆ, ಬುಡೋಳಿ ್ರಮ, ದಂಡೆಗೋಳಿ ಅಂಚೆ, ಬಂಟ್ವಾಳ ಇವರ ಪರ ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಿದ ಆದೇಶವನ್ನು ದ್ದುಗೊಳಿಸಿ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡ ವಾಹನವನ್ನು ಈ ಆದೇಶದ 30 ದಿವಸದೊಳಗೆ ಅಬಕಾರಿ ನಿರೀಕ್ಷಕರು, ಂಟ್ವಾಳ ವಲಯ, ಬಂಟ್ವಾಳ ಇವರ ಕಚೇರಿಯಲ್ಲಿ ಹಾಜರುಪಡಿಸಲು ಆದೇಶಿಸಿದೆ. ವಾಹನದ ಮಾಲೀಕರು ಸದ್ರಿ ಾಹನವನ್ನು ಸಕಾಲದಲ್ಲಿ ಇಲಾಖೆಯ ಸುಪರ್ಧಿಗೆ ಒಪ್ಪಿಸದೆ ಇದ್ದಲ್ಲಿ, ಇದರ ಮೌಲ್ಯಕ್ಕೆ ಅನುಗುಣವಾಗಿ ವಾಹನ ಾಲೀಕರು ನೀಡಿರುವ ಇಂಡೆಮ್ನಿಟಿ ಬಾಂಡ್‌ನ್ನು ಮುಟ್ಟುಗೋಲು ಹಾಕಿಕೊಳ್ಳಲು ಆದೇಶಿಸಿದೆ ಹಾಗೂ ಮೀನುದಾರರಾದ ಶ್ರೀ.ದಿನೇಶ್ ಶೆಟ್ಟಿ, ಬಿನ್: ಡಿ.ಪೂವಪ್ಪ ಶೆಟ್ಟಿ, ಶ್ರೀದೇವಿಕೃಪಾ ಮನೆ, ಬುಡೋಳಿ ಗ್ರಾಮ, ಂಡೆಗೋಳಿ ಅಂಚೆ, ಬಂಟ್ವಾಳ ತಾಲೂಕುರವರ ಜಮೀನನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ವಾಹನದ ೌಲ್ಯವನ್ನು ಪಡೆಯಲಾಗುವುದು.

ಈ ಆದೇಶವನ್ನು ದಿನಾಂಕ:29-09-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರ.ಸಾ.-1: ಶ್ರೀ.ಕಮಲಾಕ್ಷ ಬಲ್ಯಾಯ, ಅಬಕಾರಿ ಉಪ ನಿರೀಕ್ಷಕರು, ಬಂಟ್ವಾಳ ಉಪ ವಲಯ, ಬಂಟ್ವಾಳ.

ಪ್ರ.ಸಾ.-2: ಶ್ರೀ.ವಾಮನ, ಅಬಕಾರಿ ರಕ್ಷಕ, ಬಂಟ್ವಾಳ ಉಪ ವಿಭಾಗ, ಬಂಟ್ವಾಳ.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1	:	ಮಹಜರಿನ ಪ್ರತಿ.
ನಿಶಾನೆ ಪಿ-2	:	ಪ್ರಥಮ ಮಾಹಿತಿ ವರದಿ ಪ್ರತಿ
ನಿಶಾನೆ ಪಿ-3	:	ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಎ ರಡಿಯ ವರದಿ
ನಿಶಾನೆ ಪಿ-4	:	ರಾಸಾಯನಿಕ ವಿಶ್ಲೇಷಣಾ ವರದಿ

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆ ಮಾಡಿದ ಸಾಕ್ಷಿದಾರರು:-

-ಇಲ್ಲ-

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಆರ್.1028

III -F9-B/B

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಸಂಖ್ಯೆ: ಎಸ್‌ಡಿಕೆ/293/ಡಿಟಿಸಿಆರ್/2005-06 ದಿನಾಂಕ:29ನೇ ಸೆಪ್ಟೆಂಬರ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್

ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:

ಅಬಕಾರಿ ನಿರೀಕ್ಷಕರು,
ಬಂಟ್ವಾಳ ಉಪ ವಿಭಾಗ,
ಬಂಟ್ವಾಳ.

ಆರೋಪಿ:

1) ಪ್ರಶಾಂತ್, ಬಿನ್: ರಾಜು ಗೌಡ, ಕೊಯಿಲ ಮನೆ ಮತ್ತು ಅಂಚೆ, ಬಂಟ್ವಾಳ ತಾಲೂಕು.
2) ಹರೀಶ್ ಪೂಜಾರಿ, ಬಿನ್: ನೋಣಯ್ಯ ಪೂಜಾರಿ, ಕೊಯಿಲ ಅಂಚೆ, ಬಂಟ್ವಾಳ.

(ಪರಾರಿಯಾಗಿರುತ್ತಾರೆ)

ವಾಹನ ಮಾಲೀಕರು:

ಪ್ರಶಾಂತ್, ಬಿನ್: ರಾಜು ಗೌಡ, ಕೊಯಿಲ ಮನೆ ಮತ್ತು ಅಂಚೆ, ಬಂಟ್ವಾಳ ತಾಲೂಕು.

ಪ್ರಕರಣದ ಮುಖ್ಯಾಂಶಗಳು:

ದಿನಾಂಕ:03-12-2005 ರಂದು ಬೆಳಿಗ್ಗೆ ಸುಮಾರು 9-45 ಗಂಟೆ ಸಮಯದಲ್ಲಿ ಫಿರ್ಯಾದುದಾರರು ಮತ್ತು ಸಿಬ್ಬಂದಿಯವರು ಬಂಟ್ವಾಳ ತಾಲೂಕು ಬಂಟ್ವಾಳ ಮೂಡಬಿದ್ರೆ ರಸ್ತೆಯ ಕೊಯಿಲ ಎಂಬಲ್ಲಿ ರಸ್ತೆ ಕಾವಲು ನಡೆಸುತ್ತಿದ್ದ ಸಮಯದಲ್ಲಿ ಅತೀ ವೇಗವಾಗಿ ಬರುತ್ತಿದ್ದ ಬಜಾಜ್ ಆಟೋರಿಕ್ಷಾ ಸಂಖ್ಯೆ:ಕೆಎ-19-ಎ-2693 ನ್ನು ನಿಲ್ಲಿಸಲು ಸೂಚನೆ ನೀಡಿದಾಗ, ಸದರಿ ಆಟೋರಿಕ್ಷಾವನ್ನು ಚಾಲಕನು ನಿಲ್ಲಿಸಿ, ತದನಂತರ ಆಟೋರಿಕ್ಷಾವನ್ನು ತಪಾಸಣೆ ನಡೆಸಿದಾಗ, ಅದರೊಳಗೆ 3 ಪ್ಲಾಸ್ಟಿಕ್ ಕ್ಯಾನುಗಳಿದ್ದು, ಶೇಂದಿ ವಾಸನೆ ಬರುತ್ತಿತ್ತು. ಸದರಿ ಸಿಬ್ಬಂದಿಯವರು ಪರಿಶೀಲಿಸುತ್ತಿರುವಾಗ, ಅದರೊಳಗಿದ್ದ ಒಬ್ಬ ವ್ಯಕ್ತಿಯು ರಿಕ್ಷಾದ ಬಲಭಾಗದಿಂದ ಕೆಳಗೆ ಜಿಗಿದು ರಸ್ತೆಯ ಕೆಳಗಿರುವ ತಗ್ಗು ಪ್ರದೇಶಕ್ಕೆ ಓಡಿ ಪರಾರಿಯಾದನು. ಚಾಲಕನಲ್ಲಿ ಆತನ ಹೆಸರು, ವಿಳಾಸ ಕೇಳಿದಾಗ ಶೇಂದಿಯನ್ನು ಆತನೇ ಸಾಗಾಟ ಮಾಡುತ್ತಿರುವುದು. ಆತನ ಹೆಸರು ಹರೀಶ್ ಪೂಜಾರಿ,ಬಿನ್: ನೋಣಯ್ಯ ಪೂಜಾರಿ, ಕೊಯಿಲ ಅಂಚೆ, ಬಂಟ್ವಾಳ ತಾಲೂಕು ಎಂದು ತಿಳಿಸಿದನು. ರಿಕ್ಷಾದಲ್ಲಿದ್ದ ಕ್ಯಾನುಗಳನ್ನು ಪರಿಶೀಲಿಸಿದಾಗ, 35 ಲೀಟರ್ ಗಾತ್ರದ ಒಂದು ಬಿಳಿ ಪ್ಲಾಸ್ಟಿಕ್ ಕ್ಯಾನಿನಲ್ಲಿ 30 ಲೀಟರ್ ಶೇಂದಿ, 20 ಲೀಟರ್ ಗಾತ್ರದ ಪ್ಲಾಸ್ಟಿಕ್ ಕ್ಯಾನಿನಲ್ಲಿ 20 ಲೀಟರ್ ಶೇಂದಿ ಮತ್ತು 10 ಲೀಟರ್ ಗಾತ್ರದ ಪ್ಲಾಸ್ಟಿಕ್ ಕ್ಯಾನಿನಲ್ಲಿ ಸುಮಾರು 10 ಲೀಟರ್ ಶೇಂದಿ ತುಂಬಿದ್ದು, ಒಟ್ಟು 60 ಲೀಟರ್ ಶೇಂದಿಯನ್ನು ಸಾಗಾಟ ಮಾಡಲು ರಹದಾರಿ ಪತ್ರಗಳಿವೆಯೇ ಎಂದು ವಿಚಾರಿಸಿದಾಗ, ತನ್ನಲ್ಲಿ ಅದು ಯಾವುದೂ ಇಲ್ಲವೆಂದು ತಿಳಿಸಿದನು. ಇದು ಕರ್ನಾಟಕ ಅಬಕಾರಿ ಕಾಯಿದೆ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವ ಬಗ್ಗೆ ಎಂದು ತಿಳಿಸಿ, ಆತನ ಹೆಸರು ವಿಚಾರಿಸಿದಾಗ ಪ್ರಶಾಂತ್, ಬಿನ್: ರಾಜು ಗೌಡ, ಕೊಯಿಲ ಮನೆ ಮತ್ತು ಅಂಚೆ, ಬಂಟ್ವಾಳ ತಾಲೂಕು ಎಂದು ತಿಳಿಸಿರುತ್ತಾನೆ. ಸದರಿ ದೊರೆತ ಪ್ಲಾಸ್ಟಿಕ್ ಕ್ಯಾನುಗಳಿಂದ 750 ಎಂ.ಎಲ್.ನ 3 ಬಾಟಲ್‌ಗಳಲ್ಲಿ ಶೇಂದಿಯನ್ನು ತೆಗೆದು, ಅದಕ್ಕೆ ಬಟ್ಟೆದಾರ ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಿ ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಲಾಯಿತು ಹಾಗೂ ಉಳಿದ ಕ್ಯಾನುಗಳಿಗೂ ಸೀಲ್ ಮಾಡಿ, ಸದರಿ ಆರೋಪಿಗಳ ಗುರುತಿನ ಚೀಟಿಯನ್ನು ಅಂಟಿಸಿ ಪಂಚರು ಯಾರೂ ಸಿಗದ ಕಾರಣ ಸಿಬ್ಬಂದಿಯವರನ್ನೇ ಪಂಚರನ್ನಾಗಿರಿಸಿಕೊಂಡು, ಶೇಂದಿ ಹಾಗೂ ಸಾಗಾಟಕ್ಕೆ ಬಳಸಿದ ಆಟೋರಿಕ್ಷಾವನ್ನು ಇಲಾಖಾ ವಶಕ್ಕೆ ತೆಗೆದುಕೊಂಡು ಆರೋಪಿಯನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ, ಮಹಜರನ್ನು ಸ್ಥಳದಲ್ಲಿಯೇ ಬರೆದು ಇದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 11, 14 ರ ಪ್ರಕಾರ ಅಪರಾಧವಾಗಿದ್ದು, ಕಲಂ 32, 34, 38ಎ ಪ್ರಕಾರ ಶಿಕ್ಷಾರ್ಹವಾಗಿರುವುದರಿಂದ, ಆರೋಪಿಗಳ ವಿರುದ್ಧ ತಕ್ಷೀರು ಸಂ:4/2005-06 ದಿ:03-12-2005 ರಂತೆ ಮೊಕದ್ದಮೆಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ವರದಿ ಸಲ್ಲಿಸಿರುತ್ತಾರೆ.

ತನಿಖೆಯನ್ನು ಮುಂದುವರಿಸಿದ ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತನಿಖಾ ವರದಿ ಸಂಖ್ಯೆ: ಸಿಆರ್‌ಎಂ/4/2005-06 ದಿ:28-12-2005 ರ ತನಿಖಾ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಬಜಾಜ್ ಆಟೋರಿಕ್ಷಾ ಕೆಎ-19-ಎ-2693 ರ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯನ್ನು ಪ್ರಾದೇಶಿಕ ಸಾರಿಗೆ, ಮಂಗಳೂರು ಇವರಿಂದ ಪಡೆದು, ಸದರಿ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಮಾಲೀಕ ತಕ್ಷೀರಿನಲ್ಲಿ ದಸ್ತಗಿರಿಯಾದ ಆರೋಪಿ ಪ್ರಶಾಂತ್.ಕೆ ಇವರ ಹೆಸರನ್ನೇ ನೋಂದಾಯಿಸಿರುವುದು ಕಂಡು ಬಂದಿರುವುದರಿಂದ, ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ಕಲಂ 43ಎ ರೀತ್ಯಾ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಶಿಫಾರಸ್ಸು ಮಾಡಿರುತ್ತಾರೆ.

ಪ್ರಾದೇಶಿಕ ಸಾರಿಗೆ ಅಧಿಕಾರಿ, ದ.ಕ.ಜಿಲ್ಲೆ, ಮಂಗಳೂರುರವರು ನೀಡಿರುವ ಬಿ ಎಕ್ಸ್‌ಟ್ರ್ಯಾಕ್ಟ್ ವರದಿಯ ಪ್ರಕಾರ ವಾಹನದ ನೋಂದಣಿ ಮಾಲೀಕರಾದ ಪ್ರಶಾಂತ್, ಬಿನ್: ರಾಜು ಗೌಡ, ಕೊಯಿಲ ಮನೆ ಮತ್ತು ಅಂಚೆ, ಬಂಟ್ವಾಳ ತಾಲೂಕು ಮತ್ತು ಹೆಚ್.ಪಿ.ಎ.ದಾರರಾದ ಶುಗುಣಾಲು ಫೈನಾನ್ಸಿಯರ್, ಸಹುಕಾರ್ಪೆಟ್, ಚೆನ್ನೈ ಇವರುಗಳಿಗೆ ಈ ಪ್ರಾಧಿಕಾರದಿಂದ ದಿ:10-1-2006 ರಂದು ಕರ್ನಾಟಕ ಅಬಕಾರಿ ಕಾಯಿದೆ 1965 ರ ಸೆಕ್ಷನ್ 43ಬಿ ಪ್ರಕಾರ ಕಾರಣ ಕೇಳಿ ನೋಟೀಸುಗಳನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸು ಸ್ವೀಕೃತಿಯಾಗದೆ ಈ ಪ್ರಾಧಿಕಾರಕ್ಕೆ ಹಿಂದೆ ಬಂದಿರುತ್ತದೆ. ನಂತರ ಪ್ರಕರಣದ ಆರೋಪಿಗಳಲ್ಲಿ ಪರಾರಿಯಾದ ಹರೀಶ್ ಪೂಜಾರಿ ಇವರಿಗೆ ಈ ಪ್ರಾಧಿಕಾರದಿಂದ ದಿ:10-1-2006 ರಂದು ಕಾರಣ ಕೇಳಿ ನೋಟೀಸನ್ನು ನೋಂದಣಿ ಅಂಚೆ ಮೂಲಕ ನೀಡಲಾಗಿದ್ದು, ಸದರಿ ನೋಟೀಸು ಸ್ವೀಕೃತಿಯಾಗಿ ಈ ಪ್ರಾಧಿಕಾರಕ್ಕೆ ಅದರ ಸ್ವೀಕೃತಿ ರಶೀದಿಯು ಬಂದಿರುತ್ತದೆ.

ವಾಹನದ ನೋಂದಣಿ ಮಾಲೀಕರಾದ ಪ್ರಶಾಂತ್, ಬಿನ್: ರಾಜು ಗೌಡ, ಕೊಯಿಲ ಮನೆ ಮತ್ತು ಅಂಚೆ, ಬಂಟ್ವಾಳ ತಾಲೂಕು ಇವರು ತನ್ನ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:6-2-2006 ರಂದು ಅರ್ಜಿ ಸಲ್ಲಿಸಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಬೇಕೆಂದು ತನ್ನ ಅರ್ಜಿಯಲ್ಲಿ ಕೋರಿರುತ್ತಾರೆ.

ತಕ್ಷೀರಿನಲ್ಲಿ ವಶಪಡಿಸಿಕೊಂಡ ಆಟೋರಿಕ್ಷಾದ ಮಧ್ಯಂತರ ಬಿಡುಗಡೆಗಾಗಿ ಸಲ್ಲಿಸಿದ ಅರ್ಜಿಯ ಬಗ್ಗೆ ವಿಚಾರಣೆಯನ್ನು ಕೈಗೊಳ್ಳಲಾಗಿದ್ದು, ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ. ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದ ಆದೇಶ ಸಂಖ್ಯೆ:ಇ.ಐ.ಬಿ./ಡಿಇಟಿಸಿಆರ್/293/2005-06 ದಿ:25-7-06 ರ ಆದೇಶದಲ್ಲಿ ವಾಹನದ ಮೌಲ್ಯಕ್ಕೆ ಸಮಾನವಾದ ಮೊತ್ತಕ್ಕೆ ರೂ.17,000/- ಬ್ಯಾಂಕ್ ಗ್ಯಾರಂಟಿಯನ್ನು ನೀಡಿದಲ್ಲಿ, ವಾಹನವನ್ನು ತಾತ್ಕಾಲಿಕ ನೆಲೆಯಲ್ಲಿ ಬಿಡುಗಡೆಗೊಳಿಸಲು ಆದೇಶಿಸಿರುತ್ತಾರೆ. ಸದರಿ ಆದೇಶದಂತೆ ಅರ್ಜಿದಾರರು ಈ ಪ್ರಾಧಿಕಾರಕ್ಕೆ ರೂ.17,000/- ಕ್ಕೆ ಡಿ.ಡಿ.ಯನ್ನು ಸಿಂಡಿಕೇಟ್ ಬ್ಯಾಂಕ್, ಕುಲಶೇಖರ ಶಾಖೆ, ಮಂಗಳೂರು ಇವರಿಂದ ಪಡೆದು, ತಕ್ಷೀರಿನಲ್ಲಿ ವಶಪಡಿಸಿಕೊಂಡ ವಾಹನವನ್ನು ತನ್ನ ಸುಪರ್ಧಿಗೆ ದಿ:3-8-2006 ರಂದು ತಾತ್ಕಾಲಿಕ ನೆಲೆಯಲ್ಲಿ ಪಡೆದುಕೊಂಡಿರುತ್ತಾರೆ. ಅರ್ಜಿದಾರರು ಈ ಪ್ರಾಧಿಕಾರಕ್ಕೆ ಸಲ್ಲಿಸಿದ ರೂ.17,000/-ಮೌಲ್ಯದ ಡಿ.ಡಿ.ಯನ್ನು ರೆವೆನ್ಯೂ ಡಿಪೋಸಿಟ್‌ನಲ್ಲಿ ಭದ್ರತೆಯಾಗಿ ಚಲನ್ ಸಂಖ್ಯೆ: 129 ದಿ: 8-8-2006 ರಂತೆ ಎಸ್.ಬಿ.ಐ., ಮಂಗಳೂರು ಶಾಖೆಯಲ್ಲಿ ಇಡಲಾಗಿದೆ.

ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತನಿಖಾ ವರದಿ ಸಂ:ಸಿಆರ್‌ಎಂ/4/2005-06 ದಿ:28-4-2006 ರ ವರದಿಯಲ್ಲಿ, ತಕ್ಷೀರಿನಲ್ಲಿ ವಶಪಡಿಸಿಕೊಂಡ ಶೇಂದಿಯಲ್ಲಿ ತೆಗೆದ ಸ್ಯಾಂಪಲ್‌ಗಳನ್ನು ರಾಸಾಯನಿಕ ವಿಶ್ಲೇಷಕರು, ಮಂಗಳೂರು ಇವರಿಗೆ ಕಳುಹಿಸಲಾಗಿದ್ದು, ಇವರ ಪತ್ರ ಸಂಖ್ಯೆ: ಇ-653-3 ದಿ:3-1-2005 ರ ವರದಿಯಲ್ಲಿ ಶೇಂದಿಯ ಮದ್ಯಸಾರದ ಪ್ರಮಾಣ ಶೇಕಡಾ 03.0 ಇರುವುದಾಗಿ ದೃಢೀಕರಣ ಪತ್ರ ನೀಡಿದ್ದು, ಸದರಿ ಶೇಂದಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು ಆದೇಶ ನೀಡಬೇಕೆಂದು ಶಿಫಾರಸ್ಸು ಮಾಡಿರುತ್ತಾರೆ. ಅಬಕಾರಿ ನಿರೀಕ್ಷಕರು, ಬಂಟ್ವಾಳ ವಲಯ ಇವರ ಶಿಫಾರಸ್ಸಿನ ಮೇರೆಗೆ ಅಂದಿನ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇ.ಐ.ಬಿ., ದ.ಕ.ಜಿಲ್ಲೆ, ಮಂಗಳೂರು ಇವರ ಕಚೇರಿ ನಡವಳಿ ಆದೇಶ ಸಂಖ್ಯೆ: ಇ.ಐ.ಬಿ/ ಡಿಇಟಿಸಿಆರ್/293/2005-06 ದಿ:27-7-2006 ರ ಆದೇಶದಲ್ಲಿ ತಕ್ಷೀರಿನಲ್ಲಿ ವಶಪಡಿಸಿಕೊಂಡ ಶೇಂದಿಯನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ನಾಶಪಡಿಸಲು, ಉಳಿದ ಪ್ಲಾಸ್ಟಿಕ್ ಕ್ಯಾನುಗಳನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿಗೊಳಿಸಲು ಆದೇಶಿಸಲಾಗಿರುತ್ತದೆ.ಸದರಿ ಆದೇಶದಂತೆ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ಮಹಜರು ಜರುಗಿಸಿ, ದಿ:7-9-2006 ರಂದು ಅವರ ಕಚೇರಿಯ ವಠಾರದಲ್ಲಿ ನಾಶಪಡಿಸಿ, ಮಹಜರು ಪ್ರತಿಯನ್ನು ಹಾಗೂ ವರದಿಯನ್ನು ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತಾರೆ.

ನಂತರ ಪ್ರಕರಣದ ವಿಚಾರಣೆಯನ್ನು ಆರಂಭಿಸಿ, ಈ ಪ್ರಕರಣದಲ್ಲಿ ಈ ಕೆಳಗಿನಂತೆ ವಿವಾದಾಂಶಗಳು ಉದ್ಭವಿಸುತ್ತದೆ.

ಮೊದಲನೇ ವಿವಾದಾಂಶ: ದಿ: 03-12-2005 ರಂದು ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-2693 ರಲ್ಲಿ ಅಕ್ರಮವಾಗಿ ಶೇಂದಿ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ಇತ್ಯಾ ಉಲ್ಲಂಘನೆಗೆ ಬಳಸಲಾಗಿದೆಯೇ?

ಎರಡನೇ ವಿವಾದಾಂಶ: ಸದರಿ ವಾಹನದಲ್ಲಿ ಅಕ್ರಮವಾಗಿ ಶೇಂದಿ ಸಾಗಾಣಿಕೆಯಾಗಿರುವುದರ ಬಗ್ಗೆ ವಾಹನ ಮಾಲೀಕರಿಗೆ ಅರಿವಿಲ್ಲದಂತೆ ಮತ್ತು ಅವರು ಶಾಮೀಲಾಗದೆ ನಡೆದಿದೆ ಹಾಗೂ ಇದರ ಬಗ್ಗೆ ಅವರು ಸಾಕಷ್ಟು ಮುಂಜಾಗ್ರತ ಕ್ರಮವನ್ನು ಕೈಗೊಳ್ಳಲಾಗಿತ್ತು ಎಂಬ ಅಂಶವನ್ನು ಆರೋಪಿಗಳು ಮತ್ತು ವಾಹನ ಮಾಲೀಕರು ಈ ಪ್ರಾಧಿಕಾರಕ್ಕೆ ತೃಪ್ತಿಕರವಾಗಿ ನಿರೂಪಿಸಿರುತ್ತಾರೆಯೇ? ಅಥವಾ ಇಲ್ಲವೇ?

3) ಮೂರನೇ ವಿವಾದಾಂಶ: ಜಪ್ತುಪಡಿಸಲಾದ ವಾಹನವನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ, ಎರಡನೇ ಅಂಶವನ್ನು ನಕಾರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸಾ: 1

ಪ್ರಾಸಿಕ್ಯೂಶನ್ ಪರ ಪ್ರಕರಣದ ಫಿರ್ಯಾದುದಾರರು ಹಾಗೂ ತನಿಖಾಧಿಕಾರಿಯಾದ ಶ್ರೀ ಅಮರನಾಥ ಎಸ್.ಎಸ್. ಭಂಡಾರಿ, ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ದಿ:21-6-2007 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ದಿ:3-12-2005 ರಂದು ಬಂಟ್ವಾಳ ಮೂಡಬಿದ್ರೆ ರಸ್ತೆಯಲ್ಲಿ ರಸ್ತೆಗಾವಲು ನಡೆಸುತ್ತಿದ್ದು, ಕೊಯಿಲ ಎಂಬ ಸ್ಥಳದಲ್ಲಿ ಅತೀ ವೇಗವಾಗಿ ಬರುತ್ತಿದ್ದ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-2693 ನ್ನು ನಿಲ್ಲಿಸಲು ಸೂಚನೆ ನೀಡಿದಾಗ, ಸದರಿ ಆಟೋರಿಕ್ಷಾವನ್ನು ಚಾಲಕನು ನಿಲ್ಲಿಸಿ, ತದನಂತರ ಆಟೋರಿಕ್ಷಾವನ್ನು ತಪಾಸಣೆ ನಡೆಸಿದಾಗ, ಅದರೊಳಗೆ 3 ಪ್ಲಾಸ್ಟಿಕ್ ಕ್ಯಾನುಗಳಿದ್ದು, ಶೇಂದಿ ವಾಸನೆ ಬರುತ್ತಿತ್ತು. ಸದರಿ ಸಿಬ್ಬಂದಿಯವರು ಪರಿಶೀಲಿಸುತ್ತಿರುವಾಗ, ಅದರೊಳಗಿದ್ದ ಒಬ್ಬ ವ್ಯಕ್ತಿಯು ರಿಕ್ಷಾದ ಬಲಭಾಗದಿಂದ ಕೆಳಗೆ ಜಿಗಿದು ರಸ್ತೆಯ ಕೆಳಗಿರುವ ತಗ್ಗು ಪ್ರದೇಶಕ್ಕೆ ಓಡಿ ಪರಾರಿಯಾದನು. ಚಾಲಕನಲ್ಲಿ ಆತನ ಹೆಸರು, ವಿಳಾಸ ಕೇಳಿದಾಗ ಶೇಂದಿಯನ್ನು ಆತನೇ ಸಾಗಾಟ ಮಾಡುತ್ತಿರುವುದು. ಆತನ ಹೆಸರು ಹರೀಶ್ ಪೂಜಾರಿ, ಬಿನ್: ನೋಣಯ್ಯ ಪೂಜಾರಿ, ಕೊಯಿಲ ಅಂಚೆ, ಬಂಟ್ವಾಳ ತಾಲೂಕು ಎಂದು ತಿಳಿಸಿದನು. ರಿಕ್ಷಾದಲ್ಲಿದ್ದ ಕ್ಯಾನುಗಳನ್ನು ಪರಿಶೀಲಿಸಿದಾಗ, 35 ಲೀಟರ್ ಗಾತ್ರದ ಒಂದು ಬಿಳಿ ಪ್ಲಾಸ್ಟಿಕ್ ಕ್ಯಾನಿನಲ್ಲಿ 30 ಲೀಟರ್ ಶೇಂದಿ, 20 ಲೀಟರ್ ಗಾತ್ರದ ಪ್ಲಾಸ್ಟಿಕ್ ಕ್ಯಾನಿನಲ್ಲಿ 20 ಲೀಟರ್ ಶೇಂದಿ ಮತ್ತು 10 ಲೀಟರ್ ಗಾತ್ರದ ಪ್ಲಾಸ್ಟಿಕ್ ಕ್ಯಾನಿನಲ್ಲಿ ಸುಮಾರು 10 ಲೀಟರ್ ಶೇಂದಿ ತುಂಬಿದ್ದು, ಒಟ್ಟು 60 ಲೀಟರ್ ಶೇಂದಿಯನ್ನು ಸಾಗಾಟ ಮಾಡಲು ರಹದಾರಿ ಪತ್ರಗಳಿವೆಯೇ ಎಂದು ವಿಚಾರಿಸಿದಾಗ, ತನ್ನಲ್ಲಿ ಅದು ಯಾವುದೂ ಇಲ್ಲವೆಂದು ತಿಳಿಸಿದನು. ಇದು ಕರ್ನಾಟಕ ಅಬಕಾರಿ ಕಾಯಿದೆ ಪ್ರಕಾರ ಅಪರಾಧ ಹಾಗೂ ಶಿಕ್ಷಾರ್ಹವಾಗಿರುವ ಬಗ್ಗೆ ಎಂದು ತಿಳಿಸಿ, ಆತನ ಹೆಸರು ವಿಚಾರಿಸಿದಾಗ ಪ್ರಶಾಂತ್, ಬಿನ್: ರಾಜು ಗೌಡ, ಕೊಯಿಲ ಮನೆ ಮತ್ತು ಅಂಚೆ, ಬಂಟ್ವಾಳ ತಾಲೂಕು ಎಂದು ತಿಳಿಸಿರುತ್ತಾನೆ. ಸದರಿ ದೊರೆತ ಪ್ಲಾಸ್ಟಿಕ್ ಕ್ಯಾನುಗಳಿಂದ 750 ಎಂ.ಎಲ್.ನ 3 ಬಾಟಲ್‌ಗಳಲ್ಲಿ ಶೇಂದಿಯನ್ನು ತೆಗೆದು ಬಟ್ಟೆದಾರ ಕಟ್ಟಿ ಇಲಾಖಾ ಸೀಲ್‌ನಿಂದ ಸೀಲ್ ಮಾಡಿ ರಾಸಾಯನಿಕ ಪರೀಕ್ಷೆಗಾಗಿ ಪ್ರತ್ಯೇಕಿಸಲಾಯಿತು ಹಾಗೂ ಉಳಿದ ಕ್ಯಾನುಗಳಿಗೂ ಸೀಲ್ ಮಾಡಿ, ಸದರಿ ಆರೋಪಿಗಳ ಗುರುತಿನ ಚೀಟಿಯನ್ನು ಅಂಟಿಸಿ ಪಂಚರು ಯಾರೂ ಸಿಗದ ಕಾರಣ ಸಿಬ್ಬಂದಿಯವರನ್ನೇ ಪಂಚರನ್ನಾಗಿರಿಸಿಕೊಂಡು, ಶೇಂದಿ ಹಾಗೂ ಸಾಗಾಟಕ್ಕೆ ಬಳಸಿದ ಆಟೋರಿಕ್ಷಾವನ್ನು ಇಲಾಖಾ ವಶಕ್ಕೆ ತೆಗೆದು ಆರೋಪಿಯನ್ನು ಸ್ಥಳದಲ್ಲಿಯೇ ದಸ್ತಗಿರಿ ಮಾಡಿ ಮಹಜರನ್ನು ಸ್ಥಳದಲ್ಲಿಯೇ ಬರೆದು, ನಂತರ ಕಚೇರಿಗೆ ಬಂದು ಪ್ರಥಮ ಮಾಹಿತಿ ವರದಿಯನ್ನು ತಯಾರಿಸಿ, ವರದಿಯನ್ನು ಮಾನ್ಯ ನ್ಯಾಯಾಲಯಕ್ಕೂ ಹಾಗೂ ಈ ಪ್ರಾಧಿಕಾರಕ್ಕೆ ಸಲ್ಲಿಸಿರುತ್ತೇನೆ. ಮಹಜರಿನ ಪ್ರತಿಯನ್ನು ನಿಶಾನೆ ಪಿ-1 ಎಂದು, ಅದರಲ್ಲಿರುವ ತನ್ನ ಸಹಿಯನ್ನು ನಿಶಾನೆ ಪಿ-1ಎ ಎಂದು, ಪ್ರಥಮ ಮಾಹಿತಿ ವರದಿಯನ್ನು ನಿಶಾನೆ ಪಿ-2 ಎಂದು ಗುರುತಿಸಲಾಯಿತು. ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಎ ರಡಿಯಲ್ಲಿ ಒಂದು ವರದಿಯನ್ನು ತಯಾರಿಸಿ ಇದನ್ನು ನಿಶಾನೆ ಪಿ-3 ಎಂದು, ಸ್ಥಳದಲ್ಲಿಯೇ ತಯಾರಿಸಿದ ಮಾದರಿ ಸೀಲ್‌ನ್ನು ನಿಶಾನೆ ಪಿ-4 ಎಂದು ಗುರುತಿಸಲಾಯಿತು. ನಂತರ ವಶಪಡಿಸಿಕೊಂಡ ವಾಹನದ ಮಾಲೀಕತ್ವದ ಬಗ್ಗೆ ಸಂಬಂಧಪಟ್ಟ ಸಾರಿಗೆ ಅಧಿಕಾರಿಯವರಿಂದ ಬಿ ಅಬ್‌ಸ್ಟ್ರ್ಯಾಕ್ಟ್ ವರದಿಯನ್ನು ಪಡೆದು, ಸದರಿ ವರದಿಯ ಪ್ರಕಾರ ವಾಹನದ ಮಾಲೀಕ ಪ್ರಶಾಂತ್.ಕೆ ರಾಜು ಗೌಡ ಎಂದು ತಿಳಿದು ಬಂದಿರುತ್ತದೆ. ನಂತರ ದಿ:27-12-2005 ರಂದು ತನ್ನ ರಕ್ಷಕರ ಮೂಲಕ ಪ್ರಕರಣದ ಮಾದರಿ ಸೀಸೆಗಳನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಲಾಗಿದ್ದು, ಅವರಿಂದ ವರದಿಯನ್ನು ಪಡೆದುಕೊಂಡಿರುತ್ತೇನೆ. ರಾಸಾಯನಿಕ ತಜ್ಞರು ಸಲ್ಲಿಸಿದ ವರದಿಯನ್ನು ನಿಶಾನೆ ಪಿ-5 ಎಂದು ಗುರುತಿಸಲಾಯಿತು ಮತ್ತು ದಿ:28-12-2005 ರಂದು ತನಿಖಾ ವರದಿಯನ್ನು ಅಬಕಾರಿ ಅಧೀಕ್ಷಕರು, ಮಂಗಳೂರು ಇವರಿಗೆ ಸಲ್ಲಿಸಲಾಗಿದ್ದು, ಸದರಿ ವರದಿಯನ್ನು ನಿಶಾನೆ ಪಿ-6 ಎಂದು ಗುರುತಿಸಲಾಯಿತು ಎಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರು ಹಾಗೂ ಅವರ ಪರ ವಕೀಲರು ಯಾರೂ ಹಾಜರಾಗದೇ ಇಲ್ಲದಿರುವುದರಿಂದ ಪಾಟೀ ಸವಾಲನ್ನು ಇಲ್ಲವೆಂದು ಹಾಗೂ ವಕೀಲರ ಕೋರಿಕೆ ಮೇರೆಗೆ ದಿ:4-3-2009 ರಂದು ಪಾಟೀ ಸವಾಲು ನಡೆಸುವ ಬಗ್ಗೆ ಅರ್ಜಿಯನ್ನು ಸಲ್ಲಿಸಿದ್ದು, ಆ ದಿವಸ ಕೂಡಾ ವಾಹನದ ಮಾಲೀಕರಾಗಲಿ ಅಥವಾ ಅವರ ಪರ ವಕೀಲರು ಗೈರು ಹಾಜರು ಇರುವುದರಿಂದ ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು. ಸಾಕ್ಷಿದಾರರು ನೀಡಿರುವ ಸಾಕ್ಷ್ಯವು ಮಹಜರಿನಲ್ಲಿ ನಮೂದಿಸಿದ ಅಂಶಗಳಿಗೂ ಹಾಗೂ ಅವರು ನೀಡಿರುವ ಸಾಕ್ಷಿಯು ಒಂದಕ್ಕೊಂದು ಪೂರಕವಾಗಿರುತ್ತವೆ. ಈ ಸಾಕ್ಷಿದಾರರಿಂದ ಅರ್ಜಿದಾರರಿಗೆ ಯಾವುದೇ ಪ್ರಯೋಜನ ದೊರೆತ್ತಿರುವುದಿಲ್ಲ.

ಪ್ರಾ.ಸಾ: 2

ಪ್ರಾಸಿಕ್ಯೂಶನ್ ಪರ ಪ್ರಕರಣದ ಕೆಮಿಕಲ್ ಕ್ಯಾರಿಯರ್ ಆಗಿದ್ದ ಶ್ರೀ.ದಿನಕರ, ನಿವೃತ್ತ ಅಬಕಾರಿ ಮುಖ್ಯ ರಕ್ಷಕ, ಕೋಟೆಕಾರ್ ಪೋಸ್ಟ್, ಸೋಮೇಶ್ವರ, ಇವರು ದಿ:31-12-2008 ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಎ.ಡಿ.ಪಿ.ಯವರ ಮುಖ್ಯ ವಿಚಾರಣೆಗೆ ಉತ್ತರವನ್ನು ನೀಡುತ್ತಾ, ತಾನು ದಿ:27-12-2005 ರಂದು ತಕ್ಷೀರಿಗೆ ಸಂಬಂಧಪಟ್ಟ 750 ಎಂ.ಎಲ್.ನ 3 ಬಾಟಲ್ ಶೇಂದಿ ಮಾದರಿಗಳನ್ನು ರಾಸಾಯನಿಕ ತಜ್ಞರಲ್ಲಿ ಪರೀಕ್ಷೆಗೆ ತೆಗೆದುಕೊಂಡು ಹೋಗಿರುತ್ತೇನೆ ಹಾಗೂ ದಿ: 3-1-2006 ರಂದು ರಾಸಾಯನಿಕ ತಜ್ಞರು ಪರಿಶೀಲಿಸಿದ ವರದಿ ಹಾಗೂ ಸ್ಯಾಂಪಲ್‌ಗಳನ್ನು ತೆಗೆದುಕೊಂಡು ಕಚೇರಿಗೆ ತಲುಪಿಸಿರುತ್ತೇನೆಂದು ಸಾಕ್ಷಿ ನುಡಿದಿರುತ್ತಾರೆ.

ಅರ್ಜಿದಾರರ ಪಾಟೀ ಸವಾಲಿಗೆ ವಾಹನ ಮಾಲೀಕರಾಗಲಿ ಅಥವಾ ಅವರ ಪರ ವಕೀಲರಾಗಲಿ ಯಾರೂ ಹಾಜರಾಗದಿರುವುದರಿಂದ, ಪಾಟೀ ಸವಾಲು ಇಲ್ಲವೆಂದು ಪರಿಗಣಿಸಲಾಯಿತು.

ಅರ್ಜಿದಾರರಿಗೆ ಹಾಗೂ ಅವರ ಪರ ವಕೀಲರಿಗೆ ಈ ಪ್ರಾಧಿಕಾರದಿಂದ ರಕ್ಷಣಾ ಸಾಕ್ಷಿ ವಿಚಾರಣೆಯನ್ನು ಹಾಜರುಪಡಿಸಲು ಹಲವಾರು ಬಾರಿ ನೋಟೀಸನ್ನು ನೀಡಲಾಗಿದ್ದು, ಸದರಿ ನೋಟೀಸು ಸ್ವೀಕೃತವಾದ ಬಗ್ಗೆ ಸ್ವೀಕೃತಿ ರಶೀದಿ ಈ ಪ್ರಾಧಿಕಾರದಲ್ಲಿ ತಲುಪಿರುತ್ತದೆ. ಈ ಬಗ್ಗೆ ಸಾಕಷ್ಟು ಕಾಲಾವಕಾಶ ನೀಡಿದರೂ ತಮ್ಮ ರಕ್ಷಣಾ ಸಾಕ್ಷಿಯನ್ನು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುವುದಿಲ್ಲ ಹಾಗೂ ಈ ಪ್ರಾಧಿಕಾರವು ನೀಡಿದ ಕಾರಣ ಕೇಳಿ ನೋಟೀಸಿಗೆ ಉತ್ತರವನ್ನು ಇದುವರೆಗೂ ಸಲ್ಲಿಸಿರುವುದಿಲ್ಲ.

ಪ್ರಕರಣದ ಫಿರ್ಯಾದುದಾರರು ಪೂರಕವಾಗಿ ನೀಡಿರುವ ಸಾಕ್ಷ್ಯಾಧಾರದ ಮೇಲೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ದಿ:3-12-2005 ರಂದು ಜಪ್ತುಪಡಿಸಿಕೊಂಡಿರುವ ಆಟೋರಿಕ್ಷಾ ಸಂ:ಕೆಎ-19-ಎ-2693 ರಲ್ಲಿ ಅಕ್ರಮವಾಗಿ 60 ಲೀಟರ್ ಶೇಂದಿಯನ್ನು ಅಕ್ರಮ ಸಾಗಾಣಿಕೆಯಾಗಿರುವುದು ಸಾಬೀತಾಗಿರುವುದರಿಂದ ಒಂದನೇ ಅಂಶವನ್ನು ಗುಣಾತ್ಮಕವಾಗಿ ಪರಿಗಣಿಸಲಾಗಿದೆ.

ಇಂತಹ ಅಕ್ರಮ ಶೇಂದಿ ಸಾಗಾಟ ತನ್ನ ತಿಳುವಳಿಕೆಗೆ ಬಾರದೆ ನಡೆದಿದೆ ಎಂಬುವುದನ್ನು ಸಾಕ್ಷ್ಯಾಧಾರಗಳೊಂದಿಗೆ ಸಾಬೀತುಪಡಿಸುವುದು ವಾಹನ ಮಾಲೀಕರ ಆದ್ಯ ಹೊಣೆಗಾರಿಕೆಯಾಗಿರುತ್ತದೆ. ಈ ಕಾರಣದಿಂದ ವಾಹನ ಮಾಲೀಕರು ಅವರ ವಾಹನದಲ್ಲಿ ಅಕ್ರಮವಾಗಿ ಶೇಂದಿ ಸಾಗಾಣಿಕೆ ಮಾಡಿರುವುದು ಮೇಲ್ನೋಟಕ್ಕೆ ಸಾಬೀತಾಗಿರುತ್ತದೆ. ಅಲ್ಲದೆ ಈ ಪ್ರಾಧಿಕಾರದ ಮುಂದೆ ಹಾಜರಾಗಿ ರಕ್ಷಣಾ ಸಾಕ್ಷಿ ನೀಡಿರುವುದಿಲ್ಲ. ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರು ದಿ:3-12-2005 ರಂದು ರಸ್ತೆ ಕಾವಲು ನಡೆಸುತ್ತಿದ್ದ ಸಂದರ್ಭದಲ್ಲಿ ಆರ್.ಸಿ. ಮಾಲೀಕರು ಖುದ್ದು ಅಕ್ರಮ ಶೇಂದಿ ಸಾಗಾಟ ಮಾಡುತ್ತಿರುವ ಸಂದರ್ಭದಲ್ಲಿ ದಸ್ತಗಿರಿಯಾದ ಆರೋಪಿ ವಾಹನದ ಚಾಲಕ ಹಾಗೂ ಮಾಲೀಕನಾಗಿದ್ದು, ತಾನೇ ಸ್ವತ: ಶೇಂದಿಯನ್ನು ಸಾಗಾಟ ಮಾಡಿರುವುದು ಮೇಲ್ನೋಟಕ್ಕೆ ಕಂಡು ಬಂದಿರುತ್ತದೆ ಆದುದರಿಂದ ವಾಹನ ಮಾಲೀಕನೇ ಸ್ವತ: ತನ್ನ ಆಟೋರಿಕ್ಷಾವನ್ನು ಅಕ್ರಮ ಶೇಂದಿ ಸಾಗಾಣಿಕೆಗೆ ಬಳಸಿರುವುದು ನಿಸ್ಸಂದೇಹವಾಗಿ ಸಾಬೀತಾಗಿರುತ್ತದೆ. ಈ ಮೇಲಿನ ಕಾರಣಗಳಿಂದ ಎರಡನೇ ಅಂಶವನ್ನು ನಕಾರಾತ್ಮಕವಾಗಿ ಪರಿಗಣಿಸಿದೆ.

ಈ ಮೇಲಿನ ಎಲ್ಲಾ ಕಾರಣಗಳಿಂದ ಮಹಜರು ಸಾಕ್ಷಿಗಳ ವಿಚಾರಣೆ ಹಾಗೂ ಲಭ್ಯವಿರುವ ದಾಖಲಾತಿಗಳಿಂದ ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಆಟೋರಿಕ್ಷಾದಲ್ಲಿ ಅಕ್ರಮವಾಗಿ 60 ಲೀಟರ್ ಶೇಂದಿ ಸಾಗಾಟ ಮಾಡಲು ಬಳಸಲಾಗಿರುವುದು ಮೇಲ್ನೋಟಕ್ಕೆ ಸಾಬೀತಾಗಿರುವುದರಿಂದ, ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಲಂ 43ಎ ರಡಿ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಬಹುದಾಗಿರುವುದರಿಂದ, ಈ ಪ್ರಕರಣದಲ್ಲಿ ಜಪ್ತುಪಡಿಸಲಾಗಿರುವ ಆಟೋರಿಕ್ಷಾ ಸಂ:ಕೆಎ-19-ಎ-2693 ನ್ನು ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

ಆದೇಶ ಸಂಖ್ಯೆ: ಎಸ್‌ಡಿಕೆ/293/ಡಿಟಿಸಿಆರ್/2005-06 ದಿನಾಂಕ:29ನೇ ಸೆಪ್ಟೆಂಬರ್, 2009

ನೂರ್ ಮಹಮ್ಮದ್ ಹುಸೇನ್, ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ಆದ ನಾನು ಕರ್ನಾಟಕ ಅಬಕಾರಿ ಕಾಯಿದೆ 1965 ರ ಕಾಲಂ 43(ಎ) ಅಡಿಯಲ್ಲಿ ದತ್ತವಾದ ಅಧಿಕಾರವನ್ನು ಚಲಾಯಿಸಿ, ನಿಯಮ 43(ಬಿ) ರಲ್ಲಿ ಅನುಸರಿಸಬೇಕಾದ ಕ್ರಮಗಳನ್ನು ಜರುಗಿಸಿ ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರ ತಕ್ಷೀರು ಸಂಖ್ಯೆ: 4/2005-06 ದಿನಾಂಕ:3-12-2005 ರಲ್ಲಿ ಜಪ್ತುಪಡಿಸಿರುವ ಬಜಾಜ್ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-2693 ನ್ನು ನಿಯಮ 43ಎ(2) ರನ್ವಯ ಸರಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶ ನೀಡಿರುತ್ತೇನೆ.

ಈ ಪ್ರಾಧಿಕಾರದಿಂದ ದಿ:25-7-2006 ರಂದು ವಾಹನವನ್ನು ತಾತ್ಕಾಲಿಕವಾಗಿ ಮಧ್ಯಂತರ ಬಿಡುಗಡೆಗೊಳಿಸಿ ಹೊರಡಿಸಿರುವ ಆದೇಶವನ್ನು ರದ್ದುಗೊಳಿಸಿ ಆದೇಶಿಸಿದೆ. ಆರ್.ಸಿ. ಮಾಲೀಕರು ಸದರಿ ಮಧ್ಯಂತರ ಬಿಡುಗಡೆ ಹೊಂದಿರುವ ಆಟೋರಿಕ್ಷಾ ಸಂಖ್ಯೆ: ಕೆಎ-19-ಎ-2693 ನ್ನು ಈ ಆದೇಶದ 30 ದಿನಗಳ ಒಳಗೆ ಈ ಪ್ರಾಧಿಕಾರದ ವಶಕ್ಕೆ ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ ಇವರಲ್ಲಿ ಒಪ್ಪಿಸಲು ಆದೇಶಿಸಿದೆ. ತಪ್ಪಿದಲ್ಲಿ ಭದ್ರತೆಯಾಗಿ

ನೀಡಿರುವ ರೆವೆನ್ಯೂ ಡಿಪೋಸಿಟ್‌ನಲ್ಲಿ ಇಟ್ಟಿರುವ ಡಿ.ಡಿ. ಮೊತ್ತ ರೂ.17,000/- ವನ್ನು ಸರಕಾರಕ್ಕೆ ಪಡೆದು ಚಲನ್ ಮೂಲಕ ಖಜಾನೆಗೆ ಪಾವತಿಸಿಕೊಳ್ಳಲು ಆದೇಶಿಸಿದೆ. ಈ ಆದೇಶದ ಪಾಲನೆ ಬಗ್ಗೆ ಹಾಗೂ ಸದ್ರಿ ಮುಟ್ಟುಗೋಲು ಹಾಕಿಕೊಳ್ಳಲಾದ ವಾಹನವನ್ನು ಅಬಕಾರಿ ಉಪ ಅಧೀಕ್ಷಕರು, ಬಂಟ್ವಾಳ ಉಪ ವಿಭಾಗ ಇವರು ಪಡೆದುಕೊಂಡು ಈ ಪ್ರಾಧಿಕಾರಕ್ಕೆ ವರದಿ ಒಪ್ಪಿಸಲು ಆದೇಶಿಸಿದೆ.

ಈ ಆದೇಶವನ್ನು ದಿ:29-09-2009 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ಈ ಆದೇಶವು ಇಂದಿನಿಂದ 30 ದಿವಸಗಳ ನಂತರ ಜಾರಿಯಲ್ಲಿ ಬರುತ್ತದೆ.

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಅನುಬಂಧ-1

ಫಿರ್ಯಾದುದಾರರ ಪರ ಮಂಡಿಸಲಾದ ಸಾಕ್ಷಿಗಳ ವಿವರ

ಪ್ರಾ.ಸಾ: 1- ಅಬಕಾರಿ ನಿರೀಕ್ಷಕರು, ಬಂಟ್ವಾಳ ಉಪ ವಿಭಾಗ, ಬಂಟ್ವಾಳ.

ಪ್ರಾ.ಸಾ: 2 - ಶ್ರೀ.ದಿನಕರ, ನಿವೃತ್ತ ಅಬಕಾರಿ ಮುಖ್ಯ ರಕ್ಷಕ, ಕೋಟೆಕಾರ್ ಪೋಸ್ಟ್, ಸೋಮೇಶ್ವರ, ಮಂಗಳೂರು.

ಅನುಬಂಧ-2

ಫಿರ್ಯಾದುದಾರರ ಪರ ಮಂಡಿಸಲಾದ ದಾಖಲಾತಿಗಳು

ನಿಶಾನೆ ಪಿ-1 : ಮಹಜರ್ ಪ್ರತಿ
ನಿಶಾನೆ ಪಿ-1ಎ : ಮಹಜರ್‌ನಲ್ಲಿ ಫಿರ್ಯಾದುದಾರರ ಸಹಿ
ನಿಶಾನೆ ಪಿ-2 : ಪ್ರಥಮ ಮಾಹಿತಿ ವರದಿ
ನಿಶಾನೆ ಪಿ-3 : ಕರ್ನಾಟಕ ಅಬಕಾರಿ ಕಾಯಿದೆ ಕಲಂ 43ಎ ರಲ್ಲಿರುವ ವರದಿ.
ನಿಶಾನೆ ಪಿ-4 : ಮಾದರಿ ಸೀಲ್
ನಿಶಾನೆ ಪಿ-5 : ಕೆಮಿಕಲ್ ವರದಿ.
ನಿಶಾನೆ ಪಿ-6 : ತನಿಖಾದಿಕಾರಿಯವರ ತನಿಖಾ ವರದಿ.

ಅನುಬಂಧ-3

ವಾಹನ ಮಾಲೀಕರ ಪರ ವಿಚಾರಣೆಗೆ ಯಾರೂ ಹಾಜರಾಗಿರುವುದಿಲ್ಲ.

ಅನುಬಂಧ-4

ವಾಹನ ಮಾಲೀಕರ ಪರವಾಗಿ ಗುರುತಿಸಲಾದ ಸಾಕ್ಷಿದಾರರು

-ಇಲ್ಲ-

ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿಗಳು ಹಾಗೂ
ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಪಿ.ಆರ್.1025

ಅಧಿಕೃತ ಅಧಿಕಾರಿಗಳು ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್ ದ.ಕ.ಜಿಲ್ಲೆ, ಮಂಗಳೂರು ಇವರ ನ್ಯಾಯಾಲಯದಲ್ಲಿ

ನಂ: ಎಸ್‌ಡಿಕೆ/04/ಡಿಟಿಸಿಆರ್/2004-05, ದಿನಾಂಕ:10ನೇ ಸೆಪ್ಟೆಂಬರ್, 2009

ಉಪಸ್ಥಿತರು: ನೂರ್ ಮಹಮ್ಮದ್ ಹುಸೇನ್
ಅಧಿಕೃತ ಅಧಿಕಾರಿ ಹಾಗೂ ಡೆಪ್ಯುಟಿ ಕಮೀಷನರ್ ಆಫ್ ಎಕ್ಸೈಜ್, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

ಫಿರ್ಯಾದುದಾರರು:
ಅಬಕಾರಿ ಉಪ ನಿರೀಕ್ಷಕರು,
ಇ.ಐ.ಬಿ. ,
ದ.ಕ ಮತ್ತು ಉಡುಪಿ ಜಿಲ್ಲೆ.

ಆರೋಪಿ:
1) ಎನ್.ಸಂತೋಷ್ ಕುಮಾರ್,
ಬಿನ್:ಉಕ್ಕುಂದಪ್ಪ, ಶ್ರೀವನ, ಜೆ.ಬಿ.ಲೋಬೋ ರೋಡ್,
ಕೊಡಿಕಲ್, ಮಂಗಳೂರು.

ಪ್ರಕರಣದ ಮುಖ್ಯಾಂಶಗಳು:

ಅಬಕಾರಿ ಉಪ ನಿರೀಕ್ಷಕರು(2), ಇಐಬಿ,ದ.ಕ ಮತ್ತು ಉಡುಪಿ ಜಿಲ್ಲೆ ಇವರು ಅಕ್ರಮ ನಕಲಿ ಮದ್ಯ ತಯಾರಿಕಾ ಘಟಕದ ಬಗ್ಗೆ ಖಚಿತ ವರ್ತಮಾನದ ಮೇರೆಗೆ, ದಿನಾಂಕ 20.6.2005 ರಂದು ರಾತ್ರಿ 9.30 ಗಂಟೆ ಸಮಯದಲ್ಲಿ

ಮಂಗಳೂರು ತಾಲೂಕು ಕೊಂಚಾಡಿ ಗ್ರಾಮದ ದೇರಬೈಲ್ ಗೀತಾ ನಗರದ ಲ್ಯಾಂಡ್‌ಲಿಂಕ್ಸ್ ಟೌನ್‌ಶಿಪ್‌ನ 2ನೇ ಮುಖ್ಯ ರಸ್ತೆಯ 6ನೇ ಅಡ್ಡ ರಸ್ತೆಯಲ್ಲಿರುವ ಮನೆ ನಂ: 1-ಹೆಚ್-64 ಮನೆಗೆ ದಾಳಿ ನಡೆಸಿರುತ್ತಾರೆ. ಸದ್ರಿ ಮನೆಯನ್ನು ಶೋಧಿಸಲು ನ್ಯಾಯಾಲಯದಿಂದ ಸರ್ಚ್ ವಾರೆಂಟ್ ಪಡೆಯಲು ಸಮಯಾವಕಾಶವಿಲ್ಲದ ಕಾರಣ, ಸ್ಥಳದಲ್ಲಿಯೇ ಶೋಧನೆ ಮಾಡಲು ಕಾರಣಗಳನ್ನು ದಾಖಲಿಸಿ ಶೋಧನಾ ಮೆಮೋ ತಯಾರಿಸಿ ,ಮನೆಯನ್ನು ಪ್ರವೇಶಿಸಿ ಶೋದಿಸಿದಾಗ ಮನೆಯ ಒಳಗೆ ಮದ್ಯ ತಯಾರಿಕಾ ಸಾಮಾಗ್ರಿಗಳಿದ್ದು, ಒಂದು ಕೋಣೆಯಲ್ಲಿ ರಟ್ಟಿನ ಪೆಟ್ಟಿಗೆಗಳು, ಮತ್ತೊಂದು ಕೋಣೆಯಲ್ಲಿ ಬಾಟ್ಲಿಯ ಮುಚ್ಚಳಗಳನ್ನು ಹಾಕಿ ಸೀಲು ಮಾಡುವ ಯಂತ್ರ ಹಾಗೂ ಬಿಳಿ ಕ್ಯಾನುಗಳಲ್ಲಿ ಮದ್ಯ ತುಂಬಿಸಿ ಶೇಖರಿಸಿ ಇಟ್ಟಿರುವುದು ಕಂಡು ಬಂದು, ಸದ್ರಿ ಕ್ಯಾನಿನ ಮುಚ್ಚಳವನ್ನು ತೆರೆದು ನೋಡಿದಾಗ ಅವುಗಳಲ್ಲಿ ಮದ್ಯ ತುಂಬಿಸಿ ಇರುವುದು ಕಂಡು ಬಂದು ಮನೆಯ ಎಡಭಾಗದ ಅಡುಗೆ ಕೋಣೆಯಲ್ಲಿ 5 ಮಂದಿ ಕುಳಿತು ಮದ್ಯ ತುಂಬಿಸಿದ ಬಾಟಲಿಗಳಿಗೆ ಲೇಬಲ್ ಅಂಟಿಸಿ, ಬಾಕ್ಸ್‌ಗಳಲ್ಲಿ ತುಂಬಿಸುತ್ತಿರುವುದು ಪತ್ತೆಯಾಗಿರುತ್ತದೆ. ನಂತರ ಅವರಲ್ಲಿ ಮದ್ಯವನ್ನು ತಯಾರಿಸಿ, ದಾಸ್ತಾನು ಹೊಂದಲು ಯಾವುದೇ ಕಾನೂನುಬದ್ದ ದಾಖಲೆಗಳು ಇವೆಯೇ ,ಎಂದು ಸದ್ರಿ ವ್ಯಕ್ತಿಗಳನ್ನು ಕೇಳಿದಾಗ ಯಾವುದೇ ದಾಖಲೆಗಳು ಇರುವುದಿಲ್ಲವೆಂದು ತಿಳಿಸಿದ ಮೇರೆಗೆ ಇದೊಂದು ಬೃಹತ್ ಅಕ್ರಮ ನಕಲಿ ಮದ್ಯ ತಯಾರಿಕಾ ಹಾಗೂ ದಾಸ್ತಾನು ಘಟಕವೆಂದು ಖಚಿತಪಡಿಸಿಕೊಂಡು ಮನೆಯ ಪ್ರತಿಯೊಂದು ಕೋಣೆಗಳನ್ನು ಕೂಲಂಕುಷವಾಗಿ ಪರಿಶೀಲಿಸಿ ಈ ಕೆಳಕಂಡ ಸೊತ್ತುಗಳನ್ನು ಜಪ್ತು ಪಡಿಸಿಕೊಳ್ಳಲಾಗಿದೆ.

ಜಪ್ತು ಮಾಡಿದ ಸೊತ್ತುಗಳು:

1. ಮೈಸೂರ್ ಲ್ಯಾನ್ಸರ್ ವಿಸ್ಕಿ ಎಂಬ ಲೇಬಲ್ ಹಚ್ಚಿದ 750 ಎಂಎಲ್ ಸಾಮರ್ಥ್ಯದ ತಲಾ 12 ಸೀಸೆಗಳಂತೆ ತುಂಬಿದ 21ರಟ್ಟಿನ ಪೆಟ್ಟಿಗೆಗಳಲ್ಲಿದ್ದ ನಕಲಿ ಮದ್ಯ-189 ಲೀ
2. 180 ಎಂಎಲ್ ಸಾಮರ್ಥ್ಯದ ಸೀಸೆಗಳಲ್ಲಿ ತಲಾ 48 ಬಾಟ್ಲಿಗಳಂತೆ ಒಟ್ಟು 13 ರಟ್ಟಿನ ಪೆಟ್ಟಿಗೆಗಳಲ್ಲಿ ಮೈಸೂರ್ ಲ್ಯಾನ್ಸರ್ ವಿಸ್ಕಿ ಎಂಬ ಲೇಬಲ್ ಹಚ್ಚಿದ ನಕಲಿ ಮದ್ಯ - 112.320 ಲೀ
3. 35 ಲೀ ಸಾಮರ್ಥ್ಯದ ಬಿಳಿ ಬಣ್ಣದ 3 ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ ತುಂಬಿದ ಮದ್ಯದ ಮಿಶ್ರಣ -105 ಲೀ
4. 5 ಲೀ. ಸಾಮರ್ಥ್ಯದ ಬಿಳಿ ಪ್ಲಾಸ್ಟಿಕ್ ಕ್ಯಾನಿನಲ್ಲಿ ಕಾರಮಿಲ್ ದ್ರಾವಣ- 4 ಲೀ.
5. 5 ಲೀ. ಸಾಮರ್ಥ್ಯದ 3 ಪ್ಲಾಸ್ಟಿಕ್ ಕ್ಯಾನ್‌ಗಳಲ್ಲಿ ತಲ್ 2 ಲೀ. ನಂತೆ ಇದ್ದ ಎಸೆನ್ಸ್ ದ್ರಾವಣ- 6 ಲೀ.
6. ವಿವಿಧ ಬ್ರಾಂಡ್‌ಗಳ ಬಾಟಲಿಗೆ ಹಚ್ಚುವ ಲೇಬಲ್‌ಗಳು ಸುಮಾರು - 10000
7. ನಕಲಿ ಭದ್ರತಾ ಚೀಟಿಗಳು 4 ಬಂಡಲ್‌ಗಳಲ್ಲಿ ಅಂದಾಜು 40000
8. ಬಿಳಿ ಬಣ್ಣದ ಪ್ಲಾಸ್ಟಿಕ್ ಜೂಲಿ - 1
9. 10 ಪ್ಲಾಸ್ಟಿಕ್ ಚೀಲಗಳಲ್ಲಿ 750 ಎಂ.ಎಲ್. ಸಾಮರ್ಥ್ಯದ ಖಾಲಿ ಪ್ಲಾಸ್ಟಿಕ್ ಬಾಟಲಿಗಳು - 1000
10. 6 ಪ್ಲಾಸ್ಟಿಕ್ ಚೀಲಗಳಲ್ಲಿ 750 ಎಂಎಲ್ ಸಾಮರ್ಥ್ಯದ ಖಾಲಿ ಗಾಜಿನ ಸೀಸೆಗಳು - 300
11. 15 ಪ್ಲಾಸ್ಟಿಕ್ ಚೀಲಗಳಲ್ಲಿ 180 ಎಂಎಲ್ ಸಾಮರ್ಥ್ಯದ ಖಾಲಿ ಗಾಜಿನ ಸೀಸೆಗಳು - 1500
12. 3 ರಟ್ಟಿನ ಪೆಟ್ಟಿಗೆಗಳಲ್ಲಿ ವಿವಿಧ ಬ್ರಾಂಡಿನ ಬಾಟಲಿ ಮುಚ್ಚಳಗಳು - 10000
13. ಖಾಲಿ ರಟ್ಟಿನ ಪೆಟ್ಟಿಗೆಗಳು - 200
14. 35 ಲೀ ಸಾಮರ್ಥ್ಯದ ಬಿಳಿ ಬಣ್ಣದ ಖಾಲಿ ಪ್ಲಾಸ್ಟಿಕ್ ಕ್ಯಾನ್‌ಗಳು - 40
15. 180 ಲೀ ಸಾಮರ್ಥ್ಯದ ತಿಳಿ ಹಸಿರು ಬಣ್ಣದ ಬಿಪಿಎಲ್ ಕಂಪೆನಿಯ ರೆಫ್ರಿಜರೇಟರ್ - 1
16. ಸುಮಾರು 250 ಲೀ ಸಾಮರ್ಥ್ಯದ ತಗಡಿನ ಫಿಲ್ಟರ್ ಡ್ರಮ್ಮು - 1
17. ಪ್ಲಾಸ್ಟಿಕ್ ಟ್ರೇಗಳು - 10
18. 50 ಲೀ ಸಾಮರ್ಥ್ಯದ ಕಪ್ಪು ಬಣ್ಣದ ಪ್ಲಾಸ್ಟಿಕ್ ಫಿಲ್ಟರ್ - 1
19. ಫೈಬರ್ ಸ್ಪೂಲ್‌ಗಳು (ಚಿಕ್ಕದು) - 2
20. ಪ್ಲಾಸ್ಟಿಕ್ ಪೈಪುಗಳು ತುಂಡುಗಳು (ಅಂದಾಜು 2 ಮೀಟರ್ ಉದ್ದ) - 2
21. ಒಂದು ಮರದ ಮೇಜಿಗೆ ಅಳವಡಿಸಿದ ಹ್ಯಾಂಡ್ ಕ್ಯಾಪಿಂಗ್ ಮೀಶಿನ್ - 1
22. ಸುಮಾರು 5.5 ಅಡಿ ಎತ್ತರದ ವಿದ್ಯುತ್ ಚಾಲಿತ ಕ್ಯಾಪಿಂಗ್ ಮೀಶಿನ್ - 1
23. ಪ್ಯಾನಾಸೋನಿಕ್ ಕಂಪೆನಿಯ ಟೇಪ್ ರೇಕಾರ್ಡರ್ - 1

ಒಟ್ಟು ನಕಲಿ ಮದ್ಯ-406.320 ಲೀಟರು

24. ಕಪ್ಪು ಬಣ್ಣದ ಮಹೇಂದ್ರ ಕಂಪನಿಯ ನಿರ್ಮಿತ ಸ್ಕೋರ್ಫಿಯೋ ಜೀಪ್ ನಂ: KA-19-P-510 ಇಂಜಿನ್ ನಂ: BF 34449779 ಚಾಸಿಸ್ ನಂ: MAITA 2 BFC 32H 86454ಡೀಸಿಲ್ ಚಾಲಿತ ವಾಹನ_1 ಹಾಗೂ ವಾಹನದಲ್ಲಿದ್ದ ಮದ್ಯ

a) ಒರಿಜಿನಲ್ ಚಾಯ್ಸ್ ವಿಸ್ಕಿ ಎಂಬ ಲೇಬಲ್ ಹಚ್ಚಿದ 750 ಎಂಎಲ್ ಸಾಮರ್ಥ್ಯದ ತಲಾ 12 ಸೀಸೆಗಳಂತೆ ಕಪ್ಪು ಬಣ್ಣದ ಪಾಲಿಥೀನ್ ಚೀಲಗಳಲ್ಲಿ ತುಂಬಿದ 64 ಕಟ್ಟುಗಳಲ್ಲಿ ಇದ್ದ ಒಟ್ಟು ನಕಲಿ ಮದ್ಯ-576 ಲೀಟರ್

b) ಕ್ಯೂಬಾ ಪ್ರೀಮಿಯಂ ರಂ ಎಂಬ ಲೇಬಲ್ ಹಚ್ಚಿದ 750 ಎಂಎಲ್ ಸಾಮರ್ಥ್ಯದ ತಲಾ 12 ಬಾಟಲಿಗಳಂತೆ ಕಪ್ಪು ಬಣ್ಣದ ಪಾಲಿಥೀನ್ ಚೀಲಗಳಲ್ಲಿ ತುಂಬಿದ 9 ಕಟ್ಟುಗಳಲ್ಲಿ ಇದ್ದ ಒಟ್ಟು ನಕಲಿ ಮದ್ಯ-81 ಲೀಟರ್

ಒಟ್ಟು 657.000 ಲೀಟರ್ ನಕಲಿ ಮದ್ಯ

ಮೇಲಿನಂತೆ ವಿವರ ನಮೂದಿಸಿರುವ ಸೊತ್ತುಗಳನ್ನು ಹಾಗೂ ಮನೆಯ ಅಂಗಳ ದಲ್ಲಿ ನಕಲಿ ಮದ್ಯ ತುಂಬಿಸಿ ಸರಬರಾಜಿಗಾಗಿ ನಿಲ್ಲಿಸಿದ್ದ ವಾಹನ ಸಂಖ್ಯೆ: ಕೆಎ-19-ಪಿ-510 (ಮಹೀಂದ್ರ ಸ್ಕೋರ್ಪಿಯೋ)ವನ್ನು ಜಪ್ತು ಮಾಡಿಕೊಂಡು, ಇದು ಕರ್ನಾಟಕ ಅಬಕಾರಿ ಕಾಯ್ದೆ 1965ರ ಕಲಂ 11, 13ಎ, 13ಇ, 14ರಂತೆ ಅಪರಾಧ ಮತ್ತು ಸೆಕ್ಷನ್ 32, 34 ಮತ್ತು 38ಎ ಅಡಿಯಲ್ಲಿ ಶಿಕ್ಷಾರ್ಹವಾಗಿರುವುದರಿಂದ, ಅರೋಪಿಗಳಾದ 1) ಸಂಜಯ್ ಎಸ್.ಕೊಕ್ಯಾನ್, ಬಿನ್: ಬಿ.ಎಸ್.ಕುಕ್ಯಾನ್, ಬಿ.1.1ನೇ ಮಹಡಿ, ಸಿಸರ್ಸ್ ಪ್ಯಾಲೇಸ್, ಮೈಕ್ರೊವೇವ್ ಸ್ಟೇಷನ್ ಬಳಿ, ಹ್ಯಾಟ್ ಹಿಲ್ ಮಂಗಳೂರು 2) ಆರ್.ರಾಮ ಬಿನ್: ರಾಜು, ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಬಳಿ,ತಣ್ಣೀರು ಬಾವಿ, ಅಂಚೆ ಪಣಂಬೂರು,ಮಂಗಳೂರು ತಾಲೂಕು 3) ಶ್ರೀ ಉಮ್ಮರ್ ಫಾರೂಕ್, ಬಿನ್ ಟಿ.ಹಮೀದ್, ರಿಫಾ ಮಂಜಿಲ್, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಳಿ, ತಣ್ಣೀರು ಬಾವಿ, ಅಂಚೆ ಪಣಂಬೂರು, ಮಂಗಳೂರು ತಾಲೂಕು 4) ಮೊಹಮ್ಮದ್ ಇಮ್ರಾನ್, ಬಿನ್ ಟಿ.ಹಮೀದ್ ರಿಫಾ ಮಂಜಿಲ್, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಳಿ, ತಣ್ಣೀರು ಬಾವಿ, ಅಂಚೆ ಪಣಂಬೂರು ,ಮಂಗಳೂರು ತಾಲೂಕು 5) ಶ್ರೀ ಮೊಹಮ್ಮದ್ ರಿಯಾದ್,ಬಿನ್:ಟಿ:ಹಮೀದ್, ರಿಫಾ ಮಂಜಿಲ್, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಳಿ, ತಣ್ಣೀರು ಬಾವಿ,ಅಂಚೆ ಪಣಂಬೂರು ಮಂಗಳೂರು ತಾಲ್ಲೂಕು 6) ಮೊಹಮ್ಮದ್ ಆಶ್ರಫ್,ಬಿನ್:ಟಿ.ಹೆಚ್.ಇದಿನಬ್ಬ, ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಬಳಿ, ತಣ್ಣೀರು ಬಾವಿ, ಅಂಚೆ ಪಣಂಬೂರು, ಮಂಗಳೂರು ತಾಲೂಕು ರವರುಗಳನ್ನು ದಸ್ತಗಿರಿ ಮಾಡಿ, ಅರೋಪಿ ವ್ಯಕ್ತಿಗಳ ವಿರುದ್ದ ಪ್ರ.ಮಾ.ವರದಿ ಸಂ:01/2004-05, ದಿ:20-6-05 ರಂತೆ ಮೊಕದ್ದಮೆ ದಾಖಲಿಸಿಕೊಂಡು ಪ್ರಥಮ ಮಾಹಿತಿ ವರದಿಯನ್ನು ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿ,ನಕಲನ್ನು ನೊತ್ತು ಪಟ್ಟಿಯೊಂದಿಗೆ ಅಧಿಕೃತ ಅಧಿಕಾರಿಗಳು ಪ್ರಾಧಿಕಾರಕ್ಕೆ ಸಲ್ಲಿಸಿ, ವಶಪಡಿಸಿಕೊಂಡ ಸೊತ್ತು ಹಾಗೂ ವಾಹನವನ್ನು ತನಿಖೆ ಮುಗಿಯುವವರೆಗೆ ತಮ್ಮ ವಶದಲ್ಲಿಯೇ ಇಟ್ಟುಕೊಳ್ಳಲು ಈ ಪ್ರಾಧಿಕಾರದಿಂದ ಅನುಮತಿಯನ್ನು ಪಡೆದುಕೊಂಡಿರುತ್ತಾರೆ.

ಮೊಕದ್ದಮೆಯ ತನಿಖೆ ಮಾಡಿದ ತನಿಖಾಧಿಕಾರಿಗಳು ಜಪ್ತು ಮಾಡಿದ ಸೊತ್ತುಗಳ ಮಾದರಿಗಳನ್ನು ರಾಸಾಯನಿಕ ಪರೀಕ್ಷೆಗೆ ಒಳಪಡಿಸಿದ್ದು, ವರದಿ ಸಂ:ಇ-265, ದಿ:6-7-05 ರಂತೆ ರಾಸಾಯನಿಕ ತಜ್ಞರ ವರದಿ ಪಡೆದುಕೊಂಡಿದ್ದು ಮಾದರಿಗಳಲ್ಲಿ ಮದ್ಯಸಾರದ ಅಂಶ ಪತ್ತೆಯಾಗಿದ್ದು, ಮದ್ಯದಲ್ಲಿ ಮದ್ಯಸಾರದ ಪ್ರಮಾಣ 37.0% ಯಿಂದ 55.0% ವರೆಗೆ ಇರುವುದು ಹಾಗೂ ಕ್ಯಾರಮಲ್ ಮತ್ತು ಎಸೆನ್ಸ್ ದ್ರಾವಣಗಳಲ್ಲಿ ಮಡ್ಡಿ ಕಂಡುಬಂದಿದ್ದು, ಮಾದರಿಗಳು ಧೂಳು ಮತ್ತು ಕಶ್ಮಲಯುಕ್ತವಾಗಿರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿ ದೃಢೀಕರಿಸಿರುವುದು ಕಂಡು ಬರುತ್ತದೆ. ವಾಹನದ ಬಿ ಎಕ್ಸ್‌ಟ್ರಾಕ್ಟ್ ವರದಿಯನ್ನು ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ದ.ಕ ಜಿಲ್ಲೆ ಮಂಗಳೂರು ಇವರಿಂದ ಪಡೆದು ಸಲ್ಲಿಸಿದ್ದು, ಸದ್ರಿ ವರದಿಯ ಪ್ರಕಾರ ಶ್ರೀ.ಸಂತೋಷ್ ಕುಮಾರ್ ಬಿನ್:ಉಕ್ಕುಂದಪ್ಪ, ಶ್ರವಣ ಪರ್ಪುಲಾಡಿ, ಜೆ.ಬಿ.ರಸ್ತೆ, ಕೋಡಿಕಲ್, ಮಂಗಳೂರು ಇವರು ವಾಹನದ ನೋಂದಣಿ ಮಾಲೀಕರಾಗಿರುವುದಾಗಿ ತಿಳಿದುಬಂದಿರುತ್ತದೆ. ಮೊಕದ್ದಮೆಯ ತನಿಖಾಧಿಕಾರಿಗಳು ದಿ:12-8-2005 ರಂತೆ ವರದಿ ಸಲ್ಲಿಸಿ ಮೊಕದ್ದಮೆ ಯಲ್ಲಿ ವಶಪಡಿಸಿಕೊಂಡಿರುವ ಸೊತ್ತುಗಳ ಮಾಲೀಕತ್ವದ ಬಗ್ಗೆ ವಾರಸುದಾರರು ಯಾರೂ ಮುಂದೆ ಬಾರದಿದ್ದುದರಿಂದ, ಸದ್ರಿ ಮೊಕದ್ದಮೆಯಲ್ಲಿ ವಶಪಡಿಸಿಕೊಂಡಿರುವ ಸೊತ್ತುಗಳ ರಾಸಾಯನಿಕ ಮಾದರಿಗಳನ್ನು ಹೊರತು ಪಡಿಸಿ ಉಳಿದ ಸೊತ್ತುಗಳನ್ನು ಹಾಗೂ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಆದೇಶಿಸಲು ಹಾಗೂ ಮದ್ಯವನ್ನು ನಾಶಪಡಿಸಲು ಅದೇಶಕ್ಕಾಗಿ ಕೋರಿರುತ್ತಾರೆ.

ಅಬಕಾರಿ ಉಪ ನಿರೀಕ್ಷಕರ ತನಿಖಾ ವರದಿಯನ್ನು ಆಧರಿಸಿ ಅಧಿಕೃತ ಅಧಿಕಾರಿಗಳು ಹಾಗೂ ಅಬಕಾರಿ ಅಧೀಕ್ಷಕರು, ಇಐಬಿ, ದ.ಕ.ಜಿಲ್ಲೆ ಮಂಗಳೂರು ಇವರ ಮುಟ್ಟುಗೋಲು ಆದೇಶ ಸಂ: ಇಐಬಿ:04:ಡಿಟಿಸಿಆರ್:2004-05, ದಿ4-1-2006ರ ಆದೇಶದಲ್ಲಿ ವಶಪಡಿಸಿ ಕೊಂಡ ಸೊತ್ತುಗಳ ಪೈಕಿ ವಾಹನ ಹೊರತು ಪಡಿಸಿ, ಇತರೆ ಎಲ್ಲಾ ಸೊತ್ತುಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು, ಮುಟ್ಟುಗೋಲು ಹಾಕಿಕೊಳ್ಳಲಾದ ಮದ್ಯ, ಬಲ್ಕ್ ಮದ್ಯ, ಎಸೆನ್ಸ್,ಕ್ಯಾರಮೆಲ್ ಇತ್ಯಾದಿ ಸೊತ್ತುಗಳನ್ನು ಅಬಕಾರಿ ಉಪ ಅಧೀಕ್ಷಕರು, ಮಂಗಳೂರು ಉಪ ವಿಭಾಗ,ಮಂಗಳೂರು ಇವರ ಸಮಕ್ಷಮದಲ್ಲಿ ನಾಶಪಡಿಸಲು ಹಾಗೂ ಬೆಲೆ ಬರುವ ಸೊತ್ತುಗಳನ್ನು ಬಹಿರಂಗ ಹರಾಜಿನಲ್ಲಿ ವಿಲೇವಾರಿ ಮಾಡಲು ಆದೇಶಿಸಲಾಗಿರುತ್ತದೆ.

ವಾಹನದ ನೊಂದಾಣಿ ಮಾಲೀಕರಾದ ಶ್ರೀ ಎನ್. ಸಂತೋಷ್ ಕುಮಾರ್, ಬಿನ್ ಉಕ್ಕುಂದಪ್ಪ, ಶ್ರೀವನ, ಜೆ.ಬಿ.ಲೋಬೋ ರೋಡ್, ಕೋಡಿಕಲ್,ಮಂಗಳೂರು ಇವರ ಜಿ.ಪಿ.ಎ ಹೊಂದಿರುವ ಶ್ರೀ ಹೆಚ್.ಮಾರುತಿ ರಾವ್, ಬಿನ್: ಹೆಚ್.ಹನುಮಂತರಾವ್, ಆಶ್ರಯ ನಿಲಯ, ವಿವೇಕಾನಂದ ನಗರ, ಪಂಜಿಮೊಗರು ಗ್ರಾಮ, ಮಂಗಳೂರು ಇವರು ತಮ್ಮ ವಕೀಲರ ಮುಖಾಂತರ ಈ ಪ್ರಾಧಿಕಾರಕ್ಕೆ ದಿ:16-7-2005ರಂದು ಅರ್ಜಿ ಸಲ್ಲಿಸಿ, ವಾಹನವನ್ನು ಕಂತು ಪಾವತಿ ಷರತ್ತಿನಲ್ಲಿ ಖರೀದಿಸಿದಾಗಿ ಹಾಗೂ ದಿ:18-6-2005ರಂದು ತನ್ನ ಮಿತ್ರನಾದ ಸಂಜಯ್ ಕುಕ್ಯಾನ್ ಇವರಿಗೆ ಅಗತ್ಯ ಕೆಲಸಕ್ಕಾಗಿ

ವಾಹನವನ್ನು ನೀಡಿರುವುದಾಗಿ, ಸದ್ರಿಯವರು ವಾಹನವನ್ನು ಪಡೆದುಕೊಂಡ ಮೇಲೆ ಈ ಕೃತ್ಯ ಎಸಗಿರುವುದಾಗಿ ತಿಳಿಸಿ,ತಾನು ಉದ್ದೇಶಪೂರ್ವಕವಾಗಿ ವಾಹನವನ್ನು ಈ ಕೃತ್ಯದಲ್ಲಿ ಬಳಸಿರುವುದಿಲ್ಲವೆಂದು ತಿಳಿಸಿ ವಾಹನದ ಮಧ್ಯಂತರಬಿಡುಗಡೆಗಾಗಿ ವಿನಂತಿಸಿಕೊಂಡಿರುತ್ತಾರೆ. ಸದ್ರಿ ಅರ್ಜಿಯನ್ನು ಪರಿಶೀಲಿಸಿದ ಅಂದಿನ ಅಧಿಕೃತ ಅಧಿಕಾರಿಗಳ ಪ್ರಾಧಿಕಾರದ ದಿ:28-9-2005 ರಂದು ಹೊರಡಿಸಿದ ಆದೇಶದಲ್ಲಿ ವಾಹನದ ಮೌಲ್ಯಕ್ಕೆ ಸಮನಾವಾದ ಬ್ಯಾಂಕ್ ಗ್ಯಾರೆಂಟಿಯನ್ನು ಒದಗಿಸುವ ಆಧಾರದ ಮೇಲೆ ವಾಹನದ ಮದ್ಯಂತರ ಬಿಡುಗಡೆಗೆ ಆದೇಶಿಸಲಾಗಿರುತ್ತದೆ.

ಆ ಪ್ರಕಾರ ವಾಹನದ ಮಾಲೀಕರು ರೂ.4,85,000/- ಮೌಲ್ಯಕ್ಕೆ ಸಮಾನವಾದ ಬ್ಯಾಂಕ್ ಗ್ಯಾರೆಂಟಿ ಸಂ: 7/2005 ದಿ:3-10-2005ನ್ನು ಕೆನರಾ ಬ್ಯಾಂಕ್, ಮಾರ್ಕೆಟ್ ರೋಡ್, ಮಂಗಳೂರು ಇಲ್ಲಿಂದ ಪಡೆದು ಪ್ರಾಧಿಕಾರಕ್ಕೆ ಒಪ್ಪಿಸಿ ವಾಹನವನ್ನು ಮದ್ಯಂತರ ಸುಪರ್ಧಿಗೆ ಪಡೆದುಕೊಂಡಿರುತ್ತಾರೆ.

ವಾಹನದ ನೊಂದಾಣಿ ಮಾಲೀಕರಾದ ಶ್ರೀ.ಎನ್. ಸಂತೋಷ್ ಕುಮಾರ್, ಬಿನ್ ಉಕ್ಕುಂದಪ್ಪ, ಶ್ರವಣ, ಜೆ.ಬಿ. ಲೋಬೋ ರೋಡ್, ಕೋಡಿಕಲ್,ಮಂಗಳೂರು, ಹೆ.ಪಿ.ದಾರರಾದ ಶ್ರೀ.ಹೆಚ್.ಮಾರುತಿರಾವ್, ಬಿನ್ ಹೆಚ್.ಹನುಮಂತರಾವ್, ಆಶ್ರಯ ನಿಲಯ, ವಿವೇಕಾನಂದ ನಗರ, ಪಂಜಿಮೊಗರು ಗ್ರಾಮ, ಮಂಗಳೂರು, ವಾಹನದ Hire Purchaser M/s. GE Countrywide Consumer Financial Service Ltd., ಮತ್ತು ಇತರ ಆರೋಪಿತ ವ್ಯಕ್ತಿಗಳಿಗೆ ಈ ಪ್ರಾಧಿಕಾರದಿಂದ ದಿ:12-9-2005ರಂದು ಕರ್ನಾಟಕ ಅಬಕಾರಿ ಕಾಯಿದೆ 1965ರ ಕಲಂ 43ಬಿ ರಂತೆ ಕಾರಣ ಕೇಳಿ ನೋಟಿಸನ್ನು ನೊಂದಾಣಿ ಅಂಚೆಯ ಮೂಲಕ ನೀಡಲಾಗಿದ್ದು, ಸದ್ರಿ ಕಾರಣ ಕೇಳಿ ನೋಟಿಸಿಗೆ ಪ್ರಕರಣದ ಮುಖ್ಯ ಆರೋಪಿತ ವ್ಯಕ್ತಿಯಾದ ಶ್ರೀ.ಸಂಜಯ್ ಎಸ್.ಕುಕ್ಕಾನ್ ಮತ್ತು ಇತರರು ದಿ:04-10-2005ರಂದು ಉತ್ತರಿಸುತ್ತಾ ಸದ್ರಿ ವಾಹನವನ್ನು GE Countrywide Consumer Financial Service Ltd., ಇವರಿಂದ ಸಾಲದ ಮೇಲೆ ಪಡೆಯಲಾಗಿದ್ದು, ವಾಹನವನ್ನು ಮುಟ್ಟುಗೋಲು ಹಾಕಿಕೊಂಡ ಪಕ್ಷದಲ್ಲಿ ವಾಹನದ ಕಂತನ್ನು ಪಾವತಿಸಲು ಅನಾನೂಕೂಲವಾಗುವ ಕಾರಣ ಹಾಗೂ ವಾಹನವನ್ನು ಉದ್ದೇಶಪೂರ್ವಕವಾಗಿ ಅಕ್ರಮದಲ್ಲಿ ಬಳಸಿಕೊಂಡಿರುವುದಿಲ್ಲ ಎಂದು ತಿಳಿಸಿ,ವಾಹನವನ್ನು ಮುಟ್ಟುಗೋಲು ಹಾಕಿಕೊಳ್ಳದೇ ಶಾಶ್ವತವಾಗಿ ಬಿಡುಗಡೆ ಮಾಡಿಕೊಡಬೇಕೆಂದು ಕೋರಿಕೊಂಡಿರುತ್ತಾರೆ. ಹಾಗೂ ವಾಹನದ ನೊಂದಾಣಿ ಮಾಲೀಕರಿಗೆ ಮತ್ತು ಹೆಚ್.ಪಿ.ದಾರರಿಗೆ ಕಳುಹಿಸಲಾದ ನೋಟಿಸು Unclaimed ಎಂಬ ಅಂಚೆ ಷರಾದೊಂದಿಗೆ ವಾಪಸ್ಸು ಬಂದಿರುತ್ತದೆ. ಮತ್ತು ಪ್ರಕರಣದ ಆರೋಪಿತ ವ್ಯಕ್ತಿಗಳಿಗೆ ಕಳುಹಿಸಲಾದ ಕಾರಣ ಕೇಳಿ ನೋಟಿಸು ಕ್ರ.ಸಂ:2ರ ವ್ಯಕ್ತಿಗೆ ಜ್ಯಾರಿ ಯಾಗದೇ ಅಂಚೆ ಷರಾದೊಂದಿಗೆ ವಾಪಸ್ಸು ಬಂದಿದ್ದು, ಉಳಿದಂತೆ ಎಲ್ಲಾ ಆರೋಪಿತ ವ್ಯಕ್ತಿಗಳಿಗೆ ಕಳುಹಿಸಿದ ಕಾರಣ ಕೇಳಿ ನೋಟಿಸುಗಳು ಜ್ಯಾರಿಯಾಗಿರುತ್ತದೆ. ಅವರಿಂದ ಸದ್ರಿ ಕಾರಣ ಕೇಳಿ ನೋಟಿಸಿಗೆ, ಈ ಪ್ರಾಧಿಕಾರಕ್ಕೆ ಉತ್ತರ ಸಲ್ಲಿಸಲಾಗಿರುವುದಿಲ್ಲ.

ನಂತರ ಪ್ರಕರಣದ ವಿಚಾರಣೆಯನ್ನು ಪ್ರಾರಂಭಿಸಿ ಪ್ರಕರಣದ ಫಿರ್ಯಾರ್ದುದಾರರು ಹಾಗೂ ಪ್ರಕರಣದ ತನಿಖೆ ಕೈಗೊಂಡ ಅಬಕಾರಿ ಉಪ ನಿರೀಕ್ಷಕರು ಇವರನ್ನು ಪ್ರಾಸಿಕ್ಯೂಶನ್ ಸಾಕ್ಷಿ ನಂ:1 ಮತ್ತು ಪ್ರಕರಣದಲ್ಲಿ ಮಾಧರಿಗಳನ್ನು ರಾಸಾಯನಿಕ ವಿಶ್ಲೇಷಣೆಗೆ ಕೊಂಡೊಯ್ಯದ ಅಬಕಾರಿ ರಕ್ಷಕರು ಇವರು ಪ್ರಾಸಿಕ್ಯೂಶನ್ ಸಾಕ್ಷಿ ನಂ.2 ಆಗಿ ಈ ಪ್ರಾಧಿಕಾರದ ಮುಂದೆ ಹಾಜರಾಗಿ ತಮ್ಮ ಸಾಕ್ಷ್ಯವನ್ನು ನೀಡಿರುತ್ತಾರೆ.

ಅಭಿಯೋಗದ ಪರ ಹಾಗೂ ರಕ್ಷಣಾ ಪರ ವಾದ ವಿವಾದವನ್ನು ಆಲಿಸಿ, ಪ್ರಾದಿಕಾರಕ್ಕೆ ಸಲ್ಲಿಸಿರುವ ದಾಖಲಾತಿಗಳು, ಪ್ರಾಸಿಕ್ಯೂಶನ್ ಪರ ನೀಡಿರುವ ಸಾಕ್ಷಿಗಳ ಹೇಳಿಕೆಗಳನ್ನು ಪರಿಶೀಲಿಸಿ ಮುಂದಿನ ಆದೇಶ ಹೊರಡಿಸುವ ಮುನ್ನ ಈ ಕೆಳಕಂಡ ವಿವಾಧಾಂಶಗಳಿಗೆ ಉತ್ತರವನ್ನು ಪಡೆಯಬೇಕಾಗಿರುತ್ತದೆ.

ವಿವಾಧಾಂಶಗಳು

1. ದಿನಾಂಕ:20-6-2005ರಂದು ಮಹೀಂದ್ರ ಸ್ಕಾರ್ಪಿಯೋ ಜೀಪು ಸಂ:KA-19-P-510 ರಲ್ಲಿ ಅಕ್ರಮ ಮದ್ಯ ತಯಾರಿಕಾ ಘಟಕದಿಂದ ಯಾವುದೇ ರಹದಾರಿ ಪತ್ರವಿಲ್ಲದೆ ಮದ್ಯ ಸಾಗಾಣಿಕೆಯಾಗಿದೆಯೇ? ಮತ್ತು ವಾಹನವನ್ನು ಕರ್ನಾಟಕ ಅಬಕಾರಿ ಕಾಯಿದೆ ಮತ್ತು ನಿಯಮಗಳ ರೀತ್ಯಾ ಅಪರಾಧಕ್ಕೆ ಬಳಸಲಾಗಿದೆಯೇ?
2. ವಶಪಡಿಸಿಕೊಂಡಿರುವ ವಾಹನ ಮಾಲೀಕ ತಾನೆಂದು, ತನಗೆ ತಿಳಿಯದೇ ಕರ್ನಾಟಕ ಅಬಕಾರಿ ಕಾಯಿದೆಯಡಿ ಅಕ್ರಮ ಮದ್ಯವನ್ನು ಸಾಗಾಣಿಕೆಗೆ ವಾಹನವನ್ನು ಉಪಯೋಗಿಸಲ್ಪಟ್ಟಿತ್ತು ಎಂಬುದನ್ನು ವಾಹನ ಮಾಲೀಕರು ಸಾಬೀತು ಪಡಿಸಿದ್ದಾರೆಯೇ? ಅಥವಾ ಇಲ್ಲವೇ?
3. ಜಪ್ತು ಪಡಿಸಲಾಗಿರುವ ವಾಹನವನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲು ಯೋಗ್ಯವಾಗಿದೆಯೇ ಅಥವಾ ಇಲ್ಲವೇ?

ಒಂದನೇ ಅಂಶವನ್ನು ಗುಣಾತ್ಮಕವಾಗಿ,ಎರಡನೇ ಅಂಶವನ್ನು ನಕರಾತ್ಮಕವಾಗಿ ಮತ್ತು ಮೂರನೇ ಅಂಶವನ್ನು ಅಂತಿಮ ಆದೇಶದಂತೆ.

ಪ್ರಾ.ಸ-1:

ಶ್ರೀ.ಎನ್.ಶಿವರಾಮ ಶೆಟ್ಟಿ.ಎನ್,ಅಬಕಾರಿ ಉಪ ನಿರೀಕ್ಷಕರು, ಇಐಬಿ,ದ.ಕ ಜಿಲ್ಲೆ ಮಂಗಳೂರು ಇವರು ದಿನಾಂಕ: 26-4-2007ರಂದು ಈ ಪ್ರಾಧಿಕಾರದ ಮುಂದೆ ಹಾಜರಾಗಿ ಸಾಕ್ಷಿ ನುಡಿದಿರುತ್ತಾರೆ. ದಿನಾಂಕ:26-5-2005 ರಿಂದ ತಾನು

ಇಲ್ಲಿವರೆಗೆ ಮಂಗಳೂರು ಇಐಬಿ ಕಛೇರಿಯಲ್ಲಿ ಅಬಕಾರಿ ಉಪ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ದಿ: 20-6-2005ರಂದು ಅಬಕಾರಿ ಅಧೀಕ್ಷಕರು ಹಾಗೂ ಸಿಬ್ಬಂದಿ ಯೊಂದಿಗೆ ತಾನು ಕೊಂಚಾಡಿ ಗ್ರಾಮದ ದೇರೆಬೈಲ್‌ನ ಲ್ಯಾಂಡ್ ಲಿಂಕ್ಸ್ ಟೌನ್‌ಶಿಫ್‌ನ 6ನೇ ಅಡ್ಡ ರಸ್ತೆಯಲ್ಲಿರುವ, ಈ ಮೊದಲು ಮಾಹಿತಿ ಇದ್ದ ಒಂದು ಮನೆ ನಂ:1 ಹೆಚ್-64ರ ನಂಬರಿನ ಮನೆಯೊಳಗೆ 2 ಜನ ಪಂಚರೊಂದಿಗೆ ಹೋದೆವು. ಮನೆಯ ಹತ್ತಿರ ಹೋಗುವ ಸಂಧರ್ಭದಲ್ಲಿ ನಮಗೆ ಬಾಟ್ಲಿಗಳಿಗೆ ಸೀಲು ಮಾಡುವ ಶಬ್ದ ಕೇಳಿಸಿತು, ನಾವು ಸದ್ರಿ ಮನೆಯ ಹತ್ತಿರ ಹೋದಾಗ ಮನೆಯ ಕಿಟಕಿಯಿಂದ ಒಬ್ಬ ವ್ಯಕ್ತಿ ಇಣಿಕಿ ನೋಡುತ್ತಿದ್ದ. ನಾವು ಸದ್ರಿ ವ್ಯಕ್ತಿಯನ್ನು ವಿಚಾರಿಸಿ ಮನೆಯೊಳಗೆ ಏನು ಮಾಡುತ್ತಿದ್ದೀರಿ ಎಂದು ಕೇಳಿಕೊಂಡೆವು. ಸದ್ರಿ ವ್ಯಕ್ತಿ ಮೌನವಾಗಿದ್ದ ಮನೆಯೊಳಗಿನಿಂದ ಘಾಟು ವಾಸನೆ ಬರುತ್ತಿತ್ತು. ಈ ಕಾರಣದಿಂದ ಒಳಗಡೆ ಅಕ್ರಮವಾಗಿ ಯಾವುದೋ ಚಟುವಟಿಕೆ ನಡೆಯುತ್ತಿದೆ ಎಂದು ಗ್ರಹಿಸಿ ಮುಂದಿನ ಕ್ರಮ ಜರುಗಿಸಿದೆವು. ಮನೆಯನ್ನು ಶೋಧಿಸಲು ನ್ಯಾಯಾಲಯದಿಂದ ವಾರೆಂಟನು ಪಡೆದುಕೊಳ್ಳುವರೇ ಸಮಯಾವಕಾಶ ಇಲ್ಲದ್ದಿದರಿಂದ ಈ ಕುರಿತು ಒಂದು ವರದಿಯನ್ನು ತಯಾರಿಸಿದೆನು. ನಮ್ಮೊಂದಿಗಿದ್ದ ಪಂಚರಿಗೂ ತಿಳಿಸಿದೆನು. ಸದ್ರಿ ಶೋಧನಾ ವಾರೆಂಟನ್ನು ನೋಡಿದೆನು. ಅದನ್ನು ನಿಶಾನೆ ಪಿ-1 ಎಂದು ಗುರುತಿಸಲಾಯಿತು. ನಂತರ ಮನೆಯನ್ನು ಶೋಧಿಸಲು ಒಳಗೆ ಹೋದೆವು ,ಮನೆಯ ಒಳಗೆ ಎಲ್ಲಾ ಕೋಣೆಗಳಲ್ಲಿ ಖಾಲಿ ಬಾಟ್ಲಿಗಳು, ಬಾಟ್ಲಿಗಳಿಗೆ ಸೀಲು ಮಾಡುವ ಯಂತ್ರ, ಬಾಟ್ಲಿಯ ಮುಚ್ಚಳಗಳು, ರಟ್ಟಿನ ಪೆಟ್ಟಿಗೆಗಳು, ಲೇಬಲ್‌ಗಳು, 1 ಸ್ಟೀಲು ಡ್ರಮ್, 3 ಕ್ಯಾನುಗಳಲ್ಲಿ ದ್ರಾವಣಗಳು ಇತ್ತು. ಲಿಕ್ಕರ್ ಬಾಟ್ಲಿ ತುಂಬಿದ ರಟ್ಟಿನ ಪೆಟ್ಟಿಗೆಗಳು, ಬಿಳಿ ಖಾಲಿ ಕ್ಯಾನುಗಳು, 3 ಕ್ಯಾನ್‌ಗಳಲ್ಲಿ ಮದ್ಯ ಇತ್ತು. 1 ಫ್ರಿಜ್ಜ್, ಪಾನಾಸೋನಿಕ್ ಟೆಪರೆಕಾರ್ಡರ್ ಇದ್ದವು. 750 ಮಿಲಿ ಗಾತ್ರದ ತಲಾ 12 ಬಾಟ್ಲಿಗಳಂತೆ ಒಟ್ಟು 21 ರಟ್ಟಿನ ಪೆಟ್ಟಿಗೆಗಳಿದ್ದು, ಸದ್ರಿ ಬಾಟಲಿಗಳ ಮೇಲೆ ಮೈಸೂರು ಲಾನ್ಸರ್ ವಿಸ್ಕಿ ಎಂಬ ಲೇಬಲ್ ಹಚ್ಚಿದ ನಕಲಿ ವಿಸ್ಕಿ ಇತ್ತು. 180 ಮಿಲಿ ಗಾತ್ರದ ತಲಾ 48 ಬಾಟ್ಲಿಯಂತೆ ಒಟ್ಟು 13 ರಟ್ಟಿನ ಪೆಟ್ಟಿಗೆಗಳಲ್ಲಿ ಅವುಗಳ ಮೇಲೆ ಮೈಸೂರು ಲ್ಯಾನ್ಸರ್ ಎಂಬ ಲೇಬಲ್ ಹಚ್ಚಿದ ನಕಲಿ ವಿಸ್ಕಿ ಇತ್ತು. 4ನೇ ಕೋಣೆಯಲ್ಲಿ ಒಟ್ಟು 35 ಲೀ. ಸಾರಾಯಿ, 3 ಕ್ಯಾನುಗಳಲ್ಲಿ ನಕಲಿ ಮದ್ಯ ಇತ್ತು. 10 ಟ್ರೇಗಳು ಇದ್ದವು. 50 ಲೀ ಸಾಮರ್ಥ್ಯದ ಒಂದು ಕಪ್ಪು ಪಿಲ್ಟರ್ ಇತ್ತು. 2 ಫೈಬರ್ ಸ್ಟೂಲ್, 2 ಪ್ಲಾಸ್ಟಿಕ್ ಪೈಪುಗಳು, 1 ಜೂಲಿ ಇತ್ತು. 15ಲೀ ಸಾಮರ್ಥ್ಯದ ಬಿಳಿ ಕ್ಯಾನಿನಲ್ಲಿ ಕ್ಯಾರೆಮಲ್ ದ್ರಾವಣ, 5ಲೀ.ಸಾಮರ್ಥ್ಯದ 3 ಕ್ಯಾನುಗಳಲ್ಲಿ ತಲಾ 2ಲೀ ನಂತೆ ಎಸೆನ್ಸ್ ಇತ್ತು. ಕೈಯಿಂದ ಬಾಟ್ಲಿಗಳಿಗೆ ಮುಚ್ಚಳ ಹಾಕುವ ಯಂತ್ರ-1 ಇತ್ತು,ಇನ್ನೊಂದು ವಿಧ್ಯುತ್‌ಚಾಲಿತ 5 ಅಡಿ ಎತ್ತರದ ಕ್ಯಾಪಿಂಗ್ ಮಿಶಿನ್ ಇತ್ತು. 1 ಪ್ಯಾನ್‌ಸೊನಿಕ್ ಟೇಪುರೇಕಾರ್ಡ್ ಇತ್ತು, 5 ಜನ ಅಡುಗೆ ಮನೆಯ ಕೋಣೆಯಲ್ಲಿ ಕುಳಿತು ಬಾಟ್ಲಿಗಳಿಗೆ ಲೇಬಲನ್ನು ಅಂಟಿಸುತ್ತಿದ್ದರು. ಮನೆಯ ಮುಂದೆ ಒಂದು ಮಹೀಂದ್ರ ಸ್ಕಾರ್ಪಿಯೋ ಜೀಪು ನಿಂತಿತ್ತು. ಅದರಲ್ಲಿದ್ದ ವ್ಯಕ್ತಿಯನ್ನು ವಿಚಾರಿಸಲಾಗಿ ಸದ್ರಿ ವಾಹನವು ನಮಗೆ ಸಂಬಂಧಿಸಿದ್ದು ಎಂದು ಹೇಳಿದರು. ಅನುಮಾನಗೊಂಡು ಸದ್ರಿ ಜೀಪನ್ನು ಪರಿಶೀಲಿಸಿದೆವು. ಸದ್ರಿ ಜೀಪಿನಲ್ಲಿ ಪಾಲಿಥೀನ್ ಬ್ಯಾಗಿನ ಕಟ್ಟುಗಳು ಕಂಡು ಬಂದವು. ಪರಿಶೀಲಿಸಿ ನೋಡಲಾಗಿ ಪ್ರತಿಯೊಂದು ಕಟ್ಟಿನಲ್ಲಿ 12 ಬಾಟ್ಲಿಗಳಂತೆ 64 ಕಟ್ಟುಗಳು ಇದ್ದವು. ಅದರಲ್ಲಿ ಒರಿಜಿನಲ್ ಚಾಯ್ಸ್ ವಿಸ್ಕಿ ಎಂಬ ಲೇಬಲನ್ನು ಅಂಟಿಸಲಾಗಿತ್ತು. ಪ್ರತಿಯೊಂದು ಕಟ್ಟಿನಲ್ಲಿ 12 ಬಾಟ್ಲಿಗಳಂತೆ ಒಟ್ಟು 9 ಕಟ್ಟುಗಳು ಇದ್ದವು. ಸದ್ರಿ ಬಾಟ್ಲಿಗಳ ಮೇಲೆ ಕ್ಯೂಬಾ ಪ್ರೀಮಿಯಂ ರಂ ಎಂದು ಲೇಬಲ್ ಅಂಟಿಸಲಾಗಿತು, ಸದ್ರಿ ಜೀಪು ಮಹೀಂದ್ರ ಕಂಪೆನಿಯ ಸ್ಕಾರ್ಪಿಯೋ ಕಪ್ಪು ಬಣ್ಣದಾಗಿದ್ದು, ಅದರ ಮೇಲೆ ನೊಂದಣಿ ಸಂ:KA-19-P-510 ಎಂದು ಫಲಕವಿತ್ತು, ಸದ್ರಿ ಜೀಪಿನಲ್ಲಿ ಒಟ್ಟು ಮದ್ಯ 657.000 ಲೀ. ಇತ್ತು. ನಂತರ ಮೈಸೂರು ಲ್ಯಾನ್ಸರ್ ವಿಸ್ಕಿಯ ಲೇಬಲ್ ಅಂಟಿಸಿದ ಬಾಟಲಿಗಳಿಂದ 750 ಮಿಲಿಯ 1 ಬಾಟಲಿ ಮತ್ತು ಅದೇ ಲೇಬಲ್ ಸಂಬಂಧಿಸಿದ 180 ಮಿಲಿಯ 1 ಬಾಟ್ಲಿ, ಕ್ಯೂಬಾ ಪ್ರೀಮಿಯಂ ರಂ ಎಂದು ಲೇಬಲ್ ಇರುವ 750 ಎಂಎಲ್‌ನ 1 ಬಾಟ್ಲಿ, ಒರಿಜಿನಲ್ ಚಾಯ್ಸ್ ಡಿಲಕ್ಸ್ ವಿಸ್ಕಿ ಎಂದು ಲೇಬಲ್ ಇರುವ 750 ಮಿಲಿಯ 1 ಬಾಟಲಿ ಮತ್ತು ಕ್ಯಾನ್ ನಲ್ಲಿದ್ದ ಮದ್ಯದಿಂದ 750 ಎಂಎಲ್ ಗಾತ್ರದ 3 ಬಾಟಲಿಗಳಲ್ಲಿ, ಎಸೆನ್ಸ್ ತುಂಬಿದ 3 ಕ್ಯಾನ್ ಗಳಿಂದ ತಲಾ 180 ಮಿಲಿಯ 1ಬಾಟಲಿಯಂತೆ ಒಟ್ಟು 3 ಬಾಟ್ಲಿಗಳಲ್ಲಿ ಮತ್ತು ಕ್ಯಾರೆಮಲ್ ತುಂಬಿದ ಕ್ಯಾನ್‌ನಿಂದ 1 ಬಾಟಲಿಯನ್ನು ಮಾದರಿಗಾಗಿ ತಯಾರಿಸಿದೆವು. ಎಲ್ಲಾ ಮಾದರಿ ಬಾಟ್ಲಿಗಳಿಗೆ ಸೀಲ್ ಮಾಡಿ ಇಲಾಖಾ ಮೊಹರು ಮುದ್ರಿಸಿದೆವು. ಸದ್ರಿ ಬಾಟಲಿಗಳಿಗೆ ನಮ್ಮ ಹಾಗೂ ಪಂಚರ ಸಹಿ ಇರುವ ಚೀಟಿಗಳನ್ನು ಅಂಟಿಸಿದೆವು. ಆರೋಪಿತರನ್ನು ವಿಚಾರಿಸಿ ಪಾಸ್ (ಪರ್ಮಿಟ್) ಬಗ್ಗೆ ಕೇಳಲಾಗಿ ಅವರಲ್ಲಿ ಯಾವುದೇ ದಾಖಲೆ ಇರಲಿಲ್ಲ. ಅಲ್ಲಿ ಸ್ಥಳದಲ್ಲಿ ಒಟ್ಟು 6 ಜನ ಆರೋಪಿತರು ಇದ್ದರು ಸ್ಥಳದಲ್ಲಿ ಒಂದು ವಿವರವಾದ ಮಹಜರನ್ನು ತಯಾರಿಸಿದೆವು. ತಯಾರಿಸಿದ ಮಹಜರು ಮೂಲ ಪ್ರತಿಯು ಜೆ.ಎಂ.ಎಫ್.ಸಿ ನ್ಯಾಯಾಲಯದಲ್ಲಿ ಇದ್ದು ಅದರ ಪ್ರತಿಯನ್ನು ಈ ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಅದನ್ನು ನಿಶಾನೆ ಪಿ-2 ಎಂದು ಗುರುತಿಸಲಾಯಿತು. ಸ್ಥಳದಲ್ಲಿ ಎಲ್ಲಾ ಸೊತ್ತುಗಳನ್ನು ಹಾಗೂ ಆರೋಪಿತರನ್ನು ವಶಕ್ಕೆ ತೆಗೆದುಕೊಂಡೆನು, ನಂತರ ನಮ್ಮ ಕಚೇರಿಯಲ್ಲಿ ಒಂದು ಪ್ರಕರಣವನ್ನು ದಾಖಲಿಸಿ, ಪ್ರ.ಮಾ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೆ ಹಾಗೂ ಪ್ರತಿಗಳನ್ನು ಮೇಲಾಧಿಕಾರಿಗಳಿಗೆ ಸಲ್ಲಿಸಿದೆನು. ಪ್ರ.ಮಾ.ವರದಿ ಯನ್ನು ನಿಶಾನೆ ಪಿ-3 ಎಂದು ಗುರುತಿಸಲಾಯಿತು. ದಿ:1-7-2005ರಂದು ಈ ಪ್ರಕರಣದ ಮಾದರಿ ಸೀಸೆಗಳನ್ನು ಅಬಕಾರಿ ರಕ್ಷಕ ಪಿ ರಾಜ ಇವರ ಮುಖಾಂತರ ರಾಸಯನಿಕ ತಜ್ಞರಿಗೆ ಕಳುಹಿಸಿರುತ್ತೇನೆ. ವಾಹನದ ಮಾಲಿಕತ್ವದ ಬಗ್ಗೆ ಮಾಹಿತಿ ಕೋರಿ ಆರ್.ಟಿ.ಒ ಕಛೇರಿಗೆ ಪತ್ರ ಬರೆದೆನು. ದಿ:11-7-2005ರಂದು ರಾಸಾಯನ ತಜ್ಞರ ವರದಿಯು

ತಲುಪಿರುತ್ತದೆ. ಸದ್ರಿ ವರದಿಯ ಪ್ರತಿಯನ್ನು ಈಗ ನೋಡಿದೆನು. ಅದನ್ನು ನಿಶಾನೆ ಪಿ–4 ಎಂದು ಗುರುತಿಸಲಾಯಿತು. ಅದೇ ದಿನ ಅರ್.ಟಿ.ಒ ಕಛೇರಿ ಮಂಗಳೂರು ಇವರಿಂದ ಬಿ ವಹಿ ತಲುಪಿರುತ್ತದೆ. ಸದ್ರಿ ವರದಿಯನ್ನು ನೋಡಿದೆನು. ಅದನ್ನು ನಿಶಾನೆ ಪಿ–5 ಎಂದು ಗುರುತಿಸಲಾಯಿತು. ಅಧಿಕೃತ ಅಧಿಕಾರಿಗಳಿಗೆ ಒಂದು ವರದಿಯನ್ನು ದಿ:21–6–05 ರಂದು ಸಲ್ಲಿಸಿರುತ್ತೇನೆ. ಸದ್ರಿ ವರದಿಯನ್ನು ಈಗ ನೋಡಿದೆನು. ಅದನ್ನು ನಿಶಾನೆ ಪಿ–6 ಎಂದು ಗುರುತಿಸಲಾಯಿತು. ಪ್ರಕರಣದ ಕಡತವನ್ನು ಮುಂದಿನ ತನಿಖೆಗಾಗಿ ಮಂಗಳೂರು ಉತ್ತರ ಜಾರಿ ಮತ್ತು ತನಿಖೆಯ ಅಬಕಾರಿ ಉಪ ನಿರೀಕ್ಷಕರಿಗೆ ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷಿ ನುಡಿದಿರುತ್ತಾರೆ.

ಸದ್ರಿ ದಿನಾಂಕದಂದು ವಾಹನ ಮಾಲೀಕರಾಗಲೀ, ಮಾಲೀಕರ ಪರ ವಕೀಲರಾಗಲೀ ಯಾರೂ ಹಾಜರಾಗದೇ ಇದ್ದುದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು. ನಂತರ ದಿ:24–9–2008ರಂದುಈ ಪ್ರಕರಣದಲ್ಲಿ ಮುಖ್ಯ ಸಾಕ್ಷಿದಾರರಾದ ಪಿಡಬ್ಲ್ಯೂ–1 ಆದ ಶ್ರೀ.ಶಿವರಾಮ ಶೆಟ್ಟಿ ಇವರು ದಿ:26–4–2007ರಂದು ನೀಡಿದ ಮುಖ್ಯ ಸಾಕ್ಷಿ ವಿಚಾರಣೆಗೆ ಪಾಟೀ ಸವಾಲನ್ನು ರಕ್ಷಣಾ ಪರ ವಕೀಲರು ನಡೆಸಲಾಗಿ ಸದ್ರಿ ಪಾಟೀ ಸವಾಲಿಗೆ ಸಾಕ್ಷಿದಾರರು ಉತ್ತರಿಸುತ್ತಾ–

Smt Saleha Begam, C/o Gulzar Ahmed, Aged about 62 years, Residing at, door No.1037, Patwaigan Street, Mandi Mohalla, Mysore-570 001

PUBLIC NOTICE

Notice is here by given that a petition has been made to this court under Sec 372 of the Indian Succession Act, for grant of Succession Certificate in respect of shares & securities of Sri Saifuddin, died on 01.10.2000, in Bangalore.

Be it known that No caveat has been entered and the said petition is posted for hearing on 04.12.2009 at 11'O clock. The Respondent or any person's claiming to have any interest may come and participate in the proceedings before grant of succession Certificate to the petitions.

SCHEDULE

All the services/death benefits that the deceased Saifuddin who was working as supervisor in southern railways is entitled for the services rendered by him, in southern railways department such as;

Ordinary family pension payable is Rs. 1570/- +relief w.e.f. 2.10.2000=Rs. 161710.00/-

Totally a sum of Rs. 161710.00/-

Given under my hand and the seal of the court, this the 4.11.2009

By Order of the Court,

P.D. 124 Assistant Registrar, City Civil Court, Mayohall Unit, Bangalore.

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ಪ್ರಾದೇಶಿಕ ವಿಭಾಗ, ಕೋಲಾರ

2009–10ನೇ ಸಾಲಿಗೆ ಗಾಜಲದಿನ್ನೆ ಅರಣ್ಯ ಪ್ರದೇಶದಲ್ಲಿ ಶ್ರೀಗಂಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳುವ ಬಗ್ಗೆ ಟೆಂಡರ್

ಸಂ. ಎ4.ಬಿಜೆಟಿ.ಶ್ರೀಗಂಧ.ಸಿಆರ್.21/2009–10, ದಿನಾಂಕ 10ನೇ ನವೆಂಬರ್ 2009

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ ಗಾಜಲದಿನ್ನೆ ಅರಣ್ಯ ಪ್ರದೇಶದಲ್ಲಿ ಶ್ರೀಗಂಧ ಅಭಿವೃದ್ಧಿ ಯೋಜನೆಯಡಿ 2009–10ನೇ ಸಾಲಿನಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಕೈಗೊಳ್ಳಲು ಈ ಮುಂದೆ ತಿಳಿಸಲಾಗಿರುವ ನಿಬಂಧನೆಗಳ ಮೇರೆಗೆ ಅರಣ್ಯ ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ಗುತ್ತಿಗೆದಾರರಾಗಿ ನೊಂದಾಯಿಸಿರುವ ಗುತ್ತಿಗೆದಾರರಿಂದ ಟೆಂಡರ್ ಕರೆಯಲಾಗಿದೆ.

ದಿನಾಂಕ 27–11–2009ರ ಅಪರಾಹ್ನ 3.00 ಗಂಟೆಯೊಳಗೆ ಮೊಹರು ಮಾಡಿದ ಟೆಂಡರ್ ಸಲ್ಲಿಸುವುದು. ಅದೇ ದಿನ ಈ ಕೆಳಗೆ ಸಹಿ ಮಾಡಿರುವರು ಅಥವಾ ಇವರಿಂದ ಅಧಿಕೃತವಾಗಿ ನೇಮಿಸಲ್ಪಟ್ಟವರು ಸದರಿ ದಿನಾಂಕದಂದು ಟೆಂಡರ್‌ದಾರರ ಸಮ್ಮುಖದಲ್ಲಿ ಟೆಂಡರ್ ಲಕೋಟೆಯನ್ನು ಅಪರಾಹ್ನ 4 ಗಂಟೆಗೆ ತೆರೆಯುವರು ಮತ್ತು ಸದರಿ ದಿನಾಂಕದಂದು ಯಾವುದೇ ಟೆಂಡರ್ ಬಾರದಿದ್ದಲ್ಲಿ ಅಥವಾ ಕಾರಣಾಂತರ ದಿಂದ ಟೆಂಡರ್ ನಡೆಯದಿದ್ದಲ್ಲಿ ಇದೇ ಪ್ರಕಟಣೆಯ ಷರತ್ತಿಗೆ ಒಳಪಟ್ಟು ಪುನಃ 02–12–2009ರಂದು ಅಪರಾಹ್ನ 3.00 ಗಂಟೆಗೆ ಎರಡನೇ ಬಾರಿಗೆ ನೊಂದಾಯಿತ ಇಚ್ಛೆಯುಳ್ಳ ಅರಣ್ಯ ಹಾಗೂ ಲೋಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ಗುತ್ತಿಗೆದಾರರಿಂದ ಭರ್ತಿಮಾಡಿದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದು ಮತ್ತು ಟೆಂಡರ್ ಲಕೋಟೆಯನ್ನು ಅದೇ ದಿನ 4.00 ಗಂಟೆಗೆ ತೆರೆಯಲಾಗುವುದು. ಈ ಬಗ್ಗೆ ಮತ್ತೆ ಪ್ರತ್ಯೇಕ ಪ್ರಕಟಣೆ ಹೊರಡಿಸಲಾಗುವುದಿಲ್ಲ.

2009–10ನೇ ಸಾಲಿಗೆ ಗಾಜಲದಿನ್ನೆ ಅರಣ್ಯ ಪ್ರದೇಶದಲ್ಲಿ ಶ್ರೀಗಂಧ ಅಭಿವೃದ್ಧಿ ಯೋಜನೆಯಡಿ ಕೈಗೊಳ್ಳಬೇಕಾಗಿರುವ ಕಾಮಗಾರಿಗಳ ವಿವರ

ವಿತ್ತ ಶೀರ್ಷಿಕೆ: 2406-01-101-2-24-Cultivation of Sandal wood trees-059-other expenditure

ಕ್ರ. ಸಂ.	ವಲಯ	ಕಾಮಗಾರಿ ವಿವರ		ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ)
1	2	3	4	6	7
1	ಕೋಲಾರ	ಗಾಜಲದಿನ್ನೆ ಅರಣ್ಯ ಪ್ರದೇಶದ ಸುತ್ತಲು ಚೈನ್‌ಲಿಂಕ್ ಮೆಷ್ ಬೇಲಿಯನ್ನು 1281 ಮೀ. ಅಳವಡಿಸುವುದು	ಅಂದಾಜು ಪಟ್ಟಿಯಂತೆ ಚೈನ್‌ಲಿಂಕ್ ಮೆಷ್ ಬೇಲಿಯನ್ನು ಅಳವಡಿಸುವುದು ಎಲ್ಲಾ ಕೆಲಸಗಳು ಸೇರಿ (ಚೈನ್‌ಲಿಂಕ್ ಮೆಷ್ ಬೆಲೆಯನ್ನು ಹೊರತುಪಡಿಸಿ) *	21.44	0.91

* ಚೈನ್‌ಲಿಂಕ್ ಮೆಷನ್ ಇಲಾಖೆಯಿಂದ ಮಂಜೂರಾಗಿರುವ ದರಗಳಲ್ಲಿ ಖರೀದಿಸಿ ಸರಬರಾಜು ಮಾಡಲಾಗುವುದು

ನಿಬಂಧನೆಗಳು

1 ದಿನಾಂಕ 10–03–2010 ರೊಳಗೆ ಕಾಮಗಾರಿಗಳು ಪೂರೈಸಬೇಕಾಗಿರುತ್ತದೆ.

2 ಟೆಂಡರ್ ಫಾರಂಗಳನ್ನು ಪ್ರತಿ ಫಾರಂಗೆ ರೂ. 200.00 ಹಾಗೂ ಅನ್ವಯಿಸುವ ತೆರಿಗೆ ಪಾವತಿ ಮಾಡಿ ದಿನಾಂಕ 26–11–2009 ಮತ್ತು 1–12–2009ರಂದು ಕಛೇರಿ ಕೆಲಸದ ವೇಳೆಯಲ್ಲಿ ಅಪರಾಹ್ನ 1.00 ಗಂಟೆಯವರೆಗೆ ಪಡೆಯಬಹುದು ಮತ್ತು ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛೆಯುಳ್ಳವರು ಈ ವಿಭಾಗದಲ್ಲಿ 2009–10ನೇ ಸಾಲಿಗೆ ತಮ್ಮ ಹೆಸರನ್ನು ಅರಣ್ಯ ಹಾಗೂ ಲೊಕೋಪಯೋಗಿ ಇಲಾಖೆಯಲ್ಲಿ ಒಂದನೇ ದರ್ಜೆ ಗುತ್ತಿಗೆದಾರರಾಗಿ ನೊಂದಾಯಿಸಿಕೊಂಡಿರಬೇಕು ತಪ್ಪಿದಲ್ಲಿ ಅಂತಹವರ ಟೆಂಡರ್‌ನ್ನು ಪರಿಗಣಿಸಲಾಗುವುದಿಲ್ಲ.

3 ಭರ್ತಿ ಮಾಡಿದ ಟೆಂಡರ್ ಫಾರಂಗಳನ್ನು ಪ್ರತಿ ಘಟಕಕ್ಕೆ ಪ್ರತ್ಯೇಕವಾದ ಮೊಹರು ಮಾಡಿದ ಲಕೋಟೆಯಲ್ಲಿ ಪ್ರತ್ಯೇಕ ಇ.ಎಂ.ಡಿ.ಯೊಂದಿಗೆ ಸಲ್ಲಿಸುವುದು. ಘಟಕವಾರು ಇ.ಎಂ.ಡಿ. ಇಲ್ಲದ ಟೆಂಡರ್‌ಗಳನ್ನು ಸಾರಾಸಗಟಾಗಿ ತಿರಸ್ಕರಿಸಲಾಗುವುದು.

V -F5-B/B

4 ಭರ್ತಿ ಮಾಡಿದ ಟೆಂಡರ್ ಫಾರಂ ಅನ್ನು 27-11-2009ರಂದು ಅಪರಾಹ್ನ 3.00 ಗಂಟೆಯವರೆಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೋಲಾರ ವಿಭಾಗ, ಕೋಲಾರ ಅಥವಾ ಅವರಿಂದ ನಿಯೋಜಿಸಲ್ಪಟ್ಟ ಅಧಿಕಾರಿಗಳು ಸ್ವೀಕರಿಸುವರು ಮತ್ತು ಅಂದು 4.00 ಗಂಟೆಗೆ ಟೆಂಡರನ್ನು ತೆರೆಯಲಾಗುವುದು. ಒಂದು ವೇಳೆ ಅಂದು ಯಾವುದೇ ಕಾರಣದಿಂದಾಗಿ ಟೆಂಡರ್ ನಡೆಯದಿದ್ದರೆ ಇದೇ ಪ್ರಕಟಣೆಯ ನಿಬಂಧನೆಗಳಿಗೆ ಒಳಪಟ್ಟು ಪುನಃ ದಿನಾಂಕ 2.12.2009ರಂದು ಟೆಂಡರು ಸ್ವೀಕರಿಸಲಾಗುವುದು. ಮತ್ತು ಅಪರಾಹ್ನ 4.00 ಗಂಟೆಗೆ ಟೆಂಡರನ್ನು ತೆರೆಯಲಾಗುವುದು ಈ ಬಗ್ಗೆ ಮತ್ತೆ ಪ್ರತ್ಯೇಕವಾದ ಪ್ರಕಟಣೆ ಹೊರಡಿಸುವುದಿಲ್ಲ.

5 ಪ್ರತಿ ಟೆಂಡರ್‌ದಾರರು ಕಾಮಗಾರಿಗಳನ್ನು ನೆರವೇರಿಸಲು ಅಗತ್ಯವಿರುವ ಸಲಕರಣೆಗಳನ್ನು ಹಾಗೂ ಸಾಗಾಣಿಕೆ ವ್ಯವಸ್ಥೆಯನ್ನು ಸ್ವಂತವಾಗಿ ಮಾಡಿಕೊಳ್ಳಬೇಕು. ಇದಕ್ಕೆ ಪ್ರತ್ಯೇಕ ಭತ್ಯೆ ನೀಡಲಾಗುವುದಿಲ್ಲ.

6 ಈ ಮೇಲಿನ ಕೆಲಸಗಳಿಗೆ ಟೆಂಡರ್ ಸಲ್ಲಿಸಲು ಇಚ್ಛಿಸುವ ಗುತ್ತಿಗೆದಾರರು ಆಯಾ ಕೆಲಸಕ್ಕೆ ನಿಗದಿಪಡಿಸಿರುವ ಇ.ಎಂ.ಡಿ. ಹಾಗೂ ಭದ್ರತಾ ಠೇವಣಿ ಮೊತ್ತಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೋಲಾರ ವಿಭಾಗ, ಕೋಲಾರ ಇವರ ಪರವಾಗಿ ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ನಿಂದ ಪಡೆದ ಡಿ.ಡಿ. ರೂಪದಲ್ಲಿ ಟೆಂಡರ್ ಜೊತೆಗೆ ಸಲ್ಲಿಸಬೇಕು.

7 ಗುತ್ತಿಗೆದಾರರು ಯಾವುದೇ ಷರತ್ತುಗಳನ್ನೊಳಗೊಂಡ ಟೆಂಡರ್‌ಗಳನ್ನು ಸಲ್ಲಿಸಿದಲ್ಲಿ ಅಂತಹ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು. ಇದರ ಬಗ್ಗೆ ಏನಾದರೂ ತಕರಾರುಗಳು ಉದ್ಭವವಾದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರು, ಕೋಲಾರ ಪ್ರಾದೇಶಿಕ ವಿಭಾಗ ಕೋಲಾರ ರವರ ತೀರ್ಮಾನವೇ ಅಂತಿಮವಾಗಿರುತ್ತದೆ.

8 ನಿಗದಿಪಡಿಸಿದ ಅವಧಿಯ ನಂತರ ಬಂದ ಟೆಂಡರ್‌ಗಳನ್ನು ಸ್ವೀಕರಿಸಲಾಗುವುದಿಲ್ಲ.

9 ಯಾವುದೇ ಕಾರಣ ನೀಡದೇ ಟೆಂಡರ್‌ಗಳನ್ನು ಒಪ್ಪುವ ಹಾಗೂ ತಿರಸ್ಕರಿಸುವ ಹಕ್ಕನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೋಲಾರ ಪ್ರಾದೇಶಿಕ ವಿಭಾಗ, ಕೋಲಾರ ಇವರು ಕಾಯ್ದಿರಿಸಿಕೊಂಡಿರುತ್ತಾರೆ.

10 ಟೆಂಡರ್‌ನಲ್ಲಿ ಯಶಸ್ವಿಯಾದ ಅರಣ್ಯ ಗುತ್ತಿಗೆದಾರರಿಗೆ ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಕೋಲಾರ ಪ್ರಾದೇಶಿಕ ವಿಭಾಗ, ಕೋಲಾರ ಇವರಿಂದ ತಿಳುವಳಿಕೆ ನೀಡಿದ 7 ದಿವಸಗಳ ಒಳಗಾಗಿ ನಿರ್ದಿಷ್ಟ ನಮೂನೆಯಲ್ಲಿ ಕರಾರು ನಾಮೆಯನ್ನು ರೂ. 200-00 ಮೌಲ್ಯದ ಛಾಪಾ ಕಾಗದದಲ್ಲಿ ಸಹಿ ಮಾಡಿ ಸಲ್ಲಿಸತಕ್ಕದ್ದು ಈ ಅವಧಿಯನ್ನು ವಿಸ್ತರಿಸುವ ಅಧಿಕಾರ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ಪ್ರಾದೇಶಿಕ ವಿಭಾಗ, ಕೋಲಾರ ಇವರು ಹೊಂದಿರುತ್ತಾರೆ.

11 ಈ ಮೇಲಿನ ಕಾಮಗಾರಿ ಅನುಷ್ಠಾನ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ವಾರ್ಷಿಕ ಕ್ರಿಯಾಯೋಜನೆ ಅನುಮೋದನೆಯ ನಿಬಂಧನೆಗೆ ಒಳಪಟ್ಟಿರುತ್ತದೆ. ಸರ್ಕಾರದಿಂದ ಹಣ ಬಿಡುಗಡೆ ತಡವಾದ ಪಕ್ಷದಲ್ಲಿ ಅಂತಹ ವಿಳಂಬಿತ ಹಣ ಪಾವತಿಗಳಿಗೆ ಯಾವುದೇ ತರಹದ ಬಡ್ಡಿ ನೀಡಲಾಗುವುದಿಲ್ಲ.

12 ಎಲ್ಲಾ ಕೆಲಸಗಳು ಸಕಾಲಕ್ಕೆ ಸರಿಯಾಗಿ ಆಗಿಂದಾಗ್ಗೆ ಮುಕ್ತಾಯವಾದ ನಂತರ ಸದರಿ ಕೆಲಸಗಳನ್ನು ನಿಯಮದಂತೆ ಸಂಬಂಧಿಸಿದ ಅಧಿಕಾರಿಗಳಿಂದ ತನಿಖೆ ಮಾಡಿಸಿ ವಲಯ ಅರಣ್ಯಾಧಿಕಾರಿಗಳ ಮುಖಾಂತರ ಬಿಲ್ಲುಗಳನ್ನು ಕ್ಷೇತ್ರ ಅಳತೆ ಪುಸ್ತಕದೊಂದಿಗೆ (ಎಂಬಿ / ಎಫ್‌ಎನ್‌ಬಿ) ಒಪ್ಪಿಸಬೇಕಾಗುತ್ತದೆ ಮತ್ತು ಬಿಲ್ ಸಂದಾಯ ಮಾಡುವಾಗ ಸದರಿ ಬಿಲ್‌ಗಳಲ್ಲಿ ನಿಯಮದಂತೆ ಚಾಲ್ತಿಯಲ್ಲಿರುವ ಆದಾಯ ತೆರಿಗೆ, ಮಾರಾಟ ತೆರಿಗೆ, ಸರ್‌ಚಾರ್ಜ್ ಮತ್ತು ಭದ್ರತಾ ಠೇವಣಿಯನ್ನು ಕಡಿತಗೊಳಿಸಲಾಗುವುದು ಮತ್ತು ಆಗಿಂದಾಗ್ಗೆ ಬದಲಾಗುವ ತೆರಿಗೆಗಳ ವ್ಯತ್ಯಾಸವನ್ನು ಸಹ ನಿಯಮದಂತೆ ಕಡಿತಗೊಳಿಸಲಾಗುವುದು.

13 ಕೆಲಸಗಳನ್ನು ನಿರ್ವಹಿಸುವಾಗ ಇತರೆ ನೆಡುತೋಪುಗಳಿಗೆ ಹಾನಿ ಉಂಟು ಮಾಡಿದಲ್ಲಿ ಗಿಡ ಮರಗಳನ್ನು ಕಡಿದು ನಾಶಪಡಿಸಿದಲ್ಲಿ ಸರ್ಕಾರಕ್ಕೆ ಆದ ನಷ್ಟದ ಬಗ್ಗೆ ಸಂಬಂಧಪಟ್ಟ ಗುತ್ತಿಗೆದಾರರ ಮೇಲೆ ಕಾನೂನು ರೀತ್ಯ ಕ್ರಮ ಜರುಗಿಸಲಾಗುವುದು.

14 ಕೆಲಸಗಳ ವಿವರಗಳು ಮತ್ತು ಹೆಚ್ಚಿನ ನಿಬಂಧನೆಗಳನ್ನು ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ತಿಳಿದುಕೊಳ್ಳಬಹುದಾಗಿದೆ.

15 ಯಾವುದೇ ವಿಭಾಗದಲ್ಲಿ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿದ್ದರೆ ಅಂತಹವರು ಟೆಂಡರ್‌ನಲ್ಲಿ ಭಾಗವಹಿಸಲು ಅರ್ಹರಾಗಿರುವುದಿಲ್ಲ / ಅವಕಾಶವಿರುವುದಿಲ್ಲ. ನ್ಯಾಯಾಲಯಗಳಲ್ಲಿ ಅಪರಾಧಿಗಳೆಂದು ನಿರ್ಧರಿಸಲ್ಪಟ್ಟಂತಹ ಯಾವುದೇ ವ್ಯಕ್ತಿಗಳು ಈ ಟೆಂಡರ್‌ನಲ್ಲಿ ಭಾಗವಹಿಸುವಂತಿಲ್ಲ.

16 ಗುತ್ತಿಗೆದಾರರು ನೇಮಿಸಿಕೊಳ್ಳುವ ಕೆಲಸಗಾರರಿಗೆ ಸರ್ಕಾರದ ನಿಯಮದಂತೆ ಮಜೂರಿ ಮತ್ತಿತರ ಅನುಕೂಲಗಳನ್ನು ಸ್ವತಃ ಗುತ್ತಿಗೆದಾರರೇ ವಹಿಸಬೇಕು. ಇಲಾಖೆಯು ಗುತ್ತಿಗೆದಾರರ ಮತ್ತು ಅವರ ನೌಕರರಿಗೆ ಯಾವುದೇ ನಷ್ಟ / ಹಾನಿ ಇತ್ಯಾದಿಗಳಿಗೆ ಜವಾಬ್ದಾರರಲ್ಲ.

17 ಟೆಂಡರ್‌ನಲ್ಲಿ ನಮೂದಿಸಿದ ಹಣವು ಅಂದಾಜುಪಟ್ಟಿಗಳ ಅಂದಾಜು ಸಂಭವನೀಯ ದರವಾಗಿರುತ್ತದೆ ಹಣವನ್ನು ಪಾವತಿಸುವಾಗ ಮಂಜೂರಾದ ಅಂದಾಜು ಪಟ್ಟಿಯಂತೆ ಹಾಗೂ ಕ್ಷೇತ್ರ ಅಳತೆಯನುಸಾರವಾಗಿ ಹಣ ಪಾವತಿಸಲಾಗುವುದು.

18 ಕಾಮಗಾರಿಯನ್ನು ಅರಣ್ಯ ಇಲಾಖೆಯಿಂದ ಪರಿಶೀಲಿಸಿ ಮಂಜೂರಾದ ಅಂದಾಜು ಪಟ್ಟಿಯ ಅನುಗುಣವಾಗಿ ಮಾಡಬೇಕಾಗಿರುತ್ತದೆ. ಕಾಮಗಾರಿಯ ಗುಣಮಟ್ಟವು ವಲಯ ಅರಣ್ಯಾಧಿಕಾರಿ, ಸಹಾಯಕ ಸಂರಕ್ಷಣಾಧಿಕಾರಿಗಳು ಇವರು ಕಾಲಕಾಲಕ್ಕೆ ನೀಡುವ ಲಿಖಿತ / ಮೌಖಿಕ ಆದೇಶಗಳಿಗನುಗುಣವಾಗಿ ಇರತಕ್ಕದ್ದು ಕೆಲಸಗಳಲ್ಲಿ ಏನಾದರೂ ಪರಿವರ್ತನೆ ಅಥವಾ ಮಾರ್ಪಾಡು ಮಾಡುವುದು ಅವಶ್ಯವೆಂದು ಕಂಡುಬಂದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಲಿಖಿತ ಆದೇಶದ ಮೇರೆಗೆ ಅಂತಹ ಪರಿವರ್ತನೆ ಅಥವಾ ಮಾರ್ಪಾಡುಗಳನ್ನು ಮಂಜೂರಾದ ದರದಲ್ಲಿಯೇ ಮಾಡಲು ಗುತ್ತಿಗೆದಾರರು ಬದ್ಧರಾಗಿರುತ್ತಾರೆ.

19 ಕಾಮಗಾರಿಯನ್ನು ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳ ನಿರ್ದೇಶನದಂತೆ ಪೂರ್ಣಗೊಳಿಸತಕ್ಕದ್ದು ಗುತ್ತಿಗೆಯ ಅವಧಿಯನ್ನು ಸಾಮಾನ್ಯವಾಗಿ ವಿಸ್ತರಿಸಲಾಗುವುದಿಲ್ಲ. ನಿಗಧಿತ ಅವಧಿಯಲ್ಲಿ ಕಾಮಗಾರಿಗಳನ್ನು ಪೂರ್ಣಗೊಳಿಸತಕ್ಕದ್ದು. ಅತಿ ವಿಶೇಷ ಸಂದರ್ಭಗಳಲ್ಲಿ ಮಾತ್ರ ವಿಸ್ತರಣಾ ಅವಧಿಯಲ್ಲಿ ಮಾಡಿದ ಕೆಲಸಗಳಿಗೆ ಮಂಜೂರಾದ ದರಗಳಲ್ಲಿ ಶೇ.5ರಂತೆ ಕಡಿತದೊಂದಿಗೆ ಅವಧಿಯನ್ನು ವಿಸ್ತರಿಸುವ ಅಧಿಕಾರವನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಯವರು ಹೊಂದಿರುತ್ತಾರೆ. ವಲಯ ಅರಣ್ಯಾಧಿಕಾರಿ ಮತ್ತು ಸಹಾಯಕ ಅರಣ್ಯಾಧಿಕಾರಿಗಳು ನೀಡಿದ ನಿರ್ದೇಶನದಂತೆ ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸದಿದ್ದಲ್ಲಿ ಅಂತಹ ಕಾಮಗಾರಿಗಳಿಗೆ ಹಣವನ್ನು ಪಾವತಿಸಲಾಗುವುದಿಲ್ಲ ಮತ್ತು ಇಎಂಡಿ. ಹಾಗೂ ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳಲಾಗುವುದು.

20 ಟೆಂಡರ್‌ನ್ನು ಕಂಪನಿಯ ವತಿಯಿಂದ / ಸಂಘ ಸಂಸ್ಥೆಗಳು ಕೊಡುವ ಸಂದರ್ಭದಲ್ಲಿ

21 ಅ) ಕಂಪನಿಯು / ಸಂಘ ಸಂಸ್ಥೆಗಳ ನೊಂದಾಯಿತ ಸಂಸ್ಥೆಗಳಾಗಿರಬೇಕು.

22 ಆ) ಕಂಪನಿಯ ಎಲ್ಲಾ ಪಾಲುದಾರರಿಗೆ ಟೆಂಡರ್‌ನ್ನು ಸಹಿ ಮಾಡಲು ಸಾಧ್ಯವಾಗದಿದ್ದಲ್ಲಿ ಟೆಂಡರ್ ಸಹಿ ಮಾಡುವ ವ್ಯಕ್ತಿಯು ಈ ಬಗ್ಗೆ ಅಧಿಕಾರ ಪತ್ರ (Power of Attorney) ಪಡೆದುಕೊಂಡಿರಬೇಕು. ಇಂತಹ ಪತ್ರವನ್ನು ಟೆಂಡರ್‌ನೊಂದಿಗೆ ಲಗತ್ತಿಸಿ ಸಲ್ಲಿಸಬೇಕು.

23 ಅರಣ್ಯ ಕೂಲಿಕಾರರ ಸಹಕಾರ ಸಂಘಗಳು ಈ ಕೆಲಸಗಳಿಗೆ ಟೆಂಡರ್ ಕೊಡಲು ಇಚ್ಛಿಸಿದಲ್ಲಿ ಇಎಂಡಿ. ಮತ್ತು ಭದ್ರತಾ ಠೇವಣಿಯನ್ನು ಕಡ್ಡಾಯವಾಗಿ ನೀಡಬೇಕಾಗುವುದು. ಹಾಗೂ ಸಂಘಗಳ ನೊಂದಾವಣಿ ನಿಯಮದಂತೆ ಸಂಘಗಳು ಕಡ್ಡಾಯವಾಗಿ ನೊಂದಾವಣಿಯಾಗಿರಬೇಕು ಇಲ್ಲವಾದಲ್ಲಿ ಟೆಂಡರ್‌ನ್ನು ತಿರಸ್ಕರಿಸಲಾಗುವುದು.

24 ಯಶಸ್ವಿ ಟೆಂಡರ್‌ದಾರರು ಕರಾರು ನಾಮೆಯನ್ನು ಸಹಿ ಮಾಡಿದ ನಂತರ ಟೆಂಡರ್‌ನ್ನು ಹಿಂತೆಗೆದುಕೊಂಡಲ್ಲಿ ಅಥವಾ ನಿಗಧಿತ ಸಮಯದಲ್ಲಿ ಕಾಮಗಾರಿ ಪ್ರಾರಂಭಿಸದಿದ್ದಲ್ಲಿ ಅಥವಾ ಕಾಮಗಾರಿಯ ಬಗ್ಗೆ ನಿರಾಸಕ್ತಿ ಹೊಂದಿದಲ್ಲಿ ಅಂತಹ ಟೆಂಡರ್‌ದಾರರ ಇಎಂಡಿ. ಮತ್ತು ಭದ್ರತಾ ಠೇವಣಿಗಳನ್ನು ಸರ್ಕಾರಕ್ಕೆ ಮುಟ್ಟುಗೋಲು ಹಾಕಿಕೊಳ್ಳುವುದಲ್ಲದೆ ಗುತ್ತಿಗೆ ಕೆಲಸವನ್ನು ಮೂಲ ಗುತ್ತಿಗೆದಾರರ ವೆಚ್ಚ ಮತ್ತು ಜವಾಬ್ದಾರಿಯ ಮೇಲೆ ಮರು ಟೆಂಡರ್ ಮಾಡಲಾಗುವುದು. ಟೆಂಡರ್‌ಗೆ ಕಾಲಾವಕಾಶ ಇಲ್ಲದಿದ್ದಲ್ಲಿ ಇಲಾಖೆಯಿಂದ ಕಾಮಗಾರಿಯನ್ನು ಪೂರ್ಣಗೊಳಿಸಿ ಸರ್ಕಾರಕ್ಕೆ ಹಾನಿಯಾದ ಮೊತ್ತವನ್ನು ಕರ್ನಾಟಕ ಅರಣ್ಯ ಸಂಹಿತೆ 1963ರ ಕಲಂ 109 ಮತ್ತು 119ರಂತೆ ಭೂಕಂದಾಯ ಬಾಕಿ ವಸೂಲಿಯಂತೆ ವಸೂಲು ಮಾಡಲಾಗುವುದು.

25 ಯಶಸ್ವಿಯಾದ ಬಿಡ್‌ದಾರರು ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಹಣ ಪಾವತಿಸುವಾಗ ಬಿಲ್ಲಿನ ಮೊತ್ತದ ಶೇ.5ರಷ್ಟು ಮೊತ್ತವನ್ನು ಭದ್ರತಾ ಠೇವಣಿಯಾಗಿ ಹಿಡಿಯಲಾಗುವುದು. ಈ ಹಣವನ್ನು ನೆಡುತೋಪು ನಿರ್ಮಾಣದ ಬಗ್ಗೆ ವಲಯ ಅರಣ್ಯಾಧಿಕಾರಿಗಳು ಮತ್ತು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಂದ ದೃಢೀಕರಣ ಪತ್ರ ಮತ್ತು ಕಾಮಗಾರಿಯ ಮುಕ್ತಾಯ ವರದಿ ನೀಡಿದ ನಂತರ ಭದ್ರತಾ ಠೇವಣಿ ಮೊತ್ತವನ್ನು ಹಿಂದಿರುಗಿಸಲಾಗುವುದು.

26 ಕಾಮಗಾರಿ ಪೂರ್ಣಗೊಂಡ ದಿನಾಂಕದಿಂದ 1 ವರ್ಷದ ಒಳಗಾಗಿ ಕಾಮಗಾರಿಯಲ್ಲಿ ಯಾವುದೇ ಲೋಪ / ದೋಷ ಕಂಡುಬಂದಲ್ಲಿ ಗುತ್ತಿಗೆದಾರರು ತಮ್ಮ ಸ್ವಂತ ಖರ್ಚಿನಲ್ಲಿ ಲೋಪ / ದೋಷ ಪರಿಹರಿಸಬೇಕಾಗುವುದು. ನಂತರ ಭದ್ರತಾ ಠೇವಣಿ ಹಿಂತಿರುಗಿಸಲಾಗುವುದು. ತಪ್ಪಿದಲ್ಲಿ ಭದ್ರತಾ ಠೇವಣಿಯಲ್ಲಿ ಸದರಿ ವೆಚ್ಚವನ್ನು ಭರಿಸಲಾಗುವುದು.

27 ಗುತ್ತಿಗೆದಾರರು ನೇಮಿಸಿಕೊಂಡಿರುವ ಕೂಲಿ ಕಾರ್ಮಿಕರಿಗೆ ಅಪಘಾತ / ಇನ್ನಿತರೆ ಹಾನಿಗಳು ಸಂಭವಿಸಿದಲ್ಲಿ ಅದಕ್ಕೆ ಗುತ್ತಿಗೆದಾರರೆ ಜವಾಬ್ದಾರರಾಗಿದ್ದು ನಷ್ಟ ಪರಿಹಾರವನ್ನು ವೈಯಕ್ತಿಕವಾಗಿ ಗುತ್ತಿಗೆದಾರರೇ ನೀಡಬೇಕಾಗುತ್ತದೆ.

28 ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಲಿಖಿತ ಅನುಮತಿ ಇಲ್ಲದೇ ಯಾವುದೇ ಕೆಲಸವನ್ನು ಟೆಂಡರುದಾರರು ಪ್ರಾರಂಭಿಸಬಾರದು.

29 ಟೆಂಡರ್ ಫಾರಂ ನೀಡುವ ದಿನಗಳಲ್ಲಿ ಗುತ್ತಿಗೆದಾರರ ನೊಂದಣಿಯನ್ನು ಮಾಡಲಾಗುವುದಿಲ್ಲ.

30 ಸರ್ಕಾರದಿಂದ ಆಗಿಂದಾಗ್ಗೆ ಬರುವ ಆದೇಶಗಳನ್ವಯ ಕಾಲ ಕಾಲಕ್ಕೆ ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ಪ್ರಾದೇಶಿಕ ಅರಣ್ಯ ವಿಭಾಗರವರು ವಿಧಿಸುವ ಷರತ್ತುಗಳ ಬದಲಾವಣೆಗಳಿಗೆ ಗುತ್ತಿಗೆದಾರರು ಬದ್ದರಾಗಿರಬೇಕು.

31 ಟೆಂಡರ್ ಫಾರಂಗಳನ್ನು ಬೇರೆಯವರ ಹೆಸರಿಗೆ ಪರಭಾರೆ ಮಾಡುವಂತಿಲ್ಲ ಈ ಕಛೇರಿಯಿಂದ ನೀಡಲಾದ ಅಧಿಕೃತ ಟೆಂಡರ್ ಫಾರಂಗಳನ್ನು ಹೊರತು ಬೇರಾವ ಮುದ್ರಿತ ಫಾರಂಗಳನ್ನು ಪರಿಗಣಿಸಲಾಗುವುದಿಲ್ಲ.

32 ನಮೂದಿಸಿರುವ ಕಾಮಗಾರಿಗಳಿಗೆ ಸಂಬಂಧಿಸಿದ ಕೆಲಸದ ಸ್ಥಳ, ಪರಿಮಾಣ ಹಾಗೂ ಅಂದಾಜು ಮೊತ್ತಗಳು ಬದಲಾವಣೆಗಳಿಗೆ ಒಳಪಟ್ಟಿರುತ್ತವೆ. ಇದಕ್ಕೆ ಕಾಮಗಾರಿಗಳ ತತ್ಸಂಬಂಧಿತ ವ್ಯತ್ಯಾಸದ ಪರಿಮಾಣಕ್ಕೆ ಪ್ರತ್ಯೇಕ ಟೆಂಡರು ಕರೆಯಲಾಗುವುದಿಲ್ಲ. ಆದರೆ ಅದೇ ದರದಲ್ಲಿ ವ್ಯತ್ಯಾಸಿತ ಪರಿಮಾಣದ ಕೆಲಸಗಳನ್ನು ಕೈಗೊಳ್ಳಲು ಬದ್ಧರಾಗಿರಬೇಕಾಗುತ್ತದೆ.

33 ಸಕ್ಷಮ ಪ್ರಾಧಿಕಾರದ ನಿರ್ಧಾರದ ಮೇರಗೆ ಯಾವುದೇ ಕಾಮಗಾರಿ ತೆಗೆದು ಹಾಕುವ ಹೊಸದಾಗಿ ಸೇರ್ಪಡೆ ಮಾಡುವ ಅಧಿಕಾರವು ಉಪ ಅರಣ್ಯ ಸಂರಕ್ಷಣಾಧಿಕಾರಿ ರವರ ಅಧಿಕಾರಕ್ಕೆ ಒಳಪಟ್ಟಿರುತ್ತದೆ.

ಪಿ.ಆರ್. 972 ಉಪ ಅರಣ್ಯ ಸಂರಕ್ಷಣಾಧಿಕಾರಿ, ಕೋಲಾರ ವಿಭಾಗ, ಕೋಲಾರ.

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಜಿಲ್ಲಾ ನೋಂದಣಾಧಿಕಾರಿಗಳ ಕಾರ್ಯಾಲಯ, ಗುಲ್ಬರ್ಗಾ

ಅಧಿಕೃತ ಜ್ಞಾಪನ

ಕ್ರ.ಸಂ:ಜಿನೋಗು:ಸಿಬ್ಬಂದಿ:24:2009–10/431, ಗುಲ್ಬರ್ಗಾ, ದಿನಾಂಕ: 2ನೇ ನವೆಂಬರ್ 2009

ವಿಷಯ: ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಯಾದ ಅಭ್ಯರ್ಥಿಗಳನ್ನು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ನೇಮಕ ಮಾಡುವ ಕುರಿತು.

ಉಲ್ಲೇಖ: 1) ಕಾರ್ಯದರ್ಶಿಯವರು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಅವರ ಪತ್ರ ಸಂಖ್ಯೆ:ಇ(3) 764–823/2009–10/ಪಿಎಸ್‌ಸಿ, ದಿನಾಂಕ:25.07.2009/03.08.09.

2) ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ಅಲಾಟ್‌ಮೆಂಟ್ ಪತ್ರ ಸಂಖ್ಯೆ:ಸಿಬ್ಬಂದಿ:2–144/05–06, ದಿನಾಂಕ:24.08.2009.

ಕರ್ನಾಟಕ ಲೋಕಸೇವಾ ಆಯೋಗದಿಂದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಆಯ್ಕೆಯಾಗಿ ಉಲ್ಲೇಖ (2) ರನ್ವಯ ಈ ಜಿಲ್ಲೆಗೆ ಹಂಚಿಕೆಯಾಗಿರುವ ಈ ಕೆಳಕಂಡ ಅಭ್ಯರ್ಥಿಗಳನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 4(i) ರನ್ವಯ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ತಾತ್ಕಾಲಿಕವಾಗಿ ದ್ವಿತೀಯ ದರ್ಜೆ ಸಹಾಯಕರಾಗಿ ವೇತನ ಶ್ರೇಣಿ ರೂ.5800–10500 ರಲ್ಲಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ನೇಮಕ ಮಾಡಿ ಇವರುಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಕಛೇರಿಗಳಿಗೆ ಸ್ಥಳ ನಿಯುಕ್ತಿ ಆದೇಶ ನೀಡಲಾಗಿದೆ.

ಕ್ರ ಸಂ.	ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ	KPSC ಆಯ್ಕೆಪಟ್ಟಿಯ ಕ್ರಮಸಂಖ್ಯೆ	ದ್ವಿತೀಯ ದರ್ಜೆ ಸಹಾಯಕರೆಂದು ನೇಮಕಾತಿ ಮಾಡಿದ ಕಛೇರಿ
1	ಮಹಾದೇವಿ ತಂದೆ ರುದ್ರಗೌಡ ಜಿ. ಮಾಲಿಪಾಟೀಲ್, ಪ್ಲಾಟ್ ನಂ.50, ಸಮತಾ ಕಾಲೋನಿ, ಬ್ರಹ್ಮಪುರ, ಗುಲ್ಬರ್ಗಾ.	84	ಜಿಲ್ಲಾ ನೋಂದಣಾಧಿಕಾರಿ ಕಛೇರಿ, ಗುಲ್ಬರ್ಗಾ
2.	ಸುರೇಶ ತಂದೆ ರಾಮಚಂದ್ರ ಖಾಡ್ಕೆ, ಪೋಸ್ಟ್:ಸೈದಾಪುರ, ತಾ: ಯಾದಗೀರಿ ಜಿಲ್ಲಾ: ಗುಲ್ಬರ್ಗ	66	ಉಪ ನೋಂದಣಾಧಿಕಾರಿ ಕಛೇರಿ, ಸೇಡಂ ಜಿಲ್ಲಾ: ಗುಲ್ಬರ್ಗಾ

ಈ ನೇಮಕಾತಿಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ ಮತ್ತು ಅಭ್ಯರ್ಥಿಗಳು ಈ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

1) ಈ ನೇಮಕಾತಿಯು ಅಭ್ಯರ್ಥಿಗಳ ಆಯ್ಕೆ ಪಟ್ಟಿಗೆ ಸಂಬಂಧಿಸಿದಂತೆ ಭಾರತದ ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ (ಸಿವಿಲ್) 232/1999ರ ಅರ್ಜಿಯಲ್ಲಿ ಆಗುವ ಘನ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಹಾಗೂ ಅಭ್ಯರ್ಥಿಗಳು ಸದರಿ ಘನ ನ್ಯಾಯಾಲಯವು ನೀಡುವ ತೀರ್ಪಿಗೆ ಬದ್ಧರಾಗಿರತಕ್ಕದ್ದು.

2) ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳ ಪರೀಕ್ಷಾರ್ಥ ಅವಧಿಯಲ್ಲಿರುತ್ತಾರೆ. ಈ ಅವಧಿಯಲ್ಲಿ ಎಲ್ಲಾ ಅಭ್ಯರ್ಥಿಗಳು ಈ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನಿಗದಿಪಡಿಸಿರುವ 1) ಕನ್ನಡ ಭಾಷಾ ಪರೀಕ್ಷೆ 2) ಅಕೌಂಟ್ಸ್ ಲೋಯರ್ 3) ರಿಜಿಸ್ಟ್ರೇಷನ್ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ KCS (ಪ್ರೋಬೇಷನ್) ರೂಲ್ಸ್ 1977ರ ಅಡಿಯಲ್ಲಿ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು.

3) ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾದ ಮೇಲೆ (1) ನಿಗದಿತ ನಮೂನೆಯಲ್ಲಿ ಆಸ್ತಿ ವಿವರಣಾ ಪಟ್ಟಿಯನ್ನು ಮತ್ತು (2) ಇಬ್ಬರು ಸ್ಥಳೀಯ ಗಣ್ಯ ವ್ಯಕ್ತಿಗಳಿಂದ ನಡತೆ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ನಂತರ ಸರ್ಕಾರಿ ಆದೇಶ ಸಂಖ್ಯೆ:ಜೆಎಡಿ/37/SRR/74 ದಿನಾಂಕ:05.08.1974 ರನ್ವಯ ಪ್ರಥಮ ವೇತನ ಪ್ರಮಾಣ ಪತ್ರವನ್ನು ನೀಡಲಾಗುವುದು.

4) ಅಭ್ಯರ್ಥಿಗಳು ಯಾವುದೇ ಉದ್ಯೋಗ ವಿನಿಮಯ ಕೇಂದ್ರದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿದ್ದಲ್ಲಿ ಅದರ ನೋಂದಣಿ ಪತ್ರವನ್ನು ಅಥವಾ ನೋಂದಣಿ ಮಾಡಿಸದೇ ಇದ್ದಲ್ಲಿ ನೋಂದಣಿ ಮಾಡಿಸಿಲ್ಲವೆಂಬ ಬಗ್ಗೆ ಅಭ್ಯರ್ಥಿಗಳು ಪ್ರಮಾಣ ಪತ್ರವನ್ನು ಪಡೆದು ಅದನ್ನು ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಸುಬ್ಬಯ್ಯ ವೃತ್ತ, ಬೆಂಗಳೂರು–27 ಇವರಿಗೆ ತಪ್ಪದೇ ಕಳುಹಿಸಿ ಮಾಹಿತಿಯನ್ನು ಈ ಕಛೇರಿಗೆ ನೀಡುವುದು.

5) ಅಭ್ಯರ್ಥಿಗಳು ಕೆಲಸಕ್ಕೆ ಹಾಜರಾಗುವ ಮುನ್ನ ಭಾರತದ ಸಂವಿಧಾನಕ್ಕೆ ಬದ್ಧರಾಗಿರುವ ಬಗ್ಗೆ ಪ್ರತಿಜ್ಞೆ ಮಾಡಿದ ನಿಷ್ಠೆ ಪ್ರಮಾಣ ಪತ್ರವನ್ನು ಬರೆದು ಕೊಡತಕ್ಕದ್ದು.

6) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: FD 65/SRR 67 ದಿನಾಂಕ: 22.06.1967 ರನ್ವಯ ವೈದ್ಯಕೀಯ ಪ್ರಮಾಣ ಪತ್ರವನ್ನು ಜಿಲ್ಲಾ ಸರ್ಜನ್‌ರಿಂದ ಪಡೆದು ಹಾಜರ್‌ಪಡಿಸತಕ್ಕದ್ದು.

7) ಸರ್ಕಾರದವರು ತಮ್ಮ ಆದೇಶ ಸಂಖ್ಯೆ: FD (SPL) 04 PET 2005 ದಿನಾಂಕ: 31.03.2006ರಲ್ಲಿ ಈ ಹಿಂದೆ ಜಾರಿಯಲ್ಲಿದ್ದ ನಿವೃತ್ತಿ ಪಿಂಚಣಿ ಸೌಲಭ್ಯ ಯೋಜನೆಯ ಬದಲಾಗಿ ದಿನಾಂಕ: 1.4.2006 ರಿಂದ ಜಾರಿಗೆ ಬರುವಂತೆ ಹೊಸದಾಗಿ New Defined Contributory Pension Scheme ಎಂಬ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿರುತ್ತಾರೆ. ಈ ಹೊಸ ಪಿಂಚಣಿ ಯೋಜನೆಯು ದಿನಾಂಕ: 1.4.2006 ರಿಂದ ಅಥವಾ ತದನಂತರ ನೇಮಕಾತಿ ಹೊಂದಿದ ಎಲ್ಲಾ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯಿಸುತ್ತದೆಂದು ಆದೇಶ ಮಾಡಿರುತ್ತಾರೆ.

ಆದ್ದರಿಂದ ಈ ಇಲಾಖೆಯಲ್ಲಿ ನೇಮಕ ಹೊಂದಿದ ಈ ಅಭ್ಯರ್ಥಿಗಳೆಲ್ಲರೂ ಸರ್ಕಾರದ ಸದರಿ ಆದೇಶದನ್ವಯ ಹೊಸ ಪಿಂಚಣಿ ಯೋಜನೆಗೆ ಒಳಪಡುತ್ತಾರೆಂದು ಈ ಮೂಲಕ ಆದೇಶಿಸಿದೆ ಹಾಗೂ ಸದರಿ ಆದೇಶದಲ್ಲಿನ ನಿರ್ದೇಶನಕ್ಕೆ ಸದರಿ ಎಲ್ಲಾ ಅಭ್ಯರ್ಥಿಗಳು ಬದ್ಧರಾಗಿರತಕ್ಕದ್ದು.

8) ಅಭ್ಯರ್ಥಿಗಳು ಈ ನೇಮಕಾತಿ ಆದೇಶ ಮುಟ್ಟಿದ ಹದಿನೈದು ದಿವಸಗಳಲ್ಲಿ ನೇಮಕಾತಿ ಮಾಡಿದ ಕಛೇರಿಯಲ್ಲಿ ಕೆಲಸಕ್ಕೆ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಅವರ ನೇಮಕಾತಿಯ ಆದೇಶವನ್ನು ನಿಯಮಾನುಸಾರ ರದ್ದುಪಡಿಸಲಾಗುವುದು. ಹಾಗೂ ನೇಮಕಾತಿ ಬಗ್ಗೆ ಅಭ್ಯರ್ಥಿಯು ಯಾವ ಹಕ್ಕನ್ನು ಹೊಂದಿರುವುದಿಲ್ಲವೆಂದು ತಿಳಿಯತಕ್ಕದ್ದು.

9) ನೇಮಕಾತಿ ಮಾಡಿರುವ ಕಛೇರಿಯ ಮಾರ್ಪಾಡಿಗೆ ಯಾವುದೇ ಮನವಿಗಳನ್ನು ಯಾವುದೇ ಕಾರಣಕ್ಕೂ ಪುರಸ್ಕರಿಸಲಾಗುವುದಿಲ್ಲ.

10) ಇಲಾಖೆ ನಿಯಮಿಸಿರುವ ಪರೀಕ್ಷಾರ್ಥ ಅವಧಿಯ ತರಬೇತಿ ಕಾರ್ಯಕ್ರಮವನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದಲ್ಲಿ ಮಾತ್ರ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವೆಂದು ಪರಿಗಣಿಸಲಾಗುವುದು.

ಜಿಲ್ಲಾ ನೋಂದಣಾಧಿಕಾರಿಗಳು,
ಪಿ.ಆರ್. 952 ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ

ನೋಂದಣಿ ಮತ್ತು ಮುದ್ರಾಂಕ ಇಲಾಖೆ

ಜಿಲ್ಲಾ ನೋಂದಣಾಧಿಕಾರಿ ಹಾಗೂ ಮುದ್ರಾಂಕಗಳ ಉಪ ಆಯುಕ್ತರ ಕಾರ್ಯಾಲಯ, ಮೈಸೂರು ಜಿಲ್ಲೆ, ಮೈಸೂರು

ಅಧಿಕೃತ ಜ್ಞಾಪನ

ಕ್ರಸಂ:ಸಿಬ್ಬಂದಿ.ಸಿಆರ್–19/09–10, ಮೈಸೂರು, ದಿನಾಂಕ: 3ನೇ ನವೆಂಬರ್ 2009

ವಿಷಯ: ಕರ್ನಾಟಕ ಲೋಕಸೇವಾ ಆಯೋಗದಿಂದ ಆಯ್ಕೆಯಾದ ಅಭ್ಯರ್ಥಿಗಳನ್ನು ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ನೇಮಕ ಮಾಡುವ ಕುರಿತು.

ಉಲ್ಲೇಖ: 1) ಕಾರ್ಯದರ್ಶಿಯವರು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಇವರ ಪತ್ರ ಸಂಖ್ಯೆ:ಇ(3) 764–823/2009–10/ಪಿಎಸ್‌ಸಿ, ದಿನಾಂಕ:25.07.2009/03.08.09.

2) ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು ಇವರ ಅಲಾಟ್‌ಮೆಂಟ್ ಪತ್ರ ಸಂಖ್ಯೆ:ಸಿಬ್ಬಂದಿ:2–144/05–06, ದಿನಾಂಕ:24.08.2009.

ಕರ್ನಾಟಕ ಲೋಕಸೇವಾ ಆಯೋಗದಿಂದ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ಆಯ್ಕೆಯಾಗಿ ಉಲ್ಲೇಖ–2 ರನ್ವಯ ಈ ಜಿಲ್ಲೆಗೆ ಹಂಚಿಕೆಯಾಗಿರುವ ಈ ಕೆಳಕಂಡ ಅಭ್ಯರ್ಥಿಗಳನ್ನು ಕರ್ನಾಟಕ ನಾಗರೀಕ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 4(i) ರನ್ವಯ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ತಾತ್ಕಾಲಿಕವಾಗಿ ದ್ವಿತೀಯ ದರ್ಜೆ ಸಹಾಯಕರಾಗಿ ವೇತನ ಶ್ರೇಣಿ ರೂ.5800–10500 ರಲ್ಲಿ ಈ ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೆ ನೇಮಕ ಮಾಡಿ ಇವರುಗಳನ್ನು ಅವರ ಹೆಸರಿನ ಮುಂದೆ ಸೂಚಿಸಿರುವ ಕಛೇರಿಗಳಿಗೆ ಸ್ಥಳ ನಿಯುಕ್ತಿ ಆದೇಶ ನೀಡಲಾಗಿದೆ.

ಕ್ರ. ಸಂ.	ಹೆಸರು ಮತ್ತು ವಿಳಾಸ ಶ್ರೀ/ಶ್ರೀಮತಿ	KPSC ಆಯ್ಕೆಪಟ್ಟಿಯ ಕ್ರಮಸಂಖ್ಯೆ	ದ್ವಿತೀಯ ದರ್ಜೆ ಸಹಾಯಕರೆಂದು ನೇಮಕಾತಿ ಮಾಡಿದ ಕಛೇರಿ
1	ಶಿವಕುಮಾರ ಡಿ. ಬಿನ್ ದೊಡ್ಡಯ್ಯ ಪಾಸಾಯನಪುರ, ಕಲ್ಲಿಗೌಡನಹಳ್ಳಿ ಅಂಚೆ, ಗುಂಡ್ಲುಪೇಟೆ ತಾಲ್ಲೂಕು ಚಾಮರಾಜನಗರ ಜಿಲ್ಲೆ	07	ಉಪ ನೋಂದಣಿ ಕಚೇರಿ, ಹೆಚ್.ಡಿ. ಕೋಟೆ, ಮೈಸೂರು ಜಿಲ್ಲೆ
2.	ಚಂದ್ರಶೇಖರ ರೆಡ್ಡಿ ಬಿನ್ ಈಶ್ವರ ರೆಡ್ಡಿ. ಎಂ. MIGII ನಂ.22 ಹೌಸಿಂಗ್ ಬೋರ್ಡ್, ಕಲ್ಕುಣಿಕೆ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.	38	ಉಪ ನೋಂದಣಿ ಕಛೇರಿ, ಹುಣಸೂರು, ಮೈಸೂರು ಜಿಲ್ಲೆ.
3.	ಎಲ್. ರಜನಿ ಬಿನ್ ಎಂ. ಲಿಂಗಯ್ಯ, ನಂ.1, ವಾಟರ್ ಟ್ಯಾಂಕ್ ಹಿಂಭಾಗ, ತ್ರಿವೇಣಿ ನಗರ, ಟಿ.ನರಸೀಪುರ	86	ಹೆಚ್ಚುವರಿ ಜಿಲ್ಲಾ ನೋಂದಣಿ ಕಚೇರಿ, ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ ಕಚೇರಿ ಆವರಣ, ಮೈಸೂರು

ಈ ನೇಮಕಾತಿಯು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟಿರುತ್ತದೆ ಮತ್ತು ಅಭ್ಯರ್ಥಿಗಳು ಈ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು.

1) ನ್ಯಾಯಾಲಯದಲ್ಲಿ ದಾಖಲಾಗಿರುವ ರಿಟ್ ಅರ್ಜಿ ಸಂಖ್ಯೆ (ಸಿವಿಲ್) 232/1999ರ ಅರ್ಜಿಯಲ್ಲಿ ಆಗುವ ಘನ ನ್ಯಾಯಾಲಯದ ಅಂತಿಮ ತೀರ್ಪಿಗೆ ಒಳಪಟ್ಟಿರುತ್ತದೆ ಹಾಗೂ ಅಭ್ಯರ್ಥಿಗಳು ಸದರಿ ಘನ ನ್ಯಾಯಾಲಯವು ನೀಡುವ ತೀರ್ಪಿಗೆ ಬದ್ಧರಾಗಿರತಕ್ಕದ್ದು.

2) ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾದ ದಿನಾಂಕದಿಂದ ಎರಡು ವರ್ಷಗಳ ಪರೀಕ್ಷಾರ್ಥ ಅವಧಿಯಲ್ಲಿರುತ್ತಾರೆ. ಈ ಅವಧಿಯಲ್ಲಿ ಎಲ್ಲಾ ಅಭ್ಯರ್ಥಿಗಳು ಈ ಇಲಾಖೆಯ ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ ನಿಗದಿಪಡಿಸಿರುವ 1) ಕನ್ನಡ ಭಾಷಾ ಪರೀಕ್ಷೆ 2) ಅಕೌಂಟ್ಸ್ ಲೋಯರ್ 3) ರಿಜಿಸ್ಟ್ರೇಷನ್ ಇಲಾಖಾ ಪರೀಕ್ಷೆಗಳಲ್ಲಿ ಉತ್ತೀರ್ಣರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ KCS (ಪ್ರೋಬೇಷನ್) ರೂಲ್ಸ್ 1977ರ ಅಡಿಯಲ್ಲಿ ಕಟ್ಟುನಿಟ್ಟಿನ ಕ್ರಮ ಜರುಗಿಸಲಾಗುವುದು.

3) ಅಭ್ಯರ್ಥಿಗಳು ಕರ್ತವ್ಯಕ್ಕೆ ಹಾಜರಾದ ಮೇಲೆ (1) ನಿಗದಿತ ನಮೂನೆಯಲ್ಲಿ ಆಸ್ತಿ ವಿವರಣಾ ಪಟ್ಟಿಯನ್ನು ಮತ್ತು (2) ಇಬ್ಬರು ಸ್ಥಳೀಯ ಗಣ್ಯ ವ್ಯಕ್ತಿಗಳಿಂದ ನಡತೆ ಪ್ರಮಾಣ ಪತ್ರಗಳನ್ನು ಸಲ್ಲಿಸಿದ ನಂತರ ಸರ್ಕಾರಿ ಆದೇಶ ಸಂಖ್ಯೆ:ಜೆಎಡಿ/37/SRR/74 ದಿನಾಂಕ:05.08.1974 ರನ್ವಯ ಪ್ರಥಮ ವೇತನ ಪ್ರಮಾಣ ಪತ್ರವನ್ನು ನೀಡಲಾಗುವುದು.

4) ಅಭ್ಯರ್ಥಿಗಳು ಯಾವುದೇ ಉದ್ಯೋಗ ವಿನಿಮಯ ಕೇಂದ್ರದಲ್ಲಿ ತಮ್ಮ ಹೆಸರನ್ನು ನೋಂದಾಯಿಸಿದ್ದಲ್ಲಿ ಅದರ ನೋಂದಣಿ ಪತ್ರವನ್ನು ಅಥವಾ ನೋಂದಣಿ ಮಾಡಿಸದೇ ಇದ್ದಲ್ಲಿ ನೋಂದಣಿ ಮಾಡಿಸಿಲ್ಲವೆಂಬ ಬಗ್ಗೆ ಅಭ್ಯರ್ಥಿಗಳು ಪ್ರಮಾಣ ಪತ್ರವನ್ನು ಪಡೆದು ಅದನ್ನು ನಿರ್ದೇಶಕರು, ಉದ್ಯೋಗ ಮತ್ತು ತರಬೇತಿ ಇಲಾಖೆ, ಸುಬ್ಬಯ್ಯ ವೃತ್ತ, ಬೆಂಗಳೂರು–27 ಇವರಿಗೆ ತಪ್ಪದೇ ಕಳುಹಿಸಿ ಮಾಹಿತಿಯನ್ನು ಈ ಕಛೇರಿಗೆ ನೀಡುವುದು.

5) ಅಭ್ಯರ್ಥಿಗಳು ಕೆಲಸಕ್ಕೆ ಹಾಜರಾಗುವ ಮುನ್ನ ಭಾರತದ ಸಂವಿಧಾನಕ್ಕೆ ಬದ್ಧರಾಗಿರುವ ಬಗ್ಗೆ ಪ್ರತಿಜ್ಞೆ ಮಾಡಿದ ನಿಷ್ಠೆ ಪ್ರಮಾಣ ಪತ್ರವನ್ನು ಬರೆದು ಕೊಡತಕ್ಕದ್ದು.

6) ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: FD 65/SRR 67 ದಿನಾಂಕ: 22.06.1967 ರನ್ವಯ ವೈದ್ಯಕೀಯ ಪ್ರಮಾಣ ಪತ್ರವನ್ನು ಜಿಲ್ಲಾ ಸರ್ಜನ್‌ರಿಂದ ಪಡೆದು ಹಾಜರ್‌ಪಡಿಸತಕ್ಕದ್ದು.

7) ಸರ್ಕಾರದವರು ತಮ್ಮ ಆದೇಶ ಸಂಖ್ಯೆ: FD (SPL) 04 PET 2005 ದಿನಾಂಕ: 31.03.2006ರಲ್ಲಿ ಈ ಹಿಂದೆ ಜಾರಿಗೆ ಬರುವಂತೆ ಪಿಂಚಣಿ ಸೌಲಭ್ಯ ಯೋಜನೆಯ ಬದಲಾಗಿ ದಿನಾಂಕ: 1.4.2006 ರಿಂದ ಜಾರಿಗೆ ಬರುವಂತೆ ಹೊಸದಾಗಿ New Defined Contributory Pension Scheme ಎಂಬ ಹೊಸ ಪಿಂಚಣಿ ಯೋಜನೆಯನ್ನು ಜಾರಿಗೆ ತಂದಿರುತ್ತಾರೆ. ಈ ಹೊಸ ಪಿಂಚಣಿ ಯೋಜನೆಯು ದಿನಾಂಕ: 1.4.2006 ರಿಂದ ಅಥವಾ ತದನಂತರ ನೇಮಕಾತಿ ಹೊಂದಿದ ಎಲ್ಲಾ ರಾಜ್ಯ ಸರ್ಕಾರಿ ನೌಕರರಿಗೆ ಅನ್ವಯಿಸುತ್ತದೆಂದು ಆದೇಶ ಮಾಡಿರುತ್ತಾರೆ.

ಆದ್ದರಿಂದ ಈ ಇಲಾಖೆಯಲ್ಲಿ ನೇಮಕ ಹೊಂದಿದ ಈ ಅಭ್ಯರ್ಥಿಗಳೆಲ್ಲರೂ ಸರ್ಕಾರದ ಸದರಿ ಆದೇಶದನ್ವಯ ಹೊಸ ಪಿಂಚಣಿ ಯೋಜನೆಗೆ ಒಳಪಡುತ್ತಾರೆಂದು ಈ ಮೂಲಕ ಆದೇಶಿಸಿದೆ ಹಾಗೂ ಸದರಿ ಆದೇಶದಲ್ಲಿನ ನಿರ್ದೇಶನಕ್ಕೆ ಸದರಿ ಎಲ್ಲಾ ಅಭ್ಯರ್ಥಿಗಳು ಬದ್ಧರಾಗಿರತಕ್ಕದ್ದು.

8) ಅಭ್ಯರ್ಥಿಗಳು ಈ ನೇಮಕಾತಿ ಆದೇಶ ಮುಟ್ಟಿದ ಹದಿನೈದು ದಿವಸಗಳಲ್ಲಿ ನೇಮಕಾತಿ ಮಾಡಿದ ಕಛೇರಿಯಲ್ಲಿ ಕೆಲಸಕ್ಕೆ ಹಾಜರಾಗತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಅವರ ನೇಮಕಾತಿಯ ಆದೇಶವನ್ನು ನಿಯಮಾನುಸಾರ ರದ್ದುಪಡಿಸಲಾಗುವುದು. ಹಾಗೂ ನೇಮಕಾತಿ ಬಗ್ಗೆ ಅಭ್ಯರ್ಥಿಯು ಯಾವ ಹಕ್ಕನ್ನು ಹೊಂದಿರುವುದಿಲ್ಲವೆಂದು ತಿಳಿಯತಕ್ಕದ್ದು.

9) ನೇಮಕಾತಿ ಮಾಡಿರುವ ಕಛೇರಿಯ ಮಾರ್ಪಾಡಿಗೆ ಯಾವುದೇ ಮನವಿಗಳನ್ನು ಯಾವುದೇ ಕಾರಣಕ್ಕೂ ಪುರಸ್ಕರಿಸಲಾಗುವುದಿಲ್ಲ.

10) ಇಲಾಖೆ ನಿಯಮಿಸಿರುವ ಪರೀಕ್ಷಾರ್ಥ ಅವಧಿಯ ತರಬೇತಿ ಕಾರ್ಯಕ್ರಮವನ್ನು ತೃಪ್ತಿಕರವಾಗಿ ಪೂರ್ಣಗೊಳಿಸಿದಲ್ಲಿ ಮಾತ್ರ ಪರೀಕ್ಷಾರ್ಥ ಅವಧಿಯನ್ನು ತೃಪ್ತಿಕರವೆಂದು ಪರಿಗಣಿಸಲಾಗುವುದು.

ಜಿಲ್ಲಾ ನೋಂದಣಾಧಿಕಾರಿ ಮತ್ತು ಮುದ್ರಾಂಕಗಳ ಉಪ ಆಯುಕ್ತರು,
ಮೈಸೂರು ಜಿಲ್ಲೆ, ಮೈಸೂರು,

ಪಿ.ಆರ್. 958

ಕರ್ನಾಟಕ ಲೋಕಸೇವಾ ಆಯೋಗ

ಲೋಕಸೇವಾ ಆಯೋಗದ ಕಛೇರಿ, "ಉದ್ಯೋಗ ಸೌಧ" ಬೆಂಗಳೂರು

ತಿದ್ದುಪಡಿ

ಸಂಖ್ಯೆ:ಇಪ(2)791/2009–10/ಪಿಎಸ್‌ಸಿ, ಬೆಂಗಳೂರು, ದಿನಾಂಕ: 28ನೇ ಅಕ್ಟೋಬರ್ 2009

ಆಯೋಗವು 2008ನೇ ಸಾಲಿನ ಪ್ರಥಮ ಅಧಿವೇಶನದ ಇಲಾಖಾ ಪರೀಕ್ಷೆಗಳ ಫಲಿತಾಂಶವನ್ನು ಅಧಿಸೂಚನೆ ಸಂಖ್ಯೆ.ಇಪ(1)1186/2008–09/ಪಿಎಸ್‌ಸಿ, ದಿನಾಂಕ:28.10.2008ರಲ್ಲಿ ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 06.11.2008ರಂದು ಪ್ರಕಟಿಸಿದ್ದು, ಅದರಲ್ಲಿ ಎಸ್.ಎ.ಎಸ್. ಭಾಗ–1ರ ನೋಂದಣಿ ಸಂಖ್ಯೆ. 56610 ರಡಿ 2007ನೇ ದ್ವಿತೀಯ ಅಧಿವೇಶನದಲ್ಲಿ ಪತ್ರಿಕೆ–1 ಮತ್ತು ಪತ್ರಿಕೆ–03ರಲ್ಲಿ ವಿನಾಯಿತಿಯನ್ನು ಹೊಂದಿದ್ದು, 2008ನೇ ಪ್ರಥಮ ಅಧಿವೇಶನದಲ್ಲಿ ನೋಂದಣಿ ಸಂಖ್ಯೆ.11757ರಡಿ ಪತ್ರಿಕೆ–2ರಲ್ಲಿ ಉತ್ತೀರ್ಣರಾಗಿದ್ದು, ಸದರಿ ವಿನಾಯಿತಿ ಪರಿಗಣಿಸುವಂತೆ ಕೋರಿದ್ದು, ಅದರಂತೆ ವಿನಾಯಿತಿಯನ್ನು ಪರಿಗಣಿಸಿ ಈ ಕೆಳಕಂಡಂತೆ ಫಲಿತಾಂಶವನ್ನು ತಿದ್ದುಪಡಿ ಮೂಲಕ ಪ್ರಕಟಿಸಿದೆ.

ಅಪೆಂಡಿಕ್ಸ್–'ಎ'

ಬೆಂಗಳೂರು ಕೇಂದ್ರ

ಎಸ್.ಎ.ಎಸ್. ಭಾಗ–1 ನೊಂದಣಿ ಸಂಖ್ಯೆ–11757

ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವವರಡಿಯಲ್ಲಿ ನೋಂದಣಿ ಸಂಖ್ಯೆ. 10690 ನಂತರ 11757ನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

ವಿ.ಬಿ. ಪಾಟೀಲ್
ಕಾರ್ಯದರ್ಶಿ,
ಹಾಗೂ ಇಲಾಖಾ ಪರೀಕ್ಷೆಗಳ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ.

ಪಿ.ಆರ್. 931

ಕರ್ನಾಟಕ ಲೋಕಸೇವಾ ಆಯೋಗ

ಲೋಕಸೇವಾ ಆಯೋಗದ ಕಛೇರಿ, "ಉದ್ಯೋಗ ಸೌಧ" ಬೆಂಗಳೂರು

ತಿದ್ದುಪಡಿ

ಸಂಖ್ಯೆ:ಇಪ(2)793/2009–10/ಪಿಎಸ್‌ಸಿ, ಬೆಂಗಳೂರು, ದಿನಾಂಕ: 28ನೇ ಅಕ್ಟೋಬರ್ 2009

ಆಯೋಗವು 2008ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳ ಫಲಿತಾಂಶವನ್ನು ಅಧಿಸೂಚನೆ ಸಂಖ್ಯೆ.ಇಪ(1)905/2008–09/ಪಿಎಸ್‌ಸಿ, ದಿನಾಂಕ:10.06.2009ರಲ್ಲಿ ಪ್ರಕಟಿಸಿದ್ದು, ಕರ್ನಾಟಕ ರಾಜ್ಯಪತ್ರದಲ್ಲಿ ದಿನಾಂಕ: 02.07.2009ರಲ್ಲಿ ಪ್ರಕಟಿಸಿದೆ. ಅದರಲ್ಲಿ ಬಿ.ಕಾಂ. ಪದವಿಯನ್ನು ಹೊಂದಿರುವ ಅಭ್ಯರ್ಥಿಗಳಿಗೆ ಕೋ–ಆಪರೇಷನ್ ಪತ್ರಿಕೆ–2ರಲ್ಲಿ ವಿನಾಯಿತಿಯನ್ನು ನೀಡಬಹುದಾಗಿದೆ. ಆ ಪ್ರಯುಕ್ತ ಈ ಕೆಳಕಂಡ ನೋಂದಣಿ ಸಂಖ್ಯೆಯ ಅಭ್ಯರ್ಥಿಗಳು ವಿನಾಯಿತಿಯನ್ನು ಪರಿಗಣಿಸಲು ಕೋರಿರುವ ಹಿನ್ನೆಲೆಯಲ್ಲಿ ಪರಿಶೀಲಿಸಿ, ಕೆಳಕಂಡ ಅಭ್ಯರ್ಥಿಗಳ ಫಲಿತಾಂಶವನ್ನು ತಿದ್ದುಪಡಿ ಮೂಲಕ ಪ್ರಕಟಿಸಿದೆ:

ಅಪೆಂಡಿಕ್ಸ್–'ಬಿ'

ಬೆಂಗಳೂರು ಕೇಂದ್ರ

ಕೋ–ಆಪರೇಷನ್

ಕೋ–ಆಪರೇಷನ್ ಪತ್ರಿಕೆ–1ರಲ್ಲಿ ಉತ್ತೀರ್ಣರಾಗಿರುವ ನೊಂದಣಿ ಸಂಖ್ಯೆ. 28696ನ್ನು ನೋಂದಣಿ ಸಂಖ್ಯೆ 28682 ನಂತರ ಹಾಗೂ ನೋಂದಣಿ ಸಂಖ್ಯೆ 30359ನ್ನು ನೋಂದಣಿ ಸಂಖ್ಯೆ 30177 ನಂತರ ಸೇರಿಸಿ ಓದಿಕೊಳ್ಳತಕ್ಕದ್ದು.

ವಿ.ಬಿ. ಪಾಟೀಲ್
ಕಾರ್ಯದರ್ಶಿ,
ಹಾಗೂ ಇಲಾಖಾ ಪರೀಕ್ಷೆಗಳ ನಿಯಂತ್ರಕರು,
ಕರ್ನಾಟಕ ಲೋಕಸೇವಾ ಆಯೋಗ.

ಪಿ.ಆರ್. 932

FORM - IV

(See Rule 12)

NOTICE

It is hereby notified that the undersigned has changed his/her name from **Smt NUSRAT BEGUM M. RATIMANI** to **Smt NUSRAT BEGUM S.SAUDAGAR**

P.D. 173

NUSRAT BEGUM M. RATIMANI

ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–1.

ಅಧಿಸೂಚನೆ

ಸಂಖ್ಯೆ: ಇ.ಪ(1)2235/2009–10/ಪಿಎಸ್‌ಸಿ, ದಿನಾಂಕ: 11ನೇ ನವೆಂಬರ್ 2009

ವಿಷಯ: 2009ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸುವ ಬಗ್ಗೆ.

ಆಯೋಗದಿಂದ ನಡೆಸಲಾಗುವ **2009**ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳಿಗೆ ಕರ್ನಾಟಕ ನಾಗರಿಕ ಸೇವಾ ನಿಯಮಗಳಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆ–'ಎ' ಅಥವಾ 'ಬಿ' ಗಳಲ್ಲಿ ಅರ್ಜಿಗಳನ್ನು ಆಹ್ವಾನಿಸಿದೆ. ಅರ್ಜಿ ಸ್ವೀಕರಿಸಲು ನಿಗದಿಪಡಿಸಲಾದ ಕೊನೆಯ ದಿನಾಂಕ: **11–12–2009.** ಈ ಪರೀಕ್ಷೆಗಳನ್ನು **ಜನವರಿ/ಫೆಬ್ರವರಿ 2010**ರ ಮಾಹೆಯಲ್ಲಿ ನಡೆಸಲಾಗುವುದು. ಪರೀಕ್ಷೆಗಳ ವಿವರವಾದ ವೇಳಾ ಪಟ್ಟಿಯನ್ನು ಈ ಅಧಿಸೂಚನೆಯ ಅನುಬಂಧ "ಎ" ಮತ್ತು "ಬಿ" ಗಳಲ್ಲಿ ನೀಡಿದೆ. ಪರೀಕ್ಷೆಗೆ ಹಾಜರಾಗಬಯಸುವ ಅಭ್ಯರ್ಥಿಗಳು ಒಂದು ಅರ್ಜಿಯಲ್ಲಿ ಅನುಬಂಧ–'ಎ' ನಲ್ಲಿ ಗರಿಷ್ಠ ನಾಲ್ಕು ಮತ್ತು ಅನುಬಂಧ–'ಬಿ' ನಲ್ಲಿ ನಾಲ್ಕು ವಿಷಯಗಳನ್ನು ಆಯ್ಕೆ ಮಾಡಿಕೊಳ್ಳಬಹುದು. ಅಭ್ಯರ್ಥಿಗಳು ವಿಷಯ ಸಂಕೇತಗಳನ್ನು ಎಚ್ಚರಿಕೆಯಿಂದ ಭರ್ತಿ ಮಾಡಲು ಸೂಚಿಸಿದೆ. ಅಭ್ಯರ್ಥಿಗಳು ಪಾಸ್ ಪೋರ್ಟ್ ಅಳತೆಯ (4cm x 4cm) ಇತ್ತೀಚಿನ ಭಾವಚಿತ್ರವನ್ನು ಅರ್ಜಿಯ ನಿಗದಿತ ಸ್ಥಳದಲ್ಲಿ ಅಂಟಿಸಿ, ಭಾವಚಿತ್ರದ ಕೆಳಗೆ ನಿಗದಿಪಡಿಸಿರುವ ಬಾಕ್ಸ್‌ನಲ್ಲಿ ಸಹಿಮಾಡಿ ಅದನ್ನು ಕಛೇರಿಯ ಮುಖ್ಯಸ್ಥರಿಂದ ದೃಢೀಕರಿಸತಕ್ಕದ್ದು.

1. ನಮೂನೆ 'ಎ' ಯನ್ನು ಎಸ್.ಎ.ಎಸ್, ಖಜಾನೆ ಅಕೌಂಟ್ಸ್ ಮತ್ತು ಎಲೆಕ್ಟ್ರಿಸಿಟಿ ಪರೀಕ್ಷೆ ಗಳನ್ನು ಹೊರತುಪಡಿಸಿ ಉಳಿದ ಎಲ್ಲಾ ವಿಷಯಗಳಿಗೆ ನಿಗದಿ ಪಡಿಸಿದೆ;
2. ನಮೂನೆ 'ಬಿ' ಯನ್ನು ಎಸ್.ಎ.ಎಸ್, ಖಜಾನೆ ಅಕೌಂಟ್ಸ್ ಮತ್ತು ಎಲೆಕ್ಟ್ರಿಸಿಟಿ ವಿಷಯಗಳ ಪರೀಕ್ಷೆಗಳಿಗೆ ಮಾತ್ರ ನಿಗದಿಪಡಿಸಿದೆ;
3. ಅಭ್ಯರ್ಥಿಗಳು ಆಯೋಗವು ನಿಗದಿಪಡಿಸಿರುವ ಒಂದೇ ಹಾಳೆಯನ್ನೊಳಗೊಂಡಂತಹ ಅರ್ಜಿ ನಮೂನೆಯನ್ನು ಮಾತ್ರ ಉಪಯೋಗಿಸತಕ್ಕದ್ದು. ಅದನ್ನು ಹೊರತುಪಡಿಸಿ ಬೇರೆ ಯಾವುದೇ ನಮೂನೆಗಳಲ್ಲಿ ಅಂದರೆ ಬೆರಳಚ್ಚು ಅಥವಾ ನೆರಳಚ್ಚು ಮಾಡಿದ, ಕೈ ಬರಹದ ಹಾಗೂ ಹಳೆಯ ನಮೂನೆಯ ಅರ್ಜಿಗಳನ್ನು ಸಲ್ಲಿಸಿದಲ್ಲಿ ಅಂತಹ ಅರ್ಜಿಗಳನ್ನು ತಿರಸ್ಕರಿಸಲಾಗುವುದು.

4. **ಈ ಹಿಂದೆ ವಿಭಾಗೀಯ ಮಟ್ಟದಲ್ಲಿ ನಡೆಸಲಾಗುತ್ತಿದ್ದ ಇಲಾಖಾ ಪರೀಕ್ಷೆಗಳನ್ನು (ಅನುಬಂಧ–'ಬಿ') ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಸಲಾಗುವುದು.**

2. **ಇಲಾಖಾ ಪರೀಕ್ಷೆಗಳಲ್ಲಿ ಕೆಳಕಂಡ ವಿಷಯಗಳಿಗೆ ವಸ್ತುನಿಷ್ಠ ಬಹುಆಯ್ಕೆ ಮಾದರಿಯ (OBJECTIVE TYPE MULTIPLE CHOICE) ಪ್ರಶ್ನೆಪತ್ರಿಕೆಗಳನ್ನು ನೀಡಲಾಗುವುದು.**

1. ಅಕೌಂಟ್ಸ್ ಲೋಯರ್
2. ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–1
3. ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–2
4. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್
5. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್
6. ಫಾರೆಸ್ಟ್ ಪತ್ರಿಕೆ–1
7. ಫಾರೆಸ್ಟ್ ಪತ್ರಿಕೆ–2
8. ಜನರಲ್ ಲಾ ಭಾಗ–2
9. ಹೋಮ್ ಗಾರ್ಡ್ಸ್ ಮ್ಯಾನ್ಯುಯಲ್
10. ಆಕ್ಟ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಆಂಡ್ ಚೈಲ್ಡ್ ಡೆವಲಪ್‌ಮೆಂಟ್
11. ಮೋಟಾರ್ ವೆಹಿಕಲ್ಸ್
12. ಮೈನಿಂಗ್ ಭಾಗ–1
13. ಮೈನಿಂಗ್ ಭಾಗ–2
14. ಪ್ರಿಸನ್ಸ್
15. ಪೋರ್ಟ್ಸ್ ಹೈಯರ್
16. ಪೋರ್ಟ್ಸ್ ಲೋಯರ್
17. ಸೋಷಿಯಲ್ ವೆಲ್‌ಫೇರ್ ಆಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನುಯಲ್ ಭಾಗ–1

18. ಸೋಷಿಯಲ್ ವೆಲ್‌ಫೇರ್ ಆಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನುಯಲ್ ಭಾಗ–2
19. ಯೂಥ್ ಸರ್ವೀಸ್ ಮ್ಯಾನ್ಯುಯಲ್
20. ಎಕ್ಸೈಸ್
21. ಪೊಲೀಸ್ ಮ್ಯಾನ್ಯುಯಲ್
22. ಅಕೌಂಟ್ಸ್ ಹೈಯರ್
23. ಕಮರ್ಷಿಯಲ್ ಟ್ಯಾಕ್ಸ್ ಭಾಗ–2 (ಲೋಯರ್)
24. ಫಾರೆಸ್ಟ್
25. ಫ್ಯಾಕ್ಟರೀಸ್ ಆಂಡ್ ಬಾಯ್ಲರ್ಸ್ ಲಾಸ್
26. ಲೇಬರ್
27. ಲೋಕಲ್ ಲಾಸ್ ಆಂಡ್ ಕಮರ್ಷಿಯಲ್ ಬುಕ್ ಕೀಪಿಂಗ್
28. ಪ್ರೆಸ್ ಆಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್, ಪತ್ರಿಕೆ–1
29. ಪ್ರೆಸ್ ಆಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಲೋಯರ್
30. ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–1, ಪತ್ರಿಕೆ–2
31. ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–2
32. ಪಿ.ಡಬ್ಲ್ಯೂ.ಡಿ ಲೋಯರ್
33. ರಿಜಿಸ್ಟ್ರೇಷನ್
34. ಸಿರಿಕಲ್ಚರ್
35. ಕೋ–ಆಪರೇಷನ್
36. ಜನರಲ್ ಲಾ ಭಾಗ–1
37. ಮುನಿಸಿಪಲ್ ಆಂಡ್ ಲೋಕಲ್ ಬೋರ್ಡ್ಸ್
38. ಮಾರ್ಕೆಟಿಂಗ್
39. ರೆವಿನ್ಯೂ ಹೈಯರ್ ಭಾಗ–1
40. ರೆವಿನ್ಯೂ ಹೈಯರ್ ಭಾಗ–2
41. ರೆವಿನ್ಯೂ ಲೋಯರ್
42. ಕಮರ್ಷಿಯಲ್ ಟ್ಯಾಕ್ಸ್ ಭಾಗ–1 ಹೈಯರ್
43. ಕೋ–ಆಪರೇಟಿವ್ ಆಡಿಟ್
44. ಇನ್ಷೂರೆನ್ಸ್ ಅಡ್ವಾನ್ಸ್‌ಡ್
45. ಇನ್ಷೂರೆನ್ಸ್ ಹೈಯರ್, ಪತ್ರಿಕೆ–1 ಮತ್ತು 3
46. ಇನ್ಷೂರೆನ್ಸ್ ಲೋಯರ್, ಪತ್ರಿಕೆ–1 ಮತ್ತು 3
47. ಫುಡ್ ಆಂಡ್ ಸಿವಿಲ್ ಸಪ್ಲೈಸ್ ಎಕ್ಸಾಮಿನೇಷನ್
48. ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ ಫೋರಮ್ ಸರ್ವಿಸ್ ಎಕ್ಸಾಮಿನೇಶನ್
49. ಇಂಡಿಯನ್ ಕಾಂಟ್ರಕ್ಟ್ ಆಕ್ಟ್
50. ಕೆ.ಪಿ.ಎಸ್.ಸಿ. ಮ್ಯಾನ್ಯುಯಲ್
51. ಕೆ.ಪಿ.ಎಸ್.ಸಿ. ರೆಕ್ರೂಟ್‌ಮೆಂಟ್ ರೂಲ್ಸ್
52. ಸೆಕ್ರೆಟೇರಿಯಟ್ ಮ್ಯಾನ್ಯುಯಲ್ ಭಾಗ–1
53. ಸ್ಪೆಷಲ್ ಲಾಸ್ ಆಂಡ್ ಸರ್ವೀಸ್ ರೂಲ್ಸ್
54. ಎಸ್.ಎ.ಎಸ್ ಭಾಗ–1, ಪತ್ರಿಕೆ–2 ಮತ್ತು 3
55. ಎಸ್.ಎ.ಎಸ್ ಭಾಗ–2,
56. ಎಸ್.ಎ.ಎಸ್ ಭಾಗ–3
57. ಟ್ರೆಜರಿ ಅಕೌಂಟ್ಸ್ ಭಾಗ–1, ಪತ್ರಿಕೆ–2 ಮತ್ತು 3
58. ಟ್ರೆಜರಿ ಅಕೌಂಟ್ಸ್ ಭಾಗ–2
59. ಎಲೆಕ್ಟ್ರಿಸಿಟಿ ಲಾಸ್

60. ಎಲೆಕ್ಟ್ರಿಸಿಟಿ (ಆಡಿಟ್ ಆಂಡ್ ಅಕೌಂಟ್ಸ್)ಲಾಸ್ (ಹೈಯರ್)ಎಕ್ಸಾಮಿನೇಷನ್ ಭಾಗ-1

61. ಎಲೆಕ್ಟ್ರಿಸಿಟಿ (ಆಡಿಟ್ ಆಂಡ್ ಅಕೌಂಟ್ಸ್) ಲಾಸ್ (ಲೋಯರ್)ಎಕ್ಸಾಮಿನೇಷನ್

62. ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಕ್ಸಾಮಿನೇಷನ್.

ಪ್ರತಿ ವಿಷಯಗಳಲ್ಲಿನ ಪಠ್ಯಕ್ರಮದಲ್ಲಿರುವ (**Syllabus**)ಯಾವುದಾದರೂ ನಿಯಮಗಳು/ ಅಧಿನಿಯಮಗಳು ನಿರಸನಗೊಂಡಿದ್ದಲ್ಲಿ (**Repealed**) ಅವುಗಳನ್ನು ಕೈಬಿಟ್ಟು ಹೊಸದಾಗಿ ಸೇರ್ಪಡೆಯಾಗಿರುವ ಹಾಗೂ ಪ್ರಸಕ್ತ ಇಲಾಖೆಗಳಲ್ಲಿ ಚಾಲ್ತಿಯಲ್ಲಿರುವ ನಿಯಮ/ ಅಧಿನಿಯಮಗಳನ್ವಯ ಪ್ರಶ್ನೆಪತ್ರಿಕೆಗಳನ್ನು ಸಿದ್ಧಪಡಿಸಿ ಪರೀಕ್ಷೆಗಳನ್ನು ನಡೆಸಲಾಗುವುದೆಂದು ಅಭ್ಯರ್ಥಿಗಳ ಗಮನಕ್ಕೆ ತರಲಾಗಿದೆ.

ಈ ವಿಷಯಗಳಲ್ಲಿನ ಪಶ್ನೆಪತ್ರಿಕೆಗಳಲ್ಲಿ ಪ್ರತಿ ಪ್ರಶ್ನೆಗೂ ನಾಲ್ಕು ಸಂಭವನೀಯ ಉತ್ತರಗಳಿರುತ್ತವೆ. ಪ್ರತಿ ಪ್ರಶ್ನೆಗೆ ನೀಡಲಾದ ನಾಲ್ಕು ಉತ್ತರಗಳ ಪೈಕಿ ಒಂದು ಸರಿ ಉತ್ತರವನ್ನು ಆಯ್ಕೆ ಮಾಡಿ ಉತ್ತರಿಸಬೇಕಿರುತ್ತದೆ. ಪ್ರತಿ ಪ್ರಶ್ನೆಗೂ ಆಯ್ಕೆ ಮಾಡಲಾದ ಉತ್ತರವು ಎಲ್ಲಾ ರೀತಿಯಿಂದಲೂ ಸಮರ್ಪಕವಾಗಿರುತ್ತದೆಯೆಂದು ಅರಿತು, ತೃಪ್ತಿಹೊಂದಿದ ನಂತರವೇ ಅಭ್ಯರ್ಥಿಗಳು ನೀಲಿ ಅಥವಾ ಕಪ್ಪು ಬಣ್ಣದ ಬಾಲ್‌ಪೆನ್ನಿನಿಂದ ಎನ್‌ಕೋಡ್ (ಸಂಕೇತ ಗುರುತು) ಮಾಡಬೇಕು, ತರುವಾಯ ತಪ್ಪು ಉತ್ತರಗಳನ್ನು ಯಾವುದೇ ಸಂದರ್ಭದಲ್ಲಿ ಅಳಿಸಲು ಸಾಧ್ಯವಿರುವುದಿಲ್ಲ.

ಮೇಲ್ಕಂಡ ವಿಷಯಗಳ ಪರೀಕ್ಷೆಯಲ್ಲಿ ನಿಯಮದಂತೆ ಪಠ್ಯಪುಸ್ತಕಗಳನ್ನು ಉಪಯೋಗಿಸಬಹುದು. ವಸ್ತುನಿಷ್ಠ ಬಹು ಆಯ್ಕೆ/ ಮಾದರಿಯ ಪರೀಕ್ಷೆಗೆ ನೀಡಲಾಗುವ ಉತ್ತರಪತ್ರಿಕೆಯ (OMR SHEET) ಮಾದರಿ ಪ್ರತಿಯನ್ನು ಅಭ್ಯರ್ಥಿಗಳಿಗೆ ಪ್ರವೇಶ ಪತ್ರದೊಂದಿಗೆ ನೀಡಲಾಗುವ ಸೂಚನೆಯ ಕೊನೆಪುಟದಲ್ಲಿ ನೋಡಬಹುದು.

ಈ ಕೆಳಕಂಡ ವಿಷಯಗಳಿಗೆ ಎಂದಿನಂತೆ ವಿವರಣಾತ್ಮಕ ಮಾದರಿಯಲ್ಲಿ (Descriptive Type) ಪರೀಕ್ಷೆ ನಡೆಸಲಾಗುವುದು.

1. ಎಲೆಕ್ಟ್ರಿಸಿಟಿ (ಆಡಿಟ್ ಆಂಡ್ ಅಕೌಂಟ್ಸ್) ಲಾಸ್ (ಹೈಯರ್)ಎಕ್ಸಾಮಿನೇಷನ್ ಭಾಗ-2,ಪತ್ರಿಕೆ-1
2. ಎಸ್.ಎ. ಎಸ್. ಭಾಗ-1, ಪತ್ರಿಕೆ-1
3. ಟ್ರೆಜರಿ ಅಕೌಂಟ್ಸ್ ಭಾಗ-1, ಪತ್ರಿಕೆ-1
4. ಇನ್ಶೂರೆನ್ಸ್ ಹೈಯರ್, ಪತ್ರಿಕೆ-2
5. ಇನ್ಶೂರೆನ್ಸ್ ಲೋಯರ್, ಪತ್ರಿಕೆ-2
6. ಪಿ.ಡಬ್ಲ್ಯೂ.ಡಿ. ಹೈಯರ್ ಭಾಗ-1, ಪತ್ರಿಕೆ-1
7. ಸೆಕ್ರೆಟರಿಯಟ್ ಮ್ಯಾನ್ಯುಯಲ್ ಭಾಗ-2
8. ಕನ್ನಡಭಾಷೆ, ಪತ್ರಿಕೆ-1 ಮತ್ತು 2
9. ಕನ್ನಡಭಾಷೆ (ಐ.ಎ.ಎಸ್, ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಅಧಿಕಾರಿಗಳಿಗೆ)ಪತ್ರಿಕೆ-1 ಮತ್ತು 2.
10. ಟ್ರಾನ್ಸ್‌ಲೇಷನ್ ಟೆಸ್ಟ್
11. ಪ್ರೆಸ್ ಆಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್, ಪತ್ರಿಕೆ-2

3. ಅರ್ಜಿ ನಮೂನೆಗಳು:

ಎ) ಇಲಾಖಾ ಪರೀಕ್ಷೆಗಳ ಅರ್ಜಿ ನಮೂನೆಗಳು ಸರ್ಕಾರಿ ಕೇಂದ್ರ ಪುಸ್ತಕಮಳಿಗೆ ಬೆಂಗಳೂರು, ಸರ್ಕಾರಿ ವಿಭಾಗೀಯ, ಜಿಲ್ಲಾ ಪುಸ್ತಕಮಳಿಗೆ ಮತ್ತು ಸರ್ಕಾರದ ಅಂಗೀಕೃತ ಪುಸ್ತಕ ವ್ಯಾಪಾರಿಗಳಲ್ಲಿ ಕ್ರಯಕ್ಕೆ ದೊರೆಯುತ್ತವೆ.

ಬಿ) ಅರ್ಜಿ ನಮೂನೆಯ ಕಾಲಂ 6 ರಲ್ಲಿ ಅಭ್ಯರ್ಥಿಗಳು ತಮ್ಮ ಹೆಸರುಗಳನ್ನು ಅವರ ಸೇವಾ ಪುಸ್ತಕದಲ್ಲಿ ಇರುವಂತೆ ಮಾತ್ರ ಬರೆಯಬೇಕು.

ಅಭ್ಯರ್ಥಿಗಳು ಪ್ರಸ್ತುತ ಅರ್ಜಿಸಲ್ಲಿಸಿರುವ ವಿಷಯಗಳಲ್ಲಿ ಹಿಂದಿನ ಎರಡು ವರ್ಷಗಳ ಅವಧಿಯೊಳಗಿನ ಅಧಿವೇಶನಗಳಲ್ಲಿ ಯಾವುದಾದರೂ ಪತ್ರಿಕೆಯಲ್ಲಿ ವಿನಾಯಿತಿ ಹೊಂದಿದ್ದಲ್ಲಿ ಅದರ ವಿವರಗಳನ್ನು ಅಂದರೆ ವಿನಾಯಿತಿ ಪಡೆದ ಪತ್ರಿಕೆ, ನೋಂದಣಿ ಸಂಖ್ಯೆ, ಅಧಿವೇಶನ ಮತ್ತು ಪರೀಕ್ಷಾಕೇಂದ್ರ ಇತ್ಯಾದಿಗಳನ್ನು ಅರ್ಜಿಯ ಕಾಲಂ (13)ರ ಅಂಕಣದಲ್ಲಿ ನಿರ್ದಿಷ್ಟವಾಗಿ ನಮೂದಿಸಬೇಕು. ಇಲ್ಲವಾದಲ್ಲಿ ಫಲಿತಾಂಶವನ್ನು ಸಿದ್ಧಪಡಿಸುವಾಗ ಹಿಂದೆ ಪಡೆದ ವಿನಾಯಿತಿಯನ್ನು ಪರಿಗಣಿಸಲಾಗುವುದಿಲ್ಲ. ಕನ್ನಡಭಾಷಾ ಪರೀಕ್ಷೆ ಪತ್ರಿಕೆ-1 ಮತ್ತು ಪತ್ರಿಕೆ-2 ರಲ್ಲಿ ವಿನಾಯಿತಿ ಪಡೆದಿದ್ದಲ್ಲಿ ಮೌಖಿಕ ಸಂದರ್ಶನಕ್ಕೆ ಹಾಜರಾಗಲು ವಿನಾಯಿತಿ ಪಡೆದ ವಿವರಗಳೊಂದಿಗೆ ಅರ್ಜಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಇಲ್ಲದಿದ್ದಲ್ಲಿ ವಿನಾಯಿತಿಯನ್ನು ಪರಿಗಣಿಸುವುದಿಲ್ಲ.

ಆಯೋಗವು ನಡೆಸುವ ಇಲಾಖಾ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಮೊದಲ ಪ್ರಯತ್ನದಿಂದಲೇ ಕಡ್ಡಾಯವಾಗಿ ಈ ಕೆಳಗೆ ನಿಗದಿಪಡಿಸಿರುವ ಪರೀಕ್ಷಾ ಶುಲ್ಕವನ್ನು ಅರ್ಜಿಯೊಂದಿಗೆ ಡಿ.ಡಿ. ಮೂಲಕವೇ ಪಾವತಿಸತಕ್ಕದ್ದು. ತಪ್ಪಿದ್ದಲ್ಲಿ ಅಂತಹ ಅರ್ಜಿಯನ್ನು ತಿರಸ್ಕರಿಸಲಾಗುವುದು.

4. ಶುಲ್ಕ: (ಎ) ವಿವಿಧ ಇಲಾಖಾ ಪರೀಕ್ಷೆಗಳಿಗೆ ನಿಗದಿಪಡಿಸಲಾದ ಶುಲ್ಕದ ವಿವರ:-

ಕ್ರಮ ಸಂಖ್ಯೆ ಹಾಗೂ ವಿಷಯ ಸಂಕೇತ	ವಿಷಯ	ನಿಗದಿ ಪಡಿಸಲಾದ ಶುಲ್ಕ ರೂ.
1.	ಅಕೌಂಟ್ಸ್ ಲೋಯರ್	25–00
2.	ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–1	25–00
3.	ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ–2	25–00
4.	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್	25–00
5.	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್	25–00
6.	ಫಾರೆಸ್ಟ್ ಪತ್ರಿಕೆ–1 (ಫಾರೆಸ್ಟ್‌ಗಾರ್ಡ್‌ಗಳಿಗೆ ಮಾತ್ರ)	25–00
7.	ಫಾರೆಸ್ಟ್ ಪತ್ರಿಕೆ–2 (ಫಾರೆಸ್ಟ್‌ಗಾರ್ಡ್‌ಗಳಿಗೆ ಮಾತ್ರ)	25–00
8.	ಜನರಲ್ ಲಾ ಭಾಗ–2	25–00
9.	ಹೋಮ್ ಗಾರ್ಡ್ಸ್ ಮ್ಯಾನ್ಯುಯಲ್	25–00
10.	ಆಕ್ಟ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಆಂಡ್ ಚೈಲ್ಡ್ ಡೆವಲಪ್‌ಮೆಂಟ್	25–00
11.	ಮೋಟಾರ್ ವೆಹಿಕಲ್ಸ್	25–00
12.	ಮೈನಿಂಗ್ ಭಾಗ–1	25–00
13.	ಮೈನಿಂಗ್ ಭಾಗ–2	25–00
14.	ಪ್ರಿಸನ್ಸ್	25–00
15.	ಪೋರ್ಟ್ಸ್ ಹೈಯರ್	25–00
16.	ಪೋರ್ಟ್ಸ್ ಲೋಯರ್	25–00
17.	ಸೋಷಿಯಲ್ ವೆಲ್‌ಫೇರ್ ಆಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–1	25–00
18.	ಸೋಷಿಯಲ್ ವೆಲ್‌ಫೇರ್ ಆಂಡ್ ಬ್ಯಾಕ್‌ವರ್ಡ್ ಕ್ಲಾಸಸ್ ಮ್ಯಾನ್ಯುಯಲ್ ಭಾಗ–2	25–00
19.	ಯೂಥ್ ಸರ್ವೀಸ್ ಮ್ಯಾನುಯಲ್	25–00
20.	ಎಕ್ಸೈಸ್	25–00
21.	ಪೊಲೀಸ್ ಮ್ಯಾನ್ಯುಯಲ್	25–00
22.	ಅಕೌಂಟ್ಸ್ ಹೈಯರ್	50–00
23.	ಕಮರ್ಷಿಯಲ್ ಟ್ಯಾಕ್ಸ್ ಭಾಗ–2 (ಲೋಯರ್)	50–00
24.	ಫಾರೆಸ್ಟ್	50–00
25.	ಫ್ಯಾಕ್ಟರೀಸ್ ಆಂಡ್ ಬಾಯ್ಲರ್ಸ್ ಲಾಸ್	50–00
26.	ಲೇಬರ್	50–00
27.	ಲೋಕಲ್ ಲಾಸ್ ಆಂಡ್ ಕಮರ್ಷಿಯಲ್ ಬುಕ್ ಕೀಪಿಂಗ್	50–00
28.	ಪ್ರೆಸ್ ಆಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಹೈಯರ್	50–00
29.	ಪ್ರೆಸ್ ಆಂಡ್ ಅಲೈಡ್ ಆಫೀಸಸ್ ಮ್ಯಾನ್ಯುಯಲ್ ಲೋಯರ್	50–00
30.	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–1	50–00
31.	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ–2	50–00
32.	ಪಿ.ಡಬ್ಲ್ಯೂ.ಡಿ ಲೋಯರ್	50–00
33.	ರಿಜಿಸ್ಟ್ರೇಷನ್	50–00

ಕ್ರಮ ಸಂಖ್ಯೆ ಹಾಗೂ ವಿಷಯ ಸಂಕೇತ	ವಿಷಯ	ನಿಗದಿ ಪಡಿಸಲಾದ ಶುಲ್ಕ ರೂ.
34.	ಸಿರಿಕಲ್ಚರ್	50–00
35.	ಕೋ–ಆಪರೇಷನ್	50–00
36.	ಜನರಲ್ ಲಾ ಭಾಗ–1	50–00
37.	ಮುನಿಸಿಪಲ್ ಆಂಡ್ ಲೋಕಲ್ ಬೋರ್ಡ್ಸ್	50–00
38.	ಮಾರ್ಕೆಟಿಂಗ್	50–00
39.	ರೆವಿನ್ಯೂ ಹೈಯರ್ ಭಾಗ–1	50–00
40.	ರೆವಿನ್ಯೂ ಹೈಯರ್ ಭಾಗ–2	50–00
41.	ರೆವಿನ್ಯೂ ಲೋಯರ್	50–00
42.	ಕಮರ್ಷಿಯಲ್ ಟ್ಯಾಕ್ಸ್ ಭಾಗ–1 ಹೈಯರ್	50–00
43.	ಕೋ–ಆಪರೇಟಿವ್ ಆಡಿಟ್	50–00
44.	ಇನ್ಶೂರೆನ್ಸ್ ಅಡ್ವಾನ್ಸ್‌ಡ್	50–00
45.	ಇನ್ಶೂರೆನ್ಸ್ ಹೈಯರ್	50–00
46.	ಇನ್ಶೂರೆನ್ಸ್ ಲೋಯರ್	50–00
47.	ಕನ್ನಡ	50–00
48.	ಫುಡ್ ಅಂಡ್ ಸಿವಿಲ್ ಸಪ್ಲೈಸ್ ಎಕ್ಸಾಮಿನೇಷನ್	50–00
49.	ಕರ್ನಾಟಕ ಕನ್ಸ್ಯೂಮರ್ ಪ್ರೋಟೆಕ್ಷನ್ಸ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ ಫೋರಮ್ ಸರ್ವಿಸ್ ಎಕ್ಸಾಮಿನೇಶನ್	50–00
51.	ಇಂಡಿಯನ್ ಕಾಂಟ್ರಕ್ಟ್ ಆಕ್ಟ್	25–00
52.	ಕೆ.ಪಿ.ಎಸ್.ಸಿ. ಮ್ಯಾನ್ಯುಯಲ್	25–00
53.	ಕೆ.ಪಿ.ಎಸ್.ಸಿ. ರೆಕ್ರೂಟ್‌ಮೆಂಟ್ ರೂಲ್ಸ್	25–00
54.	ಸೆಕ್ರೆಟೇರಿಯಟ್ ಮ್ಯಾನ್ಯುಯಲ್ ಭಾಗ–1	50–00
55.	ಸೆಕ್ರೆಟೇರಿಯಟ್ ಮ್ಯಾನ್ಯುಯಲ್ ಭಾಗ–2	25–00
56.	ಸ್ಪೆಷಲ್ ಲಾಸ್ ಆಂಡ್ ಸರ್ವೀಸ್ ರೂಲ್ಸ್	25–00
58.	ಟ್ರಾನ್ಸ್‌ಲೇಷನ್ ಟೆಸ್ಟ್	25–00
61.	ಎಸ್.ಎ.ಎಸ್ ಭಾಗ–1	50–00
62.	ಎಸ್.ಎ.ಎಸ್ ಭಾಗ–2	50–00
63.	ಎಸ್.ಎ.ಎಸ್ ಭಾಗ–3	50–00
64.	ಟ್ರೆಜರಿ ಅಕೌಂಟ್ಸ್ ಭಾಗ–1	50–00
65.	ಟ್ರೆಜರಿ ಅಕೌಂಟ್ಸ್ ಭಾಗ–2	50–00
66.	ಎಲೆಕ್ಟ್ರಿಸಿಟಿ ಲಾಸ್ ಎಕ್ಸಾಮಿನೇಷನ್	50–00
67.	ಎಲೆಕ್ಟ್ರಿಸಿಟಿ (ಆಡಿಟ್ ಆಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ–1	25–00
68.	ಎಲೆಕ್ಟ್ರಿಸಿಟಿ (ಆಡಿಟ್ ಆಂಡ್ ಅಕೌಂಟ್ಸ್) ಲಾಸ್ (ಹೈಯರ್) ಭಾಗ–2	25–00
70.	ಎಲೆಕ್ಟ್ರಿಸಿಟಿ (ಆಡಿಟ್ ಆಂಡ್ ಅಕೌಂಟ್ಸ್) ಲಾಸ್ (ಲೋಯರ್) ಎಕ್ಸಾಮಿನೇಷನ್	25–00
71.	ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಎಕ್ಸಾಮಿನೇಷನ್	25–00

ಕ್ರಮ ಸಂಖ್ಯೆ ಹಾಗೂ ವಿಷಯ ಸಂಕೇತ	ವಿಷಯ	ನಿಗದಿ ಪಡಿಸಲಾದ ಶುಲ್ಕ ರೂ.
72.	ಕನ್ನಡಭಾಷೆ (ಐ.ಎ.ಎಸ್, ಐ.ಪಿ.ಎಸ್ ಮತ್ತು ಐ.ಎಫ್.ಎಸ್ ಅಧಿಕಾರಿಗಳಿಗೆ)	50-00
73.	ಕನ್ನಡ ಭಾಷಾ ಮೌಖಿಕ ಪರೀಕ್ಷೆ	--

ಬಿ) ಯಾವುದೇ ಸ್ಥಳೀಯ ಪ್ರಾಧಿಕಾರದ ಅಥವಾ ಕಾನೂನು ಮೇರೆಗೆ ರಚಿಸಲಾದ ನಿಗಮಗಳಲ್ಲಿ ಸೇವೆಸಲ್ಲಿಸುತ್ತಿರುವ ಅಭ್ಯರ್ಥಿಗಳು ನಿಗದಿತ ಶುಲ್ಕಗಳನ್ನು ಸಂದಾಯ ಮಾಡಿದಲ್ಲಿ ಮಾತ್ರ ಅವರಿಗೆ ಅನ್ವಯವಾಗುವ ಸೇವೆಯ ನೇಮಕಾತಿ ಷರತ್ತುಗಳನ್ನೊಳಗೊಂಡಂತೆ ಅವರು ತೇರ್ಗಡೆಯಾಗಬೇಕಾಗಿರುವಂತಹ ಸೇವಾ ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾಗುತ್ತಾರೆ.

ಸಿ) ಕೇಂದ್ರ ಪರಿಹಾರ ಸಮಿತಿಯು ಸರ್ಕಾರದ ಸ್ವಾಮ್ಯಕ್ಕೊಳಪಟ್ಟಿರುವ ಸಂಸ್ಥೆಯಾಗಿರುವ ಕಾರಣ ಅಲ್ಲಿಯ ಸಿಬ್ಬಂದಿಗೆ ಇಲಾಖಾ ಪರೀಕ್ಷೆಗಳಾದ ಅಕೌಂಟ್ಸ್ ಹೈಯರ್, ಅಕೌಂಟ್ಸ್ ಲೋಯರ್, ಜನರಲ್ ಲಾ ವಿಷಯಗಳು ಅಲ್ಲದೆ ಅವರುಗಳೂ ನಿಗದಿಪಡಿಸಿರುವ ವಿಷಯಗಳಲ್ಲಿ ತೇರ್ಗಡೆಯಾಗಬೇಕಿರುವಂತಹ ಸೇವಾ ಪರೀಕ್ಷೆಗಳಿಗೆ ಹಾಜರಾಗಲು ಅರ್ಹರಾಗುತ್ತಾರೆ.

ಡಿ) ಸ್ಥಳೀಯ ಅಭ್ಯರ್ಥಿಗಳು, ಸ್ಟೈಪೆಂಡರಿ ಪದವೀಧರರು, ದೈನಿಕ ಮುಜರಾಯಿ ಮಾಸಿಕ ವೇತನದ ಮೇಲೆ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಮತ್ತು ಕರಾರು ಆಧಾರದಲ್ಲಿ ಮತ್ತು ಅನುದಾನಿತ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಗಳು ಈ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಲು ಅರ್ಹರಾಗುವುದಿಲ್ಲ.

ಇ) ಸೇವಾ ಪರೀಕ್ಷೆಗೆ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅಭ್ಯರ್ಥಿಯ ಅರ್ಜಿಯನ್ನು ಅಭ್ಯರ್ಥಿಯು ಸೇವೆಸಲ್ಲಿಸುತ್ತಿರುವ ಕಛೇರಿ ಮುಖ್ಯಸ್ಥರು ಸತ್ಯಾಪನೆ ಮಾಡಿ ದೃಢೀಕರಿಸತಕ್ಕದ್ದು.

ಈ) ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್ ಮತ್ತು ಲೋಯರ್ ವಿಷಯಗಳ ಪರೀಕ್ಷೆಯಲ್ಲಿ "ಉದ್ಯೋಗ ಮತ್ತು ತರಬೇತಿ ಮಹಾ ನಿರ್ದೇಶನಾಲಯ ನವದೆಹಲಿ ಇವರು ಪ್ರಕಟಿಸಿರುವ **ಎಂಪ್ಲಾಯ್‌ಮೆಂಟ್ ಸರ್ವೀಸ್ ಮ್ಯಾನ್ಯುಯಲ್"** ಪುಸ್ತಕವನ್ನು ಉಪಯೋಗಿಸಲು ಅನುಮತಿ ನೀಡಲಾಗಿದೆ.

ಎಫ್) ಸರ್ಕಾರವು ಅಧಿಸೂಚನೆ ಸಂಖ್ಯೆ: ಡಿಪಿಎಆರ್ 4 ಎಸ್‌ಎಸ್‌ಆರ್ 2007 ದಿನಾಂಕ: 26-04-2008ರಲ್ಲಿ ಕರ್ನಾಟಕ ನಾಗರೀಕ ಸೇವಾ (ಸೇವೆಗಳು ಮತ್ತು ಕನ್ನಡ ಭಾಷಾ ಪರೀಕ್ಷೆಗಳು) ನಿಯಮಗಳು, 1974ರ ಅನುಸೂಚಿ-I ಮತ್ತು IIರಲ್ಲಿ ನಿಗದಿಪಡಿಸಿರುವ ವಿವಿಧ ವಿಷಯಗಳ ಪಠ್ಯ ಕ್ರಮಕ್ಕೆ ತಿದ್ದುಪಡಿ ಮಾಡಿರುವ ವಿವರಗಳನ್ನು ಈ ಕೆಳಗೆ ನೀಡಿದೆ.

1. Title and commencement:- (1) These rules may be called the Karnataka Civil Services (Service and Kannada Language Examinations) (First Amendment) Rules, 2008.

2. They shall come into force from the date of their publication in the Official Gazette.

2. Amendment of SCHEDULE- I.- In the Karnataka Civil Services (Service and Kannada Language Examinations) Rules, 1974, (hereinafter referred to as the said rules) in **SCHEDULE-I**, under the heading " II service examination ", in the " Note" specifying syllabi for various examinations",-

(1) Under the heading,-" 3. Revenue (Higher) Examination-Part-I" under the sub-heading Paper-II, under " Minor Acts and Rules" items (vii), and (ix) and (x) and entries relating thereto shall be omitted.

(2) Under the heading " 4. Revenue (Lower)" under sub-heading ' Paper-II' , under " Minor Acts and Rules" items (vii), (ix) and (x) and entries relating thereto shall be omitted.

(3) Under the heading "5. General Law Part-I" under sub-heading "Paper-II" ,-

(a) for serial number 3 and entries relating thereto, the following shall be substituted, namely:-

"3. Motor Vehicles Act, 1988 (Central Act 59 of 1988)."

(b) for serial number 6 and entries relating thereto, the following shall be substituted, namely:-

"6. Prevention of corruption Act, 1988 (Central Act 49 of 1988)"

(c) after serial number 8 and entries relating thereto, the following shall be inserted, namely:-

"9. The Right to Information Act, 2005 (Central Act 22 of 2005) and the rules made thereunder."

(4) Under the heading "Community Development Examination Part-II", Note (1) and (2) shall be Omitted.

(5) for the entries under the heading " 19, Marketing Examination" Under the sub-heading " Paper-II', the following shall be substituted namely:-

"The Weights and Measures (Enforcement) Act,1985 and Rules".

(6) Under the heading "22. Motor Vehicles Examination" , for Serial number 1 and the entries relating thereto the following shall be substituted, namely:-

" 1. Motor Vehicles Act, 1988 (Central Act 59 of 1988) and the Rules made thereunder".

(7) Under the heading "23. Karnataka Police Manual Examination" in chapter XLVIII,-

(a) for item (i) and entries relating thereto the following shall be substituted, namely:-

"(i) Karnataka State Police including Ministerial Services (Recruitment) Rules, 2004"

(b) item (iii) and entries relating thereto shall be omitted;

(8) The heading " 24. Stores Purchase Department Manual Examination" and the entries relating thereto shall be omitted.

(9) Under the heading "26. Departmental Examination in Mining" under sub-heading "Part-II," for item (e) and entries relating thereto, the following shall be substituted, namely:-

"(e) Karnataka Minor Mineral Concession Rules, 1994".

(10) Under the heading "36. Public Works Departmental (Higher) Examination Part-I", under the sub-heading " Paper-II" for the words, figures and brackets "Karnataka Irrigation Act, 1959 (Edition) as amended form time to time" the words, figures and brackets " Karnataka Irrigation Act, 1965 (16 of 1965)" shall be substituted.

(11) Uner the heading " 44. Examination in Recruitment Rules" for item (d) an the entries relating thereto the following shall be substituted, namely:-

"(d) The Karnataka Civil Services (Direct Recruitment by Competitive Examinations and Selection) (General) Rules, 2006."

(12) Under the heading "49. Food and Civil Supplies Examinations" under the sub-heading " Paper-II'. for Serial number 2 and the entries relating thereto the following shall be substituted namely:-

"The Weights and Measures (Enforcement) Act, 1985 and Rules".

3. Amendment of Schedule II.- In schedule II to the said rules, in the **TABLE,** Serial number 33 and the entries relating thereto shall be omitted.

5. ಪರೀಕ್ಷಾ ಕೇಂದ್ರಗಳು: ಪ್ರತಿಯೊಬ್ಬ ಅಭ್ಯರ್ಥಿಯು ಪ್ರಸ್ತುತ ಆತನು ಕೆಲಸ ಮಾಡುತ್ತಿರುವ ಜಿಲ್ಲಾ ಕೇಂದ್ರದಲ್ಲಿಯೇ ಪರೀಕ್ಷೆಗೆ ಕುಳಿತುಕೊಳ್ಳತಕ್ಕದ್ದು. ಆದರೆ, ಯಾವುದೇ ಒಬ್ಬ ಅಭ್ಯರ್ಥಿಯು ಅನಂತರ ಇತರ ಕೇಂದ್ರಕ್ಕೆ ವರ್ಗಾವಣೆಯಾದಲ್ಲಿ ಅಥವಾ ಅವನು ತನ್ನ ಕೇಂದ್ರ ಕಾರ್ಯಸ್ಥಾನದ ಹೊರಗೆ ಗಳಿಕೆ ರಜೆಯ ಮೇಲಿರುವುದು ಮುಂತಾದ ನಿರ್ದಿಷ್ಟ ವಿಶೇಷ ಕಾರಣಗಳಿದ್ದಲ್ಲಿ ಆಯೋಗವು ಅಂತಹ ಅಭ್ಯರ್ಥಿಗಳಿಗೆ ಬೇರೆ ಕೇಂದ್ರಗಳಲ್ಲಿ ಪರೀಕ್ಷೆಗೆ ಹಾಜರಾಗುವುದಕ್ಕೆ ಕ್ರಮತೆಗೆದುಕೊಳ್ಳಲಾಗುವುದು. ಆಯೋಗದ ನಿರ್ದಿಷ್ಟ ಅನುಮತಿ ಇಲ್ಲದೆ ಅಭ್ಯರ್ಥಿಗಳು ಬೇರೆ ಕೇಂದ್ರದಲ್ಲಿ ಪರೀಕ್ಷೆಗಳನ್ನು ತೆಗೆದುಕೊಳ್ಳುವಂತಿಲ್ಲ. ಆ ರೀತಿ ಮಾಡಿದ ಅಭ್ಯರ್ಥಿಗಳು ಆಯೋಗ ತೆಗೆದುಕೊಳ್ಳುವ ಕ್ರಮಕ್ಕೆ ಹೊಣೆಯಾಗುವರು.

ಎ(1) ಖಜಾನೆ ಅಕೌಂಟ್ಸ್ ಮತ್ತು ಸಬಾರ್ಡಿನೇಟ್ ಅಕೌಂಟ್ಸ್ ಸರ್ವೀಸ್ ಪರೀಕ್ಷೆಗಳನ್ನು ಹಾಗೂ ಇಲೆಕ್ಟ್ರಿಸಿಟಿ, ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಕನ್ನಡ ಭಾಷಾ ಪರೀಕ್ಷೆಗಳನ್ನು **ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಸಲಾಗುವುದು.**

(2) ಸಬಾರ್ಡಿನೇಟ್ ಅಕೌಂಟ್ಸ್ ಸೇವಾ ಪರೀಕ್ಷೆಗಳಲ್ಲಿ ತೇರ್ಗಡೆಯಾಗಬೇಕಾದ ನೌಕರರು ಅವರ ನೇಮಕದ ದಿನಾಂಕದಿಂದ ಪ್ರಥಮ ದರ್ಜೆ ಸಹಾಯಕರಾಗಿ ಮೂರು ವರ್ಷಗಳಿಗಿಂತ ಕಡಿಮೆ ಇರದ ಅಥವಾ ದ್ವಿತೀಯ ದರ್ಜೆ ಸಹಾಯಕರಾಗಿ ಆರು ವರ್ಷಗಳಿಗಿಂತ ಕಡಿಮೆ ಇರದ ಅವಧಿಯ ಸೇವೆ ಸಲ್ಲಿಸಿದ್ದು ಅಕೌಂಟ್ಸ್ ಹೈಯರ್

ಅಥವಾ ತತ್ಸಮಾನ ಪರೀಕ್ಷೆಯಲ್ಲಿ ತೇರ್ಗಡೆಯಾಗಿದ್ದಲ್ಲಿ ಮಾತ್ರ ಸದರಿ ಪರೀಕ್ಷೆಗೆ ಕುಳಿತುಕೊಳ್ಳಲು ಅರ್ಹರಾಗಿರುತ್ತಾರೆ.

ಬಿ) ಸಚಿವಾಲಯದ ಕೈಪಿಡಿ ಪರೀಕ್ಷೆ, ಭಾಷಾಂತರ ಇಲಾಖೆಯ ಭಾಷಾಂತರ ಪರೀಕ್ಷೆ ಭಾರತದ ಕರಾರು ಅಧಿನಿಯಮ, ವಿಶೇಷ ಕಾನೂನು ಮತ್ತು ಸೇವಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗದ ಕೈಪಿಡಿ, ಕರ್ನಾಟಕ ಲೋಕಸೇವಾ ಆಯೋಗದ ನೇಮಕಾತಿ ನಿಯಮಗಳ ಪರೀಕ್ಷೆಗಳು ಮತ್ತು ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯೂನಲ್ ಪರೀಕ್ಷೆಗಳು ಬೆಂಗಳೂರು ಕೇಂದ್ರದಲ್ಲಿ ಮಾತ್ರ ನಡೆಸಲಾಗುವುದು.

ಸಿ) ಮುದ್ರಣಾಲಯ ಕೈಪಿಡಿಯ ಹೈಯರ್ ಮತ್ತು ಲೋಯರ್ ಪರೀಕ್ಷೆಗಳು ಬೆಂಗಳೂರು, ಮೈಸೂರು, ಧಾರವಾಡ, ಮಡಿಕೇರಿ ಮತ್ತು ಗುಲ್ಬರ್ಗಾ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು.

ಡಿ) ಬಂದರುಗಳ ಇಲಾಖೆಯ ಹೈಯರ್ ಮತ್ತು ಲೋಯರ್ ಪರೀಕ್ಷೆಗಳು ಮಂಗಳೂರು ಮತ್ತು ಕಾರವಾರ ಕೇಂದ್ರಗಳಲ್ಲಿ ಮಾತ್ರ ನಡೆಸಲಾಗುವುದು.

ಇ) ಉಳಿದಂತೆ ಇತರೆ ಪರೀಕ್ಷೆಗಳು ಈ ಕೆಳಕಂಡ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿದ್ದು, ಜಿಲ್ಲಾ ಸಂಕೇತ ಸಂಖ್ಯೆಗಳನ್ನು ಅವುಗಳ ಎದುರಿಗೆ ನೀಡಿದೆ. ಈ ಸಂಕೇತ ಸಂಖ್ಯೆಗಳನ್ನು ಅರ್ಜಿಯಲ್ಲಿ ಕಡ್ಡಾಯವಾಗಿ ನಮೂದಿಸತಕ್ಕದ್ದು:-

ಜಿಲ್ಲೆ	ಸಂಕೇತ	ಜಿಲ್ಲೆ	ಸಂಕೇತ
ಬೆಂಗಳೂರು	01	ಹಾವೇರಿ	16
ಬೆಳಗಾವಿ	02	ಕಾರವಾರ	17
ಬಳ್ಳಾರಿ	03	ಕೋಲಾರ	18
ಬೀದರ್	04	ಕೊಪ್ಪಳ	19
ಬಿಜಾಪುರ	05	ಮಂಡ್ಯ	20
ಬಾಗಲಕೋಟೆ	06	ಮಂಗಳೂರು	21
ಚಾಮರಾಜನಗರ	07	ಮಡಿಕೇರಿ	22
ಚಿಕ್ಕಬಳ್ಳಾಪುರ	08	ಮೈಸೂರು	23
ಚಿಕ್ಕಮಗಳೂರು	09	ರಾಮನಗರ	24
ಚಿತ್ರದುರ್ಗ	10	ರಾಯಚೂರು	25
ಧಾರವಾಡ	11	ಶಿವಮೊಗ್ಗ	26
ದಾವಣಗೆರೆ	12	ತುಮಕೂರು	27
ಗುಲ್ಬರ್ಗಾ	13	ಉಡುಪಿ	28
ಗದಗ್	14	ನವದೆಹಲಿ	29
ಹಾಸನ	15	ಮಸ್ಸೂರಿ	30

6. ಕೇಂದ್ರದ ಬದಲಾವಣೆ: ಪರೀಕ್ಷಾ ಕೇಂದ್ರದ ಬದಲಾವಣೆಗೆ ಸಲ್ಲಿಸುವ ಕೋರಿಕೆಗಳನ್ನು ಪರೀಕ್ಷೆ ಪ್ರಾರಂಭವಾಗುವ ಕನಿಷ್ಠ 15 ದಿನಗಳ ಮೊದಲು ಸಲ್ಲಿಸತಕ್ಕದ್ದು. ಆ ದಿನಾಂಕದ ತರುವಾಯ ಸಲ್ಲಿಸಲ್ಪಡುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಅಧಿಕೃತ ಕಾರಣಗಳ ಮೇಲೆ ಕೇಂದ್ರ ಬದಲಾವಣೆಗೆ ಅರ್ಜಿ ಸಲ್ಲಿಸುವ ನೌಕರರು ವರ್ಗಾವಣೆಯ ಅಥವಾ ಸ್ಥಳ ನಿಯುಕ್ತಿಯ ಆದೇಶಗಳ ದೃಢೀಕೃತ ನಕಲನ್ನು ಅಥವಾ ಸಂದರ್ಭಾನುಸಾರ ಗಳಿಕೆರಜೆ ಮಂಜೂರು ಮಾಡಲಾದ ಅಧಿಕೃತ ಜ್ಞಾಪನಪತ್ರದ ದೃಢೀಕೃತ ನಕಲಿನೊಂದಿಗೆ ಆ ಬಗ್ಗೆ ಪಡೆದ ಪ್ರಮಾಣ ಪತ್ರವನ್ನು ಲಗತ್ತಿಸತಕ್ಕದ್ದು. ಸ್ವವಿಳಾಸ ಬರೆದ ಹಾಗೂ ಅವಶ್ಯಕ ಅಂಚೆಚೀಟಿ ಹಚ್ಚಲಾದ ಲಕೋಟೆಯನ್ನು ಪತ್ರ ವ್ಯವಹಾರಕ್ಕಾಗಿ ಲಗತ್ತಿಸತಕ್ಕದ್ದು. (ರಿಜಿಸ್ಟರ್ಡ್ ಅಂಚೆಯಲ್ಲಿ ಕಳುಹಿಸಬೇಕಾದರೆ ಅದಕ್ಕೆ ತಗಲುವ ಸಾಕಷ್ಟು ಅಂಚೆಚೀಟಿ ಹಚ್ಚಿರಬೇಕು).

ಎ) ಅಭ್ಯರ್ಥಿಗಳು ಸೇವಾ ಪರೀಕ್ಷೆಗಳನ್ನು ಆಂಗ್ಲಭಾಷೆಯಲ್ಲಿ ಅಥವಾ ಕನ್ನಡದಲ್ಲಿ ಉತ್ತರಿಸಲು ಅನುಮತಿಸಲಾಗುವುದು.

ಬಿ) ಅಭ್ಯರ್ಥಿಯು ಉತ್ತರಗಳನ್ನು ಬರೆಯಲು ಆಂಗ್ಲ ಅಥವಾ ಕನ್ನಡದ ಯಾವುದೇ ಒಂದು ಮಾಧ್ಯಮವನ್ನು ಮಾತ್ರ ಆಯ್ಕೆ ಮಾಡಿಕೊಳ್ಳತಕ್ಕದ್ದು. ಅರ್ಧ ಆಂಗ್ಲಭಾಷೆಯಲ್ಲಿ ಮತ್ತು ಅರ್ಧ ಕನ್ನಡದಲ್ಲಿ ಉತ್ತರಿಸಿದಲ್ಲಿ ಅಂತಹ ಪತ್ರಿಕೆಗಳನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.

ಸಿ) ಓ.ಎಂ.ಆರ್ ಉತ್ತರ ಹಾಳೆಯಲ್ಲಿ ನಿಗದಿತ ಸ್ಥಳವಲ್ಲಿ ಅಭ್ಯರ್ಥಿ ನೋಂದಣಿ ಸಂಖ್ಯೆ ಮತ್ತು ವರ್ಷನ್ ಕೋಡನ್ನು ಸರಿಯಾಗಿ ನಮೂದಿಸಿ ಗುರುತಿಸಬೇಕು. ಇಲ್ಲವಾದಲ್ಲಿ ಅಂತಹ ಓ.ಎಂ.ಆರ್. ಉತ್ತರಪತ್ರಿಕೆಯನ್ನು ಮೌಲ್ಯಮಾಪನ ಮಾಡಲಾಗುವುದಿಲ್ಲ.

6. ಎ) ಮಾನ್ಯತೆ ಪಡೆದ ಯಾವುದೇ ವಿಶ್ವವಿದ್ಯಾಲಯದ ಎಲ್.ಎಲ್.ಬಿ., ಅಥವಾ ಬಿ.ಎಲ್ ಪದವಿ ಪಡೆದಂತಹ ಕಾನೂನು ಪದವೀಧರರಿಗೆ ಜನರಲ್ ಲಾ ಭಾಗ–1ರ ಪತ್ರಿಕೆ–(1) ಕ್ಕೂ ಮತ್ತು ಜನರಲ್ ಲಾ ಭಾಗ–2 ಕ್ಕೂ ಹಾಗೂ ಬಿ.ಕಾಂ. ಅಥವಾ ಎಂ.ಕಾಂ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಅಡ್ವಾನ್ಸ್‌ಡ್ ಅಕೌಂಟೆನ್ಸಿ ಅಥವಾ ಫೈನಾನ್ಶಿಯಲ್ ಅಕೌಂಟೆನ್ಸಿ ವಿಷಯದಲ್ಲಿ ತೇರ್ಗಡೆಯಾದವರಿಗೆ ಕಮರ್ಷಿಯಲ್ ಟ್ಯಾಕ್ಸ್ ಹೈಯರ್ ವಿಷಯದ ಪತ್ರಿಕೆ–3ಕ್ಕೂ, ಕೋ–ಆಪರೇಷನ್ ವಿಷಯದ ಪತ್ರಿಕೆ–2ಕ್ಕೂ ಹಾಗೂ ಅಡ್ವಾನ್ಸ್‌ಡ್ ಅಕೌಂಟೆನ್ಸಿ ಅಥವಾ ಫೈನಾನ್ಷಿಯಲ್ ಅಕೌಂಟೆನ್ಸಿ ಓದಿ ಬಿ.ಕಾಂ., ಬಿ.ಬಿ.ಎಂ. ಅಥವಾ ತತ್ಸಮಾನ ಪದವಿ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಕೋ–ಆಪರೇಟಿವ್ ಆಡಿಟ್ ಪರೀಕ್ಷೆಯ 2ನೇ ಪತ್ರಿಕೆಗೆ ವಿನಾಯಿತಿ ಇದೆ. ಹಾಗೆಯೇ ಅಡ್ವಾನ್ಸ್‌ಡ್ ಅಕೌಂಟೆನ್ಸಿ ಅಥವಾ ಫೈನಾನ್ಷಿಯಲ್ ಅಕೌಂಟೆನ್ಸಿ ವಿಷಯವನ್ನು ಓದಿರುವ ಬಿ.ಕಾಂ. ಪದವೀಧರರಿಗೆ ಎಸ್.ಎ.ಎಸ್. ಭಾಗ–3ರ ಪತ್ರಿಕೆ–1 ಕ್ಕೂ ಹಾಗೂ ಟ್ರೆಜರಿ ಅಕೌಂಟ್ಸ್ ಭಾಗ–2ರ ಪತ್ರಿಕೆ–1ಕ್ಕೂ ವಿನಾಯಿತಿ ಇರುತ್ತದೆ. ವಿನಾಯಿತಿ ಕೋರುವ ಅಭ್ಯರ್ಥಿಗಳು ಈ ತತ್ಸಂಬಂಧ ವಿಷಯಗಳನ್ನು ಅಭ್ಯಸಿಸಿದ್ದ ಬಗ್ಗೆ ತಮ್ಮ ಅರ್ಜಿಯೊಂದಿಗೆ ಬಿ.ಕಾಂ., ಎಲ್.ಎಲ್.ಬಿ. ಅಥವಾ ತತ್ಸಮಾನ ಪದವಿಯ ದೃಢೀಕೃತ ಅಂಕಪಟ್ಟಿ ಮತ್ತು ಪದವಿ ಪ್ರಮಾಣ ಪತ್ರಗಳನ್ನು ಲಗತ್ತಿಸತಕ್ಕದ್ದು ಮತ್ತು ಅರ್ಜಿ ನಮೂನೆಯ ಅಂಕಣ 14ರಲ್ಲಿ ಖಡ್ಡಾಯವಾಗಿ ನಮೂದಿಸತಕ್ಕದ್ದು. ತಪ್ಪಿದಲ್ಲಿ ಅಂತಹ ವಿನಾಯಿತಿಗಳನ್ನು ಪರಿಗಣಿಸಲಾಗುವುದಿಲ್ಲ.

7. **ಪ್ರವೇಶ ಪತ್ರ:** ವೇಳಾಪಟ್ಟಿಯನ್ನೊಳಗೊಂಡ ಪ್ರವೇಶ ಪತ್ರವನ್ನು ಪರೀಕ್ಷೆಗೆ ಮೊದಲು ಕಳುಹಿಸಲಾಗುವುದು. ಅಭ್ಯರ್ಥಿಗಳು ಆಯೋಗದಿಂದ ನೀಡಲಾದ ಪ್ರವೇಶ ಪತ್ರಗಳನ್ನು ಜೋಪಾನವಾಗಿಟ್ಟಿರಬೇಕು ಮತ್ತು ಅವುಗಳನ್ನು ತಮ್ಮ ಸೇವಾ ದಾಖಲೆಗಳಲ್ಲಿ ನಮೂದನೆಗಳನ್ನು ಮಾಡುವುದಕ್ಕಾಗಿ ಆಯೋಗದಿಂದ ನೀಡಲಾದ ತೇರ್ಗಡೆ ಪ್ರಮಾಣ ಪತ್ರದೊಂದಿಗೆ ಸಕ್ಷಮ ಪ್ರಾಧಿಕಾರಿಯ ಮುಂದೆ ಹಾಜರುಪಡಿಸತಕ್ಕದ್ದು. ಯಾವುದೇ ಸಂಧರ್ಭದಲ್ಲಿ ಪರೀಕ್ಷೆಗಳು ಮುಗಿದನಂತರ ಪ್ರವೇಶ ಪತ್ರದ ನಕಲನ್ನು ನೀಡಲಾಗುವುದಿಲ್ಲ.

8. **ಪಠ್ಯಪುಸ್ತಕಗಳು:** ಪಠ್ಯಪುಸ್ತಕಗಳನ್ನು ಉಪಯೋಗಿಸಬಹುದಾದ ಪತ್ರಿಕೆಗಳಿಗೆ ಅಭ್ಯರ್ಥಿಗಳು ಸರ್ಕಾರದಿಂದ ಪ್ರಕಾಶಿಸಲ್ಪಟ್ಟ ಪಠ್ಯಪುಸ್ತಕಗಳನ್ನು ಮತ್ತು ಖಾಸಗಿ ಪ್ರಕಾಶಕರಿಂದ ಪ್ರಕಾಶಿಸಲ್ಪಟ್ಟ ಪುಸ್ತಕಗಳನ್ನು ಸರ್ಕಾರಿ ಪ್ರಕಾಶಿತ ಪುಸ್ತಕಗಳ ಮಾದರಿಗೆ ಯಾವುದೇ ರೀತಿಯ ತದ್ವಿರುದ್ಧವಾಗಿಲ್ಲದಿದ್ದರೆ ಮತ್ತು ಕರ್ನಾಟಕ ಉಚ್ಚ ನ್ಯಾಯಾಲಯದ ದಿನಾಂಕ 3ನೇ ಡಿಸೆಂಬರ್ 1991ರ ಆದೇಶಕ್ಕೆ ಅನುಗುಣವಾಗಿದ್ದರೆ ಅಂತಹ ಪಠ್ಯಪುಸ್ತಕಗಳನ್ನು ಮಾತ್ರ ಪರೀಕ್ಷಾ ಕೇಂದ್ರಗಳಲ್ಲಿ ಉಪಯೋಗಿಸಬಹುದಾಗಿರುತ್ತದೆ. ಇತರೆ ಯಾವುದೇ ಖಾಸಗಿ ಪ್ರಕಾಶಕರ ಪಠ್ಯ ಪುಸ್ತಕಗಳನ್ನು ನಿಷೇಧಿಸಲಾಗಿದೆ.

9. **ತೇರ್ಗಡೆಗೆ ಗಳಿಸಬೇಕಾದ ಅಂಕಗಳು:**

ಎ) ಯಾವುದೇ ಸೇವಾ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಲು ಒಂದು ಪತ್ರಿಕೆಯ ಪರೀಕ್ಷೆಗೆ ಕನಿಷ್ಠ ಶೇಕಡ 40 ಅಂಕಗಳನ್ನು ಪಡೆದಿರಬೇಕು. ಒಂದಕ್ಕಿಂತ ಹೆಚ್ಚು ಪತ್ರಿಕೆಗಳಿದ್ದಲ್ಲಿ ಪ್ರತಿ ಪತ್ರಿಕೆಯಲ್ಲಿ ಕನಿಷ್ಠ ಶೇಕಡಾ 35 ಮತ್ತು ಒಟ್ಟು ಎಲ್ಲಾ ಪತ್ರಿಕೆಗಳಿಂದ ಕನಿಷ್ಠ ಶೇಕಡಾ 40 ಅಂಕಗಳನ್ನು ಪಡೆದಿರಬೇಕು. ವಿನಾಯಿತಿ ಕೋರಿದ ಬಿ.ಕಾಂ. ಹಾಗೂ ಕಾನೂನು ಪದವೀಧರರು, ಹಾಗೂ ಲೋಕಸೇವಾ ಆಯೋಗವು ನಡೆಸುವ ವಿಷಯದ ಪತ್ರಿಕೆಗಳಲ್ಲಿ ಕನಿಷ್ಠ ಶೇಕಡ 40 ಅಂಕಗಳನ್ನು ಪಡೆದಿರಬೇಕು.

ಬಿ) ಯಾವುದೇ ಪರೀಕ್ಷೆಯಲ್ಲಿ ನಿಗದಿಪಡಿಸಿದ ಗರಿಷ್ಠ ಅಂಕಗಳಲ್ಲಿ ಶೇಕಡ 60ಕ್ಕಿಂತ ಕಡಿಮೆ ಇರದಷ್ಟು ಅಂಕಗಳನ್ನು ಪಡೆದು ಉತ್ತೀರ್ಣರಾದಂತಹ ಅಭ್ಯರ್ಥಿಗಳನ್ನು ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾಗಿರುವುದಾಗಿ ಫಲಿತಾಂಶ ಘೋಷಿಸಲಾಗುವುದು.

ಸಿ) ಯಾವುದೇ ಪರೀಕ್ಷೆಯು ಒಂದಕ್ಕಿಂತ ಹೆಚ್ಚು ಪತ್ರಿಕೆಗಳನ್ನೊಳಗೊಂಡಿದ್ದು ಅಭ್ಯರ್ಥಿಯು ಆ ಪರೀಕ್ಷೆಯಲ್ಲಿ ಅನುತ್ತೀರ್ಣನಾದರೂ ಅದೇ ವಿಷಯದ ಇತರ ಪತ್ರಿಕೆಗಳಲ್ಲಿ ಆ ಪತ್ರಿಕೆಗೆ ನಿರ್ದಿಷ್ಟಪಡಿಸಲಾದ ಗರಿಷ್ಟ ಅಂಕಗಳಲ್ಲಿ ಶೇಕಡಾ ಅರವತ್ತಕ್ಕಿಂತ ಕಡಿಮೆ ಇರದಷ್ಟು ಅಂಕಗಳನ್ನು ಪಡೆದಿದ್ದಲ್ಲಿ ಅಂತಹವರನ್ನು ಆ ಪತ್ರಿಕೆಯಲ್ಲಿ ವಿನಾಯಿತಿ ಹೊಂದಿರುವರೆಂದು ಪರಿಗಣಿಸಲಾಗುವುದು. ಅಂತಹವರು ಪರೀಕ್ಷೆಗಳ ಫಲಿತಾಂಶ ಘೋಷಿಸಿದ ದಿನಾಂಕದಿಂದ ಎರಡು ವರ್ಷಗಳೊಳಗೆ ಆ ಪರೀಕ್ಷೆಯ ಉಳಿದ ಪತ್ರಿಕೆಗಳಲ್ಲಿ ತೇರ್ಗಡೆಯಾಗಲು ಅವಶ್ಯವಿರುವಷ್ಟು ಅಂಕಗಳನ್ನು ಪಡೆದು ತೇರ್ಗಡೆಯಾಗತಕ್ಕದು. ಇಲ್ಲದಿದ್ದಲ್ಲಿ ಅಂತಹ ವಿನಾಯ್ತಿಯು ರದ್ದಾಗುವುದು.

10. **ಹಾಜರಿ ಪ್ರಮಾಣ ಪತ್ರಗಳು:** ಪರೀಕ್ಷೆಗೆ ಹಾಜರಾದ ಬಗ್ಗೆ ಹಾಜರಾತಿ ಪ್ರಮಾಣಪತ್ರ ಪಡೆಯಬಯಸುವ ಅಭ್ಯರ್ಥಿಗಳು ಸಂಬಂಧಪಟ್ಟ ಪರೀಕ್ಷಾಕೇಂದ್ರದ ಮೇಲ್ವಿಚಾರಕರಿಂದ ಅದನ್ನು ಪರೀಕ್ಷಾ ದಿನದಂದೇ ಪಡೆಯತಕ್ಕದ್ದು. ಹಾಜರಿ ಪ್ರಮಾಣಪತ್ರವನ್ನು ಆಯೋಗದ ಕಛೇರಿಯಿಂದ ಯಾವುದೇ ಸಂದರ್ಭದಲ್ಲೂ ನೀಡಲಾಗುವುದಿಲ್ಲ.

11. ಕನ್ನಡಭಾಷಾ ಲಿಖಿತ ಪರೀಕ್ಷೆಗೆ ಮೌಖಿಕ ಪರೀಕ್ಷೆ:

(1) ಕನ್ನಡ ಭಾಷಾ ವಿಷಯದ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಮೌಖಿಕ ಪರೀಕ್ಷೆಯನ್ನು ಆಯೋಗದ ಕೇಂದ್ರಕಛೇರಿ, ಪಾರ್ಕ್‌ಹೌಸ್, ಬೆಂಗಳೂರು-560001 ಇಲ್ಲಿ ಹಾಗೂ ಆಯೋಗದಿಂದ ನಿರ್ಧರಿಸಲಾಗುವ ಇತರ ಯಾವುದೇ ಕೇಂದ್ರದಲ್ಲಿ ನಡೆಸಲಾಗುವುದು.

ಸೂಚನೆ: (1) ಯಾವುದೇ ಸರ್ಕಾರಿ ನೌಕರನು/ನೌಕರಳು ಕನ್ನಡಭಾಷಾ ಲಿಖಿತ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಹೊರತು ಕನ್ನಡ ಮೌಖಿಕ ಪರೀಕ್ಷೆಗೆ ಅರ್ಹರಾಗುವುದಿಲ್ಲ.

(2) ಸರ್ಕಾರದ ಅಧಿಸೂಚನೆ ಸಂಖ್ಯೆ ಡಿಪಿಎಆರ್ 81 ಎಸ್‌ಎಸ್‌ಆರ್ 81, ದಿನಾಂಕ 6ನೇ ಜೂನ್ 1981ರ ಮೇರೆಗೆ ಗೃಹರಕ್ಷಕ ಸಂಸ್ಥೆಯ ಸೈನಿಕರು ಕನ್ನಡ ಭಾಷಾ, ಮೌಖಿಕ ಪರೀಕ್ಷೆಯಲ್ಲಿ ಮಾತ್ರ ತೇರ್ಗಡೆಯಾಗತಕ್ಕದ್ದು. ವೇತನ ಮುಂಬಡ್ತಿ ಪಡೆಯುವ ಮತ್ತು ಸೇವಾ ಸ್ಥಿರೀಕರಣದ ಉದ್ದೇಶಗಳಿಗೆ ಕನ್ನಡ ಭಾಷಾ ಲಿಖಿತ ಪರೀಕ್ಷೆಯ ಬದಲಾಗಿ ಗರಿಷ್ಠ 50 ಅಂಕಗಳನ್ನು ನಿಗದಿಪಡಿಸಿರುವ ಕನ್ನಡ ಮೌಖಿಕ ಪರೀಕ್ಷೆಯಲ್ಲಿ ಮಾತ್ರ ಅವರು ತೇರ್ಗಡೆ ಹೊಂದಬೇಕಾಗಿರುತ್ತದೆ.

(3) ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 3 ಎಸ್‌ಎಸ್‌ಆರ್ 82, ದಿನಾಂಕ 30ನೇ ಆಗಸ್ಟ್ 1982ರ ಮೇರೆಗೆ ಅಂಧರಾಗಿರುವ ಮತ್ತು ಕೆಲಸಕ್ಕೆ ಓದುವುದು ಮತ್ತು ಬರೆಯುವುದು ಅವಶ್ಯವಿಲ್ಲದ ಸರ್ಕಾರಿ ನೌಕರರಿಗೆ ಸ್ಥಿರೀಕರಣದ ಮತ್ತು ವಾರ್ಷಿಕ ವೇತನ ಮುಂಬಡ್ತಿಗಳನ್ನು ಪಡೆಯುವ ಉದ್ದೇಶಗಳಿಗಾಗಿ ಕನ್ನಡ ಭಾಷಾ ಲಿಖಿತ ಸೇವಾ ಪರೀಕ್ಷೆಯಲ್ಲಿ ತೇರ್ಗಡೆಯಾಗುವುದರಿಂದ ವಿನಾಯಿತಿಸಲಾಗಿದೆ. ಆದರೆ ಅವರು ಕನ್ನಡ ಭಾಷಾ ಮೌಖಿಕ ಪರೀಕ್ಷೆಯಲ್ಲಿ ತೇರ್ಗಡೆಯಾಗತಕ್ಕದ್ದು.

12. (ಅ) ಆಯೋಗದ ಆದೇಶ ಸಂಖ್ಯೆ ಇ.ಪ(2) 3774/94-95/ಪಿಎಸ್‌ಸಿ ದಿನಾಂಕ 18ನೇ ಫೆಬ್ರವರಿ 1995ರ ಮೇರೆಗೆ ಬ್ಯಾಟರಿ ಚಾಲಿತ ಪ್ರೋಗ್ರಾಮ್ ಮಾಡದೆ ಇರುವಂತಹ ಕ್ಯಾಲುಕ್ಯುಲೇಟರ್‌ಗಳನ್ನು ಎಸ್.ಎ.ಎಸ್ ಪರೀಕ್ಷೆಗಳಲ್ಲಿ ಉಪಯೋಗಿಸಲು ಅಭ್ಯರ್ಥಿಗಳಿಗೆ ಅನುಮತಿ ನೀಡಲಾಗಿದೆ.

(ಆ) ಪರೀಕ್ಷಾ ಕೇಂದ್ರಗಳಿಗೆ ಮೊಬೈಲ್ ಫೋನ್‌ಗಳನ್ನು ಉಪಯೋಗಿಸುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

13. **ತೇರ್ಗಡೆ ಪ್ರಮಾಣ ಪತ್ರಗಳು:** ಪ್ರತಿಯೊಂದು ವಿಷಯಕ್ಕೆ ತೇರ್ಗಡೆ ಪ್ರಮಾಣಪತ್ರವನ್ನು ಆಯೋಗದಿಂದ ಫಲಿತಾಂಶವು ಅಧಿಕೃತವಾಗಿ ರಾಜ್ಯಪತ್ರದಲ್ಲಿ ಪ್ರಕಟವಾದ ನಂತರ ದೃಢೀಕೃತ ಅಂಚೆಯ ಮೂಲಕ ಕಳುಹಿಸಲಾಗುವುದು. ಪ್ರಮಾಣ ಪತ್ರದಲ್ಲಿ ಮುದ್ರಿತವಾದ ಹೆಸರು ಅಥವಾ ಇನ್ನಾವುದೇ ರೀತಿಯ ತಪ್ಪುಗಳು ಕಂಡುಬಂದಲ್ಲಿ ಅಭ್ಯರ್ಥಿಗಳು ಕೂಡಲೇ ತಿದ್ದುಪಡಿಗಾಗಿ ಸೂಕ್ತ ದಾಖಲೆಗಳೊಂದಿಗೆ ಆಯೋಗದ ಕಛೇರಿಯನ್ನು ಸಂಪರ್ಕಿಸುವುದು.

(ಸೂಚನೆ: ಪರೀಕ್ಷೆಯ ಪ್ರತಿಭಾಗವನ್ನು ಈ ಉದ್ದೇಶಕ್ಕೆ ಒಂದು ಪ್ರತ್ಯೇಕ ಪರೀಕ್ಷೆ ಎಂದು ಪರಿಗಣಿಸಲಾಗುವುದು)

ಅಂಕಪಟ್ಟಿಗಳು: ಇಲಾಖಾ ಪರೀಕ್ಷೆಯ ಎಲ್ಲಾ ಅಭ್ಯರ್ಥಿಗಳ ಅಂಕಗಳನ್ನು ಆಯೋಗದ ವೆಬ್ ಸೈಟ್ **"http://kpsc.kar.nic.in"** ನಲ್ಲಿ ಫಲಿತಾಂಶ ಪ್ರಕಟವಾದ ದಿನಾಂಕದಂದೇ ಪ್ರಕಟಿಸಲಾಗುವುದು ಪ್ರತ್ಯೇಕವಾಗಿ ಅಂಕಪಟ್ಟಿಗಳನ್ನು ನೀಡಲಾಗುವುದಿಲ್ಲ.

14. ಅಂಕಗಳ ಮರು ಎಣಿಕೆ:

ಎ) ಯಾವುದೇ ಪರೀಕ್ಷೆಯಲ್ಲಿ ಅನುತ್ತೀರ್ಣನಾದ ಅಭ್ಯರ್ಥಿಯು ಫಲಿತಾಂಶ ಪ್ರಕಟವಾದ ದಿನಾಂಕದಿಂದ 30 ದಿನಗಳೊಳಗಾಗಿ ಸದರಿ ಪರೀಕ್ಷೆಯ ಎಲ್ಲಾ ಪತ್ರಿಕೆಗಳ ಅಥವಾ ಯಾವುದೇ ಪತ್ರಿಕೆಯ ಅಂಕಗಳ ಮರು ಎಣಿಕೆಗಾಗಿ ಆಯೋಗಕ್ಕೆ ಅರ್ಜಿ ಸಲ್ಲಿಸಬಹುದು, ಅಂತಹ ಅರ್ಜಿ ಸಲ್ಲಿಸುವ ಪ್ರತಿಯೊಬ್ಬ ಅಭ್ಯರ್ಥಿಯು ಶೇವಣಿಯಾಗಿ ಪ್ರತಿ ಪತ್ರಿಕೆಗೆ 50-00 ರೂ.ಗಳನ್ನು ಕಾರ್ಯದರ್ಶಿ ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು ಇವರಿಗೆ ಸಂದಾಯವಾಗುವಂತೆ ಪಡೆದ ಡಿಡಿ ಮೂಲಕ ಸಂದಾಯ ಮಾಡತಕ್ಕದ್ದು ಮತ್ತು ಅಂತಹ ಮೊತ್ತವನ್ನು ಸಂದಾಯ ಮಾಡಿದ ಪುರಾವೆಯನ್ನು ತನ್ನ ಹೆಸರು, ನೋಂದಣಿ ಸಂಖ್ಯೆ ಮತ್ತು ಮರು ಎಣಿಕೆ ಮಾಡಬೇಕಾದ ವಿಷಯದ ವಿವರಗಳನ್ನು ಅರ್ಜಿಯೊಂದಿಗೆ ಒದಗಿಸತಕ್ಕದ್ದು.

ಬಿ) ಅಭ್ಯರ್ಥಿಯು ಪಡೆದ ಅಂಕಗಳ ಮರು ಎಣಿಕೆಯ ಸಂಬಂಧದಲ್ಲಿ ಆಯೋಗದ ನಿರ್ಣಯವೇ ಅಂತಿಮವಾಗಿರುತ್ತದೆ.

15. **ದುರ್ವರ್ತನೆ:** ಯಾವುದೇ ಒಬ್ಬ ಅಭ್ಯರ್ಥಿಯು ಸೇವಾ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಕೃತ್ರಿಮ ದಸ್ತಾವೇಜನ್ನು ಅಥವಾ ಅಕ್ರಮವಾಗಿ ತಿದ್ದಿದ ದಸ್ತಾವೇಜುಗಳನ್ನು ಸಲ್ಲಿಸಿದ ಅಥವಾ ಸರಿಯಲ್ಲದ ಅಥವಾ ಸುಳ್ಳು ವಿವರಣೆಯನ್ನು ನೀಡಿದ ಅಥವಾ ವಾಸ್ತವಿಕ ಮಾಹಿತಿಯನ್ನು ಮರೆಮಾಚಿದ ಅಥವಾ ಪರೀಕ್ಷೆಯಲ್ಲಿ ಅಕ್ರಮ ವಿಧಾನವನ್ನು ಅನುಸರಿಸಲು ಪ್ರಯತ್ನಿಸಿದ ಅಥವಾ ಬೇರೆ ರೀತಿಯಲ್ಲಿ ಇತರೆ ಯಾವುದೇ ಅಕ್ರಮ ಅನುಚಿತ ಮಾರ್ಗವನ್ನನುಸರಿಸಿದ ಅಪರಾಧವನ್ನು ಮಾಡಿರುವುದಾಗಿ

ಆಯೋಗಕ್ಕೆ ಕಂಡುಬಂದಲ್ಲಿ, ಅಂತಹ ಅಭ್ಯರ್ಥಿಯನ್ನು ಕ್ರಿಮಿನಲ್ ವ್ಯವಹರಣೆಗೆ ಗುರಿಪಡಿಸುವುದಲ್ಲದೆ (ಎ) ಅಭ್ಯರ್ಥಿಯ ಆಯ್ಕೆಗಾಗಿ ಆಯೋಗದಿಂದ ನಡೆಸಲಾಗುವ ಯಾವುದೇ ಪರೀಕ್ಷೆಗೆ ಪ್ರವೇಶ ನೀಡುವುದಕ್ಕೆ ಅಥವಾ ಯಾವುದೇ ಸಂದರ್ಶನಕ್ಕೆ ಹಾಜರಾಗುವುದಕ್ಕೆ ಖಾಯಂ ಆಗಿ ಅಥವಾ ಒಂದು ನಿರ್ದಿಷ್ಟ ಅವಧಿಗೆ ಅನರ್ಹಗೊಳಿಸಲಾಗುವುದು ಮತ್ತು (ಬಿ) ಶಿಸ್ತಿನ ಕ್ರಮಕ್ಕೆ ಒಳಪಡಿಸಲಾಗುವುದು.

ಪರೀಕ್ಷಾ ಕೇಂದ್ರದಲ್ಲಿ ಮೇಲ್ವಿಚಾರಕರು ನೀಡುವ ಸೂಚನೆಗಳನ್ನು ತಪ್ಪದೇ ಪಾಲಿಸದಿದ್ದಲ್ಲಿ, ಅದನ್ನು ದುರ್ವರ್ತನೆಯನ್ನಾಗಿ ಪರಿಗಣಿಸಲಾಗುವುದು ಮತ್ತು ಆ ಕುರಿತು ಶಿಸ್ತಿನ ಕಾರ್ಯವಿಧಾನಗಳಿಗೆ ಒಳಪಡಿಸಲಾಗುವುದು.

16. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 76, ದಿನಾಂಕ 10ನೇ ಜನವರಿ 1987ರ ಅನುಸಾರವಾಗಿ ಸರ್ಕಾರಿ ಆದೇಶ ಸಂಖ್ಯೆ 649 ಇಎನ್ ಟಿ 57, ದಿನಾಂಕ 23ನೇ/25ನೇ ಫೆಬ್ರವರಿ 1959ರ ಅನುಸಾರವಾಗಿ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಿಂದ ನಡೆಸಲಾದ ಅರಣ್ಯ ಇಲಾಖಾ ಪರೀಕ್ಷೆಯಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳಿಗೆ ಅರಣ್ಯ ಪರೀಕ್ಷೆಯ ಪತ್ರಿಕೆ–2 ರಲ್ಲಿ ತೇರ್ಗಡೆಯಾಗುವುದರಿಂದ ವಿನಾಯಿತಿ ನೀಡಲಾಗಿದೆ.

17. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 69 ಎಸ್‌ಎಸ್‌ಆರ್ 76, ದಿನಾಂಕ 16ನೇ ಜುಲೈ 1977ರ ಅನುಸಾರವಾಗಿ ನವದೆಹಲಿಯ ಕರ್ನಾಟಕ ಭವನದಲ್ಲಿ ಕೆಲಸ ಮಾಡುತ್ತಿರುವ ಕರ್ನಾಟಕ ರಾಜ್ಯ ಸರ್ಕಾರಿ ನೌಕರರಿಗೆ ಇಲಾಖಾ ಪರೀಕ್ಷೆಗಳನ್ನು ಆಯೋಗದಿಂದ ಉಪನಿವಾಸ ಆಯುಕ್ತರು, ಕರ್ನಾಟಕ ಭವನದ ನಿವಾಸ ಆಯುಕ್ತರ ಕಛೇರಿ, ನವದೆಹಲಿ ಇವರ ನಿಯಂತ್ರಣದಲ್ಲಿ ನಡೆಸಲಾಗುವುದು.

18. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 3 ಎಸ್‌ಎಸ್‌ಸಿ 83, ದಿನಾಂಕ 12ನೇ ಅಕ್ಟೋಬರ್ 1983 ಇದರ ಅನುಸಾರವಾಗಿ ಮುಸ್ಸೂರಿಯಲ್ಲಿ ತರಬೇತಿ ಪಡೆಯುತ್ತಿರುವ ಕರ್ನಾಟಕ ರಾಜ್ಯದ ಐ.ಎ.ಎಸ್, ಐ.ಪಿ.ಎಸ್, ಮತ್ತು ಐ.ಎಫ್.ಎಸ್ ಪ್ರೊಬೇಷನರುಗಳಿಗೆ ಇಲಾಖಾ ಪರೀಕ್ಷೆ ಗಳನ್ನು **ಆಯೋಗವು** ಪರೀಕ್ಷೆಗಳ ನಿಯಂತ್ರಣಾಧಿಕಾರಿ, ಲಾಲ್‌ಬಹದ್ದೂರ್ ಶಾಸ್ತ್ರಿ ರಾಷ್ಟ್ರೀಯ ಪ್ರಶಾಸನ ಅಕಾಡೆಮಿ, ಮುಸ್ಸೂರಿ, ಇವರ ನಿಯಂತ್ರಣದಲ್ಲಿ ನಡೆಸಲಾಗುವುದು.

19. ಸರ್ಕಾರಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 19 ಎಸ್‌ಎಸ್‌ಸಿ 75, ದಿನಾಂಕ 5ನೇ ಜುಲೈ 1978ರ ಅನುಸಾರವಾಗಿ ಅಂಧರಾಗಿರುವ ಅಥವಾ ತನ್ನ ಸ್ವಂತ ಕೈಯಿಂದ ಬರೆಯಲು ಅಸಮರ್ಥರಾದ ಅಭ್ಯರ್ಥಿಗಳಿಗೆ **ಈ ಮುಂದಿನ ಷರತ್ತುಗಳಿಗೊಳಪಟ್ಟು ಒಬ್ಬ ಅನುಲೇಖಕನ ಸಹಾಯವನ್ನು ಪಡೆಯುವುದಕ್ಕೆ ಅನುಮತಿಸಲಾಗಿದೆ:**

1. ಅನುಲೇಖಕನ ಸಹಾಯವನ್ನು ಬಯಸುವ ಅಭ್ಯರ್ಥಿಯು ಅವನು ಅರ್ಜಿಯನ್ನು ಸರ್ಕಾರಿ **ಆಸ್ಪತ್ರೆಯ** ವೈದ್ಯರಿಂದ ನೀಡಲಾದ ಒಂದು ಪ್ರಮಾಣ ಪತ್ರದೊಂದಿಗೆ ಅವನ ಮೇಲಧಿಕಾರಿಯ ಮೂಲಕ ಕಳುಹಿಸತಕ್ಕದ್ದು.
2. ಮೇಲಧಿಕಾರಿಯು ಅರ್ಜಿಯನ್ನು ಆಯೋಗಕ್ಕೆ ಕಳುಹಿಸುವ ಮೊದಲು ಅಭ್ಯರ್ಥಿಯು ನಿಜವಾಗಿ ಅಸಮರ್ಥನಾಗಿರುವನೆ ಮತ್ತು ಅವನಿಗೆ ಅನುಲೇಖಕನ ಸಹಾಯ ಅವಶ್ಯವಾಗಿದೆಯೇ ಎಂಬುದನ್ನು ಖಚಿತಪಡಿಸಿಕೊಳ್ಳತಕ್ಕದ್ದು.
3. ಒಬ್ಬ ಅನುಲೇಖಕನ ಸಹಾಯಕ್ಕೆ ಮಂಜೂರಾತಿ ನೀಡಿದಾಗ ಸಂಬಂಧಪಟ್ಟ ಕೇಂದ್ರದ ಮೇಲ್ವಿಚಾರಕರು ಅಭ್ಯರ್ಥಿಗೆ ಒಬ್ಬ ಅನುಲೇಖಕನನ್ನು ನೇಮಕ ಮಾಡತಕ್ಕದ್ದು ಮತ್ತು ಅದನ್ನು ಕಾರ್ಯದರ್ಶಿ ಮತ್ತು ಇಲಾಖಾ ಪರೀಕ್ಷೆಯ ನಿಯಂತ್ರಣಾಧಿಕಾರಿಗೆ ತಿಳಿಸತಕ್ಕದ್ದು.
4. ಹಾಗೆ ನೇಮಕ ಮಾಡಲಾದ ಅನುಲೇಖಕನು ಅಭ್ಯರ್ಥಿಗಿಂತ ಕೆಳಗಿನ ದರ್ಜೆಯವನು ಅಥವಾ ಕಡಿಮೆ ಶಿಕ್ಷಣ ಪಡೆದವನು ಆಗಿರತಕ್ಕದ್ದು ಮತ್ತು ಅವನು ಅಭ್ಯರ್ಥಿಯ ಸಂಬಂಧಿಕನಾಗಿರಬಾರದು.
5. ಅಭ್ಯರ್ಥಿಗಳು ಪರೀಕ್ಷೆಯ ಪ್ರತಿಯೊಂದು ಪತ್ರಿಕೆಗೆ **ರೂ.** 5/–(ಐದು ರೂಪಾಯಿಗಳು) ಮೊತ್ತವನ್ನು ಮುಂಗಡವಾಗಿ ಸಂದಾಯ ಮಾಡತಕ್ಕದ್ದು ಮತ್ತು ಸದರಿ ಮೊತ್ತವನ್ನು ಪರೀಕ್ಷೆಯ ಪತ್ರಿಕೆ ಮುಗಿದ ಕೂಡಲೇ ಅನುಲೇಖಕನಿಗೆ ಸಂದಾಯ ಮಾಡತಕ್ಕದ್ದು.
6. ಒಬ್ಬ ಅನುಲೇಖಕನನ್ನು ನೇಮಕ ಮಾಡಲಾಗಿದ್ದರೆ ಅಭ್ಯರ್ಥಿಗೆ ಹದಿನೈದು ನಿಮಿಷಗಳ ಹೆಚ್ಚಿನ ಕಾಲಾವಕಾಶವನ್ನು ನೀಡಲಾಗುವುದು.
7. ಅನುಲೇಖಕನ ಸಹಾಯ ಬಯಸುವ ಅಭ್ಯರ್ಥಿಗಳು ಅವಶ್ಯಕ ವೈದ್ಯಕೀಯ ಪ್ರಮಾಣ ಪತ್ರ ಮತ್ತು ಮೇಲಧಿಕಾರಿಗಳ ದೃಢೀಕರಣವನ್ನು ತಮ್ಮ ಅರ್ಜಿಯ ಜೊತೆಯಲ್ಲಿಯೇ ಲಗತ್ತಿಸಿ ಕಳುಹಿಸತಕ್ಕದ್ದು. ಅರ್ಜಿಯೊಂದಿಗೆ ಸಲ್ಲಿಸದಂತಹ ಕೋರಿಕೆಯನ್ನು ಅನಿವಾರ್ಯ ಹಾಗೂ ಸಕಾರಣವಿಲ್ಲದ ಹೊರತು ಇತರ ಯಾವುದೇ ಸಂದರ್ಭಗಳಲ್ಲೂ ನಿಗದಿಪಡಿಸಲಾದ ಕಡೆಯ ದಿನಾಂಕದ ನಂತರ ಪರಿಗಣಿಸಲಾಗುವುದಿಲ್ಲ.
8. ಅಭ್ಯರ್ಥಿಗಳು ಅನುಲೇಖಕನ ಸಹಾಯ ಕೋರಿ ಸಲ್ಲಿಸುವ ವೈದ್ಯಕೀಯ ಪ್ರಮಾಣ ಪತ್ರವನ್ನು ಅನುಮಾನಾಸ್ಪದ ಸಂದರ್ಭದಲ್ಲಿ ಮಾತ್ರ ವೈದ್ಯಕೀಯ ಮಂಡಳಿಗೆ ಪರಿಶೀಲನೆಗಾಗಿ ಕಳುಹಿಸಲಾಗುವುದು.

ಹಾಗೂ ಕೆಲವೊಂದು ಸಂದರ್ಭಗಳಲ್ಲಿ ಅವಶ್ಯಕವೆನಿಸಿದರೆ ಅಂತಹವರನ್ನು ವೈದ್ಯಕೀಯ ಪರಿಶೀಲನೆಗೂ ಗುರಿಪಡಿಸಲಾಗುವುದು. ಸುಳ್ಳು ಪ್ರಮಾಣ ಪತ್ರ ಹಾಜರುಪಡಿಸಿದ್ದು ಅದು ಸಾಬೀತಾದ ಸಂದರ್ಭಗಳಲ್ಲಿ ಅಂತಹ ಅಭ್ಯರ್ಥಿಗಳ ಮೇಲೆ ನಿಯಮಾನುಸಾರ ಶಿಸ್ತಿನ ಕ್ರಮ ಜರುಗಿಸಲಾಗುವುದಲ್ಲದೆ ಅಂತಹವರ ಇಲಾಖಾ ಪರೀಕ್ಷೆಯ ಅಭ್ಯರ್ಥಿತ್ವವನ್ನು ರದ್ದುಪಡಿಸಲಾಗುವುದು.

20. ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 24 ಎಸ್‌ಎಸ್‌ಆರ್ 2006 ದಿನಾಂಕ:15–11–2006ರಲ್ಲಿ "ಸೆಕ್ರೆಟೇರಿಯಟ್ ಮ್ಯಾನ್ಯುಯಲ್ ಭಾಗ–I ಮತ್ತು ಭಾಗ– II " ವಿಷಯದ ಪತ್ರ ಕ್ರಮಕ್ಕೆ ಮಾಡಲಾದ ತಿದ್ದುಪಡಿ ಈ ಕೆಳಕಂಡಂತಿದೆ:–

PAPER – 1

MARKS: 100

TIME: 2 HOURS

(1) In the heading `` Secretariat Manual Examination Part-I``, at serial number 32,

(a) for the entries under the sub-heading ``Paper-1``, the following shall be substituted namely:-

"Karnataka Government Secretariat Manual of Office Procedure (Revised) 2005 and connected orders."

PAPER –II

MARKS: 100

TIME: 2 HOURS

(b) in the entries under the sub-heading "Paper-II", for item 4 and 5 and entries relating thereto, the following shall be substituted, namely:-

"(4) Karnataka Civil Services (General Recruitment) Rules, 1977;)

(5) Karnataka Public Service Commission (Consultation) Regulations, 2000"

SECRETARIAT MANUAL PART-II

MARKS: 100

TIME: 2 HOURS

(2) under the heading 'Secretariat Manual Examination Part-II", for item (ii) and the entries relating thereto, the following items shall be substituted, namely:-

"(ii) The Karnataka Government (Transaction of Business) Rules, 1977

(iii) The Karnataka Government (Allocation of Business) Rules, 1977"

21. ಸರ್ಕಾರಿ ಅಧಿಸೂಚನೆ ಸಂಖ್ಯೆ:ಡಿಪಿಎಆರ್ 35 ಎಸ್‌ಎಸ್‌ಆರ್ 2004 ದಿನಾಂಕ: 28–08–2006 ರ ಆದೇಶದಲ್ಲಿ "ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ (ಹೈಯರ್) ಎಕ್ಸಾಮಿನೇಷನ್ ಭಾಗ– I " ಕೆಳಕಂಡ ಪತ್ರ ಕ್ರಮವನ್ನು ಬದಲಾಯಿಸಿದೆ.

ELECTRICITY (AUDIT AND ACCOUNTS) LAWS (HIGHER) EXAMINATION

PART-I

MARKS: 100

TIME: 2 HOURS

(1) In the sub-heading "Electricity Laws Examination Paper-1",at Sl.No.50,-

(a) for item (1) and the entries relating thereto, the following shall be substituted, namely:-

(b) for item (3)and the entries relating thereto, the following shall be substituted, nmely:-

"(3) The Karnataka Electricity Reforms Act, 1999 and the rules framed thereunder".

(2) In the entries under the sub-heading "Electricity (Audit and Accounts) Laws (Higher) Examination, Part I" at Sl.No. 51,for item (1) and the entries relating thereto, the following shall be subtituted, namely:-

"(1) The Electricity Act, 2003 (Central Act 36 of 2003) and the rules made thereunder".

ಪ್ರಶ್ನೆ ಪತ್ರಿಕೆಯು 2 ಗಂಟೆಗಳ ಅವಧಿಯಾಗಿದ್ದು 100 ಅಂಕಗಳನ್ನು ಒಳಗೊಂಡಿರುತ್ತದೆ.

ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಪ್ರೊಬೇಷನರ್ಸ್‌ಗಳಿಗೆ/ಅಧಿಕಾರಿಗಳಿಗೆ ಕನ್ನಡಭಾಷಾ ವಿಷಯದ ಇಲಾಖಾ ಪರೀಕ್ಷೆ ಅಭ್ಯರ್ಥಿಗಳಿಗೆ ಸರ್ಕಾರವು ತನ್ನ ಆದೇಶ ಸಂಖ್ಯೆ:ಡಿಪಿಎಆರ್ 168 ಎಸ್‌ಎಂಇ 94, ದಿನಾಂಕ: 12-07-1995ರಲ್ಲಿ ನಿಗದಿಪಡಿಸಲಾಗಿದ್ದ ಕನ್ನಡ ಪತ್ರಿಕೆ-1ರಲ್ಲಿ 10ನೇ ತರಗತಿಯ ಪಠ್ಯಪುಸ್ತಕ "ಸಾಹಿತ್ಯ ಮಂಜರಿ-3" ಪುಸ್ತಕದ ಬದಲಾಗಿ 10ನೇ ತರಗತಿಯ ಕನ್ನಡ ದ್ವಿತೀಯ ಹಾಗೂ ತೃತೀಯ ಭಾಷಾಪುಸ್ತಕ " ತಿಳಿಗನ್ನಡ-6" ಎಂಬ ಪುಸ್ತಕವನ್ನು ನಿಗದಿ ಪಡಿಸಲಾಗಿದೆ.

23. ಅರ್ಜಿಗಳನ್ನು "ಕಾರ್ಯದರ್ಶಿ ಮತ್ತು ನಿಯಂತ್ರಕರು, ಇಲಾಖಾ ಪರೀಕ್ಷೆಗಳು, ಕರ್ನಾಟಕಲೋಕ ಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-560001," ಇವರಿಗೆ ದಿನಾಂಕ **11-12-2009** ರಂದು ಸಾಯಂಕಾಲ 5-00 ಗಂಟೆಯೊಳಗೆ ತಲುಪಿಸತಕ್ಕದ್ದು. ಕಡೇ ದಿನಾಂಕದ ತರುವಾಯ ಸ್ವೀಕರಿಸಲಾದ ಅರ್ಜಿಗಳನ್ನು ತಿರಸ್ಕರಿಸಲಾಗುವುದು. ಮೇಲಧಿಕಾರಿಯ ಮೂಲಕ ಅಥವಾ ಅಂಚೆಯಲ್ಲಿ ಅರ್ಜಿಗಳನ್ನು ರವಾನಿಸುವಾಗ ಅದು ಯಾವುದೇ ಕಾರಣದಿಂದ ವಿಳಂಬವಾಗಿ ಅಂದರೆ ನಿಗದಿ ಪಡಿಸಲಾದ ಕೊನೆಯ ದಿನಾಂಕದ ನಂತರ ಆಯೋಗಕ್ಕೆ ತಲುಪಿದಲ್ಲಿ ಅಂತಹ ವಿಳಂಬ ಅರ್ಜಿಗಳನ್ನು ಪುರಸ್ಕರಿಸುವುದಕ್ಕೆ ಸಮಂಜಸವಾದ ಕಾರಣಗಳಿಲ್ಲದಲ್ಲಿ ಪರಿಗಣಿಸಲಾಗುವುದಿಲ್ಲ.

24. ಮೇಲಿನ ಅಧಿಸೂಚನೆಗೆ ಅನುಗುಣವಾಗಿಲ್ಲದ, ನಿಗದಿತ ಸ್ಥಳದಲ್ಲಿ ಮತ್ತು ಹಾಜರಾತಿ ಹಾಳೆಯಲ್ಲಿ ಅಭ್ಯರ್ಥಿಯ ಸಹಿ ಇಲ್ಲದಂತಹ, ಸಂಬಂಧಿತ ಮೇಲಧಿಕಾರಿಗಳಿಂದ ಅಭ್ಯರ್ಥಿಯ ಭಾವಚಿತ್ರಗಳನ್ನು ದೃಢೀಕರಿಸದಂತಹ ಹಾಗೂ ಮೇಲಧಿಕಾರಿಯ ಸಹಿ ಹಾಗೂ ಮೊಹರುಗಳನ್ನೊಳಗೊಂಡಿಲ್ಲದಂತಹ ಅರ್ಜಿಗಳನ್ನು ಯಾವುದೇ ಸೂಚನೆ ನೀಡದೆ ತಿರಸ್ಕರಿಸಲಾಗುವುದು.

25. ನಕಲು ಪ್ರಮಾಣಪತ್ರ ಪಡೆಯ ಬಯಸುವ ಅಭ್ಯರ್ಥಿಗಳು ತಮ್ಮ ಅರ್ಜಿಯೊಂದಿಗೆ ಪ್ರಮಾಣಪತ್ರವು ಲಭ್ಯವಿಲ್ಲದ ಬಗ್ಗೆ ನೋಟರಿಯವರ ಮುಂದೆ ಪ್ರಮಾಣಮಾಡಿರುವ "ಅಫಿಡವಿಟ್" ಹಾಗೂ ಎಸ್.ಎಸ್.ಎಲ್.ಸಿ ಅಂಕಪಟ್ಟಿ (ಹುಟ್ಟಿದ ದಿನಾಂಕ, ತಂದೆಯ ಹೆಸರು ಒಳಗೊಂಡಂತೆ) ಅಥವಾ ಸೇವಾ ಪುಸ್ತಕದ ಭಾಗ-1ರ ಉದ್ಧೃತಭಾಗವನ್ನು ದೃಢೀಕರಿಸಿ ಲಗತ್ತಿಸಬೇಕು ಹಾಗೂ ಯಾವುದೇ ಅವಧಿಯ ಇಲಾಖೆ ಪರೀಕ್ಷೆಯ ಪ್ರತಿಯೊಂದು ವಿಷಯದ ಪ್ರತ್ಯೇಕ ಪ್ರಮಾಣಪತ್ರಕ್ಕೆ 50-00ರೂ. ಗಳ ಶುಲ್ಕವನ್ನು, ಕಾರ್ಯದರ್ಶಿ, ಕರ್ನಾಟಕ ಲೋಕ ಸೇವಾ ಆಯೋಗ, ಬೆಂಗಳೂರು ಇವರಿಗೆ ಸಂದಾಯವಾಗುವಂತೆ ಪಡೆದ **ಬ್ಯಾಂಕ್ ಡಿ.ಡಿ. ಸಲ್ಲಿಸತಕ್ಕದ್ದು.**

ಅಭ್ಯರ್ಥಿಗಳಿಗೆ ವಿಶೇಷ ಸೂಚನೆಗಳು:-

1. ಸೇವಾ ಪರೀಕ್ಷೆಗಳಿಗೆ ಸಂಬಂಧಪಟ್ಟ ಎಲ್ಲಾ ಪತ್ರ ವ್ಯವಹಾರವನ್ನು ಕಾರ್ಯದರ್ಶಿ ಹಾಗೂ ನಿಯಂತ್ರಕರು, ಇಲಾಖಾ ಪರೀಕ್ಷೆಗಳು ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು-560001 ಈ ವಿಳಾಸಕ್ಕೆ ಮಾಡತಕ್ಕದ್ದು.
2. ಪರೀಕ್ಷೆಗಳ ಸಂಬಂಧದಲ್ಲಿ ಯಾವುದೇ ಮಾಹಿತಿ ಕೋರುವ ಅಭ್ಯರ್ಥಿಗಳು ಮನವಿಯಲ್ಲಿ ಎಲ್ಲಾ ಮಾಹಿತಿ ನೀಡಿ ಅದರೊಂದಿಗೆ ಸಾಕಷ್ಟು ಅಂಚೆ ಚೀಟಿಗಳನ್ನು ಹಚ್ಚಿದ ಸ್ವವಿಳಾಸ ಬರೆದ ಒಂದು ಲಕೋಟೆಯನ್ನು ಲಗತ್ತಿಸಿದರೆ ಆಯೋಗದ ಉತ್ತರವು ಅಡಚಣೆ ಆಗದೇ ಬೇಗ ತಲುಪುವುದು.
3. ಮಾಹಿತಿಗಾಗಿ ಅಭ್ಯರ್ಥಿಗಳು ಆಯೋಗಕ್ಕೆ ಸಲ್ಲಿಸುವ ಮನವಿಗಳಲ್ಲಿ ನೋಂದಣಿ ಸಂಖ್ಯೆ, ಅಧಿವೇಶನ, ವಿಷಯ ಮತ್ತು ಪರೀಕ್ಷಾಕೇಂದ್ರ ಮುಂತಾದ ಸ್ಪಷ್ಟ ವಿವರಗಳನ್ನು ಸೂಚಿಸದಿದ್ದಲ್ಲಿ ಅಂತಹವುಗಳನ್ನು ಪುರಸ್ಕರಿಸಲಾಗುವುದಿಲ್ಲ.
4. ಅಭ್ಯರ್ಥಿಗಳು ಪೋಲೀಸ್ ಸಮವಸ್ತ್ರವನ್ನು ಧರಿಸಿ ಪರೀಕ್ಷೆ ಬರೆಯುವುದನ್ನು ನಿಷೇಧಿಸಲಾಗಿದೆ.
5. ಅಭ್ಯರ್ಥಿಗಳು ತಮ್ಮ ಸಹ ನೌಕರರನ್ನು/ಇತರರನ್ನು ಕರೆತರುವುದನ್ನು ಮತ್ತು ಪರೀಕ್ಷೆ ನಡೆಯುತ್ತಿರುವಾಗ ಅವರನ್ನು ಭೇಟಿ ಮಾಡಲು ಕೋರುವುದನ್ನು ನಿಷೇಧಿಸಲಾಗಿದೆ.

ವಿ.ಬಿ. ಪಾಟೀಲ್

ಕಾರ್ಯದರ್ಶಿ ಹಾಗೂ ನಿಯಂತ್ರಕರು,

ಇಲಾಖಾ ಪರೀಕ್ಷೆಗಳು,

ಕರ್ನಾಟಕ ಲೋಕಸೇವಾ ಆಯೋಗ.

ಕರ್ನಾಟಕ ಲೋಕಸೇವಾ ಆಯೋಗ," ಉದ್ಯೋಗ ಸೌಧ", ಬೆಂಗಳೂರು-560001.

ಅಧಿಸೂಚನೆ ಸಂಖ್ಯೆ ಇ.ಪ.(1)2235/2009-2010/ಪಿಎಸ್‌ಸಿ ದಿನಾಂಕ:11-11-2009ಕ್ಕೆ

ಅನುಬಂಧ " ಎ "

2009ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳು

ಎಲ್ಲಾ ಜಿಲ್ಲಾ ಕೇಂದ್ರಗಳಲ್ಲಿ ನಡೆಯಲಿರುವ ಪರೀಕ್ಷೆಗಳ ವೇಳಾಪಟ್ಟಿ

ಕ್ರ ಸಂ.	ವಾರ	ದಿನಾಂಕ	ವೇಳೆ	ವಿಷಯ
1.	ಶುಕ್ರವಾರ	22-01-2010	ಬೆಳಿಗ್ಗೆ 10.00 ರಿಂದ 12-00 ಗಂಟೆ	ಅಕೌಂಟ್ಸ್ ಲೋಯರ್
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಜನರಲ್ ಲಾ ಭಾಗ-2
2	ಶನಿವಾರ	23-01-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಜನರಲ್ ಲಾ ಭಾಗ-1 ಪತ್ರಿಕೆ-1
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಜನರಲ್ ಲಾ ಭಾಗ-1 ಪತ್ರಿಕೆ-2
3.	ಭಾನುವಾರ	24-01-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಅಕೌಂಟ್ಸ್ ಹೈಯರ್ ಪತ್ರಿಕೆ-1
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಅಕೌಂಟ್ಸ್ ಹೈಯರ್ ಪತ್ರಿಕೆ-2
4.	ಸೋಮವಾರ	25-01-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಕನ್ನಡ ಪತ್ರಿಕೆ-1 (ಪುಸ್ತಕಗಳಿಲ್ಲದೆ)
			ಮಧ್ಯಾಹ್ನ 2.00 ರಿಂದ ಸಂಜೆ 3.00 ಗಂಟೆ	ಕನ್ನಡ ಪತ್ರಿಕೆ-2 (ಪುಸ್ತಕಗಳಿಲ್ಲದೆ)
5.	ಬುಧವಾರ	27-01-2010	ಬೆಳಿಗ್ಗೆ 10.00 ರಿಂದ 1.00 ಗಂಟೆ	ಇನ್ಶೂರೆನ್ಸ್ ಹೈಯರ್ ಪತ್ರಿಕೆ-2 (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-1 ಪತ್ರಿಕೆ-1, (ಪುಸ್ತಕಗಳಿಲ್ಲದೆ)
			ಮಧ್ಯಾಹ್ನ 2.00 ರಿಂದ ಸಂಜೆ 5.00 ಗಂಟೆ	ಇನ್ಶೂರೆನ್ಸ್ ಲೋಯರ್ ಪತ್ರಿಕೆ-2 {ಪುಸ್ತಕಗಳಿಲ್ಲದೆ}
			ಮೇಲಿನಂತೆ	ಪ್ರೆಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ-2,
6	ಗುರುವಾರ	28-01-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಲೇಬರ್ ಪತ್ರಿಕೆ-1
			ಮೇಲಿನಂತೆ	ಪ್ರಿಸನ್ಸ್
			ಮೇಲಿನಂತೆ	ಎಕ್ಸೈಸ್
			ಮೇಲಿನಂತೆ	ಮೋಟಾರ್ ವೆಹಿಕಲ್ಸ್
			ಮೇಲಿನಂತೆ	ರೆವಿನ್ಯೂ ಹೈಯರ್ ಭಾಗ-1 ಪತ್ರಿಕೆ-1
			ಮೇಲಿನಂತೆ	ಇನ್ಶೂರೆನ್ಸ್ ಅಡ್ವಾನ್ಸ್‌ಡ್ ಪತ್ರಿಕೆ-1
			ಮಧ್ಯಾಹ್ನ 2.00 ರಿಂದ ಸಂಜೆ 4.00ಗಂಟೆ	ಲೇಬರ್ ಪತ್ರಿಕೆ-2
			ಮೇಲಿನಂತೆ	ಇನ್ಶೂರೆನ್ಸ್ ಅಡ್ವಾನ್ಸ್‌ಡ್ ಪತ್ರಿಕೆ-2
			ಮೇಲಿನಂತೆ	ರೆವಿನ್ಯೂ ಹೈಯರ್ ಭಾಗ-1 ಪತ್ರಿಕೆ-2
7.	ಶುಕ್ರವಾರ	29-01-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ರೆವಿನ್ಯೂ ಹೈಯರ್ ಭಾಗ-2 ಪತ್ರಿಕೆ-1
			ಮೇಲಿನಂತೆ	ರಿಜಿಸ್ಟ್ರೇಷನ್ ಪತ್ರಿಕೆ-1
			ಮೇಲಿನಂತೆ	ಕಮರ್ಷಿಯಲ್‌ಟ್ಯಾಕ್ಸ್ ಭಾಗ-1 ಪತ್ರಿಕೆ-1
			ಮೇಲಿನಂತೆ	ಇನ್ಶೂರೆನ್ಸ್ ಅಡ್ವಾನ್ಸ್‌ಡ್ ಪತ್ರಿಕೆ-3
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ರೆವಿನ್ಯೂ ಹೈಯರ್ ಭಾಗ-2 ಪತ್ರಿಕೆ-2
			ಮೇಲಿನಂತೆ	ರಿಜಿಸ್ಟ್ರೇಷನ್ ಪತ್ರಿಕೆ-2
			ಮೇಲಿನಂತೆ	ಕಮರ್ಷಿಯಲ್‌ಟ್ಯಾಕ್ಸ್ ಭಾಗ-1, ಪತ್ರಿಕೆ-2
			ಮೇಲಿನಂತೆ	ಇನ್ಶೂರೆನ್ಸ್ ಹೈಯರ್ ಪತ್ರಿಕೆ-1
8.	ಶನಿವಾರ	30-01-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಪೊಲೀಸ್ ಮ್ಯಾನ್ಯುಯಲ್
			ಮೇಲಿನಂತೆ	ಕೋ-ಆಪರೇಷನ್ ಪತ್ರಿಕೆ-1
			ಮೇಲಿನಂತೆ	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಹೈಯರ್
			ಮೇಲಿನಂತೆ	ಮಾರ್ಕೆಟಿಂಗ್ ಪತ್ರಿಕೆ-1
			ಮೇಲಿನಂತೆ	ಮೈನಿಂಗ್ ಭಾಗ-1
			ಮೇಲಿನಂತೆ	ರೆವಿನ್ಯೂ ಲೋಯರ್ ಪತ್ರಿಕೆ-1
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಕಮರ್ಷಿಯಲ್ ಟ್ಯಾಕ್ಸ್ ಭಾಗ-1 ಪತ್ರಿಕೆ-3 ಮತ್ತು ಕೋ-ಆಪರೇಷನ್ ಪತ್ರಿಕೆ-2 (ಎರಡಕ್ಕೂ ಒಂದೇ [illegible] ಪತ್ರಿಕೆ)
			ಮೇಲಿನಂತೆ	ಇನ್ಶೂರೆನ್ಸ್ ಹೈಯರ್ ಪತ್ರಿಕೆ-3
			ಮೇಲಿನಂತೆ	ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಪ್ರೊಸೀಜರ್ ಲೋಯರ್
			ಮೇಲಿನಂತೆ	ಮಾರ್ಕೆಟಿಂಗ್ ಪತ್ರಿಕೆ-2
			ಮೇಲಿನಂತೆ	ಮೈನಿಂಗ್ ಭಾಗ-2
			ಮೇಲಿನಂತೆ	ರೆವಿನ್ಯೂ ಲೋಯರ್ ಪತ್ರಿಕೆ-2

ಕ್ರ ಸಂ.	ವಾರ	ದಿನಾಂಕ	ವೇಳೆ	ವಿಷಯ
9.	ಭಾನುವಾರ	31-01-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಸಿರಿಕಲ್ಚರ್ ಪತ್ರಿಕೆ-1
			ಮೇಲಿನಂತೆ	ಕಮ್ಯೂನಿಟಿ ಡೆವಲಪ್‌ಮೆಂಟ್ ಭಾಗ-1
			ಮೇಲಿನಂತೆ	ರೆವಿನ್ಯೂ ಲೋಯರ್ ಪತ್ರಿಕೆ-3
			ಮೇಲಿನಂತೆ	ಕಮರ್ಷಿಯಲ್ ಟ್ಯಾಕ್ಸ್ ಭಾಗ-2 ಪತ್ರಿಕೆ-1
			ಮೇಲಿನಂತೆ	ಪ್ರೆಸ್ ಮ್ಯಾನ್ಯುಯಲ್ ಹೈಯರ್ ಪತ್ರಿಕೆ-1
			ಮೇಲಿನಂತೆ	ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ ಪತ್ರಿಕೆ-1
			ಮೇಲಿನಂತೆ	ಪೋರ್ಟ್ಸ್ ಹೈಯರ್
			ಮೇಲಿನಂತೆ	ಇನ್ಶೂರೆನ್ಸ್ ಲೋಯರ್ ಪತ್ರಿಕೆ-1
			ಮೇಲಿನಂತೆ	ಯೂಥ್ ಸರ್ವೀಸಸ್ ಮ್ಯಾನ್ಯುಯಲ್
			ಮಧ್ಯಾಹ್ನ 2.00ರ ರಿಂದ ಸಂಜೆ 4.00 ಗಂಟೆ	ಸಿರಿಕಲ್ಚರ್ ಪತ್ರಿಕೆ-2
			ಮೇಲಿನಂತೆ	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-1, ಪತ್ರಿಕೆ-2
			ಮೇಲಿನಂತೆ	ಲೋಕಲ್ ಲಾಸ್ ಅಂಡ್ ಕಮರ್ಷಿಯಲ್ ಬುಕ್ ಕೀಪಿಂಗ್ ಪತ್ರಿಕೆ-2
			ಮೇಲಿನಂತೆ	ಕಮ್ಯುನಿಟಿ ಡೆವಲಪ್‌ಮೆಂಟ್ ಭಾಗ-2
			ಮೇಲಿನಂತೆ	ಕಮರ್ಷಿಯಲ್ ಟ್ಯಾಕ್ಸ್ ಭಾಗ-2 ಪತ್ರಿಕೆ-2
			ಮೇಲಿನಂತೆ	ಪೋರ್ಟ್ಸ್ ಲೋಯರ್
10	ಸೋಮವಾರ	01-02-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್‌ಲಾಸ್ ಪತ್ರಿಕೆ-1
			ಮೇಲಿನಂತೆ	ಇನ್ಶೂರೆನ್ಸ್ ಲೋಯರ್ ಪತ್ರಿಕೆ-3
			ಮೇಲಿನಂತೆ	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-2 ಪತ್ರಿಕೆ-1
			ಮೇಲಿನಂತೆ	ಪ್ರೆಸ್ ಮ್ಯಾನ್ಯುಯಲ್ ಲೋಯರ್ ಪತ್ರಿಕೆ-1
			ಮೇಲಿನಂತೆ	ಆಕ್ಟ್ಸ್ ಅಂಡ್ ರೂಲ್ಸ್ ರಿಲೇಟಿಂಗ್ ಟು ವಿಮೆನ್ ಅಂಡ್ ಚೈಲ್ಡ್ ಡೆವೆಲಪ್‌ಮೆಂಟ್
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಫ್ಯಾಕ್ಟರೀಸ್ ಅಂಡ್ ಬಾಯ್ಲರ್ಸ್‌ಲಾಸ್ ಪತ್ರಿಕೆ-2
			ಮೇಲಿನಂತೆ	ಪಿ.ಡಬ್ಲ್ಯೂ.ಡಿ ಹೈಯರ್ ಭಾಗ-2, ಪತ್ರಿಕೆ-2
			ಮೇಲಿನಂತೆ	ಪ್ರೆಸ್‌ಮ್ಯಾನ್ಯುಯಲ್ ಲೋಯರ್ ಪತ್ರಿಕೆ-2
			ಮೇಲಿನಂತೆ	ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಶನ್ ಪತ್ರಿಕೆ-1
11	ಮಂಗಳವಾರ	02-02-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಪಿ.ಡಬ್ಲ್ಯೂ.ಡಿ. ಲೋಯರ್ ಪತ್ರಿಕೆ-1
			ಮೇಲಿನಂತೆ	ಸೋಶಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್ ವರ್ಡ್‌ಕ್ಲಾಸಸ್ ಮ್ಯಾನ್ಯುಯಲ್ ಅಂಡ್ ಕ್ಲಾಸಿಫಿಕೇಶನ್ ರಿಜರ್‌ವೇಶನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಭಾಗ-1
			ಮೇಲಿನಂತೆ	ಫಾರೆಸ್ಟ್ ಪತ್ರಿಕೆ-1
			ಮೇಲಿನಂತೆ	ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಶನ್ ಪತ್ರಿಕೆ-2
			ಮೇಲಿನಂತೆ	ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪತ್ರಿಕೆ-1
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಹೋಂ ಗಾರ್ಡ್ಸ್ ಮ್ಯಾನ್ಯುಯಲ್
			ಮೇಲಿನಂತೆ	ಸೋಶಿಯಲ್ ವೆಲ್‌ಫೇರ್ ಅಂಡ್ ಬ್ಯಾಕ್ ವರ್ಡ್‌ಕ್ಲಾಸಸ್ ಮ್ಯಾನ್ಯುಯಲ್ ಅಂಡ್ ಕ್ಲಾಸಿಫಿಕೇಶನ್ ರಿಜರ್‌ವೇಶನ್ ಫಾರ್ ಬ್ಯಾಕ್‌ವರ್ಡ್ ಕ್ಲಾಸಸ್ ಭಾಗ-2
			ಮೇಲಿನಂತೆ	ಪಿ.ಡಬ್ಲ್ಯೂ.ಡಿ. ಲೋಯರ್ ಪತ್ರಿಕೆ-2
			ಮೇಲಿನಂತೆ	ಫಾರೆಸ್ಟ್ ಪತ್ರಿಕೆ-2
			ಮೇಲಿನಂತೆ	ಕೋ-ಆಪರೇಟಿವ್ ಆಡಿಟ್ ಎಕ್ಸಾಮಿನೇಶನ್ ಪತ್ರಿಕೆ-3
			ಮೇಲಿನಂತೆ	ಫುಡ್ ಅಂಡ್ ಸಿವಿಲ್ ಸಪ್ಲೈಸ್ ಪತ್ರಿಕೆ-2
12	ಬುಧವಾರ	03-02-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಪತ್ರಿಕೆ-1
			ಮೇಲಿನಂತೆ	ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ ಫೋರಮ್ ಸರ್ವಿಸ್ ಎಕ್ಸಾಮಿನೇಶನ್- ಪತ್ರಿಕೆ- 1
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಮುನಿಸಿಪಲ್ ಅಂಡ್ ಲೋಕಲ್ ಬೋರ್ಡ್ಸ್ ಪತ್ರಿಕೆ-2
			ಮೇಲಿನಂತೆ	ಕರ್ನಾಟಕ ಕನ್ಸ್ಯೂಮರ್ ಪ್ರೊಟೆಕ್ಷನ್ ಸ್ಟೇಟ್ ಕಮಿಷನ್ ಅಂಡ್ ಡಿಸ್ಟ್ರಿಕ್ ಫೋರಮ್ ಸರ್ವಿಸ್ ಎಕ್ಸಾಮಿನೇಶನ್- ಪತ್ರಿಕೆ-2

ವಿ.ಬಿ. ಪಾಟೀಲ್

ಕಾರ್ಯದರ್ಶಿ ಹಾಗೂ ನಿಯಂತ್ರಕರು,

ಇಲಾಖಾ ಪರೀಕ್ಷೆಗಳು, ಕರ್ನಾಟಕ ಲೋಕಸೇವಾ ಆಯೋಗ ಬೆಂಗಳೂರು.

ಕರ್ನಾಟಕ ಲೋಕಸೇವಾ ಆಯೋಗ,"ಉದ್ಯೋಗ ಸೌಧ", ಬೆಂಗಳೂರು-560001.

ಅಧಿಸೂಚನೆ ಸಂಖ್ಯೆ ಇ.ಪ.(1)2235/2009-2010/ಪಿಎಸ್‌ಸಿ ದಿನಾಂಕ:11-11-2009ಕ್ಕೆ

ಅನುಬಂಧ-"ಬಿ"

2009ನೇ ಸಾಲಿನ ದ್ವಿತೀಯ ಅಧಿವೇಶನದ ಇಲಾಖಾ ಪರೀಕ್ಷೆಗಳು

ಬೆಂಗಳೂರು, ಕೇಂದ್ರದಲ್ಲಿ ಮಾತ್ರ ನಡೆಯಲಿರುವ ಪರೀಕ್ಷೆಗಳ ವೇಳಾಪಟ್ಟಿ.

ಕ್ರ. ಸಂ.	ವಾರ	ದಿನಾಂಕ	ವೇಳೆ	ವಿಷಯ
1.	ಶನಿವಾರ	06-02-2010	ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 1.00 ಗಂಟೆ	ಎಸ್.ಎ.ಎಸ್.ಭಾಗ-1, ಪತ್ರಿಕೆ-1 ಮತ್ತು ಎಲೆಕ್ಟ್ರಿಸಿಟಿ ಆಡಿಟ್ ಅಂಡ್ ಅಕೌಂಟ್ಸ್‌ಲಾಸ್ (ಹೈಯರ್) ಭಾಗ-2 (ಎರಡಕ್ಕೂ ಒಂದೇ ಪ್ರಶ್ನೆ ಪತ್ರಿಕೆ) (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ-1 ಪತ್ರಿಕೆ-1 (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಕನ್ನಡ ಪತ್ರಿಕೆ-1(ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಮಾತ್ರ) (ಪುಸ್ತಕಗಳಿಲ್ಲದೆ)
			ಬೆಳಿಗ್ಗೆ 10.00 ರಿಂದ ಮಧ್ಯಾಹ್ನ 12.00 ಗಂಟೆ	ಸ್ಪೆಷಲ್ ಲಾಸ್ ಅಂಡ್ ಸರ್ವೀಸ್ ರೂಲ್ಸ್
			ಮೇಲಿನಂತೆ	ಕರ್ನಾಟಕ ಅಡ್ಮಿನಿಸ್ಟ್ರೇಟಿವ್ ಟ್ರಿಬ್ಯುನಲ್ ಎಕ್ಸಾಮಿನೇಶನ್
			ಮಧ್ಯಾಹ್ನ 2.00 ರಿಂದ ಸಂಜೆ 4.00 ಗಂಟೆ	ಎಸ್.ಎ.ಎಸ್.ಭಾಗ-1 ಪತ್ರಿಕೆ-2 (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ-1 ಪತ್ರಿಕೆ-2 (ಪುಸ್ತಕಗಳಿಲ್ಲದೆ)
			ಮಧ್ಯಾಹ್ನ 2.00 ರಿಂದ ಸಂಜೆ 5.00 ಗಂಟೆ	ಸೆಕ್ರೆಟೇರಿಯಟ್ ಮ್ಯಾನುಯಲ್ ಭಾಗ-2
			ಮೇಲಿನಂತೆ	ಟ್ರಾನ್ಸ್‌ಲೇಶನ್ ಟೆಸ್ಟ್ (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಕನ್ನಡ ಪತ್ರಿಕೆ-2(ಐಎಎಸ್, ಐಪಿಎಸ್ ಮತ್ತು ಐಎಫ್‌ಎಸ್ ಅಧಿಕಾರಿಗಳಿಗೆ ಮಾತ್ರ) (ಪುಸ್ತಕಗಳಿಲ್ಲದೆ)
2.	ಭಾನುವಾರ	07-02-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಸ್.ಎ.ಎಸ್. ಭಾಗ-1 ಪತ್ರಿಕೆ-3
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ-1 ಪತ್ರಿಕೆ-3
			ಮಧ್ಯಾಹ್ನ 2-00 ರಿಂದ ಸಂಜೆ 4-00ಗಂಟೆ	ಎಸ್.ಎ.ಎಸ್. ಭಾಗ-2 ಪತ್ರಿಕೆ-1 (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ-2 ಪತ್ರಿಕೆ-1 (ಎಲಿಮೆಂಟರಿ ಬುಕ್ ಕೀಪಿಂಗ್)
3	ಸೋಮವಾರ	08-02-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಸ್.ಎ.ಎಸ್. ಭಾಗ-2 ಪತ್ರಿಕೆ-2
			ಮೇಲಿನಂತೆ	ಎಲೆಕ್ಟ್ರಿಸಿಟಿ ಲಾಸ್ ಪರೀಕ್ಷೆ ಪತ್ರಿಕೆ-1
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ-2 ಪತ್ರಿಕೆ-2 (ಪುಸ್ತಕಗಳಿಲ್ಲದೆ)
			ಮಧ್ಯಾಹ್ನ 2-00 ರಿಂದ ಸಂಜೆ 4-00ಗಂಟೆ	ಎಲೆಕ್ಟ್ರಿಸಿಟಿ ಲಾಸ್ ಪರೀಕ್ಷೆ ಪತ್ರಿಕೆ-2
			ಮೇಲಿನಂತೆ	ಎಸ್.ಎ.ಎಸ್ ಭಾಗ-2 ಪತ್ರಿಕೆ-3
			ಮೇಲಿನಂತೆ	ಟ್ರೆಜರಿ ಅಕೌಂಟ್ಸ್ ಭಾಗ-2 ಪತ್ರಿಕೆ-3
4.	ಮಂಗಳವಾರ	09-02-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಸ್.ಎ.ಎಸ್. ಭಾಗ-3 ಪತ್ರಿಕೆ-1
			ಮಧ್ಯಾಹ್ನ 2-00 ರಿಂದ ಸಂಜೆ 4-00ಗಂಟೆ	ಎಸ್.ಎ.ಎಸ್. ಭಾಗ-3 ಪತ್ರಿಕೆ-2 (ಪುಸ್ತಕಗಳಿಲ್ಲದೆ)
5.	ಬುಧವಾರ	10-02-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಸ್.ಎ.ಎಸ್. ಭಾಗ-3 ಪತ್ರಿಕೆ-3
			ಮಧ್ಯಾಹ್ನ 2-00 ರಿಂದ ಸಂಜೆ 4-00ಗಂಟೆ	ಎಸ್.ಎ.ಎಸ್. ಭಾಗ-3 ಪತ್ರಿಕೆ-4 (ಪುಸ್ತಕಗಳಿಲ್ಲದೆ)
			ಮೇಲಿನಂತೆ	ಎಲೆಕ್ಟ್ರಿಸಿಟಿ(ಆಡಿಟ್ ಅಂಡ್ ಅಕೌಂಟ್ಸ್) ಲಾಸ್ ಲೋಯರ್ ಪರೀಕ್ಷೆ
6.	ಗುರುವಾರ	11-02-2010	ಬೆಳಿಗ್ಗೆ 10.00 ರಿಂದ 12.00 ಗಂಟೆ	ಎಲೆಕ್ಟ್ರಿಸಿಟಿ (ಆಡಿಟ್ ಅಂಡ್ ಅಕೌಂಟ್ಸ್) ಲಾಸ್ ಹೈಯರ್ ಪರೀಕ್ಷೆ ಭಾಗ-1
			ಮೇಲಿನಂತೆ	ಎಸ್.ಎ.ಎಸ್ ಭಾಗ-3 ಪತ್ರಿಕೆ-5
			ಮೇಲಿನಂತೆ	ಸೆಕ್ರೆಟೇರಿಯಟ್ ಮ್ಯಾನುಯಲ್ ಭಾಗ-1 ಪತ್ರಿಕೆ-1
			ಮೇಲಿನಂತೆ	ಇಂಡಿಯನ್ ಕಾಂಟ್ರಾಕ್ಟ್ ಆಕ್ಟ್
			ಮೇಲಿನಂತೆ	ಕರ್ನಾಟಕ ಲೋಕಸೇವಾ ಆಯೋಗ ಮ್ಯಾನುಯಲ್
			ಮಧ್ಯಾಹ್ನ 2-00 ರಿಂದ ಸಂಜೆ 4-00ಗಂಟೆ	ಸೆಕ್ರೆಟೇರಿಯಟ್ ಮ್ಯಾನುಯಲ್ ಭಾಗ-1 ಪತ್ರಿಕೆ-2
			ಮೇಲಿನಂತೆ	ಕರ್ನಾಟಕ ಲೋಕಸೇವಾ ಆಯೋಗ ರಿಕ್ರೂಟ್‌ಮೆಂಟ್ ರೂಲ್ಸ್

ಎ. ಬಿ. ಪಾಟೀಲ್

ಪಿ.ಡಿ. 125

ಕಾರ್ಯದರ್ಶಿ ಹಾಗೂ ನಿಯಂತ್ರಕರು, ಇಲಾಖಾ ಪರೀಕ್ಷೆಗಳು.
ಕರ್ನಾಟಕ ಲೋಕಸೇವಾ ಆಯೋಗ.

ಅರಣ್ಯ ಇಲಾಖೆ

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು-560003

ಅಧಿಸೂಚನೆ

ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳಿಂದ ಶೀಘ್ರಲಿಪಿಗಾರ, ದ್ವಿತೀಯ ದರ್ಜೆ ಸಹಾಯಕ ಮತ್ತು ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಗಳಿಗೆ ನೇರ ನೇಮಕಾತಿ

ಸಂಖ್ಯೆ: ಬಿ9-ಬ್ಯಾಕ್‌ಲಾಗ್-ನೇಮಕಾತಿ-ವಿವ-3/2009-10 ದಿನಾಂಕ: 16ನೇ ನವೆಂಬರ್ 2009

ಅರಣ್ಯ ಇಲಾಖೆಯಲ್ಲಿ ಶೀಘ್ರಲಿಪಿಗಾರ, ದ್ವಿತೀಯ ದರ್ಜೆ ಸಹಾಯಕ ಮತ್ತು ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಗಳಿಗೆ ಕರ್ನಾಟಕ ರಾಜ್ಯ ನಾಗರೀಕ ಸೇವಾ (ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದವರಿಗೆ ಕಾಯ್ದಿರಿಸಿದ ಹುದ್ದೆಗಳಲ್ಲಿ ಭರ್ತಿಯಾಗದೆ ಖಾಲಿ ಇರುವ ಹುದ್ದೆಗಳಿಗೆ)(ವಿಶೇಷ ನೇಮಕಾತಿ) ನಿಯಮಗಳು, 2001 ರನ್ವಯ ನೇರ ನೇಮಕಾತಿಗಾಗಿ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಅರ್ಹ ಅಭ್ಯರ್ಥಿಗಳಿಂದ ನಿಗದಿತ ನಮೂನೆಯಲ್ಲಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

1.0 ಅರ್ಜಿ ನಮೂನೆ

ಹುದ್ದೆವಾರು ಅರ್ಜಿ ನಮೂನೆಯನ್ನು ಈ ಅಧಿಸೂಚನೆಯೊಂದಿಗೆ ಲಗತ್ತಿಸಿದೆ ಮತ್ತು ಹುದ್ದೆವಾರು ಅರ್ಜಿ ನಮೂನೆಯ ಮಾದರಿಯನ್ನು ಅಭ್ಯರ್ಥಿಗಳು ರಾಜ್ಯದ ಎಲ್ಲಾ ಉಪ ಅರಣ್ಯ ಸಂರಕ್ಷಣಾಧಿಕಾರಿ (ಪ್ರಾದೇಶಿಕ) ಇವರ ಕಚೇರಿಗಳಿಂದ ಉಚಿತವಾಗಿ ಪಡೆಯಬಹುದು. ಅಭ್ಯರ್ಥಿಗಳು ಅಧಿಸೂಚನೆ ಹಾಗೂ ನಿಗದಿತ ಅರ್ಜಿ ನಮೂನೆಯನ್ನು ಇಲಾಖಾ ವೆಬ್‌ಸೈಟ್: **www.karnatakaforest.gov.in** ನಿಂದಲೂ ಸಹ ಡೌನ್‌ಲೋಡ್ ಮಾಡಿಕೊಳ್ಳಬಹುದು. ನಿಗದಿತ ನಮೂನೆಯ ಅರ್ಜಿಯಲ್ಲಿ ಮಾಹಿತಿಗಳನ್ನು ಆಂಗ್ಲ ಭಾಷೆಯ Capital letters ಗಳಲ್ಲಿ ಅಥವಾ ಕನ್ನಡ ಭಾಷೆಯ ದಪ್ಪ ಅಕ್ಷರಗಳಲ್ಲಿ ಸ್ಪಷ್ಟವಾಗಿ ಬರೆದು ಅಥವಾ ಬೆರಳಚ್ಚು ಮಾಡಿಸಿ ಸಲ್ಲಿಸತಕ್ಕದ್ದು. **ಅರ್ಜಿ ನಮೂನೆಗಳು ಮಾರಾಟಕ್ಕೆ ಲಭ್ಯವಿರುವುದಿಲ್ಲ.**

2.0 ಅರ್ಜಿ ಸಲ್ಲಿಸುವ ವಿಧಾನ ಮತ್ತು ಸಲ್ಲಿಸಬೇಕಾದ ವಿಳಾಸ

2.1 ನಿಗದಿತ ನಮೂನೆಯ ಅರ್ಜಿಯನ್ನು ಸರಿಯಾಗಿ, ಸ್ಪಷ್ಟವಾಗಿ ಮತ್ತು ಪೂರ್ಣವಾಗಿ ಭರ್ತಿ ಮಾಡಿ, ಭರ್ತಿ ಮಾಡಿದ ಅರ್ಜಿಯನ್ನು ಲಕೋಟೆಯಲ್ಲಿರಿಸಿ, ಲಕೋಟೆಯ ಮೇಲೆ **"ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಶೀಘ್ರಲಿಪಿಗಾರ/ದ್ವಿತೀಯ ದರ್ಜೆ ಸಹಾಯಕ/ಬೆರಳಚ್ಚುಗಾರರ ಬ್ಯಾಕ್‌ಲಾಗ್ ಹುದ್ದೆಗೆ ಅರ್ಜಿ"** ಎಂದು ಸ್ಪಷ್ಟವಾಗಿ ನಮೂದಿಸಿ, ತಕ್ಕ ಮೌಲ್ಯದ ಅಂಚೆ ಚೀಟಿ ಅಂಟಿಸಿ, **ಸಾಧಾರಣ ಅಂಚೆ ಮುಖಾಂತರ ಮಾತ್ರ** ಈ ಕೆಳಗೆ ನಮೂದಿಸಿರುವ ವಿಳಾಸಕ್ಕೆ ಕಳುಹಿಸಬೇಕು.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಆಯ್ಕೆ ಪ್ರಾಧಿಕಾರ,
1ನೇ ಮಹಡಿ, ಅರಣ್ಯ ಭವನ, 18ನೇ ಕ್ರಾಸ್,
ಮಲ್ಲೇಶ್ವರಂ, ಬೆಂಗಳೂರು-560003.

ಇತರೆ ನಮೂನೆಗಳಲ್ಲಿ ಭರ್ತಿ ಮಾಡಿ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ. ಒಂದು ವೇಳೆ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ಸಲ್ಲಿಸಿ, ಅಂಚೆ ಮೂಲಕ ಸ್ವೀಕೃತವಾಗದೇ ಇದ್ದಲ್ಲಿ ಆಯ್ಕೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ. ಅರ್ಜಿ ತಲುಪಿದ ಬಗ್ಗೆ ಯಾವುದೇ ಸ್ವೀಕೃತಿಯನ್ನು ನೀಡಲಾಗುವುದಿಲ್ಲ. ಯಾವುದೇ ಕಾರಣಕ್ಕೂ ಕೊರಿಯರ್, ನೊಂದಾಯಿತ ಅಂಚೆ, ಮುದ್ದಾಂ, ಇತ್ಯಾದಿ ವಿಧಾನಗಳ ಮುಖಾಂತರ ಅರ್ಜಿಗಳನ್ನು ಕಳುಹಿಸಬಾರದು ಮತ್ತು ಈ ವಿಧಾನಗಳ ಮುಖಾಂತರ ಕಳುಹಿಸಿದ ಅರ್ಜಿಗಳನ್ನು ಸ್ವೀಕರಿಸುವ ವ್ಯವಸ್ಥೆ ಸಹ ಇರುವುದಿಲ್ಲ.

2.2 ಅರ್ಜಿಯ ಜೊತೆಗೆ ಯಾವುದೇ ಮೂಲ ದಾಖಲೆ/ಪ್ರಮಾಣ ಪತ್ರಗಳನ್ನು ಅಥವಾ ಅವುಗಳ ಜೆರಾಕ್ಸ್ ಪ್ರತಿಗಳು, ಇತ್ಯಾದಿಗಳನ್ನು ಸಲ್ಲಿಸಬೇಕಾಗಿರುವುದಿಲ್ಲ. ಒಂದು ವೇಳೆ, ಸಲ್ಲಿಸಿ, ಅವು ಕಳೆದು ಹೋದರೆ ಆಯ್ಕೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ. ಆದರೆ ಅಭ್ಯರ್ಥಿಯು ನಿಗದಿತ ನಮೂನೆಯಲ್ಲಿರುವ ಅರ್ಜಿಯನ್ನು ಭರ್ತಿ ಮಾಡುವ ವೇಳೆಗೆ ಸಂಬಂಧಿಸಿದ ಪ್ರಾಧಿಕಾರಗಳಿಂದ ಅವಶ್ಯವಿರುವ ಎಲ್ಲಾ ಮೂಲ ದಾಖಲೆ/ಪ್ರಮಾಣ ಪತ್ರಗಳನ್ನು ಪಡೆದುಕೊಂಡು ಸದರಿ ಮೂಲ ದಾಖಲೆ/ಪ್ರಮಾಣ ಪತ್ರಗಳಲ್ಲಿರುವ ಮಾಹಿತಿಯನ್ನು ಸರಿಯಾಗಿ, ಸ್ಪಷ್ಟವಾಗಿ ಮತ್ತು ಸಮರ್ಪಕವಾಗಿ ನಿಗದಿತ ನಮೂನೆಯ ಅರ್ಜಿಯಲ್ಲಿ ಭರ್ತಿ ಮಾಡಿ ಸಲ್ಲಿಸತಕ್ಕದ್ದು.

2.3 ನಿಗದಿತ ನಮೂನೆಯಲ್ಲಿ ಭರ್ತಿ ಮಾಡಿದ ಅರ್ಜಿಗಳನ್ನು ಸ್ವೀಕರಿಸಲು ಕೊನೆಯ **ದಿನಾಂಕ 16-12-2009 ರಂದು ಸಂಜೆ 5.30 ಗಂಟೆವರೆಗೆ** ಆಗಿರುತ್ತದೆ.. ಒಂದು ವೇಳೆ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕವು ಸಾರ್ವತ್ರಿಕ ರಜಾ ದಿನವಾಗಿ ಘೋಷಿಸಲ್ಪಟ್ಟರೆ ಆ ದಿನಾಂಕದ ಮಾರನೇ ಕೆಲಸದ ದಿನವು ಅರ್ಜಿಯನ್ನು ಸ್ವೀಕರಿಸಲು ಕೊನೆಯ ದಿನಾಂಕವಾಗಿರುತ್ತದೆ.

ವಿಶೇಷ ಸೂಚನೆ:-- ನಿಗದಿಪಡಿಸಿದ ಕೊನೆಯ ದಿನಾಂಕದ ನಂತರ ಸ್ವೀಕೃತ [illegible] ಕಾರಣಕ್ಕೂ ಆಯ್ಕೆ ಪ್ರಕ್ರಿಯೆಗೆ ಪರಿಗಣಿಸಲಾಗುವುದಿಲ್ಲ.

3.0 ಶುಲ್ಕ (Fee):

ಯಾವುದೇ ರೀತಿಯ ಶುಲ್ಕವನ್ನು ಅಭ್ಯರ್ಥಿಗಳು ಪಾವತಿಸಬೇಕಾಗಿರುವುದಿಲ್ಲ.

V -F7-B/B

4.0 ಬ್ಯಾಕ್‌ಲಾಗ್ ಹುದ್ದೆಗಳ ಸಂಖ್ಯೆ ಮತ್ತು ವರ್ಗೀಕರಣ

ಸಮತಲ ಮೀಸಲಾತಿ	ಶೀಘ್ರಲಿಪಿಗಾರ (ವೇತನ ಶ್ರೇಣಿ: ರೂ.7275-13350)		ಬೆರಳಚ್ಚುಗಾರ (ವೇತನ ಶ್ರೇಣಿ: ರೂ.5800-10500)		ದ್ವಿತೀಯ ದರ್ಜೆ ಸಹಾಯಕ (ವೇತನ ಶ್ರೇಣಿ: ರೂ.5800-10500)	
	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ	ಪರಿಶಿಷ್ಟ ಜಾತಿ	ಪರಿಶಿಷ್ಟ ಪಂಗಡ
ಇತರೆ	–	1	3	–	2	–
ಮಹಿಳಾ ಅಭ್ಯರ್ಥಿ	–	–	1	1	–	1
ಗ್ರಾಮೀಣ ಅಭ್ಯರ್ಥಿ	–	–	2	–	3	–
ಮಾಜಿ ಸೈನಿಕ	–	–	–	–	1	–
ಒಟ್ಟು:	–	**1**	**6**	**1**	**6**	**1**

5.0 ಅರ್ಹತೆ ಮತ್ತು ನಿಬಂಧನೆಗಳು

5.1 ವಿದ್ಯಾರ್ಹತೆ: ಅಧಿಸೂಚನೆಯ ದಿನಾಂಕ 16-11-2009ಕ್ಕೆ ಈ ಕೆಳಕಂಡ ವಿದ್ಯಾರ್ಹತೆಯನ್ನು ಅಭ್ಯರ್ಥಿಯು ಹೊಂದಿರಬೇಕು.

5.1.1	**ಶೀಘ್ರಲಿಪಿಗಾರ ಹುದ್ದೆಗೆ**	(ಅ) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು; ಮತ್ತು (ಆ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಕನ್ನಡ ಸೀನಿಯರ್ ಬೆರಳಚ್ಚು ಮತ್ತು ಕನ್ನಡ ಸೀನಿಯರ್ ಶೀಘ್ರಲಿಪಿ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
5.1.2	**ಬೆರಳಚ್ಚುಗಾರ ಹುದ್ದೆಗೆ**	(ಅ) ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು; ಮತ್ತು (ಆ) ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು ನಡೆಸುವ ಕನ್ನಡ ಸೀನಿಯರ್ ಬೆರಳಚ್ಚು ಪರೀಕ್ಷೆ ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.
5.1.3	**ದ್ವಿತೀಯ ದರ್ಜೆ ಸಹಾಯಕರ ಹುದ್ದೆಗೆ**	ಎಸ್.ಎಸ್.ಎಲ್.ಸಿ. ಅಥವಾ ತತ್ಸಮಾನ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರಬೇಕು.

6.0 ವಯೋಮಿತಿ:

ಅಧಿಸೂಚನೆಯ ದಿನಾಂಕ 16-11-2009ಕ್ಕೆ ಅಭ್ಯರ್ಥಿಯು ಕನಿಷ್ಠ 18 ವರ್ಷ ವಯಸ್ಸನ್ನು ಪೂರೈಸಿರತಕ್ಕದ್ದು ಮತ್ತು ಗರಿಷ್ಠ 40 ವರ್ಷ ವಯೋಮಿತಿಯನ್ನು ಮೀರಿರಬಾರದು. ಆದಾಗ್ಯೂ, ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 6(3)(ಸಿ) ಅನ್ವಯ ಮಾಜಿ ಸೈನಿಕರಿಗೆ ಅವರು ಸಶಸ್ತ್ರ ಪಡೆಗಳಲ್ಲಿ ಸೇವೆ ಸಲ್ಲಿಸಿದ ಅವಧಿಗೆ 3 ವರ್ಷ ಸೇರಿಸಿದರೆ ಎಷ್ಟು ವರ್ಷಗಳಾಗುವುದೋ ಅಷ್ಟು ವರ್ಷಗಳ ವಿನಾಯಿತಿ ಹಾಗೂ 1977ರ ನಿಯಮ 6(3)(ಎಫ್) ಅನ್ವಯ ಅಂಗವಿಕಲರಿಗೆ 10 ವರ್ಷಗಳ ಮತ್ತು 1977ರ ನಿಯಮ 6(3)(ಐ) ಅನ್ವಯ ವಿಧವೆಯರಿಗೆ 10 ವರ್ಷಗಳ ವಯೋಮಿತಿಯಲ್ಲಿ ವಿನಾಯಿತಿ ನೀಡಲಾಗುವುದು.

7.0 ಸ್ವೀಕೃತ ಅರ್ಜಿಗಳ ಪರಾಮರ್ಶೆ/ಆಯ್ಕೆ ವಿಧಾನ

ಕರ್ನಾಟಕ ರಾಜ್ಯ ನಾಗರೀಕ ಸೇವಾ (ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಕಾಯ್ದಿರಿಸಿದ ಹುದ್ದೆಗಳಲ್ಲಿ ಭರ್ತಿಯಾಗದೆ ಖಾಲಿ ಇರುವ ಹುದ್ದೆಗಳಿಗೆ)(ವಿಶೇಷ ನೇಮಕಾತಿ) ನಿಯಮಗಳು, 2001 ಅನ್ವಯ ಸ್ವೀಕರಿಸಲಾದ ಅರ್ಹ ಅರ್ಜಿಗಳನ್ನು ಹುದ್ದೆವಾರು ಕ್ರೋಢೀಕರಿಸಿ, ಅಭ್ಯರ್ಥಿಗಳು ನಿಗದಿತ ನಮೂನೆಯ ಅರ್ಜಿಯಲ್ಲಿ ಭರ್ತಿ ಮಾಡಿರುವ ಮಾಹಿತಿ/ವಿವರಗಳನ್ನು ನಿಯಮಾನುಸಾರ ಪರಿಶೀಲಿಸಿ 1:1 (ಖಾಲಿ ಹುದ್ದೆ : ಅಭ್ಯರ್ಥಿ) ಅನುಪಾತದಲ್ಲಿ ಪ್ರವರ್ಗವಾರು ಆಯಾ ಹುದ್ದೆಗಳಿಗೆ ನಿಗದಿಪಡಿಸಿದ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಗಳು ಗಳಿಸಿದ ಒಟ್ಟು ಶೇಕಡಾವಾರು ಅಂಕಗಳನ್ನು ಪರಿಗಣಿಸಿ, ಕರ್ನಾಟಕ ನಾಗರೀಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಅನ್ವಯ ಮಹಿಳಾ ಅಭ್ಯರ್ಥಿ, ಮಾಜಿ ಸೈನಿಕ, ಅಂಗವಿಕಲ ಅಭ್ಯರ್ಥಿಗಳಿಗೆ ನಿಗದಿಪಡಿಸಿದ ಮೀಸಲಾತಿ ಮತ್ತು ಗ್ರಾಮೀಣ ಅಭ್ಯರ್ಥಿಗಳಿಗೆ ಕರ್ನಾಟಕ ನೇಮಕಾತಿಯಲ್ಲಿ ಮೀಸಲಾತಿ (ನಾಗರಿಕ ಸೇವೆಗಳಲ್ಲಿ ರಾಜ್ಯದ ಗ್ರಾಮೀಣ ಅಭ್ಯರ್ಥಿಗಳಿಗಾಗಿ) ಕಾಯಿದೆ, 2000ರ ಅನ್ವಯ 29 ರಿಂದ 40 ವರ್ಷ ವಯೋಮಿತಿಯಲ್ಲಿರುವ ಅಭ್ಯರ್ಥಿಗಳ ತಾತ್ಕಾಲಿಕ ಆಯ್ಕೆ ಪಟ್ಟಿ (Provisional Select List) ಯನ್ನು ಮೆರಿಟ್ ಆಧಾರದಲ್ಲಿ ತಯಾರಿಸಲಾಗುವುದು. ಒಂದು ವೇಳೆ, 29 ರಿಂದ 40 ವರ್ಷ ವಯೋಮಿತಿಯಲ್ಲಿ ಸಾಕಷ್ಟು ಅರ್ಹ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದಲ್ಲಿ ಕೊರತೆ ಆಗುವ ಅಭ್ಯರ್ಥಿಗಳ ಸಂಖ್ಯೆಗೆ ಅನುಗುಣವಾಗಿ 18 ರಿಂದ 28 ವರ್ಷ ವಯೋಮಿತಿಯಲ್ಲಿರುವ ಅರ್ಹ ಅಭ್ಯರ್ಥಿಗಳನ್ನು ಸಹ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿ ಮೇಲಿನ ಉಪಬಂಧಗಳ ಅನ್ವಯ ಸೇರಿಸಲಾಗುವುದು. ಆದರೆ, ಮೂಲ ದಾಖಲೆ/ಪ್ರಮಾಣ ಪತ್ರಗಳ ಪರಿಶೀಲನೆಯ ನಂತರವೇ ಆಯ್ಕೆ ಪಟ್ಟಿಯನ್ನು ಅಂತಿಮಗೊಳಿಸಿ ಪ್ರಕಟಿಸಲಾಗುವುದು.

ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳನ್ನು ರಾಜ್ಯಾದ್ಯಂತ ಇರುವ ವಿವಿಧ ಅರಣ್ಯ ಕಚೇರಿಗಳಲ್ಲಿ ಕರ್ತವ್ಯ ನಿರ್ವಹಿಸಲು ಸ್ಥಳ ನಿಯುಕ್ತಿಗೊಳಿಸಲಾಗುವುದು.

ವಿಶೇಷ ಸೂಚನೆಗಳು:- (i) ಆಯ್ಕೆ ಪಟ್ಟಿಯಲ್ಲಿ ಅಭ್ಯರ್ಥಿಯ ಹೆಸರನ್ನು ಸೇರಿಸಿದ ಮಾತ್ರಕ್ಕೆ ಅಭ್ಯರ್ಥಿಗೆ ನೇಮಕಾತಿಯ ಹಕ್ಕನ್ನು ನೀಡುವುದಿಲ್ಲ.

(ii) ಶೇಕಡಾವಾರು ಅಂಕಗಳನ್ನು ಲೆಕ್ಕ ಹಾಕುವಾಗ ಪಠ್ಯ ವಿಷಯದಲ್ಲಿನ ಯಾವುದೇ ವಿಷಯದ ಅಂಕಗಳನ್ನು ಹೊರತುಪಡಿಸಲಾಗುವುದಿಲ್ಲ. ನಿಗದಿಪಡಿಸಿರುವ ವಿದ್ಯಾರ್ಹತೆಯಲ್ಲಿ ಅಭ್ಯರ್ಥಿಯು ಗಳಿಸಿರುವ ಎಲ್ಲಾ ವಿಷಯಗಳಲ್ಲಿನ ಒಟ್ಟು ಅಂಕಗಳು ಮತ್ತು ಆಯಾ ಪರೀಕ್ಷಾ ಮಂಡಳಿ ನಿಗದಿಪಡಿಸಿರುವ ಗರಿಷ್ಠ ಅಂಕಗಳನ್ನು ಪರಿಗಣಿಸಿ ಅಭ್ಯರ್ಥಿಗಳ ಶೇಕಡವಾರು ಅಂಕಗಳನ್ನು ನಿಗದಿಪಡಿಸಲಾಗುವುದು.

8.0 ಮೂಲ ದಾಖಲೆ/ಪ್ರಮಾಣ ಪತ್ರಗಳ ಪರಿಶೀಲನೆ

ಮೂಲ ದಾಖಲೆ/ಪ್ರಮಾಣ ಪತ್ರಗಳ ಪರಿಶೀಲನೆಯ ದಿನಾಂಕವನ್ನು 1:1 (ಖಾಲಿ ಹುದ್ದೆ : ಅಭ್ಯರ್ಥಿ) ಅನುಪಾತದ ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳಿಗೆ ಮಾತ್ರ ಪ್ರತ್ಯೇಕವಾಗಿ ತಿಳಿಸಲಾಗುವುದು. ಮೂಲ ದಾಖಲೆ/ಪ್ರಮಾಣ ಪತ್ರಗಳ ಪರಿಶೀಲನೆಗೆ ಸೂಚನಾ/ತಿಳುವಳಿಕೆ ಪತ್ರ ದೊರೆಯದ ಅಭ್ಯರ್ಥಿಗಳು ನೇಮಕಾತಿಗೆ ಆಯ್ಕೆಯಾಗಿರುವುದಿಲ್ಲವೆಂದು ತಿಳಿಯುವುದು ಮತ್ತು ಈ ವಿಷಯದಲ್ಲಿ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ. ತಾತ್ಕಾಲಿಕ ಆಯ್ಕೆ ಪಟ್ಟಿಯಲ್ಲಿರುವ ಅಭ್ಯರ್ಥಿಗಳು ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿ/ವಿವರಗಳಿಗೆ ಪೂರಕವಾಗಿ ವಯಸ್ಸು, (ಜನ್ಮ ದಿನಾಂಕ ತಿಳಿಯಲು ಎಸ್.ಎಸ್.ಎಲ್.ಸಿ. ಅಂಕಪಟ್ಟಿ, ಶಾಲಾ ದಾಖಲಾತಿ ಪ್ರಮಾಣ ಪತ್ರಗಳು) ಶೈಕ್ಷಣಿಕ ಅರ್ಹತೆ, ಮೀಸಲಾತಿ, ಇತ್ಯಾದಿಗಳ ಬಗ್ಗೆ ಮೂಲ ದಾಖಲೆ/ಪ್ರಮಾಣ ಪತ್ರಗಳನ್ನು ಸೂಚಿತ ದಿನಾಂಕದಂದು ಆಯ್ಕೆ ಪ್ರಾಧಿಕಾರದ ಎದುರು ಪರಿಶೀಲನೆಗೆ ಕಡ್ಡಾಯವಾಗಿ ಹಾಜರುಪಡಿಸಬೇಕು. ಸದರಿ ಮೂಲ ದಾಖಲೆ/ಪ್ರಮಾಣ ಪತ್ರಗಳನ್ನು ಹಾಜರುಪಡಿಸಲು ಯಾವುದೇ ಕಾರಣಕ್ಕೂ ಮತ್ತು ಯಾವುದೇ ಸನ್ನಿವೇಶದಲ್ಲಿಯೂ ಕಾಲ ವಿಸ್ತರಣೆ ನೀಡಲಾಗುವುದಿಲ್ಲ. ಒಂದು ವೇಳೆ, ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿಗೆ ವ್ಯತಿರಿಕ್ತ ದಾಖಲೆ/ಪ್ರಮಾಣ ಪತ್ರಗಳನ್ನು ಸಲ್ಲಿಸಿದಲ್ಲಿ ಅಂತಹ ದಾಖಲೆ/ಪ್ರಮಾಣ ಪತ್ರಗಳನ್ನು ಪರಿಗಣನೆಗೆ ತೆಗೆದುಕೊಂಡು ಬದಲಾವಣೆ ಮಾಡಲಾಗುವುದಿಲ್ಲ. ಮೂಲ ದಾಖಲೆ/ಪ್ರಮಾಣ ಪತ್ರಗಳನ್ನು ಸೂಚಿತ ದಿನಾಂಕದಂದು ಪರಿಶೀಲನೆಯ ಸಮಯದಲ್ಲಿ ಹಾಜರುಪಡಿಸದ ಅಭ್ಯರ್ಥಿಗಳ ಅಭ್ಯರ್ಥಿತನವನ್ನು ರದ್ದುಪಡಿಸಲಾಗುವುದು ಹಾಗೂ ಅವರನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

8.1. ಅಭ್ಯರ್ಥಿಯು ಅರ್ಜಿಯನ್ನು ಭರ್ತಿ ಮಾಡುವಾಗ ಆಯಾ ಹುದ್ದೆಗೆ ನಿಗದಿಪಡಿಸಿರುವ ಶೈಕ್ಷಣಿಕ ವಿದ್ಯಾರ್ಹತೆಯಲ್ಲಿ ಆಯಾ ಪರೀಕ್ಷಾ ಮಂಡಳಿ ನಿಗದಿಪಡಿಸಿರುವ ಗರಿಷ್ಠ ಅಂಕಗಳನ್ನು ಹಾಗೂ ಅಭ್ಯರ್ಥಿಯು ಎಲ್ಲಾ ವಿಷಯಗಳಲ್ಲಿ ಗಳಿಸಿರುವ ಒಟ್ಟು ಅಂಕಗಳನ್ನು ಅರ್ಜಿಯಲ್ಲಿ ಸರಿಯಾಗಿ ಮತ್ತು ಸ್ಪಷ್ಟವಾಗಿ ನಮೂದಿಸುವುದು. ಅಸ್ಪಷ್ಟ/ತಪ್ಪು/ಅಪೂರ್ಣ ಮಾಹಿತಿ ನೀಡಿದ್ದಲ್ಲಿ ಅಭ್ಯರ್ಥಿಯ ಅರ್ಜಿಯನ್ನು ತಿರಸ್ಕರಿಸಿ ಅಂತಹವರನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

8.2 ಅಭ್ಯರ್ಥಿಯು ಅರ್ಜಿ ನಮೂನೆಯಲ್ಲಿ ಮೀಸಲಾತಿ ಮತ್ತು ಕೋರುವ ಯಾವುದೇ ಸೌಲಭ್ಯಗಳಿಗೆ ಸಂಬಂಧಿಸಿದಂತೆ ವಿವರಗಳನ್ನು ಅರ್ಜಿಯಲ್ಲಿ ನೀಡಿರುವ ಸಂಬಂಧಿಸಿದ ಕಾಲಂಗಳಲ್ಲಿ ತಪ್ಪದೇ ನಮೂದಿಸಬೇಕು. ಒಂದು ವೇಳೆ ಸದರಿ ವಿವರಗಳನ್ನು ಅರ್ಜಿಯಲ್ಲಿ ನಮೂದಿಸದಿದ್ದರೆ ಅಂತಹ ಅಭ್ಯರ್ಥಿಯು ಮೀಸಲಾತಿ/ಕೋರುವ ಇತರೆ ಸೌಲಭ್ಯಗಳಿಂದ ವಂಚಿತರಾಗುತ್ತಾರೆ.

9.0 ಕನ್ನಡ ಭಾಷಾ ಪರೀಕ್ಷೆಯ ಪಠ್ಯಕ್ರಮ

ಎಸ್.ಎಸ್.ಎಲ್.ಸಿ. ಹಾಗೂ ಅದಕ್ಕಿಂತ ಮೇಲ್ಪಟ್ಟ ವಿದ್ಯಾಭ್ಯಾಸದಲ್ಲಿ ಕನ್ನಡ ಭಾಷೆಯನ್ನು ಪ್ರಥಮ ಅಥವಾ ದ್ವಿತೀಯ ಭಾಷೆಯನ್ನಾಗಿ ಅಭ್ಯಸಿಸದೇ ಇರುವ ಅಭ್ಯರ್ಥಿಗಳಿಗೆ ಕರ್ನಾಟಕ ಸಿವಿಲ್ ಸೇವೆಗಳು (ನೇಮಕಾತಿ) (ಕನ್ನಡ ಭಾಷಾ ಪರೀಕ್ಷೆ) ನಿಯಮಗಳು, 1984ಕ್ಕೆ ಪೂರಕವಾಗಿ ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 69 ಎಸ್‌ಸಿಆರ್ 84 ದಿನಾಂಕ 23-9-1985 ರಲ್ಲಿ ಸೂಚಿಸಿದ ಪ್ರಕಾರ ಅಂತಹ ಅಭ್ಯರ್ಥಿಗಳಿಗೆ ಕನ್ನಡ ಭಾಷಾ ಜ್ಞಾನವನ್ನು ಪರೀಕ್ಷಿಸಲು ನಿಗದಿಪಡಿಸಿದ ಕನ್ನಡ ಭಾಷಾ ಪರೀಕ್ಷೆಯಲ್ಲಿ ಉತ್ತೀರ್ಣರಾದ ನಂತರವೇ ಅಭ್ಯರ್ಥಿಗಳು ನೇಮಕಾತಿ ಹೊಂದಲು ಅರ್ಹರಾಗುತ್ತಾರೆ. ಕನ್ನಡ ಭಾಷಾ ಪರೀಕ್ಷೆಯಲ್ಲಿ ಅನುತ್ತೀರ್ಣರಾಗುವ ಅಭ್ಯರ್ಥಿಗಳನ್ನು ಆಯ್ಕೆ ಪ್ರಕ್ರಿಯೆಯಿಂದ ಕೈಬಿಡಲಾಗುವುದು.

9.1 ಕನ್ನಡ ಭಾಷಾ ಪರೀಕ್ಷೆಯನ್ನು ಎರಡು ಹಂತದಲ್ಲಿ ನಡೆಸಲಾಗುತ್ತದೆ. ಇದರ ವಿವರ ಕೆಳಗೆ ನಮೂದಿಸಿದೆ.

ಸಮಯ: 1.00 ಗಂಟೆ

ಮೊದಲನೇ ಹಂತ – ಲಿಖಿತ ಪರೀಕ್ಷೆ:	ಲಿಖಿತ ಪರೀಕ್ಷೆಗೆ ಕನ್ನಡ ಶಾಲಾ ನಾಲ್ಕನೇ ತರಗತಿಯ ಕನ್ನಡ ಮುಖ್ಯ ಪಠ್ಯಪುಸ್ತಕ ಹಾಗೂ ವಿವಿಧ ಲೇಖಕರು ಬರೆದ ಕರ್ನಾಟಕ ವಯಸ್ಕರ ಶಿಕ್ಷಣ ಪರಿಷತ್ತು ಪ್ರಕಟಿಸಿರುವ "ಸತ್ಯಕ್ಕೆ ಬೆಲೆ ಕೊಟ್ಟ ಗೆಳೆಯರು" ಎಂಬ ಪಾಠದಿಂದ ಆರಂಭವಾಗುವ ಸಣ್ಣಕಥೆಗಳು ಇವುಗಳಿಂದ ಪ್ರಶ್ನೆಗಳನ್ನು ಕೊಡಲಾಗುವುದು.	90 ಅಂಕಗಳು
ಎರಡನೇ ಹಂತ ಮೌಖಿಕ ಪರೀಕ್ಷೆ:	ಅ) ಮುದ್ರಿತ ಹಾಗೂ ಹಸ್ತ ಪ್ರತಿಗಳನ್ನು ಓದುವುದು. ಆ) ಅರ್ಜಿಗಳನ್ನು ಓದಿ ವಿವರಿಸುವುದು. ಇ) ಸಂಭಾಷಣೆ ನಡೆಸುವುದು.	10 ಅಂಕಗಳು

9.2 ಈ ಕೆಳಗಿನ ಮಟ್ಟದಲ್ಲಿ ಮೂರು ವಿಧದಲ್ಲಿ ಕನಿಷ್ಠ ಅಂಕಗಳನ್ನು ಪಡೆದವರು ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿರುವರೆಂದು ಪರಿಗಣಿಸಲಾಗುವುದು.

(ಅ)	ಲಿಖಿತ ಪರೀಕ್ಷೆಯಲ್ಲಿ ಪಡೆಯತಕ್ಕ ಕನಿಷ್ಠ ಅಂಕಗಳು:	30
(ಆ)	ಮೌಖಿಕ ಪರೀಕ್ಷೆಯಲ್ಲಿ ಪಡೆಯತಕ್ಕ ಕನಿಷ್ಠ ಅಂಕಗಳು:	3
(ಇ)	ಲಿಖಿತ ಪರೀಕ್ಷೆಯಲ್ಲಿ ಮತ್ತು ಮೌಖಿಕ ಪರೀಕ್ಷೆಯಲ್ಲಿ ಒಟ್ಟಿಗೆ ಪಡೆಯತಕ್ಕ ಕನಿಷ್ಠ ಅಂಕಗಳು:	35

10.0 ವಿವಿಧ ಪ್ರವರ್ಗಗಳ ಅಡಿ ಮೀಸಲಾತಿ ಕೋರುವ ಅಭ್ಯರ್ಥಿಗಳು ಸಲ್ಲಿಸಬೇಕಾದ ಮೂಲ ದಾಖಲೆ/ಪ್ರಮಾಣ ಪತ್ರಗಳ ವಿವರ ಕೆಳಕಂಡಂತಿದೆ.

ವಿವಿಧ ಪ್ರವರ್ಗಗಳ ಅಡಿ ಮೀಸಲಾತಿ ಕೋರಿ ಅರ್ಜಿ ಸಲ್ಲಿಸುವವರು ಜಾತಿ ಪ್ರಮಾಣ ಪತ್ರ ಇತ್ಯಾದಿ ಮೀಸಲಾತಿ ಕುರಿತು ಮೂಲ ಪ್ರಮಾಣ ಪತ್ರಗಳನ್ನು ಈ ಕೆಳಕಂಡ ನಮೂನೆಗಳಲ್ಲಿ ಹೊಂದಿರಬೇಕು ಮತ್ತು ಸೂಚಿತ ದಿನಾಂಕದಂದು ಸದರಿ ಮೂಲ ದಾಖಲೆ/ಪ್ರಮಾಣ ಪತ್ರಗಳನ್ನು ಆಯ್ಕೆ ಪ್ರಾಧಿಕಾರದ ಎದುರು ಪರಿಶೀಲನೆಗೆ ತಪ್ಪದೆ ಹಾಜರುಪಡಿಸತಕ್ಕದ್ದು.

10.1	ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಅಭ್ಯರ್ಥಿಗಳು ಸಂಬಂಧಪಟ್ಟ ತಹಶೀಲ್ದಾರ್‌ರವರಿಂದ ನೀಡಲಾದ ಜಾತಿ ಪ್ರಮಾಣ ಪತ್ರವನ್ನು **"ನಮೂನೆ-ಡಿ"** ರಲ್ಲಿ ಪಡೆದಿರಬೇಕು.
10.2	ಮಾಜಿ ಸೈನಿಕ ಅಭ್ಯರ್ಥಿಗಳು ಸಂಬಂಧಪಟ್ಟ ಘಟಕದಿಂದ ಡಿಸ್‌ಚಾರ್ಜ್ ಹೊಂದಿದ ಬಗ್ಗೆ ಮೂಲ ಪ್ರಮಾಣ ಪತ್ರ ಮತ್ತು ಪೆನ್‌ಷನ್ ಪಡೆಯುತ್ತಿರುವ ಬಗ್ಗೆ ದಾಖಲೆ ಪತ್ರ ಪಡೆದಿರಬೇಕು ಹಾಗೂ ಮಾಜಿ ಸೈನಿಕ ಮೀಸಲಾತಿಗೆ ನಿಯಮಾನುಸಾರ ಅರ್ಹರೇ ಎಂಬ ಬಗ್ಗೆ ಪ್ರಮಾಣ ಪತ್ರವನ್ನು ಹತ್ತಿರದ ಸೈನಿಕ ಕಲ್ಯಾಣ ಹಾಗೂ ಪುನರ್ವಸತಿ ಇಲಾಖೆಯಿಂದ ಪಡೆದಿರಬೇಕು.
10.3	ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡದ ಅಭ್ಯರ್ಥಿಗಳು 1ನೇ ತರಗತಿಯಿಂದ 10ನೇ ತರಗತಿಯವರೆಗೆ (ಎಲ್ಲಾ ವರ್ಷಗಳು) ಗ್ರಾಮೀಣ ಪ್ರದೇಶದ ಶಾಲೆಗಳಲ್ಲಿ ವಿದ್ಯಾಭ್ಯಾಸ ಮಾಡಿದ ಬಗ್ಗೆ ಸಂಬಂಧಪಟ್ಟ ಶಾಲಾ ಮುಖ್ಯೋಪಾಧ್ಯಾಯರಿಂದ ನೀಡಲಾದ **"ನಮೂನೆ-2"**ನ್ನು ಕ್ಷೇತ್ರ ಶಿಕ್ಷಣಾಧಿಕಾರಿಗಳು ಮೇಲುರುಜು ಮಾಡಿದ ಪ್ರಮಾಣ ಪತ್ರವನ್ನು ಪಡೆದಿರಬೇಕು. **ವಿಶೇಷ ಸೂಚನೆ:-** ಗ್ರಾಮೀಣ ಮೀಸಲಾತಿ ಕೋರುವ ಪರಿಶಿಷ್ಠ ಜಾತಿ, ಪರಿಶಿಷ್ಠ ಪಂಗಡಗಳಿಗೆ ಸೇರಿದ ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರಗಳು ತಿರಸ್ಕೃತಗೊಂಡಲ್ಲಿ ಅವರು ಗ್ರಾಮೀಣ ಮೀಸಲಾತಿಗೂ ಅನರ್ಹರಾಗುತ್ತಾರೆ.
10.4	ಪ್ರಸ್ತುತ ಸರ್ಕಾರಿ (ಕೇಂದ್ರ ಸರ್ಕಾರ/ಕರ್ನಾಟಕ ರಾಜ್ಯ ಸರ್ಕಾರ/ಇತರ ರಾಜ್ಯಗಳು) ಹಾಗೂ ಸಂಸ್ಥೆಗಳಲ್ಲಿ ಅಥವಾ ಪ್ರಾಧಿಕಾರದಲ್ಲಿ ಸೇವೆ ಸಲ್ಲಿಸುತ್ತಿರುವ ಅಭ್ಯರ್ಥಿಗಳು ಸಂಬಂಧಿಸಿದ ನೇಮಕಾತಿ ಪ್ರಾಧಿಕಾರದಿಂದ ಅನುಮತಿ ಪತ್ರವನ್ನು ಪಡೆದಿಟ್ಟುಕೊಂಡಿರಬೇಕು ಹಾಗೂ ಮೂಲ ದಾಖಲೆಗಳ ಪರೀಶೀಲನೆಯ ವೇಳೆ ಅವುಗಳನ್ನು ಹಾಜರುಪಡಿಸತಕ್ಕದ್ದು.
10.5	ವಿಧವೆಯರು ಈ ಕೆಳಕಂಡ ಮೂಲ ದಾಖಲಾತಿಗಳನ್ನು ಪರಿಶೀಲನೆಯ ವೇಳೆ ಹಾಜರುಪಡಿಸತಕ್ಕದ್ದು.
	(ಅ) ಸಕ್ಷಮ ಪ್ರಾಧಿಕಾರದಿಂದ ಪಡೆದ ಪತಿಯ ಮರಣದ ಸಮರ್ಥನೆ ಪತ್ರ
	(ಆ) ಸಕ್ಷಮ ಪ್ರಾಧಿಕಾರದಿಂದ ಪಡೆದ ಜೀವಿತ ಸದಸ್ಯರ ದೃಢೀಕರಣ ಪತ್ರ
	(ಇ) ಪುನರ್ ವಿವಾಹ ಮಾಡಿಕೊಂಡಿಲ್ಲವೆಂಬ ಬಗ್ಗೆ ಜ್ಯುಡಿಶಿಯಲ್ ಮೊದಲನೆ ದರ್ಜೆ ನ್ಯಾಯಾಧೀಶರ ಮುಂದೆ ಪ್ರಮಾಣೀಕರಿಸಿದ ಪ್ರಮಾಣ ಪತ್ರ.
10.6	ಸರ್ಕಾರಿ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 52 ಎಸ್‌ಆರ್‌ಆರ್ 99 ದಿನಾಂಕ 8-11-2002 ರಲ್ಲಿ ಗುರುತಿಸಲ್ಪಟ್ಟಿರುವ ಹುದ್ದೆಗೆ ನಿಗದಿಪಡಿಸಿರುವ ಅಂಗವಿಕಲತೆ ಹೊಂದಿರುವ ಅಭ್ಯರ್ಥಿಗಳಿಗೆ ಮಾತ್ರ ವಯೋಮಿತಿಯಲ್ಲಿ ಸಡಿಲಿಕೆ ಇರುತ್ತದೆ. ಈ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರವನ್ನು ದಿನಾಂಕ 19.11.2005ರ ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ: ಸಿಆಸುಇ 115 ಸೇನೆನಿ 2005ರಲ್ಲಿ ನಿಗದಿಪಡಿಸಿದ ನಮೂನೆಯಲ್ಲಿ ಅಂಗವಿಕಲತೆಯ ಬಗ್ಗೆ ಜಿಲ್ಲಾ ಮಟ್ಟದ ವೈದ್ಯಕೀಯ ಮಂಡಳಿಯಿಂದ ಪ್ರಮಾಣ ಪತ್ರವನ್ನು ಪಡೆದಿಟ್ಟುಕೊಂಡಿರಬೇಕು.
10.7	ಅವಶ್ಯವೆಂದು ಭಾವಿಸುವ ಇನ್ನಿತರ ಮೂಲ ದಾಖಲೆ/ಪ್ರಮಾಣ ಪತ್ರಗಳು.

11.0 ಗಮನಿಸಬೇಕಾದ ಬಹು ಮುಖ್ಯ ಅಂಶಗಳು

11.1	ಅಭ್ಯರ್ಥಿಗಳು ಒಂದಕ್ಕಿಂತ ಹೆಚ್ಚಿನ ಹುದ್ದೆಗಳಿಗೆ ಅರ್ಜಿ ಸಲ್ಲಿಸಲು ಇಚ್ಛಿಸಿದಲ್ಲಿ, ಅಂತಹ ಅಭ್ಯರ್ಥಿಗಳು ಪ್ರತಿ ಹುದ್ದೆಗೆ ನಿಗದಿಪಡಿಸಿದ ಅರ್ಜಿ ನಮೂನೆಯಲ್ಲಿಯೇ ಪ್ರತ್ಯೇಕವಾಗಿ ಅರ್ಜಿ ಸಲ್ಲಿಸತಕ್ಕದ್ದು.
11.2	ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಿದ ಮಾತ್ರಕ್ಕೆ ಅಭ್ಯರ್ಥಿಯು ಆಯ್ಕೆಗೆ ಅರ್ಹತೆ ಪಡೆಯುವುದಿಲ್ಲ.
11.3	ಅಭ್ಯರ್ಥಿಗಳು ತಮ್ಮ ಮಾಹಿತಿಗಾಗಿ ಭರ್ತಿ ಮಾಡಿ ಸಲ್ಲಿಸಿದ ಅರ್ಜಿಯ ಒಂದು ಜೆರಾಕ್ಸ್ ಪ್ರತಿಯನ್ನು ತಮ್ಮೊಂದಿಗೆ ತಪ್ಪದೇ ಇಟ್ಟುಕೊಳ್ಳತಕ್ಕದ್ದು.
11.4	ಅಭ್ಯರ್ಥಿಗಳು ನಿಗದಿತ ಅರ್ಜಿಯಲ್ಲಿ ನಮೂದಿಸಿರುವ ಮಾಹಿತಿ/ವಿವರಗಳ ಆಧಾರದ ಮೇಲೆ ಅವರ ಅರ್ಹತೆಯನ್ನು ಪರಿಗಣಿಸಿ 1:1 (ಖಾಲಿ ಹುದ್ದೆ : ಅಭ್ಯರ್ಥಿ) ಅನುಪಾತದ ತಾತ್ಕಾಲಿಕ ಆಯ್ಕೆ ಪಟ್ಟಿಯನ್ನು ಸಿದ್ಧಪಡಿಸುವುದರಿಂದ

	ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವಾಗ ಅಸ್ಪಷ್ಟ/ಅಪೂರ್ಣ/ತಪ್ಪು ಅಥವಾ ಸುಳ್ಳು ಮಾಹಿತಿ ನೀಡಬಾರದು. ಅಸ್ಪಷ್ಟ/ಅಪೂರ್ಣ/ತಪ್ಪು ಅಥವಾ ಸುಳ್ಳು ಮಾಹಿತಿ ನೀಡಿದ್ದಲ್ಲಿ ಅಭ್ಯರ್ಥಿಗಳೇ ಅದಕ್ಕೆ ನೇರ ಮತ್ತು ಸಂಪೂರ್ಣ ಜವಾಬ್ದಾರರಾಗುತ್ತಾರೆ. ಅಭ್ಯರ್ಥಿಗಳು ನಿಗದಿತ ಅರ್ಜಿಯಲ್ಲಿ ನೀಡಿರುವ ಮಾಹಿತಿ/ವಿವರಗಳನ್ನು ಯಾವುದೇ ಹಂತದಲ್ಲಿಯೂ ಬದಲಾವಣೆ ಮಾಡಲು ಅವಕಾಶ ನೀಡಲಾಗುವುದಿಲ್ಲ. ಆದ ಪ್ರಯುಕ್ತ ಅಭ್ಯರ್ಥಿಗಳು ಅರ್ಜಿಯನ್ನು ಭರ್ತಿ ಮಾಡುವಾಗ ಈ ಕಚೇರಿಯ ಅಧಿಸೂಚನೆ ದಿನಾಂಕ:16-11-2009 ರಲ್ಲಿ ತಿಳಿಸಿರುವ ಎಲ್ಲಾ ಅಂಶಗಳನ್ನು ಸರಿಯಾಗಿ ಅರ್ಥೈಸಿಕೊಂಡು, ಅರ್ಜಿಯನ್ನು ಸರಿಯಾಗಿ ಮತ್ತು ಸಮರ್ಪಕವಾಗಿ ಭರ್ತಿ ಮಾಡತಕ್ಕದ್ದು.
11.5	ಪ್ರವರ್ಗದ ಮೀಸಲಾತಿಯಲ್ಲಿ ಆಯ್ಕೆ ಬಯಸುವ ಅಭ್ಯರ್ಥಿಗಳು ಅರ್ಜಿಯಲ್ಲಿ ಸಂಬಂಧಿಸಿದ ಪ್ರವರ್ಗದ ಕಾಲಂ ಅನ್ನು ಕಡ್ಡಾಯವಾಗಿ ನಮೂದಿಸಬೇಕು. ಈ ಕಾಲಂ ಅನ್ನು ಭರ್ತಿ ಮಾಡದೆ ಖಾಲಿ ಬಿಟ್ಟಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು. ಯಾವುದೇ ಹಂತದಲ್ಲಿ ಅಭ್ಯರ್ಥಿಯು ತಾನು ಹೊಂದಿರುವ ಪ್ರವರ್ಗದ ಕುರಿತು ಮಾಹಿತಿಯನ್ನು ಹೊಸದಾಗಿ ಸೇರ್ಪಡೆ ಮಾಡಲು ಅಥವಾ ಬದಲಾವಣೆ ಮಾಡಲು ಅವಕಾಶವಿಲ್ಲ.
11.6	ಅರ್ಜಿಯಲ್ಲಿ ಸರಿಯಾದ ಮಾಹಿತಿ ನೀಡುವುದು ಅಭ್ಯರ್ಥಿಗಳ ಜವಾಬ್ದಾರಿಯಾಗಿರುತ್ತದೆ. ಪೂರ್ಣ ಮಾಹಿತಿ ನೀಡದ ಅಥವಾ ತಪ್ಪು ಮಾಹಿತಿ ನೀಡಿದ, ಅಭ್ಯರ್ಥಿ ಸಹಿ ಇಲ್ಲದ ಮತ್ತು ಅಭ್ಯರ್ಥಿಯ ಭಾವಚಿತ್ರ ಅಂಟಿಸದ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಮತ್ತು ತತ್ಸಬಂಧ ಯಾವುದೇ ಪತ್ರ ವ್ಯವಹಾರಕ್ಕೆ ಅವಕಾಶವಿರುವುದಿಲ್ಲ.
11.7	ಅರ್ಜಿಗಳನ್ನು ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕ ಹಾಗೂ ಸಮಯದ ನಂತರ ಸ್ವೀಕೃತವಾದ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ ಹಾಗೂ ಅರ್ಜಿಗಳು ಮೇಲೆ ತಿಳಿಸಿರುವ ವಿಳಾಸಕ್ಕೆ ತಲುಪಲು ವಿಳಂಬವಾದರೆ ಅಥವಾ ಸ್ವೀಕೃತವಾಗದೇ ಇರುವುದಕ್ಕೆ ಆಯ್ಕೆ ಪ್ರಾಧಿಕಾರವು ಜವಾಬ್ದಾರಿಯಲ್ಲ.
11.8	ಒಬ್ಬನೇ ಅಭ್ಯರ್ಥಿಯು ಒಂದೇ ಹುದ್ದೆಗೆ ಒಂದಕ್ಕಿಂತ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಲ್ಲಿ, ತಾನು ಸಲ್ಲಿಸಿರುವ ಎಲ್ಲಾ ಅರ್ಜಿಗಳಲ್ಲಿಯೂ ಒಂದೇ ರೀತಿ ಮಾಹಿತಿಯನ್ನು ನೀಡಿದಲ್ಲಿ ಅಭ್ಯರ್ಥಿ ಸಲ್ಲಿಸಿರುವ ಯಾವುದಾದರೂ ಒಂದು ಅರ್ಜಿಯನ್ನು ಮಾತ್ರ ಪರಿಗಣಿಸಲಾಗುವುದು. ಈ ವಿಷಯದಲ್ಲಿ ಆಯ್ಕೆ ಪ್ರಾಧಿಕಾರದ ತೀರ್ಮಾನವೇ ಅಂತಿಮವಾಗಿರುತ್ತದೆ.
11.9	ಅಭ್ಯರ್ಥಿಯು ಒಂದೇ ಹುದ್ದೆಗೆ ಒಂದಕ್ಕಿಂತ ಹೆಚ್ಚಿನ ಅರ್ಜಿ ಭರ್ತಿ ಮಾಡಿ ಬೇರೆ ಬೇರೆ ಅರ್ಜಿಗಳಲ್ಲಿ ವಿಭಿನ್ನವಾದ ಮಾಹಿತಿಗಳನ್ನು ನಮೂದಿಸಿದ್ದಲ್ಲಿ ಅಂತಹ ಅಭ್ಯರ್ಥಿಯು ಸಲ್ಲಿಸಿದ ಎಲ್ಲಾ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
11.10	ಅಭ್ಯರ್ಥಿಯು ಶೀಘ್ರಲಿಪಿಗಾರ, ದ್ವಿತೀಯ ದರ್ಜೆ ಸಹಾಯಕ ಹಾಗೂ ಬೆರಳಚ್ಚುಗಾರ ಈ ಮೂರೂ ಹುದ್ದೆಗಳಿಗೆ ಅರ್ಜಿಗಳನ್ನು ಸಲ್ಲಿಸಿ, ಈ ಮೂರೂ ಹುದ್ದೆಗಳ ಅರ್ಜಿಗಳಲ್ಲಿ ಭಿನ್ನ ಭಿನ್ನವಾದ ಮಾಹಿತಿಗಳನ್ನು ನಮೂದಿಸಿದ್ದಲ್ಲಿ ಅಂತಹ ಅಭ್ಯರ್ಥಿಯು ಸಲ್ಲಿಸಿರುವ ಮೂರೂ ಅರ್ಜಿಗಳನ್ನು ತಿರಸ್ಕರಿಸಲಾಗುವುದು.
11.11	ಯಾವುದೇ ಅಭ್ಯರ್ಥಿಯು ತನ್ನ ಆಯ್ಕೆಗೆ ಸಂಬಂಧಿಸಿದಂತೆ ಬಾಹ್ಯ ಒತ್ತಡ ತರಲು ಪ್ರಯತ್ನಿಸಿದಲ್ಲಿ ಅಂತಹ ಅಭ್ಯರ್ಥಿಯನ್ನು ಆಯ್ಕೆ ಪ್ರಕ್ರಿಯೆಯಿಂದ ಅನರ್ಹಗೊಳಿಸಲಾಗುವುದು.
11.12	ಕರ್ನಾಟಕ ರಾಜ್ಯದ ಯಾವುದೇ ಸರ್ಕಾರಿ ಇಲಾಖೆ, ಕೇಂದ್ರ ಸರ್ಕಾರಿ ಇಲಾಖೆ ಅಥವಾ ಅರೆ ಸರ್ಕಾರಿ ಸ್ವಾಮ್ಯದ ಸಂಸ್ಥೆಯ ಸೇವೆಯಿಂದ ವಜಾಗೊಂಡಿರುವ ನೌಕರರು ನೇಮಕಾತಿಗೆ ಅರ್ಹರಲ್ಲ.
11.13	ಕಾನೂನು ಬಾಹಿರವೆಂದು ಘೋಷಿಸಲಾದ ಸಂಸ್ಥೆ/ಸಂಸ್ಥೆಗಳು ಅಥವಾ ಸಂಘದ/ಸಂಘಗಳ ಸದಸ್ಯರಾಗಿದ್ದರೆ ಅಥವಾ ಇನ್ನಾವುದೇ ರೀತಿಯಲ್ಲಿ ಅಂತಹ ಸಂಸ್ಥೆ/ಸಂಸ್ಥೆಗಳು ಅಥವಾ ಸಂಘ/ಸಂಘಗಳೊಂದಿಗೆ ನಿಕಟ ಸಂಪರ್ಕ ಹೊಂದಿದ್ದರೆ ಅಂತಹ ವ್ಯಕ್ತಿ ನೇಮಕಾತಿಗೆ ಅರ್ಹರಾಗುವುದಿಲ್ಲ.
11.14	ಅಭ್ಯರ್ಥಿಯು ಸಮಾಜಘಾತುಕ ಕೃತ್ಯಗಳಲ್ಲಿ ತೊಡಗಿ ಅಪರಾಧಿಯಾಗಿದ್ದರೆ ಅಂತಹ ವ್ಯಕ್ತಿಗಳು ನೇಮಕಾತಿಗೆ ಅರ್ಹರಾಗುವುದಿಲ್ಲ.
11.15	ಒಬ್ಬರಿಗಿಂತ ಹೆಚ್ಚು ಜೀವಂತ ಪತ್ನಿಯರನ್ನು / ಪತಿಯರನ್ನು ಹೊಂದಿದ ಪುರುಷ / ಮಹಿಳಾ ಅಭ್ಯರ್ಥಿಗಳು ಸರ್ಕಾರದ ಪೂರ್ವಾನುಮತಿ ಇಲ್ಲದೇ ನೇಮಕಾತಿಗೆ ಅರ್ಹರಾಗಿರುವುದಿಲ್ಲ.
11.16	ಯಾವುದೇ ಅಭ್ಯರ್ಥಿಯು ಕೇಂದ್ರ ಅಥವಾ ಯಾವುದೇ ರಾಜ್ಯ ಸರ್ಕಾರ / ಸರ್ಕಾರಿ ಸಂಸ್ಥೆಗಳು ನಡೆಸುವ ಯಾವುದೇ ಪರೀಕ್ಷೆಗಳಿಗೆ ಅಥವಾ ಆಯ್ಕೆಗಳಿಗೆ ಹಾಜರಾಗಲು ತಾತ್ಕಾಲಿಕವಾಗಿ ಬಹಿಷ್ಕರಿಸಲ್ಪಟ್ಟದ್ದರೆ ಅಥವಾ ಖಾಯಂ ಆಗಿ ಅನರ್ಹಗೊಂಡಿದ್ದರೆ ಅಥವಾ ಬಹಿಷ್ಕರಿಸಲ್ಪಟ್ಟಿದ್ದರೆ, ಅಂತಹ ಅಭ್ಯರ್ಥಿಯು ನೇಮಕಾತಿಗೆ ಅರ್ಹರಾಗಿರುವುದಿಲ್ಲ.
11.17	ಅಭ್ಯರ್ಥಿಯು ತಪ್ಪು ಮಾಹಿತಿಗಳನ್ನು ಅರ್ಜಿಯಲ್ಲಿ ನಮೂದಿಸಿದಲ್ಲಿ ಅಥವಾ ಕೃತ್ರಿಮ ಅಥವಾ ತಿದ್ದಿದ ದಾಖಲಾತಿಗಳನ್ನು ಅಥವಾ ಅಸತ್ಯ ವಿವರಗಳನ್ನು ನೀಡಿದಲ್ಲಿ ಅಥವಾ ಸತ್ಯ ವಿಷಯಗಳನ್ನು ಮರೆಮಾಚಿದ ಅಥವಾ ಅನುಚಿತ ಮಾರ್ಗಗಳನ್ನು ಉಪಯೋಗಿಸಿದಲ್ಲಿ ಅಥವಾ ಪ್ರಯತ್ನಿಸಿದಲ್ಲಿ ಈ ನೇಮಕಾತಿಗೆ ಅವರನ್ನು ಅನರ್ಹರೆಂದು ಪರಿಗಣಿಸಲಾಗುವುದು ಮತ್ತು ಕರ್ನಾಟಕ ನಾಗರಿಕ ಸೇವೆಗಳು (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಉಪ ನಿಯಮ 20 ರಂತೆ ಅಪರಾಧಿ ವ್ಯವಹರಣೆಗೆ ಒಳಪಡುವರು.

11.18	ಸರ್ಕಾರಿ ಆದೇಶ ಸಂಖ್ಯೆ: ಎಫ್‌ಡಿ-ಎಸ್‌ಪಿಎಲ್-04-ಪಿಇಟಿ-2005 ದಿನಾಂಕ 31-3-2006 ರಂತೆ ಅಂಶದಾಯಿ ನಿವೃತ್ತಿ ಯೋಜನೆ (Contributory Pension Scheme) ಗೆ ಈ ನೇಮಕಾತಿಯಲ್ಲಿ ಆಯ್ಕೆಯಾದ ಅಭ್ಯರ್ಥಿಗಳು ಬದ್ಧರಾಗಿರುತ್ತಾರೆ.
11.19	ಆಯ್ಕೆ ಮತ್ತು ನೇಮಕಾತಿ ಪ್ರಕ್ರಿಯೆಯ ಯಾವುದೇ ಹಂತದಲ್ಲಿ ಆಯ್ಕೆಗೆ ಪರಿಗಣಿಸಿರುವ ಅಂಶಗಳ ಬಗ್ಗೆ ವ್ಯತ್ಯಾಸ ಕಂಡು ಬಂದಲ್ಲಿ ಅಥವಾ ಆಕ್ಷೇಪಣೆ ಸಲ್ಲಿಕೆಯಾದಲ್ಲಿ, ಕೋರ್ಟು ತೀರ್ಪುಗಳು, ಸರಕಾರದ ನಿರ್ದೇಶನಗಳು, ಇಲಾಖೆ ಸುತ್ತೋಲೆಗಳು ಬಂದಲ್ಲಿ, ಪ್ರಕಟಿಸಿರುವ ಆಯ್ಕೆ ಪಟ್ಟಿಯಲ್ಲಿ ಸೂಕ್ತ ಬದಲಾವಣೆ ಮಾಡಿ ಆಯ್ಕೆ ಪಟ್ಟಿ ಪರಿಷ್ಕರಿಸುವ ಅಧಿಕಾರವನ್ನು ಆಯ್ಕೆ ಪ್ರಾಧಿಕಾರವು ಹೊಂದಿರುತ್ತದೆ.
11.20	ಒಂದು ವೇಳೆ ಅಧಿಸೂಚನೆಯಲ್ಲಿ ನಮೂದಿಸಿರುವ ಹುದ್ದೆಗಳ ಸಂಖ್ಯೆಯಲ್ಲಿ ಕಡಿತ ಅಥವಾ ಹೆಚ್ಚುವರಿ ಆದಲ್ಲಿ ಮತ್ತು ಮೀಸಲಾತಿ ವರ್ಗೀಕರಣದಲ್ಲಿ ಏನಾದರೂ ಬದಲಾವಣೆ ಮಾಡಬೇಕಾದ ಅವಶ್ಯಕತೆ ಕಂಡು ಬಂದಲ್ಲಿ ಬದಲಾವಣೆ ಮಾಡಲಾಗುವುದು ಮತ್ತು ಬದಲಾದ ವಿವರಗಳನ್ನು ಇಲಾಖಾ ವೆಬ್‌ಸೈಟ್: **www.karnatakaforest.gov.in** ನಲ್ಲಿ ಪ್ರಕಟಿಸಲಾಗುವುದು.

ಬೆಂಗಳೂರು, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ

ದಿನಾಂಕ: 16-11-2009. ಮತ್ತು ಆಯ್ಕೆ ಪ್ರಾಧಿಕಾರ.

ಕರ್ನಾಟಕ ಅರಣ್ಯ ಇಲಾಖೆ

ದ್ವಿತೀಯ ದರ್ಜೆ ಸಹಾಯಕರ (ಬ್ಯಾಕ್‌ಲಾಗ್) ಹುದ್ದೆಗೆ ಅರ್ಜಿ

ಅಧಿಸೂಚನೆ ಸಂಖ್ಯೆ: ಬಿ9-ಬ್ಯಾಕ್‌ಲಾಗ್-ನೇಮಕಾತಿ-ವಿವ-3/2009-10 ದಿನಾಂಕ 16-11-2009

ಅಧಿಸೂಚನೆ ದಿನಾಂಕ 16-11-2009ರ ನಂತರ ತೆಗೆಸಿದ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ.

ಅರ್ಜಿಯನ್ನು ಭರ್ತಿ ಮಾಡಲು ಸೂಚನೆಗಳು:

i) ಕನ್ನಡ ಭಾಷೆಯ ದಪ್ಪ ಅಥವಾ ಆಂಗ್ಲ ಭಾಷೆಯ Capital ಅಕ್ಷರಗಳಲ್ಲಿ ಭರ್ತಿ ಮಾಡಬೇಕು

ii) ಅಪೂರ್ಣ/ತಪ್ಪು/ಅಸ್ಪಷ್ಟ/ಸುಳ್ಳು ಮಾಹಿತಿ ಭರ್ತಿ ಮಾಡಬಾರದು.

iii) ಅರ್ಜಿಯನ್ನು ಸ್ಪಷ್ಟವಾಗಿ ಭರ್ತಿ ಮಾಡಬೇಕು

1 ಅಭ್ಯರ್ಥಿಯ ಹೆಸರು

2 ತಂದೆಯ / ಗಂಡನ / ಪೋಷಕರ ಹೆಸರು

3 ಪತ್ರ ವ್ಯವಹಾರಕ್ಕಾಗಿ ಪೂರ್ಣ ವಿಳಾಸ (ಅಭ್ಯರ್ಥಿಯ ಹೆಸರು ಹೊರತುಪಡಿಸಿ)

ಪಿನ್ ಕೋಡ್

4 ಅಭ್ಯರ್ಥಿಯ ಸ್ಥಿರ/ಮೊಬೈಲ್ ದೂರವಾಣಿ ಸಂಖ್ಯೆ

ದಿನ ತಿಂಗಳು ವರ್ಷ

5 ಜನ್ಮ ದಿನಾಂಕ - -

6 ಲಿಂಗ (ಸೂಕ್ತ ಅಂಕಣವನ್ನು √ ಮಾಡಿ) ಪುರುಷ ಸ್ತ್ರೀ

7 ವಿದ್ಯಾರ್ಹತೆ (ಸೂಕ್ತ ಅಂಕಣವನ್ನು √ ಮಾಡಿ) ಎಸ್‌ಎಸ್‌ಎಲ್‌ಸಿ ತತ್ಸಮಾನ ಪರೀಕ್ಷೆ

ನಿಗದಿಪಡಿಸಿದ ಗರಿಷ್ಠ ಅಂಕಗಳು ಗಳಿಸಿದ ಒಟ್ಟು ಅಂಕಗಳು

8 ಅಂಕಗಳು: ಎಸ್‌ಎಸ್‌ಎಲ್‌ಸಿ/ತತ್ಸಮಾನ ಪರೀಕ್ಷೆ

9 ಮೀಸಲಾತಿ ಪ್ರವರ್ಗ (ಸೂಕ್ತ ಅಂಕಣವನ್ನು √ ಮಾಡಿ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ

10 ಸಮತಲ ಮೀಸಲಾತಿ (ಸೂಕ್ತ ಅಂಕಣವನ್ನು √ ಮಾಡಿ) ಮಹಿಳೆ ಮಾಜಿ ಸೈನಿಕ ಅಂಗವಿಕಲ ಗ್ರಾಮೀಣ ಇತರೆ

11 ಅಭ್ಯರ್ಥಿಯು ಮಾಜಿ ಸೈನಿಕರಾದಲ್ಲಿ ಮಾತ್ರ ಸಶಸ್ತ್ರ ಪಡೆಗಳಲ್ಲಿ ಸಲ್ಲಿಸಿದ ಸೇವಾವಧಿ

ವರ್ಷ ತಿಂಗಳು ದಿನ

 - -

12 ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ ಮಾತ್ರ ಈ ಅಂಕಣವನ್ನು √ ಮಾಡಿ

ಘೋಷಣಾ ಪತ್ರ

ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿ/ವಿವರಗಳು ನನ್ನ ತಿಳುವಳಿಕೆ ಮಟ್ಟಿಗೆ ಸತ್ಯ ಹಾಗೂ ಪರಿಪೂರ್ಣವೆಂದು ನಂಬಿರುತ್ತೇನೆ. ಯಾವುದಾದರೂ ತಪ್ಪು/ಸುಳ್ಳು ಮಾಹಿತಿ ನೀಡಿರುವುದು ಕಂಡು ಬಂದಲ್ಲಿ ನನ್ನ ಅರ್ಜಿಯನ್ನು ತಿರಸ್ಕರಿಸುವ, ಒಂದು ವೇಳೆ ಬ್ಯಾಕ್‌ಲಾಗ್ ಹುದ್ದೆಗೆ ನೇಮಕಾತಿಯಾದಲ್ಲಿ ನನ್ನನ್ನು ಸೇವೆಯಿಂದ ಯಾವುದೇ ಮುನ್ಸೂಚನೆ ಇಲ್ಲದೆ ವಜಾ ಮಾಡುವ ಹಾಗೂ ನನ್ನ ವಿರುದ್ಧ ತತ್ಸಬಂಧ ಕ್ರಿಮಿನಲ್ ಕ್ರಮ ಕೈಗೊಳ್ಳಲು ಇಲಾಖೆಗೆ ಅಧಿಕಾರವಿದೆಯೆಂದು ತಿಳಿದಿದ್ದೇನೆ. ಅಲ್ಲದೆ, ನಾನು ಈವರೆಗೆ ಯಾವುದೇ ಕಾನೂನು/ಕ್ರಿಮಿನಲ್ ಮೊಕದ್ದಮೆಗಳನ್ವಯ ಶಿಕ್ಷೆಗೆ ಒಳಪಟ್ಟಿಲ್ಲವೆಂದು ಸಹ ದೃಢೀಕರಿಸುತ್ತೇನೆ.

ಸ್ಥಳ:

ದಿನಾಂಕ:

ಅಭ್ಯರ್ಥಿಯ ಸಹಿ

ಕರ್ನಾಟಕ ಅರಣ್ಯ ಇಲಾಖೆ
ಬೆರಳಚ್ಚುಗಾರರ (ಬ್ಯಾಕ್‌ಲಾಗ್) ಹುದ್ದೆಗೆ ಅರ್ಜಿ

ಅಧಿಸೂಚನೆ ಸಂಖ್ಯೆ: ಬಿ9–ಬ್ಯಾಕ್‌ಲಾಗ್–ನೇಮಕಾತಿ–ವಿವ–3/2009–10 ದಿನಾಂಕ 16–11–2009

ಅಧಿಸೂಚನೆ ದಿನಾಂಕ 16–11–2009ರ ನಂತರ ತೆಗೆಸಿದ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ.

ಅರ್ಜಿಯನ್ನು ಭರ್ತಿ ಮಾಡಲು ಸೂಚನೆಗಳು:

i) ಕನ್ನಡ ಭಾಷೆಯ ದಪ್ಪ ಅಥವಾ ಆಂಗ್ಲ ಭಾಷೆಯ Capital ಅಕ್ಷರಗಳಲ್ಲಿ ಭರ್ತಿ ಮಾಡಬೇಕು
ii) ಅಪೂರ್ಣ/ತಪ್ಪು/ಅಸ್ಪಷ್ಟ/ಸುಳ್ಳು ಮಾಹಿತಿ ಭರ್ತಿ ಮಾಡಬಾರದು.
iii) ಅರ್ಜಿಯನ್ನು ಸ್ಪಷ್ಟವಾಗಿ ಭರ್ತಿ ಮಾಡಬೇಕು

1 ಅಭ್ಯರ್ಥಿಯ ಹೆಸರು

2 ತಂದೆಯ / ಗಂಡನ / ಪೋಷಕರ ಹೆಸರು

3 ಪತ್ರ ವ್ಯವಹಾರಕ್ಕಾಗಿ ಪೂರ್ಣ ವಿಳಾಸ (ಅಭ್ಯರ್ಥಿಯ ಹೆಸರು ಹೊರತುಪಡಿಸಿ)

ಪಿನ್ ಕೋಡ್

4 ಅಭ್ಯರ್ಥಿಯ ಸ್ಥಿರ/ಮೊಬೈಲ್ ದೂರವಾಣಿ ಸಂಖ್ಯೆ

ದಿನ ತಿಂಗಳು ವರ್ಷ

5 ಜನ್ಮ ದಿನಾಂಕ - -

6 ಲಿಂಗ (ಸೂಕ್ತ ಅಂಕಣವನ್ನು √ ಮಾಡಿ) ಪುರುಷ ಸ್ತ್ರೀ

7 ವಿದ್ಯಾರ್ಹತೆ (ಸೂಕ್ತ ಅಂಕಣವನ್ನು √ ಮಾಡಿ) ಎಸ್‌ಎಸ್‌ಎಲ್‌ಸಿ ತತ್ಸಮಾನ ಪರೀಕ್ಷೆ

8 ಇತರೆ ವಿದ್ಯಾರ್ಹತೆ ಕನ್ನಡ ಸೀನಿಯರ್ ಬೆರಳಚ್ಚು / ತತ್ಸಮಾನ ಪರೀಕ್ಷೆ

ನಿಗದಿಪಡಿಸಿದ ಗರಿಷ್ಠ ಅಂಕಗಳು ಗಳಿಸಿದ ಒಟ್ಟು ಅಂಕಗಳು

9 ಅಂಕಗಳು
i) ಎಸ್‌ಎಸ್‌ಎಲ್‌ಸಿ/ತತ್ಸಮಾನ ಪರೀಕ್ಷೆ
ii) ಕನ್ನಡ ಸೀನಿಯರ್ ಬೆರಳಚ್ಚು / ತತ್ಸಮಾನ ಪರೀಕ್ಷೆ

10 ಮೀಸಲಾತಿ ಪ್ರವರ್ಗ (ಸೂಕ್ತ ಅಂಕಣವನ್ನು √ ಮಾಡಿ) ಪರಿಶಿಷ್ಟ ಜಾತಿ ಪರಿಶಿಷ್ಟ ಪಂಗಡ

11 ಸಮತಲ ಮೀಸಲಾತಿ (ಸೂಕ್ತ ಅಂಕಣವನ್ನು √ ಮಾಡಿ) ಮಹಿಳೆ ಮಾಜಿ ಸೈನಿಕ ಗ್ರಾಮೀಣ ಇತರೆ

12 ಅಭ್ಯರ್ಥಿಯು ಮಾಜಿ ಸೈನಿಕರಾದಲ್ಲಿ ಮಾತ್ರ ಸಶಸ್ತ್ರ ಪಡೆಗಳಲ್ಲಿ ಸಲ್ಲಿಸಿದ ಸೇವಾವಧಿ

ವರ್ಷ ತಿಂಗಳು ದಿನ

- -

13 ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ ಮಾತ್ರ ಈ ಅಂಕಣವನ್ನು √ ಮಾಡಿ

ಘೋಷಣಾ ಪತ್ರ

ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿ/ವಿವರಗಳು ನನ್ನ ತಿಳುವಳಿಕೆ ಮಟ್ಟಿಗೆ ಸತ್ಯ ಹಾಗೂ ಪರಿಪೂರ್ಣವೆಂದು ನಂಬಿರುತ್ತೇನೆ. ಯಾವುದಾದರೂ ತಪ್ಪು/ಸುಳ್ಳು ಮಾಹಿತಿ ನೀಡಿರುವುದು ಕಂಡು ಬಂದಲ್ಲಿ ನನ್ನ ಅರ್ಜಿಯನ್ನು ತಿರಸ್ಕರಿಸುವ, ಒಂದು ವೇಳೆ ಬ್ಯಾಕ್‌ಲಾಗ್ ಹುದ್ದೆಗೆ ನೇಮಕಾತಿಯಾದಲ್ಲಿ ನನ್ನನ್ನು ಸೇವೆಯಿಂದ ಯಾವುದೇ ಮುನ್ಸೂಚನೆ ಇಲ್ಲದೆ ವಜಾ ಮಾಡುವ ಹಾಗೂ ನನ್ನ ವಿರುದ್ಧ ತತ್ಸಬಂಧ ಕ್ರಿಮಿನಲ್ ಕ್ರಮ ಕೈಗೊಳ್ಳಲು ಇಲಾಖೆಗೆ ಅಧಿಕಾರವಿದೆಯೆಂದು ತಿಳಿದಿದ್ದೇನೆ. ಅಲ್ಲದೆ, ನಾನು ಈವರೆಗೆ ಯಾವುದೇ ಕಾನೂನು/ಕ್ರಿಮಿನಲ್ ಮೊಕದ್ದಮೆಗಳನ್ವಯ ಶಿಕ್ಷೆಗೆ ಒಳಪಟ್ಟಿಲ್ಲವೆಂದು ಸಹ ದೃಢೀಕರಿಸುತ್ತೇನೆ.

ಸ್ಥಳ:

ದಿನಾಂಕ:

ಅಭ್ಯರ್ಥಿಯ ಸಹಿ

ಕರ್ನಾಟಕ ಅರಣ್ಯ ಇಲಾಖೆ

ಶೀಘ್ರಲಿಪಿಗಾರ (ಬ್ಯಾಕ್‌ಲಾಗ್) ಹುದ್ದೆಗೆ ಅರ್ಜಿ (ಪರಿಶಿಷ್ಟ ಪಂಗಡದವರಿಗೆ ಮಾತ್ರ)

ಅಧಿಸೂಚನೆ ಸಂಖ್ಯೆ: ಬಿ9-ಬ್ಯಾಕ್‌ಲಾಗ್-ನೇಮಕಾತಿ-ಏವ-3/2009-10 ದಿನಾಂಕ 16-11-2009

ಅಧಿಸೂಚನೆ ದಿನಾಂಕ 16-11-2009ರ ನಂತರ ತೆಗೆಸಿದ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರ ಅಂಟಿಸಿ.

ಅರ್ಜಿಯನ್ನು ಭರ್ತಿ ಮಾಡಲು ಸೂಚನೆಗಳು:

i) ಕನ್ನಡ ಭಾಷೆಯ ವಪ್ಪ ಅಥವಾ ಆಂಗ್ಲ ಭಾಷೆಯ Capital ಅಕ್ಷರಗಳಲ್ಲಿ ಭರ್ತಿ ಮಾಡಬೇಕು

ii) ಅಪೂರ್ಣ/ತಪ್ಪು/ಅಸ್ಪಷ್ಟ/ಸುಳ್ಳು ಮಾಹಿತಿ ಭರ್ತಿ ಮಾಡಬಾರದು.

iii) ಅರ್ಜಿಯನ್ನು ಸ್ಪಷ್ಟವಾಗಿ ಭರ್ತಿ ಮಾಡಬೇಕು

1 ಅಭ್ಯರ್ಥಿಯ ಹೆಸರು

2 ತಂದೆಯ / ಗಂಡನ / ಪೋಷಕರ ಹೆಸರು

3 ಪತ್ರ ವ್ಯವಹಾರಕ್ಕಾಗಿ ಪೂರ್ಣ ವಿಳಾಸ (ಅಭ್ಯರ್ಥಿಯ ಹೆಸರು ಹೊರತುಪಡಿಸಿ)

ಪಿನ್ ಕೋಡ್

4 ಅಭ್ಯರ್ಥಿಯ ಸ್ಥಿರ/ಮೊಬೈಲ್ ದೂರವಾಣಿ ಸಂಖ್ಯೆ

5 ಜನ್ಮ ದಿನಾಂಕ — ದಿನ - ತಿಂಗಳು - ವರ್ಷ

6 ಲಿಂಗ (ಸೂಕ್ತ ಅಂಕಣವನ್ನು √ ಮಾಡಿ) — ಪುರುಷ / ಸ್ತ್ರೀ

7 ವಿದ್ಯಾರ್ಹತೆ (ಸೂಕ್ತ ಅಂಕಣವನ್ನು √ ಮಾಡಿ) — ಎಸ್‌ಎಸ್‌ಎಲ್‌ಸಿ / ತತ್ಸಮಾನ ಪರೀಕ್ಷೆ

8 ಇತರೆ ವಿದ್ಯಾರ್ಹತೆ (ಸೂಕ್ತ ಅಂಕಣವನ್ನು √ ಮಾಡಿ) — ಕನ್ನಡ ಸೀನಿಯರ್ ಬೆರಳಚ್ಚು / ತತ್ಸಮಾನ ಪರೀಕ್ಷೆ / ಕನ್ನಡ ಸೀನಿಯರ್ ಶೀಘ್ರಲಿಪಿ / ತತ್ಸಮಾನ ಪರೀಕ್ಷೆ

9 ಅಂಕಗಳು

	ನಿಗದಿಪಡಿಸಿದ ಗರಿಷ್ಠ ಅಂಕಗಳು	ಗಳಿಸಿದ ಒಟ್ಟು ಅಂಕಗಳು
i) ಎಸ್‌ಎಸ್‌ಎಲ್‌ಸಿ/ತತ್ಸಮಾನ ಪರೀಕ್ಷೆ		
ii) ಕನ್ನಡ ಸೀನಿಯರ್ ಬೆರಳಚ್ಚು /ತತ್ಸಮಾನ ಪರೀಕ್ಷೆ		
iii) ಕನ್ನಡ ಸೀನಿಯರ್ ಶೀಘ್ರಲಿಪಿ/ತತ್ಸಮಾನ ಪರೀಕ್ಷೆ		

10 ಮೀಸಲಾತಿ ಪ್ರವರ್ಗ (ಅಂಕಣವನ್ನು √ ಮಾಡಿ) — ಪರಿಶಿಷ್ಟ ಪಂಗಡ

11 ಸಮತಲ ಮೀಸಲಾತಿ (ಸೂಕ್ತ ಅಂಕಣವನ್ನು √ ಮಾಡಿ) — ಮಾಜಿ ಸೈನಿಕ / ಇತರ

12 ಅಭ್ಯರ್ಥಿಯು ಮಾಜಿ ಸೈನಿಕರಾದಲ್ಲಿ ಮಾತ್ರ ಸಶಸ್ತ್ರ ಪಡೆಗಳಲ್ಲಿ ಸಲ್ಲಿಸಿದ ಸೇವಾವಧಿ — ವರ್ಷ - ತಿಂಗಳು - ದಿನ

13 ಅಭ್ಯರ್ಥಿಯು ವಿಧವೆಯಾಗಿದ್ದಲ್ಲಿ ಮಾತ್ರ ಈ ಅಂಕಣವನ್ನು √ ಮಾಡಿ

ಘೋಷಣಾ ಪತ್ರ

ಅರ್ಜಿಯಲ್ಲಿ ನಮೂದಿಸಿರುವ ಎಲ್ಲಾ ಮಾಹಿತಿ/ವಿವರಗಳು ನನ್ನ ತಿಳುವಳಿಕೆ ಮಟ್ಟಿಗೆ ಸತ್ಯ ಹಾಗೂ ಪರಿಪೂರ್ಣವೆಂದು ನಂಬಿರುತ್ತೇನೆ. ಯಾವುದಾದರೂ ತಪ್ಪು/ಸುಳ್ಳು ಮಾಹಿತಿ ನೀಡಿರುವುದು ಕಂಡು ಬಂದಲ್ಲಿ ನನ್ನ ಅರ್ಜಿಯನ್ನು ತಿರಸ್ಕರಿಸುವ, ಒಂದು ವೇಳೆ ಬ್ಯಾಕ್‌ಲಾಗ್ ಹುದ್ದೆಗೆ ನೇಮಕಾತಿಯಾದಲ್ಲಿ ನನ್ನನ್ನು ಸೇವೆಯಿಂದ ಯಾವುದೇ ಮುನ್ಸೂಚನೆ ಇಲ್ಲದೆ ವಜಾ ಮಾಡುವ ಹಾಗೂ ನನ್ನ ವಿರುದ್ಧ ತತ್ಸಂಬಂಧ ಕ್ರಿಮಿನಲ್ ಕ್ರಮ ಕೈಗೊಳ್ಳಲು ಇಲಾಖೆಗೆ ಅಧಿಕಾರವಿದೆಯೆಂದು ತಿಳಿದಿದ್ದೇನೆ. ಅಲ್ಲದೆ, ನಾನು ಈವರೆಗೆ ಯಾವುದೇ ಕಾನೂನು/ಕ್ರಿಮಿನಲ್ ಮೊಕದ್ದಮೆಗಳನ್ವಯ ಶಿಕ್ಷೆಗೆ ಒಳಪಟ್ಟಿಲ್ಲವೆಂದು ಸಹ ದೃಢೀಕರಿಸುತ್ತೇನೆ.

ಸ್ಥಳ:

ದಿನಾಂಕ: ಅಭ್ಯರ್ಥಿಯ ಸಹಿ

ಪಿ.ಆರ್. 977

IN THE COURT OF THE IV ADDL.CITY CIVIL JUDGE
MAYOHALL, BANGALORE, CCH-21
P & S.C.NO.25039/2009 HG: 27/11/2009

PETITIONER

1. Dilshad Begum W/o Late Syed Ameer Jan @ S.A. Sultan 56 yrs
2. Syed Saleem Pasha S/o Late Syed Ameer Jan @ S.A.Sultan 40 yrs
3. Syed Zameer Pasha S/o Late Syed Ameer Jan @ S.A.Sultan 35 yrs
4. Syed Habeeb Pasha S/o Late Syed Ameer Jan @ S.A.Sultan 34 yrs
   1 to 4 R/at # 4, Old No.2 Balaji Layout Davis Road St.Thomas Town Post, Bangalore-84.
5. Yasmeen Khan W/o Dr.Zeeshan Khan D/o Late Syed Ameer Jan @ S.A.Sultan, 37 yrs
   R/t # 3, Jermaiah Road, Frazer Town, Bangalore-5

V/s

RESPONDENT

Nil

PUBLIC NOTICE

Notice is hereby given that a petition has been made to this Court under Sec 372, of the Indian Succession Act, for grant of Succession Certificate in respect of amount, shares, dividends lying in the name of syed Ameer Jan @ S.A.Sultan., who died on 17/05/2009 at Bangalore.

Be it known that No caveat has been entered and the said petition is posted for hearing on 27/11/2009 at 11'O clock. Any person's claiming to have any interest may come and participate in the proceedings before grant of Succession Certificate to the petitioners.

SCHEDULE

1. HSBC, with Customer Number 071-560858
2. Canara Bank, Hoskote Branch, A/c No.497
3. Town co-operative Bank Ltd., Hoskote Branch, A/c No.1982.

Given under my hand and the seal of the Court, this the 30th day of October 2009

By Order of the Court
Assistant Registrar,
City Civil Court, Mayo Hall Unit, Bangalore.

P.D. 128

IN THE COURT OF THE IV ADDL.CITY CIVIL JUDGE
MAYOHALL, BANGALORE, CCH-21
P & S.C.NO.25031/2009 HG: 21/11/2009

PETITIONER

1. Sri Anthony I.Brito S/o of late Sri H.H.Brito Businessman, 55 years R/at at 4 Langford Road, Bangalore-25
2. Smt Genevieve T.Mascarenhas W/o Sri Hugh Mascarenhas, House wife, aged 54 yrs, c/o Dr. Vinay Prabhu, Dept of Radiology M.S.Ramaiah Memorial Hospital, New B.E.L. Road, Bangalore-560054

V/s

RESPONDENT

1. Sri High G.Brito S/o late Sri H.H. Brito 57 yrs
2. Ralph S.Brito S/o late H.H. Brito 45 yrs Both R/at 4 Langford Road, Bangalore-25

PUBLIC NOTICE

Notice is hereby given that a petition has been made to this Court under Sec 270&278 of the Indian Succession Act, for grant of Letter of Administration in respect of the property of the deceased late Sri H.H.Brito, Who died on 25/6/86 at Nashik East.

Be it known that No caveat has been entered and the said petition is posted for hearing on 21/11/2009 at 11'O clock. Any person's claiming to have any interest may come and participate in the proceedings before grant of Letter of Administration to the petitioners.

SCHEDULE

All that piece and parcel of residential premises bearing No.4 previously No.19 Langford Road, Shanthinagar, Bangalore-25 and bounded on the East by 3/2 Langford Road West by: Oleff Road North by:Langford Road South by: 21, Moyenville Road and measuring 95 feet and North 90 feet on the south 91 feet on the east and 116 feet west together with the compound walls on the North south and west along with all the building standing thereon the total area is 9800 sq

Property situated at Jeppinamogaru A Village and Attavar ward Mangalore, D.K.

R.S No.	T.S.No	EXTENT A-C	NAME OF THE MULGENT TENANT
73-15	840-2	0-28	Panduranga Pai
73-13	840-3	0-23	Panduranga Pai
73-02	840-9	0-09	A.Thaniappa
72-25B	-	0-15	Isabella Lobo
840-8&9			Carine Lobo

Given under my hand and the seal of the Court, this the 30th day of October 2009

By Order of the Court

P.D. 129

Assistant Registrar,

City Civil Court Mayo Hall Unit, Bangalore.

IN THE COURT OF THE IV ADDL.CITY CIVIL JUDGE

MAYOHALL, BANGALORE, CCH-21

P & S.C.NO.25035/2009 HG: 21/11/2009

PETITIONER

1. Smt Devi Hari Kumar 26 yrs W/o late Sri S.Hari Kumar
2. Harshita age 1 year D/o late S.Hari Kumar since minor represented by her mother natural guardian Smt Devi Hari Kumar Both R/at No.36, 8th Main, 9th Cross, Hoysala Nagar, T.C.Palya R.M.Nagar Post, Bangalore.

V/s

RESPONDENT

NIL

PUBLIC NOTICE

Notice is hereby given that a petition has been made to this Court under Sec 372 of the Indian Succession Act, for grant of Succession Certificate in respect of the assets of the deceased late Sri S. Hari Kumar, Who died on 26/4/09 at Bangalore.

Be it known that No caveat has been entered and the said petition is posted for hearing on 21/11/2009 at 11'O clock. Any person's claiming to have any interest may come and participate in the proceedings before grant of Succession Certificate to the petitioners.

SCHEDULE

Life Insurance of Rs.5,00,000/- Covered by the TATA AIG

Given under my hand and the seal of the Court, this the 30th day of October 2009

By Order of the Court

P.D. 130

Assistant Registrar,

City Civil Court, Mayo Hall Unit, Bangalore.

IN THE COURT OF THE IV ADDL.CITY CIVIL JUDGE
MAYOHALL, BANGALORE, CCH-21
P & S.C.NO.25037/2009 HG: 30/11/2009

PETITIONER

1) S. Vijaya Rangan 61 yrs 2) S.Mani 56 yrs 3) S.Sukumaran 51 yrs 4) Shantha 54 yrs 5) Vijayalakshmi 6) S.Selvarani 37 yrs All S/o & D/o Late Swaminathan @ Saminathan Smt Late Pattammal 7) Sheela D/o late S.Shekhar Grand daughter of late Pattammal 31 yrs 8) Sumathi Kumar D/o late S.Shekhar Grand daughter of late pattammal 28 yrs 9) S.Raja Shekar S/o late S.Shekhar Grand son of late pattammal 26 yrs 10) Iresh Shekhar W/o late S.Shekhar 51 yrs All are presently residing at No.15/A, Chandrappa Lane, Jeevana Halli, Cox town, Bangalore-5.

V/s

RESPONDENT

Nil

PUBLIC NOTICE

Notice is hereby given that a petition has been made to this Court under Sec 372, of the Indian Succession Act, for grant of Succession Certificate in respect of amount, of late Sri Swaminathan @ Saminathan and Smt.Late pattammal who died on 17/05/2009 at Bangalore.

Be it known that No caveat has been entered and the said petition is posted for hearing on 30/11/2009 at 11'O clock. Any person's claiming to have any interest may come and participate in the proceedings before grant of Succession Certificate to the petitioners.

SCHEDULE

1. Ashraya Deposit Canara Bank 2,54,435
2. Ashraya Deposit Canara Bank 54,257
3. Ashraya Deposit Canara Bank 12,718

Given under my hand and the seal of the Court, this the 30th day of October 2009

By Order of the Court
Assistant Registrar,
City Civil Court, Mayo Hall Unit, Bangalore.

P.D. 131

FORM - IV
(See Rule 12)
NOTICE

It is hereby notified that the undersigned has changed his/her name from **BASAPPA. GOLLALAPPA. HARIJAN** to **BASAVARAJ. GOLLALAPPA. PHATTEPUR**

BASAPPA. GOLLALAPPA. HARIJAN

P.D. 174

FORM - IV
(See Rule 12)
NOTICE

It is hereby notified that the undersigned has changed his/her name from **BHEEMAPPA. YAMANAPPA. HOLER** to **BHEEMAPPA. YAMANAPPA. SOMANAL**

BHEEMAPPA. YAMANAPPA. HOLER

P.D. 175

FORM - IV
(See Rule 12)
NOTICE

It is hereby notified that the undersigned has changed his/her name from **PRAKASH** to **A.PRAKASH**

PRAKASH

P.D. 176

ಉಡುಪಿ ಜಿಲ್ಲಾ ಪಂಚಾಯತ್

ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರ ಕಛೇರಿ, ಜಿಲ್ಲಾ ಪಂಚಾಯತ್, ಉಡುಪಿ

ಅಧಿಸೂಚನೆ

ಸಂಖ್ಯೆ:ಜಿಪಂಉ:ಆಡಳಿತ:177:2003-04, ದಿನಾಂಕ: 13ನೇ ಆಗಸ್ಟ್ 2009

ವಿಷಯ: ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್-1 ಬ್ಯಾಕ್‌ಲಾಗ್ ಹುದ್ದೆಯ ಆಯ್ಕೆಪಟ್ಟಿಯನ್ನು ಪ್ರಕಟಿಸುವ ಬಗ್ಗೆ.

ಉಲ್ಲೇಖ: 1. ಕರ್ನಾಟಕ ರಾಜ್ಯ ಪತ್ರದ ಪ್ರಕಟಣೆ ದಿನಾಂಕ: 2.10.2003.

2. ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶ ದಿನಾಂಕ: 19.06.2009.

ಸರಕಾರದ ಆದೇಶ ಸಂಖ್ಯೆ: ಡಿಪಿಎಆರ್/13/ಎಸ್‌ಬಿಸಿ/2001 ದಿನಾಂಕ: 21.11.2001 ರಂತೆ ಈ ಕಛೇರಿಯ ಅಧಿಸೂಚನೆ ಸಂಖ್ಯೆ: ಜಿಪಂಉ/ಆಡಳಿತ/177/2003-04 ದಿನಾಂಕ: 26.08.2003 ರಲ್ಲಿ ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್-1 ಮತ್ತು ಗ್ರೇಡ್-2 ಹುದ್ದೆಯ ಆಯ್ಕೆ ಪಟ್ಟಿಯನ್ನು ಪ್ರಕಟಿಸಲಾಗಿತ್ತು. ಸದ್ರಿ ಆಯ್ಕೆ ಪಟ್ಟಿಯಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾಖಲಾದ ಅರ್ಜಿ ಸಂಖ್ಯೆ: 4765/2003ಕ್ಕೆ ಸಂಬಂಧಿಸಿದಂತೆ ನೀಡಿದ ಮಧ್ಯಂತರ ಆದೇಶದಂತೆ ದಾವೆಯು ತೀರ್ಮಾನವಾಗುವ ತನಕ ಆಯ್ಕೆ ಪಟ್ಟಿಯ ಕ್ರ.ಸಂ. 2 ರಲ್ಲಿ ನಮೂದಿಸಿದ ಶ್ರೀ ದಯಾನಂದ ಹಣಮಾಕರ, ಬಿನ್ ಶಿವಪ್ಪ ಹಣಮಾಕರ, ಅಂಚೆ: ಬಿಜ್ಜರಗಿ, ಬಿಜಾಪುರ ಜಿಲ್ಲೆ ಇವರ ಆಯ್ಕೆಯನ್ನು ತಡೆಹಿಡಿಯಲಾಗಿತ್ತು.

ಪ್ರಸ್ತುತ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ಆದೇಶ ದಿನಾಂಕ: 19.06.2009 ರಲ್ಲಿ ನೀಡಿದ ತೀರ್ಪಿನಂತೆ ಕೆ.ಎ.ಟಿ. ಅರ್ಜಿ ಸಂಖ್ಯೆ: 4765/2003 ನ್ನು ವಜಾಗೊಳಿಸಲಾಗಿರುತ್ತದೆ. ಆದ್ದರಿಂದ ಆಯ್ಕೆ ಪಟ್ಟಿಯ ಕ್ರ.ಸಂ. 2 ರಲ್ಲಿ ನಮೂದಿಸಿದ ಶ್ರೀ ದಯಾನಂದ ಹಣಮಾಕರ, ಬಿನ್ ಶಿವಪ್ಪ ಹಣಮಾಕರ, ಅಂಚೆ: ಬಿಜ್ಜರಗಿ, ಬಿಜಾಪುರ ಜಿಲ್ಲೆ ಇವರನ್ನು ಗ್ರಾಮ ಪಂಚಾಯತ್ ಕಾರ್ಯದರ್ಶಿ ಗ್ರೇಡ್-1 ಹುದ್ದೆಗೆ ಆಯ್ಕೆ ಮಾಡಲಾಗಿದೆ. ಅಭ್ಯರ್ಥಿಯು ನೇಮಕಾತಿ ಆದೇಶದಲ್ಲಿ ನಿಗದಿಪಡಿಸಿದ ದಿವಸದೊಳಗೆ ಸಂಬಂಧಪಟ್ಟ ಮೂಲ ಪ್ರಮಾಣ ಪತ್ರಗಳನ್ನು ಹಾಜರುಪಡಿಸದೇ ಕರ್ತವ್ಯಕ್ಕೆ ಹಾಜರಾಗದೇ ಇದ್ದಲ್ಲಿ ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ದಿನಾಂಕ: 19.06.2009 ರಲ್ಲಿ ನೀಡಿರುವ ಆದೇಶದಂತೆ ನಿಯಮಾನುಸಾರ ಮುಂದಿನ ಕ್ರಮ ಜರುಗಿಸಲಾಗುವುದು.

ಮುಖ್ಯ ಕಾರ್ಯನಿರ್ವಹಣಾಧಿಕಾರಿ,
ಜಿಲ್ಲಾ ಪಂಚಾಯತ್, ಉಡುಪಿ.

ಪಿ.ಡಿ. 127

ಶಿಕ್ಷಣ ಇಲಾಖೆ

ಅಧಿಸೂಚನೆ

ಸಂಖ್ಯೆ: ಇಡಿ 210 ಡಿಸಿಇ 2008(8), ಬೆಂಗಳೂರು, ದಿನಾಂಕ: 23ನೇ ಸೆಪ್ಟೆಂಬರ್ 2009

ಕಾಲೇಜು ಶಿಕ್ಷಣ ಇಲಾಖೆಯ ವಿವಿಧ ಹುದ್ದೆಗಳಿಗೆ ಕರ್ನಾಟಕ ಲೋಕಸೇವಾ ಆಯೋಗದಿಂದ ಅರ್ಜಿಗಳನ್ನು ಆಹ್ವಾನಿಸಿ ನೇಮಕಾತಿ ಪ್ರಕ್ರಿಯೆಯನ್ನು ಪ್ರಾರಂಭಿಸಿದ್ದುದು ಸರಿಯಷ್ಟೆ. ಕರ್ನಾಟಕ ಲೋಕಸೇವಾ ಆಯೋಗವು ಆಯ್ಕೆ ಪ್ರಕ್ರಿಯೆಯನ್ನು ಪೂರೈಸಿ ತದನಂತರ ಮತ್ತು ಆಯೋಗವು ಸಲ್ಲಿಸಿದ ಆಯ್ಕೆ ಪಟ್ಟಿಯಂತೆ ಈ ಕೆಳಕಂಡ ಅಭ್ಯರ್ಥಿಗಳನ್ನು ಕಾಲೇಜು ಶಿಕ್ಷಣ ಇಲಾಖೆಯಲ್ಲಿ ವಿವಿಧ ವಿಷಯಗಳ ಉಪನ್ಯಾಸಕರ ಹುದ್ದೆಗಳಿಗೆ 02 ವರ್ಷಗಳ ಪರಿವೀಕ್ಷಣಾ ಅವಧಿಯ ಮೇರೆಗೆ ವೇತನ ಶ್ರೇಣಿ ರೂ.8000-275-13500 ರಲ್ಲಿ ಈ ಮೂಲಕ ನೇಮಕಾತಿ ಮಾಡಲಾಗಿದೆ.

ಸಮಾಜಶಾಸ್ತ್ರ

ಕ್ರಮ ಸಂಖ್ಯೆ	KPSC ಕ್ರ. ಸಂ.	ಅಭ್ಯರ್ಥಿಗಳ ಹೆಸರು ಮತ್ತು ವಿಳಾಸ	ಸ್ನಾತಕೋತ್ತರ ಪದವಿಯ ಜೊತೆಗೆ ಪಡೆದುಕೊಂಡಿರುವ ವಿದ್ಯಾರ್ಹತೆ			
1		ಸಾಂತಮ್ಮ ಬಿನ್ ಶಿದ್ದಪ್ಪ ಸಂಕ್ಲೀಪುರ	15/2	ಖುಷ್ಕಿ	13	ಇದೇ ಸ.ನಂ.ನ ಭೂಸ್ವಾಧೀನವಾದ ಜಮೀನು	14	15/1	3–00	

ಪಿ.ಆರ್. 490

ಜಿಲ್ಲಾಧಿಕಾರಿಗಳು, ದಾವಣಗೆರೆ ಜಿಲ್ಲೆ, ದಾವಣಗೆರೆ

ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಂಗಳೂರು ಜಿಲ್ಲೆ, ಬೆಂಗಳೂರು

ಭೂ ಸ್ವಾಧೀನ ಕಾಯ್ದೆ ಕಲಂ 4(1) ಮತ್ತು 17(1) ಮತ್ತು (4)ರ ಅನ್ವಯ ಅಧಿಸೂಚನೆ

ಕ್ರಮಾಂಕ: ಎಲ್ಎಕ್ಯು : ಎಸ್ಆರ್ : 03/09–10, ದಿನಾಂಕ: 16ನೇ ಅಕ್ಟೋಬರ್ 2009

ಈ ಮುಂದಿನ ಅನುಸೂಚಿಯಲ್ಲಿ ಸೂಚಿಸಿರುವ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ ಭಾರತೀಯ ಚಂದ್ರಯಾನ ಯೋಜನೆ–1 ಇದರಟಿ ಟೆಲ್ಮೆಂಟರಿ ಟ್ರಾಕಿಂಗ್ ಮತ್ತು ಕಮಾಂಡ್ ಮತ್ತು ವಿಜ್ಞಾನ ಮಾಹಿತಿ ಪಡೆಯಲು ಸ್ಪೇಸ್ ನೆಟ್ ವರ್ಕ್ ಕೇಂದ್ರ ಸ್ಥಾಪನೆ ಉದ್ದೇಶಕ್ಕಾಗಿ ಭಾರತ ಬಾಹ್ಯಾಕಾಶ ಇಲಾಖೆ ಬೆಂಗಳೂರು ಪರ ಭೂ ಸ್ವಾಧೀನಪಡಿಸಿಕೊಳ್ಳಬೇಕಾಗಿದೆ. ಎಂದು ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರಿಗೆ ಕಂಡು ಬಂದಿರುತ್ತದೆ.

1991ನೇ ಸಾಲಿನ ಕರ್ನಾಟಕ ಸರ್ಕಾರದ ಅಧಿನಿಯಮ 33 ತಿದ್ದುಪಡಿಯಾದ 1984ನೇ ಸಾಲಿನ ಭೂ ಸ್ವಾಧೀನ ಕಾಯ್ದೆಯ ತಿದ್ದುಪಡಿಯಾದ 1894ನೇ ಭೂ ಸ್ವಾಧೀನ ಕಾಯ್ದೆ ಕಲಂ 4(1)ರ ಪ್ರಕಾರ ಸದರಿ ಜಮೀನುಗಳು ಮೇಲ್ಕಂಡ ಉದ್ದೇಶಕ್ಕಾಗಿ ಬೇಕೆಂದು ಪ್ರಕಟಿಸಿದ ಹಾಗೂ ಸದರಿ ಕಾಯ್ದೆಯ 4(2)ನೆಯ ಪ್ರಕಟಣೆಯಿಂದ ವಿಹಿತವಾದ ಅಧಿಕಾರಗಳನ್ನು ಉಪಯೋಗಿಸಲು ವಿಶೇಷ ಭೂ ಸ್ವಾಧೀನಾಧಿಕಾರಿಗಳು, 3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಬೆಂಗಳೂರು–1 ಇವರಿಗೆ ಮತ್ತು ಸಿಬ್ಬಂದಿ ವರ್ಗದವರಿಗೆ ಈ ಮೂಲಕ ಅಧಿಕಾರ ವಹಿಸಿಕೊಡಲಾಗಿದೆ.

ಭೂ ಸ್ವಾಧೀನ ಕಾಯ್ದೆಯ ಪ್ರಕರಣದ 17(1)ರ ಉಪಪ್ರಕರಣದ (4)ರಲ್ಲಿ ವಿಧಿವತ್ತಾಗಿರುವ ಅಧಿಕಾರದ ಪ್ರಕಾರ ಕರ್ನಾಟಕ ಸರ್ಕಾರದಿಂದ ತುರ್ತು ಶಾಸನ ರೀತ್ಯಾ 5(ಎ) ಪ್ರಕರಣವು ಇದಕ್ಕೆ ಅನ್ವಯಿಸುವುದಿಲ್ಲ.

ಭೂ ಸ್ವಾಧೀನ ಕಾಯ್ದೆಗೆ ಅನುಗುಣವಾಗಿ ಸದರಿ ಜಮೀನಿನ ಅಧಿಕೃತ ಸಂಗ್ರಹಣೆಗಾಗಿ ನಿಯೋಜಿಸಲ್ಪಟ್ಟ ಯಾವೊಬ್ಬ ಮೋಜಣಿದಾರರ ಅಥವಾ ಈ ಕೆಲಸಕ್ಕೆ ನೇಮಿಸಲ್ಪಟ್ಟಿರುವ ಅಧಿಕಾರಿಗಳಿಗೆ ಅಡಚಣೆಯನ್ನುಂಟುಮಾಡುವುದಾಗಲೀ ಅಥವಾ ಅತಿಕ್ರಮಿಸುವುದಾಗಲೀ ಮಾಡಬಾರದೆಂದು ಈ ಮೂಲಕ ಎಚ್ಚರಿಕೆ ಕೊಡಲಾಗಿದೆ. ಸದರಿ ಜಮೀನಿನ ವಿಲೇವಾರಿಗಾಗಿ ಗುತ್ತಿಗೆ, ಅಡಮಾನ, ಹಸ್ತಾಂತರ, ವಿನಿಮಯ ಅಥವಾ ಇನ್ನಾವುದೇ ರೀತಿಯ ಒಪ್ಪಂದಗಳನ್ನು ಅಥವಾ ಯಾವೊಂದು ವೆಚ್ಚ ಅಭಿವೃದ್ಧಿಗಳನ್ನು ಈ ಅಧಿಸೂಚನೆ ಪ್ರಕಟವಾದ ನಂತರ ವಿಶೇಷ ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ಇವರ ಮಂಜೂರಾತಿಯನ್ನು ಪಡೆಯದೇ ಮಾಡಿದ ಪಕ್ಷದಲ್ಲಿ ಅಂತಿಮವಾಗಿ ಅಧಿಕೃತ ಸಂಗ್ರಹಣೆ ಮಾಡಲಾಗುವ ಸದರಿ ಜಮೀನಿನ ಅಂತಹ ಭಾಗಗಳಿಗೆ ಪರಿಹಾರ ಧನವನ್ನು ನಿರ್ಧರಿಸುವ ಅಧಿಕಾರಿಯಿಂದ ಸದರಿ ಅಧಿನಿಯಮ 24ನೇ ಪ್ರಕರಣ 7ನೇ ಖಂಡದ ಮೇರೆಗೆ ಉಪೇಕ್ಷಿಸಲಾಗುವುದು.

ಅನುಸೂಚಿ

ಜಿಲ್ಲೆ: ಬೆಂಗಳೂರು **ತಾಲ್ಲೂಕು: ಬೆಂಗಳೂರು ದಕ್ಷಿಣ** **ಹೋಬಳಿ: ತಾವರೆಕೆರೆ** **ಗ್ರಾಮ: ಚುಂಚನಕುಪ್ಪೆ**

ಕ್ರ. ಸಂ.	ಖಾತೆದಾರರ ಹೆಸರು	ಅನುಭವದಾರರ ಹೆಸರು	ಸರ್ವೆ ನಂ.	ತರಹೆ	ಚಕ್ಕುಬಂದಿ				ಭೂ ಸ್ವಾಧೀನಕ್ಕೆ ಬೇಕಾದ	
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ವಿಸ್ತೀರ್ಣ	ಆಕಾರ
1.	ಸಿ. ವಿಶ್ವಾಸ್ ಬಿ ನ್ ಎಲ್. ಚಂದ್ರಮು ೩೯	ಸಿ. ವಿಶ್ವಾಸ್	16:33 ರ ಜಮೀನು	ಖುಷ್ಕಿ	16:33 ರ ಉಳಿಕೆ ಜಮೀನು	ಬಾಹ್ಯಾಕಾಶ ಇಲಾಖೆಗೆ ಭೂ ಸ್ವಾಧೀನವಾಗಿರುವ ಜಮೀನು	ಸನಂ 16 ರ ಜಮೀನು	ಬಾಹ್ಯಾಕಾಶ ಇಲಾಖೆಗೆ ಭೂ ಸ್ವಾಧೀನವಾಗಿರುವ ಜಮೀನು	3–00	3–20

ಪಿ.ಆರ್. 493

ವಿಶೇಷ ಜಿಲ್ಲಾಧಿಕಾರಿಗಳು,
ಬೆಂಗಳೂರು ಜಿಲ್ಲೆ, ಬೆಂಗಳೂರು.

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ-27

ನಂ. ಎಲ್.ಎನ್.ಡಿ/ಸಿ.ಆರ್/59/06-07, ದಿನಾಂಕ: 16ನೇ ಅಕ್ಟೋಬರ್ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಗುಂಡುತೋಪು ಜಮೀನಾಗಿರುತ್ತದೆ. ಅದರಂತೆ ಅರೇನೂರು ಗ್ರಾಮದ ಸ.ನಂ. 79 ರಲ್ಲಿ ವಿಸ್ತೀರ್ಣ 1-32 (ಎ-ಗುಂ) ಜಮೀನಿನ ಪೈಕಿ 0-20 ಗುಂ ಶಾಲಾ ಕಟ್ಟಡ, 1-12 ಗುಂ ಆಟದ ಮೈದಾನಕ್ಕಾಗಿ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.79 ಜಮೀನಿನಲ್ಲಿ 1-32 (ಎ-ಗುಂ) ಜಮೀನನ್ನು ಸಾರ್ವಜನಿಕವಾಗಿ 0-20 ಗುಂ ಶಾಲಾ ಕಟ್ಟಡ, 1-12 ಗುಂ ಆಟದ ಮೈದಾನ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಗುಂಡುತೋಪು ಜಮೀನನ್ನು 0-20 ಗುಂ ಶಾಲಾ ಕಟ್ಟಡ, 1-12 ಗುಂ ಆಟದ ಮೈದಾನ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಗುಂಡುತೋಪು ಜಮೀನಿನ 1-32 (ಎ-ಗುಂ) ಜಮೀನನ್ನು ಶಾಲಾ ಕಟ್ಟಡ, ಆಟದ ಮೈದಾನಕ್ಕಾಗಿ ಸಾರ್ವಜನಿಕವಾಗಿ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು	ತಾಲ್ಲೂಕು: ಆನೇಕಲ್	ಗ್ರಾಮ: ಅರೇನೂರು
ಸ.ನಂ.- 79	ವಿಸ್ತೀರ್ಣ: 1-32 (ಎ-ಗುಂ)	ವರ್ಗೀಕರಣ: ಗುಂಡುತೋಪು

ಪೂರ್ವಕ್ಕೆ - ಸ.ನಂ.80
ಪಶ್ಚಿಮಕ್ಕೆ - ಸರ್ಕಾರಿ ಗೋಮಾಳ ಜಮೀನು
ಉತ್ತರಕ್ಕೆ - ಸ.ನಂ.94, 70
ದಕ್ಷಿಣಕ್ಕೆ - ಓಣಿ, ಸ.ನಂ. 93

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 462

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ-27

ನಂ. ಎಲ್.ಎನ್.ಡಿ/ಸಿ.ಆರ್/206/09-10, ದಿನಾಂಕ: 5/10ನೇ ಸೆಪ್ಟೆಂಬರ್ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ಖರಾಬು ಜಮೀನಾಗಿರುತ್ತದೆ. ಅದರಂತೆ ಅತ್ತಿಬೆಲೆ ಗ್ರಾಮದ ಸ.ನಂ. 395 ರಲ್ಲಿ ವಿಸ್ತೀರ್ಣ 0-11 (ಎ-ಗುಂ) ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ಅಂದರೆ 0-02 ಗುಂ ಶಾಲೆಗೆ ಮತ್ತು 0-09 ಗುಂ ರಸ್ತೆ (ರಾಷ್ಟ್ರೀಯ ಹೆದ್ದಾರಿ ಎನ್.ಹೆಚ್.7)ಗೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.395 ಜಮೀನಿನಲ್ಲಿ 0-11 (ಎ-ಗುಂ) ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಶಾಲೆ ಮತ್ತು ರಸ್ತೆ (ರಾಷ್ಟ್ರೀಯ ಹೆದ್ದಾರಿ) ಗೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಖರಾಬು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಶಾಲೆ ಮತ್ತು ರಸ್ತೆ

(ರಾಷ್ಟ್ರೀಯ ಹೆದ್ದಾರಿ ಎನ್.ಹೆಚ್.7) ಗೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ಖರಾಬು ಜಮೀನಿನ 0–11 (ಎ–ಗುಂ) ಜಮೀನನ್ನು ಸಾರ್ವಜನಿಕವಾಗಿ ಶಾಲೆ ಮತ್ತು ರಸ್ತೆ (ರಾಷ್ಟ್ರೀಯ ಹೆದ್ದಾರಿ ಎನ್.ಹೆಚ್.7) ಗೆ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು ತಾಲ್ಲೂಕು: ಆನೇಕಲ್ ಗ್ರಾಮ: ಅತ್ತಿಬೆಲೆ
ಸ.ನಂ.– 395 ವಿಸ್ತೀರ್ಣ: 0–11 (ಎ–ಗುಂ) ವರ್ಗೀಕರಣ: ಖರಾಬು

ಪೂರ್ವಕ್ಕೆ – ಎನ್.ಹೆಚ್. 7 ರಸ್ತೆ ಪಶ್ಚಿಮಕ್ಕೆ – ಶಾಲೆ ಮತ್ತು ಎನ್.ಹೆಚ್.7 ರಸ್ತೆ
ಉತ್ತರಕ್ಕೆ – ಎನ್.ಹೆಚ್. 7 ರಸ್ತೆ ದಕ್ಷಿಣಕ್ಕೆ – ಗ್ರಾಮಠಾಣ

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 463

ತಹಶೀಲ್ದಾರ್‌ರವರ ಕಾರ್ಯಾಲಯ, ಆನೇಕಲ್ ತಾಲ್ಲೂಕು, ಆನೇಕಲ್

ಪ್ರಕಟಣೆ

ನಮೂನೆ–27

ನಂ. ಎಲ್.ಎನ್.ಡಿ/ಸಿ.ಆರ್/207/09–10, ದಿನಾಂಕ: 5/10ನೇ ಸೆಪ್ಟೆಂಬರ್ 2009

1) ಕರ್ನಾಟಕ ರಾಜ್ಯ ಸರ್ಕಾರದ ನಿಯಮಾವಳಿಗಳಂತೆ ಸರ್ಕಾರಿ ತೋಪು ಜಮೀನಾಗಿರುತ್ತದೆ. ಅದರಂತೆ ಅತ್ತಿಬೆಲೆ ಗ್ರಾಮದ ಸ.ನಂ. 306 ರಲ್ಲಿ ವಿಸ್ತೀರ್ಣ 1–19 (ಎ–ಗುಂ) ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ಅಂದರೆ 1–00ಎ ಆಶ್ರಯ ನಿವೇಶನಗಳಿಗೆ 0–19 ಗುಂ ಬಾಲಕರ ವಿದ್ಯಾರ್ಥಿ ನಿಲಯಕ್ಕೆ ಕಾಯ್ದಿರಿಸಲು ಉದ್ದೇಶಿಸಿದ್ದು, ಸದರಿ ಜಮೀನು ಹಾಲಿ ಸಾರ್ವಜನಿಕ ಉಪಯೋಗಕ್ಕೆ ಅವಶ್ಯಕತೆ ಇರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯ್ದೆ 1964ರ ಕಲಂ 68(1)ರ ರೀತ್ಯಾ ದತ್ತವಾಗಿರುವ ಅಧಿಕಾರವನ್ನು ಚಲಾಯಿಸುತ್ತಾ ಈ ಕೆಳಕಂಡ ಷೆಡ್ಯೂಲ್‌ನಲ್ಲಿ ವಿವರಿಸಿರುವ ಸ.ನಂ.306 ಜಮೀನಿನಲ್ಲಿ 1–19 (ಎ–ಗುಂ) ಜಮೀನನ್ನು ಸಾರ್ವಜನಿಕ ಉಪಯೋಗಕ್ಕೆ ಕಾಯ್ದಿರಿಸುವ ಉದ್ದೇಶದಿಂದ ಹಾಗೂ ಸಾರ್ವಜನಿಕರ ಉಪಯೋಗಕ್ಕೆ ಬೇಕಿಲ್ಲದಿರುವ ಪ್ರಯುಕ್ತ ಸದರಿ ಜಮೀನಿನ ಮೇಲೆ ಸಾರ್ವಜನಿಕರ ಹಕ್ಕು ವೈಯಕ್ತಿಕ ಹಕ್ಕುಗಳು ನಿರ್ಗಮನಗೊಳ್ಳುತ್ತವೆ.

2) ಆದ ಪ್ರಯುಕ್ತ ಯಾವುದೇ ವ್ಯಕ್ತಿ ಅಂತಹ ಜಮೀನಿನ ಮೇಲೆ ಆಸಕ್ತಿ ಉಳ್ಳವರು ಅಥವಾ ಇತರೆ ಆಸಕ್ತಿ ಉಳ್ಳವರು ಅಂದರೆ ಸರ್ಕಾರಿ ಖರಾಬು ಜಮೀನನ್ನು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಆಶ್ರಯ ನಿವೇಶನ ಮತ್ತು ವಿದ್ಯಾರ್ಥಿ ನಿಲಯಕ್ಕೆ ವಿಲೇವಾರಿ ಮಾಡಿರುವುದರಿಂದ ತೊಂದರೆಗೊಳಗಾಗಿರುವವರು ಈ ಪ್ರಕಟಣೆಯ ದಿನಾಂಕದಿಂದ 90 ದಿನಗಳ ಒಳಗಾಗಿ ಲಿಖಿತ ಮೂಲಕ ಆನೇಕಲ್ ತಾಲ್ಲೂಕು ತಹಶೀಲ್ದಾರ್ ರವರಿಗೆ ತಲುಪುವಂತೆ ಕಳಿಸುವುದು ನಿಗದಿತ ವೇಳೆಯನ್ನು ಮೀರಿ ಬರುವಂತಹ ಆಕ್ಷೇಪಣೆಯನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ. ಅಲ್ಲದೆ ನಿಗದಿತ ವೇಳೆಯಲ್ಲಿ ಯಾವುದೇ ಆಕ್ಷೇಪಣೆಗಳು ತಲುಪದಿದ್ದಲ್ಲಿ ಸದರಿ ಸರ್ಕಾರಿ ತೋಪು ಜಮೀನಿನ 1–19 (ಎ–ಗುಂ) ಜಮೀನನ್ನು ಸಾರ್ವಜನಿಕವಾಗಿ ಆಶ್ರಯ ನಿವೇಶನ ಮತ್ತು ವಿದ್ಯಾರ್ಥಿ ನಿಲಯಕ್ಕೆ ವಿಲೇವಾರಿ ಮಾಡುವ ಬಗ್ಗೆ ಯಾವುದೇ ಆಕ್ಷೇಪಣೆಗಳು ಇರುವುದಿಲ್ಲವೆಂದು ಪರಿಗಣಿಸಿ ಕಾನೂನು ರೀತ್ಯಾ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಷೆಡ್ಯೂಲ್

ಜಿಲ್ಲೆ: ಬೆಂಗಳೂರು ತಾಲ್ಲೂಕು: ಆನೇಕಲ್ ಗ್ರಾಮ: ಅತ್ತಿಬೆಲೆ
ಸ.ನಂ.– 306 ವಿಸ್ತೀರ್ಣ: 1–19 (ಎ–ಗುಂ) ವರ್ಗೀಕರಣ: ತೋಪು

ಪೂರ್ವಕ್ಕೆ – ರಸ್ತೆ ಪಶ್ಚಿಮಕ್ಕೆ ಸ.ನಂ. – 305
ಉತ್ತರಕ್ಕೆ ಸ.ನಂ. – 305 ದಕ್ಷಿಣಕ್ಕೆ ಸ.ನಂ. – 307, ರಸ್ತೆ

ತಹಶೀಲ್ದಾರ್,
ಆನೇಕಲ್ ತಾಲ್ಲೂಕು, ಆನೇಕಲ್.

ಪಿ.ಆರ್. 464

ಕಂದಾಯ ಸಚಿವಾಲಯ

ಭೂ ಸ್ವಾಧೀನ ಕಾಯಿದೆಯ ಕಲಂ 6(1) ಪ್ರಕರಣದ ಮೇರೆಗೆ ಘೋಷಣೆ

ಕ್ರಮಾಂಕ:ಕಂಇ 32 ಭೂಸ್ವಾಚ 2009, ದಿನಾಂಕ: 30ನೇ ಅಕ್ಟೋಬರ್ 2009

ಮುಂದಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಚಿತ್ರದುರ್ಗ ತಾಲ್ಲೂಕು ಭರಮಸಾಗರ ಹೋಬಳಿ ಹಿರೇಬೆನ್ನೂರು ಗ್ರಾಮದ ಶ್ರೀ ತರಳಬಾಳು ಜಗದ್ಗುರು ಬೃಹನ್ಮಠ, ಸಿರಿಗೆರೆ ಇವರ ವತಿಯಿಂದ ಶಾಲಾ ಕಾಲೇಜ್, ಹಾಸ್ಟೆಲ್ ಮಹಾದ್ವಾರ ಶೈಕ್ಷಣಿಕ ನಿರ್ಮಾಣದ ಉದ್ದೇಶಕ್ಕೆ ಅಗತ್ಯವಾಗಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಕಂಡು ಬಂದಿರುವುದರಿಂದ:

ಚಿತ್ರದುರ್ಗ ಜಿಲ್ಲಾಧಿಕಾರಿಗಳ ಆದೇಶದ ನಂ.ಎಲ್ಎಕ್ಯೂ:ಎಸ್ಆರ್:12/2006–07 ದಿನಾಂಕ: 8.9.2006 ಅನ್ವಯ ಪತ್ರದ ಆದೇಶದಲ್ಲಿನ ಅಧಿಸೂಚನೆಯಲ್ಲಿ ತಿಳಿಯಪಡಿಸಲಾಗಿದೆ.

ಕರ್ನಾಟಕ ಅಧಿನಿಯಮ ನಂ.1991ರ 33 ರ ಮೂಲಕ ತಿದ್ದುಪಡಿಯಾದ ಭೂ ಆರ್ಜನೆಯ ಅಧಿನಿಯಮ 1894 (ಕೇಂದ್ರ) ಅಧಿನಿಯಮ 1894 (1)ರ ಎ ಪ್ರಕರಣದ ಮತ್ತು 6(1)ಎರ ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಗಳು ನೀಡಿರುವ ವರದಿಯನ್ನು ಪರಿಶೀಲಿಸಿದ ನಂತರ ಮೇಲೆ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಸದರಿ ಜಮೀನುಗಳನ್ನು ಭೂ ಸ್ವಾಧೀನ ಮಾಡಿಕೊಳ್ಳುವ ಅವಶ್ಯವಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಭೂಮಿಗಳು ಅಗತ್ಯವಾಗಿದೆ ಎಂದು ಸದರಿ ಅಧಿನಿಯಮದ ಕಲಂ 6(1)ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಉಪವಿಭಾಗಾಧಿಕಾರಿಗಳು, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ ಇವರನ್ನು ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಇನ್ನು ಮುಂದೆ ಭೂ ಸ್ವಾಧೀನಪಡಿಸಿಕೊಳ್ಳಲು ನಡೆಸುವ ಎಲ್ಲಾ ಭೂ ಸ್ವಾಧೀನ ವ್ಯವಹಾರಗಳ ಕುರಿತಂತೆ ಜಿಲ್ಲಾಧಿಕಾರಿಗಳ ಪ್ರಕಾರ್ಯವನ್ನು ನಿರ್ವಹಿಸಲು ಸದರಿ ಭೂ ಸ್ವಾಧೀನಪಡಿಸಿಕೊಳ್ಳುವ ಅಧಿನಿಯಮ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ಈ ಮೂಲಕ ನೇಮಕ ಮಾಡಲಾಗಿದೆ. ಹಾಗೂ ಸದರಿ ಜಮೀನುಗಳ ಭೂ ಸ್ವಾಧೀನ ಆರ್ಜನೆಗೆ ಸಂಬಂಧಿಸಿದ ಆದೇಶವನ್ನು ಪಡೆದುಕೊಳ್ಳಲು ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶನ ನೀಡಲಾಗಿದೆ.

ಅನುಸೂಚಿ

ನಂ.ಎಲ್ಎಕ್ಯೂ.ಎಸ್ ಆರ್=5/2008–09

ಜಿಲ್ಲೆ: ಚಿತ್ರದುರ್ಗ **ತಾಲ್ಲೂಕು: ಚಿತ್ರದುರ್ಗ** **ಹೋಬಳಿ: ಭರಮಸಾಗರ** **ಗ್ರಾಮ: ಹಿರೇಬೆನ್ನೂರು**

ಕ್ರ. ಸಂ.	ಖಾತೆದಾರರ ಹೆಸರು ಗೇಣಿದಾರರ ಹೆಸರು ಹಿತಾಸಕ್ತಿ ಹೊಂದಿರುವ ವ್ಯಕ್ತಿಯ ಹೆಸರು	ಅನುಭವದಾರರು ಹೆಸರು	ಸರ್ವೆ ನಂ.	ತರಹೆ	ಚಕ್ಕುಬಂದಿ				ಅಗತ್ಯವಾದ ಅಂದಾಜು ವಿಸ್ತೀರ್ಣ (ಎ–ಗು)	ಮೌಲ್ಯ ನಿರ್ಧರಣೆ ಆಕಾರ (ರೂ.ಪೈ.)
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ		
1.	ಡಿ. ಶಿವಪ್ಪ ಬಿನ್ ದುರುಗಪ್ಪ	ವಿ.ಎಸ್. ಮಂಜುನಾಥಚಾರಿ ಎಸ್.ಬಿ. ಸೋಮೇಖರಪ್ಪ ಬಿ. ನಿರಂಜನಮೂರ್ತಿ ಎಸ್. ನಿರಂಜನಮೂರ್ತಿ ರೇಣುಕಮ್ಮ, ನೀಲಮ್ಮ ಎಸ್. ದೇವರಾಜ ಹೆಚ್.ಎಸ್. ವೇದಮೂರ್ತಿ	43/1	ಅಲಿನೇಷನ್ ಪ್ರದೇಶ	ರಸ್ತೆ	ಲಾ.ನಂ. 52	ಲಾ.ನಂ.42	ಲಾ. ನಂ. 43/2 ರಸ್ತೆ	1.33	1.18

ಕ್ರ. ಸಂ.	ಖಾತೆದಾರರ ಹೆಸರು ಗೇಣಿದಾರರ ಹೆಸರು ಹಿತಾಸಕ್ತಿ ಹೊಂದಿರುವ ವ್ಯಕ್ತಿಯ ಹೆಸರು	ಅನುಭವದಾರರು ಹೆಸರು	ಸರ್ವೆ ನಂ.	ತರಹೆ	ಚಕ್ಕುಬಂದಿ				ಅಗತ್ಯವಾದ ಅಂದಾಜು ವಿಸ್ತೀರ್ಣ (ಎ–ಗು)	ಮೌಲ್ಯ ನಿರ್ಧರಣೆ ಆಕಾರ (ರೂ.ಪೈ.)
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ		
2.	ಸಿ.ಡಿ. ಗುರುಸಿದ್ದಪ್ಪ ಬಿನ್ ದ್ಯಾಮಪ್ಪ	ಸಿ.ಡಿ. ಗುರುಸಿದ್ದಪ್ಪ ಬಿನ್ ದ್ಯಾಮಪ್ಪ	43/4	ಖುಷ್ಕಿ	ಲಾ.ನಂ. 43/3 ಎ1	ರಸ್ತೆ	ರಸ್ತೆ	ಲಾ.ನಂ. 43/9	0.07	0.12
3.	ಎಸ್.ಬಿ. ಸೋಮಶೇಖರಪ್ಪ ಬಿನ್ ಬಸವರಾಜಪ್ಪ	ಎಸ್.ಬಿ. ಸೋಮಶೇಖರಪ್ಪ ಬಿನ್ ಬಸವರಾಜಪ್ಪ	43/5	ಖುಷ್ಕಿ	43/3ಎ1	ರಸ್ತೆ	ಲಾ.ನಂ. 43/12	ಲಾ.ನಂ. 43/6	0.02	0.03
4.	ಬಿ. ನಿರಂಜನಮೂರ್ತಿ ಬಿನ್ ಎ.ಆರ್. ಬ್ರಹ್ಮಾಚಾರಿ.	ಬಿ. ನಿರಂಜನಮೂರ್ತಿ ಬಿನ್ ಎ.ಆರ್. ಬ್ರಹ್ಮಾಚಾರಿ	43/6	ಖುಷ್ಕಿ	43/3ಎ1	ರಸ್ತೆ	ಲಾ.ನಂ. 43/5	ಲಾ.ನಂ. 43/7	0.03	0.04
5.	ಎಸ್. ನಿರಂಜನಮೂರ್ತಿ ಬಿನ್ ಶಿವರುದ್ರಾಚಾರಿ	ಎಸ್. ನಿರಂಜನಮೂರ್ತಿ ಬಿನ್ ಶಿವರುದ್ರಾಚಾರಿ	43/7	ಖುಷ್ಕಿ	43/3ಎ1	ರಸ್ತೆ	ಲಾ.ನಂ. 43/6	ಲಾ.ನಂ. 43/8	0.06	0.09
6.	ವಿ.ಎಸ್. ಮಂಜುನಾಥಚಾರಿ ಬಿನ್ ಶಿವರುದ್ರಾಚಾರಿ	ವಿ.ಎಸ್. ಮಂಜುನಾಥಚಾರಿ ಬಿನ್ ಶಿವರುದ್ರಾಚಾರಿ	43/8	ಖುಷ್ಕಿ	ಲಾ.ನಂ. 43/3ಎ1	ರಸ್ತೆ	ಲಾ.ನಂ. 43/7	ಲಾ.ನಂ. 43/7	0.11	0.18
7.	ಎನ್. ದೇವರಾಜು ಬಿನ್ ದಿ: ಡಿ. ಶಾಂತಪ್ಪ	ಎನ್. ದೇವರಾಜು ಬಿನ್ ದಿ: ಡಿ. ಶಾಂತಪ್ಪ	43/9	ಖುಷ್ಕಿ	ಲಾ.ನಂ. 43/3ಎ1	ರಸ್ತೆ	ಲಾ.ನಂ. 43/4	ಲಾ.ನಂ. 43/10	0.02	0.03
8.	ಹೆಚ್.ಎಸ್. ವೇದಮೂರ್ತಿ ಬಿನ್ ದಿ: ಡಿ. ಶಾಂತಪ್ಪ	ಹೆಚ್.ಎಸ್. ವೇದಮೂರ್ತಿ ಬಿನ್ ದಿ: ಡಿ. ಶಾಂತಪ್ಪ	43/10	ಖುಷ್ಕಿ	ಲಾ.ನಂ. 43/3ಎ1	ರಸ್ತೆ	ಲಾ.ನಂ. 43/9	ಲಾ.ನಂ. 43/11	0.02	0.03
9.	ಶ್ರೀಮತಿ ರೇಣುಕಮ್ಮ ಬಿನ್ ಚನ್ನಬಸಯ್ಯ	ರೇಣುಕಮ್ಮ ಬಿನ್ ಚನ್ನಬಸಯ್ಯ	43/11	ಖುಷ್ಕಿ	ಲಾ.ನಂ. 43/3ಎ1	ರಸ್ತೆ	ಲಾ.ನಂ. 43/10	ಲಾ.ನಂ. 43/12	0.05	0.08
10.	ಜೋಗಪ್ಪ ಬಿನ್ ಈರಪ್ಪ	ಜೋಗಪ್ಪ ಬಿನ್ ಈರಪ್ಪ	43/3ಎಪಿ1	ಖುಷ್ಕಿ	ಲಾ.ನಂ. 44	ಲಾ.ನಂ. 4,9,10,11, 12,5,6,7,8	ಎನ್.ಹೆಚ್. 4ಗೆ ಕೆಕೆ	ಲಾ.ನಂ. 51	4.27	2.67

ಕ್ರ. ಸಂ.	ಖಾತೆದಾರರ ಹೆಸರು ಗೇಣಿದಾರರ ಹೆಸರು, ಹಿತಾಸಕ್ತಿ ಹೊಂದಿರುವ ವ್ಯಕ್ತಿಯ ಹೆಸರು	ಅನುಭವದಾರರು ಹೆಸರು	ಸರ್ವೆ ನಂ.	ತರಹೆ	ಚಕ್ಕುಬಂದಿ ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ಅಗತ್ಯವಾದ ಅಂದಾಜು ವಿಸ್ತೀರ್ಣ (ಎ–ಗು)	ಮೌಲ್ಯ ನಿರ್ಧರಣೆ ಆಕಾರ (ರೂ.ಪೈ.)
11.	ದೊಡ್ಡಮ್ಮ ಕೋಂ ತಿಮ್ಮಪ್ಪ	ದೊಡ್ಡಮ್ಮ ಕೋಂ ತಿಮ್ಮಪ್ಪ	43/3ಎಪಿ 13 ಪಿ1	ಖುಷ್ಕಿ	ಲಾ.ನಂ. 44	ಲಾ.ನಂ.4,9, 10,11,12,5, 6,7,8	ಎನ್.ಹೆಚ್. 4ಗೆ ಕೆಕೆ	ಲಾ.ನಂ. 51	2.00	0.25
12.	ಶ್ರೀಮತಿ ನೀಲಮ್ಮ ಕೋಂ ಎಸ್.ಬಿ. ಸೋಮಶೇಖರಪ್ಪ	ಶ್ರೀಮತಿ ನೀಲಮ್ಮ ಕೋಂ ಎಸ್.ಬಿ. ಸೋಮಶೇಖರಪ್ಪ	43/12	ಖುಷ್ಕಿ	43/3ಎ1	ರಸ್ತೆ	ಲಾ.ನಂ. 43/12	ಲಾ.ನಂ. 43/5	0.02	0.03
13.	ಜಿ. ಚಂದ್ರಶೇಖರಪ್ಪ ಬಿನ್ ಕರಿದ್ಯಾಮಪ್ಪ	ಜಿ. ಚಂದ್ರಶೇಖರಪ್ಪ ಬಿನ್ ಕರಿದ್ಯಾಮಪ್ಪ	45/1	ಖುಷ್ಕಿ	ಕಲ್ಲುಂಟೆ ಗ್ರಾಮದ ಗಡಿ	ಲಾ.ನಂ. 51	ಲಾ.ನಂ. 44	ಲಾ.ನಂ. 45/2	7.05	5.56
14.	ಚಿಕ್ಕಮ್ಮ ಕೋಂ ಬೊಮ್ಮಪ್ಪ	ಚಿಕ್ಕಮ್ಮ ಕೋರ ಬೊಮ್ಮಪ್ಪ	45/2	ಖುಷ್ಕಿ		ಲಾ.ನಂ. 51	ಲಾ.ನಂ. 45/1	ಲಾ.ಹಿ 45/2	4.10	3.40
15.	ಚಿಕ್ಕಮ್ಮ ಕೋಂ ಬೊಮ್ಮಪ್ಪ ಕ್ಯಾತಮ್ಮ ಬಿನ್ ದಿ:ಬೊಮ್ಮಪ್ಪ ಬಿ. ನಾಗರಾಜಪ್ಪ ಬಿನ್ ದಿ: ಬೊಮ್ಮಪ್ಪ	ಚಿಕ್ಕಮ್ಮ ಕೋಂ ಬೊಮ್ಮಪ್ಪ ಕ್ಯಾತಮ್ಮ ಬಿನ್ ದಿ:ಬೊಮ್ಮಪ್ಪ ಬಿ. ನಾಗರಾಜಪ್ಪ ಬಿನ್ ದಿ: ಬೊಮ್ಮಪ್ಪ	45/3	ಖುಷ್ಕಿ	ಲಾಹಿ 45/4	ಲಾ.ನಂ. 51	ಲಾ.ನಂ. 45/2	ಲಾ.ನಂ. 46	2.06	1.67
16.	ಕ್ಯಾತಮ್ಮ ಬಿನ್ ದಿ:ಬೊಮ್ಮಪ್ಪ ಚಿಕ್ಕಮ್ಮ ಕೋಂ ಬೊಮ್ಮಪ್ಪ ಬಿ. ನಾಗರಾಜಪ್ಪ ಬಿನ್ ದಿ:ಬೊಮ್ಮಪ್ಪ	ಕ್ಯಾತಮ್ಮ ಚಿಕ್ಕಮ್ಮ ಬಿ. ನಾಗರಾಜಪ್ಪ	45/4	ಖುಷ್ಕಿ	ಕಲ್ಲುಂಟೆ ಗಡಿ	ಲಾ ಹಿ 54/3	ಲಾಹಿ 45/2	ಲಾ ನಂ. 46	1.28	1.32
17.	ಪಾರಪ್ಪ ಬಿನ್ ದಿ:ಜಾಲಪ್ಪ	ಪಾರಪ್ಪ ಬಿನ್ ದಿ:ಜಾಲಪ್ಪ	42/2	ಖುಷ್ಕಿ	ಲಾ ನಂ: 43	ಲಾ ಹಿ 43/1	ಎನ್ ಹೆಚ್ 4 ಗೆ	ಲಾ ಹಿ 43/3	1.06	0.25

ಕ್ರ. ಸಂ.	ಖಾತೆದಾರರ ಹೆಸರು ಗೇಣಿದಾರರ ಹೆಸರು ಹಿತಾಸಕ್ತಿ ಹೊಂದಿರುವ ವ್ಯಕ್ತಿಯ ಹೆಸರು	ಅನುಭವದಾರರು ಹೆಸರು	ಸರ್ವೆ ನಂ.	ತರಹೆ	ಚಕ್ಕುಬಂದಿ				ಅಗತ್ಯವಾದ ಅಂದಾಜು ವಿಸ್ತೀರ್ಣ (ಎ-ಗು)	ಮೌಲ್ಯ ನಿರ್ಧರಣೆ ಆಕಾರ (ರೂ.ಪೈ.)
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ		
18.	ಸಿ.ಜಿ. ಅನಿಲ್‌ಕುಮಾರ್ ಮೈ.ಗಾ.ರಾವ್ ಸಿ.ಜಿ. ಚಿದಾನಂದಪ್ಪ ಸಿ.ಜಿ. ಭಾನುಪ್ರಿಯ ಮೈ.ಗಾ. ರಾವ್ ಜಿ.ಚಿದಾನಂದಪ್ಪ	ಸಿ.ಜಿ. ಅನಿಲ್‌ಕುಮಾರ್ ಮೈ.ಗಾ.ರಾವ್ ಸಿ.ಜಿ. ಚಿದಾನಂದಪ್ಪ ಸಿ.ಜಿ. ಭಾನುಪ್ರಿಯ ಮೈ.ಗಾ. ರಾವ್ ಜಿ.ಚಿದಾನಂದಪ್ಪ	44/1	ಖುಷ್ಕಿ	ಲಾ ಹಿ.44/2ಎ1	ಲಾ ನಂ.43	ಎನ್.ಹೆಚ್. 4ಗೆ	ಲಾ ಹಿ 44/2ಎ2	0.13	0.25
19.	ಹೆಚ್.ಕರಿಬಸಪ್ಪ ಬಿನ್ ಜಾಲಪ್ಪ	ಹೆಚ್.ಕರಿಬಸಪ್ಪ ಬಿನ್ ಜಾಲಪ್ಪ	44/2ಎ2	ಖುಷ್ಕಿ	ಲಾ ಹಿ.44/2ಎ1	ಲಾ ನಂ.43	ಲಾ ನಂ.44/1	ಲಾ ಹಿ 14/2ಎ1	0.20	0.75
20.	ಸಣ್ಣತಮ್ಮಪ್ಪ ಬಿನ್ ರಾಮಪ್ಪ	ಸಣ್ಣತಮ್ಮಪ್ಪ ಬಿನ್ ರಾಮಪ್ಪ	44/2ಎಪಿ1	ಖುಷ್ಕಿ	ಲಾ ಹಿ ನಂ.44/2ಬಿ	ಲಾ ನಂ.43	ಪಿನ್ ಹೆಚ್ 4ಗೆ	ಉಳಿಕೆ ಪ್ರದೇಶ	1.26	0.78
21.	ಅಜ್ಜಪ್ಪ ಬಿನ್ ತಿಪ್ಪಣ್ಣ	ಅಜ್ಜಪ್ಪ ಬಿನ್ ತಿಪ್ಪಣ್ಣ	44/2ಎ ಪಿ3	ಖುಷ್ಕಿ	ಲಾ ಹಿ ನಂ.44/2ಬಿ	ಲಾ ನಂ.43	ಎನ್.ಹೆಚ್. 4 ಗೆ	ಉಳಿಕೆ ಪ್ರದೇಶ	0.18	0.18
22.	ನಿಜಾಮುದ್ದೀನ್ ಬಿನ್ ದಸ್ತಾಗೀರಸಾಬ್	ನಿಜಾಮುದ್ದೀನ್ ಬಿನ್ ದಸ್ತಾಗೀರಸಾಬ್	44/2ಇ ಪಿ3	ಖುಷ್ಕಿ	ಲಾ ಹಿ ನಂ.44/2ಬಿ	ಲಾ ನಂ.43	ಎನ್.ಹೆಚ್. 4ಗೆ	ಉಳಿಕೆ ಪ್ರದೇಶ	0.02	0.02
23.	ಕೆ.ಎಸ್. ಪರಮೇಶ್ವರಪ್ಪ ಬಿನ್ ನಂಜಪ್ಪ	ಕೆ.ಎಸ್. ಪರಮೇಶ್ವರಪ್ಪ ಬಿನ್ ನಂಜಪ್ಪ	44/2ಬಿ	ಖುಷ್ಕಿ	ಲಾ ಹಿ.44/2ಸಿ	ಲಾ ಹಿ 44/2ಎ1	ಎನ್.ಹೆಚ್. 4 ಗೆ	ಲಾ.ನಂ.45	0.17	0.24
24.	ಜೆ.ಹೆಚ್. ಬಾಬು ಯಾನೆ ಕೆ.ಮಹಮದ್ ಬಿನ್ ಹುಸೇನ್	ಜೆ.ಹೆಚ್. ಬಾಬು ಯಾನೆ ಕೆ.ಮಹಮದ್ ಬಿನ್ ಹುಸೇನ್	44/2ಸಿ1 ಪಿ1	ಖುಷ್ಕಿ	ಲಾ ನಂ.44/2ಸಿ2	ಲಾ ಹಿ 44/2ಬಿ	ಎನ್.ಹೆಚ್. 4ಗೆ	ಲಾ.ನಂ. 45	1.00	0.66
25.	ದುರುಗಪ್ಪ ಬಿನ್ ಬಸಪ್ಪ	ದುರುಗಪ್ಪ ಬಿನ್ ಬಸಪ್ಪ	44/2ಸಿ1 ಪಿ2	ಖುಷ್ಕಿ	ಲಾ ನಂ.44/2ಸಿ2	ಲಾ ಹಿ 44/2ಬಿ	ಎನ್.ಹೆಚ್. 4ಗೆ	ಲಾ.ನಂ.45	0.12	0.02

ಕ್ರ. ಸಂ.	ಖಾತೆದಾರರ ಹೆಸರು ಗೇಣಿದಾರರ ಹೆಸರು ಹಿತಾಸಕ್ತಿ ಹೊಂದಿರುವ ವ್ಯಕ್ತಿಯ ಹೆಸರು	ಅನುಭವದಾರರು ಹೆಸರು	ಸರ್ವೆ ನಂ.	ತರಹೆ	ಚಕ್ಕುಬಂದಿ				ಅಗತ್ಯವಾದ ಅಂದಾಜು ವಿಸ್ತೀರ್ಣ (ಎ-ಗು)	ಮೌಲ್ಯ ನಿರ್ಧರಣೆ ಆಕಾರ (ರೂ.ಪೈ.)
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ		
26.	ನೂರೂಜಾನ್ ಕೋಂ ಮೊಹದ್ದೀನ್ ಕೆ.ಹೆಚ್. ಬಾಬು ಬಿನ್ ಹುಸೇನ್	ನೂರೂಜಾನ್ ಕೋಂ ಮೊಹದ್ದೀನ್ ಕೆ.ಹೆಚ್. ಬಾಬು ಬಿನ್ ಹುಸೇನ್	44/2ಪಿ2	ಖುಷ್ಕಿ	ಕಲ್ಲುಂಟೆ ಗಡಿ	ಲಾ ಓ 44/2ಪಿ1	ಎನ್.ಹೆಚ್. 4ಗೆ	ಲಾ.ನಂ.45	0.19	0.18
								ಜುಮ್ಲಾ	**31.02**	

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 503

ಎಂ. ವೆಂಕಟೇಶಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಸ್ವಾಧೀನ-2 ಮತ್ತು ಪುನರ್ವಸತಿ)

ಕಂದಾಯ ಸಚಿವಾಲಯ

ಭೂ ಸ್ವಾಧೀನ ಕಾಯಿದೆಯ ಕಲಂ 6(1) ಪ್ರಕರಣದ ಮೇರೆಗೆ ಘೋಷಣೆ

ಕ್ರಮಾಂಕ:ಕಂಇ 32 ಭೂಸ್ವಾಚ 2009, ದಿನಾಂಕ: 30ನೇ ಅಕ್ಟೋಬರ್ 2009

ಮುಂದಿನ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿರುವ ಜಮೀನು ಸಾರ್ವಜನಿಕ ಉದ್ದೇಶಕ್ಕೆ ಅಂದರೆ ಚಿತ್ರದುರ್ಗ ತಾಲ್ಲೂಕು ಹೋಬಳಿ ಭರಮಸಾಗರ ಸಿರಿಗೆರೆ ಗ್ರಾಮದ ತರಳಬಾಳು ಜಗದ್ಗುರು ವಿದ್ಯಾಸಂಸ್ಥೆ ಶೈಕ್ಷಣಿಕ ಉದ್ದೇಶಕ್ಕೆ ಅಗತ್ಯವಾಗಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಕಂಡು ಬಂದಿರುವುದರಿಂದ:

ಚಿತ್ರದುರ್ಗ ಜಿಲ್ಲಾಧಿಕಾರಿಗಳ ಆದೇಶದ ನಂ.ಎಲ್ಎಕ್ಯೂ:ಎಸ್ಆರ್:12/2006-07 ದಿನಾಂಕ: 8.9.2008 ಅನ್ವಯ ಪತ್ರದ ಆದೇಶದಲ್ಲಿಯ ಅಧಿಸೂಚನೆಯಲ್ಲಿ ತಿಳಿಯಪಡಿಸಲಾಗಿದೆ.

ಕರ್ನಾಟಕ ಅಧಿನಿಯಮ ನಂ.1991ರ 33 ರ ಮೂಲಕ ತಿದ್ದುಪಡಿಯಾದ ಭೂ ಆರ್ಜನೆಯ ಅಧಿನಿಯಮ 1894 (ಕೇಂದ್ರ) ಅಧಿನಿಯಮ 1894 (1)ರ ಎ ಪ್ರಕರಣದ ಮತ್ತು 6(1)ಎ ರ ಪ್ರಕರಣದ ಮೇರೆಗೆ ಜಿಲ್ಲಾಧಿಕಾರಿಗಳು ನೀಡಿರುವ ವರದಿಯನ್ನು ಪರಿಶೀಲಿಸಿದ ನಂತರ ಮೇಲೆ ನಿರ್ದಿಷ್ಟಪಡಿಸಿದ ಉದ್ದೇಶಕ್ಕಾಗಿ ಸದರಿ ಜಮೀನುಗಳನ್ನು ಭೂ ಸ್ವಾಧೀನ ಮಾಡಿಕೊಳ್ಳುವ ಅವಶ್ಯವಿದೆ ಎಂದು ಕರ್ನಾಟಕ ಸರ್ಕಾರಕ್ಕೆ ಮನದಟ್ಟಾಗಿರುವುದರಿಂದ ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಭೂಮಿಗಳು ಅಗತ್ಯವಾಗಿದೆ ಎಂದು ಸದರಿ ಅಧಿನಿಯಮದ ಕಲಂ 6(1)ನೇ ಪ್ರಕರಣದ ಮೇರೆಗೆ ಈ ಮೂಲಕ ಘೋಷಿಸಲಾಗಿದೆ.

ಉಪವಿಭಾಗಾಧಿಕಾರಿಗಳು, ಚಿತ್ರದುರ್ಗ ಉಪವಿಭಾಗ, ಚಿತ್ರದುರ್ಗ ಇವರನ್ನು ಸದರಿ ಜಮೀನುಗಳಿಗೆ ಸಂಬಂಧಿಸಿದಂತೆ ಇನ್ನು ಮುಂದೆ ಭೂ ಸ್ವಾಧೀನಪಡಿಸಿಕೊಳ್ಳಲು ನಡೆಸುವ ಎಲ್ಲಾ ಭೂ ಸ್ವಾಧೀನ ವ್ಯವಹಾರಗಳ ಕುರಿತಂತೆ ಜಿಲ್ಲಾಧಿಕಾರಿಗಳ ಪ್ರಕಾರ್ಯವನ್ನು ನಿರ್ವಹಿಸಲು ಸದರಿ ಭೂ ಸ್ವಾಧೀನಪಡಿಸಿಕೊಳ್ಳುವ ಅಧಿನಿಯಮ 3ನೇ ಪ್ರಕರಣದ (ಸಿ) ಖಂಡದ ಮೇರೆಗೆ ಈ ಮೂಲಕ ನೇಮಕ ಮಾಡಲಾಗಿದೆ. ಹಾಗೂ ಸದರಿ ಜಮೀನುಗಳ ಭೂ ಸ್ವಾಧೀನ ಆರ್ಜನೆಗೆ ಸಂಬಂಧಿಸಿದ ಆದೇಶವನ್ನು ಪಡೆದುಕೊಳ್ಳಲು ಸದರಿ ಅಧಿನಿಯಮದ 7ನೇ ಪ್ರಕರಣದ ಮೇರೆಗೆ ನಿರ್ದೇಶನ ನೀಡಲಾಗಿದೆ.

ಅನುಸೂಚಿ

ನಂ.ಎಲ್ಎಕ್ಯೂ.ಎಸ್ ಆರ್=6/2008-09

ಜಿಲ್ಲೆ: ಚಿತ್ರದುರ್ಗ ತಾಲ್ಲೂಕು: ಚಿತ್ರದುರ್ಗ ಹೋಬಳಿ: ಭರಮಸಾಗರ ಗ್ರಾಮ: ಸಿರಿಗೆರೆ

ಕ್ರ. ಸಂ.	ಖಾತೆದಾರರ ಹೆಸರು ಗೇಣಿದಾರರ ಹೆಸರು ಹಿತಾಸಕ್ತಿ ಹೊಂದಿರುವ ವ್ಯಕ್ತಿಯ ಹೆಸರು	ಅನುಭವದಾರರು ಹೆಸರು	ಸರ್ವೆ ನಂ.	ತರಹೆ	ಚಕ್ಕುಬಂದಿ					
					ಪೂರ್ವ	ಪಶ್ಚಿಮ	ಉತ್ತರ	ದಕ್ಷಿಣ	ಅಗತ್ಯವಾದ ಅಂದಾಜು ವಿಸ್ತೀರ್ಣ (ಎ-ಗು)	ಮೌಲ್ಯ ನಿರ್ಧರಣೆ ಆಕಾರ (ರೂ.ಪ್ಯೆ.)
1.	ಚಂದ್ರಪ್ಪ ಬಿನ್ ಕೆಂಚಪ್ಪ ಕೆ. ಬಸವರಾಜಪ್ಪ ಬಿನ್ ಕೆಂಚಪ್ಪ ಕೆ. ಶರಣಪ್ಪ ಬಿನ್ ಕೆಂಚಪ್ಪ ಕೆ.ಶಿವಪ್ಪ ಬಿನ್ ಕೆಂಚಪ್ಪ ಪೌತಿ ವಾರಸುದಾರ ಹಾಲಮ್ಮ ಕೋಂ ಶಿವಪ್ಪ, ಮೈನರ್ ಮಗ ಅಜ್ಜಯ್ಯ ಸಿರಿಗೆರೆ	ಚಂದ್ರಪ್ಪ ಕೆ. ಬಸವರಾಜಪ್ಪ ಕೆ. ಶರಣಪ್ಪ ಕೆ.ಶಿವಪ್ಪ	164/1	ಖುಷ್ಕಿ	ಲಾ ನಂ.164/2	ಲಾ.ನಂ. 171	ಲಾ.ನಂ.165	ರಸ್ತೆ	3.06	3.12
2.	ಕೆ. ಚಂದ್ರಪ್ಪ ಬಿನ್ ಕೆಂಚಪ್ಪ ಕೆ. ಬಸವರಾಜಪ್ಪ ಬಿನ್ ಕೆಂಚಪ್ಪ ಕೆ. ಶರಣಪ್ಪ ಬಿನ್ ಕೆಂಚಪ್ಪ ಕೆ. ಶಿವಪ್ಪ ಬಿನ್ ಕೆಂಚಪ್ಪ ಪೌತಿ ವಾರಸುದಾರ ಹಾಲಮ್ಮ ಕೋಂ ಶಿವಪ್ಪ, ಮೈನರ್ ಮಗ ಅಜ್ಜಯ್ಯ ಸಿರಿಗೆರೆ	ಚಂದ್ರಪ್ಪ ಕೆ. ಬಸವರಾಜಪ್ಪ ಕೆ. ಶರಣಪ್ಪ ಕೆ. ಶಿವಪ್ಪ	164/2	ಖುಷ್ಕಿ	ಲಾ ನಂ.164/5.3	ಲಾ ನಂ. 164/1	ಲಾ.ನಂ. 165	ರಸ್ತೆ	4.23	4.53
								ಒಟ್ಟು	**7.29**	

ಪಿ.ಆರ್. 513

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ. ವೆಂಕಟೇಶಮೂರ್ತಿ

ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಸ್ವಾಧೀನ-2 ಮತ್ತು ಪುನರ್ವಸತಿ)

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

Sub: KVAT Act, 2003-Clarification under Section 59(4) regarding the rate of tax applicable on 'parts of seed processing machinery'-reg.

Ref: Application Dated:24.09.2009 of Sri K.B. Vijay Kumar, Managing Director, Fowler Westrup (India) Pvt Limited, Plot 249/250, Bommasandra Industrial Area, 3rd Phase, Bangalore-560 099.

In the application cited above, Sri K.B. Vijay Kumar, Managing Director, Fowler Westrup (India) Pvt Limited, Plot 249/250, Bommasandra Industrial Area, 3rd Phase, Bangalore-560 099, has sought clarification regarding the rate of tax applicable on 'parts of seed processing machinery'.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

Clarification No.CLR.CR.112/09-10, Dated:25th October, 2009

It is clarified that 'seed processing machinery and parts' are liable to tax at 4% as capital goods under entry 45 of the Third Schedule to the Karnataka Value Added Tax Act, 2003.

PRADEEP SINGH KHAROLA
PR-1119 Commissioner of Commercial Taxes,
(Karnataka), Bangalore.

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

Sub: KVAT Act, 2003-Clarification under Section 59(4) regarding the rate of tax applicable on (1) Ferro Alloys; (2) Calcined Petroleum Coke; (3) Met Coke; and (4) Graphite-reg.

Ref: Application Dated:25.07.2009, the Director of Rhodium Ferro Alloys Pvt Ltd., No.20, 6th 'A' Main Road, J.C.Nagar, Kurubarahalli, Bangalore-560 086.

In his application cited above, the Director of Rhodium Ferro Alloys Pvt Ltd., No.20, 6th 'A' Main Road, J.C.Nagar, Kurubarahalli, Bangalore-560 086, has sought clarification regarding the rate of tax applicable on (1) Ferro Alloys; (2) Calcined Petroleum Coke; (3) Met Coke; and (4) Graphite.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

Clarification No.CLR.CR.79/09-10, Dated:27th October, 2009

It is hereby clarified that the rates of tax applicable on the following goods are as indicated hereunder:

Sl. No.	Goods	Rate of tax/ Section
1.	Ferro Alloys covered under CET heading 7202	12.5% under Section 4(1)(b) of the KVAT Act, 2003.
2.	Calcines Petroleum Coke covered under CET heading 2713	12.5% under Section 4(1)(b) of the KVAT Act, 2003.
3.	Met Coke covered under CET heading 2704	12.5% under Section 4(1)(b) of the KVAT Act, 2003.
4.	(a) Artificial Graphite covered under CET heading 3801 10 00 (b) Graphite covered under CET heading 2504	4% under entry 51 of the Third Schedule to the KVAT Act, 2003 12.5% under Section 4(1)(b) of the KVAT Act, 2003.

PRADEEP SINGH KHAROLA
PR-1120 Commissioner of Commercial Taxes,
(Karnataka), Bangalore.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ
ಸಂಖ್ಯೆ:ಡಬ್ಲ್ಯೂಸಿಎ:ಎಫ್:ಎಸ್‌ಆರ್-28:2009, ದಿನಾಂಕ:2ನೇ ನವೆಂಬರ್, 2009

ಅರ್ಜಿದಾರರು:
1) ಶ್ರೀ ಬಸಪ್ಪ ಬಿನ್ ವೀರಭದ್ರಪ್ಪ,
2) ಶ್ರೀಮತಿ ಮಹದೇವಮ್ಮ ಕೋಂ ಬಸಪ್ಪ
ವಾಸ: ಬಾಚನಹಳ್ಳಿ ಗ್ರಾಮ, ಹಳ್ಳಿ ಮೈಸೂರು ಹೋಬಳಿ, ಹೊಳೆನರಸೀಪುರ ತಾಲ್ಲೂಕು, ಹಾಸನ ಜಿಲ್ಲೆ.

ವಿರುದ್ಧ

ಪ್ರತಿವಾದಿಗಳು:
1) ಶ್ರೀ ಎಸ್.ಡಿ. ವಿಶ್ವನಾಥ ಬಿನ್ ಟಿ. ದೇವೇಗೌಡ, ಕಾಫಿ ಪ್ಲಾಂಟರ್.
ಶ್ರೀ ಲಕ್ಷ್ಮಿ ವೆಂಕಟೇಶ್ವರ ಟ್ರಾನ್ಸ್‌ಪೋರ್ಟ್ ಕಂ.ಎಮ್.ಜಿ.ರೋಡ್, ರವೀಂದ್ರನಗರ, ಹಾಸನ.
2) ದಿ ಓರಿಯಂಟಲ್ ಇನ್‌ಶೂರೆನ್ಸ್ ಕಂ.ಲಿ., ಹಾಸನ.

ಪ್ರಕಟಣೆ

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಬಿ.ಬಿ.ಸಂತೋಷ್ ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:01.07.2009ರಂದು ಸಾವನ್ನಪ್ಪಿರುತ್ತಾರೆ ಎಂದು ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಮೃತರ ಅವಲಂಬಿತರು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗೆ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

ಹೆಚ್.ಎಲ್. ಗುರುಪ್ರಸಾದ್
ಪಿ.ಆರ್.1113 ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ಹಾಸನ ಉಪವಿಭಾಗ, ಹಾಸನ.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯ, ಹಾಸನ ಉಪವಿಭಾಗ, ಹಾಸನ
ಸಂಖ್ಯೆ:ಡಬ್ಲ್ಯೂಸಿಎ:ಎಫ್:ಎಸ್‌ಆರ್-30:2009, ದಿನಾಂಕ:29ನೇ ಅಕ್ಟೋಬರ್, 2009

ಅರ್ಜಿದಾರರು:
1) ಶ್ರೀ ಮಹೇಶ್ವರಪ್ಪ ಬಿನ್ ರಾಮಣ್ಣ
2) ಶ್ರೀಮತಿ ತುಳಸಮ್ಮ ಕೋಂ ಮಹೇಶ್ವರಪ್ಪ,
ವಾಸ: ಜೋಡಿಕೋಡಿಹಳ್ಳಿ ಗ್ರಾಮ, ಬೆಳನಹಳ್ಳಿ ಅಂಚೆ, ತರಿಕೆರೆ ತಾಲ್ಲೂಕು.

ವಿರುದ್ಧ

ಪ್ರತಿವಾದಿಗಳು:
1) ಶ್ರೀ ಹೆಚ್.ಕೆ. ಗುರುಮೂರ್ತಿ ಬಿನ್ ಹೆಚ್.ಎಸ್. ಕೃಷ್ಣಪ್ಪ, ಮನೆ ನಂ.898, ಗಂಧದ ಕೋಟೆ ಹಿಂಭಾಗ, ಕೆ.ಆರ್.ಪುರಂ, ಹಾಸನ.
2) ದಿ ಬ್ರಾಂಚ್ ಮ್ಯಾನೇಜರ್, ದಿ ನ್ಯಾಷನಲ್ ಇನ್‌ಶೂರೆನ್ಸ್ ಕಂ.ಲಿ., ಬಸ್‌ಸ್ಟ್ಯಾಂಡ್ ರಸ್ತೆ, ಹಾಸನ.

ಪ್ರಕಟಣೆ

ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಮೃತ ಮಂಜ @ ಮಂಜುನಾಥ ರವರು ಪ್ರತಿವಾದಿಗಳಲ್ಲಿ ಕೆಲಸದ ಮೇಲಿದ್ದಾಗ ದಿನಾಂಕ:01/02.06.2009ರಂದು ಸಾವನ್ನಪ್ಪಿರುತ್ತಾರೆ ಎಂದು ಕಾರ್ಮಿಕ ನಷ್ಟ ಪರಿಹಾರವನ್ನು ಕೋರಿ ಮೇಲ್ಕಂಡ ಮೃತರ ಅವಲಂಬಿತರು ಈ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಈ ಪ್ರಕಟಣೆಯ ಮೂಲಕ ಸಾರ್ವಜನಿಕರಿಗೆ ಮತ್ತು ಸಂಬಂಧಪಟ್ಟವರಿಗೆ ತಿಳಿಸುವುದೇನೆಂದರೆ ಈ ಬಗ್ಗೆ ಏನಾದರೂ ಆಕ್ಷೇಪಣೆಗಳಿದ್ದರೆ ಅಥವಾ ತಾವೇನಾದರೂ ಮೃತರ ನಿಜವಾದ ವಾರಸುದಾರರೆಂದು ಪರಿಗಣಿಸಬೇಕೆಂದು ಕೇಳಿಕೊಳ್ಳುವುದಾದರೆ ಅಂತಹವರು ಈ ಪ್ರಕಟಣೆ ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ 30 ದಿನಗಳೊಳಗೆ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಯನ್ನಾಗಲೀ ಈ ನ್ಯಾಯಾಲಯಕ್ಕೆ ಸಲ್ಲಿಸತಕ್ಕದ್ದು. ಮೇಲೆ ನಿಗದಿಪಡಿಸಿರುವ ಅವಧಿಯಲ್ಲಿ ಆಕ್ಷೇಪಣೆಗಳಾಗಲೀ ಅಥವಾ ಅರ್ಜಿಗಳಾಗಲೀ ಯಾರಿಂದಲೂ ಬಾರದೇ ಇದ್ದಲ್ಲಿ ಮೇಲ್ಕಂಡ ಅರ್ಜಿದಾರರ ಅರ್ಜಿಯನ್ನೇ ವಿಚಾರಣೆಗೆ ತೆಗೆದುಕೊಳ್ಳಲಾಗುವುದು.

ಹೆಚ್.ಎಲ್. ಗುರುಪ್ರಸಾದ್

ಪಿ.ಆರ್.1114

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ಹಾಸನ ಉಪವಿಭಾಗ, ಹಾಸನ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯದಲ್ಲಿ, ಕೋಲಾರ
ಪ್ರಕರಣ ಸಂಖ್ಯೆ:ಡಬ್ಲ್ಯೂಸಿಎ:ಎಫ್.ಸಿ-10/2007,

ಅರ್ಜಿದಾರರು:		ಪ್ರತಿವಾದಿಗಳು:
1) Sree R. Sannaiah S/o Late Rangaiah 2) Smt. N. Nanjamani W/o R. Sannaiah Both the Retirements are R/o PWD Colony, Kolar Town.	V/s	1) The Secretary Sree Devraj urs Medical College Tamaka Kolar. 2) The Superintendent Sre Devraj Urs Education Trust Tamaka Kolar.

ಅಧಿಸೂಚನೆ

ಅರ್ಜಿದಾರರಾದ Sree R. Sannaiah ಅವರು ತಮ್ಮ ಮಗ S.M. Mahesh ಅವರು 1ನೇ:2ನೇ ಪ್ರತಿವಾದಿ Sree Devraja Urs Medical College Tamaka Kolar, ರವರ ಬಳಿ ಚಾಲಕ: ಕ್ಲೀನರ್:ಕೂಲಿ ಆಗಿದ್ದು, ಕರ್ತವ್ಯ ನಿರತನಾಗಿದ್ದಾಗ ದಿನಾಂಕ:14.10.2006 ರಂದು ಅಪಘಾತಕ್ಕೀಡಾಗಿ ಮರಣ ಹೊಂದಿರುತ್ತಾರೆಂದು ತಿಳಿಸಿ, ಮೃತನ ಅವಲಂಬಿತರಾದ ಅವರಿಗೆ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರೆ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನದಿಂದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಂ ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮ ಜರುಗಿಸಲಾಗುತ್ತದೆಂದು ತಿಳಿಸಲಾಗಿದೆ.

ಈ ಅಧಿಸೂಚನೆಯನ್ನು ನನ್ನ ಹಸ್ತಾಕ್ಷರ ಹಾಗೂ ಈ ನ್ಯಾಯಾಲಯದ ಮೊಹರಿನೊಂದಿಗೆ ಇದೇ ದಿನಾಂಕ:03.10.2009 ರಂದು ನೀಡಲಾಗಿದೆ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ಕೋಲಾರ ಉಪವಿಭಾಗ, ಕೋಲಾರ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯದಲ್ಲಿ, ಕೋಲಾರ
ಪ್ರಕರಣ ಸಂಖ್ಯೆ:ಡಬ್ಲ್ಯೂಸಿಎ:ಎಫ್.ಸಿ-21/2008,

ಅರ್ಜಿದಾರರು:		ಪ್ರತಿವಾದಿಗಳು:
Smt. Seethamma W/o Late H.Ramappa Yeechhanna Palli Village, Mallanayakana halli Post, Tayalur Hobli, Mulbagal Tq:	V/s	1) B. Vijaya Kumar, S/o Narsimhalu, Vanamala Dinne, Pungnur Tq: AP. 2) The New India Assurance Co.Ltd., Branch Office 612701, 10-214, Prakasham High Road, Opposite to Dist Court, Chittur City & Dist: AP-517001.

ಅಧಿಸೂಚನೆ

ಅರ್ಜಿದಾರರಾದ Smt. Seethamma ಅವರು ತಮ್ಮ ಮಗ Y.R. Subramanyam ಅವರು 1ನೇ:2ನೇ ಪ್ರತಿವಾದಿ B. Vijiya Kumar, ರವರ ಬಳಿ ಚಾಲಕ: ಕ್ಲೀನರ್:ಕೂಲಿ ಆಗಿದ್ದು, ಕರ್ತವ್ಯ ನಿರತನಾಗಿದ್ದಾಗ ದಿನಾಂಕ:26.08.2008 ರಂದು ಅಪಘಾತಕ್ಕೀಡಾಗಿ ಮರಣ ಹೊಂದಿರುತ್ತಾರೆಂದು ತಿಳಿಸಿ, ಮೃತನ ಅವಲಂಬಿತರಾದ ಅವರಿಗೆ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರೆ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನದಿಂದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಂ ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮ ಜರುಗಿಸಲಾಗುತ್ತದೆಂದು ತಿಳಿಸಲಾಗಿದೆ.

ಈ ಅಧಿಸೂಚನೆಯನ್ನು ನನ್ನ ಹಸ್ತಾಕ್ಷರ ಹಾಗೂ ಈ ನ್ಯಾಯಾಲಯದ ಮೊಹರಿನೊಂದಿಗೆ ಇದೇ ದಿನಾಂಕ:03.10.2009 ರಂದು ನೀಡಲಾಗಿದೆ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ಕೋಲಾರ ಉಪವಿಭಾಗ, ಕೋಲಾರ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ ಆಯುಕ್ತರ ನ್ಯಾಯಾಲಯದಲ್ಲಿ, ಕೋಲಾರ
ಪ್ರಕರಣ ಸಂಖ್ಯೆ:ಡಬ್ಲ್ಯೂಸಿಎ:ಎಫ್.ಸಿ–22/2008,

ಅರ್ಜಿದಾರರು:		**ಪ್ರತಿವಾದಿಗಳು:**
1) Smt. N. Manjula W/o Late Naraynappa 2) Master Prathap S/o Naraynappa 3) Kum: Kavya D/o Naraynappa R/o Thatikallu Village, Mulbagal Tq: Kolar Dist:	**V/s**	1) B. Vijaya Kumar, S/o B.Narsimhalu, Vanamala Dinne, Post & Pungnur Manalalan/ Village, Chittor Dist:-517001. 2) The New India Assurance Co.Ltd., 10-214, Prakasham High Road, Opposite to Dist Court, Chittur City & Dist: AP-517001.

ಅಧಿಸೂಚನೆ

ಅರ್ಜಿದಾರರಾದ N. Manjula ಅವರು ತಮ್ಮ ಮಗ Narayanappa ಅವರು 1ನೇ ಪ್ರತಿವಾದಿ B. Vijiya Kumar, ರವರ ಬಳಿ ಚಾಲಕ: ಕ್ಲೀನರ್:ಕೂಲಿ ಆಗಿದ್ದು, ಕರ್ತವ್ಯ ನಿರತನಾಗಿದ್ದಾಗ ದಿನಾಂಕ:26.08.2008 ರಂದು ಅಪಘಾತಕ್ಕೀಡಾಗಿ ಮರಣ ಹೊಂದಿರುತ್ತಾರೆಂದು ತಿಳಿಸಿ, ಮೃತನ ಅವಲಂಬಿತರಾದ ಅವರಿಗೆ ಪರಿಹಾರವನ್ನು ಕೊಡಿಸಿಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಿದ್ದು ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದರೆ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರೆ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಕರ್ನಾಟಕ ರಾಜ್ಯ ಪತ್ರದಲ್ಲಿ ಪ್ರಕಟಣೆಯಾದ ದಿನದಿಂದ 30 ದಿನಗಳ ಒಳಗಾಗಿ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಂ ಅರ್ಜಿ: ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮ ಜರುಗಿಸಲಾಗುತ್ತದೆಂದು ತಿಳಿಸಲಾಗಿದೆ.

ಈ ಅಧಿಸೂಚನೆಯನ್ನು ನನ್ನ ಹಸ್ತಾಕ್ಷರ ಹಾಗೂ ಈ ನ್ಯಾಯಲಯದ ಮೊಹರಿನೊಂದಿಗೆ ಇದೇ ದಿನಾಂಕ:25.09.2009 ರಂದು ನೀಡಲಾಗಿದೆ.

ಕಾರ್ಮಿಕ ಅಧಿಕಾರಿ ಮತ್ತು ಕಾರ್ಮಿಕ ನಷ್ಟ ಪರಿಹಾರ
ಆಯುಕ್ತರು, ಕೋಲಾರ ಉಪವಿಭಾಗ, ಕೋಲಾರ.

ಪಿ.ಆರ್.1121

ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಇವರ ನಡೆವಳಿ
ಸಂ.ಸಿಬ್ಬಂದಿ.ಶಿಸ್ತು.ಅಗೈಹಾ.37/2005–06, ದಿನಾಂಕ:1/7ನೇ ಆಗಸ್ಟ್, 2009

ವಿಷಯ: ಶ್ರೀ ಆರ್.ಎನ್.ನಾಗರಾಜ, ದ್ವಿತೀಯ ದರ್ಜೆ ಭೂಮಾಪಕರು, ತಹಸೀಲ್ದಾರ್ ಕಛೇರಿ, ಹೊಳೆನರಸೀಪುರ ಇವರ ಅನಧಿಕೃತ ಗೈರುಹಾಜರಿ ಬಗ್ಗೆ – ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಉಲ್ಲೇಖ:
1) ಈ ಕಛೇರಿಯ ಸಮಸಂಖ್ಯೆ ಕಾರಣ ಕೇಳಿ ನೋಟೀಸ್ (ಆರೋಪ ಪಟ್ಟಿಯೊಂದಿಗೆ) ದಿನಾಂಕ:16.12.2006.
2) ನೌಕರರ ಹೇಳಿಕೆ ದಿನಾಂಕ: ಇರುವುದಿಲ್ಲ.
3) ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿದ ಈ ಕಛೇರಿಯ ಸಮಸಂಖ್ಯೆ ಆದೇಶ ದಿನಾಂಕ:18.01.2008.
4) ವಿಚಾರಣಾಧಿಕಾರಿಗಳ ವರದಿ ಸಂ.ಸಿಬ್ಬಂದಿ.ಶಿಸ್ತು.ಅಗೈಹಾ.2/07–08 ದಿನಾಂಕ:11.02.2009.
5) ಈ ಕಛೇರಿ ಸಮಸಂಖ್ಯೆಯ 2ನೇ ಕಾರಣ ಕೇಳಿ ನೋಟೀಸ್ ದಿ:26/30.03.2009.

ಪ್ರಸ್ತಾವನೆ:

ಶ್ರೀ ಆರ್.ಎನ್.ನಾಗರಾಜ, ದ್ವಿತೀಯ ದರ್ಜೆ ಭೂಮಾಪಕರು, ತಹಸೀಲ್ದಾರ್, ಹೊಳೆನರಸೀಪುರ ಇವರು ಈ ಹಿಂದೆ ತಾಲ್ಲೂಕು ಭೂಮಾಪನ ಕಛೇರಿ ಹೊಳೆನರಸೀಪುರ ಕಛೇರಿಯಲ್ಲಿದ್ದಾಗ ದಿನಾಂಕ:04.08.2004 ರಿಂದ 24.12.2004 ರವರೆಗೆ ಯಾವುದೇ ರಜೆ ಅರ್ಜಿಯನ್ನು ಸಲ್ಲಿಸದೆ ಸಕ್ಷಮ ಪ್ರಾಧಿಕಾರಿಯಿಂದ ಪೂರ್ವಾನುಮತಿಯನ್ನು ಪಡೆಯದೆ ಕರ್ತವ್ಯಕ್ಕೆ ಗೈರುಹಾಜರಾಗಿರುತ್ತಾರೆ. ಈ ಬಗ್ಗೆ ಈ ಕಛೇರಿಯಿಂದ ಕಾರಣ ಕೇಳಿ ನೋಟೀಸ್‌ನ್ನು ಆರೋಪ ಪಟ್ಟಿಯೊಂದಿಗೆ ದಿನಾಂಕ:16.12.2006 ರಂದು ಜಾರಿ ಮಾಡಲಾಗಿರುತ್ತದೆ. (ನೌಕರರ ವಿರುದ್ಧ ಮಾಡಲಾದ ಆರೋಪಗಳನ್ನು ಈ ಕೆಳಕಂಡಂತೆ ಪುನರುಚ್ಚರಿಸಿದೆ. (ಸದರಿ ನೌಕರರನ್ನು ಇನ್ನು ಮುಂದೆ ಆಪಾದಿತ ನೌಕರರೆಂದು ಕರೆಯಲಾಗಿದೆ)

ಆರೋಪ:

ಶ್ರೀ ಆರ್.ಎನ್.ನಾಗರಾಜ, ದ್ವಿತೀಯ ದರ್ಜೆ ಭೂಮಾಪಕರು, ಹಾಲಿ ತಹಸೀಲ್ದಾರ್ ಕಛೇರಿ, ಹೊಳೆನರಸೀಪುರ ಆದ ನೀವು ಈ ಹಿಂದೆ ತಾಲ್ಲೂಕು ಭೂಮಾಪನ ಕಛೇರಿ ಹೊಳೆನರಸೀಪುರದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ದಿನಾಂಕ:04.08.2004 ರಿಂದ 24.12.2004 ರವರೆಗೆ ಕಛೇರಿ ಕರ್ತವ್ಯಕ್ಕೆ ಅನಧಿಕೃತ ಗೈರುಹಾಜರಾಗಿರುತ್ತೀರಿ. ಈ ನಿಮ್ಮ ಗೈರುಹಾಜರಿಗೆ ಸಕ್ಷಮ ಪ್ರಾಧಿಕಾರಿಯಿಂದ ರಜೆ ಮಂಜೂರಾತಿಯನ್ನಾಗಲೀ, ಪೂರ್ವಾನುಮತಿಯನ್ನಾಗಲೀ ಪಡೆಯದೆ ಅನಧಿಕೃತ ಗೈರುಹಾಜರಿಯಾಗಿ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 106(ಎ) ಮತ್ತು 108 ನ್ನು ಉಲ್ಲಂಘಿಸಿ ದುರ್ನಡತೆ ಎಸಗಿದಂತಾಗಿರುವುದರಿಂದ ಹಾಗೂ ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿ 1966 ರ ನಿಯಮ 3(i) (ii) ಮತ್ತು (iii) ನ್ನು ಉಲ್ಲಂಘಿಸಿ ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957 ರನ್ವಯ ಶಿಸ್ತು ಕ್ರಮ ಜರುಗಿಸಲು ಅನುವು ಮಾಡಿಕೊಟ್ಟಿರುತ್ತೀರಿ. ಆದ್ದರಿಂದ ಈ ಆರೋಪ.

ಸದರಿ ನೋಟೀಸನ್ನು ನೌಕರರು ದಿನಾಂಕ:08.01.2007 ರಂದು ಸ್ವೀಕರಿಸಿ ನೀಡಿರುವ ಹೇಳಿಕೆಯಲ್ಲಿ ಆರೋಗ್ಯ ಸರಿ ಇಲ್ಲದ ಕಾರಣ ವೈದ್ಯರ ಸಲಹೆ ಮೇರೆಗೆ ರಜೆಯನ್ನು ವಿಸ್ತರಿಸಿರುವ ಬಗ್ಗೆ ತಿಳಿಸಿರುತ್ತಾರೆ.

ಆದಕಾರಣ ಆರೋಪಗಳ ಸತ್ಯಾಸತ್ಯತೆಯನ್ನು ತಿಳಿಯಲು ದಿನಾಂಕ:18.01.2008 ರ ಈ ಕಛೇರಿ ನಡೆವಳಿಯಲ್ಲಿ ವಿಚಾರಣಾಧಿಕಾರಿಗಳನ್ನು ನೇಮಕ ಮಾಡಿದಂತೆ, ವಿಚಾರಣಾಧಿಕಾರಿಗಳು ವಿಚಾರಣೆ ಜರುಗಿಸಿರುತ್ತಾರೆ. ವಿಚಾರಣಾಧಿಕಾರಿಗಳು ದಿನಾಂಕ:26.06.2008, 10.07.2008, 19.08.2008, 18.09.2008, 15.10.2008, 03.11.2008, 25.11.2008, 16.12.2008 ಮತ್ತು 20.12.2008 ರಂದು ವಿಚಾರಣೆ ಜರುಗಿಸಿರುತ್ತಾರೆ. ಆಪಾದಿತರು ದಿನಾಂಕ:04.08.2004, 05.08.2004 ರಂದು ಸಾಂದರ್ಭಿಕ ರಜೆಯನ್ನು ಪಡೆದು ನಂತರ ಗೈರುಹಾಜರಾಗಿ, ದಿನಾಂಕ:17.09.2004 ಮತ್ತು 12.10.2004 ರಂದು ಕಛೇರಿಯಿಂದ ನೀಡಿದ ನೋಟೀಸ್‌ಗಳನ್ನು ಸ್ವೀಕರಿಸಿದ್ದರೂ, ಕರ್ತವ್ಯಕ್ಕೆ ಹಾಜರಾಗದೆ ಗೈರುಹಾಜರಾಗಿರುವ ಬಗ್ಗೆ ಸ್ವತ: ಆಪಾದಿತರು ಒಪ್ಪಿಕೊಂಡಿರುವ ಹಿನ್ನೆಲೆಯಲ್ಲಿ ಆರೋಪ ಸಾಬೀತಾಗಿರುತ್ತದೆ ಎಂದು ವಿಚಾರಣಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ. ವಿಚಾರಣಾಧಿಕಾರಿಗಳ ಅಭಿಪ್ರಾಯವನ್ನು ಒಪ್ಪಿ ಈ ಕಛೇರಿಯಿಂದ ದಿ:26/30-3-09 ರಂದು 2ನೇ ಕಾರಣ ಕೇಳಿ ನೋಟೀಸ್‌ನ್ನು ಜಾರಿ ಮಾಡಲಾಗಿರುತ್ತದೆ. ಆದರೆ ನೌಕರರು ಈ ವರೆಗೂ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

ಆಪಾದಿತರು ದಿನಾಂಕ:04.08.2004 ರಿಂದ 24.12.2004 ರ ದೀರ್ಘಾವಧಿಗೆ ಅನಧಿಕೃತ ಗೈರುಹಾಜರಾಗಿರುವ ಕುರಿತು ನೌಕರರ ಸೇವಾ ವಿವರಗಳನ್ನು ಪರಿಶೀಲಿಸಿದಾಗ, ಆಪಾದಿತರು ಕರ್ತವ್ಯಕ್ಕೆ ಗೈರುಹಾಜರಾಗುವ ಪ್ರವೃತ್ತಿಯನ್ನು ಹೊಂದಿದ್ದು, ದಿನಾಂಕ:09.06.2006 ರಿಂದ 31.07.2007 ರ ದೀರ್ಘಾವಧಿಗೆ ಗೈರುಹಾಜರಾಗಿರುವ ಬಗ್ಗೆ ಜಿಲ್ಲಾಧಿಕಾರಿಗಳು, ಹಾಸನ ರವರಲ್ಲಿ ಶಿಸ್ತು ಕ್ರಮ ಜಾರಿಯಲ್ಲಿರುತ್ತದೆ. ಮೇಲ್ಕಂಡ ಅಂಶಗಳನ್ನು ಗಮನಿಸಿದಾಗ ಸದರಿಯವರಿಗೆ ಸರ್ಕಾರಿ ಕೆಲಸ ನಿರ್ವಹಿಸುವಲ್ಲಿ ಯಾವುದೇ ಶ್ರದ್ಧೆ ಆಸಕ್ತಿ ಇಲ್ಲದಿರುವುದು ಕಂಡುಬರುತ್ತಿದ್ದು, ಸದರಿ ಪ್ರಕರಣದಲ್ಲಿ 4 ತಿಂಗಳಿಗೆ ಮೇಲ್ಪಟ್ಟು ಅನಧಿಕೃತ ಗೈರುಹಾಜರಾಗಿ ಕರ್ನಾಟಕ ಸರ್ಕಾರಿ ಸೇವಾ ನಿಯಮ 108 ನ್ನು ಆಕರ್ಷಿಸಿರುವ ಹಿನ್ನೆಲೆಯಲ್ಲಿ ಆಪಾದಿತ ನೌಕರರು ಗಂಭೀರವಾದ ಕರ್ತವ್ಯ ಲೋಪ ಮತ್ತು ದುರ್ನಡತೆ ಎಸಗಿರುತ್ತಾರೆ.

ಕರ್ನಾಟಕ ಸರ್ಕಾರಿ ಸೇವಾ ನಿಯಮಾವಳಿಯ ನಿಯಮ 108 ರ ಪ್ರಕಾರ, ಸರ್ಕಾರವು ಪ್ರಕರಣದ ವಿಶೇಷ ಸಂದರ್ಭಗಳಿಂದಾಗಿ ಅನ್ಯಥಾ ನಿರ್ಣಯಿಸದ ಹೊರತು 4 ತಿಂಗಳು ಹಾಗೂ ಹೆಚ್ಚಿನ ಅವಧಿಗೆ ರಜೆ ಪಡೆದುಕೊಳ್ಳದೇ ಕರ್ತವ್ಯಕ್ಕೆ ವಿಮುಖರಾಗಿ ಗೈರುಹಾಜರಾಗುವ ಸರ್ಕಾರಿ ನೌಕರರನ್ನು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957 ರ ನಿಯಮಾವಳಿಯಲ್ಲಿ ನಮೂದಿಸಲಾದ ಕಾರ್ಯ ವಿಧಾನವನ್ನನುಸರಿಸಿ ಸೇವೆಯಿಂದ ವಜಾ ಮಾಡಬಹುದಾಗಿರುತ್ತದೆ. ಅಥವಾ ಸೇವೆಯಿಂದ ತೆಗೆದುಹಾಕಬಹುದಾಗಿರುತ್ತದೆ. ಆದ ಕಾರಣ ಆಪಾದಿತರು 4 ತಿಂಗಳಿಗೆ ಮೇಲ್ಪಟ್ಟು ಅನಧಿಕೃತ ಗೈರುಹಾಜರಾಗಿರುವುದು ತೀವ್ರತರವಾದ ದುರ್ವರ್ತನೆ ಆಗಿರುವುದರಿಂದ ಹಾಗೂ ಅವರ ವಿರುದ್ಧ ಮಾಡಲಾದ ಆರೋಪವು ಸಾಬೀತಾಗಿರುವ ಹಿನ್ನೆಲೆಯಲ್ಲಿ ಆಪಾದಿತರಿಗೆ ಕಠಿಣ ದಂಡನೆ ವಿಧಿಸುವುದು ಸೂಕ್ತವೆಂದು ಅಭಿಪ್ರಾಯಪಟ್ಟು ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ರಾಜೀವ್ ಚಾವ್ಲಾ, ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಆದ ನಾನು ಕರ್ನಾಟಕ ಸರ್ಕಾರಿ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) 1957 ರ ನಿಯಮ 8(viii) ರೊಂದಿಗೆ ಓದಿಕೊಂಡ ನಿಯಮ 9(3) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ ಆರ್.ಎನ್.ನಾಗರಾಜ, ದ್ವಿತೀಯ ದರ್ಜೆ ಭೂಮಾಪಕರು, ತಹಸೀಲ್ದಾರ್ ಕಛೇರಿ, ಹೊಳೆನರಸೀಪುರ ರವರನ್ನು ಸೇವೆಯಿಂದ ವಜಾ ಮಾಡಿ ಆದೇಶಿಸಿದ್ದೇನೆ.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಪಿ.ಆರ್.771

ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಇವರ ನಡೆವಳಿ

ಸಂ.ಸಿಬ್ಬಂದಿ.ಶಿಸ್ತು.26/03-04, ಬೆಂಗಳೂರು, ದಿನಾಂಕ:2ನೇ ಜೂನ್,/ 7ನೇ ಆಗಸ್ಟ್, 2009

ವಿಷಯ: ಶ್ರೀ ಎನ್.ಜಿ. ನಾಗರಾಜಯ್ಯ, ಪ್ರಥಮ ದರ್ಜೆ ಭೂಮಾಪಕರು ಹಾಲಿ ತಹಸೀಲ್ದಾರ್ ಕಛೇರಿ ಮಾಲೂರು ಇವರ ವಿರುದ್ಧದ ಶಿಸ್ತು ಪ್ರಕರಣದ – ಅಂತಿಮ ಆದೇಶ ಹೊರಡಿಸುವ ಬಗ್ಗೆ.

ಉಲ್ಲೇಖ:
1) ಭೂದಾಖಲೆಗಳ ಜಂಟಿ ನಿರ್ದೇಶಕರು, ಬೆಂಗಳೂರು ರವರ ನಡೆವಳಿ ಸಂ.ಸಿಬ್ಬಂದಿ.ಶಿಸ್ತು.26/03-04 ದಿನಾಂಕ:21.11.2003 ಮತ್ತು 10.02.2004.
2) ಭೂದಾಖಲೆಗಳ ಜಂಟಿ ನಿರ್ದೇಶಕರು, ಬೆಂಗಳೂರು ರವರ ಕಾರಣ ಕೇಳಿ ನೋಟೀಸ್ ಸಂ.ಸಿಬ್ಬಂದಿ.ಶಿಸ್ತು.26/03-04 ದಿನಾಂಕ:06.05.2004 (ಆರೋಪ ಪಟ್ಟಿಯೊಂದಿಗೆ)
3) ಶ್ರೀ ಎನ್.ಜಿ.ನಾಗರಾಜಯ್ಯ, ಪ್ರಥಮ ದರ್ಜೆ ಭೂಮಾಪಕರವರ ಬರಹ ಹೇಳಿಕೆ ದಿನಾಂಕ:16.06.2004.
4) ಭೂದಾಖಲೆಗಳ ಜಂಟಿ ನಿರ್ದೇಶಕರು, ಬೆಂಗಳೂರು ರವರ ನಡೆವಳಿ ಸಂ.ಸಿ.ಶಿ.26/03-04 ದಿನಾಂಕ:25.01.2005.
5) ಈ ಕಛೇರಿ ನಡೆವಳಿ ಸಮಸಂಖ್ಯೆ ದಿನಾಂಕ:24.03.2007.
6) ವಿಚಾರಣಾಧಿಕಾರಿಗಳು, ನಗರಮಾಪನ, ತಂಡ-2, ಬೆಂಗಳೂರು ರವರ ವರದಿ ಸಂ.ಸಿಬ್ಬಂದಿ.ಶಿಸ್ತು.34/04-05 ದಿನಾಂಕ:25.11.2008.
7) ಎರಡನೇ ಕಾರಣ ಕೇಳಿ ನೋಟೀಸ್ ಸಮಸಂಖ್ಯೆ ದಿನಾಂಕ:10.12.2008 (ವಿಚಾರಣಾ ವರದಿ ಪ್ರತಿ)

ಪ್ರಸ್ತಾವನೆ:

ಶ್ರೀ ಎನ್.ಜಿ.ನಾಗರಾಜಯ್ಯ, ಪ್ರಥಮ ದರ್ಜೆ ಭೂಮಾಪಕರು ಹಾಲಿ ತಹಸೀಲ್ದಾರ್ ಕಛೇರಿ, ಮಾಲೂರು ಇವರು ಈ ಹಿಂದೆ, ಭೂದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ ಬೆಂಗಳೂರು ಉತ್ತರ ತಾಲ್ಲೂಕು ಯಲಹಂಕ ಹೋಬಳಿ ಜಾರಕಬಂಡೆ ಕಾವಲು ಗ್ರಾಮದ ಸ.ನಂ.145 ಕ್ಕೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ಅಕ್ರಮವಾಗಿ ತಿದ್ದಿ ಮೂಲ ಟಿಪ್ಪಣಿಯನ್ನು ಗೈರು ವಿಲೇ ಮಾಡಿದ ಕಾರಣ, ಹಿಂದಿನ ಭೂದಾಖಲೆಗಳ ಜಂಟಿ ನಿರ್ದೇಶಕರು, ಬೆಂಗಳೂರು ರವರು ಆರೋಪ ಪಟ್ಟಿಯನ್ನು ಕಾರಣ ಕೇಳಿ ನೋಟೀಸನ್ನು ದಿನಾಂಕ:06.05.2004 ರಂದು ಜಾರಿ ಮಾಡಿರುತ್ತಾರೆ. ಸದರಿ ಆರೋಪವನ್ನು ಈ ಕೆಳಕಂಡಂತೆ ಪುನರುಚ್ಚರಿಸಿದೆ.

ಆರೋಪ:

ಶ್ರೀ ಎನ್.ಜಿ.ನಾಗರಾಜಯ್ಯ, ಪ್ರಥಮ ದರ್ಜೆ ಭೂಮಾಪಕರು, ಭೂದಾಖಲೆಗಳ ಸಹಾಯಕ ನಿರ್ದೇಶಕರ ಕಛೇರಿ, ಕೋಲಾರ ಉಪ ವಿಭಾಗ, ಕೋಲಾರ ಆದ ನೀವು ಈ ಹಿಂದೆ ಭೂದಾಖಲೆಗಳ ಸಹಾಯಕ ನಿರ್ದೇಶಕರು, ಬೆಂಗಳೂರು ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಬೆಂಗಳೂರು ಪೂರ್ವ ತಾಲ್ಲೂಕು ವ್ಯಾಪ್ತಿಯ ಪ್ರಭಾರಿ ತಪಾಸಕರಾಗಿ ಹಾಗೂ ಮೂಲ ಭೂದಾಖಲೆಗಳ ಕೊಠಡಿಯ (ಆರ್.ಕೆ) ಅಭಿಲೇಖಪಾಲರಾಗಿ ಕೆಲಸ ನಿರ್ವಹಿಸುತ್ತಿದ್ದಾಗ, ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಹೋಬಳಿ, ಜಾರಕಬಂಡೆ ಕಾವಲು, ಗ್ರಾಮದ ಸ.ನಂ.145 ಕ್ಕೆ ಸಂಬಂಧಿಸಿದಂತೆ ಮೂಲ ದಾಖಲೆಗಳನ್ನು ನೀವೇ ಅಕ್ರಮವಾಗಿ ತಿದ್ದಿರುತ್ತೀರಿ. ಒಂದು ವೇಳೆ ನೀವು ತಿದ್ದದೇ ಇದ್ದಲ್ಲಿ ಸಾರ್ವಜನಿಕರ ಕೋರಿಕೆ ಮೇರೆಗೆ ನಕಲು ತಯಾರಿಸುವಾಗ ಅಕ್ರಮವಾಗಿ ತಿದ್ದಿರುವುದನ್ನು ಕಛೇರಿಯ ಮುಖ್ಯಸ್ಥರ ಗಮನಕ್ಕೆ ನಿವೇದಿಸಿಕೊಳ್ಳಬೇಕಾಗಿತ್ತು. ಹಾಗೇ ಮಾಡದೆ ಇರುವುದರಿಂದ ಸದರಿ ಸರ್ವೆ ನಂಬರಿನ ವಿಸ್ತೀರ್ಣವನ್ನು ತಿದ್ದುಪಡಿಗೆ ನೀವೇ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಕಾರಣಕರ್ತರಾಗಿರುತ್ತೀರಿ. ಅಕ್ರಮವಾಗಿ ತಿದ್ದಿರುವುದನ್ನು ಮೇಲಾಧಿಕಾರಿಗಳ ಗಮನಕ್ಕೆ ತರದೇ ಟಿಪ್ಪಣಿ ಕಾಪಿಯನ್ನು ಸಹಿ ಮಾಡಿ ದಿನಾಂಕ:24.02.2003 ರಂದು ಅರ್ಜಿದಾರರಿಗೆ ವಿತರಿಸಿರುತ್ತೀರಿ. ಹಾಗೂ ಸದರಿ ಗ್ರಾಮದ ಆಕಾರಬಂದಿನಲ್ಲಿ ಸದರಿ ಸರ್ವೆ ನಂಬರಿನ ಬಾಬ್ತು ಇರುವ ವಿಸ್ತೀರ್ಣ 0-21 ಗುಂಟೆಯನ್ನು 0-37 ಗುಂಟೆಯೆಂದು ಅಕ್ರಮವಾಗಿ ತಿದ್ದಿರುವುದನ್ನು

ಸಮರ್ಥಿಸಿಕೊಳ್ಳಲು 0-21 ಗುಂಟೆಗೆ ತಯಾರಿಸಿರುವ ಮೂಲ ಟಿಪ್ಪಣಿಯನ್ನು ಗೈರು ವಿಲೇ ಮಾಡಿರುವುದು ಕಂಡುಬಂದಿರುತ್ತದೆ. ಇದರಿಂದಾಗಿ ಸ.ನಂ.145 ರ ಹಕ್ಕುದಾರರಿಗೆ ಅನುಕೂಲ ಮಾಡಿಕೊಡುವ ಉದ್ದೇಶದಿಂದ ಸರ್ಕಾರಿ ಜಾಗವನ್ನು ಸೇರಿಸಿ ಟಿಪ್ಪಣಿ ತಯಾರಿಸಿ, ಕರ್ತವ್ಯ ಚ್ಯುತಿ ಎಸಗಿ ಅಕ್ರಮ ತಿದ್ದುಪಡಿ ಮಾಡಲು ಸಹಕರಿಸಿರುವುದು ಸ್ಪಷ್ಟವಾಗುತ್ತದೆ. ಇದರಿಂದ ಕಛೇರಿ ಕೈಪಿಡಿಯ ಕಂಡಿಕೆ 8(ಎ) ಹಾಗೂ ಮಾನ್ಯ ನಿರ್ದೇಶಕರವರ ಸುತ್ತೋಲೆಯ ನಿರ್ದೇಶನ ಮತ್ತು ಕೆ.ಸಿ.ಎಸ್.(ನಡತೆ) ನಿಯಮ 1966 ರ ನಿಯಮ 3(i)(ii) ಮತ್ತು (iii) ನ್ನು ಉಲ್ಲಂಘಿಸಿ ಒಬ್ಬ ಸರ್ಕಾರಿ ನೌಕರನಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುವುದರಿಂದ ಕ.ಸ.ಸೇ(ವ.ನಿ. ಮತ್ತು ಮೇಲ್ಮನವಿ) ನಿಯಮ 1957 ರನ್ವಯ ಶಿಸ್ತು ಕ್ರಮ ಜರುಗಿಸಲು ಅನುವು ಮಾಡಿಕೊಟ್ಟಿರುವುದರಿಂದ ಈ ದೋಷಾರೋಪಣೆ.

ಆಪಾದಿತ ನೌಕರರು ಸದರಿ ಆರೋಪ ಪಟ್ಟಿಯನ್ನು ದಿನಾಂಕ:26.05.2004 ರಂದು ಸ್ವೀಕರಿಸಿ, ದಿನಾಂಕ:16.06.2004 ರಂದು ರಕ್ಷಣಾ ಹೇಳಿಕೆಯನ್ನು ಸಲ್ಲಿಸಿರುತ್ತಾರೆ. ಸದರಿ ರಕ್ಷಣಾ ಹೇಳಿಕೆಯಲ್ಲಿ ಅವರ ವಿರುದ್ಧ ಮಾಡಲಾದ ಆರೋಪವನ್ನು ತಿರಸ್ಕರಿಸಿರುವ ಕಾರಣ, ಆರೋಪದಲ್ಲಿನ ಸತ್ಯಾಸತ್ಯತೆಯನ್ನು ಕಂಡುಕೊಳ್ಳುವ ಸಲುವಾಗಿ ಹಿಂದಿನ ಭೂದಾಖಲೆಗಳ ಜಂಟಿ ನಿರ್ದೇಶಕರು, ಬೆಂಗಳೂರು ರವರ ನಡೆವಳಿ ದಿನಾಂಕ:25.01.2005 ರ ಪ್ರಕಾರ ವಿಚಾರಣಾಧಿಕಾರಿಗಳು, ತಂಡ-2, ನಗರಮಾಪನ, ಬೆಂಗಳೂರು ರವರನ್ನು ವಿಚಾರಣಾಧಿಕಾರಿಯನ್ನಾಗಿ ಹಾಗೂ ಭೂದಾಖಲೆಗಳ ಸಹಾಯಕ ನಿರ್ದೇಶಕರು, ದೊಡ್ಡಬಳ್ಳಾಪುರ ಕಛೇರಿಯ ಅಧೀಕ್ಷಕರು(ಆ) ರವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಲಾಗಿರುತ್ತದೆ. ಅದರಂತೆ ವಿಚಾರಣೆ ಪ್ರಾರಂಭದ ಹಂತದಲ್ಲಿದ್ದಾಗಲೇ ವಿಭಾಗ ಮಟ್ಟದ ಕಛೇರಿಗಳು ರದ್ದಾಗಿ, ಈ ಇಲಾಖೆಯು ಕಂದಾಯ ಇಲಾಖೆಯೊಂದಿಗೆ ಕಾರ್ಯ ವಿಲೀನಗೊಂಡ ಕಾರಣ, ಹಾಗೂ ವಿಚಾರಣಾಧಿಕಾರಿಗಳು ನಗರಮಾಪನ ತಂಡ-2 ಬೆಂಗಳೂರು ರವರ ಪತ್ರದ ದಿನಾಂಕ:18.12.2005 ರಲ್ಲಿ ಕೋರಿದಂತೆ ಭೂದಾಖಲೆಗಳ ಸಹಾಯಕ ನಿರ್ದೇಶಕರು(ಆ) ಉಗ್ರಾಣ ಶಾಖೆ, ಕೇಂದ್ರ ಕಛೇರಿ, ಬೆಂಗಳೂರು ರವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿ, ಭೂದಾಖಲೆಗಳ ಸಹಾಯಕ ನಿರ್ದೇಶಕರು ಬೆಂಗಳೂರು ಕಛೇರಿಯು ಸಹ ಕಾರ್ಯ ವಿಲೀನದ ಕಾಲದಲ್ಲಿ ರದ್ದುಗೊಂಡಿದ್ದರಿಂದ ಸಾಕ್ಷಿದಾರರನ್ನಾಗಿ ತಹಸೀಲ್ದಾರ್ ಕಚೇರಿಯ ಉತ್ತರ ತಾಲ್ಲೂಕು ಪರ್ಯಾವೇಕ್ಷಕರನ್ನು ಹಾಜರುಪಡಿಸಿಕೊಳ್ಳಲು ಸೂಚಿಸಿದಂತೆ ವಿಚಾರಣಾಧಿಕಾರಿಗಳು ವಿಚಾರಣೆ ನಡೆಸಿ ವಿಚಾರಣಾ ವರದಿಯನ್ನು ದಿನಾಂಕ:25.11.2008 ರಂದು ಸಲ್ಲಿಸಿರುತ್ತಾರೆ. ಸದರಿ ವಿಚಾರಣಾ ವರದಿಯಲ್ಲಿ ನಕಲುಗಳನ್ನು ವಿತರಿಸುವಾಗ ತಪಾಸಕರಾಗಿ ಮತ್ತು ಅಭಿಲೇಖಾಲಯದ ವಿಷಯ ನಿರ್ವಾಹಕರಾಗಿ ಕರ್ತವ್ಯ ನಿರ್ವಹಿಸುತ್ತಿದ್ದು ಮೂಲ ದಾಖಲೆಗಳಲ್ಲಿ ಮೇಲ್ನೋಟಕ್ಕೆ ಕಂಡುಬಂದಿರುವ ವ್ಯತ್ಯಾಸಗಳನ್ನು ಗಮನಿಸಿ ಸರಿಪಡಿಸುವ ಬಗ್ಗೆ ಹೆಚ್ಚಿನ ಪರಿಶೀಲನೆ ನಡೆಸಿ ಗೈರುವಿಲೇಯಾದ ಬಗ್ಗೆ ಮತ್ತು ನ್ಯೂನ್ಯತೆಯನ್ನು ಸರಿಪಡಿಸುವ ನಿಟ್ಟಿನಲ್ಲಿ ಮೇಲಾಧಿಕಾರಿಗಳ ಗಮನಕ್ಕೆ ತರದೇ ನಕಲನ್ನು ವಿತರಿಸಿರುವುದು ಜವಾಬ್ದಾರಿಯುತ ನೌಕರನ ಕರ್ತವ್ಯಕ್ಕೆ ವಿರುದ್ಧವಾದ ವರ್ತನೆಯಾಗಿದ್ದು, ಅಲ್ಲದೆ ಆಕಾರಬಂದನ್ನು ಸಹಿ ಮಾಡಿರುವುದು ತಪ್ಪಾಗಿರುತ್ತದೆಯೆಂದು ಆಪಾದಿತ ನೌಕರರೆ ವಿಚಾರಣೆ ವೇಳೆಯಲ್ಲಿ ಹೇಳಿಕೆಯಲ್ಲಿ ಆಕಾರಬಂದು ಸಹಿ ಮಾಡಿರುವುದು ತನ್ನ ತಪ್ಪಾಗಿರುತ್ತದೆಯೆಂದು ಒಪ್ಪಿಕೊಂಡಿರುತ್ತಾರೆಂದು, ಈ ಎಲ್ಲಾ ಕಾರಣಗಳಿಂದ ಆರೋಪಿತ ನೌಕರರ ಕರ್ತವ್ಯಲೋಪ ಸಾಬೀತಾಗಿರುತ್ತದೆ ಎಂಬುದಾಗಿ ಅಭಿಪ್ರಾಯವನ್ನು ನೀಡಿರುತ್ತಾರೆ.

ಆಪಾದಿತ ನೌಕರರ ವಿರುದ್ಧದ ಆರೋಪ ಸಾಬೀತಾದ ಕಾರಣ ಎರಡನೇ ಕಾರಣ ಕೇಳಿ ನೋಟೀಸನ್ನು ದಿನಾಂಕ:10.12.2008 ರ ಪ್ರಕಾರ ವಿಚಾರಣಾ ವರದಿಯ ಪ್ರತಿಯೊಂದಿಗೆ ಜಾರಿ ಮಾಡಿರುವುದನ್ನು ದಿನಾಂಕ:30.12.2008 ರಂದು ಆಪಾದಿತ ನೌಕರರು ಸ್ವೀಕರಿಸಿ, ಆದರೆ ಸದರಿ ನೋಟೀಸಿಗೆ ಯಾವುದೇ ಲಿಖಿತ ಹೇಳಿಕೆಯನ್ನು ಇದುವರೆವಿಗೂ ಸಲ್ಲಿಸಿರುವುದಿಲ್ಲ.

ಪ್ರಕರಣದಲ್ಲಿನ ವಿಚಾರಣಾಧಿಕಾರಿಗಳು ನೀಡಿರುವ ವಿಚಾರಣಾ ವರದಿಯಲ್ಲಿನ ಅಂಶಗಳನ್ನು ವಿಚಾರಣಾ ದಾಖಲಾತಿಗಳೊಂದಿಗೆ ಪರಿಶೀಲಿಸಿದಾಗ ಆಪಾದಿತ ನೌಕರರು ಮೂಲ ಟಿಪ್ಪಣಿಯ ನಕಲನ್ನು ದಿನಾಂಕ:24.02.2003 ರಂದು ವಿತರಿಸಿರುತ್ತಾರೆ. ಆದರೆ ಅರ್ಜಿದಾರರು ದಿನಾಂಕ:23.07.2003 ರಂದು ಅರ್ಜಿ ಸಲ್ಲಿಸಿ ಪೋಡಿ ಟಿಪ್ಪಣಿ ಪುಸ್ತಕದ ನಕಲು ಮತ್ತು ಆಕಾರಬಂದು ಕಾಪಿಯ ನಕಲನ್ನು ಕೋರಿದ್ದು ಆದರೆ ಅರ್ಜಿದಾರರಿಗೆ ಆಕಾರಬಂದ್ ನಕಲನ್ನು ಮಾತ್ರ ವಿತರಿಸಿರುವುದು ಕಂಡುಬರುತ್ತದೆ. ಈ ಬಗ್ಗೆ ಆಪಾದಿತ ನೌಕರರು ವಿಚಾರಣಾ ವರದಿಯಲ್ಲಿ ಆರೋಪವನ್ನು ಅಲ್ಲಗಳೆಯುವಂತಹ ದಾಖಲೆಗಳನ್ನು ಹಾಜರುಪಡಿಸುತ್ತೇನೆಂದು ತಿಳಿಸಿ, ನಂತರ ಸದರಿ ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವಿಲ್ಲವೆಂದು ತಿಳಿಸಿರುತ್ತಾರೆ. ಇದರಿಂದಾಗಿ ಆಪಾದಿತ ನೌಕರರು ಮೊದಲಿಗೆ ಮೂಲ ಟಿಪ್ಪಣಿಯ ಪ್ರತಿಯನ್ನು ವಿತರಿಸಿ ನಂತರ ತಿದ್ದುಪಡಿ ಮಾಡಿ, ದಾಖಲೆಗಳನ್ನು ಗೈರುವಿಲೇ ಮಾಡಿರುವ ಅಂಶ ವಿಚಾರಣಾಧಿಕಾರಿಯ ವರದಿ ಹಾಗೂ ವಿಚಾರಣಾ ದಾಖಲೆಗಳಿಂದ ಕಂಡುಬರುತ್ತದೆ. ಆಪಾದಿತ ನೌಕರರಿಗೆ ಎರಡನೇ ಕಾರಣ ಕೇಳಿ ನೋಟೀಸನ್ನು ವಿಚಾರಣಾ ವರದಿಯ ಪ್ರತಿಯೊಂದಿಗೆ ಜಾರಿ ಮಾಡಿದ್ದು, ಸದರಿ ನೋಟೀಸಿಗೆ ಯಾವುದೇ ಬರಹ ಹೇಳಿಕೆಯನ್ನು ಸಲ್ಲಿಸದೇ ಇದ್ದು, ಹೇಳಿಕೆಯನ್ನು ನೀಡಲು ಕಾಲಾವಕಾಶ ನೀಡಿದ್ದರೂ ಸಹ ಬರಹ ಹೇಳಿಕೆಯನ್ನು ಸಲ್ಲಿಸದೆ ಇರುವುದನ್ನು ಗಮನಿಸಿದಾಗ, ಕರ್ತವ್ಯ ಲೋಪ ಎಸಗಿರುವುದು ಕಂಡುಬರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಆದೇಶ

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ರಾಜೀವ್ ಚಾವ್ಲಾ, ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಆದ ನಾನು ಕರ್ನಾಟಕ ಸರ್ಕಾರಿ ಸೇವಾ(ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 9(3) ರೊಂದಿಗೆ ಓದಿಕೊಂಡ 8(viii) ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಎನ್.ಜಿ.ನಾಗರಾಜಯ್ಯ, ಪ್ರಥಮ ದರ್ಜೆ ಭೂಮಾಪಕರು ತಹಸೀಲ್ದಾರ್ ಕಛೇರಿ, ಮಾಲೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ವಜಾಗೊಳಿಸಿ ಆದೇಶಿಸಿದೆ.

ಆಯುಕ್ತರು,
ಭೂಮಾಪನ ಕಂದಾಯ ವ್ಯವಸ್ಥೆ ಮತ್ತು
ಭೂದಾಖಲೆಗಳು, ಬೆಂಗಳೂರು.

ಪಿ.ಆರ್.772

ಆಯುಕ್ತರು, ಭೂಮಾಪನ ಕಂದಾಯ ವ್ಯವಸ್ಥೆ ಮತ್ತು ಭೂದಾಖಲೆಗಳ ಇಲಾಖೆ, ಬೆಂಗಳೂರು ಇವರ ನಡವಳಿ
ಸಂಖ್ಯೆ: ಸಿಬ್ಬಂದಿ.ಶಿಸ್ತು.4/02-03, ಬೆಂಗಳೂರು, ದಿನಾಂಕ:3ನೇ ಸೆಪ್ಟೆಂಬರ್, 2009

ವಿಷಯ: ಭದ್ರಾವತಿ ತಾಲ್ಲೂಕು, ತಿಮ್ಲಾಪುರ ಗ್ರಾಮದ ಸ.ನಂ. 78 ರ ಟಿಪ್ಪಣಿ ತಿದ್ದುಪಡಿ ಮಾಡಿರುವ ಬಗ್ಗೆ ನೌಕರರ ವಿರುದ್ಧದ ಶಿಸುಕ್ರಮ- ಅಂತಿಮ ಆದೇಶ ಮಾಡುವ ಬಗ್ಗೆ.

ಉಲ್ಲೇಖ:
1) ಭೂ.ಜಂ.ನಿ. ಬೆಂಗಳೂರು ಕಛೇರಿಯ ಕಾರಣ ಕೇಳಿ ನೋಟೀಸ್ ಸಂ: ಸಿಬ್ಬಂದಿ.ಶಿಸ್ತು 11/02-03, ದಿನಾಂಕ:21.04.2005 (ಆರೋಪ ಪಟ್ಟಿಯೊಂದಿಗೆ)
2) ಶ್ರೀ ಹೆಚ್.ಜಿ.ರಮೇಶ್, ದ್ವಿದಭೂ.ರವರ ಬರಹ ಹೇಳಿಕೆ ದಿನಾಂಕ:16.05.2005.
3) ಶ್ರೀ ಎಂ. ಚೇತನಕುಮಾರ್, ದ್ವಿ.ದ.ಭೂ. ರವರ ಬರಹ ಹೇಳಿಕೆ ದಿನಾಂಕ:07.05.2005.
4) ಶ್ರೀ ಕೆ.ಪಿ. ಸಿದ್ದರಾಜು, ದ್ವಿ.ದ.ಭೂ. ರವರ ಮನವಿ.
5) ಶ್ರೀ ನಿಂಗಯ್ಯ, ದ್ವಿ.ದ.ಭೂ. ರವರ ಬರಹ ಹೇಳಿಕೆ ಇಲ್ಲ
6) ಶ್ರೀ ಅಂಥೋಣಿರಾಜ್ ಬಾಂ.ಜ. ಇವರ ಹೇಳಿಕೆ ಇಲ್ಲ.
7) ಈ ಕಛೇರಿ ಸಮಸಂಖ್ಯೆ ಆದೇಶ ದಿನಾಂಕ:14.12.2005 (ವಿಚಾರಣಾಧಿಕಾರಿ ಗಳ ನೇಮಕ)
8) ಭೂ.ಜಂ.ನಿ. ಬೆಂಗಳೂರು ರವರ ಪತ್ರ ಸಂ: ಸಿಬ್ಬಂದಿ.ಶಿಸ್ತು. ವಿ. 11/02-03, ದಿನಾಂಕ:04/16.11.2006 (ವಿಚಾರಣಾ ವರದಿ)
9) ಈ ಕಛೇರಿ ಸಮಸಂಖ್ಯೆ ಎರಡನೇ ಕಾರಣ ಕೇಳಿ ನೋಟೀಸು ದಿನಾಂಕ:09.01.2007 (ವಿಚಾರಣಾ ವರದಿಯೊಂದಿಗೆ)
10) ಶ್ರೀ ಹೆಚ್.ಜಿ.ರಮೇಶ್, ದ್ವಿದಭೂ ರವರ ಬರಹ ಹೇಳಿಕೆ ದಿನಾಂಕ:25.01.2007/ 02.02.2007
11) ಶ್ರೀ ಎಂ.ಚೇತನ ದ್ವಿ.ದ.ಭೂ. ರವರ ಬರಹ ಹೇಳಿಕೆ ದಿನಾಂಕ:22.02.2007
12) ಶ್ರೀ ಕೆ.ಪಿ. ಸಿದ್ದರಾಜು, ದ್ವಿ.ದ.ಭೂ. ಇವರ ಹೇಳಿಕೆ ದಿನಾಂಕ:24.01.2007.
13) ಶ್ರೀ ನಿಂಗಯ್ಯ, ದ್ವಿ.ದ.ಭೂ. ರವರ ಹೇಳಿಕೆ ದಿನಾಂಕ:23/27.01.2007.
14) ಶ್ರೀ ಅಂಥೋಣಿರಾಜ್ ಬಾಂ.ಜ. ಇವರ ಹೇಳಿಕೆ ದಿನಾಂಕ:23.01.2007.
15) ಸರ್ಕಾರದ ಸುತ್ತೋಲೆ ಸಂ: ಸಿಆಸುಇ 18 ಸೇಇವಿ 01, ದಿನಾಂಕ:14.09.2001.

ಪ್ರಸ್ತಾವನೆ:

ಶ್ರೀಯುತರಾದ ಹೆಚ್.ಜಿ. ರಮೇಶ್, ದ್ವಿತೀಯ ದರ್ಜೆ ಭೂಮಾಪಕರು, ತಾಲ್ಲೂಕು ಕಛೇರಿ, ಚನ್ನರಾಯಪಟ್ಟಣ 2) ಎಂ. ಚೇತನ್, ದ್ವಿತೀಯ ದರ್ಜೆ ಭೂಮಾಪಕರು, ತಹಶೀಲ್ದಾರ್, ದೊಡ್ಡಬಳ್ಳಾಪುರ 3) ಕೆ.ಪಿ. ಸಿದ್ದರಾಜು, ದ್ವಿತೀಯ ದರ್ಜೆ ಭೂಮಾಪಕರು, ತಹಶೀಲ್ದಾರ್, ಹರಿಹರ 4) ನಿಂಗಯ್ಯ, ದ್ವಿತೀಯ ದರ್ಜೆ ಭೂಮಾಪಕರು, ತಹಶೀಲ್ದಾರ್, ಹಾಸನ 5) ಅಂಥೋಣಿ ರಾಜ್, ಬಾಂದು ಜವಾನರು, ಉಪ ವಿಭಾಗಾಧಿಕಾರಿಗಳು, ತರೀಕೆರೆ ಇವರುಗಳು ಈ ಹಿಂದೆ, ಭೂದಾಖಲೆಗಳ ಸಹಾಯಕ ನಿರ್ದೇಶಕರು, ಶಿವಮೊಗ್ಗ ಕಛೇರಿಯ ಭದ್ರಾವತಿ ತಾಲ್ಲೂಕು ಭೂಮಾಪನ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ತಿಮ್ಲಾಪುರ ಗ್ರಾಮದ ಸ.ನಂ. 78 ರ ಬಗ್ಗೆ ಮ್ಯುಟೇಷನ್ ಅಳತೆ ಬಂದಾಗ ಅರ್ಜಿದಾರರಿಗೆ ತೊಂದರೆ ನೀಡಿದ್ದು, ಸದರಿ ಸರ್ವೆ ನಂಬರನ್ನು ಅಕ್ರಮವಾಗಿ ತಿದ್ದಿ, ದುರ್ನಡತೆ ಎಸಗಿದ ಮೇರೆಗೆ, ಉಲ್ಲೇಖ (1) ರಲ್ಲಿ ನಮೂದಿಸಿರುವಂತೆ, ಭೂದಾಖಲೆಗಳ ಜಂಟಿ ನಿರ್ದೇಶಕರು, ಬೆಂಗಳೂರು ಇವರು ಕಾರಣ ಕೇಳಿ ನೋಟೀಸನ್ನು ಆರೋಪ ಪಟ್ಟಿಯೊಂದಿಗೆ ದಿನಾಂಕ:21.04.2005 ರಂದು ಜಾರಿ ಮಾಡಲಾಗಿರುತ್ತದೆ.

ಮೇಲ್ಕಂಡ ನೌಕರರುಗಳ ವಿರುದ್ಧ ಮಾಡಲಾದ ಆರೋಪಗಳನ್ನು ಈ ಕೆಳಕಂಡಂತೆ ಪುನರುಚ್ಚರಿಸಿದೆ.

1) ಶ್ರೀ ಹೆಚ್.ಜಿ. ರಮೇಶ್, ದ್ವಿತೀಯ ದರ್ಜೆ ಭೂಮಾಪಕರು ಇವರ ಮೇಲೆ ಮಾಡಲಾದ ಆರೋಪ: